UNIVERSAL
LIBRARY
OU_200656
UNIVERSAL
LIBRARY

OSMANIA UNIVERSITY LIBRARY

Call No. K.81/N45D Accession No. 1<3'

Author నారాయణరెడ్డి

Title ధర్మపురి క్షేత్ర చరిత్ర

This book should be returned on or before the date last marked

University of Mysore

Oriental Library Publications

KANNADA SERIES No. 14

ನಯಸೇನ ವಿರಚಿತಂ

ಧರ್ಮಾಮೃತಂ

ಪೂರ್ವಭಾಗ—ಅಧ್ಯಾಯಗಳು ೧–೯

DHARMAMRITAM

BY

NAYASENA

PART I—CHAPTERS 1—9

EDITED BY

DR R. SHAMA SASTRY, B A., PH D, M R.A S.,

Curator, Government Oriental Library Mysore, Director of Archæological Researches in Mysore, Periodical Lecturer to the Post Graduates' Classes of the Calcutta University, and B B R A S Campbell Memorial Medalist

---

MYSORE

PRINTED AT THE GOVERNMENT BRANCH PRESS

1924

(All Rights Reserved)

ವಿಷಯಾನುಕ್ರಮಣಿಕೆ.

ಉಪೋದ್ಘಾತ v-xxxiii

೧ ಪ್ರಥಮಾಶ್ವಾಸಂ—ದರ್ಶನದ ಕಥೆ ...

೨. ದ್ವಿತೀಯಾಶ್ವಾಸಂ—ನಿಶ್ಶಂಕಯ ಕಥೆ .. ೪೭

೩. ತೃತೀಯಾಶ್ವಾಸಂ—ನಿಷ್ಕಾಂಕ್ಷೆಯ ಕಥೆ . ೯೬

೪. ಚತುರ್ಥಾಶ್ವಾಸಂ—ನಿರ್ವಿಚಿಕಿತ್ಸೆಯ ಕಥೆ .. ೧೫೬

೫. ಪಂಚಮಾಶ್ವಾಸಂ—ಅಮೂಢದೃಷ್ಟಿತ್ವದ ಕಥೆ ೧೯೬

೬. ಷಷ್ಠಾಶ್ವಾಸಂ—ಉಪಗೂಹನದ ಕಥೆ ೨೫೧

೭. ಸಪ್ತಮಾಶ್ವಾಸಂ—ಸ್ಥಿತಿಕರಣದ ಕಥೆ ... ೨೮೨

೮. ಅಷ್ಟಮಾಶ್ವಾಸಂ—ವಾತ್ಸಲ್ಯದ ಕಥೆ .. ೩೨೪

೯. ನವಮಾಶ್ವಾಸಂ—ಪ್ರಭಾವನೆಯ ಕಥೆ ೪೨೩

ಉಪೋದ್ಘಾತ.

ಈ ಗ್ರಂಥವು ಮುಖ್ಯವಾಗಿ ಮೂರು ಲಿಖಿತ ಪುಸ್ತಕಗಳ ಸಹಾಯದಿಂದ ಶೋಧಿತವಾಗಿದೆ -

(೧) ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿರುವ ೩೯ೆಯ ನಂಬರಿನ ಓಲೆಯ ಪುಸ್ತಕ (ಓ).

(೨) ಅದೇ ಲೈಬ್ರರಿಯಲ್ಲಿರುವ ಎ. ೩೩೯ೆಯ ನಂಬರಿನ ಕಾಗದದ ಪುಸ್ತಕ (ಕ).

(೩) ಮೈಸೂರು ಜೈನ ಬೋರ್ಡಿಂಗ್ ಹೌಸಿನಲ್ಲಿರುವ ಶ್ರೀ ನೇಮಿಸಾಗರ ವರ್ಣಿಸ್ವಾಮಿಗಳು ಕೊಟ್ಟ ಓಲೆಯ ಪುಸ್ತಕ (ಗ)

ಶ್ರವಣಬೆಳ್ಗೊಳದ ಶ್ರೀ ಜೈನಮಠದಿಂದ ಬಂದು ಓಲೆಯ ಪ್ರತಿಯನ್ನು ತರಿಸಿ ನೋಡಲು ಅದೂ ಮೇಲೆ ಹೇಳಿದ (೨)ನೆಯ ಪುಸ್ತಕವೂ ಬಂದೊಯ್ದವು ತೋರಿತು. ಲೈಬ್ರರಿಯ ಎರಡು ಪ್ರತಿಗಳಿಗೂ ಪರಸ್ಪರ ಹೆಚ್ಚು ವ್ಯತ್ಯಾಸವಿಲ್ಲ. ಇವುಗಳಲ್ಲಿ ಓಲೆಯ ಪುಸ್ತಕವೇ ಹೆಚ್ಚು ಶುದ್ಧವಾಗಿರಬೇಕೆಂದು ತಮ್ಮಿಂದ ಆದನ್ನೇ ಇಲ್ಲಿ ಮುಖ್ಯವಾಗಿ ಅನುಸರಿಸಿದೆ.

ಆದರೆ ಈ ಎರಡು ಪ್ರತಿಗಳಿಗೂ ನೇಮಿಸಾಗರ ವರ್ಣಿಸ್ವಾಮಿಗಳಿಂದ ಬಂದ ಪುಸ್ತಕಕ್ಕೂ ವ್ಯತ್ಯಾಸಗಳು ಬಹಳವಾಗಿವೆ. (ಗ) ಪುಸ್ತಕವಲ್ಲಿರುವ ಕಥಾಭಾಗ ಹೆಚ್ಚು, (ಕ) ಮತ್ತು (ಓ) ಪುಸ್ತಕಗಳಲ್ಲಿರುವುದು ಕಡಿಮೆ. ಇವುಗಳಲ್ಲಿ (ಕ) ಮತ್ತು (ಓ) ಪುಸ್ತಕಗಳು ಮೂಲ ಗ್ರಂಥವಾಗಿದ್ದು ಅನಂತರ ಸಂಗ್ರಹವಾಗಿ (ಗ) ಪುಸ್ತಕವು ಹುಟ್ಟಿತೋ, ಅಥವಾ (ಗ) ಪುಸ್ತಕವೇ ಮೂಲವಾಗಿದ್ದು ಅದಕ್ಕೆ ಪ್ರಕ್ಷಿಪ್ತಭಾಗಗಳು ಸೇರಿ 'ಕ' ಮತ್ತು 'ಓ' ಪುಸ್ತಕಗಳು ಹುಟ್ಟಿದುವೋ ಹೇಳುವುದು ಕಷ್ಟ. ಈ ಎರಡನೆಯ ಪಕ್ಷವೇ ಸಂಭವವೆಂದು ತೋರುವುದು. ಆದರೂ ಪಾಠಕರ ಸೌಕರ್ಯಕ್ಕಾಗಿ ವಿಸ್ತಾರವಾದ ಪಾಠವೇ ಕೂಡಲ್ಪಟ್ಟಿದೆ. (ಗ) ಪುಸ್ತಕದಲ್ಲಿಲ್ಲದ ಹೆಚ್ಚು ಪಾಠವನ್ನು [ ] ಈ ಆವರಣಚಿಹ್ನೆಗಳಿಂದ ಸೂಚಿಸಿದೆ.

ಈ ಪ್ರತಿಗಳಲ್ಲೆಲ್ಲಾ ಅಶುದ್ಧಿಗಳು ಹೇರಳವಾಗಿರುವುದರಿಂದ ಗ್ರಂಥದಲ್ಲಿ ಬರುವ ಭಾಷೆಯ ಸ್ವರೂಪವನ್ನೂ ಶಬ್ದರೂಪಗಳನ್ನೂ ನಿಷ್ಕರ್ಷಿಸುವುದು ಕಷ್ಟವಾಯಿತು. ಕೊನೆಗೆ ಹನ್ನೆರಡನೆಯ ಶತಮಾನವಲ್ಲಿ ಪ್ರಚಾರದಲ್ಲಿದ್ದಿರಬಹುದಾದ ಕೆಲವು 'ಮಧ್ಯಗನ್ನಡ' ರೂಪಗಳನ್ನು ಉಪಯೋಗಿಸಬೇಕೆಂದು ತೀರ್ಮಾನಿಸಿ ಅದೇ ನಿಯಮವನ್ನು ಅನುಸರಿಸಿದೆ. ಈ ವಿಚಾರವೂ ಈ ಗ್ರಂಥ ಮತ್ತು ಗ್ರಂಥಕಾರನಿಗೆ ಸಂಬಂಧಪಟ್ಟ ಇತರ ವಿಚಾರಗಳೂ ಎರಡನೆಯ ಸಂಪುಟದ ಉಪೋದ್ಘಾತದಲ್ಲಿ ಬರೆಯಲ್ಪಡುವುವು.

ಈ ಗ್ರಂಥದ ಪ್ರತಿಪಾದ್ಯ ವಿಷಯವು ಸುಲಭವಾಗಿ ತಿಳಿಯುವಂತೆ ಈ ಸಂಪುಟದ ಒಂಬತ್ತು ಅಧ್ಯಾಯಗಳ ಸಾರಾಂಶವೂ ಮುಂದೆ ಬರೆಯಲ್ಪಟ್ಟಿದೆ.

ಎ. ಆರ್. ಕೃಷ್ಣಶಾಸ್ತ್ರೀ.

ಕಥಾಸಾರಾಂಶ.

ಪ್ರಥಮಾಶ್ವಾಸ

ದರ್ಶನದ ಕಥೆ.

ಸೌರಾಷ್ಟ್ರ ವಿಷಯದಲ್ಲಿ ಗಿರಿನಗರವಂಬುದೊಂದು ಊರು; ಅದನ್ನು ಪಿಶ್ವಸೇನನಂಬ ಮಹಾಮಾಂಡಳಿಕನು ಆಳುತ್ತಿದ್ದನು. ಆದೇ ಊರಿನಲ್ಲಿ ದಯಾಮಿತ್ರ ಸೆಟ್ಟಿಯೆಂಬ "ರಾಜಶ್ರೇಷ್ಠಿ" ಇದ್ದನು. ಅವನು ಒಂದು ದಿನ ವ್ಯಾಪಾರಕ್ಕೆಂದು ಹೊರಟು ಹೊರಬೀಡು ಬಿಟ್ಟಿರಲು, ವಸುಭೂತಿ ಎಂಬ ಒಬ್ಬ ಬ್ರಾಹ್ಮಣನು ಬಂದು, ತಾನು ಗಂಗಾಸ್ನಾನಕ್ಕೆ ಹೊರಟಿರುವುದಾಗಿಯೂ, ಆದರೆ ಒಬ್ಬನೇ ಇರುವುದರಿಂದ ಅವರ ಜೊತೆಯನ್ನು ಅಪೇಕ್ಷಿಸುವುದಾಗಿಯೂ ಹೇಳಿದನು. ಎಲ್ಲರೂ ಪ್ರಯಾಣ ಹೊರಟರು. ದಿನಸಕ್ಕೆ ಮೂರುಗಳಿಗೆಯು ಹೊತ್ತು ಧರ್ಮಶ್ರವಣ ಮಾಡದೆ ಊಟವಾಡುವುದಿಲ್ಲವಂಬುದು ದಯಾಮಿತ್ರ ಸೆಟ್ಟಿಯ ವ್ರತ. ಅದರಂತೆ ದಾರಿಯಲ್ಲಿ ಅವನು ಧರ್ಮವನ್ನು ಹೇಳುತ್ತಿರಲು ವಸು ಭೂತಿಯು ನಕ್ಕು ಅವನ ಹುಚ್ಚು ತನವನ್ನು ತೆಳಿಸಿ ತನ್ನ ನಿಜವಾದ ಧರ್ಮವನ್ನು ಹೇಳುತ್ತೇನೆಂದು ಹೊರಟು ಸಮಣರ ಕಾರ್ಯವೆಲ್ಲ "ಕೂಪ' ಕಾರಣವೆಲ್ಲದೆ ಗತಿಕಾರಣವಲ್ಲದು, ಗತಿಯಾಡೆವೆನೆಂಬುದು ಕಾಯಕ್ಲೇಶಂಬೇಱಪ್ಪದು; ಆ ಕಾಯಕ್ಲೇಶಂ ನಿಮ್ಮ ನಚ್ಚಿನ ಸಮಣರ ಮೆಯ್ಯೊಳ್ಳಿಸಿತುಮಿಲ್ಲ," ಇಂತವರನ್ನೂ ಅವರ ದೇವರನ್ನೂ ಕೊಂಡಾಡುವುದು "ಮರುಳಾಟ" ವೆಂದು ಹೇಳಿದನು ಸೆಟ್ಟಿಯೂ "ಕರ್ಮದ ತೀವ್ರತೆಯಿಂದೀ ಪೂರ್ವಂಗೆ ಲೌಕಿಕಧರ್ಮವೆ ಧರ್ಮವಾಗಿ ತೋಪ್ಪುದು" ಎಂದು ಪರಿತಾಪಪಟ್ಟು ಸಮಯ ನೋಡಿ ಅವನಿಗೆ ಬುದ್ಧಿಕಲಿಸಬೇಕೆಂದು ನಿಶ್ಚಯಿಸಿಕೊಂಡನು.

ಎಂಟು ಹತ್ತು ದಿನಗಳು ಕಳೆದ ಮೇಲೆ ಒಂದುದಿನ ವಸುಭೂತಿಯನ್ನು ಕರೆಸಿ "ಋಷಿಯರಿಂದ ಒಂದು ದೊಡ್ಡ ವ್ರತವನ್ನು ಮಾಡಿಸಿ

ಅವರಿಗೆ ಬೇಕಾದದ್ದನ್ನು ಕೊಡುವುದು ನನ್ನೊಳ್ಳಿ ನಡೆದುಬಂದಿದೆ. ಇಲ್ಲಿ ಋಷಿಯಾರಾರೂ ಇಲ್ಲ; ಇಲ್ಲದ್ದಾರೇನಾಗುತ್ತೆ? ನಿಮಗಿಂತ ನನಗೆ ಬೇರೆ ಋಷಿಗಳುಬೇಕೆ? ಆದ್ದರಿಂದ ತಾವು ಆ ವ್ರತವನ್ನು ಕೈಕೊಂಡು ಮುಗಿಸಬೇಕಾದಷ್ಟು ದಕ್ಷಿಣೆಯನ್ನು ಕೇಳಿ, ಕೊಡುವೆನು;" ಎಂದು ಹೇಳಿದನು. ಬ್ರಾಹ್ಮಣನು ಸುತೋಷಪಟ್ಟ ಆ ವ್ರತದ ಕ್ರಮ ವೇನೆಂದು ಕೇಳಲು ಅವನ್ನು ಸೆಟ್ಟಿಯು ಹಿಂದೆ ಕೇಳಿದನು—"ಅನ್ನ ತುಪ್ಪ ಭಕ್ಷ್ಯ ಭೋಜ್ಯಗಳನ್ನು ಕೈಗೆ ಹಾಕಿಸಿಕೊಂಡು ಊಟಮಾಡ ಬೇಕು; ಮರುದಿನ ಆ ಹೊತ್ತು ಬರುವವರೆಗೂ ತಾಂಬೂಲಾದಿಗಳಾಗಲಿ ಪುನಃ ಅನ್ನಪಾನಾದಿಗಳ ಲೀ ಕೂಡದು, ಮನೆ ಬಿಟ್ಟು ಹೊರಡದೆ ಹಗಲೂ ಇರಳೂ ಓದುತ್ತಿರಬೇಕು. ಕೈಕೊಳ್ಳುವಾಯಿತೆಂದು ಸ್ನಾನ ಮಾಡಕೂಡದ. ಬೇಕಾದರೆ ಮಂಚದಲ್ಲಿ ಮಲಗಿಕೊಳ್ಳಬಹುದು. ತಲೆಯು ಕೂದಲುಗಳನ್ನೆಲ್ಲ ಕೀಳಿಸಿಕೊಳ್ಳಬೇಕು ಹೀಗೆ ಎರಡು ತಿಂಗಳು ದಿವಸ ಒಂದೇವಿಧವಾಗಿ ನಡೆಯಬೇಕು" ಎಂದು ಹೇಳಿದನು. ಪಾಣಿದಾಸೆ ಯಿಂದ ವಸುಭೂತಿಯು ಇದಕ್ಕೆ ಒಪ್ಪಿದನು. ಹೊದಲು ಲೋಕ ಮೋಹಿಸಿಕೊಳ್ಳುವಾಗಲೇ ಬಹಳ ಸಂಕಟವನ್ನು ಅನುಭವಿಸಬೇಕಾ ಯಿತು. ಆದರೆ ಅದನ್ನು ಹೇಗೆ ಹಾಗೋ ಸೈರಿಸಿಕೊಂಡು ಆ ದಿನ ಉಪವಾಸವಿದ್ದು ಮರುದಿನ ಭಕ್ಷ್ಯಭೋಜ್ಯಗಳನ್ನು ಕೈಯಲ್ಲಿ ಹಾಕಿಸಿ ಕೊಂಡು ಊಟಮಾಡಿದನು. ರಾತ್ರಿ ಬಂದು ಹೊತ್ತಿಗೆ ಬಲವಾದ ಬಾಯಾರಿಕೆಯಾಯಿತು, ಸಂಕಟ ಹೆಚ್ಚಾಗಿ ಅಂದಿನ ರಾತ್ರಿಯನ್ನು ಕಳೆಯುವುದೇ ದುಸ್ತರವಾಯಿತು. ಮರುದಿನ ಊಟದ ಹೊತ್ತು ಬರಲು ಪುನಃ ಹಾಲು ತುಪ್ಪ ಭಕ್ಷ್ಯ ಭೋಜ್ಯಗಳನ್ನು ತಂದು ಬಡಿಸಿ ದರು. ಆದರೆ ಹಿಂದಿನ ರಾತ್ರಿ ಅನುಭವಿಸಿದ ಬಾಯಾರಿಕೆಯನ್ನು ನೆನಸಿ ಕೊಂಡು ಅವೊಂದನ್ನೂ ತೆಗೆದುಕೊಳ್ಳುವುದಕ್ಕೆ ಅವನಿಗೆ ಇಷ್ಟವಾಗಲಿಲ್ಲ. ವೈಶ್ಯನು ಇದನ್ನು ಕಂಡು "ನಮ್ಮ ಋಷಿಗಳು ನಾವು ಹೇಳಿದಂತೆ ಮಾತನಾಡದೆ ಊಟಮಾಡುತ್ತಾರೆ; ಭೂದೇವರಾದ ನಿಮಗೆ ಇದೊಂದತಿ ಶಯವೇ?" ಎಂದು ಮೂದಲಿಸಿದನು. ಬಹಳ ಕಷ್ಟದಿಂದ ಅದೆಲ್ಲ ವನ್ನೂ ಊಟಮಾಡಬೇಕಾಯಿತು. ಹೀಗೆ ಏಳಂಟುದಿನಗಳು ಏಳಂಟು

ವರ್ಷಗಳಂತೆ ಕಳೆದುವು. ಅಲ್ಲಿಂದ ಮುಂದಕ್ಕೆ ಈ ವೃತ್ತಾಂತವನ್ನು ನಡೆಸಲಾರದೆ ಮೈಕಡಿತ ಬಾಯಿಕೆ ತಲೆಯೂ ಸೊಂಟ ಮುಂತಾದವುಗಳಿಂದ ಪೀಡಿತನಾಗಿ "ಕೆಲಸಕ್ಕೆ ಹೋಗಿ ಮೈ ಮುಂಡಾರಿಸಿಕೊಂಡಿರೋಣ್ ಯಿಮ್ಮೆ ನೀರಂ ಕುಡಿದು ಸಿಮ್ಮೆ ಬೀಡಿನೊಳಗೊಂದೆರಡುಗಳಿಗೆ ಸುಖವಾಡುವೆಂತು ಮೊಚ್ಚುದು" ಎಂದು ವೃತ್ತಾಂತ ಕೆಟ್ಟಿಯನ್ನು ಸಮರ್ಥಿಸಲು ಅವನು ನಕ್ಕು "ನೀವು ಬಂದೆರಡು ಸಣ್ಣ ಪರೀಕ್ಷೆಗಳಿಗೇ ಹಿಮ್ಮೆಟ್ಟಿದಿರಿ, ಹೀಗಿರಲು ಅಮೆರಿಕಾಖಂತವಾಗಿ ಹುಸ್ಸೆರನು ಬಿಳುವಾಡಿ ಬರಿಸ್ಸು ಇಪ್ಪತ್ತೆರಡು ಮೊಹಾ ಪರೀಕ್ಷೆಪ ಮುಂತಾದವುಗಳನ್ನು ನಡೆಸಿದ ಮಹರ್ಷಿಗಳ ಧೈರ್ಯವನ್ನು ಎಷ್ಟೆಂದು ಹೊಗಳೋಣ" ಎಂದು ತನ್ನ ಋಷಿಗಳ ಮಹತ್ವವನ್ನು ತಿಳಿಸಿದನು. ಆಗ ವಸುಂಧರೆಯು ಮಹರ್ಷಿಯರ ತಪೋಮಾರ್ಗವನ್ನು ಅಳವಡಿಸಿ ಇದ್ದಲ್ಲಿಯೇ ತನ್ನ ಕರ್ತವ್ಯವೇ ಹಿರಿಯದೆಂದು ತೋರುತ್ತಿದ್ದಿತೆಂದೂ 'ಗಾದೆಗಳೆ ಮುದ್ದಾಂ' ಎಂದೂ ಅವನು ಹಿಡಿದ ಧರ್ಮವೇ ಧರ್ಮವೆಂದೂ ನಿರ್ಧರಿಸಿ ಅಲ್ಲಿಂದ ಪರ್ಯಾಯ ಪದೇಶಮಾಡಿಸಿಕೊಂಡನು. "ಸಿದ್ಧೋಷಿಯೆ ಮೇಣ್, ಅನೇಕ ದಾಗಮೆಂ; ಆ ಪರಮಾಗಮಾವಧಿಯನ್ನು ತತ್ಕಾಲದು ಗುಣ ನೃಮ ಸಮ್ಯಕ್ತ್ವ"

ಮರುದಿನ ಎಲ್ಲರೂ ಅಲ್ಲಿಂದ ಹೊರಟು ಸಂಧ್ಯಾಲಿಯೆ ಬಹುದೂರ ಆವಪಿಯಲ್ಲಿ ಬೀಡು ಬಿಟ್ಟರು. ಅಲ್ಲಿ ಮನುಷ್ಯಸಂಚಾರವಿಲ್ಲದ ಜಾಗದಲ್ಲಿ ನಡೆದು, ಆ ಜಾಗದಲ್ಲಿ ವಸುಭೂತಿಗೆ ಬಂದು ಬಾಣಪ್ರತಿಗಳನ್ನು, ಅವನು ಬಂದು ಸಂನ್ಯಾಸವನ್ನು ಪಡೆದು ಸತ್ತು ಪುನರ್ಜನ್ಮವಾಗಿ ಬಂದ ಸ್ಥಳವನ್ನು ದೇವನಾಗಿ ಹುಟ್ಟಿದನು. ಅಲ್ಲಿ ಭರತಪ್ರತ್ಯಭಿಜ್ಞಾನವು ಬಲಿಯಿತು. ಅವನ ಮಿತ್ರ ಸೆಟ್ಟಿಯಿಂದ ಪೂರ್ವಜನ್ಮದ ತನಗೆ ಆದ ಅನ್ಯಾಯವನ್ನು ನೆನೆದು ಬಂದು ಅವನಿಗೆ ನಮಸ್ಕಾರ ಮಾಡಿ ಹೊಗಳಿ. ಸ್ವರ್ಗಲೋಕದ ಸುಖವನ್ನು ಬಿಟ್ಟು ಬಂದು ಸಾಗರೋಪಮ ಕಾಲ ಆತನ ಧರ್ಮಸಾಮ್ರಾಜ್ಯವನ್ನು ಪೃಥ್ವಿಸೇನ ರಾಜನ ಹೊಟ್ಟೆಯಲ್ಲಿ ಹುಟ್ಟಿದನು

———

ದ್ವಿತೀಯಾಶ್ವಾಸ

ನಿಶ್ಚಂಕೆಯ ಕಥೆ.

ಕಾಶ್ಮೀರ ದೇಶದ ವಿಜಯಪುರವೆಂಬ ಪಟ್ಟಣದಲ್ಲಿ ಅರಿಮರ್ದನ ನೆಂಬ ರಾಜನು ಸೌಂದರಿಯೆಂಬ ಪಟ್ಟದರಸಿಯೊಡನೆ ಆಳುತ್ತಿದ್ದನು ಅವನಿಗೆ ಲಲಿತಾಂಗನೆಂಬ ಮಗನು ಹುಟ್ಟಿದನು; ತಾಯಿತಂದೆಗಳು ಅವನಲ್ಲಿ ಅಧಿಕವಾದ ವ್ಯಾಮೋಹವನ್ನಿಟ್ಟು ಅವನು ಏನು ಮಾಡಿದರೂ ಅವನನ್ನು ಬಯ್ಯದೆ ಹೊಡೆಯದೆ ಮುದ್ದಿಸುತ್ತಿದ್ದರು. ಅವನು ತನ್ನ ಗೆಳಯರೊಡಗೂಡಿ ಪುರಜನರನ್ನೂ ಪರಿಜನರನ್ನೂ ಹಿಡಿದು ಹೊಡೆದರೆ ಅದು ಅವನ ತಾಯಿತಂದೆಗಳಿಗೆ ವಿನೋದವಾಗಿತ್ತು; ಹೀಗೆ ಅವನು "ಅಂಕುಶವಿಲ್ಲದ ಮದದಾನೆಯಂತೆ" ಬೆಳೆದು, ಪ್ರಾಪ್ತಯೌವನನೂ ಲೋಕಕಂಟಕನೂ ಆಗಲು ಜನರೆಲ್ಲರೂ ಬಂದು ಅರಮನೆಯ ಬಾಗಿಲಲ್ಲಿ ಗೋಳಿಟ್ಟರು. ಅರಿಮರ್ದನ ಮಹಾರಾಜನು ಅವರ ದೂರನ್ನು ವಿಚಾರಿಸಿ ಕೇಳಿ ತಾನು ಮೊದಲಿಸಿಂದಲೂ ಮಗನನ್ನು ಮುದ್ದು ಮಾಡಿ ಆಶಿಕ್ಷೆಯಲ್ಲಿ ಬೆಳಸಿದುದೇ ಇದಕ್ಕೆ ಕಾರಣವೆಂದು ಎಂದುಕೊಂಡು ಲಲಿತಾಂಗನನ್ನು ಕರೆಸಿ ಅವನಿಗೆ ರಾಜನೀತಿಯನ್ನೂ ಬುದ್ಧಿವಾದವನ್ನೂ ಹೇಳಿದನು. ಆದರೆ ಇದರಿಂದ ಫಲವನ್ನೂ ಆಗದೆ ಲಲಿತಾಂಗನು ಎಂದಿನಂತೆ ಜನರನ್ನು ಕಾಡುತ್ತಲೇ ಬಂದನು. ಇದನ್ನು ಕಂಡು ಮಹಾರಾಜನು ಕೋಪಗೊಂಡು ತನ್ನ ದೇಶವನ್ನು ಬಿಟ್ಟು ಹೊರಟು ಹೋಗಬೇಕೆಂದು ಮಗನಿಗೆ ಅಪ್ಪಣೆಮಾಡಿದನು. ಅದರಂತೆ ಅವನು ವಿಜಯಪುರವನ್ನು ಬಿಟ್ಟು ಹೊರಟು ನೇಪಾಳದೇಶವನ್ನು ಸೇರಿ ಅಲ್ಲಿ ಕಳ್ಳರಿಗೆ ಅಧಿಪತಿಯಾಗಿ ಅವರಿಂದ ಅವೃಕ್ಷಘಟಿಕವನ್ನು ಪಡೆದನು ಅದರ ಸಹಾಯದಿಂದ ಅನಂಗಸೌಂದರಿಯೆಂಬ ಪುರದಿನ ವೇಶ್ಯಾಸ್ತ್ರೀಯೊಬ್ಬಳಿಗೆ ಬೇಕಾದ ವಸ್ತುಗಳನ್ನು ತಂದು ಕೊಡುತ್ತ ಇದ್ದನು. ದೊಡ್ಡ ದೊಡ್ಡ ರಾಜರೂ ಸಾಹುಕಾರರೂ ಕೂಡ ತಂದೀಯಲಾರದ ವಸ್ತುಗಳನ್ನೆಲ್ಲಾ ಅವನು ತಂದು ಕೊಡುತ್ತಿದ್ದುದನ್ನು ನೋಡಿ ಆಶ್ಚರ್ಯಪಟ್ಟು ಆ ವೇಶ್ಯೆಯು ಒಂದು ದಿನ ಇದರ ಗುಟ್ಟನ್ನು ಅವನಿಂದ ಹೊರಡಿಸಿದಳು.

ಮರುದಿವಸ ರಾಜನೂ ರಾಣಿಯೂ ಜಲಕ್ರೀಡೆಗಾಗಿ ಆ ಮಾರ್ಗದಿಂದ ಹೋಗುತ್ತಿರಲು ಮಹಾರಾಣಿಯು ಧರಿಸಿಕೊಂಡಿದ್ದ ಜ್ಯೋತಿಪ್ರಭವೆಂಬುದೊಂದು ಪದಕವನ್ನು ಆ ವೇಶ್ಯೆಯು ಕಂಡು ಅದನ್ನು ತನಗೆ ತಂದುಕೊಂಡಬೇಕೆಂದು ಲಲಿತಾಂಗನನ್ನು ನಿರ್ಬಂಧ ಪಡಿಸಿದಳು. ಅವಳ ಇಷ್ಟದಂತೆ ಅವನು ಅದನ್ನು ಬಂದು ರಾತ್ರಿ ಅರಮನೆಯಿಂದ ಕದ್ದು ತರುತ್ತಿರಲು, ಅವನು ಅದೃಶ್ಯನಾಗಿದ್ದರೂ ಆರತ್ನವು ಸೂರ್ಯನಂತೆ ಪ್ರಕಾಶಿಸುತ್ತಿದ್ದಿತು. ಇದನ್ನು ನೋಡಿದ ದಂಡಕನೆಂಬ ತಳವಾರನು ಅಟ್ಟಿಸಿಕೊಂಡು ಬರಲು ಲಲಿತಾಂಗನು ದೆಸೆಗೆಟ್ಟು ಓಡುತ್ತ ಶ್ಮಶಾನಕ್ಕೆ ಬಂದನು. ಅಲ್ಲಿ ವರಸೇನನೆಂಬ ಸನ್ಯಾಸಿಯು ಬಂದು ಮರದ ಕೆಳಗೆ ಪರಶು ಕೊಂತ ಮುಂತಾದ ಮುವ್ವತ್ತೆರಡು ಆಯುಧಗಳನ್ನು ನೆಟ್ಟು ಪೂಜಿಸಿ ಅವರ ಮೇಲೆ ಕೂಗುತ್ತಾ ಕೆದರಿ ಬಂದು ನೆಲುವಿನ ಮೇಲಕ್ಕೆ ಹತ್ತಿ ಇಳಿದು ಮಾಡುತ್ತಿದ್ದನು. ಇದನ್ನು ನೋಡಿ ಅಂಜನ ಚೋರನು, ಅವರ ವಿಚಾರವನ್ನು ಪ್ರಶ್ನೆ ಮಾಡಲು ಆತನು ಜಿನದತ್ತ ಸೆಟ್ಟಿಯು ಹೇಳಿಕೆಯಂತೆ ಬಂದು ವಿದ್ಯೆಯನ್ನು ಸಾಧಿಸಲೋಸುಗ ತಾನು ಹೀಗೆ ಮಾಡುತ್ತಿದ್ದನೆಂದೂ ಆದರೆ ಆ ಆಯುಧಗಳ ಮೇಲೆ ಬೀಳುವುದಕ್ಕೆ ಮನಸ್ಸುರಲಿಲ್ಲ ವೆಂದೂ ಗೊತ್ತಾಯಿತು. ಲಲಿತಾಂಗನು ಇವನ್ನು ತಿಳಿದು, ತಳವಾರರ ಕೈಯಲ್ಲಿ ಸಾಯುವುದಕ್ಕಿಂತ ಹೀಗೆ ಸಾಯುವುದೇ ಮೇಲೆಂದು ನಿರ್ಧರಿಸಿ ಅವನಿಂದ ತಕ್ಕ ಮಂತ್ರವನ್ನು ಉಪದೇಶವಾಗಿಸಿಕೊಂಡು ನೆಲುವಿನ ಮೇಲಿನಿಂದ ಆಯುಧಗಳ ಮೇಲೆ ಬಿದ್ದನು. ಆದರೆ ಆಯುಧಗಳ ಹತ್ತಿರ ಬಂದಕೂಡಲೆ ಮೇಲಕ್ಕೆ ಹಾರಿದನು. ಆ ವಿದ್ಯಾದೇವತೆಯು ಮುಂದೆ ಬಂದು ನಿಂತು 'ಏನಪ್ಪಣೆ?' ಎಂದು ಕೇಳಿತು. ಅದಕ್ಕೆ ಅವನು ತನ್ನನ್ನು ಜಿನದತ್ತನಲ್ಲಿಗೆ ಕರೆದುಕೊಂಡು ಹೋಗಬೇಕೆಂದು ಅಪೇಕ್ಷಿಸಿದನು. ಅವರಂತೆ ಅದು ಅವನನ್ನು ಕರೆದುಕೊಂಡು ಹೋಗಿ ಬಿಡಲು ಅವನು ಜಿನದತ್ತನನ್ನು ಕುರಿತು ಈ ವಿದ್ಯೆ ಬಂದ ಪರಿಯನ್ನು ಕೇಳಿದನು. ಅದನ್ನು ಜಿನದತ್ತನು ಈ ರೀತಿಯಾಗಿ ವಿವರಿಸಿದನು :—

"ಜಿನಪದವೆಂಬ ದೇಶದಲ್ಲಿ ಭೂಮಿತಿಲಕವೆಂಬ ನಗರವಿದೆ. ಅದಕ್ಕೆ ನರಪಾಲನೆಂಬ ದೊರೆ ಅವನ ರಾಜಶ್ರೇಷ್ಠಿ ಸೌಂದರನೆಂಬ ವನಿಗೂ ಆ ಶ್ರೇಷ್ಠಿಯ ಹೆಂಡತಿ ಸುನಂದೆ ಎಂಬವಳಿಗೂ ಶ್ರೀನರ್ಮ, ಜಯವರ್ಮ, ಜಿನನರ್ಮ, ಜಿನದತ್ತ, ಜಿನದಾಸ, ಧನ್ವಂತರಿ ಎಂದು ಮುಂತಾಗಿ ಎಂಟುಜನ ಮಕ್ಕಳಾದರು. ಆ ರಾಜನ ಪುರೋಹಿತನಾದ ಸೋಮಶರ್ಮನಿಗೂ ಅವನ ಹೆಂಡತಿ ಅಗ್ನಿಲೆಗೂ ವಿಶ್ವಾನುಲೋಮ ನೆಂಬ ಮಗನಾದನು ಈ ಧನ್ವಂತರಿಯೂ ವಿಶ್ವಾನುಲೋಮನೂ ದುರ್ವ್ಯಾಪಾರಕ್ಕೆ ಬಿದ್ದು ಅರಮನೆಯಲ್ಲಿ ಕಳವುಮಾಡಿ ದೇಶಭ್ರಷ್ಟರಾಗಿ ಮೊಡಲ್ಪಟ್ಟು ತಾಯಿ ಹೆಂಡತಿಯರೊಡನೆ ಪರದೇಶಕ್ಕೆ ಹೊರಗಿ ಅಲ್ಲಿ ಕಳವಿನಿಂದ ಜೀವಿಸುತ್ತಿದ್ದರು. ಧನ್ವಂತರಿಯು ವಿಶ್ವಾನುಲೋಮನ ಇಷ್ಟವಿದಂತೆ ಬಸವಿಗೆ ಹೋಗುವುದನ್ನು ಬಿಟ್ಟು ಬಿಳ್ಳನು ಆದರೆ ಬಂದುದಿನ ಅನೇಕಬಾರಿ ಕೆರೆಗೆ ಹೋಗುತ್ತಿರುವಾಗ ಬಂದು ಮದದಾ ನೆಯು ಆ ದಾರಿಯಲ್ಲಿ ಬರುವುದನ್ನು ನೋಡಿ ಅವರು ಭಯಗೊಂಡು ಹತ್ತಿರದಲ್ಲಿದ್ದ "ಸಹಸ್ರ ಕೂಟ ಮೆಂಬಿತ" ವೆಂಬ ಬಂದು ಜಿನಾಲಯ ದಲ್ಲಿ ಹೋಗಿ ಸೇರಿಕೊಂಡರು ಅಷ್ಟರಲ್ಲಿಯೇ ಮಳೆ ಬಂದಿತು, ಕತ್ತಲೆ ಯಾಯಿತು, ಊರಬಾಗಿಲನ್ನು ಹಾಕಿಬಿಟ್ಟರು ಆದುದರಿಂದ ಅವೆ ರಿಬ್ಬರೂ ಅಲ್ಲಿಯೇ ನಿಲ್ಲಬೇಕಾಯಿತು ಅಲ್ಲಿ ವರ್ಧಮರ್ಮ ರೆಂಬ ಮುನಿ ಗಳು ಧರ್ಮೋಪದೇಶ ಮಾಡುತ್ತಿದ್ದರು. ಇದು ಕಿವಿಗೆ ಬೀಳಬಾರ ದೆಂದು ಇಬ್ಬರೂ ಕಿವಿಗೆ ಬಟ್ಟೆಗಿಡಿದುಕೊಂಡು ಮಲಗಿದ್ದರು. ವಿಶ್ವಾನು ಲೋಮನಿಗೆ ನಿದ್ದೆ ಬಂದಮೇಲೆ ಧನ್ವಂತರಿಯು ತನ್ನ ಕಿವಿಗೆ ಗಿಡಿದುಕೊಂಡ ದ್ದನ್ನು ತೆಗೆದುಹಾಕಿ ಮುನಿಗಳ ಉಪದೇಶವನ್ನು ಕೇಳಿ ಧರ್ಮೋಪ ದೇಶವಾಗಲು ಅವರಹತ್ತಿರ ಹೋಗಿ "ನನಗೊಂದು ವ್ರತವನ್ನು ಕೊಡ ಬೇಕು" ಎಂದು ಕೇಳಿದನು. ಅದಕ್ಕೆ ಅವರು "ನಿತ್ಯವೂ ತಿಂಗಳು ತಲೆಯನ್ನು ನೋಡದೆ ಊಟಮಾಡಬೇಡ" ಎಂದರು ಇವರಂತೆ ಅವನು ನಡೆಸುತ್ತ ಬಂದುದಿನ ಊಟದ ಸಮಯದಲ್ಲಿ ಈ ವ್ರತವನ್ನು ಜ್ಞಾಪಿಸಿಕೊಂಡು ತನ್ನ ಸೆರೆಯಲ್ಲಿದ್ದ ಕುಂಬಾರನು ತಿಂಗಳು ತಲೆಯವ ನಾಗಿದ್ದ ದ್ದರಿಂದ ಅವನನ್ನು ನೋಡುವುದಕ್ಕೆಂದು ಹೋದನು. ಅವನು

ಮನೆಯಲ್ಲಿರಲಿಲ್ಲ; ಆದುದರಿಂದ ಅವನು ಹಣ್ಣು ತರುವುದಕ್ಕೆಂದು ಹೋಗಿದ್ದ ಸ್ಥಳಕ್ಕೆ ತಾನೇಹೋಗಿ ನೋಡಿ, 'ನೋಡಿದೆ' ಎಂದು ಕೂಗಿಕೊಂಡನು. ಆದರೆ ಅಷ್ಟರೊತ್ತಿಗೆ ಸರಿಯಾಗಿ ಆ ಕುಂಬಾರನಿಗೆ ಬಂದು ನಿಧಿಯು ಕಣ್ಣಿಗೆ ಬಿದ್ದಿತ್ತು. ಇದನ್ನು ಧನ್ವಂತರಿಯು ಕಂಡು ಹೀಗೆ ಕೂಗಿರಬಹುದೆಂದು ಅನಿಸಿ ತಿಳಿದುಕೊಂಡು ಸುಮ್ಮುಂಕಾಲ ಅವನ ಮನೆಗೆ ಬಂದು ಆ ನಿಧಿಯನ್ನು ಅವನ ಮುಂದೆ ಇಟ್ಟನು. ಇದರಲ್ಲಿ ಕುಂಬಾರನಿಗೆ ಬೇಕಾದಷ್ಟನ್ನು ಕೊಟ್ಟು ಕಳುಹಿಸಿ ಧನ್ವಂತರಿಯು ಬೆಳಗಾಗುತ್ತಲೆ ಬಸದಿಗೆ ಬಂದು ಭಟ್ಟಾರಕರಿಗೆ ನಮಸ್ಕಾರಮಾಡಿ ತನಗೆ ಇನ್ನೊಂದು ವ್ರತವನ್ನು ಕೊಡಬೇಕೆಂದು ಕೇಳಿದನು ಅವಕ್ಕೆ ಅವರು "ಹೆಸರು ಗೊತಿಲ್ಲದ ಯಾವೆಮುರದ ಹಣ್ಣುಗಳನ್ನೂ ತಿನ್ನಬೇಡ" ಎಂದರು. ಕೆಲವು ದಿನಗಳಾಮೇಲೆ ಇವರಿಬ್ಬರೂ ಪರದೇಶಕ್ಕೆ ಹೋಗಿಬರುತ್ತ ದಾರಿಯಲ್ಲಿ ಕಾಡಿನೊಳಗೆ ಪಸುವಾಗಲು ಭೃತ್ಯರನ್ನು ಹಣ್ಣು ಹಂಪಲು ತರುವುದಕ್ಕಾಗಿ ಕಳುಹಿಸಿಕೊಟ್ಟರು. ಅವರು ಹೋಗಿ "ಕಾಂಚೀರ" ಮುರವ ಹಣ್ಣುಗಳನ್ನು ತಂದರು ಇದರ ಹೆಸರು ಗೊತ್ತಿಲ್ಲದಿದ್ದುದರಿಂದ ಧನ್ವಂತರಿಯು ಅವುಗಳನ್ನು ತಿನ್ನಲಿಲ್ಲ, ಅವನು ತಿನ್ನದೆ ಇದ್ದುದರಿಂದ ವಿಶ್ವಾನುಲೋಮನೂ ತಿನ್ನಲಿಲ್ಲ. ಭೃತ್ಯರುಮಾತ್ರ ಪಸಿವಿನ ಆತುರಕ್ಕೆ ತಿಂದು ಸತ್ತುಹೋದರು. ಆದುದರಿಂದ ಅವರೆಲ್ಲರ ಐಶ್ವರ್ಯವನ್ನೂ ಇವರಿಬ್ಬರೇ ತೆಗೆದುಕೊಂಡು ಬಂದರು. ಧನ್ವಂತರಿಯು ಇದನ್ನು ಭಟ್ಟಾರಕರಿಗೆ ತಿಳಿಸಿ ಮತ್ತೊಂದು ವ್ರತವನ್ನು ಕೊಡಬೇಕೆಂದು ಕೇಳಿದನು. ಆದಕ್ಕೆ ಅವರು "ಹಿಟ್ಟಿನ ಎತ್ತನ್ನೂ ಬಂಡಿಯನ್ನೂ ತಿನ್ನಬೇಡ" ಎಂದರು. ಬಂದುದಿನ ಹಿಂದಿನಂತೆ ಅವನೂ ವಿಶ್ವಾನುಲೋಮನೂ ಕಾಡಿನಲ್ಲಿ ಸಿಕ್ಕಿ ಪಸಿದು, ಯಾರೋ ಪೂಜಿಸಿಬಿಟ್ಟು ಹೋಗಿದ್ದ ಬಂದು ಹಿಟ್ಟಿನ ಎತ್ತನ್ನೂ ಗಾಡಿಯನ್ನೂ ನೋಡಿದರು. ಇದನ್ನು ಅವರ ಭೃತ್ಯರು ತಿಂದರು. ಆದರೆ ಹಿಂದಿನ ದಿವಸ ಅದರಲ್ಲಿ ಬಂದು ಹಾವು ವಿಷವನ್ನು ಕಾರಿದ್ದುದರಿಂದ ಅವರೆಲ್ಲರೂ ಸತ್ತುಹೋದರು. ಧನ್ವಂತರಿಯು ತಾನು ಬದುಕಿದುದಕ್ಕೆ ಸಂತೋಷಪಟ್ಟು ಪುನಃ ಬಸದಿಗೆ ಬಂದು ಭಟ್ಟಾರಕರಿಗೆ ಎಲ್ಲವನ್ನೂ ತಿಳಿಸಿ

ಮತ್ತೊಂದು ವ್ರತವನ್ನು ಕೇಳಿದನು. ಅವರು "ಪರ್ವಗಳು ಅಷ್ಟಮಿ ಚತುರ್ದಶಿ ಈ ದಿನಗಳಲ್ಲಿ ಮದ್ಯಮಾಂಸಗಳನ್ನು ಬಿಟ್ಟುಬಿಡು" ಎಂದರು. ಇದಾದ ಕೆಲವುದಿನದಮೇಲೆ ಪರದೇಶದಲ್ಲಿ ಕದ್ದು ಹಿಂತಿರುಗಿ ಬರುತ್ತ ದಾರಿಯಲ್ಲಿ ಇಳಿದುಕೊಂಡು, ಮೊಂಸದಮೇಲೆ ಆಸೆಯಾಗಲು ಇವರಿಬ್ಬರೂ ತಮ್ಮ ತಮ್ಮ ಜನರನ್ನು ಪತ್ತಿನವಲ್ಲಿದ್ದ ಬಂದು ಹಳ್ಳಿಯಿಂದ ಮಾಂಸವನ್ನು ತರುವಂತೆ ಹೇಳಿಕಳುಹಿಸಿದರು. ಅವರು ದುರಾಲೋಚನೆಮಾಡಿ ಎದುರು ಕಕ್ಷಿಯವರನ್ನು ಕೊಂದು ಅವರ ಐಶ್ವರ್ಯವನ್ನು ದೋಚಿಕೊಳ್ಳುವುದಕ್ಕೋಸ್ಕರ ಎರಡು ಗುಂಪಿನವರೂ ಬೇರೆಬೇರೆ ತಾವು ತಂದ ಮಾಂಸಕ್ಕೆ ವಿಷವನ್ನು ಬೆರಸಿ ತಂದರು. ಆದರೆ ಅಂದು ಚತುರ್ದಶಿಯಾದುದರಿಂದ ಧನ್ವಂತರಿಯು ಅದನ್ನು ತಿನ್ನಲಿಲ್ಲ; ಅವನು ತಿನ್ನದಿದ್ದುದರಿಂದ ಏಶ್ವಾನುಲೋಮನೂ ತಿನ್ನಲಿಲ್ಲ. ಪರಿಜನರು ಮಾತ್ರ ಬಂದು ಗುಂಪಿನವರು ತಂದದ್ದನ್ನು ಇನ್ನೊಂದು ಗುಂಪಿನವರು ತಿಂದು, ಎಲ್ಲಾ ಮೃತರಾದರು. ಇದನ್ನು ನೋಡಿ ತನ್ನ ವ್ರತದ ಮಹಿಮೆಯನ್ನು ತಿಳಿದು ಧನ್ವಂತರಿಯು ಬಂದು ಭಟ್ಟಾರಕರನ್ನು ವಂದಿಸಿ ಮತ್ತೊಂದು ವ್ರತವನ್ನು ಕೇಳಿಕೊಂಡನು. ಅದಕ್ಕೆ ಅವರು "ನೀನು ಯಾವುದಾದರೂ ಪ್ರಾಣಿಯ ಮೇಲಾದರೂ ಕೋಪಿಸಿಕೊಂಡಾಗ ಹಿಂದಕ್ಕೆ ಏಳು ಹೆಜ್ಜೆ ಹೋಗಿ ಆಮೇಲೆ ನಿನ್ನ ಮನಸ್ಸಿಗೆ ಬಂದಂತೆ ಮಾಡು" ಎಂದರು. ಇದಾದಮೇಲೆ ಕಳಿಂಗದೇಶಕ್ಕೆ ಕಳ್ಳತನಕ್ಕೆ ಹೋಗಿ ಆರುತಿಂಗಳು ಅಲ್ಲಿ ಕದಿಯುತ್ತಿದ್ದು ತಟ್ಟನೆ ಮನೆಯಮೇಲೆ ಮನಸ್ಸುತಿರುಗಿ ಬಂದುರಾತ್ರಿ ಊರಿಗೆ ಬಂದು 'ಕವಾಟೋದ್ಘಾಟನ ವಿದ್ಯೆ'ಯಿಂದ ಬಾಗಿಲನ್ನು ತೆಗೆದು ಒಳಗೆ ಸುಗ್ಗಿ ತನ್ನ ತಾಯಿಯೂ ಹೆಂಡತಿಯೂ ಒಟ್ಟಿಗೆ ಮಲಗಿದ್ದುದನ್ನು ನೋಡಿ ಯಾರೋ ಪರಪುರುಷನೊಬ್ಬನು ಅಲ್ಲಿಗೆ ಬಂದಿರಬೇಕೆಂದು ನೆನೆಸಿದನು. ಕೂಡಲೆ ಕೋಪಬಂದಿತು. ಆದರೆ ವ್ರತವನ್ನು ಅನುಸರಿಸಿ ಹಿಂದಕ್ಕೆ ಏಳಿಹೋದನು, ಇಷ್ಟರೊತ್ತಿಗೆ ಅವನ ಹೆಂಡತಿಯು 'ಅತ್ತೆ! ಸೆಕೆಯಾಗುತ್ತಿದೆ, ಸ್ವಲ್ಪ ಅತ್ತಲಾಗಿ ಮಲಗಿಕೊಳ್ಳಿ' ಎಂದಳು. ಅದನ್ನು ಕಂಡು ತಾನುಮಾಡಬೇಕೆಂದಿದ್ದ ಕೊಲೆಯು ನಿವಾರಣೆಯಾದುದಕ್ಕೆ ಸಂತೋಷಪಟ್ಟು, ಐದುವ್ರತ

ಗಳೂ ಸಫಲವಾದುದರಿಂದ ವಿಶ್ವಾಸವನ್ನೂ ವೈರಾಗ್ಯವನ್ನೂ ಪಡೆದು ದೀಕ್ಷೆಯನ್ನು ಕೈಕೊಂಡು ತಪಸ್ಸಿಗೆ ಹೊರಟು ಹೋದನು. ...ುಂದಿನ ಜನ್ಮದಲ್ಲಿ ಇವನು ಅಚ್ಯುತಕಲ್ಪದ ಅಹಮಿಂದ್ರದೇವನಾಗಿಯೂ ವಿಶ್ವಾನುಲೋಮನು ವಾಹನದೇವನಾಗಿಯೂ ಪುಟ್ಟಿದರು. ಅಲ್ಲಿಯೂ ಇವರಿಗೆ ತಮ್ಮ ತಮ್ಮ ಧರ್ಮವೇ ಹೆಚ್ಚೆಂಬ ಹಾರುಡು ಬಂದಿತು. ಆಗ ವಿಶ್ವಾನುಲೋಮನು ತೋರಿಸಿದ ತನ್ನ ಧರ್ಮದ ಒಬ್ಬ ಋಷಿಯು ಮಾಡುತ್ತಿದ್ದ ತಪಸ್ಸನ್ನು ಅಚ್ಯುತೇಂದ್ರನು (ಧನ್ವಂತರಿಯು) ಭಂಗ ಪಡಿಸಿ ಅವನನ್ನು ಸಂಸಾರದಲ್ಲಿ ಪ್ರವೇಶಮಾಡಿಸಿದನು. ಆದರೆ ಅದರಂತೆ ಧನ್ವಂತರಿಯು ತೋರಿಸಿದ ಒಬ್ಬ ಗೃಹಸ್ಥನ ತಪಸ್ಸನ್ನು ಮಾತ್ರ ವಿಶ್ವಾನುಲೋಮನು ಮಹಾಪ್ರಯತ್ನಮಾಡಿದರೂ ಭಂಗಪಡಿಸುವುದಕ್ಕಾಗಲಿಲ್ಲ. ಆಗ ವಾಹನದೇವನು (ವಿಶ್ವಾನುಲೋಮನು) ಮಿಥ್ಯಾತ್ವವನ್ನು ಬಿಟ್ಟು ಸದ್ದೃಷ್ಟಿಯಾದನು.

ಈ ಅಚ್ಯುತೇಂದ್ರನು ಬಂದುದಿನ ಬಂದು ನನಗೆ ನಮಸ್ಕರಿಸಿ ಪರ್ವದಿನಗಳಲ್ಲಿ ಅಕೃತ್ರಿಮ ಚೈತ್ಯಾಲಯಗಳಿಗೆ ಹೋಗಿಬರುವುದಕ್ಕೆ ಅನುಕೂಲವಾಗುತ್ತದೆ' ಎಂದು ಹೇಳಿ ಈ ವಿದ್ಯೆಯನ್ನು ಕೊಟ್ಟು ಹೋದನು. ನಾನು ಅದನ್ನು ನಮ್ಮ ದೇಶದ ಮಾಣಿವರ ಸೇನನಿಗೆ ಕೊಟ್ಟೆನು"

ಈ ಕಥೆಯನ್ನು ಕೇಳಿ ಲಲಿತಾಂಗನು ಬೆರಗಾಗಿ, ಅಂತಪ ದೇವನೂ ಈ ಮನುಷ್ಯ ಮಾತ್ರನಿಗೆ ನಮಸ್ಕಾರಮಾಡಿದನಂದಮೇಲೆ

"..... ಜಿನಾಗಮಮುಮಂ ನಿಶ್ಶಂಕೆಯಿಂ ನಂಬುವಾತನಸಹ್ಯೋನ್ನತಿಯುಂ ಮಹಾಮಹಿಮೆಯುಂ ಪೇಟ್ಟಣ್ಣಿಸಲ್ ಬಲ್ಲರ್ ಮೇ" ಎಂದು ದರ್ಶನದೊಳ್ ನಿಶ್ಶಂಕನಾಗಿ" ಸಂಸಾರ ಭೋಗಕ್ಕೆ ಹೇಸಿ ದೀಕ್ಷೆಯನ್ನು ತೆಗೆದುಕೊಂಡು ತಪಸ್ಸುಮಾಡಿ ಕರ್ಮಕ್ಷಯವಾಗಲು "ತ್ರಿಲೋಕ ಶಿಖರಿ ಶೇಖರ" ನಾದನು.

ತೃತೀಯಾಶ್ವಾಸ.

ನಿಷ್ಕಾಂಕ್ಷೆಯ ಕಥೆ

ಅಂಗವಿಷಯದ ಚಂಪಾಪುರದಲ್ಲಿ ಪ್ರಿಯದತ್ತನೆಂಬ ವರ್ತಕನು ಇದ್ದನು; ಅವನಿಗೆ ಅಂಗವತಿಯೆಂಬ ಹೆಂಡತಿಯೂ ಅನಂತವತಿ ಯೆಂಬ ಮಗಳೂ ಇದ್ದರು. ಒಂದುದಿನ ಕಲವು ಹುಡುಗರು ಸೇರಿ ಕೊಂಡು ಅನಂತವತಿಯ ಜೊತೆಯಲ್ಲಿ ಬಂದು ಬೊಂಬೆಯನ್ನು ಇಟ್ಟು ಅದು ಅವಳ ಗಂಡನೆಂದು ಹೇಳುತ್ತ ಮದುವೆಯ ಆಟವನ್ನು ಆಡುತ್ತಿ ದ್ದರು. ಪ್ರಿಯದತ್ತನು ಬಸದಿಗೆ ಹೋಗುತ್ತ ದಾರಿಯಲ್ಲಿ ಇದನ್ನು ನೋಡಿ 'ಯಾವ ಉತ್ಸವವೂ ಇಲ್ಲವೆ ಹೀಗೆ ನೀನು ಮದುವೆಯಾಗು ವುದು ಉಚಿತವಲ್ಲವೆಂದು ಹೇಳಿ ಕರೆದುಕೊಂಡುಹೋಗಿ ಬಸದಿಯಲ್ಲಿ ಭಟ್ಟಾರಕರನ್ನು ಕುರಿತು 'ಈ ಹುಡುಗಿಗೆ ಬ್ರಹ್ಮಚರ್ಯವ್ರತವನ್ನು ಕೊಡಿ' ಎಂದು ಹೇಳಿದನು. ಅವರೂ ಹಾಗೆಯೇ 'ಇಂದಿನಿಂದ ನಿನಗೆ ಬ್ರಹ್ಮ ಚರ್ಯವ್ರತವನ್ನು ಕೊಟ್ಟಿದ್ದೇವೆ' ಎಂದು ಹೇಳಿಬಿಟ್ಟರು. ಆದರೆ ಅವಳು ಮಾತ್ರ ಇವನ್ನು ಪರಮಾರ್ಥವಾಗಿ ತಿಳಿದುಕೊಂಡು ಐದನೆಯ ವರ್ಷ ದಲ್ಲಿ ಆನಿರೀಕ್ಷಿತವಾಗಿ ಈ ವ್ರತವು ಬಂದುದಕ್ಕಾಗಿ ಸಂತೋಷಪಟ್ಟು ಕೊಂಡಿದ್ದಳು. ಅವಳಿಗೆ 'ಬ್ರಹ್ಮಚಾರಿ' ಎಂಬ ಅಡ್ಡಹೆಸರು ರೂಢಿಗೆ ಬಂದಿತು. ಹೀಗಿರಲು ಹದಿನೈದನೆಯ ವರ್ಷದಲ್ಲಿ ಒಂದುದಿನ ಅವಳು ಉದ್ಯಾನದಲ್ಲಿ ಬಾಲ್ಯಕ್ರೀಡೆಯಾಡುತ್ತಿದ್ದಾಗ ಕಾಂಚನಮಿಂಥನೆಂಬ ವಿದ್ಯಾಧರ ನು ಆಕಾಶಮಾರ್ಗದಿಂದ ಬಂದು ಅವಳನ್ನು ಎತ್ತಿಕೊಂಡುಹೋದನು. ಇದನ್ನು ಅವನ ಹೆಂಡತಿಯು ಅಸೂಯೆಯೆಂಬ ವಿದ್ಯೆಯಿಂದ ಅರಿದು ಕೋಪದಿಂದ ಅವನನ್ನು ಅಟ್ಟಿಸಿಕೊಂಡು ಬರಲು ಅವನು ಅನಂತಮತಿ ಯನ್ನು ಪರ್ಣಲಘುವಿದ್ಯೆಯಿಂದ ಮೆಲ್ಲಗೆ ಕಾಡಿನಲ್ಲಿ ಇಳಿಸಿದನು. ಅವಳು ಕರ್ಮವಶದಿಂದ ಬಂದ ತನ್ನ ಸ್ಥಿತಿಯನ್ನು ನೋಡಿಕೊಂಡು ಜೈನಸ್ತವನವನ್ನು ಮಾಡುತ್ತಿರಲು ಆ ಕಾಡಿನ ಬೇಡಪಡೆಯ ಯಜ ಮಾನನು ಬಂದು ಅವಳನ್ನು ನೋಡಿಸಿ ಮದುವೆಯಾಗಲಪೇಕ್ಷಿಸಿದನು. ಆದರೆ ಅವಳು ತಾನು ಹಿಡಿದ ಬ್ರಹ್ಮಚರ್ಯವ್ರತವನ್ನು ಬಿಡುವುದಿಲ್ಲವೆಂದು ನಿರ್ಧರಿಸಿದಳು. ಇದರಿಂದ ಆಸನಕಂಪವಾದ ಯಕ್ಷಿಯು ಬಂದು

ಕಿರಾತನ ವೇಷದಿಂದ ಅವಳನ್ನು ಪರೀಕ್ಷಿಸಿ, ಅವಳು ಸ್ವಲ್ಪವೂ ಸಗ್ಗದಿರಲು, ತನ್ನ ರೂಪನ್ನು ತೋರಿಸಿ, ಪುನಃ ಆವೇ(ಆನಂತಮತಿಯ) ರೂಪಿನಿಂದ ಕಿರಾತರಾಜನಲ್ಲಿಗೆ ಹೋಗಿ "ನಾನು ದೇವತೆ; ನನ್ನನ್ನು ಕಳುಹಿಸದೆ ಇದ್ದರೆ ನಿನಗೆ ಏನಾಗುತ್ತದೆ ಎಂಬುದನ್ನು ಮುಂದೆ ನೀನೇ ತಿಳಿಯುವೆ" ಎಂದು ಹೆದರಿಸಿದಳು. ಅದರಂತೆ ಅವನು ಹೆದರಿಕೊಂಡು ಅನಂತಮತಿಯನ್ನು ಬಿಟ್ಟು ಅಯೋಧ್ಯೆಗೆ ದಾರಿಯನ್ನು ತೋರಿಸಿ ಕಳುಹಿಸಿದನು.

ಅಯೋಧ್ಯೆಯು ಬಂದು ಬನದಲ್ಲಿದ್ದಾಗ ಅವಳನ್ನು ಒಬ್ಬ ವೇತ್ರಕನು ಕಂಡು "ದರ್ಶನವಿಕಂದ್ದಿ" ಯೆಂದು ತಿಳಿದು ಅವಳನ್ನು ಕರೆತಂದು ತನ್ನ ಪಂಡತಿಯು ವಶಕ್ಕೆ ಒಪ್ಪಿಸಿದನು ಆಕೆಯು ಅವಳಲ್ಲಿ ಮಾತ್ಸರ್ಯದಿಂದ ಅನಂತಮತಿಯನ್ನು ವ್ಯಾಘ್ರದೆಂಬ ಕಂಟಿಗೆ ಮೂರಾದಳು ವ್ಯಾಘ್ರಿಯು ಅವಳನ್ನು ಯಮಪಾರ್ಶ್ವಕ್ಕೆ ಒಪ್ಪಿಸಲು ಸಾಧ್ಯವಾಗದೆ ಆ ಪುರಿನ ರಾಜನಾದ ಸಿಂಹರಥನಿಗೆ ಒಪ್ಪಿಸಿದಳು ಅವನು ಅವಳ ರೂಪದಿಂದ ಮೋಹಿತನಾಗಿ ಅವಳನ್ನು ನಯದಿಂದ ತನ್ನ ವಶವರ್ತಿನಿಯಾಗಿ ಮಾಡಿಕೊಳ್ಳಲು ಪ್ರಯತ್ನಪಟ್ಟು ಕೊನೆಗೆ ಅದು ಸಾಧ್ಯವಾಗದೆ ಅವಳಿಗೆ ಚಾಂಡಾಲದ ಏಟುಗಳನ್ನು ತಿನ್ನಿಸಿದನು. ಅವಳು ಮಾತ್ರ ಹೆದರದೆ ಪರಮೇಶ್ವರನನ್ನು ಧ್ಯಾನಿಸುತ್ತ ಸ್ಥಿರವಾಗಿದ್ದಳು. ಇದನ್ನು ನೋಡಿ ಆ ಪುರದ ದೇವತೆಗಳು ಬಂದು ಅವಳ ನೋವೆಲ್ಲವನ್ನೂ ಪಟ್ಟದರಸಿಯುಳಿಯಲೆಯೂ ಪರಿವಾರದವರಳಿಯಲೆಯೂ ತಿರುಗಿಸಿದರು; ಕೂಡಲೇ ಅವರೆಲ್ಲರೂ ನೆತ್ತರನ್ನು ಕಾರಿಕೊಂಡು ನೆಲದ ಮೇಲೆ ಬಿದ್ದರು ದೊರೆಯೂ ನೋವನ್ನು ಸೈರಿಸಲಾರದೆ ಹೊರಳಾಡುತ್ತಿದ್ದನು. ಇದನ್ನು ನೋಡಿ ದೇವತೆಗಳು ಸಕ್ಕ, ಜಯಜಯನಿನಾದವನ್ನೂ ಪುಷ್ಪವೃಷ್ಟಿಯನ್ನೂ ಮಾಡಿ ಉಪಸರ್ಗವನ್ನು ನಿವಾರಣೆ ಮಾಡಿದರು. ಅನಂತರ ಸಿಂಹರಥ ಮಂತ್ರಿವರ್ಗದವರೆಲ್ಲರೂ ಅವಳನ್ನು ಪೂಜಿಸಿ ಶ್ಲಾಘಿಸಿದರು. ಅನಂತಮತಿಯೂ ರಾಜಪ್ರೇಷ್ಯಳಾದ ಜಿನೇಂದ್ರದತ್ತಸಟ್ಟಿಯ ದೇಹಾರದಲ್ಲಿ ನಾನಾವ್ರತಗಳನ್ನು ಕೈಕೊಂಡು ಮಾಡುತ್ತ ಇದ್ದಳು.

ಇತ್ತ ಪ್ರಿಯವತ್ತಸೆಟ್ಟಿಯು ತನ್ನ ಮಗಳು ಅದೃಶ್ಯಳಾಗಿ ಹೋದುದನ್ನು ನೋಡಿ ದುಃಖಿಸುತ್ತ ಕೆಲವು ಕಾಲದಮೇಲೆ ತನ್ನ ಭಾವನಾದ ಜಿನದತ್ತಸೆಟ್ಟಿಯ ಮನೆಗೆ ಬಂದು ಅವನ ದೇಹಾರದಲ್ಲಿ ತನ್ನ ಮಗಳನ್ನು ಕಂಡನು. ಆಮೇಲೆ ಪರಸ್ಪರ ಯೋಗಕ್ಷೇಮಗಳು ನಡೆದು ಆದ ಸಂಗತಿಗಳೆಲ್ಲಾ ಗೊತ್ತಾದುವು. ಇದಾದ ಎಂಟುಹತ್ತು ದಿವಸಕ್ಕೆ ಪ್ರಿಯದತ್ತಸೆಟ್ಟಿಯು ಅಳಿಯನನ್ನು ತನ್ನ ಸೋದರ ಅಳಿಯನಾದ ಶ್ರುತಸಾಗರನಿಗೆ ಕೊಟ್ಟು ಮದುವೆ ಮಾಡಬೇಕೆಂದು ಯೋಚಿಸಿ ಬೇಕಾದ ಏರ್ಪಾಡುಗಳನ್ನು ಮಾಡಿದನು. ಆದರೆ ಏನುಹೇಳಿದರೂ ಅನಂತಮತಿಯು ಮಾತ್ರ ಮದುವೆಗೆ ಒಪ್ಪದೆ ಎಲ್ಲರನ್ನೂ ಒಡಂಬಡಿಸಿ ಕಮಳಶ್ರೀಗಂತಿಯರ್ಯಲ್ಲಿ ಜಿನದೀಕ್ಷೆಯನ್ನು ಕೈಕೊಂಡು ತಪಸ್ಸುಮಾಡಿ ಸಮಾಧಿಯಿಂದ ಶರೀರವನ್ನು ಬಿಟ್ಟು ಸಹಸ್ರಾರ ಕಲ್ಪದಲ್ಲಿ ಸುಕಾಂತನೆಂಬ ಮಹತ್ತರದೇವನಾಗಿ ಹುಟ್ಟಿದಳು.

ಚತುರ್ಥಾಶ್ವಾಸ.

ನಿರ್ವಿಚಿಕಿತ್ಸೆಯ ಕಥೆ.

ಇಂದ್ರಕಚ್ಛ ವಿಷಯದಲ್ಲಿ ರೌರವ ಪುರವೆಂಬುದೊಂದು ಪಟ್ಟಣವಿರುವುದು. ಅದನ್ನು ಪ್ರಭಾವತಿಯೆಂಬ ಪಟ್ಟದರಾಣಿಯೊಡನೆ ಉದ್ದಾಯನನೆಂಬ ರಾಜನು ಆಳುತ್ತಿದ್ದನು.

ಆತ್ತ ಸೌಧರ್ಮಕಲ್ಪದಲ್ಲಿ ಸೌಧರ್ಮೇಂದ್ರನಿಂದ ಧರ್ಮವನ್ನು ಕೇಳಿದ ದೇವತೆಗಳು "ನಿರ್ವಿಚಿಕಿತ್ಸೆಯಲ್ಲಿ ಪ್ರಸಿದ್ಧರಾದವರಾರು?" ಎಂದು ಪ್ರಶ್ನೆಮಾಡಲು, ಸೌಧರ್ಮೇಂದ್ರನು ಉದ್ದಾಯನ ಮಹಾರಾಜನ ಹೆಸರನ್ನು ಹೇಳಿದನು ಇದನ್ನು ಕೇಳಿ ವಾಸವನೆಂಬ ದೇವನು ಆಶ್ಚರ್ಯಪಟ್ಟು ಇದನ್ನು ಪರೀಕ್ಷಿಸಬೇಕೆಂದು ಹೊರಟು ಕುಷ್ಮಂಡಿಂದ ಮಹಾ ಅಸಹ್ಯಕಾರವಾದ ದೇಹವನ್ನೂ ರೂಪವನ್ನೂ ಧರಿಸಿ ರೌರವಪುರದಲ್ಲಿ ಹೋಗುತ್ತಿದ್ದನು. ಅವನನ್ನು ನೋಡಿ ಬಬ್ಬೊಬ್ಬರು ಬಂದೊಂದು ಮಾತನಾಡುತ್ತಿದ್ದರು. ವಾಸವನು ಇದನ್ನೆಲ್ಲಾ ಕೇಳುತ್ತ ಸಕಲ ವೈಭ

ವೆದಿಂದ ಒಪ್ಪಿದ್ದ ಒದ್ದಾಯನನ ಒಡ್ಡೋಲಗಕ್ಕೆ ಬಂದನು ಮೆಹಾ ರಾಜನು ಅವನನ್ನು ಕಂಡಕೂಡಲೇ ಎದ್ದು ನಮಸ್ಕರಿಸಿ ಉಚ್ಚಾಸನದಲ್ಲಿ ಕುಳ್ಳಿರಿಸಿದನು. ಪರಿವಾರದವರೆಲ್ಲರೂ ಋಷಿಯು ಮರ್ವಾಸನೆಯನ್ನು ತಡೆಯಲಾರದೆ ಒಬ್ಬೊಬ್ಬರಾಗಿ ಹೊರಟುಹೋದರು ಆದರೆ ರಾಜನೂ ರಾಣಿಯೂ ಮಾತ್ರ ಅಸಹ್ಯವಿಲ್ಲದೆ ನಿಂತು ಅವನಿಗೆ ಬೇಕಾದ ಆಹಾರ ವನ್ನು ತಂದಿತ್ತರು. ಋಷಿಯು ತೃಪ್ತಿಯಾಗಿ ಊಟಮಾಡಿ, ಸಂಕಟ ಪಡುತ್ತ ತಟ್ಟನೆ ಮಹಾರಾಜನಮೇಲೆ ವಮನಮಾಡಿಬಿಟ್ಟನು; ದೊರೆಯ ಮೈಯೆಲ್ಲಾ ತೊಯಿದು ಲೋಳೆಯಿಂದ ವಜ್ರಲೇಪಹಾಕಿದಹಾಗಾಯಿತು.. ಆದರೆ ಅವನು ಇವಕ್ಕೂ ಅಸಹ್ಯಪಟ್ಟುಕೊಳ್ಳದೆ ತಾನು ಒಡಿಸಿದುದರಲ್ಲಿ ಹೆಚ್ಚು ಕಡಿಮೆಯಾದುದರಿಂದ ಹೀಗಾಯಿತೆಂದು ತನ್ನನ್ನು ತಾನು ನಿಂದಿ ಸಿಕೊಂಡು, ಬೀಳುತ್ತಿದ್ದ ಋಷಿಯನ್ನು ಬಂದು ಜಾವದ ವರೆಗೆ ಹಿಡಿದು ಕೂಂಡು ಕುಳಿತಿದ್ದನು. ಆಯಾಸವು ತೀರಿದಮೇಲೆ ಗಂಡಹೆಂಡರಿ ಬ್ಬರೂ ಅವನನ್ನು ಕರೆದುಕೊಂಡುಹೋಗಿ ತೊಳದು ಪೀತಾಂಬರದಿಂದ ಮೈಒರೆಸಿ ಒಳ್ಳೆಯದೊಂದು ಆಸನದಲ್ಲಿ ಕುಳ್ಳಿರಿಸಿ ತಮ್ಮಿಂದಾದ ಕಷ್ಟ ವನ್ನು ಹ್ಹಮಿಸಬೇಕೆಂದು ಬೇಡಿಕೊಂಡರು ಇದನ್ನು ಕೇಳಿ ಸಂತೋ ಷಪಟ್ಟು ವಾಸವನು ತನ್ನ ನಿಜಸ್ವರೂಪವನ್ನು ತೋರಿಸಿ ತಾನು ಬಂದ ವೃತ್ತಾಂತವನ್ನು ತಿಳಿಸಿ ಪ್ರಭಾವತಿಯ ಮಾಹಾತ್ಮ್ಯವನ್ನು ಮುಂದೆ ಹೇಳುವಂತೆ ವಿವರಿಸಿದನು:—

"ಮಹಾರಾಜ! ಈಕೆಗೆ ಶೀಲವತಿಯೆಂಬ ಹೆಸರು ಬಂದ ವೃತ್ತಾಂ ತವನ್ನು ವಿವರಿಸುತ್ತೇನೆ ಕೇಳು; ಒಂದುಸಾರಿ ನೀನು ವಿಜಯಯಾತ್ರೆ ಹೊರಟುಹೋದಾಗ ನಾರಾಯಣದತ್ತೆ ಯೆಂಬಾಕೆಯು ಅರಮನೆಗೆ ಬಂದಳು. ಅವಳು ಪ್ರಭಾವತಿಯ ಬಾಲ್ಯಕಾಲದ ಗೆಳತಿ; ಆದರೆ ಚಿಕ್ಕ ನಯಸ್ಸಿನಲ್ಲಿಯೇ ವಿಧವೆಯಾಗಿ ತರ್ಕಶಾಸ್ತ್ರಗಳನ್ನೋದಿ ಪಂಡಿತೆಯೆ ನ್ನಿಸಿಕೊಂಡಿದ್ದಳು. ಪ್ರಭಾವತೀದೇವಿಯು ಈಕೆಯ ಮಿಥ್ಯಾವೇಷ ವನ್ನು ನೋಡಿ ಉದಾಸೀನಳಾಗಿದ್ದಳು. ನಾರಾಯಣದತ್ತೆಗೆ ಅವಮಾ ನವಾಗಿ ಕೋಪಬಂದಿತು. ಆನಂತರ ಹಿಂತಿರುಗಿಹೋಗಿ ಅವಳ ಶ್ರಾವಕ ತ್ವವನ್ನು ಹೇಗಾದರೂ ಮಾಡಿ ಕೆಡಿಸಬೇಕೆಂದು ನಿಶ್ಚಯಿಸಿದಳು. ಅದ

ಕ್ಕಾಗಿ ಅವಳ ಚಿತ್ರಪಠವೊಂದನ್ನು ಬರೆದು ಮೂಳವೇಶ್ವರನಾದ ಚಂಡಪ್ರದ್ಯೋತನಲ್ಲಿಗೆ ಹೋಗಿ ಅದನ್ನು ತೋರಿಸಿ ಅವನಿಗೆ ಅವಳಲ್ಲಿ ಮನಸ್ಸನ್ನುಂಟುಮಾಡಿದಳು. ಅವನು ನಿನ್ನ ಪಟ್ಟಣದವನನ್ನು ಮುತ್ತಿ ತನ್ನ ಹೆಗ್ಗಡೆಯೊಡನೆ ಪ್ರಭಾವತೀದೇವಿಗೆ ಹೇಳಿ ಕಳುಹಿಸಿದನು. ಆಕೆಯು ಅವನ ವಶವಾಗಲು ಒಪ್ಪದಿದ್ದ ಕಾರಣ ಅವನು ಯುದ್ಧಕ್ಕೆ ಸಿದ್ಧನಾದನು. ಈ ಸಮಯದಲ್ಲಿ ನಾನು ವಿಮಾನದಲ್ಲಿ ನಂದೀಶ್ವರದ್ವೀಪಕ್ಕೆ ಹೋಗುತ್ತ ಇದನ್ನು ತಿಳಿದು ಚಂಡಪ್ರದ್ಯೋತನ ಸೈನ್ಯವನ್ನೆಲ್ಲಾ ಉಜ್ಜಯಿನಿಗೆ ತೆಗೆದುಕೊಂಡುಹೋಗಿ ಬಿಟ್ಟು, ನಿನ್ನ ಪಟ್ಟಣದವರನ್ನೆಲ್ಲಾ ನಿದ್ರೆಗೊಳಿಸಿ ಚಂಡಪ್ರದ್ಯೋತನ ವೇಷದಿಂದ ಆಕೆಯನ್ನು ಮಹಾ ಭಯಪಡಿಸಿದೆನು. ಆದರೂ ಆಕೆಯು ಹೆದರಲಿಲ್ಲ. ಅನಂತರ ನನ್ನ ನಿಜವಾದ ರೂಪನ್ನು ತೋರಿಸಿ ಪುಷ್ಪವೃಷ್ಟಿಯನ್ನು ಸುರಿಸಿ ಶೀಲವತಿಯೆಂಬ ಹೆಸರನ್ನು ಕೊಟ್ಟು ದೇವಲೋಕಕ್ಕೆ ಹೊರಟು ಹೋದೆನು.''

ಇಷ್ಟನ್ನು ಹೇಳಿದವೇಲೆ ಆತನು ರತ್ನಖಚಿತವಾದ ಬಂದು ಸಿಂಹಾಸನವನ್ನು ಮಾಡಿ ಅದರಲ್ಲಿ ರಾಜರಾಣಿಯರನ್ನು ಕೂರಿಸಿ, ದೇವದುಂದುಭಿಯು ಮೊಳಗುತ್ತಲೂ ಪುಷ್ಪವೃಷ್ಟಿಯು ಕರೆಯುತ್ತಲೂ ಇರಲು, ಅವರಿಗೆ ಅಭಿಷೇಕಮಾಡಿ ಹೊಗಳಿ ದೇವಲೋಕಕ್ಕೆ ತೆರಳಿದನು.

"ದೇವತೆಗಳಿಂದ ಪೂಜಿಸಲ್ಪಟ್ಟ ಮನುಷ್ಯರೂ ಉಂಟೇ ? ನಮ್ಮ ಮಹಾರಾಜನ ಸಮಾನರಾರು ?" ಎಂದು ಲೋಕವೆಲ್ಲ ಹೊಗಳುತ್ತಿದ್ದರು. ಹೀಗೆ ಹಲವುಕಾಲ ರಾಜ್ಯವಾಳಿದಮೇಲೆ ಅವನೂ ಅವನ ಹೆಂಡತಿಯೂ ವೈರಾಗ್ಯವನ್ನು ತಳೆದು ದೀಕ್ಷೆಯನ್ನು ಕೈಕೊಂಡು ಸದ್ಗತಿಯನ್ನು ಪಡೆದರು.

ಪಂಚಮಾಶ್ವಾಸ.

ಅಮೂಢದೃಷ್ಟಿಯ ಕಥೆ.

ಶೂರಸೇನ ವಿಷಯದಲ್ಲಿ ಉತ್ತರಮಥುರೆಯೆಂಬ ಪಟ್ಟಣವಿದೆ. ಅದರಲ್ಲಿ ರೇವತಿಯೆಂಬ ಪಟ್ಟದರಸಿಯೊಡನೆ ಸುಗುಣನೆಂಬ ಮಹಾವೈಭವಳಿಕನು ಆಳುತ್ತಿದ್ದನು.

ಅತ್ತ ಮೇಘಕೂಟ ಪುರದಲ್ಲಿ ಚಂದ್ರಾಭನೆಂಬ ಖೇಚರರಾಜನಿದ್ದನು. ಅವನಿಗೆ ಸುಮತಿ ಮಹಾದೇವಿಯೆಂಬ ಹೆಂಡತಿಯೂ ಚಂದ್ರಶೇಖರನೆಂಬ ಮಗನೂ ಇದ್ದರು. ಒಂದುದಿನ ರಾಜನು ನಾನಾ ಆಕಾರಗಳುಳ್ಳ ಮೇಘಗಳನ್ನೂ ಅವು ಕ್ಷಣಮಾತ್ರದಲ್ಲಿ ಕರಗಿಹೋಗುವುದನ್ನೂ ನೋಡಿ ವೈರಾಗ್ಯವನ್ನು ಪಡೆದನು. ಆದುದರಿಂದ ತನ್ನ ರಾಜ್ಯವನ್ನು ಮಗನಿಗೆ ಕೊಟ್ಟು ಅವನಿಗೆ ಬುದ್ಧಿವಾದವನ್ನು ಹೇಳಿ ತನ್ನ ದೇಶವನ್ನು ಬಿಟ್ಟು ಹೊರಟು ಸಂಡ್ಯದೇಶದ ದಕ್ಷಿಣಮಥುರೆಗೆ ಬಂದನು. ಅಲ್ಲಿ ಜಿನಾಲಯಗಳನ್ನು ನೋಡುತ್ತ ಹೋಗುತ್ತಿರಲು, ಆ ಪುರದ ರಾಜನಾದ ಚಿತ್ರವಾಹನ ಮಹಾರಾಜನು ತಮ್ಮ "ಅನ್ವಯದ ಬಸದಿ"ಗೆ ಬಂದು ಚತುರ್ಮುಖ ಶಾಂತಿನಾಥನನ್ನು ಪೂಜಿಸಿ ಸ್ತುತಿಸಿ ಹೋದನು. ಚಂದ್ರಾಭಮಹಾರಾಜನು ಇವನನ್ನು ಕಂಡು ಚಿತ್ರವಾಹನನನ್ನು ಹೊಗಳಿ ತಾನೂ ಜಿನಭವನವನ್ನು ಹೊಕ್ಕು ಅಲ್ಲಿದ್ದ ಮುನಿಗುಪ್ತ ಭಟ್ಟಾರಕರನ್ನು ನಮಸ್ಕರಿಸಿ ತಾನು ತಪಸ್ಸಿಗಾಗಿ ಬಂದಿರುವುದನ್ನು ಅವರಿಗೆ ತಿಳಿಸಿದನು. ಅವರು ತಪಸ್ಸಿನ ಕಷ್ಟಸುಖಗಳನ್ನೂ ಋಷಿಗಳ ಗುಣವನ್ನೂ ತಿಳಿಸಿ 'ತಪಮೆಂಬುದು ಸಾಮಾನ್ಯಮಲ್ಲದು; ನೀನುಂ ನಿನ್ನ ಮುನ್ನಿನ ವಿದ್ಯಾಧರರಾಜ್ಯಮುಂ ಕೈಕೊಂಡು ಸುಖದಿಸಿರೆಂ' ದು ಹೇಳಿದರು. ಆದರ ಅವನು ಒಪ್ಪಲಿಲ್ಲ. ಆದುದರಿಂದ ಭಟ್ಟಾರಕರು "ಅವನ ವೈರಾಗ್ಯಕ್ಕೆ ಮೆಚ್ಚಿ ಮನಃಪೂರ್ವಕವಾಗಿ ನಿನ್ನ ಪರಿಗ್ರಹಗಳನ್ನೆಲ್ಲಾ ತೊರೆದುಬಿಡು" ಎಂದು ಅಪ್ಪಣೆ ಮಾಡಿದರು. ರಾಜನು ಎಲ್ಲವನ್ನೂ ತೊರೆದು ಜಿನಾಲಯಗಳನ್ನು ನೋಡುವುದಕ್ಕೆ ಹೋಗಲು ಸಹಕಾರಿಗಳಾದ ಕೆಲವು ವಿದ್ಯೆಗಳನ್ನು ಮಾತ್ರ ಇಟ್ಟುಕೊಂಡನು. ಅವನ್ನು ನೋಡಿ ಮುನಿಗಳು ನಕ್ಕು ನಿನಗೆ "ಮಹಾವ್ರತಗಳು ಬೇಡ, ಅಣುವ್ರತಧಾರಿಯಾಗಿರು" ಎಂದು ಹೇಳಿ ಅವುಗಳ ಸ್ವರೂಪವನ್ನೂ ಹನ್ನೊಂದುಬಗೆಯ ಶ್ರಾವಕರ ಲಕ್ಷಣಗಳನ್ನೂ ತಿಳಿಸಿದರು. ಮಹಾರಾಜನು ಅವುಗಳಲ್ಲಿ ಹನ್ನೊಂದನೆಯ ಶ್ರಾವಕತ್ವವನ್ನು ಅಪೇಕ್ಷಿಸಲು ಅದನ್ನೇ ಅವನಿಗೆ ಕೊಟ್ಟರು. ಒಂದುದಿನ ಅವನಿಗೆ ಕೂಡಸೇನ ವಿಷಯದ ಉತ್ತರ ಮಥುರೆಯ ಜಿನಾಲಯಂಗಳನ್ನು ವಂದಿಸಬೇಕೆಂಬ ಆಶೆ

ಹುಟ್ಟಲು ಅದನ್ನು ತನ್ನ ಗುರುಗಳಿಗೆ ತಿಳಿಸಿ ಅವರ ಅಪ್ಪಣೆಯನ್ನು ಬೇಡಿದನು. ಅವರು ಅದಕ್ಕೆ ಅನುಮತಿಯನ್ನಿತ್ತು, ವರುಣಮಹಾರಾಜನ ಅರಸಿಯಾದ ರೇವತೀ ಮಹಾದೇವಿಗೆ ಆಶೀರ್ವಾದವನ್ನೂ ಉಂಡುರುಳಿ ಭಟ್ಟಾರಕರಿಗೆ ವಂದನೆಯನ್ನೂ ಹೇಳಿಕಳುಹಿಸಿದರು. ಆಪ್ತರಾದ ಶ್ರಾವಕರನ್ನೂ ಭವಸೇನಾಚಾರ್ಯರೂ ಮುಂತಾದ ಇತರ ಮುನಿಗಳನ್ನೂ ಬಿಟ್ಟು, ಉಂಡುರುಳಿಭಟ್ಟಾರಕರಿಗೂ ರೇವತೀ ದೇವಿಗೂ ಗೌರವಕೊಟ್ಟು ದಕ್ಕಾಗಿ ಅವರು ಆಶ್ಚರ್ಯಪಡುತ್ತ ಉತ್ತರಮಧುರೆಗೆ ಒಂದು ಅಲ್ಲಿ ಭವಸೇನಾಚಾರ್ಯರೂಪನೆಯೂ ಉಂಡುರುಳಿ ಭಟ್ಟಾರಕರಲ್ಲಿಯೂ ಮೊತನಾಡಿ ಪರೀಕ್ಷಿಸಿ ಭವಸೇನಾಚಾರ್ಯರಲ್ಲಿ ಸಮ್ಯಕ್ತ್ವವಿಲ್ಲವನ್ನೂ ಉಂಡುರುಳಿ ಭಟ್ಟಾರಕರಲ್ಲಿ ಇರುವುದನ್ನೂ ತಿಳಿದುಕೊಂಡನು. ಅನಂತರ ರೇವತೀ ಮಹಾದೇವಿಯು ಅಮೂಢದೃಷ್ಟಿತ್ವವನ್ನು ಪರೀಕ್ಷಿಸಬೇಕೆಂದು ಹೊರಟು ಪೂರ್ವದಿಕ್ಕಿನಲ್ಲಿ ಪ್ರಹ್ಮನ ವೇಷವನ್ನು ಹಾಕಿಕೊಂಡು ನಿಂತನು. ಪಟ್ಟಣದವರೆಲ್ಲಿ ಅನೇಕರು ಬಂದು ಅವನನ್ನು ಅರ್ಚಿಸಿದರು. ಅರಸನು ತಾವೂ ಪೂಜೆಗೆ ಹೋಗಬೇಕೆಂದು ರೇವತೀ ದೇವಿಗೆ ಹೇಳಿದನು. ಆದರೆ ಅವಳು ಬಗ್ಗಲಿಲ್ಲ. ಇದರಂತೆ ನಾರಾಯಣ ಈಶ್ವರರ ವೇಷಗಳನ್ನು ಕ್ರಮವಾಗಿ ಬಂದಾದಮೇಲೆ ಬಂದರಂತೆ ಹಾಕಿಕೊಂಡನು. ಆಗಲೂ ರೇವತೀಮಹಾದೇವಿ ಸೂತ್ರ ಇದೆಲ್ಲ ಸುಳ್ಳೆಂದು ನಿರ್ಧರಿಸಿ ಪೂಜೆಗೆ ಹೋಗಲು ಇಷ್ಟಪಡಲಿಲ್ಲ. ಕೊನೆಗೆ ಚಂದ್ರಾಭನು ರೇವತಿಯ ಕುಲಸ್ವಾಮಿಯಾದ ವರ್ಧಮಾನನ ವೇಷವನ್ನು ಹಾಕಿಕೊಂಡನು. ಇದೂ ಅನುಪಪನ್ನವೆಂದು ಹೇಳಿ ರೇವತಿಯು ಮೂಢತ್ರಯಗಳನ್ನು ಅರಸನಿಗೆ ತಿಳಿಸಿದಳು. ಇತ್ತ ಚಂದ್ರಾಭನು ಈಗಲೂ ರೇವತಿಯು ಬರದೇ ಇದ್ದುದನ್ನು ನೋಡಿ ತನ್ನ ಮಾಯೆಯನ್ನು ಉಪಸಂಹರಿಸಿ, ನಿಜರೂಪನ್ನು ಧರಿಸಿ ರೇವತೀ ಮಹಾದೇವಿಯನ್ನು ಕಾಣಿಸಿಕೊಂಡು ಅದುವರೆಗೂ ನಡೆದ ಸಂಗತಿಯನ್ನೆಲ್ಲಾ ಅವಳಿಗೆ ತಿಳಿಸಿ ಮುನಿಗುಪ್ತಭಟ್ಟಾರಕರ ಆಶೀರ್ವಾದವನ್ನು ಹೇಳಿ ದಕ್ಷಿಣಮಧುರೆಗೆ ಹೊರಟು ಹೋದನು.

ಪುರಜನರೆಲ್ಲರೂ ರೇವತೀದೇವಿಯನ್ನು ಹೊಗಳಿದರು. ವರುಣ

ಮಹಾರಾಜನು ಮೂಢತ್ರಯವನ್ನು ಬಿಟ್ಟು ತನ್ನ ಮಗನಾದ ಶಿವ ಕೀರ್ತಿಗೆ ರಾಜ್ಯದಲ್ಲಿ ಪಟ್ಟವನ್ನು ಕಟ್ಟಿ, ತಾನು ದೀಕ್ಷೆಯನ್ನು ಕೈಕೊಂಡನು. ರೇವತೀ ದೇವಿಯೂ ಸುವ್ರತಗಂತಿಯರಲ್ಲಿ ದೀಕ್ಷೆಯನ್ನು ಪಡೆದು ಉತ್ತರಮಧುರೆಯಿಂದ ದಕ್ಷಿಣಮಧುರೆಯ ಕಡೆಗೆ ಯಾತ್ರಾರ್ಥವಾಗಿ ಹೊರಟು ದಾರಿಯಲ್ಲಿ ಮುಡಿಪಿ ಅಚ್ಯುತ ಕಲ್ಪದಲ್ಲಿ ಮಹರ್ಧಿಕ ದೇವನಾಗಿ ಹುಟ್ಟಿದಳು. ಆಕೆಯು ಮುಡಿಪಿದ ಸ್ಥಳವು ರೇವತೀ ತೀರ್ಥವೆಂದು ಪ್ರಸಿದ್ಧವಾಯಿತು.

ಷಷ್ಠಾಶ್ವಾಸ.

ಉಪಗೂಹನದ ಕಥೆ

ಗೊಲ್ಲ ವಿಷಯವಲ್ಲಿ ಕಾಪಿಲಿಪ್ತಿಯೆಂಬ ಊರು ಇದೆ. ಅವರಲ್ಲಿ ಮನೋಹರನೆಂಬ ರಾಜನೂ ಜಿನಭಕ್ತನೆಂಬ ರಾಜಶ್ರೇಷ್ಠಿಯೂ ಇದ್ದರು.

ಆತ್ತ ಮಗಧ ವಿಷಯದ ಪಾಟಲೀ ಪುತ್ರವೆಂಬ ಊರಿನಲ್ಲಿ ವೀರಧ್ವಜನೆಂಬ ಅರಸನಿದ್ದನು. ಅವನಿಗೆ ಸುಸೀಮೆಯೆಂಬ ಹೆಂಡತಿಯೂ ವೀರಕುಮಾರನೆಂಬ ಮಗನೂ ಇದ್ದರು. ಈ ವೀರಕುಮಾರನು ದುಷ್ಟರೊಡನೆ ಸೇರಿ ಬಂದುದಿನ ಊರ ಹೊರಗೆ ಕಳ್ಳತನದ ಮಾತನ್ನು ಕೇಳುತ್ತಿದ್ದನು. ಆಗ ಕಳ್ಳನೊಬ್ಬನು "ದೇವಾ! ನಾನು ಹೋಗದ ದೇಶವಿಲ್ಲ, ಕದಿಯದ ವಸ್ತುವಿಲ್ಲ, ಆದರೆ ಕಾಮಲಿಪ್ತಿಪುರದ ಜಿನೇಂದ್ರ ಭಕ್ತನ ದೇವಾರದಲ್ಲಿ ಬಂದು ಮುಕ್ಕೊಡೆಯೂ ಅದರಲ್ಲಿ ಬಂದು ರತ್ನವೂ ಇವೆ. ಆ ರತ್ನಕ್ಕೆ ಮೂರುಲೋಕವನ್ನೂ ಬೆಲೆಯಾಗಿ ಕೊಟ್ಟರೂ ಸಾಲದು" ಎಂದನು. ಇದನ್ನು ಕೇಳಿ ತನಗೆ ಅದರಮೇಲೆ ಆಸೆಯಾಗಲು ರಾಜಕುಮಾರನು "ಈ ರತ್ನವನ್ನು ತಂದುಕೊಟ್ಟವರಿಗೆ ನನ್ನ ರಾಜ್ಯವಲ್ಲಿ ಅರ್ಧವನ್ನು ಕೊಡುತ್ತೇನೆ, ಯಾರು ತಂದುಕೊಡುವಿರಿ?" ಎಂದು ಕೇಳಿದನು. ಅದಕ್ಕೆ ಸೂರ್ಯನೆಂಬ ಕಳ್ಳನು ಒಪ್ಪಿ ಮುಂದೆ ಬಂದು ವೀಳಯವನ್ನು ತೆಗೆದುಕೊಂಡನು.

ಅನಂತರ ಸೂರ್ಪನು ಪೂರ್ವದಿಕ್ಕಿಗೆ ಹೋಗಿ ಅಲ್ಲಿದ್ದ ಋಷಿಗಳೊಡನೆ ಕೆಲವುಕಾಲ ವಾಸವಾಗಿದ್ದು ಅವರ ನಡೆನುಡಿಗಳನ್ನೆಲ್ಲ ಚೆನ್ನಾಗಿ ಅಭ್ಯಾಸಮಾಡಿಕೊಂಡು ತಪಸ್ವಿಯ ವೇಷದಿಂದ ಕಾಮಲಿಪ್ತಿನಗರದ ಹತ್ತಿರ ಬಂದು ಊರಿನಲ್ಲಿ ಬಂದು ನಿಂತನು. ಅಲ್ಲಿ ಇವನ ಪ್ರಸಿದ್ಧಿ ಬಹಳವಾಗಿ ಜಿನೇಂದ್ರಭಕ್ತಸೆಟ್ಟಿ ಮುಂತಾದವರಿಗೆಲ್ಲಾ 'ಯಾರೋ ಮಹಾಪುರುಷರು ಬಂದಿದಾರೆಯಂತೆ' ಎಂಬ ವರ್ತಮಾನವು ತಿಳಿಯಿತು. ಜಿನೇಂದ್ರಭಕ್ತ ಸೆಟ್ಟಿಯು ಬಂದು ನೋಡಿ ಸೂರ್ಪನ ವೈರಾಗ್ಯವನ್ನು ನಿಜವೆಂದು ತಿಳಿದು ಅವನನ್ನು ಕರೆದುಕೊಂಡು ಹೋಗಿ ತನ್ನ ದೇಹಾರದಲ್ಲಿ ಇರಿಸಿದನು. ಸೂರ್ಪನು ನಂಬಿಸುವುದಕ್ಕೋಸ್ಕರ ಉಪವಾಸದ ಮೇಲೆ ಉಪವಾಸವನ್ನೂ ಮೌನವ್ರತವನ್ನೂ ಮಾಡುತ್ತಿದ್ದನು. ಹೀಗಿರಲು ಬಂದಿನ ಜಿನೇಂದ್ರಭಕ್ತಸೆಟ್ಟಿಯು ಪರದೇಶಕ್ಕೆ ವ್ಯಾಪಾರಕ್ಕೆಂದು ಹೊರಟನು. ಈ ಸಮಯವನ್ನು ನೋಡಿಕೊಂಡು ನಡುರಾತ್ರಿಯಲ್ಲಿ, ಕಾವಲಿನವರು ನಿದ್ರಿಸುತ್ತಿದ್ದಾಗ, ಸೂರ್ಪನು ಮುಕ್ಕೊಡೆಯುಲ್ಲಿದ್ದ ರತ್ನವನ್ನು ಕಳಚಿಕೊಂಡು ಹೊರಕ್ಕೆ ಹೊರಟನು. ಆದರೆ ಆ ರತ್ನವು ಬಾಲಾರ್ಕನಂತೆ ಪ್ರಜ್ವಲಿಸುತ್ತಿದ್ದಿತು. ಇದನ್ನು ಕಂಡು ತಳವಾರರು ಗದ್ದಲಮಾಡಿದರು, ಅದನ್ನು ಕೇಳಿ ದೇಹಾರದ ಕಾವಲಿನವರು ಎಚ್ಚೆತ್ತು ರತ್ನವು ಕಳವಾದುದನ್ನು ತಿಳಿದು ಅಟ್ಟಿಸಿಕೊಂಡು ಬಂದರು. ಅವರ ಏಟುಗಳನ್ನು ತಡೆಯಲಾರದೆ ಸೂಪನು ಊರ ಹೊರಗೆ ಬೀಡುಬಿಟ್ಟಿದ್ದ ಜಿನೇಂದ್ರ ಭಕ್ತಸೆಟ್ಟಿಯ ಬಿಡಾರದಲ್ಲಿ ಹೋಗಿ ಸೇರಿಕೊಂಡನು. ಸೆಟ್ಟಿಯು ಇವನನ್ನು ಕಂಡು 'ಇವನು ಹೋದ ದಾರಿಗೆ ಹೋಗಲಿ ನಾನು ನನ್ನ ಧನವನ್ನು ಸಡೆಸುತ್ತೇನೆ' ಎಂದು ಅವನನ್ನು ಪೀಠದವೇಲೆ ಕುಳ್ಳಿರಿಸಿ ಕಾಲನ್ನು ಒತ್ತುತ್ತಿದ್ದನು. ಇಷ್ಟರ ಹೊತ್ತಿಗೆ ತಳವಾರರೂ ಕಾವಲಿನವರೂ ಬಂದು ನಡೆದ ಸಂಗತಿಯನ್ನು ತಿಳಿಸಿದರು. ಸೆಟ್ಟಿಯು ತಳವಾರನಾಯಕನನ್ನು ಕುರಿತು "ಇದೇನು ಗದ್ದಲ! ನನ್ನ ಬಡವನನ್ನು ನನ್ನ ಪತ್ತಿರಕ್ಕೆ ತಂದು ಕೊಡುವವನು ಕಳ್ಳ ಹೇಗಾದಾನು? ಹಾಗೆ ಈತನು ಅವನ್ನು ಕದ್ದುಕೊಂಡು ಬಂದಿದ್ದರೆ ವಿಕ್ಕಸ್ಥಳವನ್ನು ಬಿಟ್ಟು ಇಲ್ಲಿಗೆ ಬರುತ್ತಿದ್ದನೇ?" ಎಂದು ಹೇಳಿ ಗದ

ರಿಸಿ ಕಳುಹಿಸಿದನು. ಅವನು ಹೊರಟು ಹೋಗಲು ಸೆಟ್ಟಿಯು ಸೂರ್ಯನನ್ನು ಗೋಪ್ಯವಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವನಿಗೆ ಧರ್ಮಾಧರ್ಮ ಸ್ವರೂಪಗಳನ್ನೂ ಅವುಗಳ ಫಲಗಳನ್ನೂ ವಿವರಿಸಿದನು. ಇದರಿಂದ ಅವನಿಗೆ ಜ್ಞಾನೋದಯವಾಗಲು ಜಿನೇಂದ್ರ ಭಕ್ತ ಸೆಟ್ಟಿಗೆ ನಮಸ್ಕರಿಸಿ ತನ್ನ ಹಿಂದಿನ ವೃತ್ತಾಂತವೆಲ್ಲಾ ಹೇಳಿ, ವೈರಾಗ್ಯವನ್ನು ಪಡೆದು ದೀಕ್ಷೆಯನ್ನು ಕೈಕೊಂಡನು ಕೊನೆಗೆ ಸಮಾಧಿಮರಣದಿಂದ ಮುಡಿಪಿ ದೇವಗತಿಯನ್ನು ಪಡೆದನು.

ಸಪ್ತಮಾಶ್ವಾಸ.

ಸ್ತುತಿಕರಣದ ಕಥೆ.

ಶ್ರೇಣಿಕ ಮಹಾರಾಜನಿಗೂ ಚೇಳಿನೀದೇವಿಗೂ ವಾರಿಷೇಣನೆಂಬ ಕುಮಾರನು ಹುಟ್ಟಿದನು. ಅವನು ಹುಟ್ಟಿದಂದಿನಿಂದ ಜಿನಮುನಿಗಳೊಡನೆಯೇ ಬೆಳೆಯುತ್ತ ವಿವೇಕಿಯಾಗಿದ್ದನು. ಒಂದು ದಿನ ಮುಂಡಿಯು ಪುತ್ರಾಚಾರ್ಯರೆಂಬ ಮುನಿಗಳು ಆ ಊರಿನ ಹತ್ತಿರಕ್ಕೆ ಬರಲು ಮಹಾರಾಜನು ಸಕುಟುಂಬ ಪರಿವಾರನಾಗಿ ಅವರನ್ನು ಎದುರುಗೊಂಡು ಸತ್ಕರಿಸಿದನು. ಅನಂತರ ಎಲ್ಲರೂ ಊರಿಗೆ ಹಿಂತಿರುಗಿ ಹೊರಟು ಹೋದರು. ಆದರೆ ರಾಜಪುತ್ರನಾದ ವಾರಿಷೇಣನು ಮಾತ್ರ ಹೊನ್ನನ್ನು ಕಂಡ ಲೋಭಿಯಂತೆ ಮುನಿಗಳನ್ನು ಬಿಟ್ಟು ಹೋಗಲಾರದೆ ಅವರನ್ನು ಉಪಚರಿಸುತ್ತ ಅವರಿಂದ ಧರ್ಮವನ್ನು ಕೇಳಲಪೇಕ್ಷಿಸಿದನು ಅವರು "ಕಿಱಿದಱಿಂ ಧರ್ಮಮಂ ತಿಳಿಪುವುದುಂ" ಆದನ್ನು ಕೇಳಿ ಸಂತೋಷಪಟ್ಟು ವಾರಿಷೇಣನು ಅಂದಿನ ರಾತ್ರಿ ಶ್ಮಶಾನಕ್ಕೆ ಹೋಗಿ ಅಲ್ಲಿ "ರಾತ್ರಿ ಪ್ರತಿಮೆ" ನಿಂತನು.

ಈ ಮಧ್ಯೆ ಮೃಗವೇಗನೆಂಬ ಒಬ್ಬ ಕಳ್ಳನು ರಾಜಶ್ರೇಷ್ಠಿಯ ಹೆಂಡತಿಯಾದ ಕೀರ್ತಿಮತಿಯ ಹಾರವನ್ನು ಕದ್ದುಕೊಂಡು ಹೋಗುತ್ತಿದ್ದನು. ಅವನನ್ನು ತಳವಾರರು ಕಂಡು ಅಟ್ಟಿಸಿಕೊಂಡು ಬರಲು ಅವನು ಹೆದರಿ ಆ ಹಾರವನ್ನು ವಾರಿಷೇಣನ ಹತ್ತಿರ ಪಾಕಿ ಓಡಿಹೋ

ದನು. ತಳವಾರರು ಅಲ್ಲಿಗೆ ಬಂದು ವಾರಿಷೇಣನೇ ಕಳ್ಳನೆಂದು ಭಾವಿಸಿ ಅವನನ್ನು ನಾನಾವಿಧವಾಗಿ ಮೊದಲಿಸಿ ಹಿಂಸಿಸಿ ಹೊಡೆಯುತ್ತಿದ್ದರು. ಅವನು ಮಾತ್ರ ಜಿನಧ್ಯಾನ ಮಾಡುತ್ತ ಸುಮ್ಮನಿದ್ದನು. ಆಗ ಅಲ್ಲಿದ್ದ ದೇವತೆಗಳಿಗೆ ಆಸನ ಕಂಪವಾಗಲು ಅವರು ಬಂದು ರಾಜಪುತ್ರನಿಗೆ ಬೀಳುತ್ತಿದ್ದ ಏಟುಗಳನ್ನೆಲ್ಲ ಆಭರಣಗಳನ್ನಾಗಿ ಮಾಡಿದರು. ಇದನ್ನು ಕಂಡು ಆಶ್ಚರ್ಯವಾಗಲು ತಳವಾರರು ಈ ವೃತ್ತಾಂತವನ್ನು ರಾಜನಿಗೆ ತಿಳಿಸಿದರು. ಅದನ್ನು ಕೇಳಿ ರಾಜನು ಸಕಲಜನ ಪರಿವೃತನಾಗಿ ಬಂದನು. ಇಷ್ಟು ಹೊತ್ತಿಗೆ ಸೂರ್ಯೋದಯವಾಗಲು ವಾರಿಷೇಣನ ಪ್ರತಿಜ್ಞೆಯೂ ತೀರಿ ಅವನು ಎತ್ತಿದ್ದ ಕೈಗಳನ್ನು ಕಳಕ್ಕ ಇಳಿಸಿದನು. ರಾಜನು ಅವನನ್ನು ಕಂಡು ಕ್ಷಮೆಯನ್ನು ಬೇಡಿಕೊಂಡನು ಆದರೆ ರಾಜಪುತ್ರನು ಇದೆಲ್ಲವೂ ಕರ್ಮದ ಫಲವೆಂದು ಹೇಳಿ ರಾಜನನ್ನು ಸಮಾಧಾನಮಾಡಿದನು. ಎಲ್ಲರೂ ಅರಮನೆಗೆ ಬಂದರು. ಇದಾದ ಕೆಲವುದಿನದಮೇಲೆ ವಾರಿಷೇಣನು ತಾಯಿತಂದೆಗಳನ್ನು ಬಿಡಂಬಡಿಸಿ ಪುಷ್ಪಗಿರಿಪರ್ವತಕ್ಕೆ ಹೋಗಿ ಅಲ್ಲಿ ಸುರದೇವರೆಂಬವರಿಂದ ಜಿನದೀಕ್ಷೆಯನ್ನು ಕೈಕೊಂಡು ತಪಸ್ಸು ಮಾಡುತ್ತಿದ್ದನು

ಹೀಗಿರಲು ಬಂದು ವಿವಸ ವಾರಿಷೇಣನು ತನ್ನ ಬಾಲಸಖನಾದ ಪುಷ್ಪದಾಡನೆಂಬವನು ಸುದಂತಿಯೆಂಬ ಹುಡುಗಿಯನ್ನು ಮದುವೆಯಾದನೆಂದು ಕೇಳಿ ಅವನಮನೆಗೆ ಹೋಗಿ ಅವನನ್ನು ಕರೆದುಕೊಂಡು ಬಂದು ಅವನಿಗೆ ತಮ್ಮ ಗುರುಗಳಲ್ಲಿ ಬಲ್ಲಂತವಾಗಿ ದೀಕ್ಷೆಯನ್ನು ಕೊಡಿಸಿದನು. ಆದರೆ ಪುಷ್ಪದಾಡನು ಮಾತ್ರ "ಆಡವಿಯನ್ನು ಬಿಟ್ಟು ಬಂದ ಆನೆಯಂತೆ" ಕೊರಗುತ್ತಿದ್ದನು. ಇದನ್ನು ಕಂಡು ವಾರಿಷೇಣನು "ಶರೀರದೊಳಾದ ಪೊಲ್ಲವಾಯುಮಂ ಸಂಸಾರದೊಳಾದ ದುಃಖಮುಮಂ ಭೋಗಂಗಳ ಕೇಡುಮಂ ಬಾಳ್ಕೆಯನಿತ್ಯತೆಯುಮಂ ವಸಿತೆಯರ ಕಪಟತೆಯುಮಂ ಸ್ಥಿತಿಕರಣಂ ಮಹಾಪುಣ್ಯಮೆಂಬುದುಮಂ ಬಗೆದು ಪನ್ನೆರಡುವರ್ಷಬರಂ ಮಾಣದೆ" ಉಪದೇಶಮಾಡಿದನು. ಪುಷ್ಪದಾಡನಿಗೆ ಮಾತ್ರ ಅದು ಮನಸ್ಸಿಗೆ ಅಂಟದೆ ಸಂಸಾರದಮೇಲೆಯೇ ಮನಸ್ಸು ಹೋಗುತ್ತಿದ್ದಿತು. ಹೀಗಿರಲು ಬಂದುದಿನ ವಾರಿಷೇಣನು ಏರ್ಧಮಾನ

ಸ್ವಾಮಿಗಳ ಹತ್ತಿರಕ್ಕೆ ಹೋಗಿದ್ದಾಗ ಪುಷ್ಪದಾಡನು ಮನಗೆ ಹಿಂತಿರುಗಿದನು. ಆದರೆ ವಾರಿಷೇಣನು ಅವನನ್ನು ಪುನಃ ಹಿಡಿದುಕೊಂಡು ಬಂದು ತನ್ನ ತಾಯಿತಂದೆಗಳಿದ್ದ ಅರಮನೆಗೆ ಹೋದನು. ಅಲ್ಲಿ ಅವನ ಇಷ್ಟದಂತೆ ಅವನ ಪತ್ನಿಯರಾಗಿದ್ದ ಐನೂರು ಜನ ಸ್ತ್ರೀಯರೂ ಪುಷ್ಪದಾಡನ ಹೆಂಡತಿಯಾದ ಸುದಂತಿಯೂ ಕರೆಸಲ್ಪಟ್ಟರು. ಆಗ ವಾರಿಷೇಣನು ಪರಮಸುಂದರಿಯರಾದ ತನ್ನ ಹೆಂಡತಿಯರನ್ನು ತೋರಿಸಿ "ನಾನು ಇಂತಹವರನ್ನೇ ಬಿಟ್ಟು ತಪಶ್ಚರ್ಯೆಗಾಗಿ ಹೊರಟು ಹೋಗಿದ್ದೇನೆ. ನೀನು ಮಾತ್ರ ಹನ್ನೆರಡುವರ್ಷ ಧರ್ಮೋಪದೇಶವನ್ನು ಕೇಳಿದರೂ ಕುರೂಪಿಯಾದ ಈ ಸುದಂತಿಯಲ್ಲಿಯೇ ಅನುರಾಗವನ್ನಿಟ್ಟುಕೊಂಡಿದ್ದೀಯೆ" ಎಂದು ಹೇಳಿ ಸುದಂತಿಯನ್ನು ಕುರಿತು, "ಅಮ್ಮಾ, ಜಿನೇಶ್ವರರೂಪವನ್ನು ಧರಿಸಿ ಪುನಃ ತನ್ನ ಸ್ತ್ರೀಯನ್ನು ನೆನಸಿಕೊಳ್ಳುವನೂ ಒಬ್ಬ ಮನುಷ್ಯನೇ?" ಎಂದು ಕೇಳಿದನು ಅದಕ್ಕೆ ಆಕೆಯು "ಅಂತಹವನು ನಾಯಿಗಿಂತಲೂ ಕಡೆ; ಏಕೆಂದರೆ ನಾಯಿಯು ತಾನು ಮಾಡಿದ ಉಪಕಾರವನ್ನು ಮುಟ್ಟುವುದಿಲ್ಲ" ಎಂದಳು ಇದನ್ನು ಕೇಳಿ ಪುಷ್ಪದಾಡನಿಗೆ ನಾಚಿಕೆಯಾಯಿತು; ಸಾಲದುದಕ್ಕೆ ಅಂತಹ ಸುಂದರಿಯರಾದ ಸ್ತ್ರೀಯರನ್ನೂ ವಾರಿಷೇಣನು ತ್ಯಜಿಸಿ ಹೊರಟು ಹೋದುದರಿಂದ ತಪಸ್ಸಿನ ಮಹತ್ವವನ್ನು ಊಹಿಸಿ ತಾನು ಅವನಿಂದ ಕೇಳಿದ ಧರ್ಮೋಪದೇಶವನ್ನೆಲ್ಲಾ ನಂಬಿದನು. ಅನಂತರ ಅವನಿಗೆ ಪುನಃ ದೀಕ್ಷೆಯು ಕೊಡಲ್ಪಟ್ಟಿತು; ಮರಣಾನಂತರ ದೇವಗತಿಯು ಪ್ರಾಪ್ತವಾಯಿತು ವಾರಿಷೇಣನೂ "ಮನುಷ್ಯರ ಪರಿಣಾಮ"ವನ್ನು ಭಾವಿಸಿ ಹನ್ನೆರಡು ತಪಸ್ಸನ್ನೂ ಆಚರಿಸಿ ಕೊನೆಗೆ "ಸಂನ್ಯಸನ ಸಮಾಧಿ"ಯಿಂದ ಮುಡಿಪಿ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದನು.

ಅಷ್ಟಮಾಶ್ವಾಸ.

ವಾತ್ಸಲ್ಯದ ಕಥೆ

ಪಾಂಚಾಲವಿಷಯದಲ್ಲಿ ಅಹಿಚ್ಛತ್ರವೆಂಬ ಪಟ್ಟಣವಿದೆ. ಅದನ್ನು ಸಂತಪನೆಂಬ ಅರಸನು ಆಳುತ್ತಿದ್ದನು. ಅವನ ಪುರೋಹಿತನಾದ

ಸೋಮದತ್ತನ ಹೆಂಡತಿ ಯಜ್ಞದತ್ತೆಯು ಗರ್ಭಿಣಿಯಾಗಲು ಆಕೆಗೆ ಜಿನಸೇವೆ ಮಾಡಬೇಕೆಂಬ ಬಯಕೆಯುಂಟಾಯಿತು. ಆಕೆಯ ವಂಶದಲ್ಲಾಗಲಿ ಅವಳ ಗಂಡನ ವಂಶದಲ್ಲಾಗಲಿ ಹಿಂದೆ ಯಾರೂ ಜಿನಪೂಜೆಯನ್ನು ಮಾಡಿದವರಲ್ಲ. ಆದುದರಿಂದ ತನ್ನ ಬಯಕೆಯನ್ನು ಹೇಳಿಕೊಂಡರೆ ನಾಚಿಕೆ ಕೇಡಾಗಬಹುದೆಂದು ಅವನ್ನು ಹೇಳಿಕೊಳ್ಳದೆ ಆಕೆಯು ಮನಸ್ಸಿನಲ್ಲಿಯೇ ಕೊರಗುತ್ತ ಬಡವಾಗುತ್ತಿದ್ದಳು. ಆಕೆಯ ನಂಟರು ಇವಳು ಬಡವಾದುದನ್ನು ನೋಡಿ ತಾವು ಬಯಕೆಯನ್ನು ತಂದು ಕೊಡುವುದಾಗಿಯೂ ಏನುಬೇಕೋ ಅದನ್ನು ಕೇಳಬಹುದೆಂದೂ ಹೇಳಿದರು. ಆದರೆ ಯಜ್ಞದತ್ತೆ ಮಾತ್ರ ನಿಜಸ್ಥಿತಿಯನ್ನು ಹೇಳದೆ ತನಗೆ ಒಳ್ಳೆಯ ಮಾವಿನ ಹಣ್ಣಿನಮೇಲೆ ಬಯಕೆಯಾಗಿದೆಯೆಂದು ಹೇಳಿದಳು. ಆಗ ಮಾವಿನ ಹಣ್ಣಿನ ಕಾಲವಲ್ಲದುದರಿಂದ ಎಲ್ಲೆಲ್ಲಿ ಹುಡುಕಿದರೂ ಅದು ಸಿಕ್ಕಲಿಲ್ಲ. ಕೊನೆಗೆ ಸೋಮದತ್ತನೂ ಅವನ ಶಿಷ್ಯರೂ ಬಲವಾಹಿನಿಯೆಂಬ ನದಿಯ ಹತ್ತಿರ ಬಂದು ತೋಟದಲ್ಲಿ ಮಾವಿನ ಹಣ್ಣುಗಳು ಬಿಟ್ಟಿದ್ದುದನ್ನೂ ಅವರ ಕಳಗೆ ಸುಮತಿಭಟ್ಟಾರಕರೆಂಬ ಯತಿಗಳು ಇದ್ದುದನ್ನೂ ಕಂಡರು. ಈ ಅಕಾಲದಲ್ಲಿ ಫಲವಾಗಿದ್ದದ್ದು ಅವರ ತಪಃಫಲದಿಂದಲೇ ಎಂದು ನಿಶ್ಚಯಿಸಿ ಅವರ ಮುಂದೆ ಬಂದುನಿಂತರು. ಆಗ ಯತಿಗಳು ಸಹಸ್ರಾರಕಲ್ಪದಲ್ಲಿ ಸೂರ್ಯಾಭವೆಂಬ ವಿಮಾನವನ್ನು ವರ್ಣಿಸುತ್ತಿದ್ದರು. ಇದನ್ನು ಕೇಳಿದಕೂಡಲೆ ಸೋಮದತ್ತನಿಗೆ ತಾನು ಹಿಂದಿನ ಜನ್ಮದಲ್ಲಿ ಆ ವಿಮಾನದಲ್ಲಿ ಸೂರ್ಯಾವರನೆಂಬ ದೇವನಾಗಿ ಹುಟ್ಟಿದ್ದುದು ಸ್ಮರಣೆಗೆ ಬಂದಿತು. ಕೂಡಲೆ ಸೋಮದತ್ತನು ಮೂರ್ಛಿಹೋಗಿ ಎಚ್ಚತ್ತು ಆ ಮುನಿಗಳಿಗೆ ವಂದಿಸಿ ತನ್ನ ಹೆಂಡತಿಯು ಎಲ್ಲ ವಸ್ತುಗಳನ್ನೂ ಬಿಟ್ಟು ಮಾವಿನ ಹಣ್ಣನ್ನು ಬಯಸಿದುದಕ್ಕೆ ಕಾರಣವನ್ನು ಕೇಳಿದನು. ಅವರು, ಆಕೆಯ ಗರ್ಭದಲ್ಲಿದ್ದ ಮಗುವು ಜಿನಭಕ್ತ ನಾಗಿದ್ದನೆಂದೂ ಅವನ ಬಯಕೆಯೇ ಆಕೆಯ ಬಯಕೆಯಾಗಿದ್ದಿತೆಂದೂ ಅದನ್ನು ತಿಳಿಸಲಾರದೆ ಮಾವಿನ ಹಣ್ಣು ಬೇಕೆಂದಳೆಂದೂ ಹೇಳಿದರು. ಅನಂತರ ಸೋಮದತ್ತನು ಮಾವಿನ ಹಣ್ಣುಗಳನ್ನು ತನ್ನ ಶಿಷ್ಯರೊಡನೆ ಹೆಂಡತಿಗೆ ಕಳುಹಿಸಿಕೊಟ್ಟು ತಾನು ವೈರಾಗ್ಯ-

ದಿಂದ ಜಿನದೀಕ್ಷೆಯನ್ನು ಪಡೆದು ನಾಭಿಗಿರಿಗೆ ತಪಸ್ಸಿಗಾಗಿ ಹೊರಟು ಹೋದನು

ಇತ್ತ ಯಜ್ಞದತ್ತೆಯರು ಬಂದು ಗಂಡುಮಗುವನ್ನು ಹೆತ್ತಳು. ಆ ಮಗುವಿಗೆ ಶ್ರೀದತ್ತನೆಂದು ಹೆಸರಿಟ್ಟರು. ಕೆಲವುಕಾಲದಮೇಲೆ ಸೋಮದತ್ತನು ನಾಭಿಗಿರಿಯಲ್ಲಿದ್ದ ವರ್ತಮಾನವು ತಿಳಿಯಲು ಯಜ್ಞದತ್ತೆಯೂ ಇತರ ಬಂಧುಗಳೂ ಹೇಗಾದರೂ ಅವನ ತಪಸ್ಸನ್ನು ಕೆಡಿಸಿ ಅವನನ್ನು ಕರೆದುಕೊಂಡು ಬರಬೇಕೆಂದು ನಾಭಿಗಿರಿಗೆ ಹೋದರು. ಆದರೆ ಸೋಮದತ್ತನು ಅಚಲನಾಗಿದ್ದನು ಇದನ್ನು ಕಂಡು ಅವನ ಬಂಧುಗಳೆಲ್ಲರೂ ಮಗುವನ್ನು ಅವನಮುಂದೆ ಹಾಕಿ ಹೊರಟುಹೋದರು

ಅತ್ತ ಅಮರಾವತಿಯಲ್ಲಿದ್ದ ಶಂಭುವೆಂಬ ವಿದ್ಯಾಧರರಾಜನು ತನ್ನ ಹಿರಿಯಮಗನಾದ ಭಾಸ್ಕರದೇವನಿಗೆ ಯೌವರಾಜ್ಯವನ್ನು ಕೊಟ್ಟು ತಾನು ತಪಸ್ಸಿಗೆ ಹೊರಟುಹೋದನು. ಭಾಸ್ಕರದೇವನ ತಮ್ಮನಾದ ಮಂದರದೇವನು ವಿದ್ಯಾಬಲದಿಂದ ಕನ್ಯೆಯನ್ನು ಗಮ್ಮಿ ಅವನನ್ನು ಓಡಿಸಿದನು. ಭಾಸ್ಕರದೇವನು ತಮ್ಮನೊಡನೆ ಹೋರಾಡಲಿಷ್ಟವಿಲ್ಲದೆ ತನ್ನ ಮೈದುನನಾದ ವಿಮಲಮಹಾರಾಜನ ಹತ್ತಿರ ಬಂದು ನಿಂತನು ಒಂದುದಿವಸ ಭಾಸ್ಕರದೇವನೂ ಅವನ ಹೆಂಡತಿ ಮಣಿಮಾಲೆಯೂ ವಿಮಾನದಲ್ಲಿ ಹೋಗುತ್ತ ಸೋಮದತ್ತ ಮುನಿಯನ್ನು ಕಂಡು ವಂದಿಸಿ ಅವನಮುಂದೆ ಮಲಗಿದ್ದ ಮಗುವನ್ನು ಕರೆತಂದು ಅದಕ್ಕೆ ವಜ್ರಕುಮಾರನೆಂಬ ಹೆಸರಿಟ್ಟು ಸಾಕುತ್ತಿದ್ದರು ವಜ್ರಕುಮಾರನು ಪ್ರಾಪ್ತವಯಸ್ಕನಾಗಲು ಅವನಿಗೂ ವಿಮಲಮಹಾರಾಜನ ಮಗಳಾದ ಇಂದುಮತಿಗೂ ಮದುವೆಯಾಯಿತು. ಒಂದುದಿನ ಅವರಿಬ್ಬರೂ ವಿಮಾನದಲ್ಲಿ ಹೋಗುತ್ತಿರಲು ಪವನವೇಗೆಯೆಂಬ ವಿದ್ಯಾಧರಿಯನ್ನು ಒಂದು ಹಾವು ನುಂಗುತ್ತಿದ್ದಿತು. ವಜ್ರಕುಮಾರನು ಅವಳನ್ನು ಬಿಡಿಸಿದನು. ಅದಕ್ಕೆ ಪ್ರತಿಯಾಗಿ ಅವಳು ಅವನಿಗೆ ನಾನಾವಿದ್ಯೆಗಳನ್ನು ಕೊಟ್ಟಳು. ಆವುಗಳ ಸಹಾಯದಿಂದ ವಜ್ರಕುಮಾರನು ಅಮರಾವತೀನಗರದಲ್ಲಿ ಆಳುತ್ತಿದ್ದ ಮಂದರದೇವನನ್ನು ಸೋಲಿಸಿ ಅಲ್ಲಿ ಸುಖವಾಗಿ ಆಳುತ್ತಿದ್ದನು ತಾನು ಹಿಂದೆ ಹಾವಿನ ಬಾಯಿನಿಂದ ಬಿಡಿಸಿದ ಪವನವೇಗೆಯು ಸ್ವಯಂವರದಲ್ಲಿ ಇವನನ್ನೇ

ವೆರಿಸಿದಳು. ಬಂದು ದಿವಸ ವಜ್ರಕುಮಾರನು ತಾನು ಹುಟ್ಟಿ ಬಳೆದ ವೃತ್ತಾಂತವನ್ನು ಅರಿತು ವೈರಾಗ್ಯವನ್ನು ತಾಳಿ ಸೋಮದತ್ತ ಭಟ್ಟಾರಕರಲ್ಲಿಗೆ ಬಂದು ದೀಕ್ಷೆಯನ್ನು ಪಡೆದು ತಪಶ್ಚರ್ಯೆಗೆ ಆರಂಭಿಸಿದನು.

ಅವನು ತಪಸ್ಸಿಗೆ ನಿಂತ ಊರಿನಲ್ಲಿ ಪ್ರೀತಿವಾಹನನೆಂಬ ರಾಜನು ಆಳುತ್ತಿದ್ದನು. ಅವನ ಪಟ್ಟದರಸಿಯಾದ ಓಹಿಲೆಯೆಂಬಾಕೆಯು "ಫಾಲ್ಗುನದ ನಂದೀಶ್ವರದಂದು" ಎಂದಿನಂತೆ ಜಿನಪೂಜೆಯನ್ನು ಮಾಡಬೇಕೆಂದಿದ್ದಳು. ಆದರೆ ರಾಜನ ಪ್ರಿಯ ಪತ್ನಿಯಾದ ಬುದ್ಧದಾಸಿಯು ಬುದ್ಧನ ಉತ್ಸವವನ್ನು ಹೊರಡಿಸಿದಳು ಇದರಿಂದ ಓಹಿಲೆಗೆ ಅವಮಾನವಾಗಲು ಆಕೆಯು ಸೋಮದತ್ತ ಮುನಿಯಲ್ಲಿಗೆ ಬಂದು ಹೇಗಾದರೂ ತನ್ನ ಇಷ್ಟ ಸಿದ್ಧಿಸುವಂತೆ ಮಾಡಬೇಕೆಂದು ಪ್ರಾರ್ಥಿಸಿದಳು. ಆತನು ವಜ್ರಕುಮಾರ ಮುನಿಯಿಂದ ಆಕೆಯ ಕೆಲಸವು ಆಗುವುದೆಂದು ಧೈರ್ಯ ಹೇಳಿದನು. ಅದರಂತೆ ಆಕೆಯು ವಜ್ರಕುಮಾರನಿದ್ದೆಡೆಗೆ ಹೋಗಿ ಅವನನ್ನು ಪ್ರಾರ್ಥಿಸಲು ಆತನು ಅಮರಾವತಿಯಲ್ಲಿದ್ದ ಭಾಸ್ಕರ ದೇವನ ಹತ್ತಿರಕ್ಕೆ ಹೋಗಿ ಅವನೂ ಇತರ ವಿದ್ಯಾಧರರೂ ತನ್ನೊಡನೆ ಬಂದು ಓಹಿಲೆಯು ನಡೆಸಬೇಕೆಂದಿರುವ ಜಿನಪೂಜೆಯನ್ನು ನಡೆಸಬೇಕೆಂದು ಕೇಳಿಕೊಂಡನು. ಅದರಂತೆ ಎಲ್ಲರೂ ಬಂದು ಎಂಟುದಿವಸದ ವರೆಗೆ ಜಿನಪೂಜೋತ್ಸವಗಳನ್ನು ಮಹಾವೈಭವದಿಂದ ಮಾಡಿಸಿದರು. ಭಾಸ್ಕರದೇವನು ಓಹಿಲೆಯು ಇಷ್ಟಪ್ರಕಾರ "ವಜ್ರಮಯವಪ್ಪ ಜಿನಪ್ರತಿಮೋವಳಿಗಳಿಂ ತುರುಗಿವ ಸೂಪೆಸಮಂ ದಕ್ಷಿಣಮಧುರಾಪುರದೊಳಿರಿಸಿ" ದನು. ಅದನ್ನು ದೇವತೆಗಳೂ ಪೂಜಿಸುವುದಕ್ಕೆ ಮೊದಲು ಮಾಡಿದರು.

ನವಮಾಶ್ವಾಸಂ.

ಪ್ರಭಾವನೆಯ ಕಥೆ.

ಕುರುಜಾಂಗಣ ವಿಷಯದಲ್ಲಿ ಹಸ್ತಿನಾಪುರವೆಂಬ ಊರು ಇದೆ; ಅದರಲ್ಲಿ ಲಕ್ಷ್ಮೀಮತಿ ಮಹಾದೇವಿಯೆಂಬ ಅರಸಿಯೊಡನೆ ಮಹಾಪದ್ಮ

ನೆಂಬ ಮೊಂಡಳಿಕನು ಆಳುತ್ತಿದ್ದನು. ಅವನಿಗೆ ಪದ್ಮ ವಿಷ್ಣು ಕುಮಾರ ಎಂಬ ಇಬ್ಬರು ಮಕ್ಕಳಿದ್ದರು. ಒಂದುದಿನ ಶ್ರುತಸಾಗರರೆಂಬಾಚಾರ್ಯರು ಹಸ್ತಿನಾವತಿಗೆ ಬರಲು ಮಹಾಪದ್ಮನು ಅವರ ಉಪದೇಶವನ್ನು ಕೇಳಿ ವೈರಾಗ್ಯವನ್ನು ತಾಳಿ, ತಪಸ್ಸಿಗೆ ಹೋಗುವುದಕ್ಕೂ ಸಿದ್ಧರಾದ ವಿಷ್ಣು ಕುಮಾರನಿಗೆ ಯುವರಾಜ ಪದವಿಯನ್ನು ಕೊಡುವುದಕ್ಕೆ ಹೋದನು. ಆವರೆ ವಿಷ್ಣುಕುಮಾರನೂ ತಪಸ್ಸಿಗೆ ಹೋಗುವುದಕ್ಕೆ ಇಷ್ಟಪಟ್ಟನು. ಆದುದರಿಂದ ಅವರಿಬ್ಬರೂ ದೀಕ್ಷೆಯನ್ನು ಪಡೆದು ತಪಸ್ಸಿಗೆ ಹೊರಟು ಹೋದರು ಪದ್ಮನೇ ರಾಜ್ಯವಾಳುವುದಕ್ಕೆ ತೊಡಗಿದನು.

ಅತ್ತ ಅವಂತಿವಿಷಯದ ಉಜ್ಜಯಿನೀ ಪುರದಲ್ಲಿ ಜಯವರ್ಮ ಮಹಾರಾಜನೆಂಬ ದೊರೆಯು ಆಳುತ್ತಿದ್ದನು. ಅವನಿಗೆ ಬಲಿಯೆಂಬ ಮಂತ್ರಿ ಇದ್ದನು ಈ ಬಲಿಯು ಶುಕ್ರ, ಬೃಹಸ್ಪತಿ, ಪ್ರಹ್ಲಾದ ಎಂಬ ಶಾಸ್ತ್ರ ಪಂಡಿತರಾದ ಬ್ರಹ್ಮಪುತ್ರರೊಡನೆ ಸುಖವಾಗಿದ್ದನು. ಒಂದುದಿನ ಅಲ್ಲಿಗೆ ಐನೂರುಜನ ಮುನಿಸಿಗಳನ್ನು ಕರೆದುಕೊಂಡು ಅಕಂಪನಾಚಾರ್ಯರೆಂಬ ಮುನೀಶ್ವರರು ಬಂದರು. ರಾಜನು ತನ್ನ ಮಂತ್ರಿಗಳಿಂದಲೂ ಪರಿವಾರದಿಂದಲೂ ಕೂಡಿ ಅವರಿದ್ದಲ್ಲಿಗೆ ಹೋಗಿ ಪರಲೋಕ ಜೀವ ಧರ್ಮ ಇವುಗಳು ಉಂಟೇ ಇಲ್ಲವೇ ಎಂದು ಅವರನ್ನು ಪ್ರಶ್ನೆ ಮಾಡಿದನು. ಅವರು ಉಂಟೆಂದು ನಿರ್ಣಯಿಸಿದರು. ಬಲಿಯು ಇಲ್ಲವೆಂದನು. ಮುಂದೆ ಅವರಿಬ್ಬರಿಗೂ ನಡೆದ ವಾಕ್ಯಾರ್ಥದಲ್ಲಿ ಬಲಿಯು ಸೋತುಹೋದನು. ಅವನ ಮೌಖರ್ಯವನ್ನೂ ಹೀನವಾದ ಮಾತುಗಳನ್ನೂ ನೋಡಿ ಜಯವರ್ಮ ಮಹಾರಾಜನು ಬಲಿಯನ್ನು ಸಪರಿವಾರನಾಗಿ ತನ್ನ ದೇಶದಿಂದ ಹೊರಕ್ಕೆ ಹೊಡಿಸಿದನು. ಇದಕ್ಕಾಗಿ ನಂಟರಿಷ್ಟರೆಲ್ಲರೂ ಬಲಿಯನ್ನು ಬೈದರು. ಬಲಿಯು ಬಹಳವಾಗಿ ನೊಂದು ತನಗೆ ಅವಮಾನಮಾಡಿದ ಅಕಂಪನಾಚಾರ್ಯರನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿ ಅದನ್ನು ಸಾಧಿಸುವುದಕ್ಕೆ ಪದ್ಮನ ಹತ್ತಿರಕ್ಕೆ ಬಂದು ಅವನ ಆಶ್ರಯದಲ್ಲಿ ನಿಂತನು.

ಒಂದುದಿನ ಸಿಂಹಕೀರ್ತಿಯೆಂಬ ರಾಜನು ಪದ್ಮನ ಸೈನ್ಯವನ್ನು ಸೋಲಿಸಿ ಓಡಿಸಿದನು. ಆಗ ಬಲಿಯು ಅವನಮೇಲೆ ದಂಡೆತ್ತಿ ಹೋಗಿ

ಅವನನ್ನು ಸೋಲಿಸಿ ಸೆರೆಹಿಡಿದುಕೊಂಡು ಬಂದು ಪದ್ಮನಿಗೆ ಒಪ್ಪಿಸಿದನು. ಪದ್ಮನು ಸಂತೋಷಪಟ್ಟು ಬಲಿಗೆ ಬಂದು ವರವನ್ನು ಕೊಡುವುದಾಗಿ ಹೇಳಿದನು. ಬಲಿಯು ಆ ವರವನ್ನು ಆಗಲೇ ತೆಗೆದುಕೊಳ್ಳುವುದಿಲ್ಲವೆಂದೂ ತನಗೆ ಅವಶ್ಯಕವಾದಾಗ ತೆಗೆದುಕೊಳ್ಳುವೆನೆಂದೂ ಅಲ್ಲಿಯವರೆಗೆ ಅದು ರಾಜನಲ್ಲಿಯೇ ಇರಬೇಕೆಂದೂ ಪ್ರಾರ್ಥಿಸಿದನು. ಇದಕ್ಕೆ ರಾಜನು ಒಪ್ಪಿದನು.

ಕೆಲವುಕಾಲದಮೇಲೆ ಅಕಂಪನಾಚಾರ್ಯರು ಆವೂರಿಗೆ ಬಂದು ಚಾತುರ್ಮಾಸ್ಯ ವ್ರತಕ್ಕಾಗಿ ಅಲ್ಲಿ ನಿಂತರು. ಇದನ್ನು ನೋಡಿ ಬಲಿಯು ತನ್ನ ವೈಭವನ್ನು ತೀರಿಸಿಕೊಳ್ಳಬೇಕೆಂದು ಉದ್ದೇಶಿಸಿ ಮಹಾರಾಜನನ್ನು ಕುರಿತು ತಾನು ರಾಜ್ಯಕ್ಕೂ ದೇಶಕ್ಕೂ ಕ್ಷೇಮವಾಗುವಂತೆ ಬಂದು ದೊಡ್ಡಯಾಗವನ್ನು ಕೈಕೊಳ್ಳುವುದಾಗಿಯೂ ಅದು ಮಹತ್ಕಾರ್ಯವಾಗಿದ್ದುದರಿಂದ ಅವನ ರಾಜ್ಯವನ್ನು ಹದಿನೈದು ದಿನದಮಟ್ಟಿಗೆ ತನ್ನವಶಮಾಡಬೇಕಾಗಿಯೂ ಬೇಡಿಕೊಂಡನು. ಮಹಾರಾಜನು ತಾನು ಮಾತು ಕೊಟ್ಟದ್ದಂತೆ ಈ ವರವನ್ನು ಬಲಿಗೆ ಕೂಡಲೇ ಕೊಟ್ಟುಬಿಟ್ಟನು.

ಅನಂತರ ಬಲಿಯು ಅಕಂಪನಾಚಾರ್ಯರಿದ್ದ ಸಿತಗಿರಿಗೆ ಬಂದು ಅಲ್ಲಿ ಭೂಮಿಶೋಧನೆ ಮಾಡಿಸುತ್ತ ಅವರಿದ್ದ ಗುಹೆಯನ್ನು ನೋಡಿ 'ಇದರೊಳಗೆ ಏನಾದರೂ ಕ್ರೂರಮೃಗಗಳು ಸೇರಿಕೊಂಡಿದ್ದರೆ ಓಡಿ ಹೋಗಲಿ, ಇದರೊಳಗೆ ಪುಳ್ಳಿಯನ್ನು ತುಂಬಿ ಉರಿಹಾಕಿಬಿಡಿ' ಎಂದು ಆಜ್ಞೆ ಮಾಡಿದನು. ಇದನ್ನು ಪಿಂಗಳಾಪುರದಲ್ಲಿದ್ದ ಜಿಷ್ಣುಗಳೆಂಬ ಆಚಾರ್ಯರು ಪರಮಾವಧಿ ಯೋಚನೆಯಿಂದ ತಿಳಿದು ಮುನಿವರರ ಉಪಸರ್ಗವನ್ನು ಕಳೆಯುವುದಕ್ಕೋಸ್ಕರ ತಮ್ಮ ಶಿಷ್ಯನಾದ ವಿಷ್ಣುಕುಮಾರನನ್ನು ಕಳುಹಿಸಿಕೊಟ್ಟರು. ವಿಷ್ಣುಕುಮಾರನು ಪದ್ಮರಾಜನ ಹತ್ತಿರಕ್ಕೆ ಬಂದು ಈ ವರ್ತಮಾನವನ್ನು ತಿಳಿಸಲು ರಾಜನು ಮಹಾಕೋಪಗೊಂಡು ಎಲ್ಲವನ್ನೂ ಧ್ವಂಸಮಾಡುತ್ತೇನೆಂದು ಹೊರಟನು. ವಿಷ್ಣುಕುಮಾರನು ಹಿಂಸೆಯಾಗದಂತೆ ಬಲಿಯನ್ನು ಶಿಕ್ಷಿಸುವ ಭಾರವನ್ನು ತಾನು ತಗೆದುಕೊಂಡು ವಾಮನರೂಪಿನಿಂದ ಬಲಿಯ ಯಜ್ಞಶಾಲೆಗೆ ಹೋದನು. ಅಲ್ಲಿ ಬಲಿ ಮುಂತಾದವರೆಲ್ಲರೂ ಇವನನ್ನು

ಸಾಕ್ಷಾತ್ ವಿಷ್ಣುವೆಂದು ನಂಬಿ ಬಹಳವಾಗಿ ಉಪಚರಿಸಿ ತಮ್ಮಿಂದ ಏನನ್ನಾದರೂ ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು; ವಾಮನನು ಅವರ ಇಷ್ಟದಂತೆ ಮೂರಡಿ ಭೂಮಿಯನ್ನು ಪ್ರಾರ್ಥಿಸಲು ಬಲಿಯು ಅದನ್ನು ಧಾರೆಯೆರೆದು ಕೊಡುತ್ತಿದ್ದನು. ಆಗ ವಾಮನನ ಕೈಯಲ್ಲಿದ್ದ ಶಂಖ ಕುಲಿಶ ಕಮಲ ಮುಂತಾದ ಚಿಹ್ನೆಗಳನ್ನು ನೋಡಿ ಶುಕ್ರನು ಹೆದರಿ ಬಲಿಯನ್ನು ತಡೆಯುವುದಕ್ಕೆ ಪ್ರಯತ್ನಪಟ್ಟನು. ಆದರೆ ಬಲಿಯು ಕೊಟ್ಟವಾತಿಗೆ ತಪ್ಪಲೊಲ್ಲದೆ ಧಾರೆಯನ್ನು ಎರೆದು ಬಿಟ್ಟನು. ಕೂಡಲೆ ವಾಮನನು ಅದ್ಭುತ ರೂಪನ್ನು ತಾಳಿ ಇದ್ದಸ್ಥಳವನ್ನೆಲ್ಲಾ ಎರಡು ಹೆಜ್ಜೆಗಳಿಂದ ಆಳದನು. ಮೂರನೆಯ ಹೆಜ್ಜೆಗೆ ಅವಕಾಶವಿಲ್ಲದೆ ಅದನ್ನು ಆಕಾಶದಲ್ಲಿ ತಿರುಗಿಸುತ್ತಿರಲು ದೇವತೆಗಳಿಗೆ ಭಯವೂ ಆಸನಕಂಪವೂ ಆಗಿ ಎಲ್ಲರೂ ಬಂದರು. ಪುಷ್ಪವೃಷ್ಟಿಯಾಯಿತು. ದೇವದುಂದುಭಿಗಳು ಮೊಳಗಿದುವು. ಆಗ ಇಂದ್ರನ ಅಪ್ಪಣೆಯಂತೆ ದೇವಕುಮಾರರು ಬಲಿಯನ್ನು ಮಟ್ಟಿಗಟ್ಟಿ ಹಸ್ತಿನಾಪುರದಿಂದ ಹೊರಕ್ಕೆ ಹಾಕಿದರು. ಋಷಿಗಳೂ ಸಪ್ತರ್ಷಿಮಂಡ್ರಾದಿಗಳೂ ಅಕಂಪನಾಚಾರ್ಯರ ಗುಹೆಯು ಬಾಗಿಲಲ್ಲಿದ್ದ ಕಸವನ್ನೂ ಕಿಚ್ಚನ್ನೂ ನಂದಿಸಿ ಅವರಿಗೆ ಪ್ರಾಪ್ತವಾಗಿದ್ದ ಉಪಸರ್ಗವನ್ನು ತಪ್ಪಿಸಿದರು. ವಿಷ್ಣು ಕುಮಾರನು ನಿಜರೂಪನ್ನು ತಾಳಲು ದೇವತೆಗಳೆಲ್ಲರೂ ಅವನನ್ನು ಹೊಗಳಿ ತಮ್ಮ ಲೋಕಕ್ಕೆ ಹಿಂತಿರುಗಿ ಹೊರಟು ಹೋದರು. ಪದ್ಮಮಹಾರಾಜನೂ ಅವನನ್ನು ಪೂಜಿಸಿ ಧರ್ಮದಲ್ಲಿ ದೃಢಚಿತ್ತನಾದನು.

"ಕುಸಿಯದೆ ಪೆಱರಚಿಂ ಚಿಂ
ತಿಸುವಂ ತಾನಟಿಗುಮಂತ ತೊದಟಿಲ್ಲದೆ ಚಿಂ।
ತಿಸುವಾತಂ ಪೆಱಗೊಪ್ಪಂ
ವಸುಮತಿಯೊಳ್ ತಾನೆ ಸಿರಿಗೆ ನೆರೆಯಾಗಿರ್ಕುಂ॥"

ಶೋಧನಪತ್ರ.

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
1	12	ರಮಳೆ	ರಮಳೆ
4	2	ಪೊರಮಡಿಸು	ಪೊಱಮಡಿಸು
,,	4	ಸ್ವಾಮಿಗಳೆ	ಸ್ವಾಮಿಗಳ
,,	,,	ಪರವೇಷಿ	ಪರವೇಷಿಂ
6	14	ದ್ಧಾಂತ	ದ್ಧಾಂತ
8	4	ಕರಭತ್ಯೈ	ಕರಭರ್ ತ್ಯೈ
,,	23	ಕೂತಲಾರಲಿದ	ಕೂತಲಾಱಿದ
10	22	ರಿಟ್ಟರನಿ ಪೆಱಿರಾರ್ಕ್ಕಂ	ಱಟ್ಟರೆಮ್ಮಿಂ ಪೆಱಿರಾರ್
18	3	ಟೊಳ್ಳಾಗುವ	ಱೊಳ್ಳಾಗುವ
,,	7	ನೆಱಿ	ನೆಱಿ
20	15	ಪುತ್ರನುವಮುಂ	ಪುತ್ರನುವಮುಂ
30	14	ಮಚ್ಚರಿಸುವ	ಮಚ್ಚರಿಸುವ
58	17	ಉಳಿಯೆ	ಉಱಿಯೆ
60	14	ನೀವಂಬಿಜಡ	ನೀವಂಜಬೇಡ
63	4	ಕೆಡಿಸಿದಂ	ಕಿಡಿಸಿದಂ
67	10	ಕನಿಷ	ಕನಿಷ್ಠಂ
94	10	ತತಣ	ತತ್ಕ್ಷಣ
,,	12	ಕೆಡಿಸಿ	ಕಿಡಿಸಿ
98	8	ಪಾರ	ಪೌರ
104	9	ನೋತತ್ತುಂ	ನೋತುತ್ತುಂ
107	13	ರಣಿಲ್ಲೆಂಬೀ	ಕರಣಿಲ್ಲೆಂಬೀ
,,	14	ವೊಹೋದಯಂ	ವೋಪೋದಯಂ
108	8	ಧ್ಯವ	ಧ್ರುವ
109	1	ನೆತ್ತಱಿಂ	ನೆತ್ತರಿಂ
,,	23	ಎಂದು	3 ಎಂದು

ಪುಟ.	ಪಙ್ಕ್ತಿ	ಅಶುದ್ಧ.	ಶುದ್ಧ.
112	18	ತಿಂಬಿನೆ	ತಿಂಬಿನೆ
157	7	ದಾರಣ್ಯ	ದಾರಣ್ಯ
187	15	ನಾಳಂಕಾರ	ನಾಳಂಕಾಯ
188	21	,,	,,
232	12	ಜಿವಂಗಳಂ	ಜೀವಂಗಳಂ
317	4	ಇತೀ	ಇಂತೀ
447	13	ಬಿಲಿ	ಬಲಿ
455	1	ವಿಷುಣ	ಜಿಷ್ಣು

ಶ್ರೀ

ನಯಸೇನ ವಿರಚಿತಂ

ಧರ್ಮಾಮೃತಂ.

ಶ್ರೀರಾಮೋರಮಣೀಯಪಾದಸರಸೀಜಾತಂ ನಿಲಿಂಪೇಂದ್ರವ್ಯಂ
ದಾರಾಧ್ಯಂ ಭುವನತ್ರಯಪ್ರಭು ವಿನೇಯಾನೀಕಕಲ್ಪದ್ರುಮಂ ।
ಧೀರಂ ನಿತ್ಯನನಂತನಕ್ಷಯಸುಖಂ ಮುಕ್ತ್ಯಂಗನೇಶಂ ಜಗ
ತ್ಸಾರಂ ವೀರಜಿನೇಂದ್ರನೀಗೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ ॥ ೧

ಪುದಿದೆಂಟುಂ ಕರ್ಮಬಂಧಂ ಪಱಿವೆಡೆ ಕಿಡದೆಂಟುಂ ಗುಣಂ ಪೊರ್ದೆ ಲೋಕಾ
ಗ್ರದೊಳೋರಂತೊಪ್ಪಿ ನಿಂದಚ್ಯುತರಜಿತರಮೂರ್ತರ್ಪ್ಪಣೂತಸ್ಫುರ್ ಸೌಖ್ಯಾ ।
ಭ್ಯುದಯನಿರ್ತ್ಯರ್ಜಗನ್ಮಂಗಳರವುಳಗುಣಕೋತ್ತುಂಗರುದ್ಧಿತಲ್ಲೇಪ
ರ್ಮುದದಿಂ ಸಿದ್ಧಸ್ವಕೀಯಪ್ರಭುತೆಯನೆಮಗಂ ಮಾಪ್ಪ ಕಾರುಣ್ಯದಿಂದಂ ॥ ೨

ವರಪಂಚಾಚಾರದೊಂದುನ್ನತಿಯೊಳವರೆ ಲೋಕಕೋತ್ತಮರ್ವಿಶ್ವಸತ್ಪೋ
ತ್ಕರಮಂ ರಕ್ಷಿಪ್ಪುಪಾಯಕ್ಕವರೆ ಧರಣಿಯೊಳ್ ಸಜ್ಜನರ್ಪ್ಪಸ್ತುತರ್ಭಾ ।
ಸುರಮುವ್ವತ್ತಾಱುಮತ್ಯುತ್ತಮಗುಣದೊಳಿವರ್ತಾವೆಸತ್ಪೂಜ್ಯರೆಂಬಂ
ತಿರೆ ಮಿಕ್ಕಾಚಾರ್ಯವರ್ಯರ್ಕರುಣದಿ[1] ನಘನಿರ್ಮುಕ್ತರಂ ಮಾಡುಗೆಮ್ಮಂ ॥

---

[1] ನಘದೂರೀಕೃತಂ ಮಾಡುಗೆಂದುಂ; (ಕ)

ನುತಭವ್ಯಾನೀಕನೀಳಾಂಬುರುಹಮಲರೆ ಮಿಥ್ಯಾತ್ವಸೂರ್ಯಾಂಶು ಕುಂ
ದಲ್
ಶ್ರುತದುಗ್ಧಾಂಬೋಧಿ ಪೆರ್ಚಲ್ಜಿನನಿಗದಿತತತ್ವಾಂಶು ಪರ್ವಲ್ಸುರತ್ನ ।
ತ್ರಿತಯೂದ್ರೀಂದ್ರಾಗ್ರದೊಳ್ ಶೋಭಿಸುವನಘರುಪಾಧ್ಯಾಯತಾರಾಧಿಪ
ರ್ಸಂ
ತತಮುಸ್ಮಚಿ ತ್ತಗೇಪಾತರವಿಮೆಳತೆಯುಂ ಮಾಪ್ಕೆ ವಾಗೊಜ್ಜ್ಯೋತಿಯಿಂ
ದಂ॥ ೪

ಮನದೊಳ್ಕೃಗಣ್ಮಿ ಪ್ರೊಣ್ಮತ್ತಿರೆ ದಯೆ ವರಚಾರಿತ್ರದೊಳ್ಪರ್ಚೆ ಶೀಲಂ
ಜಿನಪಾದಾಂಭೋಜದೊಳ್ತಳ್ತಿರೆ ಮತಿ ಜಿನತತ್ವಾಬ್ಧಿಯೊಳ್ ಸಂತತಂ ಭಾ
ವನೆ ಮತ್ತೊಲಾಡೆ [1] ಕರ್ಮಾರಿಯನದಟಲೆ [2] ವಾನಂದವೀರರ್ತಪಶ್ರೀ
ವನಿತಾಳಂಕಾರರಪ್ಮಿಂದಪಹರಿಸುಗೆ [3] ದುರ್ಮೋಹಮಂ ಸಾಧುವ
ರ್ಗಂ ॥ ೫

ಕತಪತ್ರಾನನೆ ಜೈನಧರ್ಮಕುಲಿಶಪ್ರಾಕಾರ ಮಿಥ್ಯಾತ್ವಪ
ರ್ವತವಜ್ರಾಭ ಸಮಸ್ತಭವ್ಯಜನಚಿತ್ತಾಪ್ಲಾದ ಲೋಕೈಕಸಂ ।
ಸ್ತುತ ಧರ್ಮಪ್ರಿಯೆ ಕೋಮಲಾಂಗಿ ವಿಲಸನ್ಮಾಂಗಲ್ಯಸದ್ಧರ್ಮಸಂ
ಯುತೆ ಸಿದ್ಧಾಯಿ ಯಕ್ಷಿ ಮಾಪ್ಕೆ [1] ನುತಮತ್ಯಾವ್ಯಕ್ಕೆ ನಿರ್ವಿಘ್ನಮಂ ॥

ವರಲಕ್ಷಣಾಂಗನರ್ಹ
ಚ ರಣಾಂಬುಜಮಧುಪನನುಪಮಂ ಗುಣರತ್ನಾ ।
ಭರಣಂ ಗಜಮುಖಯಕ್ಷಂ
ನಿರುತಂ ರಕ್ಷಿಸುಗೆ ಕೂರ್ತು ಭವ್ಯೋತ್ತಮರಂ ॥ ೭

ಕುಂದದ ಕೋಮಲಾಂಗರುಚಿಯಿಂ ಚೆಲುವಿಂಗೆಡೆಯಾಗಿ ವೃತ್ತದೊಂ
ದಂದದೊಳಿರ್ದ ಪೆರ್ಮೊಲೆಯಿನಂತೆಸೆದೊಪ್ಪುವನೇಕಛಂದದೊಂ ।

---

1 ಕಾವಾರಿ (ಕ) 2 ದೋರ್ತಾಪೆರ (ಬ) 3 ದುಷ ರ್ಕ್ಷಮಂ (ಕ)
1 ಮುದದಿಂ, (ಬ)

ದಂದದ ಯಾನದೊಂದು ರಮಣೀಯತೆಯಿಂ ಕಡುಗಾಡಿವೆತ್ತ ವಾ
ಕ್ಸುಂದರಿ ಕೂರ್ತು ನಿಲ್ಕೆ ನಯಸೇನಮುನೀಂದ್ರಮುಖಾಬ್ಜ ಷಂಡ
ದೊಳ್ ॥ ೮

[ದುರಿತೇಂಧನಾನಲಭ್ಯಾ
ಸುರಕೀರ್ತಿಪತಾಕರಮೆಳಗುಣನಿಕರಕ್ಕಾ ।
ಗರರರ್ಹ ಬ್ಬ ಲ್ಯಾಚಾ
ರ್ಯರೆ ಜಗದೊಳನಿಂವ್ಯರದಱಿನೆಮಗಭಿವಂವ್ಯರ್] ॥ ೯

ಪ್ರಕಟಯಶಗರ್ಭಣನಿಧಿಗ
ಳ್ಸಕಳಧರಾವಳಯಪೂಜಿತ ಸ್ರು [1] ಶ್ರುತರ ।
ಹ್ಸಕರೆನೆ ಗುಣಧರಭಟ್ಟಾ
ರಕರೆ ವಲಮೆನಿಂವ್ಯರದಱಿನೆಮಗಭಿವಂವ್ಯರ್ ॥ ೧೦

ವರ್ಯರೆನಿಪಾರ್ಯಮಂಕ್ಷ [2]
ಚಾರ್ಯರ ನೆಗಱ್ದಿರ್ದ ನಾಗಹಸ್ತ್ಯಾಚಾರ್ಯಾ ।
ದ್ಯಾರ್ಯರ ನುತಯತಿವೃಷಭಾ
ಚಾರ್ಯರ ಪದಕಮಲಮಿಹಾಗೆ ಶಾಶ್ವತ [3] ಪದಮುಂ ॥ ೧೧

ಧೈರ್ಯಯುತ [4] ರ್ಧರಸೇನಾ
ಚಾರ್ಯಭೂತಬಲಿಪುಷ್ಪದಂತಾಚಾರ್ಯರ್ ।
ವರ್ಯರ್ಭವ್ಯಾಂಭೋರುಹ
ಸೂರ್ಯರ್ದಯಗೆಯ್ದಿ ವಿಮಳರತ್ನತ್ರಯಮುಂ ॥ ೧೨

ವರ್ಯಲೋಕೋತ್ತಮಭೂವಿಸುವೊಡನಘರತ್ನೂತಕೊಂಡಕುಂ
ದಾ
ಚಾರ್ಯಚರಿತ್ರರತ್ನಾಕರರಧಿಕಗುಣಸ್ಸಜ್ಜಟಾಸಿಂಹನಂದ್ಯಾ ।

---

1 ವ್ರತ (ಬ) 2 ಪಿಂಛಾ. (ಗ) 3 ಸುಖಮು, (ಬ)
4 ಸಿದ್ಧಸೇನಾ, (ಬ) ತರ್ವರ (ಗ)

ಚಾರ್ಯಶ್ರೀಕೂಚಿಭಟ್ಟಾರಕರುದಿತಯಶರ್ಮಿಷ್ಠ ಪೆಂಪಿಂಗೆ ಲೋಕಾ
ಶ ರ್ಯನಿರ್ಪಕ್ಕರ್ಮರೆಮ್ಮಂ ಪೊರಮಡಿಸುಗೆ ಸಂಸಾರಕಾಂತಾರದಿಂ
ದಂ ॥ ೧೩

ಶ್ರೀಮತ್ಸಮಂತಭದ್ರ
ಸ್ವಾಮಿಗಳ ನೆಗಪ್ಪೆತ್ತ ಕವಿಪರಮೇಷ್ಠಿ ।
ಸ್ವಾಮಿಗಳ ಪೂಜ್ಯಪಾದ
ಸ್ವಾಮಿಗಳ ಪದಂಗಳೀಗೆ ಬೋಧೋದಯಮಂ ॥ ೧೪

[ಶ್ರೀಮದ್ವಿದ್ಯಾನಂದ
ಸ್ವಾಮಿಗಳ ಸಮಸ್ತಶಾಸ್ತ್ರವಾರಾಶಿಗಳ ।
ನ್ನೇಮೊತೊ ಸಕಳಶಾಸ್ತ್ರದೊ
ಳೀಮೆಹಿಯೊಳನಂತವೀರ್ಯದೇವರೆ ದೇವರ್] ॥ ೧೫

ಕ್ಷಿತಿಪೂಜ್ಯರ್ಸಿದ್ಧಸೇನವೈತಿಪತಿನುತವಾಕ್ಕಿ ವೇವಧೂಕರ್ಣಪೂರರ್
ಶ್ರುತಕೀರ್ತ್ಯಾಚಾರ್ಯರುರ್ವೀವಳಯವೈತಯಶೋರಾಶಿಗಳ್ ಕರ್ಮ
ಸಂದೋ ।
ಹತಮಃಪ್ರಧ್ವಂಸನೈಕದ್ಯುಮಣಿಗಳಮಳಶ್ರೀಪ್ರಭಾಚಂದ್ರದೇವರ್
ಜಿತಮೋರರ್ಬೊಪ್ಪದೇವರ್ವಿದಿತಸಕಲವಿದ್ಯಾಬ್ಧಿತಾರಾಧಿನಾಥರ್ ॥ ೧೬

ನಿರುಪಮರೇಳಾಚಾರ್ಯರ
ನಿರತಿಶಯುರ್ವೀರಸೇನಜಿನಸೇನಾಚಾ ।
ರ್ಯರ ಗುಣಭದ್ರಭಚಂದ್ರರ [1]
ಚರಣಯುಗಂ ಮಾಡುಗೆಮಗೆ ನಿರ್ವೃತಿಸುಖಮಂ ॥ ೧೭

ಪರಮಜಿನಾಗಮಾಂಬುನಿಧಿಪಾರಗರೂರ್ಜಿತಗಂಡ [2] ಮಂಡಲೇ
ಶ್ವರನುತಪಾದಪಂಕರುಹರುನ್ನತಕೀರ್ತಿಪತಾಕರಿಂದ್ರ [3] ಭೂ ।

---

[1] ದಂತರ (ಗ) [2] ಗಂಧ (ಖ) [3] ರುಂದ್ರ (ಗ)

ಧರನಿಭಧೈರ್ಯರಂಗಜನೃಪಾಮದೇಭಹರರ್ಷಸದ್ಗುಣಾ
ಭರಣರೆನಿಪ್ಪ ಪೆಂಪಜಿತಸೇನಮುನೀಶ್ವರನೊಳ್ ವಿರಾಜಿಕುಂ ॥ ೧೪

ಅನುಪಮಗುಣನಿಳಯರ್ಮೀ
ದಿನಿಪೂಜ್ಯರ್ಸೋಮದೇವಪಂಡಿತರಮಳರ್ ।
ಮುನಿವೃಷಭರ್ವಿನತತ್ರಿಭು
ವನದೇವರ್ವಿಬುಧವನಜವನಕಳಹಂಸರ್ ॥ ೧೫

ಪಡೆದೊಡೆ ತಪಮುಂ ಶ್ರುತಮುಂ
ಪಡೆಯರ್ ತಚ್ಛ್ರುತಮನೆಯ್ದಿ ಪಡೆದೊಡೆ ತಪಮುಂ ।
ಪಡೆಯುರದಂತವನೆರಡುಮ್ಮು
ನೊಡವಡೆದ ನರೇಂದ್ರಸೇನಮುನಿಪನೆ ಧನ್ಯಂ ॥ ೧೦

ಎನಿತೊಳವು ತರ್ಕಶಾಸ್ತ್ರಮೆ
ವನಿತುಮನತಿಶಯದಿನೆಸೆಯೆ ನಯಸೇನಮುನೀಂ ।
ದ್ರನೆ ಬಲ್ಲನೆಂದು ಧಾರಿಣಿ
ಮನದಾದರದಿಂದೆ ಪೊಗಟೆ ಕೀರ್ತಿಯನಾಂತಂ ॥ ೧೧

ಶಾಂತಮೊರ್ತಿಗಳುಗ್ರಕರ್ಮಹರರ್ದಿವಾಕರಣಂದಿಸಿ
ದ್ಧಾಂತದೇವರುದಗ್ರಮನ್ಮಥವೈರಿಗಳ್ ಶುಭಚಂದ್ರಸಿ ।
ದ್ಧಾಂತದೇವರುದಾತ್ತಚಾರುಚರಿತ್ರರೀಧರೆಯೊಳ್ ಮನೋ
ಜ್ಞಾಂತಕರ್ಮುನಿವಂದಿತರ್ಗುಣವಾರ್ಧಿಗಳ್ ಮೆದವರ್ಚಿತರ್ ॥ ೧೨

ಮಂತಣಮೇಂ ಶ್ರುತದಿಂ ಗುಣ
ದಿಂ ತಪದಿಂ [1] ರಾಮೆಣಂದಿಸಿದ್ಧಾಂತಿಗಳ ।
ರ್ದಂತೆ ಪೆಱಪೆಱರನಂತಿಂ
[2] ತುಂತೆಂದೇನೆಂದು ಬಣ್ಣಿಪರ್ಜಡಮತಿಗಳ್ ॥ ೧೩

---

[1] ಮಾಳ್ಪಣಂದಿ (ಬ. ಗ) [2] ತುಂತೆಂಪುಂ ಬಣ್ಣಿಪರ್ಜಡರ್ಮತಿರ್ಹಿತರ್ (ಬ)

ನುತಸಿದ್ಧಾಂತದೊಳೂಪ್ಪುವೆತ್ತ ಜಿನಸೇನಾಚಾರ್ಯರಿಂ ಶಾಸ್ತ್ರದು
ನ್ನತಿಯೊಳ್ ಭೂವಿಸೆ ಪೂಜ್ಯಪಾದಮುನಿಯಿಂ ಷಟ್ತರ್ಕದೊಳ್ಖ್ಯಾತನೀ|
ಸ್ತುತನಾಗಿರ್ದ ಸಮಂತಭದ್ರಮುನಿಯಿಂ ಮಿಕ್ಕಿರ್ದನುದ್ಯತ್ತಪ
ಶ್ಶ್ರುತವಾರಾಶಿನರೇಂದ್ರಸೇನಮುನಿಪಂ ತ್ರೈವಿದ್ಯಚಕ್ರೇಶ್ವರಂ ॥ ೦೪

ಪೊಡವೀಶರ್ಭುವನೈಕಮೆಲ್ಲನುತಪಾದಾಂಭೋಜರತ್ಯುರ್ಜಿತರ್
ದೃಢಚಿತ್ತರ್ ಗುಣಚಂದ್ರಪಂಡಿತರಿಳಾಲೋಕೈಕಪೂಜ್ಯರ್ಮನಂ |
ಬಿಡೆ ತ್ರೈವಿದ್ಯಮಹಾಭಿಧಾನಮನದಂ ಕೂರ್ತಚ್ಚಿ ಕೊಟ್ಟರೆಂ
ದೊಡೆ ತ್ರೈವಿದ್ಯನರೇಂದ್ರಸೇನಮುನಿವೋಲ್ವಾಗ್ವೀಶರಾಲರ್ದೊಕ
ದೊಳ್ ॥ ೦೫

ಭೀರೆಂಡಪಂಡಿತವಾ-
ಕ್ಪಿ್ರೀರಮೆಣವರ್ವಾಸುಪೂಜ್ಯಸಿದ್ಧಾಂತೇಶರ್ |
ವೀರುನಗಹ್ನಮೆರವೆನೀ
ಶಾರಾಧ್ಯರ್ಮುನಿಕದಂಬವನವಮಾಕಂದರ್ ॥ ೦೬

[ಕಂತುವಿರೋಧಿಕಿಲ್ಬಿಷಗಜಾಧಿಪಕೇಸರಿಸದ್ಮಣಂದಿಸೈ
ದ್ಧಾಂತಮುನೀಂದ್ರರಂತವರಶಿಷ್ಯರನಂತಗುಣರ್ಚತುಷ್ಕಷಾ |
ಯಾಂತಕರುಗ್ಮಕರ್ಮಹರಣಶ್ರುತವಾರಿಧಿವೀಕ್ಷಚಂದ್ರಸಿ
ದ್ಧಾಂತಮುನೀಂದ್ರರಿಂದ್ರಧರಣೀಧ್ರನಿಭಹ್ನಮೆರೀಡ್ಯಸತ್ಕ್ರಮರ್ ॥ ೦೭

ಯತಿವಂದಿತಕ್ರಮದರ್-
ಷ್ಕೃತದೂರನರ್ಹಣಂದಿಸೈದ್ಧಾಂತಿಗಳೂ |
ರ್ಜಿತರವನಿಪೂಜ್ಯರತ್ಯು
ನ್ನತಪ್ರಭಾಚಂದ್ರಸೇನಸೈದ್ಧಾಂತೇಶರ್ ॥ ೦೮

ಅವರಿವರೊಳ್ಳಿದರೆಂಬೀ
ಬವರದೊಳೇನರ್ಹಣಂದಿಭಟ್ಟಾರಕರು |
ದ್ಭವಚಾರುಚರಿತರೆನಲೀ
ಭುವನಂ ಕೈಮುಗಿಯೆ ಗಣಕೆ ಮೂಲಿಗಳಾದರ್ ॥ ೦೯

ಬವವಿದ ಕವಿತೆಯ ವಾಗ್ಮಿ
ತ್ವದ ಗಮೆಕದ ವಿಬುಧತತಿಗೆ ರಂಜಿಪ ವಾದಿ ।
ತ್ವದ ಬಲ್ಮೆಗೆ ಸಕಲಕಲಾ
ಭ್ಯುದಯಶ್ರುತಕೀರ್ತಿದೇವನಲ್ಲವೆ ದೇವಂ ॥ ೫೦

ಖಳಕರ್ಮ ಜಲಧಿಬಡಬಾ
ನಳರುದ್ರ ತವಾದಿನಿಕರಧರಣೀಧರಸಂ ।
ಕುಳಕುಲಿಶರಮೆಳಗುಣಗಣ
ನಿಳಯಶ್ರುತವಾರ್ಧಿರಾಮಸಿಂಹಬುಧೇಂದ್ರರ್ ॥ ೫೧

ಪರಮಜಿನೇಂದ್ರಾಗಮಸಾ
ಗರಚಂದ್ರವರ್ಮಸುಪೂಜ್ಯಭಟ್ಟಾರಕರು ।
ರ್ವರೆ ಪೊಗಟೆ ಗುಣಗಣಕ್ಕಾ
ಗರಮೊಗಲ್ದರೆಗೆ ಚಾರುಸೇನಾಚಾರ್ಯರ್ ॥ ೫೨

ಅಳವಟ್ಟುಗೊ್ರೀಗ್ರತಪೋ
ನಳನಿಂ ದುರಿತೇಂಧನಂಗಳಂ ಸುಟ್ಟು ತಪೋ ।
ಜ್ಜ್ವಳಮೆಪ್ಪ ಕುಕ್ಕುಟಾಖ
ಮೆಳಧಾರಿಮುನೀಂದ್ರರವನಿತಳಸಂಸ್ತುತ್ಯರ್ ॥ ೫೩

ಅಗಣಿತವೆನಿಸುವ ಗುಣದಿಂ
ನೆಗಳ್ತೆವೆಡೆದಿರ್ದ ಶಾಸ್ತ್ರ ತರ್ಕಾಗಮದಿಂ ॥
ಜಗತೀವಳಯಂ ಬಣ್ಣಿಸೆ
ನೆಗಳ್ದಿರ್ ತ್ರೈವಿದ್ಯವೇಳ್ಪಚಂದ್ರಮುನೀಂದ್ರರ್ ॥ ೫೪

ಪರಲಿಂ ಮುದ್ರಿಕೆ ವಜ್ರದಿಂ ಕುಲಿಶಮೌತಾರೇಶನಿಂ ರಾತ್ರಿ ಭಾ
ಸ್ಕರನಿಂದಂಬರಚಕ್ರಮಾಮ್ರತರುವಿಂದುದ್ಯಾನಮುರ್ವೀಶರಿಂ ।
ಧರೆ ಪಂಕೇಜದಿನೊಳ್ಗಳಂ ಬುಧನುತ [1] ಶ್ರೀರಾಮಸೇನವ್ರತೀ
ಶ್ವರನಿಂ ನಿರ್ಮಳಜೈನಧರ್ಮವೆಸೆವಂ ರಮ್ಯಂ ಮಹೀಚಕ್ರದೊಳ್ ॥

[1] ಶ್ರೀರಾಮಚಂದ್ರ (ಬ)

ಪರವಾದಿಘನಾಘನನಿ
ಷ್ಠುರಪವನಜೈ ನಸಮಯದುಗ್ಗಾ ಬ್ಜಿನಿಶಾ ।
ಕರರುಗ್ಕರ್ಮಗಜರಿಪು
ಶರಭತೆ ೈ ವಿದ್ಯಕನಕನಂದಿಮುನೀಂದ್ರರ್] ೩೬

ವಿವಿಧಮುನಿಸಮಿತಿ ಗಣಧರ
ನಿವಹಂ ಯತಿಪತಿಮುನೀಂದ್ರನಿಕರಂ ಮಾಟ್ಟು ।
ತ್ಸವದಿಂ ಭವ್ಯಸಮೂಹ
ಕ್ಕವಿತಥಸಮ್ಯಕ್ತ್ವರತ್ನಮಂ ದಯೆಯಿಂದಂ ॥ ೩೭

[ನಿರವದ್ಯೈರ್ಜಿನಸಮಯಾಂ
ಬರಹಿಮೆಕರರಖಿಳವಿಬುಧಜನಸಂಸ್ತುತ್ಯರ್ ।
ಧರೆಯೊಳಕಳಂಕದೇವರೆ
ಪರಮೊರ್ಥಂ ನೋಡೆ ಸಕಲವಿದ್ಯಾಂಬುಧಿಗಳ್] ॥ ೩೮

ಅಸಗನ ದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂ
ದಸದೃಶಮಪ್ಪಪೂರ್ವರಸಮೆಯ್ದೆ ಗಜಾಂಕುಶನೊಳ್ಪುವೆತ್ತು ರಂ ।
ಜಿಸುವೆ ಸದರ್ಥದೃಷ್ಟಿ ಗುಣವರ್ಮನ ಜಾಣ್ಕವಿರತ್ನನೋಜೆ ಶೋ
ಭಿಸೆ ನೆಲಸಿರ್ಕೆ ಧಾರಿಣಿಮನಂಗೊಳೆ ಮತ್ಕೃತಿಯೊಳ್ನಿರಂತರಂ ॥ ೩೯

ರಸಭಾವಂ ಗಮಕಂ ಕಾ
ಣಿಸೆ ನಾಣ್ಗುಡಿ ದೇಸಿವೆತ್ತ ಪೊಸನುಡಿ ಮಾರ್ಗಂ ।
ಕುಸುಱಿಯ ಬಗೆಯಿಂದಿನಿತಜೊ
ಳಸೆಯದ ಕೃತಿ ಕೃತಿಯೆ ಬಗೆದು ನೋಱ್ಪೊಡೆ ಜಗದೊಳ್ ॥೪೦

[ಪೊಸಗನ್ನಡದಿಂ ವ್ಯಾವೆ
ರ್ಚಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ ।
ತಿಸಿ ಕೂಡಲಾರದಕ್ಕಟ
ವಿಸುಕದ ಸಕ್ಕದಮನಿಕ್ಕುವವೆನುಂ ಕವಿಯೇ] ॥ ೪೧

ಸಕ್ಕದಮುಂ ಪೇೞ್ವೊಡೆ ನೆಱೆ
ಸಕ್ಕದಮೆಂ ಪೇೞ್ಗೆ ಸುದ್ದಗನ್ನಡದೊಳ್ತಂ ।
[1] ದಿಕ್ಕುವುದೇ ಸಕ್ಕದಮೆಂ
ತಕ್ಕುದೆ ಬೆರಸಲ್ಕೆ ಘೃತಮುಮೆಂ ತೈಲಮುಮೆಂ ॥ ೪೦

[ಪರಿಣತರೆನಿಸುವ ನಿರ್ಮ-
ತ್ಸರರಂ ಮೆಚ್ಚಿಪ್ಪುದು ಗಹನಮಲ್ಲದು ಜಡರಂ ।
ಕರಮಱಿಮ ತಿಳಪಲೆಂತೆನೆ
ಖರಕರನಂ ಗೂಗೆಗೆಯ್ದೆ ತೋರ್ಪಂತಕ್ಕುಂ ॥ ೪೩

ಮಂಡೂಕಂ ಕರನಿಧಿಯುಂ
ಕಂಡಱಿಯದೆ ಪಳಗುಮೆಬ್ಬಿಗದು ಭಂಗವೆ ಪೇಪ' ।
ಖಂಡಿಸೆ ಕುಕವಿಸಮೂಹಂ
ಪಂಡಿತರಪ್ಪವರ್ಗೆ ಭಂಗಮಕ್ಕುಮೆ ಜಗದೊಳ್ ॥ ೪೪

ಪೊಲ್ಲವೆಗಂಡದನಱಿದುಂ
ಮೆಲ್ಲನೆ ಸಯ್ತಾಗೆ ತಿರ್ದುವರ್ಸುಕವೀಶರ್ ।
ಪೊಲ್ಲವೆಯಿಲ್ಲದೊಡಂ ಲೇ
ಸಲ್ಲದು ಕೃತಿಯೆಂದು ಕುಕವಿನಿಕರಂ ಪಳಗುಂ ॥ ೪೫

ಇಲಿಗಂ ಮರಕುಟವಕ್ಕಿಗ
ಮಲಸದೆ ಕರ್ದುಕುತ್ತೆ ಕಱಿಯುತಿರ್ಪುದೆ ಸಹಜಂ ।
ಸಲೆ ಚರಲಂಗಂ ಕುಕವಿಗ
ಮಲಸದೆ ತೆಗಳ್ಪುದುವೆ ಸಹಜಮುವೞಂತೆ ಕರಂ] ॥ ೪೬

ನವಿಲಾಟಂ ಸೊಗಯಿಸುವುದು
ವಿವೇಕಿಯಪ್ಪಂಗೆ ನಾಯ್ಗೆ ಸೊಗಯಿಸ-ವುದೆ ಸ ।

---

[2] ದಿಕ್ಕುವುದಿಸದಂಗಳ (ಕ), ದಿಕ್ಕುವುದೀಕೆಪದಂಗಳ (ಬ)

ತ್ಕವಿಯು ಬಗೆಗೊಳ್ಪು ಪುಗುವವೊ
ಲವಿವೇಕಿಯು ಮನವನೊಳ್ಪದೇಂ ಪೊಕ್ಕಪುದೇ ॥ ೪೭

ಅಡಕಿಲ ಮಡಕೆಗಳಂ ಸ
ಯ್ತಿಡಲಱಿವುವೆ ನಾಯ್ಗಳೂಡೆವುವಲ್ಲದೆ ಕೃತಿಯಂ ।
ಕಿಡೆನುಡಿವರಲ್ಲದೇಂ ಜಡ
ರೊಡಂಬಡಲ್ತಿದ್ದಿನುಡಿಯಬಲ್ಲರೆ ಕವಿಗೋಲ್ ॥ ೪೮

ಮಱೆಯಿಲ್ಲದೆ ಪೊಯ್ನೀರಿಂ
ಬೆಳಗುವ ಧರೆ ಮಱುಗಿ ಕುದಿದು ಶಾಸ್ತ್ರದ ಬಲದಿಂ ।
ದಳಪಿಂ ಪೇಱ್ದೊಡವೆದು ಕೋ
ಮಳಮೆಕ್ಕುವೆ ಸಹಜವಿಲ್ಲದಾತನ ಕಬ್ಬಂ ॥ ೪೯

ಉಪ್ಪಿಲ್ಲದೆ ಕೇಳೂಕ್ಕಳ
ತುಪ್ಪವನೆಱೆದುಣ್ಬೆನೆಂಬೊಡುಂಬುಣಿಸೇಂ ಸ್ವಾ ।
ದಪ್ಪುದೆ ಸಹಜಂ ತನಗಿನಿ
ಸಪ್ಪೊಡವಿಲ್ಲದನ ಕವಿತೆ ರುಚಿವೆಡೆದಪುದೇ ॥ ೫೦

ಮುನಿದಪರೆಂಬುದೊಂದುಭಯವೆಳ್ಳನಿತಪ್ಪೊಡವೊಂದುಮಿಲ್ಲ ಸ
ಜ್ಜನರೊಳದೇಕವರ್ಪುರುಡಿಪರ್ಮುನಿವರ್ಕಡುದುಷ್ಪರಪ್ಪವರ್ ।
ಮುನಿದೊಡೆ ರಾಗದಿಂದೊಸೆದೊಡಂ ಕಡುಪೊಲ್ಲದಱಿಂದಮಂಜೆ ದು
ರ್ಜನಪರಮೇಶ್ವರರ್ಗಱಿದು ಕೈಮುಗಿವೆಂ ಬಲಗೊಂಡು ಭಕ್ತಿಯಿಂ ॥

ಪಱುಗೋಲೊಳ್ ವಾರ್ಧಿಯ ತಡಿ
ಗುಱಿದೆ ಭರಂಗೆಯ್ದು ಪೋಪೆನೆಂಬಗ್ಗನವೋಲ್ ।
ನೆಱೆ [1] ಜಿನವಾಕ್ಯಾಂಬುಧಿಯುಮ
ನುಱಿದೀಸುವೆನೆಂಬ [2] ದಿಟ್ಟರೆಮಿ ಪೆಱರಾರ್ಮಂ ॥ ೫೦

ತರಣಿ ಬೆಳಗಲ್ಪಂಪೇಕೆಂದಿರ್ದುವೇ ಭಗಣಂ ಸುರ
ದ್ವಿರದಮಿರಲಿಂ ಸೊರ್ಕೇಕೆಂದಿರ್ದುವೇ ಪೆಱವಾನೆಗಳ್ ।

---

1 ಜಿನರಾಗನುವಾರ್ಧಿ (ಗ) 2 ದುಷ್ಟ (ಬ. ಕ)

ಪರಮೆಕವಿಗಳ್ ಸಾಲ್ವರ್ತಾವೆಂದು ಮೊಣದೆ ಪೇಪ್ಪೆನಾ
ದರದಿ [1] ನೊಲವಿಂದರ್ಥಿರ್ ದೋಷಂ ನಪಶ್ಯತಿ ಯೆಂಬಿನಂ ॥೫೩॥

ಮೆಱೆದಾನುಂ ಜಿನನಾಮಮಮಂ ಸುಮನದಿಂ ಪೇಪ್ಪಾತನುಂ ದುಃಖಮಂ
ಕಿಱಿದುಂ ಪೊರ್ದದನಂತಮೆಪ್ಪ ಸುಖದೊಳ್ ಕೂಡಿರ್ಪನೆಂದಂದು ತ।
ಳ್ತ್ತುಱಿ ಪುಣ್ಯೋದಿತಮಪ್ಪ ತಚ್ಚರಿತಮಂ ಕಾವ್ಯಂಗಳೊಳ್ ಭಕ್ತಿಯಿಂ
ನೆಱೆ ಪೇಪ್ಪಾತನ ಕರ್ಮನಿರ್ಜರೆಯನಂತಿಂತುಂತೆನಲ್ಬಾರ್ಪವೀ ॥೫೪॥

ಜಿನಮತದೊಳನಿತುಸಾರಮೆ
ದನಿತುಂ ಲೇಸಾಗಿ ತೋರ್ಪುದೀಕೃತಿಯೊಳದೆಂ ।
ತೆನೆ ಕನ್ನಡಿಯೊಳಗೆ ಜಲ
ಕ್ಕನೆ ತೋರ್ಪವೊಲಿಭದ ರೂಪು ವಿಸ್ತರದಿಂದಂ ॥ ೫೫

ಗುರು ವಿದ್ಯಾಬ್ಧಿನರೇಂದ್ರಸೇನಮುನಿಪಂ ತ್ರೈಲೋಕ್ಯಚಕ್ರೇಶ್ವರಂ
ಪರಮಶ್ರೀಜಿನನಿಷ್ಪದೈವನಮಳಂ ಶ್ರೀಜೈನಯೋಗೀಶ್ವರರ್ ।
ಪರಮೋರ್ಥಂ ತನಗಾಳ್ದ ರುತ್ತಮವಿನೇಯರ್ಬಂಧುವರ್ಗಂನಿಜಾ
ದರದಿಂದೆಂದೊಡೆ ಭೂಪು ಧನ್ಯನೆ [2] ದಿಟಂ ವಾತ್ಸಲ್ಯರತ್ನಾಕರಂ ॥ ೫೬

ಸ್ಥಿರವಾಕ್ಯಂ ಸುವ್ರತಾಂಭೋನಿಧಿ ಸಕಲಜಗತ್ಪಾವನಂ ರಾಜಪೂಜ್ಯಂ
ಪರಮಶ್ರೀಜೈನಧರ್ಮಾಂಬರದಿನಕರನುದ್ಯತ್ತಪೋಮೂರ್ತಿವಾಣ್ಯಾ ।
ಭರಣಂ ತ್ರೈವಿದ್ಯಚಕ್ರೇಶ್ವರವಿನುತಪದಾಂಭೋಜಭೃಂಗಂ ಜಿನಶ್ರೀ
ಚರಣಾಲಂಕಾರಶೀರ್ಷಂ ಸುಕವಿಜನಮನಃಪದ್ಮಿನೀರಾಜಹಂಸಂ॥ ೫೭

ಮಾನಿತಶೀಲನಿಧಾನನ
ನೂನಗುಣಂ ಸಕಳಭವ್ಯಜನಬುಧಜನಚಿ ।
ತ್ತಾನಂದಕರಂ ಕೇಳ್ನಯ
ಸೇನಬುಧಂ ಸುಕವಿನಿಕರಪಿಕಮಾಕಂದಂ ॥ ೫೮

---

[1] ಬಗೆವಂದರ್ಥಿರ್ (ಗ) [2] ಬ ಖ್ಯಪಸ್ಯನೆ (ಗ)

ಅತಿಶಯಜಿನೇಂದ್ರವಚನಾ
ಮೃತಮಂ ಸಕಲೈಕಜೀವಹಿತಮಂ ಪುಣ್ಯೋ ।
ದಿತಮಂ ಭವ್ಯನಿಕಾಯ
ಸ್ತುತಮಂ ನೆಱೆ ಪೇೞ್ವೆನಱಿಯೆ ಧರ್ಮಾಮೃತಮಂ ॥ ೪೯

ಅದು ಮತ್ತೆಂತೆಂದೊಡಿಂದ್ರಪ್ರಣುತಪದಯುಗಂ ವೋಹ್ಲಲಹ್ಮೀವಿ ।
ಳಾಸಂ
ಮದನೇಭೇಂದ್ರೋಗ್ರಕಂಠೀರವನನುಳಯಶಂನಿರ್ಮಳಂಸರ್ವಸೌಖ್ಯಾ
ಭ್ಯುದಯಮುಂ ಶ್ರೀನೀರನಾಥಂ ನೆಲಸಿರೆ ವಿಪುಳಾದ್ರೀಂದ್ರದೊಳ್ ಕೋಭೆಯಿಂ
ಮು
ತ್ತಿದ ದೇವಾನೀಕದಿಂ ಸುತ್ತಿದ ಖಚರನತಾಧೀಶಸಂದೋಹದಿಂದಂ ॥ ೫೦

[ಅಂತಿರ್ದಾ ತ್ರಿಜಗನ್ಮಹೀಶಸಭೆಯೊಳ್ ಭವ್ಯಾಳಿಗಂ ಚಂದ್ರನೆಂ
ಬಂತೊಪ್ಪಿರ್ದ ಸಮಸ್ತ ಶಾಸ್ತ್ರವಿದರಂ ಧರ್ಮೋಪದೇಶಜ್ಞರಂ ।
ಮುಂತಾಗೌತಮರಂ ಮುನೀಂದ್ರನುತರಂ ಸದ್ಭಕ್ತಿಯಿಂ ಶ್ರೇಣಿಕಂ
ಸಂತೋಷಂ ವಿಗೆ ಕೂರ್ತು ಕೇೞ್ದನಧಿಕಶ್ರೀಗಾರ್ಮಮಂ ಧರ್ಮ
ಮಂ] ॥ ೫೧

ಅಂತಾಗಿರೀಂದ್ರದೊಳ್ಪರಮತೀರ್ಥಕರಪರಮದೇವರ ಸಮ
ವಸರಣಂ ಬಂದು ನೆಲಸಿರ್ದುದನಱಿದು ಋಷಿನಿವೇದಕಂ ಷಡ್ರಸತುಫಲಂ
ಗಳನಾಶ್ಚರ್ಯಮೆಪ್ಪಂತೆ ಶ್ರೇಣಿಕಮಹಾರಾಜಂಗೆ ಕಾಣ್ಕೆಗೊಟ್ಟು
ಸರ್ವಾಂಗಪ್ರಣತನಾಗಿ ಕೈಮುಗಿದು ದೇವಾ ನಮ್ಮ ವಿಪುಳಗಿರಿಯೊಳ್
ಶ್ರೀವೀರವರ್ಧಮಾನಸ್ವಾಮಿಗಳ ಸಮವಸರಣಂ ಬಂದು ನೆಲಸಿರ್ದುದೆಂದು
ಬಿನ್ನಪಂಗೆಯ್ಯಲೊಡನೆ ಕೇೞ್ದ ಸಿಂಹಾಸನದಿಂದಿಳದತ್ತಲೇೞಡಿಯಂ
ನಡೆದು ವಿನಮಿತಶಿರಸ್ಕನಾಗಿ ಋಷಿನಿವೇದಕಂಗೆ ಪೂರ್ಣಾನಂದಪುರ
ಸ್ಸರ[1] ಮಂಗಚಿತ್ತಮುಂ ಕೊಟ್ಟಾನಂದಭೇರಿಯಂ ಪೊಯ್ಸಿ ಪಡೆವೆಳನೆಂ
ಬರಿಸಿ ಬೀಡೆಲ್ಲಮರ್ಚನಾದ್ರವ್ಯಂಬೆರಸು ಪೊಱಮಡುವಂತೆ ಸಾರೆಂದು

[1] ತುಷ್ಟಿದಾನಪುರಸ್ಸರಂ (ಗ)

ನಿಯಮಿಸಿ ತಾನುಂ ಚೇಳನಿಮಹಾದೇವಿಯುಂ ಪಟ್ಟವರ್ಧನಗಜೇಂದ್ರ
ಮನೇಱಿ ಸಪರಿವಾರಂ ವಿಪುಳಾದ್ರಿಯನೆಯ್ದಿ ದೂರೋತ್ಸಾರಿತವಾಹನಂ
ವಿಚಿತ್ರಾತಪತ್ರಪ್ರಮುಖರಾಜಚಿಹ್ನಂಗಳಂ ಬಿಟ್ಟು ಸಮವಸರಣಮನೆ
ಯ್ದಿ ಗಂಧಕುಟಿಯುಂ ತ್ರಿಃಪ್ರದಕ್ಷಿಣಂಗೆಯ್ದು [1] ಪರಮೇಶ್ವರನ ಪಾದ
ಪದ್ಮಂಗಳಂ ದಿವ್ಯಾರ್ಚನೆಗಳಿಂದರ್ಚಿಸಿ ತ್ರೈಲೋಕ್ಯಸ್ವಾಮಿಗಭಿಮುಖ
ನಾಗಿ ನಿಂದು ಮುಕುಳಿತಕರಕಮಳನುಂ ವಿಕಸಿತಹೃತ್ಕಮಳನು
ಮಾಗಿ ॥ ೬೦

ದುರಿತತಿಮಿರಪ್ರಭಾವಂ
ಪರಿಹರಿಪುದು ದೇವ ನಿನ್ನ ಮುಖಚಂದ್ರಮನಿಂ ।
ತ್ವರಿತಂ ನೋಡಲದೆಂತುಂ
ದೊರೆಕೊಳ್ವುದು ವೀರಜಿನಪ ನಿರ್ವೃತಿಸೌಖ್ಯಂ ॥ ೬೧

ಎಂದನೇಕಸ್ತುತಿಸಹಸ್ರಂಗಳಿಂ ಸ್ತುತಿಯಿಸಿ ನಿರ್ಭರಭಕ್ತಿ
ಯಿಂದೆಱಗಿ ಪೊಡೆಮಟ್ಟು ಶ್ರೇಣಿಕಮಹಾರಾಜಂ ಜ್ಞಾನರ್ದ್ಧಿಸಂಪನ್ನರಪ್ಪ
ಗೌತಮಸ್ವಾಮಿಗಳ್ಗೆ ಪೊಡೆಮಟ್ಟು ಮುಕುಳಿತಕರಕಮಳನು
ಮಾಗಿ ॥ ೬೪

ತಿರಿಕನಾರಕಮಾನವಾಮರಲೋಕದೊಳ್ ನೆಲೆಗೊಂಡು ನಿ
ತ್ತರಿಸದೆಲ್ಲಿಯುಮೆಲ್ಲಿಗಲ್ಲಿಗೆ ಪುಟ್ಟ ರಾಟಳದಂದದಿಂ ।
ತಿರಿವ ಸಂಸೃತಿದುಃಖದಿಂ ಪೊಱಮೆಟ್ಟು ಶಾಶ್ವತಸೌಖ್ಯದೊಳ್
ನೆರೆವುಪಾಯಮನೀ ಯಿಂ ಬೆಸಸಲ್ಕ ವೇಱುಕ್ಕ ಮುನೀಶ್ವರಾ ॥ ೬೫

ಎನೆ ನಯದಿಂ ಚತುರ್ವಿಧಸುರಾಳಿ ಶಿರೋನತರಾಗಿ ಹಸ್ತಕೋ
ಕನದಯುಗಂಗಳಂ ಮುಗಿಯೆ ದಂತಮರೀಚಿ ಸುಧಾಂಶುರಶ್ಮಿಯಂ ।
ತನುಪಮೆಮಾಗಿ ಕೋಭಿಸಿರೆ ಸರ್ವಜನಸ್ತುತರಪ್ಪ ಗೌತಮರ್ ।
ವನಧಿಗಭೀರದಿಂನುಡಿದರಾಪ್ತಮುಖೋದ್ಗತಮಪ್ಪ ತತ್ವಮಂ ॥ ೬೬

[1] ಭಗವಜ್ಜಿನೇಂದ್ರಶ್ರೀಪಾದ. (ಗ)

ನೀಂ ಬೆಸಗೊಂಡ ಚತುರ್ಗತಿಕ್ಲೇಶದಮುಂ ಜಾತಿಜರಾಮರಣ ಮೂರಮುಂ ಸಾರಮುಮೆಪ್ಪ ನಿರಂತರಸುಖಂ [1] ಮುಕ್ತಿಯೊಳ ಲ್ಲದೆ ದೊರೆಕೊಳ್ವಡಾಮುಕ್ತಿಯುಂ ತ್ರಿಜಗನ್ಮಾಂಗಲ್ಯಮಪ್ಪ ಸಮ್ಯಗ್ದರ್ಶನದಿಂದಲ್ಲದೆ ಸಮನಿಸದಾಸಮ್ಯಗ್ದರ್ಶನಮುಂ ಕರಣಲಬ್ಧಿಯಿಲ್ಲದೆ ಕೂಡದಾಸಮ್ಯಗ್ದರ್ಶನಮಿಲ್ಲದೆ ನಿರಂತರಸ್ಥಾಯಿಯಪ್ಪ ಮುಕ್ತಿಶ್ರೀಯಂ ಪಡೆವೆನೆಂಬಾತಂ [2] ಕಣ್ಣಿಲ್ಲದೆ ಕಾಣ್ಬೆನೆಂಬ, ಮಣ್ಣಿಲ್ಲದೆ ಬೆಳೆವೆನೆಂಬ, ಸತಿಯಿಲ್ಲದೆ ಸುತರಂ ಪಡೆವೆನೆಂಬ, [3] ಮತಿಯಿಲ್ಲದೆ ಪರದುಗೆಯ್ವೆನೆಂಬ, ಕೇರಿಲ್ಲದೆ ಚಿತ್ರಮುಂ ಬರೆವೆನೆಂಬ, ನೀರಿಲ್ಲದೆ ಕೂಳನಡುವೆನೆಂಬ, ಅಂಬಿಲ್ಲದೆ ಬಿಲ್ವಿಡಿವೆನೆಂಬ, ತೂಬಿಲ್ಲದೆ ಕೆಸರಿಯಂ ಕಟ್ಟುವೆನೆಂಬ, ಕಾಲಿಲ್ಲದೆ ಪರಿವೆನೆಂಬ, ಕೀಲಿಲ್ಲದೆ [4] ಪಡಿದೆಱೆವೆನೆಂಬ, ಛತ್ರವಿಲ್ಲದೆ ಸಮುದ್ರದೊಳ್ಪೋಪೆನೆಂಬ, ಗೋತ್ರಮಱಿಯದೆ ಕೂಸುಗುಡುವೆನೆಂಬ, ಕಿವಿಯಿಲ್ಲದೆ ಕೇಳ್ವನೆಂಬ, ಸವಿಯಿಲ್ಲದುಣ್ಬೆನೆಂಬ, ಕೆಯ್ಯಿಲ್ಲದೆ ಬೇಲಿಯಿಕ್ಕುವನೆಂಬ, [5] ಬಾಗಿಲಿಲ್ಲದೆ ಪೊಗುವೆನೆಂಬ, [6] [ಧನಮಿಲ್ಲದಧಿಕನೆಂಬ, ವಾಹನವಿಲ್ಲದೇರುವೆನೆಂಬ,] ನಾಲಗೆಯಿಲ್ಲದೆ ನುಡಿವನೆಂಬ, ಪಱುಗೋಲಿಲ್ಲದೆ ತೊಱೆಯಂ ಪಾಯ್ವೆನೆಂಬ ಪಚ್ಚಪಸಿಯೆಗ್ಗನಂ ಪೋಲ್ಕುಂ, ಇಂತು ॥ ೬೫

ವೆರಚಕ್ರವರ್ತಿಪದವಿಗ
ಮುರುಗೀರ್ವಾಣಾಧಿಪತಿಯ ಸದ್ವಿಭವಕ್ಕಂ [7] ।
ಪರಮೋರ್ಹಂತ್ಯಪದಕ್ಕಂ
ಪರಮೋರ್ಥಂ ಶುದ್ಧದರ್ಶನಂ ಮೊತ್ತಮೊದಲ್ ॥ ೬೬

---

1 ಗತಿದೂರಮುಂ ಸಾರಮುಮಪ್ಪ ಶಾಶ್ವತಸುಖಂ (ಗ)

2 ನಿರಂತರಂ ಸುಖಂಬಡೆವನೆಂಬಾತಂ (ಗ)

3 ಅಂಗದಿಯಿಲ್ಲದೆ (ಗ) 4 ಪಡಿಯಂ ಕಿಱುವ (ಬ ಕ.) ಪಡಿಗೆಱವೆ (ಗ)

5 ಕೈಯಿಲ್ಲದೆ ಏಱಿವೆನೆಂಬ, ನೇಗಿಲಿಲ್ಲದ ಉಳುವೆನೆಂಬ (ಗ)

6 ಮನವಿಲ್ಲದಱಿವೆನೆಂಬ (ಗ)

7 ಸುರರಾಜಸುಖಾಸ್ಪದಕಂ ನರರೊಳಗಗ್ಗಳದ ಚಕ್ರವರ್ತಿತ್ವಕ್ಕಂ (ಕ. ಬ)

ಆದರ್ಶನವೆಂತಪ್ಪುದೆಂದೊಡೆ ॥ ೬೯

ಅಮೆರ್ದಷ್ಟಾದಶದೋಷವರ್ಜಿತನನಂ ಸರ್ವಜ್ಞನಿಂದಾರ್ಚಿತ
ಕ್ರಮನನಂತಾತನೆ ಪೇಳ್ದುದಾಗಮಮಿಳಾಲೋಕ್ಯಕಪೂಜ್ಯಂ ತದಾ ।
ಗಮೆದೊಂದರ್ಥಮೆ ತತ್ಪವೆಂದು ನಯದಿಂ ಕೈಕೊಂಡು ನಂಬಿರ್ಪುದು
ತ್ತನ[1] ಸೌಖ್ಯಾನ್ವಿತಮಪ್ಪ ನಿರ್ವೃತಿನುತಶ್ರೀಸ್ಪರ್ಶನಂ ದರ್ಶನಂ ॥ ೭೦

ವಿದಿತಂ ದರ್ಶನಮುಳ್ಳವಂಗೆ ಭವನಜ್ಯೋತಿಷ್ಕರಾವ್ಯಂತರಾ
ಸ್ಪದಮಲ್ಪಾಯುಮನಂಗತಾಪಮಬಲತ್ವಂ ನಿರ್ಧನತ್ವಂ [2] ದುರಾ ।
ಸ್ಪದಭೋಗಾವನಿಜತ್ವಮುಗ್ರನರಕಂ ತಾವಾಗವೆಂದಂದು ಲೋ
ಕದೊಳಾರ್ಜಿಪ್ಪಡಿಪರ್ಣ್ಣ ದರ್ಶನದೊಳಾದೈಶ್ವರ್ಯಮೆಂ ಸ್ಥೈರ್ಯ
ಮೆಂ ॥ ೭೧

ಘಟಸಂಘಕ್ಕದಟೆಂತುಟಂತುಟೆ ಮುಖಾಂಭೋಜಕ್ಕೆ ಮೊಗೆಂತುಟಂ
ತುಟೆ ಬಿತ್ತಿಂಗೆಲೆಯೆಂತುಟಂತುಟೆ ಮಹಾಭೃತ್ರಕ್ಕೆ ಕೀಲೆಂತುಟಂ ।
ತುಟೆ ಕೈಗಂಗುಲಿಯೆಂತುಟಂತುಟೆ ಲಸದ್ದೀಪಕ್ಕೆ ಸಂದೆಣ್ಣೆಯೆಂ
ತುಟುತಾನಂತುಟೆ ದರ್ಶನಂ [3] ಸಕಲಧರ್ಮಕ್ಕಂ ಧರಾಚಕ್ರದೊಳ್ ॥೭೨

ಪಟುದೇಹಕ್ಕಸುವೆಂತುಟಂತುಟೆ ಕುಜಾನೀಕಕ್ಕೆ ಬೇರೆಂತುಟಂ
ತುಟೆ ಕಣ್ಗಾಲಿಯದೆಂತುಟಂತುಟೆ ತಟಾಕಕ್ಕೀರಿ ತಾನೆಂತುಟಂ ।
ತುಟೆ ಕಾಲಿಂಗಡಿಯೆಂತುಟಂತುಟೆ ಚಿರಾವಾಸಕ್ಕಧಿಷ್ಠಾನಮೆಂ
ತುಟು ತಾನಂತುಟೆ ದರ್ಶನಂ [4] ಸಕಲಧರ್ಮಕ್ಕಂ ಮಹೀಚಕ್ರದೊಳ್ ॥

ಸುದತಿಯರಿಲ್ಲದೋಲಗದ ಲೀಲೆ ಮನೋಹರಮಪ್ಪ ಪುತ್ರರಿ
ಲ್ಲದ ಮನೆವಾಟ್ಟ ಸಾರಜಲಮಿಲ್ಲದ ಬಾವಿ ವಿಶೇಷದುರ್ಗಮಿ ।
ಲ್ಲದ ಮಹಿಪಾಲನುಗ್ರತೆ ಜನೋನ್ನತಿಯಿಲ್ಲದ ನಾಡು ಕೂರ್ಮೆಯಿ
ಲ್ಲದ ನಿಜಕಾಂತೆ ಸತ್ವದಯೆಯಿಲ್ಲದ [4] ಧರ್ಮಮೆದೊಪ್ಪಲಾರ್ಕುಮೇ ॥ ೭೪

---

[1] ಸದ್ರತ್ನಮುಮಪ್ಪ (ಗ) [2] ನಿರಾಸ್ಪದ (ಕ)
[3] ಸಕಲಸೌಖ್ಯಕ್ಕಂ (ಕ) [4] ಸವ್ಯೇಕ್ಷತಮಿಲ್ಲದ (ಗ)

ಕಂಪಿಲ್ಲದ ತುಪ್ಪಮುಂ ಪೆಂಪಿಲ್ಲದ ಪ್ರಭುತ್ವಮುಂ ಸ್ನೇಹಮಿಲ್ಲದ ಕ್ರೋಡುಂ ಮೋಹಮಿಲ್ಲದ ಬಾಱುಂ ಭಕ್ತಿಯಿಲ್ಲದ ಕೊಂಡಾಟಮುಂ ಶಕ್ತಿಯಿಲ್ಲದ ಸೆಣಸುಂ ಕೋಡಿಲ್ಲದ ಸಿರಿಯುಂ ನಾಡಿಲ್ಲದರಸುಂ ಫಲಮಿಲ್ಲದ ತೋಟಮುಂ ಕುಲಮಿಲ್ಲದ ಮಹಿಮೆಯುಂ ಬಟ್ಟೆಯಿಲ್ಲದ ಪಯಣಮುಂ ಪಟ್ಟಣಮಿಲ್ಲದ ರಾಜ್ಯಮುಂ ಕಿಚ್ಚಿಲ್ಲದಡುಗೆಯುಂ ನಚ್ಚಿಲ್ಲದ ಪೆಂಡತಿಯುಂ ದಯೆಯಿಲ್ಲದ ನೆಗಳ್ತೆಯುಂ ನಯಮಿಲ್ಲದ ಸೇವೆಯುಂ [1] ಭಂಡಮಿಲ್ಲದಂಗಡಿಯುಂ ಗಂಡನಿಲ್ಲದ ಸತಿಯುಂ ವೊರೆದಿಲ್ಲದ ಪರದುಂ ಮದಮಿಲ್ಲದಾನೆಯುಂ ನೀರಿಲ್ಲದೂರುಂ ಕೇರಿಲ್ಲದ ಮನೆಯುಂ ಶ್ರುತಮಿಲ್ಲದ ತಪಮುಂ ಘೃತಮಿಲ್ಲದೂಟಮುಂ ಸಮ್ಯಗ್ದರ್ಶನಮಿಲ್ಲದ ದಾನಮುಂ ತಪಮುಂ ಜಪಮುಂ ಧರ್ಮಮುವೊಪ್ಪಲಾರ್ಕುಮೆ ? ॥ ೨೫

ಒದವಿದ ಭೂಪರಿಲ್ಲದಿಳ ಭೋಜನಮಿಲ್ಲದ ಬಾಡು [2] ವಸ್ತ್ರಮಿಲ್ಲದ ಬಹುಭೂಷಣಂ ನಯನಮಿಲ್ಲದ ಸೂಳ ವಿಶೇಷಲಾಭ ।
ಮಿಲ್ಲದ ಪರದಬ್ಜಮಿಲ್ಲದ ಕೊಳಂ ಬೆಳಸಿಲ್ಲದ ಧಾತ್ರಿ ರಕ್ಷೆಯಿಲ್ಲದ ನೃಪನಾಳ್ಕ ದರ್ಶನದೊಳಂದದ ಧರ್ಮಮುವೊಪ್ಪಲಾರ್ಕುಮೇ ॥ ೨೬

ದುರಿತವಶದಿಂದೆ ತಿಱನೆ
ತಿರಿಯದೆ ಸುಖನಿಳಯಮಪ್ಪ ಮುಕ್ತಿಶ್ರೀಯೊಳ್ ।
ನೆರೆದಿರ್ಪನೆಂಬ ಭವ್ಯಂ
ಪರಮಾದರದಿಂದೆ ತಾಳ್ದ್ದವುದು ದರ್ಶನಮಂ ॥ ೨೭

ಆ ದರ್ಶನಸೌಖ್ಯಕ್ಕಷ್ಟಾಂಗಮುಂ ಶರೀರಕ್ಕವಯವಮುಂ ಮೆರ ಕ್ಕೆಕಾಖೆಯುಮೆಂತಂತೆ [3] ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿತ್ವಮುಂ ಉಪಗೂಹನಮುಂ ಸ್ಥಿತಿಕರಣಮುಂ ವಾತ್ಸಲ್ಯಮುಂ ಧರ್ಮಪ್ರಭಾವನೆಯುಮೆಂದು ॥ ೨೮

---

1 ನಸಿಯುಂ (ಗ) ಮಾದ್ರ (ಗ) 3 ಸೌಖ್ಯಕ್ಕೆ ತಲೆಯುಂ ಮೂಗುಂ ಬಲದ ತೋಳು ಮೆಡದತೋಳ್ ಬಲದಕಾಲು ಮೆಡದಕಾಲು ಮಿರ್ಪಂತೆ (ಗ).

ಎಸೆವಂಗವೆಂಟಱಿಂ ರಂ
ಜಿಸುವ ಮಹಾನಘ್ರ್ಯಮಪ್ಪ ದರ್ಶನಮುಂ ಶಂ ।
ಕಿಸದೆ ತಡೆದಿರದೆ ಕೈಕೊಂ
ಡೆಸಗುಗೆ ತಾಂ ಬಟಿಕವೈದಣುಬ್ರತತತಿಯುಂ ॥ ೭೯

ಅವಾವುವೆಂದೊಡೆ ॥ ೮೦

ಕೊಲ್ಲದ ಪುಸಿಯದ ಕಳವಿನಿ
ಸಿಲ್ಲದ ಪರವನಿತೆಯರ್ಗೆ ಪದಱಿಂ ಚಿತ್ತಂ ।
ಸಲ್ಲದ ಪರಿಗ್ರಹಕ್ಕಳಿ
ಪಿಲ್ಲದ ಸುವ್ರತವಿವೈದುಮಲ್ಲವೆ ರತ್ನಂ ॥ ೮೧

[ಇಂತೀ ಪದಿನಾಲ್ಕುಮನ
ತ್ಯಂತಂ ದೃಢಹೃದಯನಾಗಿ ತಾಳ್ದಿರ್ದಂಗೋ ।
ರಂತೆ ನಿರಂತರಸೌಖ್ಯಂ
ಭ್ರಾಂತಿಲ್ಲದೆ ಕೂಡುಗಲ್ಲಿ ಸಂದೆಯಮುಂಟೇ ॥ ೮೨

ಇನಿತುಮನೋರಂತಿರೆ ನೆ
ಟ್ಟನೆ ತಾಳ್ದಿದ ನರನ ಸುಖಮನೇವೊಗಱ್ವುದೊ ಕೇ ।
ಳನಿತರೊಳೊಂದಂ ತಾಳ್ದಿದ
ಮನುಜಂಗಂ ಮುಕ್ತಿಲಕ್ಷ್ಮಿ ಗಹನವೆ ಧರೆಯೊಳ್] ॥ ೮೩

ಎಂಬುದುಂ ಗಣಧರದೇವರ್ಗೆ ಮಗಧಾವನೀವಲ್ಲಭಂ ಭಕ್ತಿಪೂರ್ವಕಂ ವಂದಿಸಿ ನಿಮ್ಮಡಿಯೆನಗೆ ತಿಳಿವಂತಾಗೆ ದರ್ಶನಮುಂ ನಿಶ್ಶಂಕಾದ್ಯಷ್ಟಗುಣಂಗಳುಂ ಪಂಚಾಣುವ್ರತಮುವೆಂಬ ಪದಿನಾಲ್ಕು ಮಹಾರತ್ನಂಗಳೊಳಗೊಂದೊಂದಱೊಳ್ ಚರಿಯಿಸಿ ನಿರ್ವೃತಿಯನೆಯ್ದಿದ

ಮಹಾಪುರುಷರ ಕಥೆಗಳಂ ಬೆಸಸಲ್ವೇಱ್ಕುಮೆಂಬುದುಂ ಮೈದುಮೆಧುರ ಗಂಭೀರಧ್ವನಿಯಿನಿಂತೆಂದು ಪೇೞಲ್ತಗುಳ್ದರ್[1] ॥ ೪

ಮುದದಿಂದೊಂದೊಂದಱಿಲಾತ್ತಗುವೆ ಜಲಚರಸಂದೋಹದಳ್ಕೀಱಿನಿಂ ಪೊ
ಣ್ಮಿದ ತಚ್ಛೀತಾಂಬುವಿಂ ತಜ್ಜಲದಿನೊಗೆದ ಮುಕ್ತಾಳಿಯಿಂದೆಯ್ದಿ ಶುಭ್ರಾಂ ।
ಬುದಮೆಂತಾರಾಳಿಯುಂಪೋಲ್ತೆ ಸೆವೞೆಱಿನಭೋಭಾಗದಂತೊಪ್ಪಿ[2] ಸುತ್ತಿ
ರ್ದುದು ಜಂಬೂದ್ವೀಪಮೆಂ ವಾರಿಧಿ ಕವೆಯರಮೆಂ ಬೀೞಿದಂತಾಗೆ ಚೆಲ್ವಿಂ ॥ ೫

ಆ ಜಂಬೂದ್ವೀಪದ ನಟ್ಟನಡುವೆ ॥ ೬

ಮುದದಿಂ ಜಿನಾಭಿಷೇಕ
ಕ್ಕಿದು ಮಜ್ಜನಪೀಠಮೆನಿಸಿ ಮಹಿಮೆಯಿನೊಪ್ಪಿ ।
ರ್ದುದು ಪೆಂಪಿಂ ತ್ರೈಲೋಕ್ಯಾ
ಭ್ಯುದಯಂ ರಮಣೀಯಮಪ್ಪ ಮೆಂದರಶೈಲಂ ॥ ೭

ಆ ಮೇರುಗಿರಿಯ ದಕ್ಷಿಣಭಾಗದ ಭರತಕ್ಷೇತ್ರದೊಳ್ ಸೌರಾಷ್ಟ್ರವಿಷಯಮೆಂಬುದು ನಾಡಲ್ಲಿ ॥ ೮

ಜಿನಭವನಾವಳಿಯಿಂದುಪ
ವನದಿಂ ಪೆರ್ಗಱಿಗಳಿಂ ಸರೋಜಾಕರದಿಂ ।
ಧನದನ ಪುರದಂತೊಪ್ಪುವು
ದನವರತಂ ಶೋಭೆಯಿಂ ಕರಂ ಗಿರಿನಗರಂ ॥ ೯

---

1 ಇಂತೀದರ್ಶನಮಂ ದರ್ಶನಾಂಗಮೆಂಟುಮೈದಣುವ್ರತಮೆಂಬ ಪದಿನಾಲ್ಕು ಮಹಾರತ್ನಂಗಳಿಂ ತಾಳ್ದಿದ ಮಹಾಪುರುಷರ ಮಹಾಮಹಿಮೆಯಂ ನುಡಿಯಬೇಡವಱಿಲೊಳೊಂದೆನೆ ತಾಳ್ದಿ ನಿರಂತರ ಸುಖಮನೆಯ್ದಿದವರ ಕಥೆಗಳಂ ಕೇಳಿಮೆಂದಿ ತೆಂದಂ (ಗ)

2 ಸೆದುಗಗನದಂತೊಪ್ಪುಚೆಲ್ವಾಗಿಸುತ್ತಿ (ಗ)

ಆ ಪುರಮೆನಾಳ್ವಂ ವಿಶ್ವಸೇನನೆಂಬ ಮಹಾಮಂಡಳಿಕನಾತನ ರಾಜಶ್ರೀಷ್ಮಯನ್ವಯಶುದ್ಧನುಂ ಪ್ರಸಿದ್ಧನುಮೆಪ್ಪ ದಯಾಮಿತ್ರಸೆಟ್ಟಿಯೆಂಬ ಪರದನಿರ್ಪನಾತಂ ॥ ೯೦

ಸಿರಿಯೊಳ್ ಕುಬೇರನಂ ತ್ರ
ಸ್ತರಿಯೂಳುವನಹಿಸನೊಡನೆ ಭೋಗಕ್ಕಂ ಮ ।
ಚ್ಚರಿಸುವೆನುಪಾರಗುಣದೊಳ್
ಪುರುಡಿಸುವಂ ಕಲ್ಪವೃಹ್ಷದೊಳ್ತ್ವಣಿಜಂ ॥ ೯೧

ಅಂತಳವಿಗಳದ ಸಿರಿಯೊಳಮುಪಮೆಗಳದ ಭೋಗದೊಳಮು ಪರಿಮಿತಜಿನಭಕ್ತಿಯೊಳಂ ನೆಗಳ್ತ್ತಿರ್ಪ್ಪತ್ತು ಸುಖಸಂಕಥಾವಿನೋದದಿಂ ಪಲವುಕಾಲಂ ಪೋಪುದುಮೊಂದುದಿವಸಂ ತನ್ನೊಳಿಂತೆಂದಂ :— ॥೯೨

ಪುರುಷಂ ಧನವೆನಗುಂಟೆಂ
ದಿರಲಾಗದು ದ್ರವ್ಯಮುಳ್ಳೊಡಂ ದ್ರವ್ಯವೆನಾ ।
ರ್ಜಿಪುದೇಕೆನೆ [1] ವಿತ್ತಂ ತಾಂ
ದೊರೆಕೊಳ ಕೇಳಿಹಪರಂಗಳರಡುಂ ಸಾಧ್ಯಂ ॥ ೯೩

ಎಂದು ಪರದುಪ್ರೋಪೆನೆಂಬ ಬಗೆಯಂ ತಂದು [2] ಯಥೋಚಿತಮೆಪ್ಪ ಭಂಡನೆಂ ಕೊಂಡು ಶುಭದಿನದೊಳ್ ಪೊಱವೀಡಂ ಬಿಟ್ಟು ತನ್ನನಾಶ್ರಯಿಸಿಬರ್ಪರ್ವರ್ ಬರ್ಪನ್ನೆವರಮಿರ್ಪನ್ನೆಗಂ, ೯೪

ಕೊರಲ ಪೊಸಜನ್ನಿವರವೊ
ಪ್ಪಿರೆ ನಿಡುಬೊಟ್ಟಿಸೆಯೆ ದರ್ಪಿ ಕರಮತಿಶಯದಿಂ ।
ಬೆರಳೊಳ್ ರಂಜಿಸೆ ಕಾಶಾಂ
ಬರವೆಸೆದಿರೆ [3] ಬಂದು ನಿಂದು ಭೂಸುರನೊರ್ವಂ ॥ ೯೫

ವೇದರುಕ್ಕಂ ಪೇೞ್ದಹ್ಷತೆಯನೀವುದುಂ ದಯಾಮಿತ್ರಸೆಟ್ಟಿ ನೋಡಿ ನಿಮ್ಮ ಪೆಸರೇನೆಂದೆತ್ತಣಿಂ [4] ಬಂದಪ್ಪಿರಿನ್ನೆಲ್ಲಿಗೆ ಪೋದಪ್ಪಿರಿಲ್ಲಿಗೇಂ ಕಾರಣಂ ಬಂದಿರೆಂದು ಬೆಸಗೊಳ್ವುದುಂ ಪಾರ್ವನಿಂತೆಂದಂ ೯೬

---

[1] ದ್ರವ್ಯವನೋಸರಿಸುವುದಂತೆನೆ (ಗ) [2] ಉತ್ತರಾಪಥಕ್ಕ ಪೋಪುದ್ಯೋಗದಿಂ ಯಥೋ(ಗ) [3] ಶೋಭಾಕರವಾಗಿರೆ. (ಬ ಕ.) [4] ಬಂದಿರಪ್ಪಿರಿನ್ನೆಲ್ಲಿಗೆ(ಬ)

ವೆಸುಭೂತಿಯೆಂಬುದೆನ್ನ ಯ
ಪೆಸರನ್ನತಿವೆತ್ತ ತೆಂಕನಾಡಿಂ ಬಂದೆಂ ।
ವೆಸುಧೆಗೆಸೆದಿರ್ದ ಗಂಗೆಯ
ನಸಹಾಯನೆಯರ್ತಿವೆರಸು ಮಿಾಯಲ್ಕೆಂದಾಂ ॥ ೯೩

ಎಂದು ಮುಂದಡವಿಯಪ್ಪುದಱಿಂ [1] ಕ್ರೂರಮೃಗಂಗಳಿಂದಾನುಂ ವನಚರರಿಂದಾನುಂ ಪ್ರಾಣಭಯಮಿಕ್ಕುವೆಂದಂಜಿ ನೆರವೆಂ ಪೊಱಲಿನೊಳಱಸುತ್ತುಮಿರ್ದು ನಿನ್ನ್ಮ ಪೋಗಂ ಪುರಜನಂ ಪೇಪೆ ಕೇಳ್ದ ನಿಮ್ಮ್ಮ [ನೆರವನಾಶ್ರಯಿಸಿ ಬಂದೆನೆಂಬುದುಂ ಸೆಟ್ಟಿ ಕರವೊಳ್ಕಿತ್ತು] ಬನ್ನಿವೆನೆ ವೆಸುಭೂತಿ, ೯೪

ಕರವೊಸೆದು ರಾಗದಿಂ ಪೆ
ಚ್ಚಿರೆ ಸೆಟ್ಟಿ ಮನೋನುರಾಗದಿಂದೊಡನೆಯವರೆ ।
ಬರೆ ನಯದಿಂ ಪಿರಿದುಬಲಂ
ಬೆರಸು ಮಹೋತ್ಸಾಹಚಿತ್ತದಿಂ ಮಱುದಿವಸಂ ॥ ೯೫

[2] ಮುವ್ವತ್ತಿರ್ವರ್ಪೆಂಡಿರುಮಂ ಬಂಧುಜನಮುಮುಂ ಜ್ಯೇಷ್ಠ ಪುತ್ರನುಮುಂ ಕರೆದು, ೯೬

[ಸಂತತಂ ಮುನಿಸಂಕುಳಕ್ಕೆಱಿದನ್ನಮಂ ಜಿನಪೂಜೆಗೋರಂತೆ ಬೇಱ್ಪ ಸಮಸ್ತವಸ್ತುವ ನಾರಿಸಾರಿಗೆ ದಾನಮಂ ।
ಸಂತಸಂ ಮಿಗೆ ನಿಮ್ಮ್ಮನಾಶ್ರಯಿಸಿರ್ಪ ಭವ್ಯಜನಕ್ಕೆ ನಾ
ನೆಂತುಮೊಡುವೆನೆನ್ನ ಬರ್ಪಿನಮೆಂತೆ ಮೊಡಿ ನಿರಂತರಂ ॥] ೯೭

ಎಂದು ಕೈಮುಗಿದು ಬೇಡಿಕೊಂಡು ಭರದಿಂದೊಪ್ಪೆಯಿಸಿ ಪೊಱಮಟ್ಟು ಕಿಱಿದಂತರಮಂ ಬಂದು ಬಂಧುಜನರುಮಂ ತನಯರುಮಂ ರಮಣೀಯಮೆಪ್ಪ ಬಹಿರುದ್ಯಾನವನದೊಳ್ ನಿಂದು ಮಗುೞಲ್‌ವೇೞ್ದು

1 ದೇನಾನುಂ ಕ್ರೂರಮೃಗಗಳಿಂ ವನಚರರಿಂ (ಬ)

2 ಮುವ್ವತ್ತಿರ್ವರ್ಪೆಂಡಿರ್ಗಂ ಬಂಧುಜನಗಳ್ಗಂ ಜ್ಯೇಷ್ಠ ಪುತ್ರಗ್ಗಂ ಕೆಲಗಣ ಧರ್ಮಕಾರ್ಯಮುಂ ಕೈಮುಗಿದೊಪ್ಪೆಯಿಸಿ ಪಯಣಂಬೋಗುತ್ತುಂ (ಗ)

ಪಯಣಂಬೋಗುತ್ತುಂ ತನಗೆ [ದಿವಸಕ್ಕೆ] ಮೂಱುಗಳಗೆವರಂ ಧರ್ಮ
ಶ್ರವಣಮಂ ಕೇಳ್ದಲ್ಲದುಣ್ಣೆನೆಂಬ ವ್ರತಮುಂಟಪ್ಪುದಱಿಂ ಬಿಟ್ಟ ಬೀಡು
ಗಳೊಳ್ ಸಕಲ ಶ್ರಾವಕರ್ಗೆ ಧರ್ಮಮಂ ಪೇೞ್ವಿ ದಯಾಮಿತ್ರ ಸೆಟ್ಟಿಯ
ಧರ್ಮಶ್ರವಣಕ್ಕೆ ವಸುಭೂತಿ ಕಳಕಳಿಸಿ ನಕ್ಕು ತನ್ನೊಳಿಂತೆಂದಂ॥೧೦೦

ಅಕಟಕಟ ವೈಶ್ಯಜಂ ಭಾ
ವಕನಲ್ಲಂ ಲಜ್ಜೆಗೆಟ್ಟು ಸವಣರ ಮಾತಂ ।
ನಿಕರಕ್ಕೆ ನಂಬಿ ಠಕ್ಕಿಂ
ಗೆ ಕರಂ ಮತಿಗೆಟ್ಟು ಗತಿಯನಱಿಯದೆ ಕೆಟ್ಟಂ ॥ ೧೦೩

ವಸುಮತಿಯೊಳ್ ಪಲರುಂ ಪೂ
ಜಿಸುವೆಸಗುವ ದೈವಮಂ ಮಹಾಧರ್ಮಮುಮಂ ।
ಬಿಸುಟಹಹ ನೋಡ ಕೋಣೆಯ
ಕುಸುಕುಱು [1] ಧರ್ಮಮನದೆಂತು ನಂಬಿದನೀತಂ ॥ ೧೦೪

ಕಾಯಕ್ಲೇಶಂಗಳಿನಿ
ಸಾಯಾಸಂಬಡದೆ ಪಿಱರ ಮನೆಯೊಳ್ಪುಣಿಸಂ ।
ಮಾಯಾವಿತನದಿನುಣ್ಬ
ದಾಯಮನೀಪರದನಱಿಯುದಕ್ಕಟ ಕೆಟ್ಟಂ ॥ ೧೦೫

ತಿರಿದಾಕೂಳಂ ನೀರೊಳ್
ಗರಗರನಪ್ಪಂತು ಕರ್ಚಿ ಮೇಣುಂಡಪರೋ ।
ಪರಿಯೊಳ್ ಮೇಣ್ಮಿಂದಪರೋ
ಮರುಳೀತಂ ಶ್ರವಣರಾವ [2] ತಪಮಂ ಕಂಡರ್ ॥ ೧೦೬

ಜಗದಧಿವೆಲ್ಲಭನಂ ಲ
ಡ್ಡುಗೆಯಿಂ ಪಲತೆಱದ ಪುಷ್ಪದಿಂ ನಾನಾಪ ।

---

[1] ಕುಸುಕುರು (ಬ) ಕುಸುಕಲ (ಗ) [2] ವೂತಂ (ಬ)

ತ್ರಗಳಿಂ ಪೂಜಿಸಿ ನಿಚ್ಚಂ
ಸೊಗಯಿಸಿ ಮೆಯ್ಯಿಕ್ಕಿ ನಾಡೆ ಬಡವಾದಪರೋ ॥ ೧೦೬

[ಕುಲಮೆಂ ಮೊಸಿಸಿ ವಿಾಹಮೆಂ ತೊಱೆದು ಕಂಡಪೆರ್ಗೀಸೆ ಮೆಯ್ಯೊಳ್ ಮಹಾ
ಮಲಮಂ ತಾಳ್ದಿದ ಕಷ್ಟರಂ ಸವಣರಂ ಕಂಗೆಟ್ಟರಂ ಕಂಡು ಸಂ ।
ಚಲಚಿತ್ತಂ ಕುಲದೈವವೆಮೆಂದು ಪದಪಿಂ ಕೊಂಡಾಡುವಿಂತಪ್ಪ ಗಾ
ವಿಲನಂ ಗಾಂಪನನೆಗ್ಗನಂ ಜಡನನಂ ಕಾಣೆಂ ನುಹೀಚಕ್ರದೊಳ್॥]೧೦೯

ಎಂದು ನಾನಾವಿಧದಿಂ ದೂಷಿಸಿ ಮತ್ತಂ ಸೈರಿಸಲಾಱದೆ ಈತನ ಧನಮುಂ ಬುದ್ಧಿಯುಂ ವೃಥೆಯಾಗದಂತೆನ್ನ ಬಲ್ಲ ಮಾರ್ಗದಿಂ ತಿಳಿಪಿ ಬಟಿಕ್ಕಿ ಧರ್ಮಮಂ ಪತ್ತುವಿಡಿಸಿ ಮದೀಯಧರ್ಮದೊಳ್ ಪತ್ತಿಸುವೆನೆಂಬ ಬಗೆಯಂ ತಂದು ಸೆಟ್ಟಿಗಿಂತೆಂದಂ ॥ ೧೦೯

ವರವಸ್ತುವನಱಿವೆಡೆಗಂ
ಪರದರ್ಕಡುಜಾಣರೆಂದು ಕರಮೊದರದಿಂ ।
ನರನಾಥಪೂಜಿಸುವ
ರ್ಧರೆಪೊಗಱ್ವುದು ವಸ್ತುಪುರುಷರೆಂದುಱೆ ನಿಮ್ಮಂ ॥ ೧೧೦

ಎಲ್ಲೆಲ್ಲ ವಸ್ತುಗಳುಮೆಂ
ಬಲ್ಲಿರ್ನಿಮ್ಮನ್ನರಿಲ್ಲ ಬುದ್ಧಿಗೆ ನೀವುಂ ।
ನಿರ್ಲಜ್ಜರಪ್ಪ ಸವಣರ
ಸೊಲ್ಲಿಂಗೊಳಗಾದುದಕ್ಕೆ ನಾಂ ಬೆಜಗಾದೆಂ ॥ ೧೧೧

ಮೊಯುಮನೆ ಬೀಸಿ ಪೆಱರನು
ಪಾಯದೆ ಠಕ್ಕಿಕ್ಕಿ ದೇವಕಾರ್ಯದೊಳಿನಿಸುಂ ।
ನೋಯದೆ ಸುಖಿಯಿಪ ಸವಣರು
ಪಾಯಮನಿಂ ನಿನ್ನೊಳಣ್ಣ ಭಾವಿಸಿ ನೋಡಾ ॥ ೧೧೨

ಮೆಲಮುಂ ಧರಿಯಿಸಿ ನಾಣಂ
ತೊಲಗಿಸಿ ನಿರ್ಗ್ರಂಥಮಿದರ್ದು ಸೊಂಬಿಂ ಪಲ್ಲಂ ।
ಸುಲಿಯದೆ ಮಿಾಯದೆ ಮಿಳ್ಕದೆ [1]
ಕುಲದಿಂ ಕೆಟ್ಟವರನಣ್ಣ ನೀಂ ಮೆನ್ನಿಪುದೇ ॥ ೧೧೩

ಮತ್ತಂ [ಭಾವಿಸುವೊಡ] ವರ ಮಾಟವೆಲ್ಲಂ ಕೂಡಿ'ಕಾರಣಮಲ್ಲದೆ ಗತಿಕಾರಣವೆಲ್ಲದು; ಗತಿವಡೆವೆನೆಂಬುದು ಕಾಯಕ್ಲೇಶಂಬೇ ಱ್ಪುದು; ಆ ಕಾಯಕ್ಲೇಶಂ ನಿನ್ನ್ಗ ನಚಿ ನ ಸವೆಣರ ಮೆಯ್ಗೊಳ್ಳನಿತುಮಿಲ್ಲ; ನೀನವರುಮನವರ ದೈವಮುಮುಂ ಕೊಂಡಾಡುವ ಮರುಳಾಟಕ್ಕೆನಗೆ ಪಿರಿದುಂ ವಿಸ್ಮಯಮಾದಪುದೆಂಬುದುಂ ದಯಾಮಿತ್ರಸೆಟ್ಟಿ ಮುಗುಳ್ನಗೆನಕ್ಕು ತನ್ನೊಳಿಂತೆಂದಂ, ೧೧೪

ಬೇಡಂ ಮಾಣಿಕಮೊಂದಂ
ಕಾಡೊಳ್ ಕಂಡೊರ್ವ್ ಮೆಲ್ದು ಪಗಿನಲ್ಲೆಂದೀ ।
ಡಾಡಿದನೆಂಬೀ ನಾಣ್ಣುಡಿ
ನಾಡೆಯುಮೆಸೆದಪುದು ದುರಿತವಶದಿಂದಿವನೊಳ್ ॥ ೧೧೫

ಬೆಳಗಿನೊಳಂ ಕಾಣದು ನಿಶೆ
ಯೊಳ್ ಕಾಣ್ಬುದು ಪೆಗ್ಗಣಕ್ಕೆ ನಿರ್ಗುಣಗರ್ಗಂತು ।
ಜ್ಜ್ವಳಧರ್ಮಮೆನಖಿಯದೆಯು
ಮ್ಮಳಮಂ [2] ಪೊರ್ದುವುದು ಜಡಗೆ ಸಹಜಮೆನಿಕ್ಕುಂ ॥ ೧೧೬

ಅಖಿಯದು ಕಪ್ಪೆ ಸಾಗರಮೆನಂಬುಧಿಗಂತದು ಕುಂದೆ ಗೂಗೆ ಕಂ
ಡಖಿಯದು ಚಂಡರೋಚಿಪುನಿನಂಗದು ಭಂಗಮೆ ನೋಡೆ ಕಾಗೆ ಕಂ।
ಡಖಿಯದು ಚಂದ್ರನಂ ಸಸಿಗೆ ಹೀನವೆ ಸಜ್ಜನರೊಳ್ಪನಿಂ
ತಖಿಯದೆ ದೂರ್ತನಿಂ ಪಚಯೆ ಕಪ್ಪತೆ ಸಾರ್ಗುಮೆ ದಿವ್ಯರಪ್ಪರಂ ॥

---

[1] ನೊಕ್ಕಡೆ (ಬಿ. ಕ.)

[2] ರುಮ್ಮಳವಂ (ಬ. ಕ.) ಅಖಿಯದೆಮಳವಂ (ಗ)

ಮೆದ್ದು ಕುಣಿಕೆಯಂ ತಿಂದಂಗೆ ಕಲ್ಲುಂ ಮಣ್ಣುಂ ಮರನುಂ ಪೊಂ
ಬಣ್ಣಮಾಗಿ ತೋರ್ಪಂತೆ ಕರ್ಮದ ತೀವ್ರತೆಯಿಂದೀಪಾರ್ವಂಗೆ ಲೌಕಿ
ಕಧರ್ಮಮೆ ಧರ್ಮಮಾಗಿ ತೋರ್ಪುದದುಕಾರಣದಿಂ ಸದ್ಧರ್ಮಮನೊ
ರ್ವಿಯೆ ಪೇಳ್ದಿನಪ್ಪೊಡೆ ಪಿತ್ತಜ್ವರಮುಳ್ಳವಂಗೆ ಕುದಿವ ಪಾಲನೆಜೆವೆಂ
ತಾನುಂ, ಶಿಶುವಿನ ಕೆಯ್ಯೊಳೆ ಮೆಸೆದ ಬಾಳಂ ಕೊಟ್ಟಂತಾನುಂ,
ಕಟಿಯ ಕೊರಲೊಳ್ ಪೂಮಾಲೆಯಿಕ್ಕಿದಂತಾನುಮೆಕ್ಕುಮದಱಿಂದುಪಾ
ಯದೊಳ ತಿಳಪಲ್ವೀಱುಕ್ಕುಮೆಂದು ದಯಾಮಿತ್ರಸೆಟ್ಟಿ ಪತ್ತೆಂಟುದಿವಸಂ
ಪ್ರೋಗಲ್ ಮತ್ತೊಂದುದಿವಸಂ , ೧೧೪

ಬರಿಸಿ ವಸುಭೂತಿಯಂ ವಿ
ಷ್ಟರಮೆಂ ಕುಡವೇೞ್ದು ಪಿರಿದು ಮನ್ನಣೆಯಿಂದಾ।
ದರದಿಂ ವೀಳಯಮುಂ ಕ
ರ್ಪುರಸಹಿತಂ ಕೊಟ್ಟು ವೈಶ್ಯಸುತನಿಂತೆಂದಂ ॥ ೧೧೫

ಭಟ್ಟರೆ ಕೇಳಂ ನಿಮ್ಮಂ
ಬಿಟ್ಟು ಕೆಲರ್ಕುಲಜರೊಳರೆ ನಂಬಿದೆನೀಗಳ್।
ನೆಟ್ಟನೆ ನಿಮ್ಮಂ ಸುಗತಿಯ
ಬಟ್ಟೆಯ ತೆಱನಱಿಯಲಾಯ್ತು ಪುಣ್ಯೋದಯದಿಂ ॥ ೧೧೬

ಎಂಬುದುಂ ವಸುಭೂತಿ ಮಹಾಭೂತಿವೆತ್ತರಂತೆ ಮನದೊಳ್
ಪೆರ್ಚಿ ದಯಾಮಿತ್ರಸೆಟ್ಟಿ ಮೆಲ್ಲನಿಂತೆಂದಂ, ೧೧೭

ಎಮ್ಮನ್ವಯದಿಂ ಬಂದುದು
ತಾಮ್ಮಿಗಿಲಪ್ಪೆಂದು ನೋಂಪಿ [1] ಯಾನೋಂಪಿಯುಮೆಂ।
ನಾಮ್ಮಜ್ಜಿದೆಂ ಸಂತತಮೆಂ
ತೆಮ್ಮಯ್ಯಂ ನೋಂಪನಂತು ನೋನುತುಮಿರ್ಪಂ ॥ ೧೧೮

[ಅದೆಂತೆಂದೊಡೆ ಮನೋಜಮದಹರನುಂ ಸುರಾಸುರಮಕುಟತ
ಟಘಟಿತಚರಣಾರವಿಂದನುಮಪ್ಪರ್ಹತ್ಪರಮೇಶ್ವರನೆಮ್ಮನ್ವಯದಿಂ

1 ಯುದನಿಂನಾಂವುಜಿ ಮುದೆನಂತತಮುಂತೆಂವುಯ್ಯಂನೋಂಪ (ಗ)

ಬಂದ ಕುಲದೈವಮುಮಿಷ್ಟದೈವಮುಮೆಪ್ಪುದಱಿಂ ಜಿನೇಶ್ವರಸಾಕ್ಷಿ
ಯಾಗಿ ಮಹರ್ಷಿಯರ್ಕಳಿಂ ನೋೞಿಸಿ ಬೇೞ್ಪುದಂ ಕುಡುವೆನೀಗಳ್]
ಆ ನೋಂಪಿಯುಂ ನೋಂಪ ಕಾಲಮೊಸನ್ನ [1] ಮೊಯ್ತೀಯವಸರದೊಳ್
ಋಷಿಯರಾರುಮಿಲ್ಲ ಇಲ್ಲದೊಡವೇನಾಯ್ತು,

ಪಾಲೇಮ್ರದೆಂಬಂತಿರೆ ಅಮೃಗರ್ದಂ
ಭೂಲೋಕಸ್ತುತ್ಯರಪ್ಪನಿಮ್ಮನ್ನೊರ್ವರ್ [2] ।
ಸಾಲದೆ ಜಗದೊಳ್ ನೀವಿರೆ
ವೇಲೆನಿಸುವರಾರೊ ಕುಲದೊಳಂ ಶೀಲದೊಳಂ ॥ ೧-೪೪

[ನಿತ್ತರಿಸದೆ ಬಲ್ದೊಱೆಯೊಳ್
ಮೆತ್ತನಿಸದೆ ಬಿರ್ದೊಡಣ್ಣ ಸಹವಾಸಿಯೆ ಬಂ ।
ದೆತ್ತುವುದುಳಿದವರಱಿಸಿಯು
ಮೆತ್ತಲ್ ಕೇಳಾಗದೆಂಬ ನಿಯಮಮೆಮುಮುಂಟೇ ॥ ೧-೪೫

ಅದಱಿಂದೆಮಗೆ ರಿಸಿಯರಲ್ಲದೆ ಪೆಱರಾಗದೆಂಬ ನಿಯಮಮಿಲ್ಲ ;
ಅದಂ ಬಗೆವೊಡವರಿಂ ನೀವೆಮಗೆ ಸಹಸ್ರಮಡಿಯಪ್ಪುದಱಿಂ] ನಿಮಗೆ
ಮಾಡಿದ [3] ದಾನಮುಂ ಪಾಲುಕ್ಕಿಮ್ಮಡಿಸುವಂತಿಮ್ಮಡಿಯಕ್ಕುಮದುಕಾರ
ಣದಿನಿಲ್ಲಿ ನೋಂಪಿಯುಂ ನೋಂತು ನೋಂಪಿಯ ತದನಂತರಂ ಬೇೞ್ಪು
ನಿತು ದಕ್ಷಿಣೆಯಂ ಬೇಡಿಕೊಳ್ಳಿಮೆನೆ ಸೆಟ್ಟಿಯ ಮಾತಿಂಗೆ ವಸುಭೂತಿ
ಮನದೊಳ್ ಗುಡಿಗಟ್ಟಿ,

ಬಿತ್ತರದಿಂ ಕುರುಡಂ ಕ
ಣ್ಬೆತ್ತಂತಿರೆ ರಾಗವೊದವೆ ಬೆಲೆವೆಣ್ ಪೆಣ್ಣಂ ।
ಪೆತ್ತಂತಿರೆ ಪಾರ್ವಂ ಮ
ಣ್ಬೆತ್ತಂತೆ ಸಿರಿದು ಸಂತಸಂ ಮಿಗೆ ಮನದೊಳ್ ॥ ೧-೪೬

---

[1] ಮಾಯ್ತುಮುನ್ನಮಋಷಿಯ-ನ್ನಂ ನೋೞಿಸಿ ತದನಂತರಂ ಬೇೞ್ಪನಿತು ದಕ್ಷಿಣೆ
ಯಂ ಕುಡುವೆವು (ಗ) [2] ನೀವೀ ನೋಂಪಿ ಸಾಲ್ವಿರಿ ನಿಮ್ಮಿಂ ಪೇೞ್ವೊಡೆ ಮೇಲೆ
ನಿಸು (ಗ) [3] ದಾನಮುಪ್ಪೋಕಿಂಮ್ಮಡಿಸಸು (ಕ) ದಾನಮು-ಪೊಕ್ಕಿಂಮಡಿಸು (ಬ)

ಮರ್ದನಗಳಲ್ಲೊೀದಂ ನಿದಿಗಂಡಂತೆ ಪೆರ್ಚಿ ಕರಮೆಶುಚಿಗಳಪ್ಪ ಸವೆಣರ್ಗೆ ಕುಡುವಾತನೆಮ್ಮನ್ನರಪ್ಪ ಸದ್ಬ್ರಾಹ್ಮಣರ್ಗೆ ಕುಡುವನೆಂಬು ದಾವ ಚೋದ್ಯಂ, ೧೮೪

ಒದವಿದ ಪೊನ್ನಪ್ಪೊಡೆ ಜೋ
ಳದ ರಾಸಿಯೊಲಿರ್ದುದಿಲ್ಲಿ ತಾನೇನಂ ಬೇ ।
ಡಿದೊಡಂ ಬೇಡಿದುದಂ ಕುಡು
ವುದು ಪುಸಿಯೀ ವೈಶ್ಯನಂದನಂ ಪುಸಿದಪನೇ ॥ ೧೮೫

ಕರವೊಳ್ಳಿತಾಯ್ತು ಪರದನ
ನರವಿಂ [1] ಮುಟ್ಟಿತ್ತಲತ್ತ ಚಪ್ಪಟಿಯೆಂಬಂ ।
ತಿರಲಾಂ ಬೇಱಿನಿತರ್ಥಂ
ದೊರೆಕೊಂಡಪ್ರದಾನೆ ಧನ್ಯನೆಂ ಭೂತಳದೊಳ್ ॥ ೧೮೬

ನೆರಪಲ್ಬಾರದ ವಿತ್ತಂ
ದೊರೆಕೊಂಡುದು ನೆಲೆಗೆ ಪೋಗಿ ಮೆಕ್ಕಳೂಳಂ ಪೆಂ ।
ಡಿರೊಳಮೊಡಗೂಡಿ ಸುಖದಿಂ
ಚರಿಯಿಸುವೆಂ ಮೆಚ್ಚಿದಂದದಿಂ ಭೋಗಿಸುವೆಂ ॥ ೧೮೭

ಎಂದು ಮನದೊಳ್ ಪಾಲುಡಿದು [2] ನೋಂಪಿಯುಂ ನೋಂಪ ಕ್ರಮಮಂ ಪೇೞುವೆನೆ ವೈಶ್ಯನಿಂತೆಂದನಾ ನೋಂಪಿ ತೀರ್ವನ್ನಂ ಗ್ರಾಸದೊಳ್ ಕಳವೆಯ ಕೂಟಿಂ [3] ತಿಳಿದುಪ್ಪಮುಂ [4] ಪೆಱರೊರ್ವರ್ಬಡಿಸೆ ಕಯ್ಯೊಳ್ ಮೋನದಿಂದುಂಡು,

---

1 ಮುಟ್ಟಿತ್ತಲತ್ತಚಪ್ಪಟಿ (ಕ) ನಾವೆತ್ತಲ್ಕೆಟ್ಟಲೆತ್ತಚಪ್ಪಟಿ (ಬ)
2 ಸೆಟ್ಟುದು ವೊಗವುಂ ನೋಡಿ ನೋಂಪಿ (ಗ)
3 ತಿಗುಣಾಳಿದ ಪೊಂಬೆಸಱಿ ತೊವೆಯುಂ (ಗ)
4 ಪಲವು ಭಕ್ಷ್ಯಂಗಳ್ವೆರಸು (ಗ)

ಮೞುದಿನಮೊಪ್ಪುತ್ತಿಪ್ಪಿನ
[ಮೞುಕೆಯು ನೀರೂಟತಂಬುಲಂಗಳ ಮಾತಂ ।
ತೊಱೆದು ಮತಿಮೞಿದು ಮನೆಯೊಳ್
ಪೊಱಮಡದೋದುತ್ತುಮಿರ್ಪುದಿವಸಳುಂ ಪಗಲುಂ ॥ ೧೩೩

ಸಲೆಮೞಿಯೊಳ್ಪಡುವುದು ಮೈ
ಮಲವೇಱಿತ್ತೆಂದು ಮಿಾಯಲಾಗದು ಪಲ್ಲಂ ।
ಸುಲಿಯದೆ ವನಿತೆಯರಂ ಪಂ
ಬಲಿಸದೆ ತಲ್ಲಣಿಸದಿರ್ಪುದತ್ಯುತ್ಸವದಿಂ ॥] ೧೩೪

ಮತ್ತಂ [ನೋಂಪಿಯ] ಪ್ರಾರಂಭದೊಳಂ ನೆಱವಿಯೊಳಂ [ಮೆಂಚರದಂತೆ ಧೈರ್ಯಾಂಬರಸು, ಲಾಭಂಬೆತ್ತ ಪರದನಂತುತ್ಸಾಹಂಬೆರಸು, ಪಂಪೆಯುಂತು ನೋವಿಂಗಳ್ಕದೆ, ತಣಿಯುಂಡನಂತೆ ಸಾಲ್ಗುಮೆನ್ನದೆ ದೃಢಚಿತ್ತದಿಂದಿರ್ದು] ತಲೆಯ ರೋಮಂಗಳಲ್ಲಮಂ [2]ಪಱಿಯಿಸಿ ರಾಗದಿನೆಮಗೀವುದಿತ್ತು ಮನದೊಳುಮ್ಮಳಿಸದೊಂದೆಡೆಯೊಳ್ ಮುನ್ನಿನ ವಿನೋದಂಗಳಂ ಮಱೆದಪ್ಪುದಂ ನೆನೆಯದೆ ಸ್ವಾಧ್ಯಾಯಪರನಾಗಿ ಬೀಡಿನೊಳಾದಿನಿತಕ್ಕಂ ವಿಸ್ಮಯಕ್ಕಂ ವಸ್ತ್ರಕ್ಕಮುಪೇಕ್ಷೆಯಿಂದೆಳಸದಿಂತೆರಡುತಿಂಗಳ್ವರಂ ಎಮ್ಮ ಪೇಱ್ದೀಜೆಯಿಂ [ಕ್ರಮಂದಪ್ಪದೆ] ನೋಂಪುದೆಂದುಪೇಕ್ಷಿಪ್ಪುದುಂ, ೧೩೫

ಒಳಗಱಿಯದನಿತುಮಂ ಸಂ
ಚಲಚಿತ್ತಂ ಮಾಱಿಪ್ಪನೆಂದು ಪೂರ್ಣಂ ತನ್ನೊಂ ।
ದಳವಱಿಯದೆ ಕಡುಲೋಭದಿ
ನೆಳಗಱು ಭಯಮೆಱಿಯುದೆಂಬವೊಲ್ತದ್ವಿಪ್ರಂ ॥ ೧೩೬

---

1 ನೀರ್ತಂಬುಲಮೂಟಪಂಬೆರಂ ಬಯಸದೂರೊಳಗಣ ವಿನೋದಮಂ ವಿಾಷಮಂ ಪೊಂಡಿರುಮಂ ಸೀರೆಯುಮಂ ಪಂಬಲಿಸದಿರ್ಪುದು (ಗ)

2 ಪಱಿವೆಮಗೀವುದೀನಾರ್ಗದಿಂದೆಮ್ಮ ಪೇಳ್ದೀಜೆ (ಗ)

ಆರಯ್ದು ನೋಡಿ ನಗುವವೆ
ರಾರೆನ್ನಂ ದೂರದೇಶಮಾಂ ನೋಂಪಿನಿದಂ ।
ಸ್ಮೈರಣಿಯಿಂ ಚೆಂಬೊಂಗಳ
ನೋರಂತಿರೆ ಬೀಡಿಕೊಳ್ವನೆನ್ನಾರ್ಪನಿತಂ । ೧೫೬

ಉಸಿರದೆ ಗಳಗೆವರಂ ಸೈ
ರಿಸಿ ತಲೆಯಂ ಪಱಿಸಿಕೊಂಡು ಚೆಂಬೊನ್ನಂ ಸಂ ।
ತಸದಿಂ ಕೈಕೊಳ್ವಂ ಭಾ
ವಿಸುವೊಡೆ ತಲೆಯಲ್ಲಿ ಮತ್ತೆ ಪುಲ್ಮೊಳೆದಪುದೇ ॥ ೧೫೭

ಉಂಬುದು ಕಳವೆಯ ಕೂೞ್ಗಡ
ತಂಬುಲಮಿರ್ಪೊತ್ತಿನುಣಿಸು ವಿಾಹಂ ಕೇಳ ।
ಲ್ಲಿಂಬಿನಿತೆ ಗಡಂ ತಿಂಗಳು
ಮೆಂಬುದು ತಾಂ ದೂರಮಾಯ್ತೆ ಪೇೞೀಂಗಹನಂ ॥ ೧೫೮

ಎಂದು ತನ್ನೊಳ್ ರಾಗಿಸುತ್ತಿರೆ ವಣಿಗ್ವಂಶಲಲಾಮಂ [1] ಬೀಡಿನು ಪ್ಪಯಣಂಮಾಡಿ ಮಱುದಿವಸಂ ಸಮಸ್ತದುರಿತವಿಳಯನಪ್ಪ ಜಿನಸ್ನಾ ಮಿಗೆ ತೂರ್ಯರವವೆಸೆಯೆ ಮಹಾಭಿಷೇಕಪೂಜೆಯಂ ಮಾಡಿಸಿ ವಸುಭೂ ತಿಯಂ ಬಡಗಮುಖನಾಗಿ ಕುಳ್ಳಿರಿಸಿ, ೧೫೯

ತಲೆಯಂ ಬಲುದಡಿಗರ್ಕಿಳ
ನಿಲಲಾಱದೆ ಸುಂಟಿದಿಂದ ಕೋಡಗದಂತು ।
ಮ್ಮಳಿಸಿ ಕಳವೆಳಿಸಿ ನೋವಿಂ
ತಲೆಯಂ ತಿರಿಪುತ್ತುಮಂಜೆ ಕೆಟ್ಟೆನೆನುತ್ತುಂ ॥ ೧೬೦

ನಡುಗೆ ಶರೀರಂ ಪಲ್ಲಂ
ಗಿಡಿಗಿಱಿದೆರ್ದೆ ಗೂಡುವಾಯೆ ಪಂದೆಯುಮೇಲ್ವಾ ।

---

1 ಬಿಡಂಪಯಣಂಮಾಡಿ (ಟಿ)

ವೆಡರ್ದಂತಿರೆ ದೇಹಂ ಮೆರ
ವೆಡೆ ಕಣಿೀರ್ಸುರಿಯೆ ತಳದಿನದನೊತ್ತುತ್ತುಂ ॥ ೧೪೮

ಬೀದೌಡುಗರ್ಚಿ ನೋವಿಂ
ದಡಿಗಡಿಗಹಹಾ ಯೆನುತ್ತು ಮುಡಗಯ್ಯಿಂದಂ ।
ತಡವರಿಸುತ್ತುಂ ಸಾಸವೆ
ಗುಡಿದಂತಿರೆ ಕರಮೆ ಮೆಱುಗಿ ತಳವೆಳಗಾದಂ ॥ ೧೪೯

ಮತ್ತಂ ಕುದುರೆಯೇರ್ದ ಕುಱುಂಬನಂತೆ ನಡುಗುತ್ತುಂ, ಪೆಣನಂ ಕಂಡ ಪಂದೆಯಂತೆ ಕಣ್ಣಂ ಮುಚ್ಚುತ್ತುಂ, ಬಿನ್ನಪಂಗೆಯ್ವ ವೊಕ್ಕಲಿಗನಂತೆ ಬಿಕ್ಕುತ್ತುಂ, ಸಾಕ್ಷಿಯಿಲ್ಲದೆ ಸಾಲಂಗೊಟ್ಟೊ [ಕ್ಕಲಿಗ] ನಂತೆ ಸುಯ್ಯುತ್ತುಂ, [1] ಸಿಕ್ಕಿದ ಕಳ್ಳನಂತೆ ಪಲವೆಂ ನೆನೆಯುತ್ತುಂ, ಗ್ರಹಪೀಡಿತನಂತೆ ತೊನೆಯುತ್ತುಂ, ಪೇನುಳ್ಳನಂತೆ ತಲೆಯುಂ ತುಱಿಸುತ್ತುಂ [2] ಕಱುಸತಳ್ತಾವಿನಂತೆ ಮಱುಗುತ್ತುಂ, ತಾಯ್ಸತ್ತ ಶಿಶುವಿನಂತೆ ಬಾಯ್ವಿಡುತ್ತುಂ, ಕೆಸಱೊಳ್ ಬಿೞ್ದ ನಂತೆ ವಿಡುಕುತ್ತುಂ, ಮಗನಿಲ್ಲದರ್ಥ ಪತಿಯಂತೆ ಬೆವೆಬೆದೆಬೇಯುತ್ತುಂ, ಸೂಲವೇಱಿದನಂತೆ ಕಾಲಂ ನೀಡುತ್ತುಂ, ಕೂಸ್ವಡೆಯದನಂತೆ ಬಂಬಲ್ಬಡುತ್ತುಂ, [3] ಮುಳ್ಳೊಕ್ಕವನಂತೆ ಕುಸಿಯುತ್ತುಂ, ಸೂಲೆಯುಳ್ಳವನಂತೆ ಕವಿದು ಬೀೞುತ್ತುಂ, ವೋನಂಗೊಂಡ ಚಪಳನಂತುವ್ಮಿಳಿಸುತ್ತುಂ, [ಚಿತ್ತದೊಳುಳ್ಳಳ್ಳುತ್ತುಂ, ನಿಲಲಾರದೆನಿಸುವ ನೋವಿಂಗೆ ಬೆಬ್ಬಳವೋಗಿ ಬಾಳ ವೋಹಕ್ಕೆ ಶಿಶುವಂ ಪಿಡಿದರೆಂಬ ನಾಣ್ಣುಡಿಯಂತೆ ಪೊನ್ನ ವೋಹಕ್ಕೆ ಮನಮಂ ಬಲ್ವಿಡಿದು] ನಿಶ್ರೇಯಸಶ್ರೀಯ ವಿವಾಹಗೇಹದ ಭೂಮಿಶೋಧನೆಯೆನಿಪ ಲೋಚನಂ ತಾನುಂ ಸೈರಿಸಿ, ॥ ೧೪೪

[4] [ವಿನಯಪಯೋನಿಧಿ ಸತ್ಯದ
ಮನೆಯೆನಿಸಿದ ಸೆಟ್ಟಿ ಪೇೞ್ದಿ ಮಾರ್ಗದೊಳಂತಂ ।

---

[1] ದೊಱೆಹನತಾಯಂತೆ ಚಿಂತಿಸುತ್ತುಂ. (ಗ) [2] ತಾಗಿದನಂತೆತಲೆಯು ನೊರಸುತ್ತಿರಲುಂ (ಗ), ಕೆಟ್ಟಬೀಡಿನಂತೆ ತಲ್ಲಣಿಸುತ್ತುಂ (ಬ) [3] ಕೆವುಳ್ಳಳ್ಳಿನಂತೆತೇಂಕುತ್ತುಂ, (ಗ) [4] ಮಱುದಿವಸಂಸೆಟ್ಟಿಕರೆಯೆ ಮನೆಗೆ ವೋಗಿ ವಣಿಗ್ವಂಶಲಲಾಮಂ ಪೇೞ್ದೋಜೆಯೊಳ್ ನಿಂದು. (ಗ)

ದಿನದಿನಮುಪವಾಸಮೆನಿ
ರ್ದನುನಯದಿಂದೇಕಚಿತ್ತದಿಂ ಮಱುದಿವಸಂ ॥ ೧೪೫

ಆಯೂಚಿತವ್ರತಮಪ್ಪುದಱಿಂ ಸೆಟ್ಟಿ ನಿಱಿಸಿ ಮನೆಗೆ ಪೋಗಿ ವೈಶ್ಯೋತ್ತಮಂ ಪೇಱೋ ಜೆಯಿಂ ನಿಂದಿರ್ದು ಪಾಣಿಪಾತ್ರೆಯೊಳ್ ಶರ್ಕರೆವೆರಸಿದ ಪಾಲಂ ಕುಡಿದು ತದನಂತರಂ,] ೧೪೬

ಸೊಗಯಿಪ ಘೃತಪೂರಂ ಹೋ
ಳಿಗೆ ಮಂಡಗೆ ತಱುಗು ನಾಡೆ ರುಚಿವೆರಸಿದ ಎ ।
ಡ್ಡುಗೆ ಚಕ್ಕುಲಿ ಗಾರಿಗೆ ಪೂ
ರಿಗೆ ಮೊದಲಾಗಿರ್ದ ಪಲವು ಭಕ್ಷ್ಯಮನಾಗಳ್ ॥ ೧೪೭

ಆಜ್ಯಯುತಮಪ್ಪವಂ ಮೆಲ್ದು [ತೊಱೆಯೊಳ್ ಪೋಪಸಂಗೆ ತೆಪ್ಪವನಿಕ್ಕಿದಂತಿಕ್ಕಿದ ಗಟ್ಟಿಗೊಂತ ಬಲ್ಮೊಸರಂ ಕೊಂಡು ಪದುಳಿಸಿ ನಿಂದ ಬಟಿಕ್ಕಂ,] ೧೪೮

ಕಳವೆಯ ಕೂಲ್ಮಗಮಿಗಿಸುವ
ತಿಳಿದುಪ್ಪಂ ತಿವುಡುಗಳೆದ ಪೊಂಬೆಸಱಿ ಸುಹೂರೀ ।
ಜ್ಜ್ವಳಮೆಪ್ಪ ಕಂಪಿನಿಂಪಿನ
ನಿಳಯಮುಮೆನಿಸಿರ್ದ ಸವಿಯಿನೊದವಿದ ತೊವೆಯಂ ॥ ೧೪೯

ಅಂತಮೃತದೊಳ್ [ಮೆಚ್ಚರಿಸುವ, ರಸಾಯನದೊಳ್] ಪುರುಡಿಸುವ ದಿವ್ಯಾಹಾರಮಂ [ಕಯ್ಯೊಳಿಕ್ಕುವುದುಮಾಕಂಠಂ] ಉಂಡು ಬಟ್ಟಲ್ಕೆವೋಗಿಪ್ಪುದುಂ, ೧೫೦

ಬಾಱಿಯ ಕರ್ಜೂರದ ಕಿ
ತ್ತೀಳೆಯ ಕಂವೆರದ ರಂಜಿಪಿಮ್ಮಾವಿನ ಪೇ ।
ರೀಳೆಯ ನಾರಂಗದ ಕಂ
ಚೀಳೆಯ ತನಿವಣ್ಣನಿಕ್ಕೆ ಮೆಲ್ದಾದರದಿಂ ॥ ೧೫೧

[ಕಯ್ಯಂ ಕರ್ಚಿಕೊಂಡು][1] ತಣ್ಣಗೆಗವ ತಣ್ಣೋಡುವಾಲಿನೀರಂ ಆರ್ದ್ರನಿತಂ ಕುಡಿದು ಸಂತೋಷದಿಂ ನುಡಿದು ನಯೂಪಿತ್ರಸೆಟ್ಟಿಯ ಧ್ಯಹ್ನಂ ಬೆರಸು ವಿಹಾರಕ್ಕೆ ಬಂದು [ಕಾಷ್ಠಾಸನದೊಳ್] ಕುಳ್ಳಿರ್ದು [ತನ್ನೊಳ್ ॥ ೧೫೮

ಇವು ಲೇಸವುಲೇಸೆಂಬೀ
ವಿವರದೊಳೇಂ ಸಕಲಭವ್ಯರ್ಮುಂ ಬಾಡುಗಳುಂ।
ಸವಿಯೊಳ್ ಸಾಸಿರಮೆಡಿ ಮಿ
ಕ್ಕುವ ಭಾವಿಸಿನೋಱ್ಪಿಂದ್ರನುಣ್ಬ ಮೃತಮುಮಂ ॥ ೧೫೯

ಎಂದು ತನ್ನ ತೂಟಂ ತನಗೆಜನ್ಮಪೂರ್ವಮೆಪ್ಪುದಱಿಂ ಮಹಾವಿಸ್ಮಯಮುಂ ಬಟ್ಟು] ಇರುಳ್ಕಂಡ ಕನಸುಗಳಂ ಪಗಲ್ಕನೆವಂತೆ ನೆನೆಯುತ್ತುಂ [ಪಗಲೆಲ್ಲಂ ಸಂತಸದಿಂದಿರ್ದು] ನೇಸಱ್ಪಟ್ಟೊಂದು ಜಾವಕ್ಕೆ ತೊಟ್ಟನೆ ॥ ೧೬೦

ಅಸದಳಮೆನಿಸುವ ತೀವ್ರದ
ತೃಷೆ ಮೊಕ್ಕಳಮಾಗೆ ನಾಡೆಯುಂ ಮನದೊಳ್ಸೃ।
ರಿಸಲಾಱದೆ ತಲ್ಲಣದಿಂ
ಬಿಸುಸುಯ್ದು ಮ್ಮೆಳಿಸಿ [2]ಬಾಱಲರಿಚಾಯ್ತೆನುತುಂ ॥ ೧೬೧

ಕೋಡಗಮಂ ಪುಲ್ಲೊಳ್ ಮುಚ್ಚೆ ಸಿಡಿಮಿಡಿಗೊಂಬಂತೆ ಸಿಡಿಮಿಡಿಗೊಳುತ್ತುಂ ಪೆಱರ್ಗೆ ಪೇೞಲಂಜಿ [3]ಲಜ್ಜೆಯಿಂ ಮಾಗಿಯು ಕೋಗಿಲೆಯಂತೆ ಬಾಯ್ವಿಟ್ಟೊಡದೆ ಮಳಲೇರಿಯಂತೆ [ಜಱ್ಜನೆ] ಜರಿದು, ॥ ೧೬೨

ಬಿಡುಗುಂ ಬಾಯಂ ನೆಲದೊಳ್
ಪಡುಗುಂ ಪೊಱಗಣ್ಗೆ ಪೋಗಿ ತಣ್ಪಪ್ಪೆಡೆಯೊಳ್।
ಪಡುಗುಂ ತಂಪಿಲ್ಲದೊಡೆರ್ದೆ
ಗಿಡುಗುಂ ವಸುಭೂತಿ ಧೈರ್ಯಮಿಲ್ಲದೆ ಮನದೊಳ್ ॥ ೧೬೩

---

1 ವಾಣಿಗರಗದ (ಗ) 2 ತನ್ನುಂಸೂಟವುಂ (ಗ) 3 ಕೆಟ್ಟೆನಳಿದೆನೆನುತ್ತುಂ (ಗ)

ತರುವಲಿಯ ತಲೆಯ ಕಿರೀಟಮೆನಾಲಿಕಲ್ಲ ಮಱಿ ಕೊಂಡು ದೆಂಬಂತೆನಗೀಮೆುನ್ನಿ ನಿರುಳ್ಗಳಂ ನೋಡಲಿಂದಿನಿರುಳ್ಪಿರಿದಾಯ್ತೋವೊಕೆಟ್ಟೆನೆಂವು, ॥ ೧೫೪

ನೀರಱಿಕ್ಕ ಪೆರ್ಚಿ ನಿಲಲುಂ
ಸೈರಿಸಲುಂ ಬಾರದಳ್ಕ ತನ್ನಿಂದಂ ತಾ ।
ನೋರಂತೆ ಕುದಿದು ಮೆಱುಗುವ
ಸಾರಂಗದ ಪೋಱಿಯಂದಮಂ ನೆಱೆ ಪೋಲ್ತಂ ॥ ೧೫೫

ಆಂತಿರುಳ್ ನಾಲ್ಕುಂ ಜಾವಮುಂ ಮೌಹೂರ್ತಿಕನಂತೆ ಪೊತ್ತಿನಳವಿಯಂ ನೋಡುತ್ತುಂ, ಪೆರ್ಬಾವಿನಂತೆ ಮುಂಡಲಂಗೊಳ್ಳುತ್ತುಂ, ಜಾವದ ಕಾಪಿನವರಂತೇಱುತ್ತುಂ, ಜಂಘಾಬಲವಿಲ್ಲದನಂತೆ ಕುಳ್ಳಿರುತ್ತುಂ, ಮರುಳನಂತೆ [1]ತನ್ನೊಳ್ತಾನೆ ನುಡಿಯುತ್ತುಂ, ಮಱೆಯುಂಪಾರ್ವೊಕ್ಕಲಿಗನಂತೆ ಗಗನಮಂಡಲಮಂ ನೋಡುತ್ತುಂ, ನೂತನಶ್ರೀಮಂತನಂತೆ ಮೆಯ್ಯಱಿಯದೆ ಬಳ್ಕುತ್ತುಂ, ಚಾದಗೆಯಂತಾಕಾಸವನಿಗೆ ಬಾಯುಂ ಬಿಡುತ್ತುಂ, ದಾಹಜ್ವರಂಬೆತ್ತಂತೆ ಗಾಳಿಗಾಸೆಗೆಯ್ಯುತ್ತುಂ, ಕಪ್ಪೆಯಂತೆ ತಣ್ಪಪ್ಪೆಡೆಯೊಳ್ ಪತ್ತುತ್ತುಂ, ಚೊಚ್ಚಲ್ಪೆಱುವಳಂತೆ ತೊಱಲುತ್ತುಂ, ಪಲ್ಲಿಯಂತೆ ಕೇರಂ ಪತ್ತುತ್ತುಂ, ಎಲೆವಳ್ಳಿಯಂತೆ ಕಂಬಮುಂ ಸುತ್ತುತ್ತುಂ, ಪಾದರಿಗೆಯಂತೆ ಪೆಱರ್ಗಂಜುತ್ತುಂ, [2] ಸೂಲೆವೆತ್ತರಂತೆ ಪೊರಳುತ್ತುಂ, ಕಳ್ಳುಡಿದರಂತೆ ಮತಿಗಿಡುತ್ತುಂ, ವೈದ್ಯನಂತೆ ತಡವರಿಸುತ್ತುಂ, ಲತೆಯಂತಲ್ಲಾಡುತ್ತುಂ, ಕಣ್ಣೊಳ ಬಳಗಾಗೆ, ೧೬೦

ನಿಲಲಾಱದಲಸಿ ಪೋದೊಡೆ
ಪಲವುಂ ಚೆಂಬೊನ್ನ ಪಡಪು ಕೆಟ್ಟಪುದು ಕರಂ ।
ಕಲಿಯಾಗಿ ನಿಂದೆನಪ್ಪೊಡೆ
ನಿಲಲಾಱದು ನೀರ ದೆಸೆಯನುಱುದಸುವಿನಿಸುಂ॥ ೧೬೧

ಎಂದೆರಕಕ್ಕೆ ಬಿಟ್ಟ ಕರುವಿನಂತೆ ಮೆಱುಗುತ್ತುಂ[ಇರ್ದು ಮತ್ತಂ ದಯಾಮಿತ್ರಸೆಟ್ಟಿ ನಿಱಸೆ ಮನೆಗೆ ಪೋಗಿ ಮನದ ಕಾಂಕ್ಷೆಯಿಂ ಮುನ್ನಿ

---

1 ಜಿನುಗುತ್ತುಂ (ಗ) ಪನುಗೂಸಿನಂತೆತೆವಳುತ್ತುಂ (ಗ)

ನಂತುಂಡು ಮುನ್ನಿನ ನುಱುಕದಿಂದಿನ್ಮಡಿ ಮಱುಕಮಾಗೆ ಮಱುದಿವಸಂ] ಭಕ್ಷ್ಯದ ದೆಸಗೆ ಪಕ್ಷಂಗಟ್ಟು, ಪಾಲಿಂಗೆ ಬೆರ್ಚಿ [1] ತುಪ್ಪಕ್ಕಿನಿಸ ಪ್ಪೊಡಂ ಮನಂದರಲಾಱದೆ [ತೃಷೆಯೊಳಾದ ಭೀತಿಯಿಂದೊಲ್ಲೆನೆಂಬುದುಂ ವೈಶ್ಯನಂಕಲಲಾಮಸಿಂತೆಂದಂ :— ೧೬೨

ಅಂತಿತೆನ್ನದೆ ಮುಂಪೇ
ಳಿಂತುಸಿರದೆ ಮೋನದಿಂದಮುಣ್ಬುದು ನಾನೇ ।
ನಂ ತಂದಿಕ್ಕಿದೊಡಂ ಗುಣ
ವಂತರ್ಕುಲದೊಡೆಯುರೆಸಪ ನಿಮಗಿದು ಪಿರಿದೇ ॥ ೧೬೩

ಅಱುಸರಪ್ಪ ರಿಸಿಯುರ್ವೊದಲಾಗಿಯುಸಿರದೆಮ್ಮ ಪೇಳ್ದಿಂತೆ ಮೋನದಿಂದುಂಬರೆಂದೊಡೆ, ಕುಲಜರುಂ ಭೂದೇವರುಮೆಪ್ಪ ನಿಮಗಿದಾವುದರಿವಾಯುಸಿರದಿರಿಪೆಂಬುದುಂ ಮಱುಮಾತುಗುಡಲಱಿಯದುಮ್ಮಳಿಸಿ ಬೆಮರ್ತುಸಿರದುಣ್ತುಮೊಮಾರ್ಗದಿಂದೇ ಪೋಪುದಿನಿಸಮಿರ್ದರಲಾಱದೆ ತಲ್ಲಣಿಸಿ] ನಿಂದುಣಿಸಿನಂವಕ್ಕಲಸಿ " ಕಯ್ಯೊಳ್ಳಂಬುದು ರಯ್ಯಮೆಲ್ಲವು , ಬತ್ತಲೆಯಿರವು [2] ನಿತ್ತರಿಸಲರಿವು , ನೆಲೆವಕ್ಕೆ ಸಲೆಕಪ್ಪಂ " ಎಂದು ಸೈರಣೆಗಟ್ಟು, ೧೬೪

[ನಸುಗುನ್ನಿ ಮುಟ್ಟದಂತಿರೆ
ಬಸವೆಲ್ಲದೆ ತಿಂಬ ವೆಯ್ಯ ತಿನಿಸಿಂಗಂ ಸೈ ।
ರಿಸಲಾಱದೆರಡುಕಯ್ಯಿಂ
ಮಸಗಿ ಮನಂಗೆಟ್ಟು ಮರುಳವೊಲ್ತುಱಿಸುತ್ತುಂ ॥] ೧೬೫

ಕುಂದದಿನಿಸಂ ಮನಕೆ ಬಂದುಣಿಸನುಂಡು ಪದ
ಪಿಂದೆ ಪೆಱತೇಂ ಕೆಜ್ಜೆಗೆ ಪೊಂಗಿ ತಿಳಿನೀರಂ ।
ಮಿಂದು ಬಿಡದೂರೊಳಗಣೊಂದುಲಿವ ಮೊತುಗಳ
ದಂದುಗದೊಳಾರ್ತಿಸಗಿ ಕೂರ್ತಿರದೆ ನಿಚ್ಚಂ ॥ ೧೬೬

[1] ಸಾಲೆ (ಗ) [2] ನಿರ್ಗ್ರಂಥರವು (ಕ. ಟಿ.)

ನಿಂದುಣಿಸಿನಿಂದೊಡಲದೊಂದುತಿನಿಸಿಂ ತೃಪೆಯ
ದೊಂದುಕುದಿಪಿಂ ತಿಗುಳನಾಡ ಸೆಱೆಯಂ ತಾ।
ನೊಂದಿದತಿ [1] ದುಃಖದೊಳ ಬೆಂದು ನಿಲಲಿನ್ನರಿದಿ
ದೆಂದು ವಸುಭೂತಿ [2] ಸೆಡೆದಳ್ಕ ಬಡವಾದಂ ॥ ೧೬೩

[ಅಂತು ಬೆಗಡುಗೊಂಡು ನಿಲಲುಂ ನಿತ್ತರಿಸಲುಮೊಱದೆ] ಗಾಳಿ ಗೊಡ್ಡಿದ ಸೊಡರಂತೆ ನಡುಗಿ, [3] ಸೂಳೆಯ ಕೊರಳಂತೆ ಕಗಿರ್, ಪಿಡಿ ವೆತ್ತ ಕಳ್ಳನಂತೆ ತಲ್ಲಣಿಸಿ, ಬಡಿವೆತ್ತ [ಬಡವ] ನಂತೆ ಶಕ್ತಿಗೆಟ್ಟು, ಮಟದ ಬೆಕ್ಕಿನಂತೊಳಗಣ್ಗೊರ್ಮೆಯಾಡಿ, ಪಟದ ಸೀರೆಯಂತಲ್ಲಾಡಿ, ಬಲ್ಲದ ಪೆಂಡತಿಯಂತೆ ಸುಯ್ದು, ಮೆಲ್ಲರೊಳೊಡರ್ದರಂತೆ ತಳ್ಗಿ, ಗರ್ಭಿಣಿ ಯಾದ ರಂಡೆಯಂತೆ ಬಾಯಂ ಬಿಟ್ಟು, ಪರ್ವತವೇಱಿ ಬಿದ್ದರಂತೆ ನಿರ್ಜೀವನಾಗಿ, ಪಗಲ ಚಂದ್ರನಂತೆ ತೇಜಂಗೆಟ್ಟು ಜಗಳಗಂಟಿಯಂತೆ ಮಿಡುಮಿಡುಮಿಡುಕಿ, ಬೇಸಗೆಯ ಕೋಣನಂತೆ ನಾಲಗೆಯನುರ್ಚಿ, ಹಾಸುಗೊಂಡ ನಾಯಂತೆ ಸಿಡಿಮಿಡಿಗೊಂಡು, ಕಿಚ್ಚು ತಗುಳ್ದ ಮರ ದಂತೆ ನಯಂಗೆಟ್ಟು, ನಚ್ಚುಗೆಟ್ಟ ಬಡವನಂತೆ ಬೆಂಬಿರ್ದು, ದೆಸೆಗೆಟ್ಟ ರಂತೆ ಚಿಂತಿಸಿ, ಸಿಸುಗೆಟ್ಟರಂತೆ ಮೆಱುಗಿ, ಹುಣಿಸೆಯ ಕಾಯಂ ತಿಂದ ರಂತೆ ಚಳಿತು, ಪಣ್ತ ಕಬ್ಬಿನಂತೆ ನೆಲನಂ ಪತ್ತಿ, ಸೆಱೆಸಿಕ್ಕಿದನಂತುಮ್ಮಳಿಸಿ, ನೆಱವಿಲ್ಲದನಂತೆ ಕುಂದಿ, ಕೂರ್ಪರನಗಲ್ದರಂತೆ ಬೆದೆಬೆದೆಬೆಂದು, ಸರ್ಪನಂ ಮೆಟ್ಟಿದರಂತೆ ಭಯಂಗೊಂಡು, ಒಂಧನಕ್ಕೆ ಬಂದಾನೆಯಂತೆ ಜೂಕರಿಸಿ, ಬಡವೊಡಲಂತೆ ಜೋಲ್ದು, ಏರ್ವಡೆದ ಪಂದೆಯಂತೆ ತಲ್ಲ ಣಿಸಿ, ಮೊಱುವಡೆಯದ ಪರದನಂತೆ ಕಂದಿ, ತಣ್ಪೇಱಿದ ಪಜೆಯಂತೆ ದನಿ ಪೊಱಮಡದೆ, ಮಣ್ಪತ್ತಿದ ಮೂಲಿಗನಂತೆ ದೂರಿಸಿ, ಬಯಲೊಳಿಕ್ಕಿದ ವಿಾನಂತೆ ಮಿಡುಕಿ, ತಳಾಱಿನಂತೆ ನಿದ್ರೆಗೆಟ್ಟು, ಸಮ್ಯಕ್ತ್ವ ಚೂಡಾಮಣಿಗಿಂತೆಂದಂ :— ೧೬೪

---

1 ತೋರೊಂದಿದತಿದುಃಖ (ಕ)

2 ದುಃಖದೊಳವಿಂದೆನಿಲಲಾಱದರಿದೆಂದು (ಬ.ಗ.)

3 ಗಾಳಿಯಂತೆನಡುಗಿ (ಬ)

ಪುಲಿಯು ವಿಾಸೆಯನಂಜದುಯ್ಯಲನಾಡಲಪ್ಪುದು ನಂಜನೆಂ
ಜಲಿಸಲಪ್ಪುದು ಸಿಂಹಮಂ ಪಿಡಿದೇಱಲಪ್ಪುದು ಕಿಚ್ಚಿನೊ ।
ಳ್ತೊಲಗದೊರ್ಮೆಯಿ ಪಾಯಲಪ್ಪುದು ಸೊಕ್ಕಿದಾನೆಗೆ ಸಂದು ಮಾ
ರ್ಮಲೆಯಲಪ್ಪುದು ನಿನ್ನ ನೋಂಪಿಗೆ ಗಂಡನಾವನೊ ಸೈರಿಸಂ ॥

[ತ್ರಿಸೆ ಮೆಯ್ಯ್ ತಿನಿಸು ನೆಱೆ ಸೈ
ರಿಸಬಾರದ ತಲೆಯನೋವು ಮತ್ತೆತ್ತಲ್ ಮುಂ ।
ವಿಸುಕದಿರವೆಂಬವಿನಿತುಂ
ಪುಸಿಯಲ್ಕೊಂದೊಂದೆ ಕಿಡಿಸಲಾಱವೆ ನರರಂ ॥] ೧೭೦

ಕೇಳೊಂದನೆ ಪೆಱುಗಣ ಪೋ
ದೇಱಿಂಟುಂದಿನಸಮೆಂಬವೆನಗುಮ್ಮಳದಿಂ ।
ದೇಱಿಂಟು ವರ್ಷಮಾದುವು
ಕೇಳೀ ದುಃಖಕ್ಕೆ ಸೈರಿಸಿರ್ಪವನಾವಂ ॥ ೧೭೧

ಪೇಱಿನ ಮೇಲೆ ಪಾಸಱೆ ಯೇಱಿನ ಮೇಲೆ ಬಡಿಗೋಲ ಕೊಲೆಯ ಮೇಲೆ ಕವರ್ತೆ ಯೆಂಬಂತೆ ಸಂತಾಪದ ಮೇಲೆ ಸಂತಾಪಮಂ ಮಾಟ್ಪಿ ನಿನ್ನ ನೋಂಪಿಯೆಂಬ ಗರಗಸಕ್ಕೆನ್ನ ಮೆಯ್ಯನೊಡ್ಡಲಾಱೆಂ ; ಮತ್ತ ವೊಂದೆರಡು ತಿಂಗಳ್ ವಿಶೇಷಮಾಗಿ ನೋಂತುಕೊಟ್ಪಪೆಂ, ಪಿರಿದಪ್ಪೆನ್ನು ಮ್ಮಳಿಕೆ ಪೋಪಂತು ನಿಮ್ಮಧ್ಯಹ್ನಂಬೆರಸು ಕೆಯ್ಗೆ ಪೋಗಿ ಮೆಯ್ಯಂ ಕರ್ಚಿಕೊಂಡೊರ್ಮೆಯಿರ್ಮೆ ನೀರಂ ಕುಡಿದು ನಿಮ್ಮ ಬೀಡಿನೊ ಳೊಂದೆರಡುಗಳಿಗೆ ಸುಱುದಾಡುವೆಂತು ಮಾಱಿಪ್ಪೆನೆ, ದಯಾವಿತ್ರಸೆಟ್ಟಿ ಬಾಯ ತಂಬುಲಂ ಸೂಸೆ ಕಳಕಳಿಸಿ ನಕ್ಕು, ೧೭೨

ಕಲಿತನದಿಂದಂ ಲೋಗರ್
ಪುಲಿಯಂ ಪಿಡಿದೊಡಮದೇಂ ಬಿಡೆಂಬರ್ತಾವೊಂ ।
ದಿಲಿಯಂ ಪಿಡಿದೊಡಮದು ಪೆ
ಱ್ಗುಲಿಯೆಂಬರ್ದುರ್ಜನರ್ಗೆ ತಾನಿದು ಸಹಜಂ ॥ ೧೭೩

[ಪಾಪಿಲ್ಲದೆಡೆಯೊಳ್ ಕಪ್ಪೆಗಳ್ ತಮ್ಮ ಗಜಜ್ಞೆ ಗಜ್ಞಾಗಿಪ್ಪುವು, ಪಾವು ಬರೆ ಗಜಜ್ಞಗೆಟ್ಟು ಸತ್ತಂತಿಪ್ಪುವು. ಅಂತೆ ಮಹಾಪರೀಷಹಂಗಳ್ ತಮ್ಮ ಮನಮುಂ ಕದಡದನ್ನಂ ಕುತ್ಸಿತರ್ ತಮ್ಮ ನೆಗಜ್ಞೆತ್ತಿಯೆ ಪಿರಿದೆಂದು ಪೊಂಗುತ್ತಿರ್ಪರ್, ಪರೀಷಹಂಗಳಡಸಿದಂದು ದೆಸೆಗೆಟ್ಟು ಬಾಯ್ಗಟ್ಟು ಮುಱುಗುತ್ತಿರ್ಪರ್,] ೧೭೪

ಕಡುಮೊರ್ಖರ್ತರ್ಮಿಚ್ಛೆಗೆ
ಪಿಡಿದುದೆ ಪಿರಿದೆಂಬರಣ್ಣ ಜಿನನಾರ್ಗದೊಳೇಂ ।
ನಡೆಯಲ್ ಬಕರ್ಗವೆಣ್ಣಂ ಬಾರದು
ಕಡಲೆಗಳಂ ತಿಂಬ ಪೊಗಱ್ ಕಳ್ಳಳೂಳುಂಟೇ ॥ ೧೭೫

ಇಂತು ನೆಗಜ್ಞಿಲ್ಕರಿದಾದುವುಂ ಫಲದೊಳ್ ಪಿರಿಯವುಮಪ್ಪ ಪನ್ನೆರಡು ತೆಱದ ತಪಮುಮುಂ[1] [ನಿಲಲುಂ ನಿತ್ತರಿಸಲುಂ ಬಾರದಿಪ್ಪ ತ್ತೆರಡು ಮಹಾಪರೀಷಹಂಗಳುಮುಂ, ವೋಕ್ಷನಿಶ್ರೇಣಿಗಿವು ಮೆಟ್ಟಿನಿಸಿರ್ಪತ್ತೆಂಟು ಮೂಲಗುಣಂಗಳುಮುಂ, ಮಹಾವ್ರತಕ್ಕಿವು ವಜ್ರಪ್ರಾಕಾರಮೆನಿಸಿ ನೆಗಜ್ಞಿವಡೆದ ಪಂಚಾಚಾರನುಮುಂ, ರತ್ನತ್ರಯಕ್ಕೆ ಕಾವಾಗಿ ಬಳಸಿದ ಕೋಂಟೆಯಿದೆನಿಸರ್ಪ ಪದಿಮೂಱು ಚಾರಿತ್ರಮುಮುಂ, ಸಕಲಗುಣಂಗಳಂಬ ರತ್ನಂಗಳ್ ಕರಂತಮೆನಿಸುವ ದಶಧರ್ಮಮುಮುಂ, ಬರ್ವಿಗಲಪ್ಪೊಡಂ ತಪ್ಪಲೀಯದೆ] ಮರಣಪರ್ಯಂತಂ [ಬೆಂಬೀಱದೆ ಲಸದೋಸರಿಸದಾಱೆನ್ನದೆ ಬೆಚ್ಚದೆ] ನಡೆಯಿಸುವ ಮಹರ್ಷಿಗಳ ಮನದ ಧೈರ್ಯಮುಂ ಬಣ್ಣಿಪನಾವನವಱೊಳ್ಕಿಱಿಯವೆಪ್ಪುಂದೆರಡು ಪರೀಷಹಂಗಳ್ಗೆ ಬೆಂಬಿರ್ದಿರಕ್ಕ ಬಾಯೆಂಬುದುಂ ವಸುಭೂತಿ ವಿಸ್ಮಯಂಬಟ್ಟು, ೧೭೬

ಅಳಪಿಂದಮಳಯು ಬರ್ದೆಗೆ
ಯಳಯಂ ಕುಡಿಯಿಸಿದರೆಂಬ ತೆಱದಿಂ ಮುನಿಸಂ ।

---

1 ಪಲವು ನೆಗಳ್ತೆಗಳಂ

ಕುಳಮುಮೆನಾನುರ್ಕಿಂದಂ
ಪಳಿದೊಡೆ ಮುನಿದೆನ್ನ ಸಿಟ್ಟನೆನ್ನೊಳ್ ಕಳವಂ ॥ ೧೭೬

ಕಟಕವಮಂ ಕಂಡಜ್ಜುನಿಯ ದವಂಗೆ ಪಳ್ಳಿ ಪಿರಿಯೂರಾಗಿ ತೋರ್ಪಂತೆ ಧೈರ್ಯಾನ್ವಿತರಪ್ಪ ಮಹರ್ಷಿಯರ ತಪೋಮಾರ್ಗ ಮನಱಿ ಮುದೆನಗೆ ಮ್ಮ[1] ಚಾರಿತ್ರಮೆ ಪಿರಿದಾಗಿರ್ದುದು ಸಾಜಮಾದೊಡಂ "ಪರದರೊಳ್ಳ ರುಳಿಲ್ಲ, ಸೂಳೆ ಸಾಧುವಲ್ಲ" ಎಂಬ ನಾಣ್ಣು ಡಿಯುಂಟಪ್ಪುದಱಿಂದೀತಂ ಮರುಳಲ್ಲಮಿತನ ಪಿಡಿದ ಧರ್ಮಮೆ ಧರ್ಮಮೆಂದು, ೧೭೪

ಆರುಮಿದಕ್ಕೆ ನಿತ್ತರಿಸಲಾಱರೆನಿಪ್ಪ ಪರೀಷಹಂಗಳಂ
ಸ್ಥೈರಣೆಯಿಂದೆ ಗೆಲ್ವ ಮುನಿಮುಖ್ಯರ ಸಾರ್ದ ಜಿನೇಂದ್ರಧರ್ಮಮಂ
ಸಾರಮೆನಿಪ್ಪುದಂ ತಿಳಿದು ನಂಬಿದರನ್ಯರನೇಕ ಪೊರ್ದುವರ್
ಮೇರುವನೇಱಿ ನೋಡ್ದಿದವರ್ಗೀಧರೆ ತಾಂ ಕಿಱುದಾಗಿ ತೋರದೇ ॥೧೭೫

[2] [ಎಂದು ತನ್ನೊಳ ವಿಚಾರಿಸಿ ವಾತ್ಸಲ್ಯಾತಪ್ತಾಕರಂಗೆ ಕೈಗಳಂ ಮುಗಿದು ನಿಮ್ಮ ಪಿಡಿದ ಧರ್ಮಮ ಲೇಸೆಂಬುದನೀಗಳಱಿದೆಂ ನೀನೆ ನಗೆ ಧರ್ಮದೊಳಾದಭಿಪ್ರಾಯಮೆನಱಿಯೆ ಪೇೞಲ್ವೇಕ್ಕೆಂಬುದುಂ ಸೆಟ್ಟಿಯಿಂತೆಂದಂ:—] ೧೪೦

ಪರಮಾರ್ಥಮೆಸ್ಪುದಂ ಮ
ಚ ರಿಸದೆ ಕೋಪಿಸದೆ ಡಂಗೆಗೊಳ್ಳಿದೆ ಪಹ್ಳ ।
ಕ್ಕರಿದೇಳದೊಂದೆಮನದಿಂ
ನಿರುತಂ ಕೇಳ್ವಾನೆ ಧರ್ಮದೊಳಗಂ ತಿಳಿಗುಂ ॥ ೧೪೧

[ಕನ್ನಡಿಯಂ ನೋಡುವವೆಂ
ತನ್ನಯ[3] ಪೆಱಗಣ್ಗೆ ಕಾಣಲಾರ್ಪನೆ ರೂಪಂ ।

---

1 ಅನ್ಯರ ಚರಿತ್ರವೆ ಪಿಱಿದಾಗಿ ತೋರದೆ ತಾಂ ಪರದರೊಳ್ (ಕ)

2 ಸೆಟ್ಟಿಗೆ ಕೈಮುಗಿದು ನೀವು ಧರ್ಮಮಂ ಬೆಸಸಿವೆಂಬುದುವೆಮ್ಮ ಧರ್ಮವೆನಂತು ಪೇೞುವನೆಂದು ಮಿಲ್ಲಸಿಂತೆಂದಂ (ಗ) 3 ತನ್ನಂ, (ಕ.ಬ)

ಮುನ್ನಮೆ ಬಿಟ್ಟಿದೊಳಿರ್ಪುವೆವಂ
ಸನ್ನುತಸದ್ಧರ್ಮಮಪ್ಪುದಂ ತಾನಱಿಯಂ ॥] ೧೪೦

ಬನಲಿಯಂತೆ ಪೊಲ್ಲಮೆಯಂ ಪಿಡಿಯದೆ, ಕೋಣನಂತೆ ಕದಡದೆ, ಬಕನಂತೆ ಧೂರ್ತನಾಗದೆ, ನರಿಯಂತೊಡನೊಡನೊಡಬಿದೆ, ಜಡನಂತವಿಚಾರಿಯಾಗದೆ, ಪಾಣ್ಬಿಯಂತೆ ಮತ್ತೊಂದು ಮನಮಾಗದೆ, ನಪುಂಸಕನಂತೆರಡಕ್ಕಾಸೆಗೆಯ್ಯದೆ, ಗಿಳಿಯಂತೆ ಪಲವಂ ಗಳಪದೆ, ಸವತಿಯಂತೆ ಪುರುಡಿಸದೆ, ಪುಲಿಯಂತೆ ಮೇಲ್ವಾಯದೆ, ಪೆಱಿಯಂತೆ ವಕ್ರನಾಗದೆ, [1] ಸಿಡಿಲಂತೆ ಭಯಮಂದೋಱಿದೆ, ಲಂಜೆಗಾಱಿನಂತೆ ನುಡಿಗೆಡಿಸದೆ, [ವಿಕಚಿತ್ತದಿಂ] ಕೇಳ್ವರಪ್ಪೊಡೆ ಪೇೞ್ದಪೆನೆಂಬುದುಂ, [2] ವೆಸುಭೂತಿ ನಿಮ್ಮ ಬೆಸಸಿದಂತೆ ಪೆಱಿತು ಭಾವನೆಯಿಲ್ಲದೊಂದೆಬುದ್ಧಿಯಿಂ ಕೇಳ್ದಪೆನೆಂಬುದುಂ, ಸುಖಕ್ಕಾಗರಮೆನಿಸುವ ಸದ್ಧರ್ಮಮಂ ಸಟ್ಟಿಯಿಂತೆಂದು ಪೇೞ್ದಂ ॥ ೧೪೩

ನೆರೆದೆಲ್ಲರ್ ಕಳ್ಗುಡಿಯು
ತ್ತಿರೆ ಬಡವರ್ಗಲ್ಲಿ ಧರ್ಮಗಳ್ಕಂದೆಱಿವರ್ ।
ಧರೆಯೊಳಗದುವಂ ಧರ್ಮಮೆ
ನಿರುತಂ ಪೇೞಣ್ಣ ನೀನೆ ಭಾವಿಸಿ ಮನದೊಳ್ ॥ ೧೪೪

ಪರವನಿತೆಗೋತು ಸೈರಿಸ
ಲರಿದಾಗಿಂಬಾಗಿ ತೋರ್ಪ ಧರ್ಮಂ ನಿನಗ ।
ಕ್ಕೈರಡಿಲ್ಲದೆಂದು ನಂಬಿಸಿ
ನೆರೆವರ್ಸದ್ಧರ್ಮಮಪ್ಪುದೇ ಕೇಳದುವುಂ ॥ ೧೪೫

ಬಸಮೆಲ್ಲದ ರುಚಿಯಂ ಸೈ
ರಿಸಲಾಱದೆ [3] ಧರ್ಮಮಣ್ಣ ಕೊಲ್ಲೆನೆ ದಯೆಯಿಂ ।

---

1 ಮೇದನಂತೆ ಸೀಳತ್ತದೆ (ಗ)

2 ನೀವೆಂದಂತೆ ಕೇಳ್ದಪೆಂ ಬೆಸಸಿವೆ ನೆ ಸಟ್ಟಿಯಿಂತೆಂದಂ (ಗ)

3 ರುಚಿಯಿಂ ಜೀವಿಸಲಾರದೆ (ಕ.. ಬ)

ನೆಸುಮತಿಯೊಳಿರದುವುಂ
ಮಿಸುಗುವ ಸದ್ಧರ್ಮವೆಂದು ನಂಬುವುದೆ ಬುಧಂ ॥ ೧೪೬

[ಧರೆಯೊಳ್ ಕಳವುಂ ಕೊಲೆಯುಂ ಪ್ರಸಿದ್ಧ ಪಾಪಂಗಳಾಗಿರ್ದುಂ] ಕವರ್ದು ತಂದ ಧನಮುಮಂ [ಬೇಂಟೆಯೊಳ್] ಕೊಂದು ತಂದಡಗುಮಂ ತವ್ಮೊಳ್ ಧರ್ಮದಿಂ ಪಚ್ಚಿಕೊಡಿವೆಂಬರದುವುಂ ಧರ್ಮಮುಕ್ಕುಮೆ, ೧೪೭

ಅರಸೆಂಬ ಪೆಸರ್ ಪಗರಣ
ದರಸಂಗಂ ಧಾರಿಣೀಶ್ವರಂಗಂ ಕರಮ್ಮಾ । ೧೪೮
ದರದಿಂದಮೆಕ್ಕುಮನಿತಱೊ
ಳರಸನದೊಂದಾಜ್ಞೆ ಬಗೆವೊಡಾತಂಗುಂಟೇ ॥ ೧೪೯

[1] [ಪಿಟ್ಟೆಂಬ ಪೆಸರಿ ಕಳವೆಮು
ಪಿಟ್ಟಿಂಗಂ ಭೂತಳಾಗ್ರದೊಳ್ಬ್ಬವಿಸೆ ಬೆಳ್ । ೧೫೦
ವಿಟ್ಟಂಗನುಕ್ಕುಮೊದೊಡೆ
ಪಿಟ್ಟನೊಳಿಪ್ಪೊಂದುರುಚಿಯುನದು ತಳದಪ್ಪುದೇ ॥ ೧೪೯

ಕಬ್ಬೆಂಬಭಿಧಾನಂ ಕಾ
ಬ್ಬಿಗಂ ನೆಗಚ್ಚಿ ಮೆಲ್ವ ಕಬ್ಬಿಂಗಂ ಕೇ । ೧೫೧
ಳುರ್ಬರೆಯೊಳಕ್ಕುಮೊದೊಡೆ
ಕಬ್ಬಿನೊಳುಂಟೂದ ರುಚಿಯನದು ತಳದಪ್ಪುದೇ ॥ ೧೪೦

ಪೊನ್ನೆಂಬ ಪೆಸರೆ ಕನಕ
ಕ್ಕನ್ನಯದಿಂ ಮೆದ್ದುಗುಣಿಕೆಗಂ ಸಮನಕ್ಕುಂ । ೧೫೨
ಪೊನ್ನೆಲ್ಲಿಗಮೆಸೆವಂತಿರೆ
ತಾನ್ನೆಱೆ ಸಂದಪ್ಪುದೆ ಮೆದ್ದುಗುಣಿಕೆಯುಮಿಳೆಯೊಳ್ ॥] ೧೪೧

---

1 ಕಳವೆಯ ಪಿಟ್ಟುವುಂ ಬೆಳ್ವಿಟ್ಟುವುಂ ಪಿಟ್ಟೆಂಬುರಾವಿನತುಪ್ಪುವುಮುಂ ಕೆಂರತುಪ್ಪುವುಮುಂ ತುಪ್ಪವೆಂಬುದೆ ಪಾಪಿಗಳ್ಗಂ ಕುತ್ಸಿತಧರ್ಮವು ಧರ್ಮವಾಗಿ ತೋಱ್ಕುಮದು ಧರ್ಮವಲ್ಲದು (ಗ)

ಪಾಲೆಂಬ ನಾಮವೊವಿನ
ಪಾಲಿಂಗಂ ನಾಯುವಟದ ಕಳ್ಳಯೊಳಾದಾ ।
ಪಾಲಿಂಗಮಕ್ಕುಮಾದೊಡೆ
ಪಾಲೊಳ್ಪಂ ಸವಿಯುಮದಱೊಳೇಂ ಸಮನಿಕುಮೇ ॥ ೧೯೦

[ತುಪ್ಪಮೆಂಬ ಪೆಸರಾವಿನ ತುಪ್ಪಕ್ಕಂ ಗೇರ ತುಪ್ಪಕ್ಕಮುಂಟೆ ಪ್ಪೊಡಂ, ತುಪ್ಪದಂತಿನಿದಕ್ಕುಮೇ ? ಕುದುರೆಯೆಂಬ ಪೆಸರ್ ಬಿಸಿಲ್ಗು ದುರೆಗಂ ಜಾತ್ಯಶ್ವಕ್ಕಮುಂಟಾವನಿತಱೊಳ್ ಕುದುರೆಯಂತಕ್ಕುಮೇ, ಧರ್ಮಮೆಂಬ ಪೆಸರ್ ಸದ್ಧರ್ಮಕ್ಕಂ ಕುಧರ್ಮಕ್ಕಂ ಸಮನಿಸುಗುಮೆನಿ ತಱೊಳ್ ಸದ್ಧರ್ಮದೊಳಾದೈಶ್ವರ್ಯಮಂ ಪಡೆಯಲಾರ್ಕುಮೇ ಪಡೆಯು ಕೂಡದದುಕಾರಣದಿಂ ॥ ೧೯೧

ರಸಮಂ ಪೊರ್ದಿ ಸಮಂತು ಲೋಹನಿಕರಂ ಪೊನ್ನಪ್ಪವೋಲುರ್ವಿಯೊಳ್ ರಸಮೆಂಬೀ ಪೆಸರಿಂಗೆ ಕೇರ ರಸದೊಳ್ ಪೊನ್ನಕ್ಕುಮೇ ನೋಡ ಪೊರ್ದಿಸಿ ಸದ್ಧರ್ಮಮನೇನು ನಂಬಿ ಸುಖಮಪ್ಪಂತಣ್ಣಾ ನೀಂ ನೋಡ ಭಾವಿಸಿ ಪೊರ್ದಿರ್ದೊಡೆ ಕೊಲ್ವಧರ್ಮದೊಳದೇಂ ಕೈಸಾರ್ಗುಮೇ ತತ್ಸುಖಂ

ಮರುಳ ಪಯಣಕ್ಕೆ ತಱೆಲೆಯೆ ಸಂಗಡಿಗನೆಂಬಂತೆ ಪಾಪಿಯಪ್ಪಂಗೆ ಕುತ್ಸಿತಧರ್ಮಮೆ ಸದ್ಧರ್ಮಮಾಗಿ ತೋರ್ಕುಂ ॥] ೧೯೨

ಎಲ್ಲೆಲ್ಲ ಸುಖಂಗಳೊಳಂ
ನಿಲ್ಲದೆ ನೆರೆದಿರ್ಪೆನೆಂಬ ನೆನವುಳ್ಳೊಡೆ ತ ।
ಳ್ಪಿಲ್ಲದೆ ಪಿರಿದಾದರದಿಂ
ಕೊಲ್ಲದ ಧರ್ಮಮನೆ ಪಿಡಿಗೆ ನಂಬುಗೆಯಿಂದಂ ॥ ೧೯೩

ಆ ಕೊಲ್ಲದ ಧರ್ಮಂ ಜೈನಾಗಮದೊಳಲ್ಲದಱಿಯಲ್ಬಾರದಾ ಪರಮಾಗಮಮುಂ [1] ನಿರ್ದೋಷಿಯಪ್ಪ ಪರಮಾತ್ಮನ ಮುಖಕಮಲದಿಂದಲ್ಲದೆ ಪೊಱಮಡದಾದೇವನೆಂತಪ್ಪನೆಂದೊಡೆ:— ೧೯೪

1 ಪೂರ್ವಾಪರವಿರುದ್ಧವಲ್ಲದ ಪರಮಾಗಮದೊಳಲ್ಲದಱಿಯಲ್ಬಾರದು ಮುಕ್ತಿಶ್ರೀಯು ತವರ್ಮನೆಯೆನಿಸುವ ಆ ಪರಮಾಗಮಮುಂ (ಕ)

ನುರಣಂ ಚಿಂತೆ ಭಯಂ ಮದಂ ಮುಳಿಸು ವೋಹಂ ಖೇದ ರೋಗಂ ಬೆಮ
ರ್ದಿರೆ ನೀರಜಿಕ್ಕ ವಿಷಾದಮೊಟ ಜನನಂ ಲೋಭಂ ಮಹಾವಿಸ್ಮಯಂ
ಸ್ಮರಬಾಣಾಹತಿ ನಿದ್ರೆಯೆಂಬಿವಿನಿತಂ ಗೆಲ್ದಾತನೇ ತಾಂ ಜಿನೇ
ಶ್ವರನಿಂದ್ಯಾರ್ಚಿತಪಾದನಾತನೆ ವಲಂ ಸೌಖ್ಯಕ್ಕೆ ತಾಂ ಕಾರಣಂ॥೧೯೪

ಆ ಪರಮೇಶ್ವರನನಱಿವರೆತ್ತಾನುಮೊರ್ವರಪ್ಪರದೆಂತೆನೆ:- ೧೯೫

ಕಕ್ಕಿನ ಪವಳದ ಮಣಿಗಳ
ನಿಕ್ಕುವವರ್ಪಲರೊ ಮುತ್ತಿನ್ಸೆಸರಮುಂ ಕೇ ।
ಳಿಕ್ಕುವವರ್ಪಲರೊ ಕರಂ
[1] ನಿಕ್ಕುವಮಾರೈದು ನೋಱಿಪ್ಪೊಡವೆನೀತಳದೊಳ್ ॥ ೨೦೦

[2] ನಿಕ್ಕುವದಿಂ ತಾಳೋಲೆಯ
ನಿಕ್ಕುವವರ್ಪಲರೊ ನೋಡ ಪೊನ್ನೊಲೆಯನಂ ।
ತಿಕ್ಕುವವರ್ಪಲರೊ ಮನ
ಕ್ಕುಕ್ಕೆವೆಮಂ ಪೊರ್ದಲೀಯದಿದನಾರಯ್ವೀಂ ॥ ೨೦೧

ವರರತ್ನ ಮನಱಿವವರು
ರ್ವರೆಯೊಳ್ಕಲ್ಲುಮಂ ಪುಲ್ಲುಮೆನು ।
ರ್ವರೆಯೊಳಱಿವವನೇಕರೊ
ಪರಿಕಿಸಿ ನೋಡಣ್ಣ ನಿನ್ನ ಮನದೊಳ್ ನಯದಿಂ ॥ ೨೦೨

ಮರನನಱಿವಂತು ಬಲ್ಲರೆ
ಸಿರಿಖಂಡವನಣ ಪಗಿನನಱಿವಂತಿರೆ ಕ ।
ರ್ಪುರಮಂ ಬಲ್ಲರೆ ಕುತ್ಸಿತ
ಸುರರಂ ನರರಱಿವ ತೆಱದಿನಱಿವರೆ ಜಿನನಂ ॥ ೨೦೩

[ಅದಱಿಂಸು]ವಸ್ತುವನಱಿವರುಂ ಸುವಸ್ತುವಂ ಕೊಡುವವರುಂ ಕೆಲಂಬರ್; ಕುವಸ್ತುವನಱಿವರುಂ ಕುವಸ್ತುವಂ ಕೊಡುವವರುಂ ಪಲಂ

[1] ನಿಕ್ಕಿದನಾರೈದು (ಕ) [2] ಬಕ್ಕುದಿಯಿಂತಾಳೋಲೆ(ಗ)

ಬುದೊಡಂ [ಸುವೆಸ್ತು] ವೆಸ್ತುಪರೀಕ್ಷೆಕರಿಂದಲ್ಲದಱಿಯಲ್ಬಾರದು,[1] ಕು
ವೆಸ್ತುವಾದೊಡೆ ಹಲಧರಗೋಪಾಲಾದಿಗಳಱಿತಕ್ಕೊಳಗಾದುದಱಿಂ [2] ಸ
ರ್ವಜ್ಞನುಂ ಸುವೆಸ್ತುವಪ್ಪುದಱಿಂ ವೆಸ್ತು ಪುರುಷಗರ್ಹಲ್ಲದಱಿಯಲ್ಬಾರದು

[3] ಪರಮೊಾರ್ಥಂ ನಿರ್ದೋಷಿಯೆ
ಪರಮೇಶ್ವರನಾತನೆಂದುದಾಗಮಮೆಂತಾ ।
ಪರಮೊಾಗಮದರ್ಥಂ ವಿ
ಸ್ತರದಿಂದಂ ತತ್ವಮೆಂಬ ನಂಬುಗೆಯೆ ವಲಂ ॥ ೧೦೫

ಸಮ್ಯೊಕ್ತ್ವಮೊಾಸಮ್ಯೊಕ್ತ್ವವೇಗೆಯುಂದಂ ದೊರೆಕೊಳ್ಳದದು ಪುಣ್ಯಾ
ದಿಂ ದೊರೆಕೊಂಡುದಪ್ಪೊಡನಂತಸುಖದೊಳ್ಕೊಡುಗುಮೆಂದು ವಣಿಗ್ವಂ
ಶಲಲಾಮಂ ಪೇೞ್ದ, ವಸುಭೂತಿ [ಕೇಳ್ದು] ತಾಗಿ ಬಾಗಿದನಂತೆ
[ಮುನ್ನಿನ] ದರ್ಪಂಗೆಟ್ಟು ಕದಡಿ ತಿಳಿದ ನೀರಂತೆ [ಮನದೊಳ್]
ನಿರ್ಮಳನಾಗಿ ಸಮ್ಯಗ್ದರ್ಶನಂ ದೊರೆಕೊಂಡುದಕ್ಕೆ [4] [ಮನದೊ
ಳಾನಂದಂಬೆತ್ತು ಸಮ್ಯಕ್ತ್ವಚೂಡಾಮಣಿಯುಂ ನಾನಾವಿಧದಿಂ ಪೊಗೞ್ದು
ದರ್ಶನದೊಳ್ ದೃಢನಾಗಿರ್ದನನ್ನೆಗಮಿಭ್ಯಾನ್ವಯಪವಿತ್ರಂ ಮೆಱೆದಿ
ವೆಸಂ ಬೀಡನೆತ್ತಿ ಕತಿಪಯಪಯಣಂಬೋಗಿ ನಂದ್ಯಾವಲಿಯೆಂಬ ಪೇರ
ಡವಿಯೊಳ್ ಬೀಡಂ ಬಿಡುವ್ರದುಂ, ೧೦೬

ನೆರೆದು ವನಚರರುವೊರ್ಮೆಯೆ
ಭರವೆಶದಿಂ ತಾಗೆ ಸೆಟ್ಟಿ ಪಿರಿವಗ್ಪ ಬಲಂ ।
ಬೆರಸಿದಿರನದಿರದಣ್ಮಿಂ
ಕರಿಯೊಡ್ಡಂ ಸಿಂಹದೊಡ್ಡು ತಾಗುವ ತೆಱದಿಂ ॥ ೧೦೭

---

1 ಪರೀಕ್ಷೆಯಿಂದಲ್ಲದರಿಯಲ್ 2 ಕುವಸ್ತುಗಳೋಪಾದಿಅರಿತಕ್ಕೊಳಗಾ
ಗ್ದದು (ಗ) 3 ಅದಱಿಂನಿರ್ದೋಷಿಯೆ ದೇವನಾತನೆಂದುದಾಗಮಂ ಆ ಪರಮಾ
ಗಮನುದರ್ಥಮಿ ತತ್ವಮೆಂದು ನಂಬುವುದುಂ ಸಮ್ಯಕ್ತ್ವಂ. (ಗ)
4 ದರ್ಶನರತ್ನಂ ದೊರೆಕೊಂಡುದಕ್ಕೆ. (ಕ)

ತಾಗಿ ಕಿಚ್ಚುಂ ಕಿಡಿಯುಮೊಗಿ ಕಾದುತ್ತುಮಿರೆ]
1 ದೂರದೊಳಿರ್ದ ವಸುಭೂತಿಯುಂ, ೦೦೪

ಅಂಬರಿಗುಮೊಯುತಪ್ಪಿದೊ
ಡೆಂಬೀ ನಾಣ್ಣುಡಿಯನಲ್ಲಿ ಪುಸಿಮೊಡದೆ ಕೂ ।
ರಂಬೊಂದು ಬಂದು ನಡೆ ನೋ
ವಿಂ ಬಿಟ್ಟಂ ಸಾವೆ ಪೊತ್ತನಾವಂ ಬಲ್ಲಂ ॥ ೦೦೫

[ಅಂತು ಬೀಱುವ್ವದುಮತ್ತಮುಬ್ಬಿರ್ದ ಬೇಡರ ಗರ್ವದಗುರ್ವಂ ಕೆಡಿಸಿ ಕಾಳಗಮುಂ ಗೆಲ್ದು ಬೀಡಂ ಪೊಕ್ಕು ನೊಂದಿರ್ದ ವಸುಭೂತಿಯುಂ ಕಂಡು ಧರ್ಮಪಹ್ಹಪಾತದಿಂದೇಱು ಪಿರಿದಪ್ಪುದಱಿಂ] 2 ಸನ್ಯಸನಮುಂ ಕೊಟ್ಟು ಪಂಚನಮಸ್ಕಾರಮುಂ ಪೇಱುತ್ತಿರ್ಪುದುಂ, [ಮತ್ತೆನಿಸದೆ ತನಗೆ ಜಿನನೆ ದೈವಮೆಂಬ] 3 ಭಾವನೆಯಿಂ ವಸುಭೂತಿ [ದಯಾಮೂಲಮಪ್ಪ ಧರ್ಮಮುಂ ನೆನೆಯುತ್ತೆ ಮುಡಿಪಿದರ್ಶನಫಲದಿಂ ಸೌಧರ್ಮ ಕಲ್ಪದೊಳ್ ಮಣಿಪ್ರಭಾವಿಮಾನದೊಳ್ ಮಣಿಕುಂಡಲನೆಂಬ ದೇವನ 4 ನಾಗಿ [ಪುಟ್ಟುವುದುಂ, ೦೧೦

ಇದು ನಿನ್ನಿರ್ದ ಮಹಾಪ್ರಭೋರ್ಜಿತವಿಮಾನಂ ನೂತ್ನ ಲಾವಣ್ಯದಿಂ
ದೊದವಿರ್ದೀ ದಿವಿಜಾಂಗನಾಸಮಿತಿ ಪೆಂಪಿಂ ನಿನ್ನ ಕಾಂತಾಜನಂ ।
ಮುದದಿಂದೀ ವಿಬುಧಾಳಿ ನಿನ್ನ ಪರಿವಾರಂ ದೇವ ಕೈಕೊಂಡು ಕಾ
ವುದು ನೀನೆಂದು ಸುರಾಳಿ ಬಿನ್ನವಿಸೆ ತದ್ದೇವಂ ಮಹಾಚೋದ್ಯದಿಂ॥ ೦೧೧

ಆನಾರೀಲೋಕಮಾವುದೀ ಕೇಳಿಸುತ್ತಿರ್ದ ಪರಿಜನಮಾರೆಂದು ಕುಱುಂಬನರಸುಗಂಡಂತೆ ನೋಡುತ್ತುಮಿರ್ಪನ್ನೆಗಂ ಭವಪ್ರತ್ಯಯ

---

1 ರಾಗಿಸಿ ವಾತ್ಸಲ್ಯರಶ್ಮಾಕರನಂ ಪಲವು ತೆರದಿಂ ಪೊಗಳ್ದು ಸನ್ಯಕ್ತ್ವ ದೊಳ್ ಧೃಢನಾಗಿರ್ದನನ್ನೆಗಂ ಸೆಟ್ಟಿ ಮರುದಿವಸಂ ಬೇಡನೆತ್ತಿಸಿ ನಂದ್ಯಾವಲಿಯೆಂಬ ಅಡವಿಯೊಳ್ ಬಿಡುವುದುಂ ಬೇಡರ್ ಬೀಸಂ ಪತ್ತಿ ಕಾದುತ್ತಿರ್ಪಲ್ಲಿ (ಗ)

2 ಸೆಟ್ಟಿ ಬೇಡರೊತ್ತಿಂ ಗೆಲ್ದು ಬಂದು ನೊಂದಿರ್ದ ವಸುಭೂತಿಗೆ ಧರ್ಮವಾ ತ್ಸಲ್ಯದಿಂ. (ಗ) 3 ಶುಭಭಾವನೆ. (ಗ) 4 ಸಾಗರಸಿಕದೇವ. (ಗ).

ಜ್ಞಾನಂ ಪುಟ್ಟೆ ತಜ್ಜ್ಞಾನದಿಂ ಪೆಱಗಣ] [1] ಭವಮನಱಿದು ಬೆಱಗಾಗಿ, ೞ೧೦

ಆನೆತ್ತ ದೇವಲೋಕದ
ನೂನಸುಖಾಸ್ಪದಮಿದೆತ್ತ ಬಗೆವೊಡಿದೆಲ್ಲಂ ।
ಮೌನಿತದರ್ಶನದಿಂದಂ
ತಾನಾದುದು ಭಾಸ್ವದರ್ಶನಂ ಕೇವಳಮೇ ॥ ೞ೧೩

ಪುಸಿದೆನ್ನಂ ಪೊನ್ನಿಂ ಬಂ
ಚಿಸಿ [2] ವೈಶ್ಯನುಪಾಯದಿಂದೆ ದರ್ಶನಮಂ ಬ ।
ಣ್ಣಿಸೆ ನಂಬಿ ದೇವನಾದೆಂ
ವಸುಧೆಗೆ ಸಮ್ಯಕ್ತ್ವಮುಳ್ಳ ಮನುಜನೆ ದೇವಂ ॥ ೞ೧೪

ಆವಾವುಪಾಯದಿಂದಂ
ಜೀವಕ್ಕೊಕ್ಕರಂತೆ ಧರ್ಮಮಂ ಪೇೞ್ದು ಸುಖ ।
ಕ್ಕಾವಗಮಯ್ದಿ ಪರದಱಿಂ
ಶ್ರಾವಕರಿಂ ರುಷಿಯರಿಂ ಕೃತಾರ್ಥರುವೊಳರೇ ॥ ೞ೧೫

ಎಂದು ಮಹಾವಿಭೂತಿಯಿಂ [ವಸುಭೂತಿಚರಾಮರಂ] ಬಂದು ದಯಾಮಿತ್ರಸೆಟ್ಟಿಗೆ ಪೊಡೆಮಟ್ಟು ನಿನ್ನ ಪ್ರಸಾದದಿಂದಾಂ ದೇವನಾದೆನೆಂದು ತನ್ನ ಮಹಿಮೆಯಂ ತೋಱಿ ದೇವಲೋಕಕ್ಕೆ ಪೋಗಿ [ಷೋಡಶಕಲ್ಪಂಗಳ ನಂದೀಶ್ವರದ್ವೀಪದ ಮೇರುಗಿರಿಯು ಜ್ಯೋತಿರ್ಲೋಕದ ವ್ಯಂತರಲೋಕದ ಭವನಲೋಕದ ಮಣಿಕನಕಮಯಮಪ್ಪ ಕೃತ್ರಿಮಚೈತ್ಯಾಲಯಂಗಳಂ ದರ್ಶನವಿಶುದ್ಧಿಯಿಂದಿಂದ್ರಾದಿಪಂಚಕದೊಳ್ಪುಟ್ಟುವ ದೇವರುಮಂ ಕಂಡು ಬಲ್ಲಿತ್ತಂ ಕರ್ಬೊನ್ನೊಳ್ [3] ಕಟ್ಟಿಸಿದಂತೆ ಸಮ್ಯಕ್ತ್ವದೊಳ್ ದೃಢನಾಗಿ,] ೞ೧೬

ಎಲ್ಲಿ ಜಿನಭವನಮೊಳವಂ
ತಲ್ಲಿಯೆ ಮನದೆಱಕದೋಲಗಂ ಮುದದಿಂ ಮಿ ।

---

1 ಭವಪ್ರತ್ಯಯಜ್ಞಾನದಿಂ ಮುನ್ನಿನ. (ಗ)
2 ನಂಬಿಸಿ. (ಗ) 3 ಕಱ್ಬುನದೊಳ್ (ಕ) ಕರ್ಬೊಂನದೊಳ್ (ಬ)

ತ್ತಲ್ಲಿಯೆ ಭೋಗಂ ನೆಲೆಯುಮೆ
ದಲ್ಲಿಯೆ ರಾಗಂ [1] ಸುರಾಧಿಪಂಗತಿಶಯದಿಂ ॥ ೧೧೭

ಅಂತು ದೇವಲೋಕದ ಸುಖಮನೊಂದು [2] ಸಾಗರೋಪಮಕಾಲಮನನುಭವಿಸಿ ಬಂದಿಲ್ಲಿ ನಿನಗಂ ನಿನ್ನಗ್ರಮಹಿಷಿಗಂ ನಂದಶ್ರೀಗಮಭಯಕುಮಾರನಾಗಿ ಪುಟ್ಟಿ [ವನೆಧಿಯಂತೆ ಗಂಭೀರನುಂ, ದಿನಕರನಂತೆ ತೇಜಸ್ವಿಯುಂ, ಚಂದ್ರನಂತೆ ಸೌಮ್ಯನುಂ, ಮನೋಜನಂತೆ ಸುಭಗನುಂ, ಸಕಲಶಾಸ್ತ್ರಪ್ರವೀಣನುಂ, ಜಾಣನುಮಾಗಿ,] [3] ಪ್ರತ್ಯಹ್ನಮಿರ್ದಪಂ; ಮೇಲೀತನುಂ ಮಹಾಮಂಡಲಿಕರ್ ತಪಂಬಡುವರೆಂಬಾದೇಶಮಂ ಕೇಳ್ದು ತಪಂಬಟ್ಟು ಮುಡಿಪಿ ಸರ್ವಾರ್ಥಸಿದ್ಧಿಯೊಳ್ಪುಟ್ಟುವನೆಂದು ಗಣಧರಸ್ವಾಮಿಗಳ್ಪೇಳ್ವುದುಂ, ದರ್ಶನದೊಳಾದ [4] ಪ್ರತ್ಯಹ್ನಫಲಮಂ ಕಂಡು ನಂಬಿ, ೧೧೮

ಪಿರಿದುಂ ಸಂತೋಷದಿಂದಂ ತನಗೆ ಸಕಲಸಾಮ್ರಾಜ್ಯಮುಂ ಕೈಗೆವಂದಂತಿರೆ ಪೆರ್ಚಿರ್ದೊಂದು ಮುಯ್ಯಿಲ್ಲದೆ ನಲಿದನನಂಗಾಂತಕಂ ಶೀಲರತ್ನಾ

---

[1] ತಲ್ಲಿಯೆನೆಲೆಯಲ್ಲಿಯೆಪಡೆಪಲ್ಲಿಯೆರಾಗಂ (ಕ)

[2] ನೆರಡುಸಾಗರೋಪಮ(ಕ)

[3] ಸುಖಮನನುಭವಿಸುತ್ತಮಿರ್ದನಿರೆ,

ನಿನಗಂ ಪರಿಗ್ರಹಕ್ಕಂ
ಜನನಿಗಮುರ್ವೀತಳಕ್ಕಮಭಯನೊಳಾದಂ |
ದನವರತಂ ಸ್ನೇಹಂ ನೆ
ಟ್ಟನೆ ಬರಿದಾಗಿಕ್ಕುಮಿವನ ಪುಣ್ಯೋದಯದಿಂ ॥

ಈತನ ಗರ್ಭದೊಳ್ ನಂದನಶ್ರೀಗಮಭಯಪೋಷಣೆಯಂಮಾಳ್ಪ ಬಯಕೆ ತಿಣ್ಣವಾದೊಡೆ, ನೀನದಂ ತೀರ್ಚಿದಂ ಬಳಿಕ ಪೆತ್ತಳ್. ಆತಂ ದಯಾಮೂರ್ತಿಯಪ್ಪುದಱಿಂದಭಯಕುಮಾರನೆಂದು ಪೆಸರನಿಟ್ಟೊಡೀತನುಂ ಮಹಾಮಂಡಳಿಕನುಂತಪಂ..... · (ಕ)

[4] ಮುನೀಂದ್ರೋತ್ತಮಂ ಪೇಳೆ ಕೇಳ್ದು ಸಮ್ಯಕ್ತ್ವದೊಳಾದ (ಗ)

ಚರಣಂ ತ್ರೈವಿದ್ಯಚಕ್ರೇಶ್ವರನಿಮೇಳಪದಾಂಭೋಜಭೃಂಗಂ ಜಿನಶ್ರೀ
ಚರಣಾಲಂಕಾರಶೀರ್ಷಂ ಸುಕವಿಜನಮೆನಃಪದ್ಮಿನೀರಾಜಹಂಸಂ ॥೨೧೯

ಇದು ನಿಖಿಳದಿವಿಜಪರಿವೃಢಮುಕುಟತಟಘಟಿತಮಣಿಗಣನಿಕರವಿಲುಳಿತಕಿರಣ
ಚುಂಬಿನೀಯಪರಮಜಿನಚರಣಾಯುಗಳಸರಸೀರುಹಮತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರನುತಭಾವ
ಯುತದಿಗಂಬರದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧರ್ಮಾಮೃತದೊಳ್
ದರ್ಶನವ್ಯಾವರ್ಣನಂ 1
ಪ್ರಥಮಾಶ್ವಾಸಂ.

---

1 ದರ್ಶ ನಂಗವ್ಯಾವರ್ಣನಂ (ಗ)

ದ್ವಿತೀಯಾಶ್ವಾಸಂ

ಶ್ರೀಗಿದು ಮುಕುರಂ ಮುಕ್ತಿ
ಶ್ರೀಗಿದು ಲಾವಣ್ಯವೆನಿಪ ದರ್ಶನರತ್ನಂ ।
ಬೇಗಂ ದೊರೆಕೊಳ ಪಿರಿದುಂ
ರಾಗಿಸಿದಂ ಸುಕವಿನಿಕರಪಿಕಮಾಕಂದಂ ॥ ೧

ಅಂತನರ್ಘ್ಯನೆಪ್ಪ ದರ್ಶನರತ್ನಮಂ ಸಂಶಯಚೋರರ್ ಪುಗದಂತು ನಂಬುಗೆಯೆಂಬ ಬಲ್ಗಾಪನಿಕ್ಕ ಮನಮೆಂಬ ವಜ್ರದೋವರಿಯೊಳಿರಿಸಿ, ೨

[ಮಗಧಾವನೀಶ್ವರಂ ಕೈ
ಮುಗಿದುತ್ಸವದಿಂ ಮುನೀಂದ್ರವಂದ್ಯಕ್ರಮರಂ ।
ಜಗತೀಮಂಡನರಂ ಮಿ
ಕ್ಕಗಣಿತಗುಣಗಣರನರ್ತಿಯಿಂ ಗೌತಮರಂ ॥] ೩

ಮುಂದಣ ನಿಶ್ಶಂಕೆಯ ಕಥೆಯಂ ಬೆಸಗೊಳ್ವುದುಂ ಇಂತೆಂದು ಪೇಳ್ದಿರ್[1] :—

ಅಮೆಳ್ವತ್ತರಂತೆ ಕಾಡಿಗಯೆಚ್ಚು ವರಂತೆ ಅಂದುಗೆಯಿಡುವರಂತೆ ಬತ್ತಂಗೆಟ್ಟುವರಂತೆ ಕಾವುರಯೀಱುವರಂತೆ ಮದುವೆಯು ಮನೆಯುಂತೆ ಮೀಸೆಯುಂ ತಿದ್ದುವರಂತೆ ಪೊಜ್ಜಿಗಟ್ಟುವರಂತೆ ಉಳುವರಂತೆ ಬಂಡಿ ಹೂಡುವರಂತೆ ತೋರಣಂಗಟ್ಟುವರಂತೆ ಬಾಗಿಲ್ಕಾಪುವರಂತೆ ಸುರಗಿ

---

1 ನಿಶ್ಶಂಕೆಯು ಕಥೆಯನೆನಗೆ ತಿಳಿವಂತಾಗೆ ಬೆಸಸುವುಂಱುದುಂ ಸುಗತಿವಿಳಾಸಿನಿಯ ವಿಳಾಸದ ಪೂರ್ವಕ (?) ವೆನಿಸುವ ನಿಶ್ಶಂಕೆಯ ಕಥೆಯನ್ತಿಂತೆಂದು ಪೇಳ್ದ ಪರ್. (ಕ)

ಚಳಮೆತಿ ಬಿಡದಾರುಮನೊ
ಬ್ಬಳತವ್ರಡಿಂಗಾಗದಂತು [1] ಬಯ್ವಂ ಪೊಯ್ವಂ ॥ ೧೬

[ಕಂಡವೆರೆದೆ ನಡುಗಲ್ತಾಂ
ಮಿಂಡುಗಳಂ ಪಿಡಿದು ನಾಯುನೆಂ ಪಂದಿಯುಮೆಂ ।
ಮಿಂಡರುಮೆಂ ಪೆಂಡಿರುಮೆಂ
ಗುಂಡೆಲ್ಲಂ ನೆರೆದು ನೋಡೆ ಕಾದಿಸುತಿರ್ಪಂ ॥] ೧೭

ಪುರದೊಳಗಂ ಸೂಳೆಯರೆ
ಲ್ಲರುಮೆಂ ಪಿಡಿದೆಪ್ಪೆದು ತರಿಸಿ ರಕ್ಷಿಯ ಮುಂದಾ ।
ವರದಿಂದಿರುಳೆಲ್ಲಂ ಜಾ
ಗರಮಿರಿಸುವೆನವನ ಸೊರ್ಕನಿನ್ನೇಪೇಳ್ವಂ ॥ ೧೮

[ಮತ್ತಮುರ್ಕಿದಕ್ಕುಂದಲೆವಾಯ್ದ ಕಾಸುಂ ಮಿಂಡುಗಳಂ ನೆರೆದು ಪಿಡಿದು,] ೧೯

ತಿರಿದುಂಬ ತಿರಿಕರಂ ನಿ
ಷ್ಕರುಣದಿನೀಯಟ್ಟಿ ಪಿಡಿದು ಸುಂಕಮನಿಕ್ಕಂ ।
ದರವೆರಿಸದೆ ಕಾತುವನು
ರ್ವರೆಯುರ್ವಿನವಮಾರೊ ಬಗೆವೊಡವೆನವೊಲಿಳಯೊಳ್ ॥ ೨೦

[ಮತ್ತಂ ಮಂತ್ರವಾದಿಯುಂ ಕಂಡ ಗ್ರಹದಂತೆ ತೆಲ್ಲಿಗರ್ ತಲ್ಲಣಿಸೆ ತೆಲ್ಲಿಗಗೇರಿಯುಂ ಪೊಕ್ಕ, ೨೧

ಕೊಡದೆಣೆ ಯೆಲ್ಲಮಂ ಕೂ
ಗಿಡೆ ದೂರ್ತಿಂ ಸೂಱೆಗೊಂಡು ಬಂದು ನಿತಾಂತಂ ।
ಸೊಡರಂ ಯಕ್ಷಿಯ ಮನೆಯೊಳ್
ತಡೆಯದೆ ಪೊತ್ತಿಸುವನೆಯ್ದೆ ಬಳಗಪ್ಪಿನೆಗಂ ॥ ೨೨

---

[1] ಒಬ್ಬಳಸಾವೆಗ ಪೋಗದಂತು (ಬ.ಕ.)

ಮತ್ತಂ ಕಾಗೆಯುಂ ಕಂಡ ಕೊೋಗಿಲೆಯಂತೆ ಮಾಲೆಗಾಱರ್ಬೆರ್ಚಿ
ದೆಸೆಗೆಟ್ಟ ಪರಿಯೆ ಪೂವಿನ ಸಂತೆಯುಂ ಪೊಕ್ಕು, ೞಿ

ಸುರಗಿ ಮಲ್ಲಿಗ ಜಾಜಿ ಸಂಪಗೆ ವೊಲ್ಲ ಕೇದಗೆ ಸಂದ ಪಾ
ಬರಿಯ ಪೂಗಳನಾವಗಂ ನೆಱೆ ಸೂಱೆಗೊಂಡ ತೆರ್ದಿಂ
ಏರಿಪೆ ತನ್ನೊಡನಿರ್ದ ಧೂರ್ತಜನಾಳಿಯುಂ ಸಲೆ ತಾನುವೊ
ಪ್ಪಿರೆ ತುಱುಂಬಿ ವಿನೋದದಿಂ ನಗುತಿರ್ಪರುಳ್ಪಱಿವನ್ನೆಗಂ ॥ ೞಿ

ಮತ್ತಂ ಪುಲಿಯುಂ ಕಂಡ ಪುಲ್ಲಯ ಪಿಂಡಿನಂತೆ ಕಂಚುಗಾಱಿರ್ಭ
ಯದಿಂ ಮನೆಯಂ ಬಿಟ್ಟು ಪೋಗೆ ಕಂಚುಗಾಱಗೇರಿಯುಂ ಪೊಕ್ಕು, ೞಿ

ತಳಿಗೆ ಕನ್ನಡಿ ಸಿವ್ಪು ಕಂಚಿನ ಸಟ್ಟುಗಂ ತೆಱುವಟ್ಟಲ
ಗ್ಗಳದ ಕೈಮಳ ತಾಳವೊಪ್ಪುವ ಗಿಣ್ಣಲಂಬಿವೆನಾವಗಂ ।
ಕಳದುಕೊಂಡೊಡನಿರ್ದ ಧೂರ್ತಜನಕ್ಕ ಜೀವಿತಮೆಂದು ತ
ನ್ನೊಳ ವಿಚಾರಿಸಿ ನಿಚ್ಚಲುಂ ಕುಡುವಂ ನೃಪಾತ್ಮಜನರ್ತಿಯಿಂ ॥ ೞಿ

ಮತ್ತಂ ಸಿಂಹಮುಂ ಕಂಡ ಕರಿಘಟೆಯಂತೆ ಕಂಡರ್ಬೆಗಡು
ಗೊಂಡು ನಿಂದ ನೆಲೆಯುಂ ಬಿಟ್ಟೊೞೆಡೆ ಸಸ್ಯರುಣದುಂ ಬಂಕೊಂಡು, ೞಿ

ಕಳ್ಳಸಿಗಗೇರಿಯೊಳಗಣ
ಕಳ್ಳಲ್ಲಮನೆಱೆದು ತರಿಸಿ ಪೊಕ್ಕಗಣ ಬನದೊಳ್ ।
ಕಳ್ಳರ್ಗಂ ಧೂರ್ತರ್ಗಂ
ಭಿಲ್ಲರ್ಗಂ ಸೂಱೆಗೊಡುವನಿದುವ ವಿನೋದಂ ॥ ೞಿ

ಮತ್ತಂ ಬಗೆವಂತ ಗೊಡ್ಡಾಟಮನಾಡಲೆಂದು ದುರ್ಜನಪರಿವೃತ
ನಾಗಿ,] ೞಿ

ವರಭೂಷಣಮಂ ತೊೞ್ತರ
ಸರವಿಗೆ ಲೇಸಾಗಿ ತೊಡಿಸುವಂ ದಿವ್ಯಸ್ತ್ರೀ ।
ಯರನಟ್ಟಿ ಪಿಡಿದು ನೀರಂ
ತರಿಸುವನೂರಂತ ಧೂರ್ತನಿಂ ಲಲಿತಾಂಗಂ ॥ ೞಿ

[ಎಸೆವ ಕೊಳಂಗಳೂಳಂ ರಂ
ಜಿಸುವ ಮಹೋದ್ಯಾನವ್ಯವನಗಳೂಳಂ ಶೋ।
ಭಿಸಿ ಪುರದ ಸೂಳೆಯರ್ವೆರ
ಸಸಹಾಯಂ ಮನಕೆ ಬಂದವೋಲ್ ಕ್ರೀಡಿಸುವೆಂ ॥ ೩೧

ಮತ್ತಮಾತಂಗೆ ಧೂರ್ತವಿನೋದಮೆ ವಿನೋದಮೆಪ್ಪುದಱಿಂ ದುರ್ಜನಪರಿವೃತನಾಗಿ ಬಂದಂಗಡಿಯುಂ ಪುಗೆ ತೋಳನಂ ಕಂಡ ಕುಱಿವಿಂಡಿನಂತೆ ಪಾವರ್ ಪಾದುವೋಗೆ, ೩೨

ದೂಸಿಗರಂಗಡಿಯಂ ಪೊ
ಕ್ಕಾಸುರಮಾಗೊದಱಿ ಪಿಡಿದು ಮಿಂಡುಂ ತಾನುಂ।
ಲೇಸಪ್ಪ ವಸ್ತ್ರನಿಕರಮ
ನೋಸರಿಸದೆ ಸೂಱೆಗೊಂಡು ಚಾಗಂಗೆಯ್ವಂ ॥ ೩೩

ತಾನುಣ್ಣದ ಪೆಱರ್ಗಿಕ್ಕದ
ಪೇನಿಯು ಪಚ್ಚಡಿಕೆಯೆನಿಪ ಲೋಭಿಯ ಪೊನ್ನಂ।
ತಾನೊಂದುಮುಱುಯದಂತಿರೆ
ಹೀನಗುಣಂ ಕವೆರ್ದುಕೊಂಡು ಚಾಗಂಗೆಯ್ವಂ ॥ ೩೪

ಮತ್ತಂ ಮಣಿಗಾಱನ ಪಸರಮುಂ ಪೊಕ್ಕು ಓಡಲಿಂಬಿಲ್ಲದೆ ಕೈಗಳಂ ಮುಗಿದು ನಿಂದಿರ್ದವರಂ ಲೆಕ್ಕಿಸದೆ, ೩೫

ತಕ್ಕಿನ ಪವಳದ ಸಂಕೆಯ
ಟಿಕ್ಕೆಯ ಮಣಿಗಳನನೇಕಮುಂ ಕೊಂಡವನುಂ।
ಡೊಕ್ಕರಿಸದೆ ಕರುಣಿಸಿನಯ
ಶಕ್ಕಂಬರೆ ಸೂಱೆಗೊಳ್ವನವನುತ್ಸವದಿಂ ॥ ೩೬

ಮುಸಗಿವನಿತುಂ ಮಿಂಡುಂ ತಾನುಂ ಭಯಂಕರಮಾಗೆ ಬಂ
ದಸಗವೊಪ್ಪೆಯುಂ ಪೊಕ್ಕೊವೋಪೆಂದು ಕೂಗಿಡುವನ್ನೆಗಂ।
ಕುಸಿಯದದಟಿಂ ವಸ್ತ್ರವ್ರಾತಂಗಳಂ ನೆಱೆ ಕೊಂಡು ಸಂ
ಕಿಸದೆ ತುಡುವೆಂ ತನ್ನಂ ಸುತ್ತಿರ್ದ ಧೂರ್ತಜನಕ್ಕವೆಂ ॥ ೩೭

ಸ್ಮರತಾಪಂ ಪೆಱಪಿಂಗೆ ಸೂಳೆಯರೊಳಂಗಂವೊಂದಿ ಕೂಡಿರ್ದ ಗಂ
ಡರನಾಟಂದಲೆದಟ್ಟಿ ಪೊಯ್ದು ಕಳದೋರ್ಪಂದಾಂತೊಡಂ ತೂಳ್ದಿ ನಿ
ಷ್ಕರಕೋಪಂ ಪಿಡಿದೊತ್ತಿ ಸೂಳೆಯರೊಳಗ್ರಾಟೋಪದಿಂ ಬಲ್ಮೆಯಿಂ
ನೆರೆವಂ ಭೂಭುಜನಂವನಂ ಪಿರಿವರುಳ್ಳಳ್ಳಿರ್ಪಿನಂ ದರ್ಪದಿಂ ॥ ೫೪

ಮತ್ತಂ ಮುಸಗಿರ್ದ ಸಿಂಗದಂತೆ ಮಿಂಡುಗಳ್ ತಂಡತಂಡದಿಂ
ಸುತ್ತಿ ಮುತ್ತಿ ಬರೆ ಬಂದೂರೊಳ್ ಕಂಡು ನಿಂದಿದ- ರ್ನಿಂದಿರ್ದಲ್ಲಿಯೆ
ಕುಳ್ಳಿರ್ದರ್ಕುಳ್ಳಿದಲ್ಲಿಯೆ ಕಂಪಿತರಂತೆ ಬಿಟ್ಟೊಡದಿರೆ ಸೂಳೆಗೇರಿಯಂ
ಪೊಕ್ಕು, ೫೫

ಸೂಳೆಯರೊಲ್ವ ಬೊಜಂಗರ
ನಾಳಾಪದಿನಿಟ್ಟ ಕಳವನಬ್ಜಾನನೆಯರ್ ।
ಕೇಳೊಲ್ಲವ ವಿಟರಂ ಕಡು
ಲೀಲೆಯಿನವರೊಡನೆ ನರೆಸುವಂ ದೂರ್ತಿಂದಂ ॥] ೫೬

ಈ ಕೇರಿಯ ಬಲವಣ್ಗಳ
ನಾಕೇರಿಯುವಂದಿರೊಡನೆ ಕೂಡುವೆನಿರದಂ ।
ತಾಕೇರಿಯ ಬಲವಣ್ಗಳ
ನೀಕೇರಿಯುವಂದಿರೊಡನೆ ಕೂಡುವನದಟಿಂ ॥ ೫೭

[ಕರಮೆಱಿಯಟ್ಟಿ ದುಷ್ಟವಿಟಸಂಕುಲಮಂ ಪಿಡಿದೊರ್ವರಿಂದವೊ
ರ್ವರ ತಲೆಯಂ ಕಱುತ್ತರಿಸುತುಂ ಛಲದಿಂದಿರದೊರ್ವರಿಂದವೊ
ರ್ವರನಿಱಿಸುತ್ತೆ ತೂಕಱಿದು ಬೊಬ್ಬಿಱಿದಾಡುವನೊರ್ವರಿಂದವೊ
ರ್ವರನಟ್ಟಿಯಟ್ಟಿ ಮೋದಿಸುತುಮೀತೆಱಿನಿಂ ನಗುತಿರ್ಪನಾವಗಂ ॥ ೫೮

ಅಂತುಕರ್ಕಿ ಸೊಕರ್ಕಿಂದಕ್ಕುಂದಲೆವಾಯ್ದು ದೂರ್ತಿಂ ಕಣ್ಗಾಣದೆ
ಸೂಳೆಗೇರಿಯುಂ ಪೊಕ್ಕು ತಾಂ ಮೂಱ್ಪಬ್ಬರಕ್ಕೆ ಅಬ್ಬರಂ ಪಿರಿದಾಗೆ
ಕಡೆಯ ಮನೆಯ ಕಾಂಟಣಿಯೊರ್ವಳ್ ಸಜ್ಜೆವನೆಯಂ ಪೊಕ್ಕು, ೫೯

ತಡೆಯದೆ ಮೆಗಳಿಂದಳಿಯನ
ನಡುವೆಂ ತಳ್ಕಾಸಿ ಕೂಂಡು ಹಿತ್ತಲ ದೆಸೆಯೊಳ್।

ಮ್ಮಿಟ್ಟು ಲಲಿತಾಂಗನಿಱಿದಂ
ಕೆಟ್ಟೆನೆನುತ್ತೋಡುವಾತನಂ ಮೆತ್ತೊರ್ವಂ [1] ॥ ೫೬

ತಾಂ ಕಂಡು ದಿಟವೆಂದೆ ಬಗೆದು ಭಯದಿಂದೋಡುತ್ತಿರೆ ಕಾಡೊಳೊಂದು ಮರದ ಕೊಂಕುಗೊಂಬಾತನ ತುಱುಂಬಂ ಪಿಡಿದು ತಡೆಯೆ ಪೆಱಗಂ ನೋಡಲಱ್ಕದೆ, ೫೭

ಬಿಡು ನಿನ್ನ ಧರ್ಮವಿ'ನ್ನಂ [2]
ನುಡಿಯೆಂ ಮುತ್ತೆಂಟುಮಕ್ಕಳೂಳವೆನಗಾಂ ಸ ।
ತ್ತೊಡೆ ಪೆಱಗೀ ವೃಂದಮನ
ಪ್ಪೊಡೆ ಪೊರೆವರಿಲ್ಲವಾಂ ದೇಸಗನೆಂ ॥ ೫೮

ಅಂತುರಿಯುತ್ತುಮಿರ್ದ ಲಲಿತಾಂಗನ ಪೊಲ್ಲಮೆಯಂ ಕಂಡು ಬುದ್ಧಿವಂತರಿಂತೆಂದರ್ :— ೫೯

ಅರಸನ ಮಗನುರ್ಕಿಂದು
ರ್ವರೆಯುರಿವೊಡಮಾನೆ ಸೊರ್ಕಿ ಕೊಲ್ವೊಡೆ ಕಿಚ್ಚ ।
ಚ ರಿಯಾಗಿ ತಾನೆ ಸುಡುವೊಡೆ
ಕರಮವನಡ್ಡೈಸಿ ತಾಗಿ ಮಾಕೊರ್ವರಾರ್ ॥ ೬೦

ಮತ್ತಂ ಕೆಲಂಬರ್ ವಿವೇಕಿಗಳಿಂತೆಂದರ್ :— ೬೧

ಸುತನೆಂದು ನುನ್ನಿಪಂ ಕ್ಷಿತಿ
ಪತಿ ತುಪ್ಪದ ಕೊಡನ ವೇಗಮಿಲಿಸುತಂ ಗ ।
ರ್ವಿತನಾದನೆಂದೊಡವನು
ದ್ಧತಿಯಿಂದೀ ಮಹಿಯೊಳಂಜದಿರ್ಪವನಾವಂ ॥ ೬೨

ಎಂದಿಂತು] [3] ಪೊಬಿಲೆಲ್ಲಮುಮೆಲ್ಲೂಲಕಲ್ಲೂಲಮೊಗೆ ಕನಸಿನೊಳಂ ಲಲಿತಾಂಗನ ಭಯಮನು ತಿಣ್ಣಮಾಗೆ, ಬೆಗಡುಗೊಂಡೆರಡು

---

1 ವಾತನಂನೆರೆಯಸಗಂ (ಕ) 2 ಧರ್ಮಫಲಮಂ (ಕ)
3 ಅಂತುಲಲಿತಾಂಗಂ ನೂಡುವದೂರ್ತಾಟಕ್ಕೆ ಪೊಳಲೆಲ್ಲಂ. (ಗ)

ಬೆಟ್ಟದ ನಡುವೆ ಪರಿವ ಪೆರ್ದೊಟ್ಟೆಯಂತೆ ಮೂಗಂ ಬಾಯುಮುಂ ಪಿಡಿದೊತ್ತಿದಂತೆ [1] ಕರಮುಮ್ಮೆಳಸಿ ನೆರೆದೆಲ್ಲವೊಂದಾಗಿ ರಾಜಮಂದಿರದ ಬಾಗಿಲ್ಗೆ ಬಂದು ಪುಯ್ಯಲಿಡುವುದುಮಾ ಪುಯ್ಯಲನೋಲಗದೊಳಿರ್ದರಿ ಮರ್ಥನಮಹಾರಾಜಂ ಕೇಳ್ದ ನಿಷ್ಠುರಂ ಒರವೇಟ್ಟು ಪುಯ್ಯಲಿದೇನೆಂದು ಬೆಸಗೊಳ್ವುದುಂ ಬಿನ್ನಪವೆಂದು ಕೈಮುಗಿದವರಿಂತೆಂದರ್ :— ೬೫

ದೇವ ಭವತ್ಪುತ್ರಂ ಕರ
ವೋವದೆ ಸಂಕಿಸದೆ ಮಿಂಡುವಡೆವೆರಸದಟಂ ।
ದೊವ್ವೋವೆಂದೆಳಱಿ ಜನಂ
ದಾವಾನಲನಂತೆ ಸುಡುವನಿರುಳುಂ ಪಗಲುಂ ॥ ೬೬

[ದೇವಾ ಮತ್ತಂ ನಿನ್ಮಕುಮೊರನಿನಾದ ಪೊಲಿಲೊಳಗಣ ಮಹಾಭಯಮುಂ ಪೇಱ್ಪೊಡೆ, ೬೭

ಪೊಱಮಟ್ಟಂ ಲಲಿತಾಂಗನೆಂದೊಡಮವರ್ಬಳ್ಕತ್ತುವುಳ್ಕತ್ತೆ
ಪೊಚ್ಚ ಱಿಗೆಟ್ಟೋಡುವರಿರ್ವರೊಂದೆಡೆಯೊಳಂ ಮಾತಾಡಲಣ್ಮರ್ವಿಟ
ರ್ನೆಚ್ಚೆ ಬೆರ್ಚಿಂ ಬೆಲೆವೆಂಡಿರೊಳ್ನುಡಿಯಲಣ್ಮರ್ಭೀತಿಯಿಂ ಬೀರಮುಂ
ಮೆಱ್ಚಿದುಂ ಪಾಡಿಸಲಣ್ಮರಂಕಮೆನನರ್ಬಿಟ್ಟೋಡಲಣ್ಮರ್ಭಟರ್ ॥ ೬೮

ಮತ್ತಮೊತಂ ಮಾಡುವೆನಾಚಾರಮುಂ ಪೇಱ್ಪೊಡೆ ತಂಬುಲಿಗರ ನಂಬಲಿಯುಂ ಮೆಟ್ಟಿಗಟ್ಟುವರಂತೆ ಕೋಡಗಗಟ್ಟುಂಗಟ್ಟ ಕಾಡುವೆಂ ; ಚನ್ನಿಗರಂ ಮನ್ನಿಸಿವೆಂದು ಬಡಿದು ಬಾಯ್ತೀವೆ ಪುಡಿಯುಂ ಪೊಯ್ಸುವೆಂ ಸೊಕ್ಕಿರ್ದರ ಮದಮಿಂತಲ್ಲದುಡುಗದೆಂದು ಸಾಯೆ ಬಡಿಸುವೆಂ ; ಬಿರುದರ್ಗರಿದೆನಿಸುವ ಬಾಧೆಯುಂ ಮಾಡಿಸುವೆಂ ; ವೀರರ ಪಡಪಂ ಪಾಱಿಸುವೆಂ ; ಮಿಂಡರನಂಪಲೆದೇಳಿಸುವೆಂ ; ಬಂಟರಂ ಕೊಂಡಾಡುವರ ಗೆಂಟಲೊಳ್ ನೇಣನಿಕ್ಕ ತೆಗೆಯಿಸುವೆಂ ; ಗಂಡರಂ ಕೊಂಡಾಡುವರ ಮಂಡೆಯುನಣಿಸುವೆಂ ; ಬಲ್ಲರಂ ಕೊಲ್ಲವ ಕೊಲೆಯಿಂ ಬಾಧಿಪನಂತು ಮಲ್ಲದೆಯುಂ, ೬೯

[1] ಬಡೆಯೊತ್ತಿದಂತೆ. (ಗ)

ಮರುಳ ಪಡೆಯಂತೆ ಮಿಂಡ
ವೆರಸತಿಮುದದಿಂದೆ ಕೇರಿಕೇರಿಗಳೂಳ್ ಕೂ।
ಗಿಡೆ ಪೆರ್ಚಿ ಸೊಕ್ಕಿ ಪುಲ್ಲಳ
ನುರಿಪುತ್ತುಂ ಬಡಿಸುತಿರ್ಪನಿದುವೆ ವಿನೋದಂ ॥] ೬೪

ಮತ್ತಂ ಕುವೊರನ ಭಯಮುಂ ಪೇಱುವ್ವೊಡೆ ಪಾರ್ವರ್ತಾರು ಮೊಡೆಯರಿಲ್ಲದಂತೆ ನಡುನಡುಗೆ, ಪರದರ್ಪಜ್ವಿಯಮೆರದಂತಲ್ಲಾಡೆ, ದೂಸಿಗದೇರ್ಸಿಗರಂತೆ ಭಯಂಗೊಳ, [ಬಳಗಾಱರಳವುಗೆಟ್ಟ ಕುದುರೆಯಂತೆ ನಿಲೆ, ಕಂಚುಗಾಱರ್ ಮಿಂಚುಗಂಡ ಶಿಶುವಿನಂತಂಜೆ] ರಾಜಕುವೊರರ್ ಭೋಜನಂಬಡೆಯದರಂತೆ ಬಡವಾಗೆ, ಬಕ್ಕಲಿಗರ್ ಸಾಕ್ಷಿಯಿಲ್ಲದೆ ಸಾಲಂಗೊಟ್ಟರಂತೆ [ಬೆಕ್ಕಸಂ] ಬೆಱಗಾಗೆ, ಬಂಟರ್ ನಂಟರಂ ಕಂಡ ಬಡವನಂತೊಳಸಾರೆ, ಬಿರುದರ್ ಕರಿಗಿಕ್ಕಿದ ಕಳ್ಳನಂತೆ ಜರಿಯೆ, ಬೀರರ್ ದಾರಿಗೆಟ್ಟರಂತೆ ಬೆದಱೆ, ವಿಂಡರ್ ದಂಡಂದೆತ್ತೊಕ್ಕಲಿಗನಂತೆ ರ್ದೆಗಿಡೆ, ತೆಲ್ಲಿಗರ್ಬಿಲ್ಲಂ ಕಂಡ ಕಾಗೆಯುಂತೆ ಚೆಲ್ಲವರಿಯೆ, ಸೂಳೆಯರ್ ಗಾಳದ ಮೀನಂತಳವಳಿಯೆ, ಮೌನಿಗಾಱರ್ ಗುಣಂಗೆಟ್ಟ ಋಷಿಯಂತೆ ಚಿಂತಿಸೆ, [ಕುಂಬಾಱರಿ ಸಂಬಳಮಿಲ್ಲದ ದುಡಿನಾಳಂತ ಬೆರ್ಕೆ, ಅಸಗರ್ ದೆಸೆಗೆಟ್ಟರಂತೆ ಬಾಯ್ವಿಡೆ,] ಬೇಡರ್ ಬೀಡಂ ಬಿಟ್ಟೋಡೆ,[1] ಬೆಸದವರ್ ಬಸವಮಲ್ಲದವರಂತಂಜೆ ಉಳಿಯೆ, ದೂರ್ತರ್ ಮಾರ್ತಾಂಡನಂ ಕಂಡ ಮಂಜಿನಂತೆ ಪರಿಯೆ, ಬಚ್ಚರ್ ಕಿಚ್ಚುಮುಟ್ಟಿದ ತುಪ್ಪದಂತೆ ಬಲ್ಪುಗಿಡೆ, ಜಂತಿಗರ್[2] ಸಂತತಿಗೆಟ್ಟರಂತಱಲೆ, ತಂಬುಲಿಗರ್ ನಂಬುಗೆಗೆಟ್ಟವರಂತೆ ಪೆಱಸಾರೆ, ಚೊಲ್ಲೆಯರ್ ಗಲ್ಲೆಯಂಬಲಿಯಂತೆ ನೆಲನಂ ಪತ್ತೆ, ಸರ್ವಾಂಗದ್ರೋಹರಂ ಕವರ್ವಂತೆ ಸರ್ವಸ್ವಾಪಹರಣಂಮಾಡಿ ತನ್ನೊಡನಿರ್ದ ೬೫

ಕಸವಿಂಗಂ ಕಳುಚಿಂಗಂ
ಡಸಿಕಿಂಗಂ ದೂರ್ತವಡೆಗಮತಿಚಪಳಗರ್ಗಂ ।

---

[1] ಪೊಲೆಯರ್ ಬಲೆಯೊಳ್ತೊಡರ್ದ ಪಕ್ಕಿಯಂತೆ ಮಿಡು ಮಿಡು ಮಿಡುಕೆ, ಮಾದೆಗರ್ ಮೋದುವತ್ತಭಿನಾನಿಯಂತೆ ಉವ್ಮಳಿಸೆ (ಗ)

[2] ಪಂತವಳೆಯರ್ (ಬ.ಕ.)

ಪುಸಿವೆರ್ಗಂ ಸಿತಗರ್ಗಂ
ವಸುಧೇಶ್ವರ ಕೇಳ ಕುಡುವನುರ್ಕಿ ಕುಮೊರಂ ॥ ೭೦

ಮತ್ತಂ ಮನೆಮೊಡುವರಂತೆ ಮುಂದಿರ್ದಿಲ್ಲರುಮಂ ಕವರೆ ನುತ್ತುಂ, ಪಯಣಂಬೋಪರಸಿಯಂತೆ [ಕಂತಕಂಡರಂ ತೂಳ್ದಟ್ಟಿ] ಪಿಡಿಯೆನುತ್ತುಂ, ಸಾಲಂಗೊಟ್ಟವರಂತೆ ಕಾಡಿಪ್ಪೊಡೆಯೆನುತ್ತುಂ, ಬಡಗಿಯಂತುಳಿಯೆನುತ್ತುಂ, [1] ಸಾಲಿಗನಂತೇಪೆನುತ್ತುಂ, ಕಳ್ಳನಂತೆ ಕೊಳ್ಳನುತ್ತುಂ, ರಸವಾದಿಯಂತೆ ಕೊಲ್ಲೆನುತ್ತುಂ, ಕುತ್ತಂಗುಳಿಯಾಟದಂತೆ ಕಟ್ಟೆನುತ್ತುಂ, ಕೋಟೆಗಾಳಗದಂತೆ ಪತ್ತೆನುತ್ತುಂ, ಪೊಸತಾಗಿ ಬಂದೊಕ್ಕಲಿಗನಂತೆ ಮುಟ್ಟೆನುತ್ತುಂ, ಕುಳಿಯೊಳ್ ಬಿದ್ದನಂತೆ ತೆಗೆಯೆನುತ್ತುಂ, [2] ನಗೆಗಾಱಿನಂತೆ ಕಾಡೆನುತ್ತುಂ, ಪಗೆಗಾಱಿನಂತೆ ಪಾಡೆನುತ್ತುಂ, ಪೊಲೆಯರಂತೆ ಕೊಯ್ಯೆನುತ್ತುಂ, ಮೊದೆಗನಂತೆ ಮೆಟ್ಟೆನುತ್ತುಂ, ತಿರಿಕನಂತಿಕ್ಕೆನುತ್ತುಂ, ಮಾಸಾಳ್ಗಳಂತೆ ಬೀಡೆನುತ್ತುಂ, ಹರಿಕಾಱರಂತೆ ಕಾಸೆನುತ್ತುಂ, ಪಿತ್ತಾಧಿಕನಂತೆ ಬೀಸೆನುತ್ತುಂ, [3] [ಬಿಕ್ಕಗನಂತೆ ತಿವಿಯೆನುತ್ತುಂ,] ತೊಟ್ಟಿಯಂತಹೋರಾತ್ರಂ ಪರಿಯುತ್ತುಂ, ಈ ಮಾರ್ಗದಿಂ ಬಾಧೆಯುಂ ಮೊಡೆ, ಪಳ್ಳಿಯುಂ ಮನ್ನೆಯರಾಳ್ ಸುತ್ತಿರ್ದಂತೆ, ಕುಱಿವಿಂಡಂ ತೋಳ್ದಂ ಪೊಕ್ಕಂತೆ, ಗರ್ಭಿಣಿಯನೆಮ್ಮೆ ತಗುಳ್ದಂತೆ, ತಾವರೆಗೊಳನಂ ಮುಂಜು ಪೊಕ್ಕಂತೆ, [ಬಡವರ ಮನೆಯ ನರಸಾಳ್ ಪೊಕ್ಕಂತೆ,] ಗೂಗೆಯುಂ ಕಾಗೆ ಸುತ್ತಿದಂತೆ, ಪೂಮರನಂ ಕೋಡಗವೇಱಿದಂತೆ, ಕಬ್ಬಿನ ತೋಂಟಮುಂ ನರಿ ಪೊಕ್ಕಂತೆ, ಬೆಳೆದ ಕೆಯ್ಯಂ ಕಿಚ್ಚು ತಗುಳ್ದಂತೆ, ಪೂತ ಪುಣಿಸೆಯುಂ ಗಾಳಿ ಪೊಕ್ಕಂತೆ, [ಕಂಚುಗಾಱಿನ ಪಸರಮೆನೆತ್ತು ಪೊಕ್ಕಂತೆ,] ಮೆದುವೆಯ ನೆರವಿಯುಂ ಕಡಂದುಱು ಕವಿದಂತೆ,

---

1 ಪೊಲೆಯನಂತೆ ಕರೆಯೆನುತ್ತುಂ, ಪಡಿಹಾರನಂತೆ ನೂಂಕೆನುತ್ತುಂ, (ಗ)

2 ಕವ್ಯಾಱಿನಂತಡೆಯೆನುತ್ತುಂ (ಗ)

3 ಎರಲೆಗೊಂಡ ತೆಲುಗನಂತಿಱಿಯೆನುತ್ತುಂ, ತೆಲ್ಲಿಗನಂತೆ ಕುಸಿಯೆನುತ್ತುಂ, ಋಷಿಯರಂತೆ ಕಟ್ಟೆನುತ್ತುಂ, ಸಿಂಬಿಗನಂತೆ ಬಳಸೆನುತ್ತುಂ, ವ್ಯವಹಾರಿಯಂತೆ ಮುತ್ತೆನುತ್ತುಂ, ಸೀರೆಗಟ್ಟುವನಂತೆ ಸುತ್ತೆನುತ್ತುಂ, ತಿಱುಳನಂತೆ ಪೊಯ್ಯೆನುತ್ತುಂ (ಕ.)

ಪಂದೆಯಂ ಪೆಣಂ ತಗುಳ್ದಂತೆ, ಗೋಷ್ಠಿಯಂ ಪಾವು ಪೊಕ್ಕಂತೆ, ಬೀಡಂ ಕಳ್ಳರ್ಕವಿದಂತೆ, ಪಸುವುಕ್ಕಳಂ ಗೂಳಿ ತಗುಳ್ದಂತೆ, ಪತ್ತಿಯಂ ಕಿಚ್ಚು ತಗುಳ್ದಂತೆ, ಗೋವ್ರುವಿಂಡಂ ಪುಲಿ ಪೊಕ್ಕಂತೆ, ಜೋಳದ ರಾಸಿಯುಂ ಪೊನಲ್ಕವಿದಂತೆ, [ಬೆಲ್ಲದ ಪೇಱನಿಲಿ ಪೊಕ್ಕಂತೆ,] ಕಲಸುಗೂಟಂ ಕಾಗೆ ಸುತ್ತಿದಂತೆ, ಬೆಳ್ಳಿಲಿಯ ಬಿಲದೊಳ್ ನೀರ್ಪೊಕ್ಕಂತೆ, ಪೊಟಲೊಳಗಣ ಪ್ರಜೆಯೆಲ್ಲಮುಂ ಮಹಾಭಯಜ್ವರಂಗೊಂಡು, ಕುಮಾರನಾಡುವಾಟಕ್ಕಂ, ಮಾಡುವ ಮಾಟಕ್ಕಂ, ನಿಲಲುಂ ನಿತ್ತರಿಸಲುಮಾಱಿವೆಮಗೆ॥ ೭೧

ಬೆಸನಾವುದು ಧರಣೀಶ್ವರ -
ಬೆಸಸೆನೆ ತನಯಂಗೆ ನಾಡೆಯುಂ ಮುನಿದು ನೃಪಂ ।
ವಿಸುಗುವ ದಂತಮೆರೀಚಿಗ
ಳೆಸೆವಿನಮೆಂಬುಧಿನಿನಾದದಿಂದಂ ನುಡಿದಂ ॥ ೭೦

ನೀವಿದನೆವೆಗಱಿಪಿರ್ಮು
ನ್ನೀ ವಾರ್ತೆಯನಱಿಯೆವಿದಱ ದೆಸೆಗಿನಿಸಾನುಂ ।
ನೀವೆಂಬೆಜ್ಜಡ ಸುಖಮಿರಿ
[1]ಮೊವಿದನೆಣಿಸುವೆವರಲ್ಲಮತಿಶಯದಿಂದಂ ॥ ೭೧

ಎಂದರಿಮಥನಮಹಾರಾಜಂ ಕಿಱಿಯರ್ಪಿರಿಯರೆನ್ನದೆ ಮುನ್ನಣಿಯಿಂ ಕರ್ಪುರಸಹಿತಂ ವೀಳೆಯಂಗೊಟ್ಟು ಪೋಗಲ್ವೀಱಿದ್ದು, ಪ್ರಧಾನರ್ಗಂ ಸೌಂದರಿಮಹಾದೇವಿಗಮಿಂತೆಂದಂ: — ೭೪

[ಇನಿಸುಂ ಮಾಣದೆ ದುಶ್ಶಾ
ಸನಶಕುನಿದಿವಾಕರಾತ್ಮಜರ್ ಕೂಡೆ ಸುಯೋ ।
ಧನನಳಿದನೆಂದೊಡೇಂ ದು
ರ್ಜನರಪ್ಪವರೊಡನೆ ಕೂಡಿ ಕೆಡದವರೊಳರೇ ॥ ೭೫

---

1 ಪಾವಂಕಂಡಂತೆಬೆಚ್ಚದಿರಿಯತಿಶಯದಿಂ (ಕ).
ಮೂವಿದಸ್ಯೆರಿಸುವರಲ್ಲಸುತನಾದೊಡವೇಂ (ಬ).
ಮೂವಿದನೆಣಿಸುವದಲ್ಲಮತಿಶಯದಿಂದಂ (ಗ).

ಮೊದಲಿಂ ಪಂದಿಗಳೊಡನಾ
ಡಿದ ಕಜುವುಂ ಪಂದಿಯಂತೆ ಪೇಲಂ ತಿಂಗೆಂ ।
ಬುದು ನಾಣ್ಮಡಿ ತಾನದು ತ
ಪ್ಪದು ಸಿತಗರ ಕೂಟದಿಂದೆ ಕೆಡದವರೊಳರೇ ॥] ೨೬

ಆರಯ್ದು ನೋಡೆ ತೊಱೆಗಳ
ನೀರುಂ ವಾರಿಧಿಯ ನೀರ ಪೊರ್ದುಗೆಯಿಂದಂ ।
ಸಾರಂಗೆಟ್ಟುಪ್ಪಪ್ಪವೊ
ಲಾರುಂ ದುರ್ಜನರ ಕೂಟದಿಂದಂ ಕೆಡರೇ ॥ ೨೭

ಕಡುತಣ್ಪು ಕೆಟ್ಟು ಕಿಚ್ಚಿನೊ
ಳೂಡಗೂಡಿದ ನೀರ್ ಬಱಿಕ್ಕೆ ತೀವ್ರತೆಯಿಂ ಕೈ ।
ಸುಡುವಂತೆ ನೋಡೆ [1] ದುರ್ಜನ
ರೊಡಗೂಡಿದ ಮಾನಿಸರ್ಗೆ [2] ಸಮ್ಮಾನಮುಂಟೇ ॥ ೨೮

[ಅದುಕಾರಣದಿಂ. ಕುಮಾರನೊಳಾದ ದೂರ್ತರ್ಲ್ಲವೆಮ್ಮಿಂದಾದು
ದಾತನೊಳ್ ದೋಷಮಿಲ್ಲೆಂತೆನೆ] ೨೯

ಪುದಿದ ಸುತಮೋಹದಿಂದೋ
ದಿದೊಡಂ ಮುನಿಜನದ ಸಾರೆ ಬಸದಿಯೊಳಿರ್ದಾ ।
ಡಿದೊಡವಿವನಲಸುಗೆಂದಾ
ನಿದನಱಿಯದೆ ದುಷ್ಕೃಕಷ್ಟರೊಡನಾಡಿಸಿದೆಂ ॥ ೩೦

[ಇನಿತುಂ ಮೋಹಂ ಕೇಳೀ
ತನ ಮೇಲಿಂ ಪಿರಿದುಮೆನ್ನೊಳುಂಟಪ್ಪುದಱಿಂ ।
ದನಿಯಿತಿಕೆಯಿಂದೆ ನಡೆಸ
ಲ್ಕನಿತಾದುದು ಶಿಕ್ಷೆಗೆಟ್ಟ ಕಾರಣದಿಂದಂ ॥] ೩೧

ಕಸದೊಡನೆ ಕೂಡಿ ಪೆರ್ಚಿದ
ಸಸಿಯುಂ ಶಿಕ್ಷಿಸದ ಮಕ್ಕಳುಂ ಮಾಣದೆ ಚಿಂ ।

---

1 ಯಿಡಬಾರದಂತೆ ದುರ್ಜನ (ಗ.) 2 ಸಜ್ಜನರ್ಗೆ (ಗ.)

ತಿಸದೋದುಂ ಸಲವಂ ಭೂ
ವಿಸುತಿರ್ಪ ನ ತಪಮುವೊಪ್ಪಲಾರ್ಕುವೆ ಕಡೆಯೊಳ್ ॥ ೪೦

ಮತ್ತಂ, " ಪುತ್ರಂ ಚ ಶಿಷ್ಯಂ ಚ ತಾಡಯೇನ್ನತು ಲಾಲಯೇತ್ " ಎಂಬ ಪೂರ್ವಾಚಾರ್ಯೋಕ್ತಿಯಂ ಕೈಕೊಳ್ಳದೆ ವೋಹದಾಕೆವ್ರೋತಿಯಾದಳ್ಂಬಂತೆ ಮಗನಂ ಕಿಱಿಯುಂದಿಂ ತೊಡಗಿ ಶಿಕ್ಷಿಸದಿರ್ದುದಱಿನಿಂತಾಯ್ತೆಂದರಸಂ ತಲೆಯಂ ತೂಗಿ ಬೆರಲಂ ಮಿಡಿದು ಲಲಿತಾಂಗನಂ ಬರಿಸಿ ಮುಂತೆ ಕುಳ್ಳಿರಿಸಿ ಬಟಿಕ್ಕವಿಂತೆಂದಂ [1] :— ೪೧

ಧರೆಯಂ ರಕ್ಷಿಸಿ ದುಷ್ಟರಂ ಜಡಿದು ಸದ್ಧರ್ಮಂಗಳಂ ಕಾಯ್ದು ತ
ಸ್ಕರರಂ ಬಾರಿಸಿ ಕಷ್ಟರಂ ಕೆಡಿಸಿ ದಂಡಂಗೊಂಡು ಮಿಂಡರ್ಕಳಂ
ಭರದಿಂ ಬಂಧಿಸಿ ಶಿಷ್ಟರಿಷ್ಟಫಲಮಂ ಸಂತೋಷದಿಂದಿತ್ತು ಧೂ
ರ್ತರ ಬೇರಂ ನೆಱೆ ಕಿೞ್ತು ಪಾಲಿಪುದೆ ಧಾತ್ರೀಚಕ್ರಮಂ ಕ್ಷತ್ರಿಯಂ ॥

ಸಿಸುವಂ ತಾಯ್ಸುರಸೌಖ್ಯಮಂ ಬಯಸುವಂ ಚಾರಿತ್ರಮಂ ಶೀಲಮಂ
ವಸುವಂ ತಾಂ ಬಿಡದರ್ಥಲೋಭಿ ಸಸಿಯುಂ ಶೂದ್ರಂ ತಳಾಱಿ ಸಮಂ
ತೊಸೆದೂರಂ ಗುಣಮಂ ಮಹಾಪುರುಷರೊಳ್ಪಂ ಶೌಚಿ [2] ಕೇಳಂತು ರ
ಕ್ಷಿಸುವಂ ವೋಹದಿನಂತೆ ರಕ್ಷಿಪುದು ಧಾತ್ರೀಚಕ್ರಮಂ ಕ್ಷತ್ರಿಯಂ ॥

ಶಶಿಕಿರಣಂಗಳಂತು ಕುವುದಾಳಿಗಳಂ ರವಿರಶ್ಮಿಯಿಂತು ರಂ
ಜಿಸುವ ಸಹಸ್ರಪತ್ರನಿಕುರುಂಬಮೆನೊಪ್ಪಲಲರ್ಚಿ ನಾಡೆ ಸಂ
ತಸಮೆನೆ ಮಾಱ್ಪುವಂತೆ ಖಳರೆಂದುದನೆನ್ನದೆ ತನ್ನ ಭೂವಿಗಂ
ಮಿಸುಪವಚೋಂಶುವಿಂ ಮುದಮನೊಪ್ಪಿರೆ ಮಾಱ್ಪುದು ಧಾರಿಣೀಶ್ವರಂ॥

ನಯವುಳ್ಳುದಱಿಂ ಚಂದ್ರೋ
ದಯದೊಳ್ ಬೆಳಗುವುವು ತಾರೆ ಸೂರ್ಯೋದಯದೊಳ್ ।
ಭಯದಿಂದದೃಶ್ಯಮಪ್ಪುವು
ನಿಯತಂ ಕೇಳ್ಮಗನೆ ತೀವ್ರತೆಯನೆಯ್ದುವರೇ ॥ ೪೨

---

[1] ಮೆಲ್ಲನಿಂತೆಂದಂ (ಗ)

[2] ದಾನಿ (ಖ,ಕ.)

ಏಳಿದರ ಪುಯ್ಯಲಂ ಕರೆ
ದಾಳೋಚಿಸಿ ತಿರ್ದಿ ಸಂತಸಂಬಡಿಸದೆ ಬ ।
ಲ್ಲಾಳಪ್ಪರ ಕೊರ್ವಂ ಜಡಿ
ದಾಳಾಪಂಗೆಯ್ದು ಕೆಡಿಸಿದಂ ನೃಪಸುತನೇ ॥ ೪೪

ಎಂಬೀ ರಾಜನೀತಿಯಂ ನೀನಱಿಯದೆ ಲೋಯಿಸರದ ಮೇಲೆ ಬಂಡಿ ಸರಿದೆಂತೆ ಪೊಲಿಲ್ಲಮಂ ನಿವಾಳಿವಟ್ಟನುಂ ಮಾಡಿದೆಯಾದೊಡೇ ನಾಯ್ತು ಪೋದುದಿಂ ಪೋಗಲಿ ಪೆಱಗನೆಣಿಸಲಾಗದು ಮುಂದಣ್ಗೆ,॥ ೪೫

ಇಂದು ಮೊದಲಾಗೆ ನೀಂ ಸೊ
ರ್ಕಿಂದಂ ಪೊಱಲೊಳಗೆ ಕೇಳ ಬಾಧೆಗಳಂ ದೂ ।
ರ್ತಿಂದಂ ಮಾಡಿದೆಯಪ್ಪೊಡೆ
ಕಂದಾ ಕಡುಮುನಿವನೆನಗೆ ನೀಂ ಮಗನಲ್ಲಯ್ ॥ ೪೦

ಮತ್ತಮೆಮ್ಮನ್ವಯಧರ್ಮಮೆಪ್ಪೊಡೆ ಶುದ್ಧಸ್ಫಟಿಕದ ದೋಣಿಯೊಳಱೆದ ಪಾಲಂತೆ ನಿರ್ಮಳಮಪ್ಪ ಜೈನಧರ್ಮಮದಂ ಚೆನ್ನಾಗಿ ತಿಳಿದು [1] ಪಾಪಾನುರಾಗಮೆಂ ಪತ್ತುವಿಟ್ಟು ದುರ್ಜನರೊಡನಾಟಮಂ ಮಾಣ್ಬುದೆನ್ನಾಣೆಯೆಂದು ತನ್ನಂ ಮುಟ್ಟಿಸಿಕೊಂಡು ಮಗನ ಕದಪಂ ಕರ್ಚಿ ಪಸಾಯನಮಂ ಕೊಟ್ಟರಿಮಥನಮಹಾರಾಜಂ ಸಂತಸದಿನಿ ಪ್ರ್ದುಂ, ॥ ೪೧

ತೆಂಗಿನ ಪೊಸನೇಣಿಂದಱು
ದಿಂಗಳ್ವರಮಡಸಿ ಕಂಬಿಯಿಂ ಕಟ್ಟಿದೊಡಂ ।
ತಾಂ ಗಡ ಬಿಟ್ಟೊಡೆ ಮತ್ತಂ
ಪಿಂಗದು ಡೊಂಕೆಂಬ ನಾಯ ಬಾಲದ ತೆಱದಿಂ ॥ ೪೨
ಮೆನ್ನಿಸದೆ ತಂದೆಯಂ ಪೊಲಿ
ಲಂ ನೆಱೆ ಕಾಡುತ್ತುಮೆಲಿಸುತ್ತುಂ ದೂರ್ತಿಂ ।
ದಂ ನೃಪಸುತನಿರೆ ಮತ್ತಂ
ತನ್ನಾಣೆಯನುಱುದುದರ್ಕೆ ಮುಳಿದು ನರೇಂದ್ರಂ ॥ ೪೩

[1] ಧರ್ಮಮದನಱಿಯದೆಂಪಾಪಾ (ಗ)

ಲಲಿತಾಂಗನಂ ಬರಿಸಿಕೊಂಡು ಮಗನೆ ಪಲ್ಲಿಂಗೆ ಪಾಲಂ ಬಿಟ್ಟೊಟ್ಟಿ ಡೊಸಡೆಲ್ಲಮಂ ದೈವಂ ತಿಂದುದೆಂಬಂತೆ ಮೋಹದಿಂ ನೀಂ ಮಾಡಿದ ಪಲವು ಪೊಲ್ಲವೆಗಳಂ ಸೈರಿಸಿದ್ದೊಡಂ, ನೀಂ ಕೊವಿ ಗಾಳಯೊಳ್ಕೊ ಡಿದ. ಕಿರ್ಚಿನಂತೆ ದಳ್ಳುರ್ಪಿದು ಪೊಱಲೊಳಗೆ ಮುನ್ನಿನೆಡೆಗೀಗಳುಂ ಪಿರಿ ದಬ ರಮಂ ಮಾಡಿದೆಯಿಂತು, ॥ ೯೪

ಕೆಟ್ಟಪೆಯೆಂದಾನೀಕ್ಷಿಸೆ
ನೆಟ್ಟನೆ ನೀನೆತ್ತಿಕೊಂಡ ಕಳ್ಳಂ ಬಾಯಂ।
ಸುಟ್ಟೋಡಿದನೆಂಬಂತಿರೆ
ದುಷ್ಟಾ ನೀಂ ವಿಾಱು ನೆಗಟ್ಪೆಯೆನ್ನಾಣೆಯುಮೆಂ ॥ ೯೫

ಮೆಕ್ಕಳಂ ಪಡೆವೆನೆಂದು ಮೆರ್ದಂ ಕುಡಿದ ಮೆಱುದಿವಸಕ್ಕೆ ಗಂಡಂ ಸತ್ತನೆಂಬಂತೆ ಮತ್ತಿನ ಮೆಕ್ಕಳಮುದಾಸೀನಂಗೆಯ್ದು ನಿನಗೆ ರಾಜ್ಯಮಂ ಕುಡಲೆಂದಿರ್ದೆನ್ನ ಚಿತ್ತಕ್ಕೆ ಸಂತಾಪಮಂ ಮಾಡಿದೆಯಿನ್ನೆ ನ್ನ ಮೇಲೆ ಪಳಯುಂ ಪಾಪಮುವಿಲ್ಲ ॥ ೯೬

ಕಡುಲೇಸೆಂದೋಡಂ ಪಿಡಿ
ದೊಡೆ ಕೈ ಮಸಿಯಪ್ಪ ಮಾರ್ಗದಿಂ ದುರ್ಜನರಂ।
ಕಡುವೋಹದಿನೊಳಕೊಂಡಿ
ರ್ದೊಡೆ ಕೆಡುಗುಂ ತನ್ನೊಳಾದ ಗುಣಮೆನಿತನಿತುಂ ॥ ೯೭

ಅದುಕಾರಣದಿಂ ದುರ್ಜನನಾಗಿರ್ದ ನಿನ್ನನೊಳಕೊಂಡಿರ್ದೊಡೆ ನಗಿಹದೊಳಿರ್ಪ ಕೀರ್ತಿಯುಂ ಪರದೊಳಿಪ್ಪ ಸದ್ಗತಿಯುಂ ಕಿಡುಗುಮಿ ನ್ನೆನ್ನಾಳ್ವ ದೇಶದೊಳಿರದೆ ಪೊಱಮಟ್ಟು ಪೋಗೆಂದು ಜಡಿದು ನುಡಿದೊ ಡರಸನ ಮಾತಿಂಗೆ ಲಲಿತಾಂಗನೆಟ್ಟು ಸೌಂದರಿಮಹಾದೇವಿಯಲ್ಲಿಗೆ ಬಂದು ತನ್ನ ದೇಶತ್ಯಾಗವೃತ್ತಾಂತಮಂ ಪೇಟೆ ಕೇಳ್ದಂತೆಂದಳ್:— ೯೮

ಜಗದೀಶಂ ಸ್ನೇಹದಿಂದಂ ಕಱುವೆ ಬಿಡುವುದೀ ದೂರ್ತನೆಂದಾರ್ತನೇ ಕೈ ಮುಗಿದಾನುಂ ಪುತ್ರ ವಾಣೀ ಖಳರ ಕೆಳಯನೆಂದಾರ್ತನೇ ಮಂತ್ರಿವರ್ಗಂ

ಮಿಗೆಯಾವೇನೆಂದೆವೆಂದಂತಿರೆ ನೆಱೆ ನೆಗಟೆಂದಾರ್ತರೇ ನಿನ್ನ ಸೊಕ್ಕಿಂ
ಮಗನೇ ನೀಂ ಮಾಡಿಕೊಂಡೈ ನೃಪನ ಮುಳಿಸನಾನೇಗುವೆಂ ಕೂರ್ತು
ಕಂದಾ ॥೯೯

ಕ್ಷಿತಿಪಂ ನಿನ್ನ ಸಮಸ್ತಪೊಲ್ಲಮೆಗಳಂ ಕಣ್ಣಾರೆ ಕಂಡುಂ ಮಹೋ
ನ್ನತಚಿತ್ತಂ ಸುತವೋಪದಿಂ ಪಲವುಸೂಚ್ನಾಣ ಮಾಣೆಂದೊಡಂ
ಸಿತಗಂ ಮಾಣದೆ ದುಷ್ಪ್ರಸಂಗತಿಯನೇವಂ ಭೂಪನೆಂದಿರ್ದೊರಂ
ಟುತನಂ ಕಣ್ಗಳಿವಾಯ್ತು ಪೆತ್ತೆನಗೆ ನೀಂ ಪೊಂಬಟ್ಟಮಂ ಕಟ್ಟಿದೈ॥೧೦೦

ಕಡುಗಾಯ್ದಂ ನೀರ್ ಮನೆಯಂ
ಸುಡಲಱಿಗುಮೆ ಮಗನೆ ಮುಳಿಸಿನಿಂ ನಿಮ್ಮಯ್ಯಂ।
ನುಡಿದನಿತಱಿಂದೆ ಕಳವನೆ
ಬಿಡುವುದು ದುರ್ಗುಣಮನಣ್ಣ ಪಿಡಿವುದು ಗುಣಮಂ ॥ ೧೦೧

ಎಂದು ಸೌಂದರಿಮಹಾದೇವಿ ನುಡಿದ ನುಡಿಗಳಂ ಕೊಪೆವಾವು ಗಾರುಡಮಂ ಕೇಳದಂತೆ ಕೇಳದಿರೆ ಬೇಸತ್ತು, ೧೦೨

ಇಂಬಾಗಿ ತಂದೆಗಂ ತಾ
ಯ್ಗಂ ಬಗೆವೊಡೆ ನಚ್ಚಿದೆವ್ಮೆ ಕೋಣನನೀದ।
ತ್ತೆಂಬಂತೆ ಮಾಡಿದೈ ಗುಣ
ಮಂ ಬಗೆಯದೆ ಮಗನೆ ದುಷ್ಪ್ರಸಂಗತಿಯಿಂದಂ ॥ ೧೦೩

ಕಾಗೆಯು ಮಱಿಯೆಯೆಂದಱಿಯದೆ
ಕೋಗಿಲೆ ಕೈಗೊಂಡು ಕೂರ್ಮೆಯಿಂ ನಡಪಿದೊಡಂ।
ಕಾಗಾಯೆಂದುದು ಮೆತ್ತಂ
ಕಾಗೆಗಳೂಡಗೂಡಿತೆಂಬವೋಲ್ನೀಂ ಮಗನೇ ॥ ೧೦೪

ಕಳ್ಳಂ ಕುಡಿದರಂತೆ ಸೊಕ್ಕಿ, [1] ದೊಗ್ಗಳೆಯುಂತುಬ್ಬಿ [ಬಳವ ಮೊಲೆಯಂತೆ ಕೊವ್ವಿ,] ಎಳವೆಱೆಯಂತೆ ವಕ್ರನಾಗಿ, ಸೂಳೆಯಂತೆ

---

[1] ಕಾಯ್ದ ಪಾಲಂತುರ್ಕಿ (ಗ)

ಕಾಪಾಗಿ, ಮುಳ್ಳಾಸೆಯಂತೆ ಕ್ರೂರನಾಗಿ, ಸತ್ತರಂತೆ ವೈವಿಟ್ಟು [1] ಪಗೆ ರಣಿಗನಂತೆ ವಿಪರೀತನಾಗಿ, ಪಚ್ಚೋತಿಯುಂತೆ ಪಲವುಂಬಣ್ಣ ಮೊಗಿ ಬಾಗೆಯಂತೆ ನಿಕ್ಕಾರನಾಗಿ, ಅಶೋಕೆಯಂತೆ ನಿಷ್ಫಲನಾಗಿ, ತಱಿಯದ ಮರದಂತೆ ನೇರದನಲ್ಲದೆ, ಬಡವನಂತೆ ಪುರುಳಿಲ್ಲದೆ, ಕಾಗೆಯಂತೆ ಮತಿಯಿಲ್ಲದೆ [2] ರಂಡೆಯಂತೆ ಪತಿಯಿಲ್ಲದೆ, ಕಾಲ್ಗಟ್ಟನಂತೆ ಗತಿಗೆಟ್ಟು, ಬೆಸನಿಯುಂತೆ ಪೆಂಪಂ ಬಿಟ್ಟು, ಕುಬುರೆಯಂತೆ ಕೀಲಿಂ ಕೈಕೊಂಡು, ತೇಱನಂತೆಲ್ಲಂ ಪಳಿಗವೊಳಗಾದ್ಯೆ, ನಿನ್ನ ಕೇಡಿಂಗಳಲ್ಲಾರದು, ನೀನಱಿವೈಯೆಂಬುದುಂ, ವಿಜಯಪ್ರಭಮಂ ಪೊಱಮಟ್ಟು ಪೋಗಿ ನೇಪಾಳದೇಶಮಂ ಪೊಕ್ಕಲ್ಲಿ, ೧೦೪

ಪಾವಿನ ನಂಜುಮನವರುಮ
ನೋವಿನಿಸಂ ತೂಗಿ ನೋಡೆ ದುಷ್ಟತನಕ್ಕಾ ।
ಪಾವಿನ ಪಲ್ಲ ವಿಷಕ್ಕಂ
ಭೂವಿಸೆ ಮಿಗಿಲೆನಿಪ ಕಳ್ಳರೊಳ್ ಲಲಿತಾಂಗಂ ॥ ೧೦೬

[ಕೂಡಿ ಕೆಳಗೊಂಡು ಬಿಡದೊಡ
ನಾಡಿ ನೃಪಾಚಾರಮಿಲ್ಲಮಂ ಮಱೆದೊಪ್ಪನುಂ ।
ಡೋಡಾತಿ ಕೆಟ್ಟು ದೂರ್ತಿಂ
ನಾಡೆಯುಮವರೆಡೆಗೆ ತಾನೆ ಮಿಕ್ಕಂ ಧರೆಯೊಳ್ ॥ ೧೦೭

ಅಂತು] ಮುನ್ನ ಬಂದ ಕಿವಿಯಿಂದಂ ಬಟ್ಟಿಕಂ ಬಂದ ಕೋಡು ಕೂರಿತ್ತೆಂಬ ನಾಣ್ಣುಡಿಯಂತೆ ಮುನ್ನಿನ ಕಳ್ಳರೆಡೆಗೆ ತಾನೆ ಪ್ರಸಿದ್ಧನಾಗಿ ತನಗವರ್ಕೂರ್ಮೆಯಿಂದುಪದೇಶಂಗೆಯ್ದಂಜನಘಟಿಕೆಯುಂ ಸಾಧಿಸಿ ತದ್ಘಟಿಕಾಪ್ರಯೋಗದಿಂದದೃಶ್ಯರೂಪಂ ಕೈಕೊಂಡು ಜಗವೆಲ್ಲಮಂ ವೊಟ್ಟನಾಗೆ [3] ಕಳ್ವಂಜನಚೋರನೆಂಬ ಪೆಸರೆಸೆಯೆ ನೆಗಟ್ಟು, ೧೦೮

---

1 ಪಗರಣಿಗನಂತೆ ಬೋಡಾಗಿ, ಬಂವವಾಯಿನಂತೆ ವಿಪರೀತನಾಗಿ (ಗ)

2 ಕುಚಿಯಿಲ್ಲದ (ಬ)

3 ಲೋಕವೆಲ್ಲಮಂ ನಿವಾಳಿಸಲ್ಕಂಮಾಡಿಕಳ್ವ (ಗ)

ಕಳವುಂ ಜೂಜುಂ ಮೊಂಸದೆ
ಮಳಿನತೆಯುಂ ಮಾಬ್ಪ ಬೇಂಟೆಯುಂ ಪರಸತಿಗ।
ಳ್ಗಳಸುವುದುಂ ಬ್ರತವಿಲ್ಲದೆ
ಬೆಲೆವೆಣ್ಣೊಡನಿರ್ಪುದೋತು ಚಂಡಿವುದು ಕಳ್ಳಂ ॥ ೧೦೯

ಅಸುಗತಿಯನೆಯ್ದಿಸಲ್ಕವು
ಮಿಸುಪ ಮರುಜ್ಜವದ ತುರಗಮೆನಿಸುವ ಸಪ್ತ।
ವ್ಯಸನಮನೆ ಬಿಡದೆ ಕೈಕೊಂ
ಡೆಸಗಿ ಸದಾಚಾರಮಿಲ್ಲಮಂ ನೆಱೆ ಮಱೆದಂ ॥ ೧೧೦

ಎಲ್ಲಿ ವಿನೋದಮೆಲ್ಲಿ ವಿಟರೆಲ್ಲಿ ಮನಂ ನಡುಗೆಲ್ಲಿ ದುಷ್ಕರಂ
ತೆಲ್ಲಿ ಕನಿಷ್ಠರೆಲ್ಲಿ ಗಣಿಕಾಜನವೆಲ್ಲಿ ಪುಳಿಂದಗೋಷ್ಠಿ ಮ
ತ್ತೆಲ್ಲಿ ಜಡಾತ್ಮರೆಲ್ಲಿ ಚಪಳಾರ್ಕರಮೆಲ್ಲಿ ವಿಶೇಷಕಳ್ಳರಂ
ತಲ್ಲಿಯೆ ರಾಗಮಲ್ಲಿಯೆ ಮಹೋತ್ಸವಮಲ್ಲಿಯೆ ತಾಣಮಾಗಳುಂ ॥ ೧೧೧

ಅಂತು ತನ್ನ ಮನಕ್ಕೆ ಬಂದಂತೆ ನೆಗೞುತ್ತುಂ ಕರಟದ ಕದಿರಂತೆ ತಿಱ್ರನೆ ತಿರುಗುತ್ತುಮೂರ್ಮೆ ರಾಜಗೃಹಮೆಂಬ ಪುರಕ್ಕೆ ಬಂದು ತತ್ಪುರದ ಸೂಳೆಗೇರಿಯಂ ಪೊಕ್ಕಾರುಮೆಂ ಮೆಚ್ಚದೆ ಪೋಗುತ್ತುಮಿರ್ದು ಮನಸಿಜನ ಕಯ್ಯ ಮೆಸೆದಸಿಯನನುಕರಿಸುವ ಅನಂಗಸೌಂದರಿಯೆಂಬ ಸೂಳೆಯಂ ಕಂಡು ಕಣ್ಬೆಟ್ಟಿಂಗೊಂಡೊತ್ತೆಗಟ್ಟಾಕೆಯ ಮೇಲೆ ಮೋಹಮುಂ ಸ್ನೇಹಮುಂ ತಿಣ್ಣಮಾಗೆ, [1] ॥ ೧೧೨

ಓಪಳ ಕೂರ್ಮೆಯೊಳಬ್ಜ
ದ್ವೀಪದ ಗುಳ್ಳೆಯವೊಲಗಲಲಾಱದೆ ಸಲೆ ನಿ।
ಕ್ಷೇಪದ ಪೊನ್ನಂ ಕೈಕೊಂ
ಡೇಪೊತ್ತುಂ ನೋಡುತಿರ್ಪ ಪಾವಿನ ತೆಱದಿಂ ॥ ೧೧೩

---

1 ಪುರದಲ್ಲಿ ಕಾವನ ಕೈಯ ಕೂರಸಿಯೆನಿಸಿಪ್ಪನಂಗಸುಂದರಿಯೆಂಬ ಸೂಳೆಗೆ ಳೂರ್ತು (ಗ)

ಇರುತಿರ್ದಾಕೆಯೆನಿತರ್ಥಮಂ ಬೇಡಿದೊಡನಿತುಮಂ ಪ್ರೀತಿಯಿಂ ಕೈದೆಗೆಯದೆರಡುಗೇಳದೆಯನವರತಂ ಕುಡುತ್ತುಮಿರ್ದುದುಮೊತನೋರಂತೀವ ಕೋಡಿಂಗನಂಗಸಂದರಿ ಬೆಱಗಾಗಿ ತನ್ನೊಳಿಂತೆಂದಳ್ : ೧೧೪

ಸುರಪತಿಯಂ ಸಿರಿಯೊಳ್ಕ
ಚ್ಚರಿಸುವ ಧರಣೀಶರುತ್ತರಾಶಾಧಿಪನೊಳ್ [1] ।
ದೊರೆಯೆನಿಪ ವೈಶ್ಯಜಭ್ಯಾ
ಸುರತೇಜರ್ಮಿಕ್ಕ ಗಂಡರೆನ್ನ ಬೊಜಂಗರ್ ॥ ೧೧೫

ಅಂತಪ್ಪವರೊಳಮೀತನೊಂದುದಾರತೆಯಂ ಕನಸಿನೊಳಾದೊಡಂ ಕಂಡಱಿಯೆನೀತಂಗೆ ಪ್ರೊಱಿಗೆ ನಾಡಿಲ್ಲೊಳಗೆ ಭಂಡಾರಮಿಲ್ಲೀತಂಗೆ ಪೊನ್ನೆತ್ತಣಂ ಬಪ್ಪುದಿದನಾರಯ್ವೆನೆಂದು ಪುಸಿಗೂರ್ಮೆಯಿಂದನೇಕಚಾಟುಕಾರದಿಂ ನಂಬಿಸಿ ಮೆಲ್ಲನೆ ಬೆಸಗೊಳ್ವುದುಂ, ಮೈಮಱೆದು ತನ್ನ ಕಳವಿನ ಮೊರ್ಗಮೆಲ್ಲಮಂ ಪೇಱೆ, ಕೇಳ್ದನಂಗಸಂದರಿ ಬೆಱಗಾಗಿ ಪ್ರದುಂ, ಮಱುದಿವಸಮರಸನರಸಿಯರ್ಬೆರಸು ತೂರ್ಯತ್ರಯವೊಪ್ಪೆ ಜಲಕ್ರೀಡೆಗೆ ಪೊಱಮಟ್ಟು ಪೋಗುತ್ತಿರೆ, ೧೧೬

ತರಣಿಯ ಕಿರಣಾವಳಿಗಂ
ಸರಸಿಜವೈರಿಯ ಮೆಯ್ಯೂಱತತಿಗಂ ಮಿಗಿಲ ।
ಚ್ಚರಿ ಕಾಂತಿಯೆನಿಪ ಬೆಳಗಿಂ
ಸ್ಪುರಿಯಿಪ ಸದ್ರತ್ನನಿಕರದಿಂದೊಪ್ಪುವುದಂ ॥ ೧೧೭

ಪಟ್ಟದ ಮೆಹಾದೇವಿಯುರದೊಳೊಪ್ಪುತ್ತಿರ್ದ ಜ್ಯೋತಿಪ್ರಭ ಮೆಂಬ ಪದಕಮೆಂ ಕಂಡನಂಗಸಂದರಿಯಾಪದಕದ ಮೇಲೆ ಪ್ರೀತಿ ಬಟ್ಟು,[2]ಅಂಜನಚಕೋರಂ ಘುಟಿಕಾಪ್ರಯೋಗದಿಂದದೃಶ್ಯರೂಪದಿಂಪೋಗಿ ಕಳ್ದು ತಂದುಕುಡುವ ಸಮರ್ಥನೆಂಬುದಂ ತಾಂ ಬಲ್ಲಳಪ್ಪುದಱಿಂದಾ ಪದಕಮನೆನಗೆ ಕೂರ್ತಿಯಪ್ಪೊಡೆ ಬೇಗದಿಂ ತಂದೀವುದೆಂದು ಲಲ್ಲೆಗೈದು

1 ಉತ್ತರಾಧಿಪನೊಳ್ (ಗ) 2 ಅಂಕವಾಗೆ ಪ್ರೀತಿಯಿಂದಂಜನ (ಕ)

ಪ್ರಾರ್ಥಿಸುವುದುಮದು ಪೊಱಗಾಗೆ ನೀನೇನಂ ತರವೇಱ್ದೊಡಂ ತಂದಿತ್ತ
ಪೆನಿದೊಂದು ಮಾತ್ರಂ ಬೇಡದೇಕೆನೆ, ೧೧೪

ಆ ಪದಕಂ ಬಂದೊಡೆ [1] ಕೇ
ಳ್ಪೊತ್ತುಂ ತೊಡಲೆವೇಱ್ಕುಮೆಱ್ದೊಡೆ ನಿನ್ನಂ ।
ಭೂಪತಿ ಕೊಲ್ಗುಂ ಕವೆರುಗು
ಮೇಪಡಿಮಾತದಱ ಪಂಬಲಂ ಬಿಡು ನಯದಿಂ ॥ ೧೧೫

ಎಂಬುದುಮೆಂಜನಚೋರಂಗೆ ಮುಳಿದು ಪಾಸಿನ ಮೇಲಿಂ ನಲ್ಕ್ಕೆ
ಬೀಳಲೊದೆದು, ಕಾಲೊಳಂ ಕೈಯೊಳಂ ಮೊಡೆಗಟ್ಟುವಂತೆ ಮೋದಿ,
ಕೋಪಾನಳನಿಂ ಕಣ್ಗಾಣದೆ ಕೆಲದೊಳಿರ್ದ ಜಂತದ ಪಾವುಗೆಯಿಂದ
ಮಿಟ್ಟು, ೧೧೬

ತೊಡವೆನಗಪ್ಪೊಡೆ ಲಕ್ಕಂ
ಬಡೆವವು ಪಲವೊಳವು ನಂಬೆಯಪ್ಪೊಡೆ ನೋಡೀ ।
ಗಡೆ ಕೂರ್ಪೆಯೆಂದು ನಾಂ ಪೇ
ಱ್ದೊಡೆ ಗಂಡರ ಬೂತೆ ನುಡಿವುದೇ ಪೆಱಪೆಱತಂ ॥ ೧೧೭

ಸಿತಗೆಯೆ ನಾನೆಮ್ಮಿಬ್ಬೆಯ
ಮೆತಮುಂ ಬಂಧುಗಳ ವಚನಮೆಂ ಮೀಱಿ ಮಹೋ ।
ನ್ನತಿಯಿಂ ನಿನ್ನೊಡನೋತಿ
ರ್ದತಿಚಪಳಗೆ ಭಾವಿಸಂದಿದಾವುದು ಚೋದ್ಯಂ ॥ ೧೧೮

[ಎನ್ನೆಂದ ಮಾತನಂತಿಂ
ತೆನ್ನದೆ ತಡೆದಿರದೆ ಕೂಡುವಚ್ಚಿಗಮಂ ಕೇಳ್ ।
ನಿನ್ನೊಡನಿರ್ದ ಬೊಜಂಗರ್
ನಿನ್ನಂತಿರೆ ಬಂಜರಲ್ಲರದಟರ್ಕಳವರ್ ॥] ೧೧೯

ಎಡೆಯನರಸಾದೊಡೆ ಕೊಡೆಯು ಕಾವು ಮೇಗಾದುದೆಂಬಂತೆ
ದೇಸಿಗನಪ್ಪ ನಿನಗೆರಡಿಲ್ಲದೆ ಸ್ನೇಹಮೆಂ ಮೊಡಿ ಕೂಡಿರ್ದೆನಗೆ ಸಂತೋ

---

1 ನಿಸಗಾಪೊತ್ತುಂ (ಕ)

ಷಮಂ ಮಾಡಿದೈ [ಎಂದಾತನೆರಡಿಲ್ಲದೆ ಕೂರ್ತುದನಱಿದನಪ್ಪುದನ ಱಿದು] ಕಡೆಗಣ್ಣ ನೋಟದೊಳ್ ಶೃಂಗಾರರಸಮುಂ ಮೆಲ್ನುಡಿಯೊಳ್ ಕಾರುಣ್ಯರಸಮುಮೊಡನೊಡನೆ ಪೆರ್ಚಿ ನುಡಿಯಲಿನ್ನು ನಿದಪಳೆಂದಂಜನ ಚೋರಂ ಭಯಂಗೊಂಡು ನಲ್ಲಳ ಪಾದಮಂ ತಲೆಯೊಳ್ ಪೊತ್ತು ಕೊಂಡು [ಎನ್ನ ಮುದ್ದಿ ಮುನಿಯದಿರಿದಾವ ಗತನಂ] ನಿನಗದಂ ತಂದೀ ವೆನಂಜದಿರೆಂದು ಸಂತಸಂಗೊಳಿಸಿ ಕಳ್ಳಂಗೆ ಬೆಳ್ದಿಂಗಳ್ ಸೊಗಸದೆಂಬ ನಾಣ್ಣುಡಿಯಂ ನಿಜ್ಮಿಮಾಡಿ ಶುಕ್ಲಪಕ್ಷಂ ಪೋಪಿನಮಿರ್ದು ಕೃಷ್ಣಪಕ್ಷದ ಷ್ಟಮಿಯಂದು, ೧೭೪

ತುರಿಪದಿನಂಜನಮಂ ವಿ
ಸ್ತರದಿಂದಂ ಕಣ್ಣೊಳಚ್ಚಿಕೊಂಡಾವರದಿಂ ।
ಭರದಿಂದದೃಶ್ಯರೂಪಿಂ
ದರಮನೆಯಂ ಪೊಕ್ಕು ಪದಕಮಂ ಕೊಂಡಾಗಳ್ ॥ ೧೭೫

ಪೊಱಮಟ್ಟು ಪೆರ್ಚಿನಿಂ ಮೆ
ಯ್ಯಱಿಯದೆ ಬರೆ ರತ್ನದೀಪ್ತಿ ದೆಸೆದೆಸೆಗೆಲ್ಲಂ ।
ಮಿಱುಗೆ ರವಿಕಿರಣನಿಕರದ
ತೆಱದಿಂ ತೊಱಲುತ್ತುಮಿರ್ಪ ದಂಡಕನೆಂಬಾ ॥ ೧೭೬

ತಳಾಱಂ ಕಂಡಱಿದಾತನಂಜನವಿದ್ಯೆಯಂ ಕೆಡಿಸಿ ಬೆನ್ನಟ್ಟಿಬರೆ ಭಯದಿಂದಂಜನಚೋರಂ ಪದಕಮನೀಡಾಡಿ [1]ಯಾ ಪುರದ ಕೋಂಟೆಯಂ ವಿದ್ಯಾಧರಕರಣದಿಂ ಲಂಘಿಸಿ, ದೆಸೆಗೆಟ್ಟೋಡುವಾತನೆಂದು ಶ್ಮಶಾನಭೂಮಿ ಯೊಳಾಲದ ಮರದ ಕೆಳಗುರಿವೆ ಸೊಡರಂ ಕಂಡಲ್ಲಿಗೆ ಬಂದು ನಿಂದು ನೋಡುವಾಗಳಾಲದ ಮರದ ಕೊಂಬಿನೊಳ್ ನೂಱೊಂದು ಕಾಲ ನೆಲ ಪಂ ಕಟ್ಟಿ ನೆಲಪಿನ ಕೆಳಗೆ,

ಪರಶು ಬಿಲು ಕೊಂತಮೆಸಿ ತೋ
ಮರ ಮುದ್ಗರ ಭಿಂಡಿವಾಳ ಚಕ್ರಂ ಶೂಲಂ ।

[1] ಬೆನ್ನಟ್ಟಿಹಾರವನೀಡಾಡಿ (ಗ)

ಸುರಿಗಿ ಮೊದಲಾಗೆ ಮೂವ
ತ್ತೆರಡಾಯುಧಮಂ ಮಹೋತ್ಸವಂಬೆರಸಿನಿತಂ ॥ ೧೮೪

ನಿಲಿಪಿ ಪೂಜಿಸಿ ನೆಲಪಿನ ಕಾಲಂ ಕೊಯ್ಯಲಣ್ಮದೇಬುತ್ತುಮಿಱು ಯುತ್ತುಮಿರ್ಪನಂ ಕಂಡಂಜನಚಕೋರನವನಂ ಪಿಡಿದು ನೀನಾರ್ಗೆ ನೀಂ ಸಾಧಿಸುವ ವಿದ್ಯೆಯು ಪೆಸರೇನಿದನುಪದೇಶಂಗೆಯ್ದಾರ್ ಪೇಱಿ', ಪೇಱಿ ದಂದು ನಿನ್ನನಿಲ್ಲಿ ಕೊಲ್ಲದೆ ಮಾಣೆನೆಂದು ಸುರಿಗಿಯುಂ ಕಿಱ್ತು ಗಂಟಲ್ಗೆ ಪೂಡುವುದುಂ, [1] ಪ್ರಾಣಭಯದಿಂ ಬೆರ್ಚಿ, ೧೮೫

ಎನ್ನ ಪೆಸರ್ವರಸೇನಂ
ಸನ್ನುತವಿದ್ಯೋ ಗಗನಗಾಮಿನಿಪೆಸರಿಂ।
ಮುನ್ನಿದನುಪದೇಶಂಗೆ
ಯ್ದನ್ನೆಱೆ ಜಿನದತ್ತಸೆಟ್ಟಿ ನಿರ್ಮಳಚರಿತಂ ॥ ೧೮೬

ಎಂಬುದುಮಂಜನಚಕೋರಂ ವರಸೇನನ ಮಾತಿಂಗೆ ಮುಗುಳ್ನಗೆ ನಕ್ಕು [2] [ಸಕಲಸದ್ಗುಣನಿಳಯನುಂ ಸದ್ಧರ್ಮಜಲನಿಧಿಚಂದ್ರನುಂ ಸತ್ಯ ನಿಧಿಯುಂ ದಯಾನಿಧಿಯುಮೆನಿಸಿ ನೆಗಳ್ದ ಜಿನದತ್ತಸೆಟ್ಟಿಯೆ ಮಂತೊ್ರೀ ಪದೇಶಂಗೆಯ್ದನೆನೆ, ನಿನಗೆ ಪಂದೆತನವೆ ತಾನಾದೊಡಿನಿತಾನುಂ ಭಯಮಿ ಲ್ಲವೊರ್ವಯೆ ನೆಲಪಿನ ಕಾಲೆಲ್ಲಮಂ ಕೊಯ್ವಂ ನೀನಾದೊಡೇಱು ತ್ತುಮಿಱುಯುತ್ತುಮಿಂತೇಕಿರ್ದಪೈ ಭಯಂಬೇಡೆನೆ, ವರಸೇನನಿಂ ತೆಂದಂ :— ೧೮೭

ಎತ್ತಲಱಿವರ್ಮನುಷ್ಯ
ರ್ಕಿತ್ತಮನಾರಯ್ಯನಾನಿವಂ ಕೊಯ್ದಿಗ್ಗಿಂ।
ಸತೊ್ತಡೆ ಬಱುಕ್ಕೆ ಕನಸಿನ
ಬತ್ತಕ್ಕೆಚ್ಚತ್ತು ಗೋಣಿಯಾಂತಂತಕ್ಕುಂ ॥ ೧೮೮

---

[1] ಪೋದುವುದುಂ (ಗ) [2] ಜೋರನಾವಾತಿಂಗೆ ಖನಖವಿಸಿ ನಳ್ಕು (ಗ)

ಸತ್ತು ಕೊಳ್ವ ಸ್ವರ್ಗದಿಂ ಬದ್ದು ಕೊಳ್ವ ನರಕಂ ಲೇಸು. [ಎಂಬುದು ನಾಣ್ನುಡಿ.] ಜೀವಮುಳ್ಳೊಡೆ ಹಾಡಿ[1] ಕೊಂಡುಣಲಕ್ಕುಮೆಂಬ ನೀತಿಯಂ ಬಿಟ್ಟು ಮಾರಿಯುಂ ಬಳಾರಿಯುಂ ಸಾಯ್ದು ಮೋನಾದೊಡೊಲ್ಲೆನೆನೆ, ಲಲಿತಾಂಗಂ [ತನ್ನಂತರಂಗದೊಳಿಂತೆಂದಂ:—ಮೊಗಿಲಂ ಮುಟ್ಟಿದುದಱ ನೀಳ್ವಮೆಂ, ಮಕ್ಕಳ್ಪತ್ತಳವುದುವೆಯಂ, ಪಟ್ಟಂಗಟ್ಟಿದನ ರಾಜ್ಯಮೆಂ, ಗೆಲ್ದಂಕದ ಗೆಲ್ಲಮೆಂ, ವೋಹ್ಣಮೆನೆಯ್ದಿದನ ತಪಮೆಂ, ಪರ್ವತಮನೆತ್ತಿದನ ಸಾಹಸಮೆಂ], ಸಮುದ್ರಮಂ ಲಂಘಿಸಿದನಾರ್ಯಂ, ಇಂದ್ರತ್ವಮಂ ಪಡೆದವನ ಜಿನಭಕ್ತಿಯಂ, ಕಾಮನನೆಱಲಿಸಿದಳ ಸೊಬಗಂ, ತ್ರಿಭುವನವಿಜಯಿಯ ವೀರಮಂ, ಚಕ್ರವರ್ತಿತ್ವಮನೆಯ್ದಿದನ ವಿದ್ಯೆಯುಮಂ ಬೆಸಗೊಂಬವನ ಬೆಳ್ತನದಂತೆ,[2] ೧೩೩

ಜಿನದತ್ತಂ ಜಿನಪಾದಪದ್ಮ ಮಧುಪಂ ದುಷ್ಕರ್ಮಧಾನಾಗ್ನಿ ಸ
ಜ್ಜನಚೂಡಾಮಣಿ ಸರ್ವಜೀವಹಿತನಿಂದಾರ್ದ್ರಿಕ್ಷಮಂ ನಿರ್ಮಳಂ
ವಿನಯಾಲಂಕೃತನಾಗಮಾನ್ವಿತನುದಾರಂ ಸತ್ಯವಾಕ್ಯಂ ಜಗ
ಜ್ಜನಸಂಸ್ತುತ್ಯನಣುವ್ರತೈಕನಿಳಯಂ ವಾತ್ಸಲ್ಯರತ್ನಾಕರಂ ॥ ೧೩೪

[ಬಂದಿಱುಂಪೆಯು ಪ್ರಾಣಕ್ಕಂ ತಪ್ಪದಾತಂ ನಿನ್ನ ಪ್ರಾಣಕ್ಕೆ ತಪ್ಪುವನೆ? ತಪ್ಪಲಱಿಯಂ, ನಾನಾತಳಾಱನ ಕೈಯೊಳ್ಸಾಯದಿಲ್ಲಿ ಪರಿಚ್ಛೇದಮಂ ಮಾಪ್ಪನೆಂದು] ೧೩೫

ಕೊಡು ಮಂತ್ರಮನೆಲೆ ಬೇಗಂ
ಕುಡದಿದ್ದೊಡೆ ನಿನ್ನ ನಿಲ್ಲಿ ದೆಸೆವಲಿಗೆಯ್ವಂ।

---

[1]ಹಾಡಿಯುಣಲಪ್ಪುದೀ ನಿಶಿತಾಸ್ತ್ರಾಂಗಳ ಮೇಲೆ ಬಿದ್ದು ಮಾರಿಯುಂ (ಗ)

[2] ಬೆಳ್ತನದಂತೆ ಚಯಾನಿಧಿಯುಂ ತತ್ವವಿದನುಂ ಮಹಾಪುರುಷನುಂ ಪಂಚಾಣುವ್ರತನಿಳಯನುಮಪ್ಪ ಜಿನದತ್ತಸೆಟ್ಟಿಯ ವಚನವನವಿಶ್ವಾಸಂಮಾಡಿದಪ್ಪೆ ನಿನ್ನಂ ಬಿಟ್ಟು ಕೂನ್ಯಹೃದಯನುಂ, ನಿರ್ಭಾಗ್ಯರುಂ ಲೋಕದೊಳಿಲ್ಲೆಂದು ಜೀರ್ಣಾಡಿ ಬೈದು ಬಗ್ಗಿಸಿ, ಕೊಡು ಮಂತ್ರಮನೆಲೆ ... (ಗ)

ತಡೆಯದೆನೆ ಪಂದೆಯಂ ಪಾ
ವಡರ್ದಂತಿರೆ ಬೆಚ್ಚಿ ನಾಡೆಯುಂ ವಗಸೇನಂ ॥ ೧೩೬

ಜಿನದತ್ತಸೆಟ್ಟಿ ಮುನ್ನಂ
ತನಗೆಂತಳವಡಿಸಿ ಪೇೞ್ದನಂತಾ ತೆಱದಿಂ ।
ಮನದ ಮಹಾಭಯದಿಂದಂ
ಜನಚಕೋರಂಗಱಿಯೆ ಪೇಪೆ ತಿಳಿದಾದರದಿಂ ॥ ೧೩೭

ಪರಮಜಿನೇಶ್ವರಪದಮಂ
ಸ್ಮರಿಯಿಸಿ ಜಿನದತ್ತಸೆಟ್ಟಿಗಾದರದಿಂದಂ ।
ಕರಯುಗಮಂ ಮುಗಿದುಂ ನಿ
ರ್ಭರರಚಿತ್ತಂ ಪಂಚಪದನನುಚ್ಚರಿಸುತ್ತುಂ ॥ ೧೩೮

ಏಱು ನೆಲಪಂ ಮನಂಬಿಡೆ
ತೋಱುವೆ ನೂಱೆಂಟು ತೆಱದ ನೆಲಪಿನ ಕಾಲಂ ।
ಕೀಱುಡದೆ ಶಂಕೆಯಿಂದಂ[1]
ಬೇಱೊಂದಂ ನೆನೆಯದನಿತುಮಂ ಲಲಿತಾಂಗಂ ॥ ೧೩೯

ಚೆಕ್ಕನೆ ಕೊಯ್ವುದುಂ, ಆಯುಧಾಗ್ರಮುಂ ಮುಟ್ಟವೆಂದು ತಾಗದೆ ಮೇಗಣ್ಗೆ ನೆಗೆಯೆ ತದ್ವಿದ್ಯಾದೇವತೆ ಮುಂದೆ ನಿಂದು ಕಯ್ಯಂ ಮುಗಿದು ಬೆಸಸು ಬೆಸಸೆನೆ, ಲಲಿತಾಂಗಂ ಬೆಸನೇನೆನ್ನಂ ಸುಕವಿನಿಕರಪಿಕಮೊಕಂದನಲ್ಲಿಗೊಯ್ವುದೆಂಬುದುಂ ಅಂತೆ ಗೆಯ್ವೆನೆಂದು ಮೇರುಗಿರಿಯ ಭದ್ರಸಾಲನಂದನವನದೊಳಿರ್ದ ಜಿನದತ್ತನಂ ತೋಱಿ ನೆಲಕ್ಕಟಿಪಿ ವಿದ್ಯೆ ಪೋಪುದು[2] ಮಂಜನಚಕೋರಂ ಮೇರುಗಿರಿಯಂ ನೋಡಿ ॥ ೧೪೦

---

1 ಶಂಕೆಯಿಲ್ಲದೆ (ಕ)

2 ಪೆಱಿತು ಬೆಸನಿಲ್ಲೆನ್ನಂ ಜಿನದತ್ತಸೆಟ್ಟಿಯಲ್ಲಿಗೊಯ್ಯೆಂಬುದುಂ ಲಲಿತಾಂಗನಂ ಮೇರುಗಿರಿಗೊಯ್ದು ಭದ್ರಸಾಲನಂದನವನದೊಳಿರಿಸಿ ಸವ್ಯಕ್ತ್ಯಾಜೊಡಾವುಣಿಯಂ ದೂತದೊಳಿರ್ದು ತೋಱಿ ಪೋಪುದುಂ (ಕ)

ಏಂ ಭಕ್ತಿಯಿಂ ವಿಧಾತ್ರಂ
ತಾಂ ಭಾವಿಸಿ ನೋಡಿ ಮಾಡಲೆನಿಸಿದ ಮಾನ ।
ಸ್ತಂಭವೆನಿಸಿರ್ದುದೊಳ್ಪಿಂ
ಶುಂಭಚ್ಛೈತ್ಯಾಭಾಕರಂ ಸುರೇಶ್ವರಶೈಲಂ ॥ ೧೪೧

ಎಂದು ಪೊಗಳ್ದು, ೧೪೨

ಅಗಣಿತಮಪ್ಪ ಕೆಂದಳಿರ ಗೊಂದಣದಿಂ ತುಱುಗಿರ್ದ ಮಾವು ಸಂ
ಪಗೆ ಸುರಹೊನ್ನೆ ಮನ್ನಥನ ಬೀಡಿನ ಕೆಂಗುಡಿಯೆಂಬ ಚೆಲ್ವಿನಿಂ
ಸೊಗಯಿಪ ಪಲ್ಲವಪ್ರಕರದಿಂ ನೆಱೆದೊಪ್ಪುವೆಶೋಕೆ ನಾಗಸಂ
ಪಗೆ ಹರಿಚಂದನಂ ಬಗೆಗೆವಂದುವು ಮೇರುನಗೋಪಕಂಠದೊಳ್ ॥ ೧೪೩

ಪಾಡುವ ತುಂಬಿಯಿಂ ಕುಕಿಲ್ವ ಕೋಗಿಲೆಯಿಂ ಕಡುರಯ್ಯಮೊಗಿರಲ್
ತೀಡುವ ದಕ್ಷಿಣಾನಿಳನಿನಿಕ್ಕಿರಿನೋತಿರದೊರ್ವರೊರ್ವರೊಳ್
ಕೂಡುವ ದೇವದಂಪತಿಗಳಿಂದೆಡೆಯಾಡುವ ಖೇಚರಾಳಿಯಿಂ
ದಾಡುವ ಕೇಕಿಯಿಂ ಮನಮೆನಿರ್ಪುಳಿಗೊಳ್ವುದು ನೋಱಲೊಪ್ಪಿಡೀಬನಂ ॥

ಎಂದು ಮೆಚ್ಚಿ ಪೊಗಳುತ್ತುಮತಿರಮಣೀಯಮೆಪ್ಪ ನಂದನವನದೊಳ್ ಶುದ್ಧಸ್ಫಟಿಕದ ನೆಲಗಟ್ಟುಂ ಪಚ್ಚೆಯ ಕಂಬಂಗಳಿಂ ಚಂದ್ರಕಾಂತದ ಬೋದಿಗೆಗಳಿಂ ಇಂದ್ರನೀಲದ ನಾಗವಟ್ಟಿಗೆಯಿಂ ವಜ್ರದ ಸೋಪಾನಂಗಳಿಂ ಪವಳದ ಕೀಲ್ಗಳಿಂ ಪ್ರಾಸ್ನ ಕೇರ್ಗಳಿಂ ವೈಡೂರ್ಯದ ಪಡಿಗಳಿಂ ಸೂರ್ಯಕಾಂತದ ದ್ವಾರಬಂಧಂಗಳಿಂ ಪದ್ಮರಾಗದ ಕ್ಷಲಶಂಗಳಿಂ ಪುಷ್ಯರಾಗದಮೆಕರತೋರಣಂಗಳಿಂ ಮುತ್ತಿನ ಸೂಸಕಂಗಳಿಂ ಮಾಣಿಕದ ಪ್ರತಿಮೆಗಳಿಂದೊಪ್ಪುವೆಕೃತ್ರಿಮಚೈತ್ಯಾಲಯಂಗಳಂ ಕಣ್ಣಾಣಿವಿನಂ ನೋಡುತ್ತುಂ, ಜಿನಪ್ರತಿಮೆಗಳಂ ಭಕ್ತಿಯಿಂ ಪಲತೆಱದರ್ಚನಾದ್ರವ್ಯಂಗಳಿಂದರ್ಚಿಸುತ್ತುಂ ಬಲಗೊಂಡು ಪೊಡೆಮಡುವ ದೇವವಿದ್ಯಾಧರಸಮೂಹಮಂ ನೋಡುತ್ತುಂ ಪೊಗಳುತ್ತುಂ ಉತ್ತಮವೈರಾಗ್ಯವ ಪೆರ್ಚುಗೆಯಂ ತಡೆಯದೆ ಸೆಟ್ಟಿಯನೆಯ್ದೆವಂದು, ೧೪೪

ಅಳಿನಿಕುರಂಬಮೆಶೋಕೆಯ
ತಳಿರಂ ಮುಸುಕುವೆವೊಲಂಘ್ರಿಪಲ್ಲವಮೆಂ ಕುಂ ।
ತಳತತಿಗಳ್ಮಸುಜಿ ಮಹೋ
ಜ್ಜ್ವಳತೇಜಂ ವೈಶ್ಯಜಂಗೆ ತಾಂ ಪೊಡೆಮೆಟ್ಟಂ ॥ ೧೪೬

ಅಂತು ತನಗೆ ಪೊಡೆಮೆಟ್ಟಂಜನಚೋರನಂ ಜಿನದತ್ತಸೆಟ್ಟಿ ನೋಡಿ ಬೆಱಗಾಗಿ ತನ್ನೊಳಿಂತೆಂದಂ :— ೧೪೭

ಬಱಿದೆ ಕುಣಿವೆಂಗೆ ಮತ್ತಂ
ಪಱಿಯುವೆನುಂ ಕೂಡಿದಂತೆ ಧಾರಿಣಿಯಂ ಮು ।
ನ್ನಱಿಯಟ್ಟ ಕಳ್ವ ಕಳ್ಳಂ [1]
ಗಱಿಕೆಯ ಸದ್ವಿದ್ಯೆ ಯಾರ ದೆಸೆಯಿಂದಾಯ್ತೋ ॥ ೧೪೮

ಮೊಗಿನೊಳುಳ್ಳಾವಾತಂಗೆ ನೇಗಿಲಂ ಕೊಟ್ಟರೆಂಬಂತೆ [ಗಾಳಿಯುಂ ವೆಲ್ವನ ಬಾಯ್ಗೆ ವಲಂ ಪೊಯ್ದರೆಂಬಂತೆ ಬಡಿದುಕೊಲ್ವಂಗೆ ಸಾಲಂ ಗೊಟ್ಟರೆಂಬಂತೆ ಕೊಲಲ್ಬರ್ಪಂಗಿದಿರ್ವೋದರೆಂಬಂತೆ] ಕವರಲ್ಬಂದಂಗೆ ಬಯಕೆಯಂ ತೋಱಿದರೆಂಬಂತೆ ಕಳಲ್ಬಂದಂಗೆ ಕೈಯೆಡೆಗೊಟ್ಟರೆಂಬಂತೆ ಪಿಡಿಯಬಂದಂಗೆ ಕೈನೀಡಿ ಕೊಟ್ಟರೆಂಬಂತೆ ಲೋಕದೊಳೀತಂ ಮಾಯಾವಿದ್ಯೆಯಪ್ಪಂಜನಘಟಿಕೆಯಿಂ ಜನರ ಸರ್ವಸ್ವಮಂ ಕಳ್ವನೀತಂಗೆ ಗಗನಗಾಮಿನೀವಿದ್ಯೆ ಸಾಧ್ಯಮಾದುದೀತನಿನ್ನು ನಾಡೆಲ್ಲಮಂ ನಿವಾಳವೆಟ್ಟಂಮಾಡಿ ಕಳದೆ ಮಾಣನೆಂದು ಪಾಪಭೀರುತ್ವದಿಂ ಬೆಚ್ಚಿ ಲಲಿತಾಂಗನ ಮೊಗಮಂ ನೋಡಿ, [2] ೧೪೯

---

[1] ಕೊಲ್ವಕಪಟ್ಟಂಗಱಿಕೆಯ [ಗ]

[2] [ಎನಗೆ ಕಪಟಂ ಬೇಡೀ ಸದ್ವಿದ್ಯೆಯಂ ಮನದಲ್ಕಿಱಿಂ
ನಿನಗೆ ನಯದಿಂ ಕೊಟ್ಟರ್ ಪೇಟಾರುಮೆಂಬುದುಮಾ ಗಳಾ
ಜನಪತನಯಂ ಕೀರ್ತಿಶ್ರೀವಲ್ಲಭಂಗೆ ಜಿನಾಂಘ್ರಿ[illegible]
ಕನದಮಧುಪಂಗೆಂದಂ ತನ್ನೊಂದಾವಿದ್ಯೆಯು ಮಾರ್ಗ್ಗಮಂ] ೧೪೯

ನಿನಗೆಂತು ಬಂದುದೀ ಮೇ
ದಿನಿಪೂಜಿತಮೆಪ್ಪ ವಿದ್ಯೆ ಪೇೞೆಂಬುದುಮೆಂ ।
ಜನಚಕೋರನದಱ ಕಥೆಯಂ
ವಿನಯದಿನಂದಱಿಪಿ ಬಱಿಕವಿರದಿಂತೆಂದಂ ॥ ೧೫೫

ಜಿನದತ್ತ ನಿನ್ನ ನುಡಿಯಂ
ಜಿನವಚನಮೆ ತಿಬ್ಬುವೆಂದು ನಂಬಿದ ಫಲಮಂ ।
ಮನವಾರೆ ಕಂಡೆನದಱಿಂ
ದೆನಗೆ ಶರಣ್ಯಿಜನರ ನಿವ್ಮ್ಯ ಚರಣಯುಗಂಗಳ್ ॥ ೧೫೬

ಕರ್ಮೋದಯದಿಂ ತಂದೆಯ
ಕೂರ್ಮೆಯುಮೆಂ ತಾಯ ಮೊತುಮಂ ಬಗೆಯದೆ ಸ ।
ದ್ಧರ್ಮಮುಮಂ ಬಿಸುಟುರ್ಕಿಂ
ಸುರ್ಮತಿಯಾಂ ಖಳರ ಗೋಷ್ಠಿ ಯಿಂದಂ ಕೆಟ್ಟೆಂ ॥ ೧೫೭

ಮೊಱೆಯಱಿನೆಂಬಿವನೇನೆಂ
ದಱಿಯೆಂ ಮತಿಗೆಟ್ಟ ದುಷ್ಟಸಂಗತಿಯಿಂದಂ ।
ಮಱೆದು ಗುಣಮೆಲ್ಲಮಂ ಮೆ
ಯ್ಯಱಿಯದೆ ಕೆಟ್ಟಾಡಿದೆಂ ಮಹಾಪಾತಕನೆಂ ॥ ೧೫೮

ತಡೆಯದೆ ಮುದದಿಂದಮೃತಂ
ಬಡೆದುಮುಣ್ಪಡೆಯರೆಂಬ ನಾಣ್ಣುಡಿಯೆನ್ನೊಳ್ ।
ದೃಢಮಾದುದು ಸದ್ಧರ್ಮಂ
ಬಡೆದುಂ ಮರುಳಾಗಿ ಕಾಲಮಂ ವೃಥೆಗಳೆದೆಂ ॥ ೧೫೯

ಸೊಂಬನಂಗಡಿಯಂತೆ ಪಸರಮಿಲ್ಲದೆ, ಪುಟು ಮುಟ್ಟಿದ ಸಸಿಯಂತೆ ನಯಮಿಲ್ಲದೆ, ಬಿಲ್ಲಂ ಬಿಟ್ಟನಂತೆ ಗುಣಮಿಲ್ಲದೆ, ಸೂಳೆಯಂತೆ ಸಜ್ಜನಿಕೆಯಿಲ್ಲದೆ, ಬೂತಿನಂತೆ ಪೆಂಪಿಲ್ಲದೆ, ತೃಣದಂತೆ ಬಿಣ್ಪಿಲ್ಲದೆ, ಪಾಪಿಯಂತುತ್ತಮದಾನಮಿಲ್ಲದೆ, ನ್ಯಾಯಮಿಲ್ಲದರಸಿನೂರಂತೆ ಮರ್ಯಾದೆಯಿಲ್ಲದೆ,

ಕಳ್ಳರ ಕೊಟ್ಟದಂತೆ ಧರ್ಮವಿಲ್ಲದೆ, ಗಹ್ವರದಂತೆ ಸನ್ಮಾರ್ಗವಿಲ್ಲದೆ [ಪುಟ್ಟುಗುರುಡನಂತೇನುಮಂ ಕಾಣದೆ] ಕೆಟ್ಟೆನೆಂದು ತನ್ನಂ ತಾನೆ ನಿಂದಿಸಿಕೊಂಡು, ಜಿನವಚನದೊಳಾದ ದೃಷ್ಟಾಂತಮುಮಂ, ಸಮ್ಯಕ್ತ್ವ ಚೂಡಾಮಣಿಯೊಳಾದ ಮಹಾಗುಣಮುಮಂ, ಪೊಗಲ್ದ [1] ಬಟಿಕ್ಕಿಂತೆಂದಂ :—ನಿಮಗೆ ಪಂಚನಮಸ್ಕಾರಮಲ್ಲದುಟಿದ ಮಂತ್ರಮುಂ ಅರ್ಹತ್ಪರಮೇಶ್ವರನಲ್ಲದುಟಿದ ದೈವಮುಂ ಕೈಕೊಳ್ವುವಲ್ಲ; ಸಮ್ಯಕ್ತ್ವ ಚೂಡಾಮಣಿಯೆಂದು ಪ್ರಸಿದ್ಧರಾಗಿರ್ಪ ನಿಮಗೀವಿದ್ಯೆ ತಾನೆಂತು ಬಂದುದೆನೆ, ವಣಿಗ್ವಂಶಲಲಾಮನಿಂತೆಂದಂ :— ೧೫೫

ನೀಂ ಪೇೞ್ದಿಂತುಟಿ ಜಿನನಿಂ
ದಂ ಪೆಱತೆನಗಿಷ್ಟ ದೈವಮಿಲ್ಲನುನಯದಿಂ ।
ಪೆಂಪಿನ ಪಂಚನಮಸ್ಕೃತಿ
ಯಿಂ ಪೆಱತೆನಗೊಂದುಮಿಲ್ಲ ವರಮಂತ್ರಂಗಳ್ ॥ ೧೫೬

ಈ ಗಗನಗಾಮಿನಿಯೆಂಬ ವಿದ್ಯೆ ಯೆನಗೆ ಬಂದ ವೃತ್ತಾಂತಮುಂ ಕಿಱಿದಿನೊಳ್ ಪೇೞ್ವೆನದೆಂತೆನೆ : — ೧೫೭

[ಮುದದಿಂದಂ ಜಿನಪದವೆಂ
ಬುದು ನಾಡಾ ನಾಡಿನೊಳಗೆ ನಾಡೆ ಬೆಡಂಗಿಂ ।
ಪುದಿದೊಪ್ಪಿರ್ದುದು ಬಹುಜನ
ದೊದವಿಂದಂ ಭೂಮಿತಿಲಕವೆಂಬುದು ನಗರಂ ॥ ೧೫೮

ಅದನಾಳ್ವಂ ನರಪಾಲನೆಂಬರಸನಾತನ ರಾಜಶ್ರೇಷ್ಠಿ ಸೌಂದರನೆಂಬನಾತನ ಭಾರ್ಯೆ ಸುನಂದೆಯೆಂಬಳಂತವರಿರ್ವರ್ಗರ್ಂ ಶ್ರೀವರ್ಮಂ ಜಯವರ್ಮಂ ಜಿನವರ್ಮಂ ಜಿನದತ್ತಂ ಜಿನದಾಸಂ ಧನ್ವಂತರಿಯೆಂಬೆಣ್ಪರ್ ಮಕ್ಕಳಾಗಿ ಬಳೆಯುತ್ತಿರೆ, ಆ ನರನಾಥನ ಪುರೋಹಿತಂ ಸೋ

---

1 ನಿಂದಿಸಿಕೊಂಡು ಸಟ್ಟಯಂ ಪೊಗಳ್ದು (ಗ)

ಮಶರ್ಮನೆಂಬ ಬ್ರಾಹ್ಮಣಂಗಮಾತನ ಪೆಂಡತಿಯುಗ್ಗಿಲೆಗಂ ವಿಶ್ವಾನು
ಲೋಮನೆಂಬ ಮಗನಾಗಿ ಬಳೆಯೆ] [1] ॥ ೧೩೯

ಕರಮೊದರದಿಂ ಧನ್ವಂ
ತರಿಗಂ ವಿಶ್ವಾನುಲೋಮದ್ವಿಜಗಂ ಸ್ನೇಹಂ ।
ಪಿರಿದಾಗೆ ಕೂರ್ಮೆಯಿಂ ದಿ
ರ್ವರುಮಿರ್ಪರ್ಪಾಲ ನೀರ ಕೂಟದ ತೆಱದಿಂ ॥ ೧೪೦

ಅಂತಿರ್ವರುಂ ನಱಮೊಂಸಂಗಳಂತೆ ಸಂಪ್ರೀತಿಯಿಂ ಕೂಡಿ
ಬಳೆಯುತ್ತುಂ, ದುರ್ಜನಸಂಸರ್ಗದಿಂ ಸಪ್ತವ್ಯಸನಪರರುಂ ದುಶ್ಚರಿತರು
ಮೊಗೆ, ಸೌಂದರಸೆಟ್ಟಯುಂ ಸೋಮಶರ್ಮನುಮೇಗೆಯುಂ ದುಷ್ಟ
ತನಮಂ ನಿವಾರಿಸಲಾಱದೆಯರಸನ ಮುಂದೆ ತೊಱೆದು ಕಳವುದುಮವ
ರಿರ್ವರುಂ ತಂದೆತಾಯ್ಗಳನಗಲ್ದಲ್ಲಿರ್ದು ॥ ೧೪೧

ಅರಮನೆಯಂ ಪೊಕ್ಕವರಿ
ರ್ವರುವೊಯ್ಯನೆ ಕಳ್ದ ದಿವ್ಯರತ್ನಂಗಳನೊ ।
ಪ್ಪರೆ ಪೊಱಮಡಲವರಂ ನಿ
ಷ್ಠುರಕೋಪಂ ಕಂಡು ಜಡಿದು ಕೊಂಡು ತಳಾಱಂ ॥ ೧೪೨

ಅರಸಂಗೊಪ್ಪಿಸೆ ಭೂಪಂ
ಕರಮೆಲ್ಲದೆ ಮುನಿದು ಕೊಲೆಯನೊರ್ಮೆಗೆ ಮಾಣ್ದಂ ।
ನಿರುತಂ ನೀವಿರ್ವರುಮಿ
ಪುರದಿಂ ಪೊಱಮಟ್ಟು ಪೋಗಿಮಿರ್ದೊಡೆ ಕೊಲ್ವಂ ॥ ೧೪೩

ಎಂಬುದುಮವರಿರ್ವರುಂ ತಮ್ಮ ಜನನಿಯರ ಪೆಂಡಿರ ಮೋಹದಿಂ
ತಂದೆಯುಂ ಬಂಧುಗಳುಮೆಱಿಯದಂತಾಗೆ ಕಳ್ದು ಬಂದು ತಮ್ಮ ದೇಶ
ತ್ಯಾಗಮನವರ್ಗಱಿಪೆ ॥ [2] ೧೪೪

---

[1] ಜನಪದವೆಂಬ ದೇಶದೊಳ್ ಭೂತಿಳಕವೆಂಬುದು ಪುರವುದನಾಳ್ವಂನರ
ಪಾಲನೆಂಬರಸನಾತನ ರಾಜಶ್ರೀಷ್ಠಿ ಸುಂದರಜಿನಭಕ್ತನೆಂಬನಾತನ ಮಗಂ ಧನ್ವಂ
ತರಿಯೆಂಬಂ; ಮತ್ತಮಾ ನರಪಾಲನ ಪುರೋಹಿತಂ ಸೋಮಶರ್ಮನೆಂಬನಾತನ
ಮಗಂ ವಿಶ್ವಾನುತೋಮಂ. (ಗ)

[2] ಎಂಬುದುಮವರ್ ಪೊಱಮಟ್ಟು ಪೋಗೆ ಜನನಿಯರ್ ಕೆಳ್ದು (ಗ)

ಕಡುವೆೞ್ದಿನಾತ್ಮಜರಂ
ಬಿಡಲಾಱದೆ ನೆಱೆಯೆ ತೊಱೆದು ನಂಟರುವುಂ ನೇ ।
ರ್ಪಡೆ ಗಂಡರುವುಂ ತಾಮುವೆ-
ರೊಡವಂದರ್ವೊೞದಿಂದೆ ಕಿಡದವರೊಳರೇ ॥ ೧೬೫

ಇನಿಯರ ಮೀೞ್ಗಣ ವೊೞದಿ
ನನುಜರ ಬಂಧುಗಳ ತಾಯ ತಂದೆಯ ಮಾತಂ ।
ಮನದೊಳ್ ಭಾವಿಸಲೊಲ್ಲದೆ
ವನಿತೆಯರುಂ ಗಂಡರೊಡನೆ ಕೆಟ್ಟೊಡವಂದರ್ ॥ ೧೬೬

ಅಂತಾಗಳಿರ್ವರುಂ ತಮ್ಮ ಪೆಂಡಿರುಂ ತಾಯ್ಗಳುಂ ವೆರಸು ಗಜಪುರಕ್ಕೆ ಪೋಗಿ, ಯಮದಂಡನೆಂಬ ತಳಾಱನಂ ಸಾರ್ದೊರೊರ್ವರ ಯ್ನೂರ್ವರ್ಗರ್ಗಂ ನಾಯಕರಾಗಿ ಪರದೇಶಂಗಳೊಳ್ ಕಳ್ದು ತಂದು ವಿಷಯಸುಖಂಗಳಂ ಸಲಿಸುತ್ತುಮಿರ್ದೊರ್ಮೆ ವಿಶ್ವಾನುಲೋಮಂ ಧನ್ವಂತರಿಗಿಂತೆಂದಂ ॥ ೧೬೭

ಆನೊಂದಂ ಬೇಡಿದಪೆಂ
ನೀನದನೆನಗೀವುದಣ್ಣ ಮಾಕರ್ೂಳ್ಕೆದೆ ಪೋ ।
ನೀನೆನ್ನದೆ ಮುನಿಸಿಲ್ಲದೆ
ವೂನೆಂಗೊಂಡಿರದೆ ಬಿಚ್ಚ ತಿಕ್ಕೆಯೊಳಿನಿಸಂ ॥ ೧೬೮

1 ಅದಾವುದೆಂದೊಡೆ, ನೀಂ ಮುನ್ನಿನಂತೆ ಮರುಳಾಗಿ ಬಸದಿಗೆ ಪೋಪುದುಮಂ ಋಷಿಯರೂಡನೆ ಮಾತಾಡುವುದುಮಂ ಮಾಣ್ದು ದೇಕೆಂ

1 ನಿಮ್ಮಯ್ಯನಂತೆ ಬಸದಿಗೆ ಪೋಪುದುಮಾಂ, ಋಷಿಯರ್ ಶ್ರಾವಕರೊಡನೆ ನುಡಿವುದಂ ಮಾಣೆಂದು ಜೀಡಿಕೊಂಡು ಸೂರುಳ್ಗಂಡೊಡಂಬಡಿಸಿ ಸುಖಮಿರ್ದೊಂದುದಿವಸಂ ತೊಱೆಗೆ ಪೋಗಿ ಬರುತ್ತುಮಾನೆಯ ಭಯದಿಂ ಪುರದ ಪೊಱಗಣ ಸಹಸ್ರವುಂಡಿತವೆಂಬ ಬಸದಿಯಂ ನೋಡಿ ಪೊಕ್ಕನೆಯುಂ ಪೋದ ಬಟ್ಟಿಕ್ಕಂ ಪೋಪೆನೆಂಬುದುಂ ಮಱೆ ಪಿರಿದಾಗೆ ಪೋಗಲಱಿಯದೆ ಅಲ್ಲಿರ್ದು ಪರ್ವೋಪವಾಸಂಗೆಯ್ವ ಶ್ರಾವಕರ್ಗೆ ಧರ್ಮಾಚಾರ್ಯರ್ಧರ್ಮಶ್ರವಣಂಗೆಯ್ಯುತ್ತುಮಿರೆ ಧನ್ವಂತರಿ ವಿಶ್ವಾನುಲೋಮನಂ ನಿದ್ರೆಗೆಯ್ಸಿ ಮೆಲ್ಲನೆರ್ದು ತಾಂ ಕೇೞ್ದೆನಗೊಂದು ವ್ರತಮಂ ದಯೆಗೆಯ್ಯಿವೆಂಬುದುಂ, ಅವರಾಸನ್ನಭವ್ಯನಂದಱಿದು, ತರಂಟುದಱಿಯಂ ಕಂಡಲ್ಲದುಣ್ಬೀಡೆಂದು ಕುಡೆ, ಕೈಕೊಂಡು ಬಂದು ದಿವಸಮುಣ್ಬುದನಱಿದು ನೆರೆಮನೆಯ ಕುಂಬಾಱಿಂ ತರಂಟನಪ್ಪುದನಱಿದು ಮುಂಗಱುಳಿಗೆ ಪರತಂದು ಕಂಡೆನೆಂದು ಬರಯಾತಂ ಕಂಡ ಪೊನ್ನಂ ಕಂಡನೆಂದು ತಂದೊಪ್ಪಿಸಿ, ಆನೀಪೊನ್ನಂ.... (ಗ)

ದೊಡೆ, [ಎನ್ನ ಪಿರಿದಪ್ಪ ಭೋಗಕ್ಕಂತರಾಯಮುಕ್ಕುಮೆದಱಿಂ ಮು ನ್ನಮೆ ಪೇಱ್ವೆನೆಂದು ಕೈಯಂ ಮುಗಿದು] ಸೂರುಳ್ಗೊಂಡೊಡಂಬಡಿಸಿ ಸಂತಸದಿಂದಿರೆ, ಕೆಲವುಂದಿವಸಂ ಕಳಯಲೊಂದುದಿವಸಂ ॥ ೧೬೯

ಪುರದಿಂ ಪೊಱಮಟ್ಟುರ್ವರು
ಮುರುಮುದದಿಂ ಕೆಱೆಗೆ ಪೋಗುತಿರೆ ಮದದಿಂದಂ ।
ಕರಿಯೊಂದು ಸೊರ್ಕಿ ಪಲರಂ
ನಿರಂಕುಶಂ ಮಸಗಿ ಕೊಲುತೆ ಬರ್ಪವಸರದೊಳ್ ॥ ೧೭೦

ಕಂಡಿರ್ವರುಮೆಯ್ದೆ ಭಯಂ
ಗೊಂಡೋಡಲುಮತ್ತಲಿತ್ತಲೆಡೆಯಿಲ್ಲದೆ ವೀ ।
ತಂಡಂ ಪರಿತರೆ ಭೋಂಕನೆ
ಬೆಂಡಾಗಿ ಮಹಾಪ್ರತಿಜ್ಞರಿರ್ವರುಮೊಗಳ್ ॥ ೧೭೧

ಕೆಲದೊಳಿರ್ದ ಸಹಸ್ರಕೂಟಮಂಡಿತಮೆಂಬ ಜಿನಾಲಯಮನೆಯೋ ಡಿಪ್ಪೋಗಿ ಪೊಕ್ಕಾನೆಯ ಭಯಂ ಪಿಂಗುವಿನಮಿರ್ದು ಪೋಗಲೆಂದಿ ರ್ದುದುಂ, ಮೆಟೆ ಪಿರಿದಾಗಿ ಬರೆ, ಮೆಟೆಯುಂ ಪೋದ ಬಟಿಕ್ಕಂ ಪೋಪೆ ವೆಂದಿರ್ದುದುಂ, ನೇಸಱು ಪಡುವುದುಂ, ಪುರದ ಬಾಗಿಲ ಪಡಿ ಕೀ ಱುವುದುಂ, ಪೋಗಲ್ಕೂಡದೆ, ಬಸದಿಯೊಳ್ ಧನ್ವಂತರಿ ವಿಶ್ವಾನುಲೋ ಮನ ಮುನ್ನಿನ ಸೂರುಳಂ ನೆನೆದು ಕಿವಿಯೊಳ್ ತೂಂತನಿಟ್ಟು ಪಟ್ಟಿರ್ದ ನನ್ನೆಗಂ ಪರ್ವೋಪವಾಸಮಿರ್ದ ಭವ್ಯೇಜನಕ್ಕೆ ॥ ೧೭೨

ವರಧರ್ಮರೆಂಬ ಮುನಿಪರ್
ದುರಿತಹರರ್ ಧರ್ಮಮಂ ಮನಂಬಿಡೆ ಪೇೞು ।
ತ್ತಿರೆ ಮೆಲ್ಲನೆ ಧನ್ವಂತರಿ
ಪದಪಿಂದೆಕ್ಕ ತ್ತುಮಿರ್ದನಿರ್ವನ್ನೆವರಂ ॥ ೧೭೩

ನೆಲದೊಳ್ಪಟ್ಟಿರ್ದ ವಿಶ್ವಾನುಲೋಮನಂ ತಡವರಿಸಿ ನೋಡಿ ಮರ ವೆಟ್ಟಿರ್ದನೆಂಬುದನಱಿದು ಕಿವಿಯ ತೂಂತಂ ಕಳದು ಮೆಲ್ಲನೆೞ್ದು ಕುಳ್ಳಿ ರ್ದು ಕೇೞ್ವ ಪ್ರಸ್ತಾವದೊಳ್ ॥ ೧೭೪

ವರಧರ್ಮಮೆನುತ್ಸವದಿಂ
ಸ್ಥಿರಮನದಿಂ ಕೇಳಲೊಲ್ಲದಾತನೆ ಕಿಱಿಯಂ ।
ವರಧರ್ಮಮನಱಿವಿಂದಂ
ಸ್ಥಿರಮನನಾಗಱಿಯಲೊಲ್ಲದಾತನೆ ಬಱಿಯಂ ॥ ೧೭೫

ಎಂಬುದಂ ಕೇಳ್ದು ಕರ್ಮೋಪಶಮದಿಂದವರಂ ಸಾರ್ದಿನ ಗೊಂದು ವ್ರತಮಂ ದಯೆಗೆಯ್ಸಿವೆಂಬುದುಂ ವರಧರ್ಮಭಟ್ಟಾರ ಕರ ದಿವ್ಯಜ್ಞಾನಿಗಳಪ್ಪುದಱಿಂದಾಸನ್ನಭವ್ಯನೆಂದಱಿದು, ವಾತ್ಸಲ್ಯದಿಂ ನಿಚ್ಚಲುಂ ತಱಿಂಟುವಲೆಯಂ ಕಂಡಲ್ಲದುಣವೇಡೆಂಬುದುಂ ಅಂತೆ ಗೆಯ್ವೆನೆಂದು ವ್ರತಮಂ ಕೈಕೊಂಡು ಮನೆಗೆ ಪೋಗಿ, ಕೆಲವುದಿವಸಮದೆ ರೀತಿಯೊಳಿರ್ದೊಂದು ದಿವಸಮುಣಲ್ಬಂದು ॥ ೧೭೬

ತೊಟ್ಟನೆ ನೆನೆದಂ ವ್ರತಮಂ
ಕೆಟ್ಟೆನೆನುತ್ತಂತೆ ತನ್ನ ಮನದೊಳ್ ಹೇವಂ ।
ಪುಟ್ಟೆ ಮುನಿ ಪೇೞ್ದ ಮಾತಂ
ಬಿಟ್ಟೊಡೆ ಪಿರಿದಪ್ಪ ದೋಷಮೆಂದಾದರದಿಂ ॥ ೧೭೭

ನೆರೆಮನೆಯ ಕುಂಬಾಱಂ ತಱಿಂಟುವಲೆಯನಪ್ಪುದಱಿಂ ಮನೆಯೊಳಱಿಸಿ ಕಾಣದೆ ಮಣ್ಣ ಕುಱುಗೆ ಪೋಗಿ ದೂರದೊಳಾತನ ಬೋಳ ಮೆಂಡೆಯಂ ಕಂಡು ಕಂಡೆನೆಂದು ಸಂತಸದಿಂ ಕೂಗಿ ಬರೆ, ಕಾಕತಾಳೀಯನ್ಯಾಯದಿಂದಾತಂ ತನ್ನ ಕಂಡ ನಿಕ್ಷೇಪಮಂ ಕಂಡನಕ್ಕುಮೆಂದಗಿದು ನಡುವಿರುಳಪ್ಪುದುಮಾತಂ ಕಂಡ ಪೊನ್ನಂ ತಂದೊಪ್ಪಿಸಿ ಕೈ ಮುಗಿದು ॥

ಆನೀ ಪೊನ್ನಂ ಕಾಣ್ಬುದು
ವಿಾ ನೀನೊಡನಡಸಿ ಕಂಡೆನೆಂದೊಡೆ ಭಯದಿಂ ।
ದಾನಂಜಿ ತಂದು ಕೊಟ್ಟೆಂ
ನೀನಱಿವೈ ಮುನಿದು ಕ್ಕೊಲ್ವೊಡಂ ರಕ್ಷಿಪೊತಂ ॥ ೧೭೮

ಎನೆ ಧನ್ವಂತರಿ ಮುನಿಯಂ
ನೆನೆದು ಮಹಾಹರ್ಷಚಿತ್ತದಿಂದಾ ವ್ರತಮಂ ।

ನೆನೆದು ಮುನಿಪತಿಯು ವಚನದಿ
ನಿನಿತಾದುದು ಪಡಪು ಸುವ್ರತಂ ಕೇವಳವೇ ॥ ೧೪೦

[1] ಎಂದಾತಂಗೆ ಸಾಲ್ವನಿತು ಪೊನ್ನಂ ಕೊಟ್ಟು ಕಱಿಪಿ ಮೞುದಿವೆ ಸಂ ಬಸದಿಗೆ ಬಂದು ವರಧರ್ಮಭಟ್ಟಾರಕರಂ ವಂದಿಸಿ ತನ್ನ ಲಾಭ ಮಂ ಪೇೞ್ದೊಡಗಿನೊಂದು ವ್ರತಮಂ ದಯೆಗೆಯ್ಯಿವೆಂದು ॥ ೧೪೧

ಕರಮುಗಿದು ಬೇೞ್ಪುದುಂ ಮುನಿ
ವರನೆಂದಂ ಬೀಡ ಮಗನೆ ಪೆಸರಱಿಯುವ ಭೂ ।
ಮಿರುಹಂಗಳ ಪಣ್ಗಳನಾ
ದರದಿಂ ಮೆಲಲೆಲ್ಲಿಯೂದೊಡಂ ಪಸಿವಿಂದಂ ॥ ೧೪೨

ಎಂಬುದುಂ; ಮಹಾಪ್ರಸಾದಮೆಂತೆ ಗೆಯ್ವೆನೆಂದು ಪೊಡೆವಟ್ಟು ಮನೆಗೆ ಬಂದು ಕೆಲವು ದಿವಸದ ಮೇಲೆ ವಿಶ್ವಾನುಲೋಮನುಂ ತಾನುಂ ತಂತಮ್ಮ ಬಲಂಪರಸು ಪರದೇಶಕ್ಕೆ ಪೋಗಿ ಕಳ್ದ ಬಹುದ್ರವ್ಯಂ ಬಸ ಮೊದುದಱಿಂ ಪೆರ್ಚಿ ಮಗುೞ್ದು ಬರುತ್ತುಮೊಂದಡವಿಯೊಳ್ ಬೀಡಂ ಬಿಟ್ಟು ಕೈಯೊಳ್ ಸಂಬಳಮಿಲ್ಲದೆ ಮಱುಗಿ ಸೈರಿಸಲಾಱದೆ ಪಸಿವಿಂ ತಂತ ಮ್ಮ ಭೃತ್ಯರ್ಗೆ ಪೇರಡವಿಯೊಳ್ ಪಣ್ಗಳಂಗಳನಱಿಸಿ ತನ್ನಿವೆಂದು ಪೇೞ್ವುದುಮವರ್ಪೋಗಿ ॥ ೧೪೩

ಸಾರಂ ಕಂಪಿನೊಳೆವು ಕ
ರ್ಪೂರಮುಮಂ ಗೆಲ್ವವೆಸಿಸಿ ಕುಂಕುಮರುಚಿಯಿಂ ।
ದೋರಂತೊಪ್ಪುವವಂ ಕಾಂ
ಚೀರಮಹೀರುಹದ ಪಣ್ಗಳಂ ಕಂಡಾಗಳ್ ॥ ೧೪೪

---

1 ಎಂದವರಲ್ಲಿಗೆ ಪೋಗಿ ಮುತೈದ್ತಂದು ಬ್ರತಮುಂ, ಕರಮುಗಿದು (ಗ)

2 ಎಂಬುದುಂ ಕೈಕೊಂಡು ಪೋಗಿ ಪಲವುಕಾಲಕ್ಕೊರ್ಮೆ ಕಳ್ದ ಬರುತ್ತುಂ ಸಂಬಳ ಮಿಲ್ಲದೆ ಬಂಬರೆಲ್ಲಂ ಕರದು ಪಣ್ಗಳಂ ತನ್ನಿವೆಂದು ಪೇೞ್ವುದುಮವರ್ಪರಿದು ಪಣ್ಣನೆಲ್ಲಿಯುಂ ಪಡೆಯದೆ ಮಗಳ್ದು ಬರುತ್ತುಂ, ಸಾರಂ ಕಂಪಿನೊಳೆವು (ಗ)

ಸಂತಸದಿಂ ತಿಱಿದು ತಂದು ಧನ್ವಂತರಿವಿಶ್ವಾನುಲೋಮರ ಮುಂದೆ ರಾಸಿಗೆಯ್ವುದುಂ, ಅವಱಿ ಪೆಸರನಱಿಯದವನೆನಿಪ್ಪದಱಿಂ ಧನ್ವಂತರಿ ಮೆಲಲೊಲ್ಲದುಸಿರದಿರ್ಪುದುಂ, ವಿಶ್ವಾನುಲೋಮನಿಂತೆಂದಂ[1]:— ೧೪೫

ಆವಾವುಪಾಯದಿಂದಂ
ತಾವುಣ್ಣದೆ ಪೋಪುದಲ್ಲದುಱಿದರುಮಂ ನಾ ।
ನಾವಿಧಕಲ್ಪನೆಯಿಂದಂ
ಭಾವಿಸೆ ತಮ್ಮಂತು ದುಃಖಿತಂಮಾಡುವುದೇ ॥ ೧೪೬

ಸವಣರಂತಪ್ಪ ಧೂರ್ತರನೀಲೋಕದೊಳ್ ಕಾಣೆನಾಕಾಕುಗಳಪ್ಪರ ಮಾತಂ ತಾನಾವನಿಚ್ಛೆಯುಮೆಂದು ನುಡಿದೊಡಂ, ಪಣ್ಣಂ ಮೆಲ್ಲದಿರ್ಪುದಱಿಂ ತಾನುಮೆಲ್ಲದಿರೆ, ಭೃತ್ಯರೆಲ್ಲಂ ನೀವಿರ್ವರುಂ ಸವಣ್ಮಿರುಳ್ಗೊಂಡು ಸಾಯಿವೆಮೆಂದು, ೧೪೭

ಪಸಿದಿರಲಾಱದೆ ಪಣ್ಣಂ
ಮಸಗಿ ಜಡರ್ತಿಂದುಣ್ಣೆ ಸಾಯೆ ಕಂಡಾಗಳ್ ಸಂ ।
ಕಿಸಿ ಬಪ್ಪೆವೆಂದು ಮಿಗೆ ಸಂ
ತಸದಿಂ ತಂತಮ್ಮ ಭೃತ್ಯನಿಕರದ ಪೊನ್ನಂ ॥ ೧೪೮

ತಾಮಿರ್ವರುಂ ಪಱಿ ಕೊಂಡು ಪೊಱಲ್ಗೆವಂದು ಲಾಭದ ಪೆರ್ಚಿಂ ಬಸದಿಗೆ ಬಂದು ವರಧರ್ಮಭಟ್ಟಾರಕರಂ ಕಂಡು ತನ್ನ ಪಡಪುಮಂ ಸುವ್ರತದ ಫಲದಿಂ ಬರ್ದುಂಕಿದುದುಮಂ ಪೇೞ್ದೆನ್ನೊಂದುವ್ರತಮುಂ ಪಾಲಿಸವೆಂಬುದುಂ, ಪಿಟ್ಟನೆತ್ತುವುಂ ಬಂಡಿಯುಮುಂ ತಿನವೇಡೆಂಬ ವ್ರತಮುಂ ಕುಡೆ ಕೈಕೊಂಡು ಮನೆಗೆ ಪೋಗಿ ಕೆಲವುದಿವಸಮಿರ್ದೊಂದು ದಿವಸಂ, ೧೪೯

---

1 ಕೊಂಡುಬಂದು ಕುಡೆ ಧನ್ವಂತರಿ ಪೆಸರಱಿಯದೆ ಮೆಲಲೊಲ್ಲದಿರ್ಪುದುಂ ವಿಶ್ವಾನುಲೋಮನುಮಂ ಮುನಿದು ಆವಾ···· (ಗ)

ತಾನುಂ ತತ್ಸಖನುಂ ಭೃ
ತ್ಯಾನೀಕಂಬೆರಸು ಪೋಗಿ ನಲ್ಗಳವಿಂದಂ ।
ತಾನಧಿಕಲಾಭಮೊದೊಡ
ನೂನಗುಣರ್ ಮಗುೞ್ದು ಲಾಭದಿಂದಂ ಬರುತುಂ ॥ ೧೯೦

ನಟ್ಟಡವಿಯ ನಡುವೆ ಪಸಿವುಂ ನೀರಡ್ಕೆಯುಂ ತಿಣ್ಣಮಾಗೆ ಬಂದವರ್ ಸವಿಾಪದೊಳಿರ್ದ ನಾಗಾಲಯದ ಮುಂದಣ ತಾವರೆಗೊಳಕ್ಕೆ ನೀರ್ಗುಡಿಯಲೆಂದು ಪೋಗಿ ಮುನ್ನಿನ ದಿವಸಂ ನಾಡವರೆಲ್ಲಂ ಪೂಜಿಸಿ ಪೋದ ಪಿಟ್ಟಿನೆತ್ತುಮಂ ಬಂಡಿಯುಮಂ ತಂದು ತೋಱೆ ಧನ್ವಂತರಿ ಮೆಲಲೊಲ್ಲದಿರೆ, ವಿಶ್ವಾನುಲೋಮನುಮೊಲ್ಲದಿರ್ಪನ್ನೆಗಂ, ಭೃತ್ಯರ ನಿಬರುಂ ಸೈರಣೆಗೆಟ್ಟು, ೧೯೧

ಇರುಳುರಗಂ ಪುತ್ತಿಂದಂ
ತ್ವರಿತದೆ ಪೊಱಮೆಟ್ಟು ಕಾಱು ವಿಷಮಂ ಪಿಟ್ಟಂ ।
ಪರಿದೆಂಜಲಿಸಲ್ವಿಷದು
ಬ್ಬರದಿಂ ನಂಜುರುಳಿಯೆನಿಸಿ ಮೆಱೆವಾ ಪಿಟ್ಟಂ ॥ ೧೯೨

ಮೆಲ್ದು ಗತಪ್ರಾಣರಾದುದಂ ಕಂಡಚ್ಚರಿವೆಟ್ಟೆರ್ದೆಯುಂ ನೀವಿ ಕೊಂಡು ತಂತಮ್ಮ ಭಂಟರರ್ಥಮಂ ತೆರಳಿ ಕಟ್ಟಿಕೊಂಡು ಪೊಱಲೆ ವಂದು ಪಡಪಿನ ಪೆಱ್ಚುಗೆಗಚ್ಚರಿವಡುತ್ತೆ ಬಸದಿಗೆ ಪೋಗಿ ವೆರಧರ್ಮಭ ಟ್ಟಾರಕರಂ ವಂದಿಸಿ ಪ್ರಪಂಚಮೆಲ್ಲಮಂ ಬಿನ್ನಪಂಗೆಯ್ದು ನಿಮ್ಮಯ ಪ್ರಸಾದದಿಂದನೂನಮೆಪ್ಪ ಲಾಭಮೊದುದಿನ್ನೊಂದು ವ್ರತನುಂ ದಯೆಗೆ ಯ್ಯೀವೆಂಬುದುಂ, ೧೯೩

ಎರಡುಂ ಪರ್ವಂಗಳೊಳಂ
ಸ್ಥಿರಮೆಪ್ಪಷ್ಟಮಿಯೊಳಂ ಚತುರ್ದಶಿಯೊಳವೋ ।
ಸರಿಸದೆ ಕರಮಳಿಪಿಲ್ಲದೆ
ಪರಿಹರಿಪುದು ಮಗನೆ ಕಳ್ಳುಮಂ ಮಾಂಸಮುಮಂ ॥ ೧೯೪

ಎಂಬುದುಮಾವ್ರತಮುಂ ಪೆಱತೊಂದುಮುಂ ಬಗೆಯದೆ ಮುನಿ ವಚನಮುಂ ನಿಶ್ಚಯದಿಂ ನಂಬಿ ಕರಮತಿಶಯದಿನೊಸೆದು ಕೈಕೊಂಡು ಸುಖದಿನಿರ್ದೊಂದುದಿವಸಂ, ೧೯೫

[ಬರವೇಱ್ದೊಯ್ಯನೆ ತನ್ನ ಕಾರ್ಯಭರಮುಂ ವಿಶ್ವಾನುಲೋಮಂಗೆ ವಿಸ್ತರದಿಂದೆಲ್ಲಮನೊಂದುಗುಂದದಱಪಿದೊರ್ವೀರಂತೆ ತಾಂ ರಾಗದಿಂ
ಕರೆದಾಗಳ್ ನಿಜತಂತ್ರಮುಂ ಕನಕದಿಂ ತಾಂಬೂಲದಿಂ ವಸ್ತ್ರದಿಂ
ಪಿರಿದುಂ ಮನ್ನಿಸಿ ಪೋಪದೊಂದು ಸಮಕಟ್ಟಂ ಚೋರಸೈನ್ಯಾಧಿಪಂ] ॥ ೧೯೬

ಪೋಗಿ ಪರದೇಶಮುಂ ಪೊಕ್ಕು ಕಳ್ಪು ಕಳಂನೊಳಾವ ಲಾಭದಿಂ ನುಗುಚ್ಚಿ ಬರುತ್ತುಮೊಂದುಗಿರಿತಟದೊಳ್ ಬೀಡಂ ಬಿಟ್ಟು, ೧೯೭

ಪಲವುಂ ದಿವಸಂ ಕಳ್ಪುಂ
ಪೊಲಸುಂ ದೊರೆಕೊಂಡುದಿಲ್ಲ ಪಯಣದ ಕತದಿಂ ।
ದೆಲೆ ನೋಱ್ಪೊಡೆ ಸಂಸಾರದ
ಫಲಮಾವುದೊ ಬಿಸುಟು ಕಳ್ಪುಮುಂ ಮಾಂಸಮುಮುಂ ॥ ೧೯೮

ಎಂದು ವಿಶ್ವಾನುಲೋಮುಂ ತನ್ನೈನೂರ್ವರ್ ಬಂಟರೊಳ್ ನಾಲ್ವರಂ ಕರೆದು ನೀವೀಪರ್ವತದ ತಟದೊಳಿರ್ದ ಬೇಡವೆಳ್ಳಿಗೆ ಪೋಗಿ ಕಳ್ಳಂ ಕೊಂಡು ಬನ್ನಿಮೆಂದಟ್ಟುವುದುಂ, ಧನ್ವಂತರಿಯುಮಂತೆ ನಾಲ್ವರಂ ಕರೆದು ನೀವೀ ಬೇಡಕೊಟ್ಟದೊಳ್ ಮಾಂಸಮುಂ ತನ್ನಿಮೆಂದಟ್ಟುವುದುಂ ವಿಶ್ವಾನುಲೋಮನ ಮಾನಿಸರ್ ಪೋಗಿ ಕಳ್ಳಂ ಕೊಂಡು ಬರುತ್ತೆ ತಮ್ಮೊಳಿಂತೆಂದರ್ :— ೧೯೯

ಇರದೀ ಕಳ್ಳೊಳ್ ವಿಷಮುಂ
ಬೆರಸಿ ದಿಟಂ ಕೂರ್ಪರಂತೆ ನಾವುಱ್ದವರೆ ।
ಲ್ಲರುಮುಂ ಕೊಂದಿಕ್ಕಿ ಬಱು
ಕ್ಕುರುಮುದದಿಂದವರ ಪೊಂಗಳಂ ಕೈಗೊಳ್ವಂ ॥ ೨೦೦

ಎಂದು ತಮ್ಮೊಳ್ ಚರ್ಚಿಸಿ ಕಳ್ಳೊಳ್ ವಿಷಮಂ ಬೆರೆಯಿಸಿ ಕೊಂಡು ಬಂದವರನ್ನೆಗಮತ್ತಲ್, "ಪರಚಿಂತಾ ಗರೀಯಸೀ" ಎಂಬ ನ್ಯಾಯದಿಯಂತೆ ಧನ್ವಂತರಿಯ ಮೋಸಿಸರುಂ ಪೋಗಿ ಮಾಂಸಮುಂ ಕೊಂಡು ಬರುತ್ತುಂ ತಮ್ಮೊಳಿಂತೆಂದರ್ :— ೞಂ೧

ಅಡಗಿನೊಳು ಬೆರೆಸಿ ವಿಷಮಂ
ಕಡುಗೂರ್ಪಿಂದಿಕ್ಕಿ ಬಂಟರಂ ನಾಯಕರಂ ।
ಮಡಿಪಿ ಪೆಜತೇನೊ ನಾವುವ
ರೊಡವೆಗಳಂ ಪಚ್ಚಿ ಕೊಂಡು ಸುಖದಿಂ ಪೋಪಂ ॥ ೞಂ೨

ಎಂದು ಸಮಕಟ್ಟಿನಿಂ ವಿಷಮಂ ಮಾಂಸದೊಳಿಕ್ಕಿಕೊಂಡು ಬಂದೊಪ್ಪಿಸುವುದುಂ, ಅಂದಿನ ದಿವಸಂ ಚತುರ್ದಶಿಯುಪ್ಪುದಱಿಂ ಕಳ್ಳುಮಂ ಮಾಂಸಮುಮುಂ ಧನ್ವಂತರಿಯೊಳ್ಳಲಿಸ್ಪುದುಂ, ವಿಶ್ವಾಸಲೋಸುಗಮೊಲ್ಲದೆ ಬಿಡುವುದುಂ, ೞಂ೩

ಇವರವರ್ಗೆ ಕಪಟದಿಂದಂ
ಸವಿನಯದಿಂದೆಱೆಯೆ ಕಳ್ಳನಾದರದಿಂ ನು ।
ತ್ತವರಿವರ್ಗೆ ತಂದು ಪೊಲಸಂ
ಸವಿನಯದಿಂದಿಕ್ಕಿ ಕೂಡಿದು ತಿಂಪಂತಾಗಳ್ ॥ ೞಂ೪

ಸಾವ್ರದುಮಿವರ ಪೆಣಂಗಳ
ನೋವದ್ಭುತಮೆಂದು ನೋಡಿ ಸುವ್ರತದೊಳ್ಪಂ ।
ಭಾವಿಸಿ ನಗುತೆಂದಂ ನುಸಿ
ಸೇವನೆಯಂ ಬಿಟ್ಟು ಪಶುತ ಲಾಭಮುಮೊಳವೇ ॥ ೞಂ೫

ಎಂದವರ ದ್ರವ್ಯಂಗಳಂ ಕೊಂಡು ಪೋಗಲಾ ಮಱುದಿವಸಂ ಚೈತ್ಯಾಲಯಕ್ಕೆ ಬಂದು ಭಕ್ತಿಯಿಂ ವರಧರ್ಮಭಟ್ಟಾರಕರಂ ವಂದಿಸಿ, ತನ್ನ ವೃತ್ತಾಂತಮೆಲ್ಲಮಂ ಪೇೞ್ದನಗಿನ್ನೊಂದು ವ್ರತಮಂ ಕರುಣಂಗೆಯ್ಯಮೆಂದು ಪ್ರಾರ್ಥಿಸುವುದುಂ, ನೀನಾವ ಪ್ರಾಣಿಗಾದೊಡಂ

ಮುನಿನಲ್ಲಿ ಪೆಱಗೇಱಿಡಿಯಂ ಪಿಂಗಿ ಬಱಿಕ್ಕಂ ನಿನ್ನ ಮೆಚ್ಚಿದಂತೆ ಮೋಡೆಂಬುದುಮಂತೆ ಗೆಯ್ವೆನೆಂದು ಕಳಿಂಗದೇಶಕ್ಕೆ ಪೋಗಿ ಕಳ್ದಾರು ತಿಂಗಳ್ವರಮಿರ್ದು ಬರುತ್ತುಂ, ಪೆಱರ ಪೆಂಡಿರ್ಗಮರ್ಥಕ್ಕಮಳಿಪಿ ಕಾಲಂ ಪೋಗುದೆನಗೆ, ಎನ್ನ ಪೆಂಡಿರ್ಗಮರ್ಥಕ್ಕಮೊಳಸುವರಾವಾನು ಮೊಳವೋ ಮೋಕ್ಷಿಲ್ಲವೋ ಚೋದ್ಯಮನಿವನಾರಯಲ್ವೇಱಿಕ್ಕುಮೆಂದು ನಾಲ್ಕೈಂಟುದಿನಮುಂ ಮೆನ್ನಿಸಿ ಗಜಪುರಮುಂ ಪೊಕ್ಕು ವಿಳಾಸದಿನಿರ್ದೊಂ ದುದಿನಂ ಪಯಣಂಬೋಪೆನೆಂದುಸಿರ್ದು ಪೊಱಮಟ್ಟು ಪೋಗಿ, ಜಿನಮುಂ ದಿರದೊಳ್ ನಡುವಿರುಳಪ್ಪಿಸಂ ಪೂಜಾವೈಭವಮುಂ ನೋಡುತ್ತಿರ್ದು ತನ್ನ ಮನೆಗೆ ಬಂದು ಕವಾಟೋದ್ಘಾಟನವಿದ್ಯೆಯಿಂ ಪಡಿಯಂ ತೆಗದು [1] ಮೆಲ್ಲ ನೊಳಪೊಕ್ಕು ನೋಡುತ್ತಿರ್ಪಾಗಳ್, ಪಾಸನ ಮೇಲೆ ಪಟ್ಟರ್ದ ತಾಯುಮೆಂ ಪೆಂಡತಿಯುಮೆಂ ಕಂಡು ಪಾದರಿಗನೆಂದಿಱಿಯಬಂದು ವ್ರತಮುಂ ನೆನೆದೇಱಿಡಿಯಂ ಪಿಂಗುವಿನಮುಚ್ಚರ್ತುಬ್ಬಸಮೆಪ್ಪುದತ್ತೆಯುತ್ತತ್ತ ಸಾರಿ ಮೆಂದು ಗರ್ಭಿಣಿಯಪ್ಪ ತನ್ನ ಪೆಂಡತಿ ಪೂವೆಡ ನೀರೆಯುಂ ಕಳವುದು ಮಿರ್ವರುಮುಂ ಕಂಪು ಜಱಿಗಾಗಿ, ೞಂ೬

[ಯತಿವಂದ್ಯಂ ಕೊಟ್ಟ್ಯೆಯಮಂ
ವ್ರತದೊಳಮನಗೆಯ್ದೆ ಲಾಭಮೊಯಮು ಪಿರಿದು ।
ನ್ನತಿಯಿಂದವೆಂದು ತನ್ನೊಳ
ಗತುಳಬಳಂ ಪೆರ್ಚಿ ನಚ್ಚಿ ಪೊಗಳ್ದಂ ಮುನಿಯಂ] ॥ ೞಂ೭

ಮುನಿಪತಿ ಕೊಟ್ಟಾ ಬ್ರತಮಂ
ನೆನೆಯುದೆ ಕಡುಗೋಪದಿಂದಮಿಱಿದೊಡೆ ಪೆಱತೇಂ ।
ಜನನಿಯು ಗರ್ಭಿಣಿಯಪ್ಪೀ
ವನಿತೆಯುಮೊಡನಳಿವರೇಂ ಮಹಾಪಾತಕವೋ ॥ ೞಂ೮

ಎಂದು ಮುನ್ನಿನ ನಾಲ್ಕುವ್ರತದಿಂದಮುಮಿಾವ್ರತದ ಪಡಪೆ ಮಿಗಿಲದೆಂತೆಂದೊಡೆ, ೞಂ೯

[1] ಕವಾಟೋದ್ಘಾಟನವಿದ್ಯೆಯಿಂ ತಳಿವುದುಂ ಪಡಿ ತೆಱೆಯೆ (ಕ)

ಮುಂದಣ ಸುಗತಿಯುಮಿಹಾಗಳ್
ನೊಂದುಜ್ಜ್ವಲಮಪ್ಪ ಜಸಮುಮಿಹಾವ್ರತದಿಂದಂ ।
ನಿಂದುದು ಮಿಕ್ಕಂದೀವ್ರತ
ಯಿಂದಿಹಪರವೆರಸುವೆನಗೆ ಕೆಡುವುದು ಪುಸಿಯೇ ॥ ೧೧೦

ಎಂದು ಮನದೊಳಾವ ಹೇವದಿಂ ನಿಚ್ಚಟಗತಿಯಪ್ಪುದುಂ ಪರಿಚ್ಛೇದಿಸಿ ತಂದರ್ಥಮೆಲ್ಲಮುಮಂ ತಾಯ್ಗಂ ಪೆಂಡತಿಗಂ ತಕ್ಕನಿತಂ ಕೊಟ್ಟು ಱದುದಂ ಬಡಶ್ರಾವಕರ್ಗಂ ಜಿನಪೂಜೆಗಂ ಕೊಟ್ಟು ವರಧರ್ಮಭಟ್ಟಾರಕರಲ್ಲಿಗೆ ಬಂದು ಪೊಡೆಮಟ್ಟು ನಿಮ್ಮಡಿಯ ಪ್ರಸಾದದಿಂದೆನಗೆ ಮಹಾಪಾತಕಂ ಪಿಂಗಿ ಪೋದುದೆಂದು ಪೆಱಗಣ ವಾರ್ತೆಯೆಲ್ಲಮಂ ಪೇಱ್ದು ದೀಕ್ಷೆಯಂ ಪ್ರಸಾದಂಗೆಯ್ಯಿಮೆಂದೊಡಾ ಮುನೀಂದ್ರೊತ್ತಮರಿಂತೆಂದರ್:— ಮಗನೆ, "ಕೆಟ್ಟ ನೂಱುಂ ತಪಂಬಟ್ಟು ನೂಱು" ಎಂಬ ನಾಣ್ನುಡಿಯುಂಟು; "ಪುಟ್ಟ್ಯದೆಡೆಯ ಪೊನ್ನುಱುವುದು; ಪೋದೆಡೆಯ ತಪವುಱುವುದು" ಎಂಬುದಱಿಂ ನೀನಿಲ್ಲಿ ತಪಂಬಡವೇಡ; ಕೇಳ್ದೀ ಕಾಂತ ವಿಷಯದ ಧರಣೀಭೂಷಣಪರ್ವತದೊಳಮ್ಮ ಸಧರ್ಮಿಗಳ್ ಶ್ರೀವರ್ಮಭಟ್ಟಾರಕರಿರ್ಪರವರಲ್ಲಿಗೆ ಪೋಗಿ ದೀಕ್ಷೆಯಂ ಕೊಳ್ಳಂಬುದುಮಂತೆಗೆಯ್ವೆನೆಂದು, ವಿಶ್ವಾನುಲೋಮನನೆನ್ನಲ್ಲಿಗಟ್ಟುವುದೆಂದು [1] ತಾಯ್ಗೆ ಪೇಱು ಬಂದು, ೧೧೧

ಆ ಗಿರಿಯನೆಯ್ದಿ ಬೇಗಂ
ಯೋಗೀಂದ್ರಂಗೆಱಗಿ ಕಾರ್ಯಮಂ ಪೇಪೆ ಮಹೋ ।
ದ್ಯೋಗಿಗೆ ಜಿನದೀಕ್ಷೆಯನಂ
ತಾಗಳ ದಯೆಗೆಯ್ಯೆ ಕೊಂಡು ತಪದೊಳ್ನಿಂದಂ ॥ ೧೧೨

ಇತ್ತ ಲ್ವಿಶ್ವಾನುಲೋಮಂ ಧನ್ವಂತರಿಯ ಪೊಗೆನಾರಯ್ದಱಿಯೆಪೇಡೆ ಕೇಳ್ದು ಮೆಱುಗಿ ನಿಲಲಾಱದೆ ಎನಗೆನ್ನ ಕೆಳೆಯನ ಗತಿಯೆ ಗತಿಯೆಂದು ಬಂದು ಸಹಸ್ರಜಟಿಯೆಂಬ ತಾಪಸಂ ತೋಱೆ, ಸೂರ್ಯಪ್ರತಿಮೆನಿಂದ ಧನ್ವಂತರಿಮುನಿಯಂ ಮಾರ್ಗಮನಱಿಯದೆ ನುಡಿಸು

[1] ಧರಣೀಭೂಷಣಗಿರಿಗಟ್ಟುವೆಂದು (ಗ)

ವುದುಂ ನುಡಿಯುದಿರ, [1] ಎನ್ನೂಡನೆ ನುಡಿಯನೆಂದು ಮುನಿದು ಮಗುಳ್ದು ಬಂದಾ ತಾಪಸಂಗೆ ಶಿಷ್ಯನಾಗಿರೆ ಮೆಱುದಿವಸಂ ಧನ್ವಂತರಿಮುನಿ ವಿಶ್ವಾನುಲೋಮನಲ್ಲಿಗೆ ಬಂದು ಸಂಭಾಷಣೆಯುಂ ಮಾಡೆ ಮಿಥ್ಯಾತ್ವಕರ್ಮದುದಯದಿಂ ಮುನ್ನ ಮೆನ್ನೊಡನೆ ನುಡಿಯದಿರ್ದನೆಂಬ ಕೋಪದಿಂ ವೋನಂಗೊಂಡಿರೆ ವಾತ್ಸಲ್ಯರತ್ನಾಕರನಿಂತೆಂದಂ :— ೦೧೩

ಸಲೆ ನಿನ್ನ ತಪದ ಫಲಮುಮ
ನೆಲೆ ಸಱ ಕೇಳನ್ನ ತಪದ ಫಲಮುಮೆನುರ್ವೀ ।
ವೆಲಯಂ ಬಣಿ ಸೆ ಕಡೆಯೊಳ್
ಫಲದಲ್ಲಿಯೆ ಕಾಣಲಕ್ಕು ಮೆಂದಲ್ಲಿಂದಂ ॥ ೦೧೪

ಬಂದುಗ್ರೋಗ್ರತಪಮಂ ಮಾಡಿ ಸಮೋಧಿಮರಣದಿಂ ಮುಡಿಪಿ ಧನ್ವಂತರಿಮುನಿನಾಥನಚ್ಯುತಕಲ್ಪದೊಳಮಿತಪ್ರಭನಾಗಿ ಪುಟ್ಟಿದಂ; ವಿಶ್ವಾನುಲೋಮನುಂ ಸವಿದ್ಯುತ್ಪ್ರಭನೆಂಬ [2] ವಾಹನದೇವನಾಗಿ ದ್ವೀಪದೊಳಚ್ಯುತೇಂದ್ರಂ [ವಿಶ್ವಾವಾಹನದೇವನಂ] ಕಂಡು,

ಕರೆವುದುಮೊತಂ ಭಯದಿ
ಪರಿತಂದತ್ಯಂತಭಕ್ತಿ ಯಿಂ
ಕ್ಕಿರೆ ನಕ್ಕು ದೇವ್ಯ
ಚರಣದಿನಂದರ್ವ

ವಿಶ್ವಾನುಲೋಮ
ನದೇವನಱಿದು ಬೆಱಗಾ
ಶ್ಚರ್ಯ ಫಲಮನವೆಧಾರಿಸಿ

1 ಅನಿತರೊಳ್ ಮುಗ
2 ವಿಜಯನೆಂಬ ವ್ಯ

ರೊಳರೆಂಬುದಲ್ಲಿ ಮ್ಮಲ್ಲಿಯುಮೊಳ್ಳವರೊಳರೆನ್ನಂ ನೋಡವೇಡೆನೆ; ನಿಮ್ಮಲ್ಲಿಯೊಳ್ಳದರುಂಟಪ್ಪೊಡೆವುಗೆ ತೋಱುಮೆಂಬುದುಂ ಕರಹಾಟದೇ ಶದ ಪಶ್ಚಿಮಭಾಗದೊಳಿರ್ಪ ಚಂದ್ರಿಕಾರಣ್ಯದೊಳಿರ್ದ ಜಮದಗ್ನಿ [ಯೆಂಬ ಜಟಾಧಾರಿ] ಯಂ ತೋಱಿ,[1] ೦೧೬

ಆಪಾದಮಸ್ತಕಂಬರ
ಮೇಂ ಪಡಿಮಾತೆಯ್ದೆ ಬಳ್ಳಿಯುಂ ಪುತ್ತುಗಳುಂ।
ವ್ಯಾಪಿಸಿದುವು ಲೋಕದೊಳಿ
ನ್ನೀ ಪಾಂಗಿಂ ತಪದೊಳಸಗುವನ್ನರುವೊಳರೇ ॥ ೦೧೪

ಎಂಬುದುಂ, ಕಡುಪೆರ್ಚಿನಿಂದಿಂದ್ರನಿಂತೆಂದಂ :— ೦೧೫

ಬಡವನ ಸುಖಮುಂ ಪಂದೆಯ
ಕಡುನುಡಿಗುಂ ಮುಗಿಲ ನೆಱಲುವೋಪರ ಮುನಿಸುಂ।
'ಪಮುಂ ನೋ
ಪ್ಪವೆರಸು ನಿಲಲಱಿದಪ್ಪುವೇ ॥ ೦೧೦

ದ್ದೇಗಳಿಂ ನಿನ್ನ ತಪಸ್ವಿಯ ನಚ್ಚಿ ನ
ಗೀಜಗವಕ್ಕಿಗಳಂ ವಿಗುರ್ವಿಸಿಯಾ
ರ್ಪುದುಂ, ಮತ್ತೊಂದು ಗೀಜಗನವ
ಳೀಯನ ಮದುವೆಗೆ ಬನ್ನಿ ವೆನೆ,
ನೆನೆನೆ, ನೀಂ ಗರ್ಭಿಣಿ ಬರ
ಲಂದು ದ್ವಿಜಾಂಗನೆಯೊಳ್
ನೆನೆ, ನಿನ್ನ ವೆಱಿ ನ
ದು[2] ೦೧೧

ಜಮದಗ್ನಿರಾಮನೆಂಬ ಜಟಾ

ನೋಡೆಂದೆರಡುಗೀಜಗಂಗಳಿಂ
ಕ್ಷಿ ಬಂದಾಗೀಜಗನಂ ನಾಳೆ
ಾಡೆ, ಗರ್ಭಿಣಿಯಪ್ಪ ಗೀಜ
ತ್ತರ್ವಳೊಳ್ ನೆರೆವೆಯೆನೆ,
ದುಂ (ಗ).

ಆನಲ್ಲದೆ ಪೆಱಪೆಱರಂ
ನೀನಳಿಪಿಂ ಮದನತಾಪದಿಂ ನೆರೆದೊಡೆ ಮ ।
ತ್ತೇನುಂ ಸೂರುಳನೊಲ್ಲಂ
ನೀಸೀ ತಾಪಸನ ಪಡೆದ ಗತಿಯಂ ಪಡೆವೈ ॥ ೮೦೦

ಎಂಬುವುಂ, ಕೃತಕಗೀಜಗನೆನಿಡೆಱಂಕೆಯಿಂದೆರಡುಂ ಕಿವಿಗಳಂ ಮುಚಿ ಕೊಂಡು ಪೊಲ್ಲದಂ ನುಡಿದೈ, ತಡೆಯದೆ ಈ ತಪಸ್ವಿಯ ಗತಿಗೆ ನೀನುಂ ನಿನ್ನಿಳ್ಳರುಂ ಪೋಗಿವೆನೆನೆ, ಜಮದಗ್ನಿಮುನಿ ಮುನಿದು ಪಕ್ಕಿಗಳಂ ಕರತಳದೊಳಿಪ್ಪೆಸೆದು ಕೊಲಲುದ್ಯೋಗಿಸುವುದುಂ, ಅದೃಶ್ಯರೂಪದಿಂ ನೆಲಕ್ಕೆ ಪಾಯ್ದಿರೆ, ೮೦೧

[1] ಪಕ್ಕಿಗಳಲ್ಲಿವು ದೈವಂ
ನಿಕ್ಕುವೆವೆಂದಿರ್ದು ಭಕ್ತಿಪೂರ್ವಕಮಾಗಳ್ ।
ಪಕ್ಕಿಗಳರಿಪು ಪಾದಯು
ಗಕ್ಕೆಱಗಿ ಪತಂಗ ನುಡಿದೆಯಾಂ ಪಾತಕನೇಂ ? ॥ ೮೦೨

ಕೊಲಲ್ಬಗೆದೆಂ, ಹ್ಲವೆಯಿಂದುಳಿದೆಂ ; ಕೇಳ್ಯ ಪೂರ್ವದೊಳಾಂ ರಾಜರ್ಷಿಯೀಗಳಪ್ಪೊಡೆ ಮಹಾತಪಸ್ವಿಯಾಂ ಪೋಪ ಗತಿಗೆ ನೀವೇತಕ್ಕೆ ಪೋಗಲೊಲ್ಲಿರೆಂಬುದುಂ, ಮಾಯಾದ್ವಿಜಂಗಳಿಂತೆಂದರ್—ನೀನಪ್ಪೊಡೆ ಪುತ್ರಮುಖಮುಂ ಕಾಣದೆ ತಪಮುಂ ಕೈಕೊಂಡೈ ; "ಅಪುತ್ರಸ್ಯ ಗತಿರ್ನಾಸ್ತಿ" ಯೆಂಬುದಱಿಂ ನಿನ್ನ ಪೋಪ ಗತಿಯನೊಲ್ಲೆವೆನೆ, ನಿಶ್ಚಯವೆಂದು ತನ್ನಂ ತಾನೆ ಬಯ್ದುಕೊಂಡು ಪಕ್ಕಿಗಳಂ ಬಲಗೊಂಡು ನಿಮ್ಮ ಧರ್ಮದಿಂ ಗತಿಗಂಡೆನೆಂದು ತಮ್ಮ ಮಾವನಪ್ಪ ಪೂತಿಮಹಾರಾಜನಲ್ಲಿಗೆ ಬಂದು, ಕೂಸಂ ಬೇಡುತುಂ ಮದುವೆನಿಂದನತ್ತಲಚ್ಯುತೇಂದ್ರಂ ವಾಹನದೇವನ ಮೊಗಮಂ ನೋಡಿ ಮುಗುಳ್ನಗೆನಗುತಿಂತೆಂದಂ.—

---

[1] ದೇವತೆಗಳೆಂದು ಪೊಡೆವಟ್ಟೆನ್ನ ಪೋಪ ಗತಿಗೆ ದೂಷಣೆಯಂ ಮಾಡಿದಿರೆಂತೆನೆ ನೀಂ ಮಕ್ಕಳ್ವಡೆಯದೆ ತಪಂಬಟ್ಟೀ ನಿನ್ನೆ ಪೋಪೆಡೆಗೆ ಮಾರಿ ಪೋಕೆಂಬುದುಂ ತನ್ನ ಮಾವನಪ್ಪ ಪೂತಿರಾಜನಲ್ಲಿಗೆ ಬಂದು, ಕೂಸಂಬೇಡಿದನಿತ್ತ (ಗ)

ಪಲಕಾಲಂ ತಪದಿಂದಂ
ಚಲದಿಂ ಸಂದಿರ್ದ ನಿನ್ನ ನಚ್ಚಿನ ಮುನಿಯಂ ।
ತೊಲಗಿಸಿದೆನೊಂದು ವಚನದಿ
ನೆಲೆ ಕೇಳ್ಮಿಥ್ಯಾತ್ವದಲ್ಲಿ ಪುರುಳೇನುಂಟೇ ॥ ೦೦೬

ಎಱಗಲನಾಪೇಲಿರ್ದೊಡ
ಮೆಱಗುಗುಮೆಱಿಯಲ್ಕೆ ಮೇಲೆ ಮೆತ್ತೆಱಗದು ಸಂ ।
ದಱಿಕೆಯು ಕರ್ಪುರಮಿರ್ದೊಡ
ಮೆಱಿವಿಲ್ಲದ ಜಡರುಮದಱ ಸಮೆನಾಗಿರ್ಪರ್ ॥ ೦೦೭

ಅದಱಿಂದಜ್ಞಾನಿಗಳಪ್ಪರ ತಪದೊಳ್ ಫಲಮಿಲ್ಲೆಂದು ಬಸಿಱಂ ಪೊಸೆದು ನಕ್ಕಿನ್ನಾಗಮಾಭ್ಯಸಿಗರಪ್ಪ ಮಹರ್ಷಿಯರಂತಿರ್ಕ್ಕೆ, ಎಮ್ಮೆಲ್ಲಿ ಗೃಹಸ್ಥನಪ್ಪಾತನಂ[1] ಕೆಡಿಸಿದೆಯಪ್ಪೊಡೆ ಎಮ್ಮಿಂ ಬಿಟ್ಟಜ್ಞಾನಿಗಳಿಲ್ಲೆಂದು ನುಡಿದು ರಾತ್ರಿಪ್ರತಿಮಾಯೋಗದೊಳ್ನಿಂದೆನ್ನ ತೋಱಿದ ಗೃಹಸ್ಥನ ಪ್ರೀತನಂ ಕೆಡಿಸಿದೆಯಪ್ಪೊಡೆ ನೀನೆ ಪಿರಿಯನೆಂದೆನೆ[2] ವಾಹನದೇವಂ ಮುನಿದು, ೦೦೮

ಪೊಡೆವ ಸಿಡಿಲಿಂ ಮಿಚಿಂ ಭೋರೆಂದು ಬೀಸುವ ಗಾಳಿಯಿಂ
ಕೆಡೆವ ಮರದಿಂ ಪಾವಿಂ ತೇಱಿಂದಿರುಂಪೆಗಳಿಂ ಮನಂ
ಗೆಡಿಪ ಪುಲಿಯಿಂ ರೌದ್ರಾಕಾರಂಗಳಿ೦ ಬಿಡೆ ಪಾಯ್ವ ಬ
ೞ್ದಿಗಮೆರುಳಿಂ ಕಿಱ್ಕಿಂ ಕಾಡಾನೆಯಿಂದಳಿವಿಂಡಿನಿಂ ॥ ೦೦೯

ಜಡಿದು ಕರದಿಂ ಪೊ ಪೋ ಪೋಗೆಂದು ನೂಂಕುವ ಬೇಡರಿಂ
ಬಡಿಯಲಿಱಿಯಲ್ ಪೊಯ್ಯಲ್ ಮೇಲ್ವೀೞ್ವ ರಾಹ್ಷಸತಂಡವಿಂ
ದಡರ್ದು ತನುವಂ ಮತ್ತಂ ನುಗ್ಗಾಗೆ ತಿಂಬ ಕಡಂದುಱಿಂ
ಕೆಡೆವ ಮರದಿಂ ನೂಂಕುತ್ತೊತ್ತುತ್ತೆ ಬರ್ಪ ಪೊನಲ್ಗಳಿಂ ॥ ೦೧೦

---

[1] ಗೃಹಸ್ಥನಪ್ಪೀ ಜಿನದತ್ತನಂ (ಗ)

[2] ಕಿಡಿಸಿದೆಯಪ್ಪೊಡೆನ್ನಂಬಿಟ್ಟನ್ಯಾಯಿಗಳಿಲ್ಲೆಂದು ರಾತ್ರಿಪ್ರತುಮೆನಿಂದನಂ ತೋಱುವುದುಂ (ಗ.)

ಇವು ಮೊದಲಾದನೇಕೋಪಸರ್ಗಂಗಳಂ ಮಾಡಿಯುಂ, ತೊಲಗಿ ಸಲಾಱದೆ ಧರ್ಮಮುಮಂ ದೇವರುಮಂ ತಿರಸ್ಕರಿಸಿಯುಂ, ಬಂಧುಗಳ ರೂಪುಮಂ ಕೈಕೊಂಡು ಬಂದು ಮನೆಯನರಸಂ ಕವರ್ದಂ ಪಿರಿಯ ನುಗಂ ಸತ್ತನೆಂದುವೀಗೆಯ್ದುಂ ತೊಲಗಿಸಲಾಱದೆ ಶ್ರಾವಕರ ಗುಣ ಮಿಂತುಟೆನಲ್ ಜ್ಞಾನಿಗಳಪ್ಪ ಮಹರ್ಷಿಯರ ಗುಣಮನಂತಿಂತೆಂದು ಬಣ್ಣಿಸಲ್ಬಾರದೆಂದು ಮೆಱಿ ವಿಘ್ನತ್ವಮುಂ ಬಿಟ್ಟು ಸದ್ದೃಷ್ಟಿಯಾದನ ಚ್ಯುತೇಂದ್ರನೀ ಗಗನಗಾಮಿನೀವಿದ್ಯೆಯಂ ಸಂತಸದಿಂದೆನಗೆ, ೦೩೧

ಶಿವದ ಶಾಶ್ವತಮಪ್ಪ ಸೌಖ್ಯಮನೀಯಲಾರ್ಪ ಜಿನೇಶ್ವರ
ಪ್ರವರರಾದದೊಳಿಲ್ಲದರ್ತಿಯುಮೆಯ್ದಿ ಪತ್ತಿದ ಮೋಹಮುಂ
ನಿಮಗಿಹತ್ರದ ಸೌಖ್ಯಹೇತುಗಳಪ್ಪ ಮಂತ್ರ ಕುವಿದ್ಯೆ ಯಿಂ
ಬಿವೆಱೊಳಿಲ್ಲಣವೆಂಬುದಂ ನೆಱಿ ಬಲ್ಲೆನಾದೊಡಮಲ್ಕಱಿಂ ॥ ೦೩೨

ಅಕೃತ್ರಿಮಚೈತ್ಯಾಲಯಮಂ ಪರ್ವದಿನಂಗಳೊಳ್ ಪೋಗಿ ವಂದಿಸಲಕ್ಕುಮೆಂದು ಪೊಡೆವಟ್ಟು ಪ್ರಾರ್ಥಿಸಿ ಕೊಟ್ಟು ತಾಂ ಬಂದ ವೃತ್ತಾಂತಮನಱಿಪಿ ಪೂಜಿಸಿ ದೇವಲೋಕಕ್ಕೆ ಪೋದನೆನಗೆ ಗಗನ ಗಾಮಿನೀವಿದ್ಯೆ ಬಂದುದಿಂತೀ ವಿದ್ಯೆಯನೆಮ್ಮ ದೇಹಾರದ ಮಾಣಿವರಸೇ ನಂಗೆ ವಾತ್ಸಲ್ಯದಿಂ ಕೊಟ್ಟೆನೆಂಬುದುಂ, ಲಲಿತಾಂಗಂ ಬೆಱಗಾಗಿ, ೦೩೩

ಆತಂ ದೇವಾಧೀಶ್ವರ
ನೀತಂ ಕಿಱುಕಾಳವನುಷ್ಯನೀತಂಗಾತಂ।
ಪ್ರೀತಿಯೊಳಿಱಿದನೆಂದೊಡೆ
ಭೂತಳದೊಳ್ಧರ್ಮದಿಂದಮುಗ್ಗಳವುಂಟೇ ॥ ೦೩೪

ಜಿನದತ್ತಂ ಗುಣವಾರ್ಧಿ ತಪ್ಪಲಱಿಯಂ ಜೀವಾದಿಗಳ್ಗಂಬ ಭಾ
ವನೆಯಿಂದಾನಿನಿತೊಂದು ಬೆಂಪ್ರವೆಡೆದೆಂ ದೇವಾಧಿದೇವಂ ಜಗ

ಜ್ಜನಪೂಜ್ಯಂ ಜಿನನಂ ಜಿನಾಗಮಮುಮೆಂ ನಿಶ್ಶಂಕೆಯಿಂ ನಂಬುವಾ
ತನ ಸೌಖ್ಯೋನ್ನತಿಯಂ ಮಹಾಮಹಿಮೆಯುಂ ಪೇೞ್ಬಣ್ಣಿಸಲ್ಬರ್ಕುಮೇ॥

ಎಂದು ದರ್ಶನದೊಳ್ ನಿಶ್ಶಂಕನಾಗಿ ॥ ೞಿ೬

ಕಡುದೂರ್ತರ್ ಮುಂ ದುಷ್ಟರ
ಗಡಣಂಗೊಂಡಳವೆ ಸಾಲ್ಗು ಮಿನ್ನಳಿಪಿಂದಂ ।
ಪಿಡಿಯೆಂ ಖಳಸಂಸೃತಿಯಂ
ಬಿಡುವೆಂ ಪಿಡಿವೆಂ ಜಿನೇಂದ್ರಪದಸರಸಿಜಮೆಂ ॥ ೞಿ೭

ಎಂದು [ತನ್ನ ವೈರಾಗ್ಯಂ ಧನ್ವಂತರಿಯ ಕಥೆಯಿಂದಿರ್ಮಡಿಯಾಗೆ ಸಂಸಾರಭೋಗಕ್ಕೆ ಪೇಸಿ] ದೇವರ್ಷಿಯರೆಂಬ ಚಾರಣರ್ಷಿಯರಲ್ಲಿ ಜಿನದೀಕ್ಷೆಯಂ ಕೈಕೊಂಡು ತತ ಣದೊಳ ಚಾರಣರ್ದ್ಧಿಯನೆಯ್ದಿ ಪನ್ನಿರ್ದಿರದ ತಪದೊಳುತ್ತರೋತ್ತರಂ ನೆಗೞ್ದು, ಅಷ್ಟಾಪದ ಗಿರಿಯೊಳಷ್ಟವಿಧ [1] ಕರ್ಮಂಗಳಂ ನಿರ್ಮೂಲಮಾಗೆಕೆಡಿಸಿ ತ್ರಿಲೋಕ ಶಿಖರಿಶೇಖರನಾದನಿಂತು, ೞಿ೮

ಕೇಡಿಲ್ಲದೊಂದು ಸುಖಮಂ
ಮಾಡುವೊಡರ್ಹತ್ಪದಾಂಬುಜಾತಮೆ ಮಾಟ್ಟುಂ ।
ಮಾಡವು ಪೆಱವೆಂಬೀ ಬಗೆ
ಕೂಡಿದೊಡಾತಂ ಕೃತಾರ್ಥನಾತನೆ ಧನ್ಯಂ ॥ ೞಿ೯

ಎಂದು ಗೌತಮಸ್ವಾಮಿಗಳ್ [2] ನಿಶ್ಶಂಕೆಯ ಕಥೆಯಂ ಪೇೞ್ದುದುಂ, ಪಿರಿದೊಂದುತ್ಸಾಹದಿಂ ನಂಬುಗೆ ಮನದೊಳಗುರ್ವಾಗೆ ಕೈಗಣ್ಮೆ ಪೊಣ್ಮತ್ತಿರೆ ಮಿಥ್ಯಾತ್ವಂ ಸಡಿಲ್ವೊರ್ಮೆಯೆ ಪಱಿಪಡೆ ನಿರ್ವಾಣಸಾಮ್ರಾಜ್ಯ ಮೊಗೞ್

---

[1] ಕೈಲಾಸಪರ್ವತದೊಳಷ್ಟವಿಧ (ಗ) [2] ಎಂದು ಮುನಿರಾಜಹಂಸಂ (ಗ)

ದೊರೆಕೊಂಡಂತಾಗೆ ರಾಗಂಬೆರಸು ನಲಿದನಂದೆಯ್ದೆ ತ್ರೈವಿದ್ಯಲಕ್ಷ್ಮೀ
ಶ್ವರಪಾದಾಂಭೋಜಭೃಂಗಂ[1] ಸುಕವಿಜನಮನಃಪದ್ಮಿನೀ ರಾಜಹಂಸಂ ॥ ೦೪೧

[2] ಇದು ನಿಖಿಲದಿವಿಜಪರಿವೃಢಮುಕುಟತಟಘಟಿತಮಣಿನಿಕರವಿಲುಳಿತ
ಕಿರಣಚುಂಬನೀಯಪರಮಜಿನಚರಣಯುಗಳಸರಸಿರುಹ
ಮತ್ತಮಧುಕರ ನಿರುಪಮಸಹಜಕವಿಜನಪಯಃ
ಪಯೋಧಿಹಿಮಕರನುತಭಾವಯುತ ದಿಗಂಬರ
ದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತ ಮಪ್ಪ
ಧರ್ಮಾಮೃತದೊಳ್
ದರ್ಶನಪ್ರಭಾವಾಂಗವ್ಯಾವರ್ಣನಂ
ದ್ವಿತೀಯಾಶ್ವಾಸಂ

---

1 ಚಿತೈತ್ಯೋತ್ಸವಂ ಪುಟ್ಟಲತ್ಯಾ | ದರದಿಂ ತ್ರೈವಿದ್ಯಚೂಡಾಮಣಿವಿಮಳ
ಪದಾಂಭೋಜಭೃಗಂ ಸರಾಗಂ | ಬಿರಸಿರ್ದಂ ಯೋಗಿವಂದ್ಯಂ ಸುಕವಿ(ಗ)

2 ಇದು ಸಮಸ್ತಸುರಕಿರೀಟಮಣಿಗಣಮಯೂಖಾಲಂಕೃತಪರಮಜಿನ (ಬ)

ತೃತೀಯಾಶ್ವಾಸಂ.

ಶ್ರೀಕಾಂತೆಯನೊಲಿಪ ಗುಣ
ಕ್ಕೀ ಕಮನೀಯಪ್ರಣೂತನಿಶ್ಶಂಕ ಲಸ ।
ತ್ಪ್ರಾಕಾರವೆಂದು ಪೆರ್ಚಿಂ
ಕೈಕೊಂಡಂ ಸುಕವಿನಿಕರಪಿಕಮಾಕಂದಂ ॥ ೧

ಅಂತಾಪ್ತಾಗಮಪದಾರ್ಥಂಗಳೊಳ್ ನಿಶ್ಶಂಕಮೆನನಾಗಿ ಮುಂದಣ ನಿಷ್ಕಾಂಕ್ಷೆಯ ಕಥೆಯಂ ಬೆಸಸಿವೆಂದು ಗೌತಮಗಣಧರರ್ಗೆ ಪೊಡೆಮಟ್ಟು ಮುಕುಳಿತಕರಕಮಲನಾಗಿರ್ಪುದುಂ [1] ಗೌತಮಗಣಧರಸ್ವಾಮಿಗಳಿಂತೆಂದು ಪೇೞ್ದರ್:— ತಂಬುಲದಂತೆ ಸಂಗೀತದಂತೆ ದಿವಸದಂತೆ ಮುತ್ತುಗದಂತೆ ವಜ್ರದಂತೆ ಲೋಕದಂತೆ ವೀಣೆಯಂತೆ ಗಾಳಿಯಂತೆ ವಿಪ್ರರಂತೆ [2] ಸಿದ್ಧರಂತೆ ತ್ರಿಸರದಂತೆ ದರ್ಶನಮುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಮೆಂಬ ಮೂಱರೊಳಂ ಕೂಡಿ ಮಹೋತ್ಸಾಹದಿಂ ನಡೆವುದು. [3] [ಇನ್ನಾ ಕಥೆಯ ಮಹಿಮೆಯೆಂತಪ್ಪುದೆಂದೊಡೆ, ೨

---

1 ನಿಶ್ಶೇಯಸಶ್ರೀಯ ಮನದ ಕಾಂಕ್ಷೆಯ ಕಥೆಯಂ ಶ್ರೇಣಿಕಂಗೆ ಗೌತಮ ಸ್ವಾಮಿಗಳಿಂತೆಂದು ಪೇಳಲ್ಕೊಡಗಿದರ್ (ಕ) ; ಬೆಸಸುವೆಂಬುದುಮಿಂತೆಂದು ಪೇೞ್ದರ್ (ಗ)

2 ಲಂಕೆಯಂತೆ (ಗ)

3 ಕರವೊಪ್ಪುವ ನಿಷ್ಕಾಂಕ್ಷೆಯೊಳಿರಡಿಲ್ಲದೆ ನೆರೆದು ಶುಭದೊಳಿರ್ಪುವ ಮನುಜಂ ।
ಗರಿದುಂಟೆ ಜಗತ್ತ್ರಯದೊಳ್ಪರಮಾರ್ಥಂ ಮುಕ್ತಿಗದು ತವರ್ಮನೆಯಲ್ತೇ ॥

ಇನ್ನದಱೈಶ್ವರ್ಯಮೆಂತೆಂದೊಡಂ, ಅಂಗವಿಷಯದ ಚಂಪಾಪುರದೊಳ್ ಪ್ರಿಯದತ್ತನೆಂಬ ಪರದನಿರ್ವಾತನ ಮನೋಹರಿಯನಂಗನು ಶ್ರಿಯೆಂಬಳವರ್ವರ್ಗಂ ಪ್ರಿಯನಂದನೆ ಗುಣಪರತ್ನಾಭರಣೆಯೆನಿಪನಂತವುತಿಯೆಂಬಳ್, ಮತಿವಂತೆ ಱಗೆಗೆ ಬಂದು (ಗ)

ಅಗಣಿತಮಪ್ಪ ಪೆರ್ಗಜ್ಜಿಗಳಿಂ ನೆಜ್ಜೆ ವಾರಿಜಷಂಡದೋಳಿಯಿಂ
ಸೊಗಯಿಸುತಿರ್ಪ ಕೆಯ್ವೊಲದಿನಾಡುವ ಗೋಕುಲದಿಂ ಕುಬೇರನಿಂ
ಮಿಗಿಲೆನಿಪೊಕ್ಕಲಿಂ ವಿಬುಧಸಂಕುಳದಿಂ ತುಱುಗಿರ್ದ ನಂದನಾ
ಳಗಳಿನಳುಂಬಮುನ್ನತಿಯಿನಂಗಮಹೀವಳಯಂ ಧರಿತ್ರಿಯೊಳ್ ॥ ೩

ಅಂತೊಪ್ಪುವಂಗವಿಷಯದೊಳ್ ಧರಾಂಗನೆಯ ಕೈಯ ಮಣಿದರ್ಪಣದಂತೆ, ೪

ಸುತ್ತಿದ ನಂದನವನದಿಂ
ಮುತ್ತಿದ ಕೆಯ್ವೊಲದಿನೆಸೆವ ಪದ್ಮಾಕರದಿಂ।
ದುತ್ತುಂಗಜಿನಾಲಯದಿಂ
ದುತ್ತಮಪುರವೆನಿಸಿ ನೆಗಳ್ದ ಚಂಪಾಪುರದೊಳ್ ॥ ೫

ಜಿನಸಮಯವಾರ್ಧಿಸೋಮನುಂ ವೈಶ್ಯವಂಶಲಲಾಮನುಮಪ್ಪ ಪ್ರಿಯದತ್ತನೆಂಬ ವೆಣಿಗ್ವಂಶಕುಲತಿಲಕನಪ್ಪನಾತನ ಮನೋಹರೆಯಂಗಮತಿಯೆಂಬಳಂತವರಿರ್ವರ್ಗಂ ಪ್ರಿಯನಂದನೆ ಗುಣಗಣಾಭರಣೆಯನಂತಮತಿಯೆಂಬಳ್,] ೬

ಅತಿಚೆಲ್ವೆ ಒಗೆಗೆವಂದುದ
ನತಿಶಯದಿಂ ಪಲವುಮಕ್ಕಳುಂ ತಾನುಂ ಸಂ।
ತತಮುಂ ಮಹಿಮೆವೆರಸುತಾ
ಡುತುಮೀತೆಱದಿಂದೆ ಪೋಗೆ ಪಲವುಂ ದಿವಸಂ ॥ ೭

ಒಂದುದಿವಸಮನಂತಮತಿಯೊಡನಾಡುವ ಮಕ್ಕಳಲ್ಲಂ ರಾಗದಿಂ ಮದುವೆಮಾಡುವೆವೆಂಬುದ್ಯೋಗದಿಂ ತರಿಸಿ ಬೊಂಬೆಯನೊಂದಂ,

ಲೀಲೆಯಿಂದುಡಿಸಿ ದಿವ್ಯವಸ್ತ್ರಮಂ
ಸೋಲೆ ಕತ್ತುರಿಯ ಬೊಟ್ಟನಿಟ್ಟು ಪೂ
ನ್ನೊಲೆಯಂ ತೊಡಿಸಿ ಚೆಲ್ವನಪ್ಪ ಪೂ
ಮಾಲೆಯಂ ಮುಡಿಯಿಸುತ್ತುಮರ್ತಿಯಿಂ ॥ ೯

ಇಂತು ನೆಜ್ಜೆಯೆ ಪಸದನಂಗೊಳಿಸಿ, ೧೦

ಮದವಣಿಗನೆಂದು ಪಂಕಜ
ವದನೆಯು ಸಾಱಿರಿಸಿ ರಾಗವೊದವಿರೆ ಮನದೊಳ್ ।
ಮುದದಿಂ ಕೈಪಜ್ಜೆಗುಟ್ಟುತ್ತ
ತ್ತೊದವಿಂದಂ ಮಕ್ಕಳಾಡುತಿರ್ಪನ್ನೆವರಂ ॥ ೧೧

ಪ್ರಿಯದತ್ತಸೆಟ್ಟಿ ಬಸದಿಗೆ ದೇವರಂ ಕಾಣಲ್ಪೋಗುತ್ತೆ ಕಂಡು ಸಮೀಪಕ್ಕೆ ಬಂದು ಬೊಂಬೆಯು ಕೆಲದೊಳಿರ್ದ ಮಗಳನೆತ್ತಿಕೊಂಡು ಮುಂಡಾಡಿ ಕದಪಂ ಕರ್ಚಿ ಬಚ್ಚಿಕವಿಂತೆಂದಂ[1]:— ೧೦

ಸ್ನೇಹದಿಂ ಗುಡಿಗಟ್ಟಿದೆ ಪೂರ್ವಜಂಗಳತೂರ್ಯರವೆಂಗಳು
ತ್ಸಾಹದಿಂದಮೆರ್ದೊಪ್ಪದೆ ನಂಟರ್ ಬಾರದೆ ಪಾವನರತ್ನಸಂ
ದೋಹದಿಂದೆಸೆವಂತು ವಿವಾಹಮಂ ಕರವೊಪ್ಪಿರೆ ಮಾಡದಾಂ
ವೋಹದಿಂ ನೆಱೆ ನೋಡದೆ ನೀನಾತ್ಮೇಶನನಟ್ಟಿಱೂಳರ್ತಿಯಿಂ ॥ ೧೩

ಇಂತು ಕದ್ದು ಮದುವೆಯಪ್ಪುದುಚಿತಮೆಲ್ತೆಂದು ತ್ರಸ್ತರಿಯಾಡುತ್ತುಂ ಮುದ್ದಾಡಿ ಜಿನಾಲಯಕ್ಕೆ ಬಂದು ಸ್ವಾಮಿಯಂ ಕಂಡು ಭಟ್ಟಾರಕರಂ[2] ವಂದಿಸಿ ನಿತ್ಯವ್ರತಮಂ ಕೈಕೊಂಡು[3] ಕಿಱಿದುಬೇಗಂ ಧರ್ಮಶ್ರವಣಂಗೆಯ್ದು ಬಚ್ಚಕ್ಕವಿಂತೆಂದಂ : — ೧೪

ನೋಡಿರೆ ಚೋದ್ಯಮನಕ್ಕನ
ಮಾಡಿದುದಂ ನಂಟರಱಿಯದಾನಱಿಯದೆ ಮುಂ ।
ಮಾಡದೆ ಜಿನಪೂಜೆಯನೊಡ
ನಾಡುವ ಕೂಸುಗಳುವೆಯ್ದೆ ತಾನುಂ ಕಳವಿಂ ॥ ೧೫

ಸಮಕಟ್ಟಂ ಮದುವೆಯಾದಳ್ ; ನಿಮ್ಮ ಗುಡ್ಡಿಗೆ ಬ್ರಹ್ಮಚರ್ಯವ್ರತಮುಂ ಕುಡಿವೆಂಬುದುಂ, ವರದತ್ತಭಟ್ಟಾರಕರ್ ನಗುತ್ತುಂ ನಿನೆ

[1] ಮಕ್ಕಳೆಲ್ಲವೊಂದುದಿವಸವನಂತವತಿಕುಮಾರಿಯು ಕೆಲದೊಳೊಂದು ಬೊಂಬೆಯನಿರಿಸಿ ಮದವಣಿಗನುಂ ಮದವಣಿಗೆಯುಮೆಂದು ಕೈಪಜ್ಜೆಗುಟ್ಟುತ್ತೆ ನೆರೆದಾಡುತ್ತುಮಿರೆ ಪ್ರಿಯದತ್ತಸೆಟ್ಟಿಯುಂ ಕಂಡು ಬಂದೆತ್ತಿಕೊಂಡು ಕದಪಂ ಕರ್ಚಿ ಮುದ್ದಾಡಿಸಿ ಮಗಳ್ಗಿಂತೆಂದಂ (ಗ)

[2] ವರದತ್ತಭಟ್ಟಾರಕರಂ (ಗ) [3] ಸಿದ ಕೇಪೆಯಂ ಕೊಂಡು ಕಿಱಿದು (ಕ)

ಗಿಂದು ಮೊದಲಾಗೆ ಬ್ರಹ್ಮಚರ್ಯವ್ರತಮಂ ಕೊಟ್ಟೆವೆಂಬುದುಂ ಮಹಾ
ಪ್ರಸಾದಮೆಂದು ಕೈಕೊಂಡು ತನ್ನ ಮನದೊಳಿಂತೆಂದಳ್:— ೧೬

ಬಡವೆಂಗೊಪ್ಪುವೆ ರಾಜ್ಯಲಕ್ಷ್ಮಿ ಕುರುಡಂಗಕ್ಷಿದ್ವಯಂ ಕೂಪದೊಳ್
ಕೆಡೆವೆಂಗಡ್ಡಯಿಪಡ್ಡಗೊಂಬು ರುಜೆಯೊಳ್ಬೀವಂಗೆ ದಿವ್ಯೌಷಧಂ
ಬಿಡದೀ ಸಂಸೃತಿಯೊಳ್ ದುರೌಪವಶದಿಂ ಬೇವಂಗೆ ತತ್ಸುವ್ರತಂ
ಗಡ ಕೈಸಾರ್ದೊಡೆ ಭಾವಿಸಂದವನೆ ಧನ್ಯಂ ಭೂರಿಭೂಚಕ್ರದೊಳ್ ॥೧೭

ತರುನಿಕರಂಗಳೊಳ್ಮಲಯಜಂ ಭಗಣಂಗಳೊಳಬ್ಜವೈರಿ ಭೂ
ಧರನಿಚಯಂಗಳೊಳ್ಸುರನಗಂ ದೃಷದಾವಳಿಯೊಳ್ಸುರತ್ನಮು
ರ್ವರೆಗಧಿನಾಥರೊಳ್ನಗಲ್ದ ಚಕ್ರಿಗಳಯ್ದಿ ನಿಳಿಂಪರೊಳ್ಸುರೇ
ಶ್ವರನಿರವೆಂತುಟುಂತುಟೆ ಧರಿತ್ರಿಯ ದೇವರೊಳಂ ಜಿನೇಶ್ವರಂ ॥ ೧೮

[ಇಂತಾರ್ಗವೆಪೂರ್ವವೆನಿಸಿದ ಜಿನೇಶ್ವರಂ ಮುನ್ನಿನ ಪುಣ್ಯೋ
ದಯದಿಂದೆನಗೆ ಕುಲಸ್ವಾಮಿಯಾದಂ ; ಮತ್ತಂ][1] ರೂಪುಂ ಸ್ನೇಹಮು
ಮುಳ್ಳ ಸ್ತ್ರೀಯುಂ, ಕಾರುಣ್ಯಮುಂ ಕೋಡುಮುಳ್ಳಾಳ್ದನುಂ
ಬೆಳಸುಮೋಜ್ಜೆಯುಮುಳ್ಳ ದೇಶಮುಂ, ಪಾಲುಂ ಶೀಲಮುಮುಳ್ಳಾವುಂ
ನಿರ್ವೇಗಮುಂ ವ್ರತಮುಮುಳ್ಳ ತಪಮುಂ, ಶ್ರೀಯುಮಾಯುವುಮುಳ್ಳ
ಬಾಟಮುಂ, ಶಕ್ತಿಯುಂ ಭಕ್ತಿಯುಮುಳ್ಳ ದಾನಮುಂ, ಚೆನ್ನುಂ ಪೊನ್ನು
ಮುಳ್ಳ ಸೊಬಗುಂ, ಗೆಲ್ಲಮುಮುದಟುಮುಳ್ಳ ತೇಜಮುಂ, ತೀರ್ದುವೆ
ಬುದ್ಧಿಯುಂ ಸತ್ವಮುಂ, ಸಮ್ಯಗ್ದರ್ಶನಮುಂ ವ್ರತಮುಮುಳ್ಳ ಪುಣ್ಯ
ಮುಂ ಪಡೆಯಲರಿದದುಕಾರಣದಿಂ,

ಬಾಲತೆಯೊಳ್ದರ್ಶನಮುಂ
ಮೇಲೆನಿಪೀ ವ್ರತಮುಮೊಡನೆ ಸಂಭವಿಸಿದುವಾ ।
ನಾಲಸ್ಯದಿನಿವನುಟಿದೊಡೆ
ಮೇಲೆನಗಿಂತಪ್ಪ ಪುಣ್ಯದೊದವಾದಪುದೇ ॥ ೧೯

1 ಮತ್ತಮೆನ್ನಭಾಗ್ಯದಿಂ ತವುಡಿಂಗಂ ಮಾಣಿಕಂ ದೊರೆಕೊಂಡುದೆಂಬಂತೆ ರೂಪುಂ (ಬ. ಕ.)

ಕೆಱೆಯನೊಡೆದು ತೊಱೆಯಂ ತೀವುವ, ಮನೆಯನಱುದು ಬೇಲಿ
ಯನಿಕ್ಕುವ, ಹಾಸನಱುದು ಕಂಥೆಯಂ ಪೊಲಿಸುವ, ಮೆದೆಯಂ ಸುಟ್ಟ
ರಳಂ ಕುಱಿಕುವೆ, ತುಪ್ಪಮೆನೊಕ್ಕು ಸಗಣಿಯಂ ಕೊಳ್ವ, ಕಸ್ತೂ
ರಿಯಂ ಬಿಸುಟು ಕೆಸಱಂ ಕೊಳ್ವ, ಬಂಡಾರಮಂ ಈಡಾಡಿ ಕಾಚಂ
ಸಂವರಿಸುವ, ಬಟ್ಟೆಯಂ ಬಿಟ್ಟು ಕಾಡಂ ಪುಗುವೆ, ಕೆಯ್ಯಂ ಬಿಟ್ಟು
ಪುಲ್ಲಂ ಕೊಳ್ವ, ಪೊನ್ನಂ ಬಿಟ್ಟು ಮಸಿಯಂ ಕಟ್ಟುವೆಗ್ಗನಂ ಪೋಲ್ವೆನೀ
ದರ್ಶನಮಂ ವ್ರತಮುಮಂ ಬಿಟ್ಟೆನಪ್ಪೊಡೆಂದು ಮನಮಂ ತಿಱ್ಪಂ
ಮಾಡಿ, ೮೧

[ಎಂದು ಮನದೊಳ್ಮಹೋತ್ಸವ
ದಿಂದಂ ಮುನಿಪತಿಗೆ ಭಕ್ತಿಯಿಂ ವಂದಿಸಿ ಪೆ ।
ರ್ಚಿಂದಂ ಗೃಹಕ್ಕೆ ಬೇಗಂ
ಬಂದು ಮನೋವ್ಯುದದಿನಂಬುಜಾನನೆಯಿರ್ದಳ್ ॥ ೮೨

ಇರ್ಪುದುಂ ಮನೆಯುವರೆಲ್ಲರ ಪ್ರಹಸನದಿಂದಂ ಬ್ರಹ್ಮಚಾರಿಯೆಂಬ
ಪೆಸರೆ ಪ್ರಸಿದ್ಧಮಾಗೆ][1] ೮೩

ಸಿಸುವಂ ತಾಯೊಕ್ಕಲಿಗಂ
ಸಸಿಯುಂ ನೆಲನಂ ಮಹೀಭುಜಂ ಕಡುಲೋಭಂ ।
ಕಸವರಮೆಂ ಭೀತಂ ತ
ನ್ನಸುವಂ ನೆಱೆ ಶೀಲಮೆಂ ಮಹಾಸತಿಯಪ್ಪಳ್ ॥ ೮೪

ರಕ್ಷಿಸುವೆಂದದಿಂ,[2] ೮೫

ಸನ್ನುತಗುಣಗಣನಿಳಯೆ ಮ
ಹೋನ್ನತೆ ಬಿಡದೈದುವರ್ಷದಿಂ ತೊಡಗಿ ಕರಂ ।
ಪನ್ನೆರಡಬ್ದಂವರೆಗಂ
ಛಿನ್ನಾಂಬುಜವದನೆ ರಕ್ಷಿಸುತ್ತುಂ ವ್ರತಮಂ ॥ ೮೬

---

[1] ಮನೆಗೆವೋಗಿ ಬ್ರಹ್ಮಚಾರಿಣಿಯೆಂಬ ಪೆಸರೆಸೆಯೆ (ಗ).

[2] ತನ್ನಸುವಂ ರಕ್ಷಿಸುವ ತೆಱದಿನೀಸುವ್ರತಮುಂ, ಸನ್ನುತ (ಗ)

ಇರ್ದೊಂದುದಿನಂ ಪೆಱಗಣ ನಂದನವನದೊಳ್ [ಪೊಱ್ತು ಪೋಗಿಂಗೆ ಪರಿಚಾರಕಿಯರುಂ ತನ್ನೊಡನಾಡುವ ಕುವರಿಯರುಂ ಬೆರಸು ಪೋಗಿ, ಮನಕ್ಕೆ ಬಂದ ಪೂವಿನಾಭರಣಮುಂ ತೊಟ್ಟು ಚೂತಮಹೀಜದ ಕೆಳಗಣ ಪೊನ್ನು] ಯ್ಯಲನೇಱು, ೮೬

ಅಳಿನಿನಾದವುಮುಯ್ಯಲ ಧ್ವನಿಯುಂ ಮೆನೋಹರಮಪ್ಪಿನಂ
ಜಳಜನೇತ್ರೆಯರೊಯ್ಯನೊಯ್ಯನೆ ತೂಗುತುಂ ನೆರೆದೊಂದಿ ಕೋ
ಮಳನಿನಾದದಿನಾದಿದೇವರ[1] ವಸ್ತುರೂಪಗುಣಸ್ತವಂ
ಗಳನೆ ಪಾಡೆ ವಿನೋದದಿಂ ತರಳಾಕ್ಷಿಯಾಡುತುಮಿರ್ಪಿನಂ ॥ ೮೮

[ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯ ಕಿನ್ನರಗೀತಮೆಂಬ ಪೊೞಲನಾಳ್ವ] ಕುಂಡಲಮಂಡಿತನೆಂಬ ವಿದ್ಯಾಧರಂ ತನ್ನಗ್ರಮಹಿಷಿ ಸುಕೇಶಿನಿವೆರಸು ಆಕಾಶಮಾರ್ಗದೊಳ್ ಕಾಮವಿಹಾರಾರ್ಥಂ ಬರುತ್ತುಂ [ಉಯ್ಯಲಾಡುತ್ತುಮಿರ್ಪನಂತಮತಿಕುಮಾರಿಯಂ] ತೊಟ್ಟನೆ ಕಾಣ್ಬುದುಂ; ೮೯

ವಿರಹಾನಲನಳುಜೆ ವಿಯು
ಚ್ಚರರಾಜಂ ನಿಲಿಸಲಾಱದೊಡಲಂ ದಾಪ ।
ಜ್ವರಮಾದರಂತೆ ಕಾಯ್ಪಿಂ
ದುರಿಯುತ್ತುಂ ಬೆಯ್ವ ಕೈಲಮಿರ್ಪಂತಿರ್ದಂ ॥ ೯೦

ಅರಲಸರಲ್ಗೆದೆಂಬರ್ಕಾಮಂಗೆ ಲೋಕದ ಮಾನಿಸರ್
ತೋಲಗದರಲಂಬಾತಂಗ್ಗೆದಪ್ಪೊಡೆನ್ನನೆ ಪೋಗದ

---

[1] ನಿನಾದದೆ ದೇವವಂದ್ಯನ (ಬ. ಕ.)
ಒಡನೊಡನೆಕಾಮಬಾಣಂ
ನಡುಕೊಲ್ವರಮೂರ್ಛೆಗಡುಗೊಂಡತ್ತಿತ್ತಲ್ ।
ಮಿಡುಕದೆನಿಲಿಸಿವಿಮಾನವು
ನಡಿಗಡಿಗಳ್ಕರ್ತುನೋಡಿವಾಜಮುಖಿಯಂ ॥ ೮೯
ತನ್ನೊಳಿಂತೆಂದಂ:–(ಬ, ಕ) ೯೧

ಗ್ಗಲಿಸಿ ನಡುವಂಬೋವೊವೆತ್ಯದ್ಭುತಂ ಶತಕೋಟಿಗಂ
ಪಲವುಪಲವೆಂದಾಗಳ್ವ್ಯಾಧರಂ ಮನಮಿಕ್ಕಿದಂ ॥ ೩೩

ಇವಳ ಕಡೆಗಣ್ಣೆಂಬೀ ಲೇಸಪ್ಪ ಕೂರ್ಪಿನ ಬಾಣದಿಂ
ದಿವಳ ಮುಖಮೆಂಬಗ್ಗಂಬೆತ್ತಿರ್ದ ಪೆಂಪಿನ ಚಕ್ರದಿಂ
ದಿವಳ ನಳತೋಳ್ಗಳೆಂಬೀ ತೀವ್ರಾಸಿಯಿಂ ಸ್ಮರನಂಜಿಪಂ
ಕುವಿಟನದಟುಂದೆನ್ನಂ ತಾನೊರ್ವನಂಜಿಸಲಾರ್ಪನೇ ॥ ೩೪

ಎಂದು ಕಾಮಸಂತಾಪದಿಂ ಪಲುಂಬಿ ಪಂಬಲಿಸುತ್ತುಂ ಪೆಂಡತಿ
ಯಪ್ಪ ಸುಕೇಶಿನಿ ತನ್ನೊಡನಿರ್ದಳಪ್ಪುದಱಿಂ ನೆಲಕ್ಕಿಱಿದು ಕುಮೊರಿ
ಯಲ್ಲಿಗೆ ಪೋಗಲಣ್ಮದೆ, ಕುದಿವ ಕೂಱಂತೆ ಕುದಿದು ದಗೆಯೇಱಿದ
ಕೋಡಗದಂತೆ ಬೆಱಗಾಗಿ ಬಾಣತಿಸೂಳೆಯಂತೆ ಸಿಡಿವಿಡಿಗೊಂಡು ತಳಾ
ಱನಂ ಕಂಡ ಕಳ್ಳನಂತೆ ಕುಸಿದು ಪೇಳಗೆಯೊಳಗಣ ಪಾವಿನಂತುವ್ಮ್ಮಳಿ
ಸಿ ಬೇಸಗೆಯ ಸೂರ್ಯನಂತೆ ಕಾಯ್ದು ಪಿರಿದಾಗಿ ತೆಱಿವ ಒಕ್ಕಲಂತೆ
ನೆಲನಂನೋಡಿ ನೀರ್ವೆಡೆಯದ ಗಿಡುವಿನಂತೆ ಮುಖಂಬಾಡಿ ಎಣ್ಣೆಮು
ಟ್ಟದ ಕುಂಬಳಕಾಯಂತೆ ಒಳಗೊಳಗೆ ಕೊಱಿತು ಕುದಿವ ನೀರಂತೆ
ಮೆಱುಗಿ ದರಿಯುಮೆರದಂತಲ್ಲಾಡಿ ಆನೆಯ ಪರಿಕಾಱನಂತೆ ಪಲಪಂ ಚಿಂ
ತಿಸಿ ಕಳನನೇಱಿದಂಕದವನಂತೆ ಬೆಱಗಂನೋಡಿ ಬಕವೇಸಿತನದಿಂದೊ
ಡಲ ಸೂಡಿಂಗಿರಲಾಱದೆ ಪುಸಿಗೂರ್ಮೆಯಿಂದೋಪಳನಪ್ಪಿಕೊಂಡು
[ವೆಲ್ಲನಿಂತೆಂದಂ:— ೩೫

ಇತ್ತಲಪ್ಪೊಡೆ ನಮ್ಮ ಕಾಣದ ನಾಡುಗಳ್ಪಲವಿಲ್ಲ ಕೇ
ಳಿತ್ತಲೇವುದೊ ಪೊಕ್ಕು ನಾಳೆ ವಿನೋದದಿಂದೊಡನಿರ್ವರುಂ
ಮುತ್ತಿನಾಭರಣಂಗಳಂ ನೆಱಿ ತೊಟ್ಟು ಚೀನಮೆನುಟ್ಟು ಕೇ
ಳುತ್ತರಾಶೆಗೆ ಪೋಗಿ ಭೋಗಿಸುವಂ ಸುರೇಂದ್ರಗಿರೀಂದ್ರದೊಳ್ ॥ ೩೬

ಎಂದು ಕೃತಕವಚನದಿಂ ನಂಬೆ ನುಡಿದು ಪೊಱಲ್ಗೆ ಪೋಗಿ
ಮೆಂದಿರಮೆಂ ಪೊಕ್ಕು ನಲ್ಲಳಂ ವಂಚಿಸಿ ಪೋಪ ಬಗೆಯಂ ನೆನೆದು,
ಸುಕೇಶಿನಿಗೆ ಮಣಿಕುಂಡಲಮೆಂಡಿತನಿಂತೆಂದಂ:—] [1] ೩೭

[1] ಪುರಕ್ಕೆ ಮಗುಳ್ದು ಪೋಗಿ (ಗ)

ನೀನಿಲ್ಲಿರ್ ಮೀರುನಗ
ಕ್ಕಾನೊರ್ವನೆ[1] ಪೋಗಿ ಬಂದಪೆಂ ರಮಣೀಯ ।
ಸಾನಂಗಳಡೆಯನಱಿದೆಂ
ದಾ ನೀರೆಗೆ ಕೂರ್ಪನಂತೆ ನುಡಿದಾ ಖಚರಂ[2] ॥ ೩೪

[ವಿಮಾನಮನೇಱಿ ಪುರಮಂ ಪೊಱಮಟ್ಟು ಬಡಗಣದೆಸೆಗೆ ತನ್ನ ಪೋಗಂ ತೋಱಿ ಕಿಱಿದೆಡೆಯಂ ಪೋಗಿ ಮಗುೞ್ದು ತೆಂಕಮುಖನಾಗಿ ಮೆರುಜ್ಜ್ವದಿಂ] ಚಂಪಾಪುರಕ್ಕೆ ಬಂದುಯ್ಯಲನೇಱಿರ್ದನಂತಮತಿಯುಂ ತನ್ನ ವಿಮಾನದೊಳೇಱಿಸಿಕೊಂಡು ಆಕಾಶಕ್ಕೆ ನೆಗೆದು ಕನ್ನೆಯ ರೂಪಂ ನೋಡಿ, ೩೫

ಎಳಲತೆಯಿನೆ ಬಿದಿ ಲೋಕಮ
ನಳಲಿಸಲೆಂದರ್ತಿವೆಟ್ಟು ವನಿತಾರೂಪಂ ।
ಗಳಯಿಸಿದನಱಿದೆನಲ್ಲದೊ
ಡುಳಿದಂತಂಗನೆಯರಿಂತು ಚೆಲ್ವೆಯರೊಳರೇ ॥ ೪೦

ಕಂತುವಿನಾರಾಧಿಪ ದೈ
ವಂ ತಡೆಯದೆ ಕಾಮನಿಸುವೆ ಸರಲೆನಿಸಿರ್ದಾ ।
ಕಾಂತೆ ದೊರೆಕೊಂಡಳನಗೆ
ನ್ನಂತಾವಂ ಸ್ತ್ರೀಗೆ ನೋಂತವಂ ಖೇಚರರೊಳ್ ॥ ೪೧

[ಮತ್ತಂ, ಲೋಕದೊಳ್ನೋಡದ ಪೆಂಡರಿಲ್ಲ ಆಡು ಮುಟ್ಟದ ಗಿಡುವಿಲ್ಲ; ಈ ಕಾಂತೆಯುಂತೆ ಚೆಲ್ವೆಯಂ ಕನಸಿನೊಳಪ್ಪೊಡಂ ಕಂಡಱಿಯೆಂ ॥ ೪೨

ಸಿರಿಯೊಳ್ಮೂಪ್ಪವ ರೂಪನಿಂದ್ರನ ಕಾಂತೆಯೊಳ್ಮಡುಚೆಲ್ವನಂ
ಬುರುಹದೊಳ್ಮಲಿಖಬಿಂಬಮಂ ಶಿಶುಚಂದ್ರನೊಳ್ ನೊಸಲಂ ಮೃಗೇ
ಶ್ವರನೊಳೊಳ್ನಡುವಂ ಮನೋಜನ ಬಾಣದೊಳ್ಬರಲಂ ಮನೋ
ಹರಿಯಿವಳ್ಸಱಿಗೊಂಡಳೋ ನೆಱಿ ಸೂಱೆಗೊಂಡಳೂ ಪೇೞಿದಂ ॥ ೪೩

---

1 ದಕ್ಷಿಣದೆಸೆಗಾನೊರ್ವನೆ (ಗ)

2 ಆ ನಾರಿಗೆ ನಂಬಿ ನುಡಿದು ಖಚರಾಧೀಶಂ (ಗ)

ಎಂದು ಕ್ಷುಮೋರಿಯು ಹಾವಭಾವವಿಲಾಸವಿಭ್ರಮಂಗಳಂ ನೋಡಿ ತನ್ನೊಳ್ ಪೊಗಟ್ಟುತ್ತುಂ, ಮನದೊಳ್ ಸಂತಸದಂತಮನೆಯ್ದಿ ನೋಡುತ್ತುಮಿರ್ಪನ್ನೆಗಮನಂತಮತಿಕುಮಾರಿ, ೪೫

ನಯದಿಂ ಜಿನೇಂದ್ರಚರಣ
ದ್ವಯಮಂ ಚಿತ್ತದೊಳ್ ನಿಲಿಸಿ ಶೌಚಕ್ಕೆನಗಿಂ ।
ನಿಯತಂ ವೇಳೆಯೆನುತ್ತುಂ [1]
ಭಯದಿಂದಂ ನೋಡಿ ನಾಡೆ ನಡುಗುತ್ತಿರ್ದಳ್ (?) ॥ ೪೬

ಅಂತು] [2] ಪೆಣನಂ ಕಂಡ ಪಂದೆಯಂತೆಯುಂಜುತ್ತುಂ, ರೌದ್ರನಂ ಕಂಡ ಸಾಧುವಿನಂತೆ ಮಿಡುಕಲಣ್ಮದೆ ನೆಲನಂ ನೋಡತ್ತುಂ, ಬೆಟ್ಟದ ನಪ್ಪರಸಿನ ನಾಡಂತೆ ಬೆಬ್ಬಳಿಸುತ್ತುಂ, ಎಱೆಯು ಕೆಱೆಯಂತೆ ಮೊಗಂ ನೀರೋಡುತ್ತುಂ, ಮಕ್ಕಳಂತೆ [3] ವಿಮಾನಮೆಂ ಬಿಡದೆ ಪತ್ತುತ್ತುಂ, ಮೆಹಾ ಮಂತ್ರಿಯಂತೆ ವ್ರತರಕ್ಷಣೋಪಾಯಮುಮಂ ಚಿಂತಿಸುತ್ತುಂ,ಬೊಜಿಗಂಗೆ ಬೇಸತ್ತ ಸೂಳೆಯಂತೆ ವಿಮಾನದೊಂದೆಸೆಯಂ ನೆಮ್ಮುತ್ತುಂ, ಮುಳ್ಮರದ ಕೆಳಗಿರ್ದ ಲತೆಯಂತೋಸರಿಸುತ್ತುಂ, ಸುಂಕಿಗನಂ ಕಂಡ ಭಂಡಮುಳ್ಳನಂತೆ ಸಂಕಿಸುತ್ತುಂ, ಆಜ್ಞಾಪರನಪ್ಪರಸಿನಂತೆ [4] ಮನಮುಂ ಸಂತೈಸುತ್ತುಂ, [5] ಕೂರ್ಪರಂ ನೆನೆವೆಂತೆ ಜಿನಾಗಮಮುಮಂ ಭಾವಿಸುತ್ತುಂ ಭಯಮುಳ್ಳ ಬಟ್ಟೆಯುಂ ಪೋಪರಂತೆ ಇರ್ಕೆಲನಂ ನೋಡುತ್ತುಂ, ಕ್ಷಮಾನ್ವಿತೆಯುಂ ಸಾಗರದಂತೆ ಗಂಭೀರೆಯುಮಾಗಿರ್ಪುದುಮೆತ್ತಲ್, ೪೭

ಶತಪತ್ರಾನನೆ ಖಚರನ
ಸತಿ ಕೂರ್ಪರದಱಿಂದೆ ಖೇಚರೇಂದ್ರನೊಳಾದಾ ।
ಕೃತಕಮನಱಿಯದೆ ತಡೆದಂ
ಪತಿಯಿದನಾರಯ್ವೆನೆಂದು ಮನದಾದರದಿಂ ॥ ೪೮

---

1 ಚಿತ್ತದೊಳುನಿಲಿಸಿ ಶೌಚಕ್ಕಾನಿಂನಿಯತಂವೇಳೆ (ಕ. ಬ.)

2 ಎಂದು ಮನದೊಳ್ ರಾಗಿಸುತಿರ್ಪನ್ನೆಗಂ ಅನಂತಮತಿ (ಗ)

3 ಸನ್ಯಾಸಿಯಂತೆ (ಕ) 4 ಅನ್ಯಾಯವಿದನೂರಂತೆ (ಗ)

5 ಮಹರ್ಷಿಯಂತೆ ಶುಭಭಾವನೆಯುಂ ಭಾವಿಸುತ್ತುಂ, ಕೂರ್ಪರ ಬರವಂ ಪಾರ್ವರಂತೆ ವಿಮಾನದೊಂದೆಸೆಯಂ ನೆಮ್ಮುತ್ತುಂ, ಜಿನಾಗಮಮುಮಂ ನೆನೆಯುತ್ತುಂ, ಭಯಮುಳ್ಳ (ಕ.ಬ)

ಅವಳೋಕಿನೀವಿದ್ಯೆಯಂ [ನೆನೆದು ಬರಿಸಿ ಮದ್ವಲ್ಲಭನೇಂಕಾರಣಂ ತಡೆದನೋ ಬೇಗಮಾರಯ್ದು ಬಪ್ಪುದೆಂದು ಪೇಱ್ದುದುಂ, ಪೋಗಿ ಖಚರನಿರ್ದೆಡೆಯನಱಿದು ಬಂದು ತದ್ವೃತ್ತಾಂತಮನೊಂದುಗುಂದದಂತೆ ಪೇಱ್ದುದುಂ,] [1] ಸುಕೇಶಿನಿ ಕೇಳ್ದ ತುಂಬರುಗೊಳ್ಳಿಯಂ ಕಂಬದೊಳ್ಪೊಯ್ದಂತ ಸಿಡಿಲ್ದ [ಕಿಡಿಕಿಡಿವೋಗಿ] ೪೪

ಕರಮೆನ್ನನುಱದೆ ಪೋದಂ
ಬರಚರನುಮನವನ ಕೂರ್ಪ ವನಿತೆಯುಮೆಂ ಚೆ ।
ಚ್ಚರದಿಂ ಕೊಲ್ಲದೆ ಮಾಣ್ದೊಡೆ
ಧರೆಯೊಳ್ ಖೇಚರಿಯೆಯಲ್ಲ ನಾಂ ಗೀಚರಿಯೆ * ॥ ೪೯

[ಎಂದು ರೌದ್ರರೂಪೆಯುಂ ಪಾಪಿಯುಮೆಪ್ಪುದಱಿಂ ವಜ್ರದಂಡಮನುರದೊಳಮರ್ಚಿಕೊಂಡು ಕಿಚ್ಚಿ ಬಾಳ್ವರಸು ಬರ್ಪಾಕೆಯುಂ ದೂರದೊಳ ಕಂಡು ಬೆಗಡುಗೊಂಡು ಕುಂಡಲಮಂಡಿತಂ ಬೇಗದಿಂ ಪರ್ಣಲಘುವಿದ್ಯೆಯಂ ಬರಿಸಿ ನೀನೀಕನ್ನೆಯಂ ನೆಲಕ್ಕಿಱಿಪಿ ಬರ್ಪುದೆಂಬುದುಂ ತದ್ವಿದ್ಯಾದೇವತೆ, ೪೭

ವನಜಾನನೆಯುಂ ಪಿಡಿದೊ
ಯ್ಯನೆ ವಸುಮತಿಗಿಱಿಪಿ ಭೀಮೆವನವೆಂಬ ಮಹಾ ।
ವನದೊಳಗೆ ಸೊಗಯಿಸುವ ಮಾ
ವಿನ ವನದೊಳಗಿರಿಸಿ ಮರಳಿ ಪೋಪುದುಮೊಗಳ್] [2] ॥ ೪೮

---

1 ಆಟ್ಟುವುದುಮದಾತನವೃತ್ತಾಂತಮನಱಿದು ಪೇಳೆ ಸುಕೇಶಿನಿ (ಗ)

* ಎಲ್ಲೆಲ್ಲತೆಱಿದಿನೆನ್ನಂ ವೆಲ್ಲನೆ ಠಕ್ಕಕ್ಕಿ ಪೋದ ಧೂರ್ತನುಮಂ ತ । (೪೦)
ದ್ವಲ್ಲಭೆಯುಮನಾದರದಿಂ ಕೊಲ್ಲದೊಡಿವು ವೊಲೆಗಳಲ್ತು ಯೆಕ್ಕೆಯಕಾಯ್ಗಳ್(ಕ)

2 ಎಂದು ಮನಗಿ ಬರ್ಪಳಂ ಕಂಡು ಕುಂಡಲಮಂಡಿತನಂಜೆ ಪರ್ಣಲಘು ವೆಂಬ ವಿದ್ಯೆಯನನಂತಮತಿಕುಮಾರಿಯನಪ್ಪಯಿಸಿ ಪೋಗಲಾವಿದ್ಯೆ ಭೀಮುವನ ವೆಂಬಾರಣ್ಯದೊಳಿರಿಸಿ ಪೋಪುದುಂ, ಪಾಪಿಯು (ಗ)

ಪಾಪಿಯ ಮುಖದಂತೆ ಕತ್ತಲಿಪ ಕೊಳಂಗಳಿಂ, ಕೋಪಿಯ ಹೃದಯದಂತುರಿವ ಕಾಱುಚ್ಚಿನಿಂ, ಕೊಂಡೆಯನಂತೆ ಪತ್ತುವ ಚಿಕ್ಕ ಡಿನಿಂ, ಕಡುಘಾತಕನಂತೆ ನೋಯಿಸುವ ಪೆರ್ಮೊಣಂಗಳಿಂ, ಲಜ್ಜೆಗೆಟ್ಟ ಪೆಣ್ಗಳಂತೆ ಮೇಲಾವ್ಯವ್ಯ ಪೆಱ್ಮೊಲಿವಿಂಡಿಂ, [ಧೀರನ ಪೆಂಡಿರಂತೆ ಬಾಯ್ವಿಡುವ ಸೀರ್ನಾಯ್ಗಳಿಂ] ಬಡಸೂಳೆಯಂತೆ ಬಿಳಿಯದಂತಂಗಳಿಂ ದೊಪ್ಪುವಾನೆಗಳಿಂ, ಮಹಾಜಾನಿಯ ಕೋಡಿನಂತೆ ಪಲವುಕೋಡಿನಿಂದೊ ಪ್ಪುವ ಸಾರಂಗವಿಂಡಿನಿಂ, ಬಲ್ಲಿದರೊಡ್ಡಿನಂತೆ ಮೊರ್ಮೊಲೆವ ಕಾಡೆಮ್ಮೆ ಗಳಿಂ, ಜಿನದ್ರೋಹರ ನರಕಗಮನಮಂ ತೋರ್ಪಂತೆ ಗಿರಿಶಿಖರದಿಂ ದಿಳಿವ ನೀರ ಧಾರೆಗಳಿಂ, ಕ್ರೂರನ ಮನದಂತ ಪೊಗೆವ ದೆಸೆಗಳಿಂ, ಬಿಂಬಿ ಮ್ಮೆಂಬ ಪೇರಡವಿಯಂ ನೋಡಿ, ೪೩

ಜಳಜಮುಖಿ ನಾಡೆಯುಂ ತ
ಲ್ಲಳದಿಂ ಭೋರೆಂದು ಸುಯ್ದು ತನ್ನಂ ದುಃಖಾ ।
ನಳನಳ್ಯರೆ ತನ್ನೊಳಂದಳ್
ಫಲಮಾದುದು ಮುನ್ನ ಮೆನ್ನ ಮಾಡಿದ ಕರ್ಮಂ ॥ ೪೪

ನಡೆದೊಡೆ ಕಾಲ್ನೊಂದಪುದೆಂ
ದಡಿಗಡಿಗಾರಯ್ದು ತಡೆಯಿಮೆಂದಾಳಿಯರಂ । [1]
ಜಡಿವಾ ಜನನಿಯುಮೆಯ್ಯನು
ಕಡುಮೋಹೋದಯದಿನೀಗಳಲ್ಲಿರ್ದಪರೋ ॥ ೪೫

ಪರಿಚಾರಕಿಯರನೊಪ್ಪಿರೆ
ಕರಮಕ್ಕನ ಮನಮೆನಲ್ಕೆದು ಬಸಗೆಯ್ವುದು ಚೆ ।
ಚ್ಚರಮೆಂದು ಪೇೞ್ವ ಮೆತ್ತೋ
ದರರಾನಿರಲಿತ್ತಲತ್ತಲಾರ್ಗೆಂದಪರೋ ॥ [2] ೪೬

---

[1] ನಡೆಯುವೇಡೆಂದೆನ್ನಂ (ಕ)

[2] ಪೇೞ್ವಿತಾಯುಂ ಕರವಯ್ಯನುವೆನ್ನಗಲ್ಕ್ಕಗೇಂ ಗೆಯ್ದುಪರೋ (ಕ)

ತನಯತಾರ್ಯ್ತಂದೆ ಸುಹೃ
ಜ್ಜನವಿಷ್ಟಬ್ರಂಧುವರ್ಗವೆಜ್ಜಂ ಪಜ್ಜಂ ।
ತನುಜಕಾಂತೆಯರೊಡವು
ಟ್ಟನವರ್ ಬೇಱೆಂಬ ಜಿನಮತಂ ತಪ್ಪುಗುಮೇ ॥ ೫೭

ತಂತ್ರಂ ಬಹುವಿಧಮೆಪ್ಪಱ
ಮಂತ್ರಂ ನಾನಾಪ್ರಕಾರದಿಂದಿರ್ದ ಮಹಾ ।
ಯಂತ್ರಂ ಕೇಡಱಸಿದೊಡವು
ಜಂತ್ರದ ಕೀಲ್ಕಳಚಿದಂತೆ ಕಳಕುಳಮಕ್ಕುಂ ॥ ೫೮

ಕರಿಸಂದೋಹಂಗಳಶ್ವಪ್ರತತಿಗಳದಟಂದಿರ್ದ ಬಲ್ಲಾಳ್ಗಳುರ್ವೀ
ಧರಮಂ ಪೊಕ್ಕಿರ್ದ ಬಲ್ಲೊಂಟೆಗಳಕಟಕಟಾ ತಮ್ಮ ರಕ್ಷಿಪ್ಪುವೇಂನಿ
ಷ್ಠುರಕೋಪಂ ಕಾಲರಾಜಂ ಮೆಸಗಿ ಕೊಲೆ ದಿಟಂ ಧರ್ಮವೊಂದಲ್ಲದನ್ಯರ್
ಶರಣಲ್ಲೆಂಬೀ ಜಿನೇಂದ್ರೋದಿತವಚನಮನಾಂ ನಿಶ್ಚಯಂ ಕಂಡೆನೀಗಳ್॥ ೫೯

ಕಡುಗೂರ್ಪೆಮ್ಮಬ್ಬೆ ತಾನೆಲ್ಲಿನಳೂವಿನ ವೊಹೋದಯಂ ಪೆರ್ಚಿ
ಮುದ್ದಿಂ
ನಡಸುತ್ತಿರ್ಪಯ್ಯನೋವೆಲ್ಲಿದನನುನಯದಿಂದೊಂದಿ ಕೂಡಿರ್ಪ ನಂಟ
ರ್ಗೆಡೆಗೊಂಡಾನಂದದಿಂದಾಡುವ ಪರಿಜನಮಿನ್ನೆಲ್ಲಿದಭ್ರಾವಿಪಂದೆ
ನ್ನೊಡನಾರುಂ ಬಾರರೀ ಪೇರಡವಿಗೆ ದುರಿತಾಟೋಪದಿಂದಾನೆ ವಂದೆಂ ॥ ೬೦

ದಿವದೊಳ್ ಭೋಗಿಸ್ತೋಷಂ ಮಹಾನರಕದೊಳ್ ದುಃಖಾಗ್ನಿಯಿಂ
ಬೆಯ್ವೊಡಂ
ನವೆಯುತ್ತಿರ್ಪೊಡಮೆನ್ನ ಕೂಡಿ ತಿರಿಕವ್ರತಂಗಳೊಳ್ ನಾಡೆ ಸಂ

ಭವಮೊಗಿಪ್ಪೊಡೆ ಮೆತ್ತಮೊ ಮನುಜರೊಳ್ ಪುಟ್ಟಿಪ್ಪೊಡಂ ಜೀವನು
ತ್ಸವದಿಂದೊರ್ವನೆ ಬೆಯ್ಗುವೆಂಬ ಜಿನರ ಶ್ರೀವಾಕ್ಯಮಂ ನಂಬಿದೆಂ ೬೧

ಧರೆ ರಾಜ್ಯಂ ರೂಪು ವೀರಂ ಮೆಹಿವೆ ತನು ವಿಲಾಸಂ ಬಲಂ ಜೀವಿತತ್ವಂ
ಸಿರಿ ಸೌಭಾಗ್ಯಂ ಧನಂ ಯೌವನಮೆಳವು ಬಳಂ ಸೌಖ್ಯಮೆಂದಿಂತಿವೆಲ್ಲಂ
ಸುರಚಾಪಾಕಾರದಂದಂ ದರಿಯುಮಿಹಿಜದಂದಂ ಕರಂ ಕಪ್ಪ್ಪವೆಂದುಂ
ಸ್ಥಿರಮಲ್ಲೆಂಬೊಂದು ಜೈನೋಕ್ತಿಯು ಮಹಿಮೆಯನಿಂದಾನೆ [1] ಕಣ್ಣಾರೆ
ಕಂಡೆಂ ॥ ೬೦

[ಎಂದು ಧೃವಮಂ ಭಾವಿಸಿ] ೬೨

ಸಿರಿವಂತನಾಗಿಯುಂ ಸಿರಿ
ಪರಿಹರಿಪುದುವೊರ್ಮೆ ಬಡವನಾಗಿಯು ಮತ್ತಾ ।
ದರದಿಂ ಕುಮಾರನಾಗಿಯು
ಮಿರದೊರ್ಮೆಯೆ ವೃದ್ಧನಾಗಿಯುಂ ತಿರಿತಕ್ರುಂ ॥ ೬೩

ಕಡುಸುಖಿಯಾಗಿಯುಮೊರ್ಮೊಯೆ
ಕಡುದುಃಖಿಯುಮಾಗಿ ವೀರನಾಗಿಯು ಮತ್ತಂ ।
ಕಡುಪಂದೆಯಾಗಿಯುಂ ಬಿಡ
ದೊಡನೊಡನಳವೆಶದಿನಿಂತು ಸುಖಿವೆಂ ಜೀವಂ ॥ ೬೪

[ಎಂದು ಸಂಸಾರದೊಳಾದ ನಾನಾಪ್ರಕಾರದ ದುಃಖಂಗಳಂ
ಭಾವಿಸಿ,] ೬೫

ಒಡಲಿದಱಿಂದಮಂ ಬಗೆದು ನೋಡೊಪ್ಪಿಡೆ ಪೇಲ ಪಣಂಬೆ ಕುತ್ತವಿ
ರ್ಪೆಡೆ ನರದಾಗರಂ ವಿದುಳ ಪುತ್ತು ಕಷಾಯದ ರಾಶಿ ಮೂಳೆಯೊಂ

---

[1] ಮಹಿಮೆಯನೋವಾರೆ (ಗ).

ದಚಗಿನ ಪುಂಜದಿಂ ತೊವೆನೆಲ್ವಿನಿವುಗ್ಗದ ನೆತ್ತ್ಯುಂ ಮನಂ
ಬಿಡೆ ಸಮೆದಿರ್ದ ಪೆರ್ಮನೆ ಶರೀರವಿದಂ ಪಿಡಿವಂದಮೊವುದೋ [1] ॥ ೬೨

ಎಂದು ಶರೀರದೊಳಾದಶುಚಿತ್ವಮುಂ ನೆನೆದು ಪ್ಪೆದೆಸೆಗೆ ನಾಡೆಯುಂ ಪೇಸಿ, ನರಕದೊಳ್ ಜೀವಂಗಳ್ಗಪ್ಪ ದುಃಖಂಗಳನಿಂತೆಂದು ಬಗೆದಳ್ [2] ॥ ೬೯

ಕಿಱುಕಿಱುದಾಗಿರೆ ಮೆಯ್ಯುಂ
ಕೊಱಕೊಱೆದುಂ ಪುಳ್ಗಯುಟ್ಟು ಕದಪಂ ಕೈಯಿಂ ।
ದಿಱುದಿಱಿದು ನಿಷ್ಕರುಣರ್ ಮೆ
ಯ್ಮಱುಗುವಿನಂ ಪಿಡಿದು ಬಡಿದು ಕಿಚ್ಚಿನೊಳಿಡುವರ್ ॥ ೬೯

ಗರಗಸದಿಂದಂ ಮಿಗೆ ನಿ
ಷ್ಕರುಣಿಗಳೊಡನಿಕ್ಕಿ ನೆತ್ತಿಯಿಂದಂ ಪಾದಂ ।
ಬರೆಗಂ ಸೀಳ್ದಾ ಭಾಗಮ
ನುರಿವೆಣ್ಣೆಯೊಳಿಕ್ಕಿ ತೆಗೆಸುವರ್ಮಱುಗುವಿನಂ ॥ ೭೦

ಉಪ್ಪಿಲ್ಲಣಿಂಗು ಸಾಸವೆ
ತಪ್ಪಿಲ್ಲದ ಮೆಣಸು ಸುಂಟಿ ಪೊಸಸುಣ್ಣಮಿವಂ ।
ಚಪ್ಪರಿಸಿ ಬಡಿದು ಮೆಯ್ಯುಂ
ಸೊಪ್ಪಾಗಿರೆ ವೋದಿ ಪೂಸುವರ್ ನಿರ್ದಯೆಯಿಂ ॥ ೭೧

ನಾರೆತ್ತುವ ತೆಱದಿಂ ಕೈ
ಯಾರೆ ಕುಕಿಲ್ದಾರ್ದು ಪೊಯ್ದು ಮೆಯ್ಗಳ ತೊವೆಲಂ ।
ಕ್ರೂರತನದಿಂದಮೆತ್ತುವೆ
ರೋರಂತೊಱಲುವಿನಮೆಂಜಿ ಬಾಯ್ವಿಡುವಿನೆಗಂ ॥ ೭೨

---

1 ಕುಚಿಯೆಂದು ನಂಬುವೋ (ಗ.)

2 ಎಂದು ಸಂಸಾರವಿಚಿತ್ರತೆಗಳಂ ಭಾವಿಸಿ ನರಕದೊಳಾದ ಮಹಾದುಃಖಗಳಂ ಇಂತೆಂದು ಚಿಂತಿಸಿದಳ್ (ಗ್ರ)

ಮೆತ್ತಂ [ಬಾರಿಬಾರಿಗೆ ಗಾಣದೊಳಿಟ್ಟು ಪಿಱುದುಂ, ನೋಡೆ ನೋಡೆ ಗಾಣದೊಳಿಕ್ಕಿ ತೆಗೆದುಂ, ಪುಯ್ಯಲಿಡೆ ಸುಡವೊತ್ತಿಸಿಯುಂ, ಸಂದುಸಂದುಗಳೊಳ್ ಸೂಜಿಯುಂ ಪೆಟ್ಟಿಯುಂ, ಬಿಡಲೊಳುಳಿಗಳಂ ಸೇರಿಸಿಯುಂ, ನಾಲಗೆಯಂ ಪೆಡತಲೆಯೊಳುರ್ಚಿಯುಂ, ಮೆಯ್ಯಂ ಕಿಱಿ ಕಿಱಿದಾಗಿ ಕತ್ತರಿಸಿ ಬಾಯೊಳ್ತುಱುಂಕಿಯುಂ, ದೆಸೆದೆಸೆಗೆ ಸೀಳ್ದೀಡಾಡಿಯುಂ, ಬಾಯೊಳಗೆ ದಸಿಯುಂ ಪೆಟ್ಟಿಯುಂ, ಪೆಡಗಯ್ಯಂ ಕಟ್ಟಿ ಕಿಚ್ಚಿನೊಳ್ಪೊರಳ್ಚಿಯುಂ, ಬಸಿಱನಿಬ್ಬಗಿಮಾಡಿ ಕುದಿದೆಣ್ಣೆಯಂ ಪೊಯ್ದುಂ, ಮಿಡಿಯೆರಡುಮೆಂ ಕುಂಟಾಗೆ ಕೊಯ್ದುಂ, ಬಳಱುವಿನಂ ಗಂಟಲಂ ಮುಱಿದುಂ, ಪೆಳಱುವಿನಂ ಜಡಿದುಂ, ಬಾಳೊಳ್ಪೊಯ್ದುಂ, ಪುಣ್ಣೊಳ್ ಲೋಹರಸಮೆಂ ಪೊಯ್ದುಂ, ಕಣ್ಣೊಳ್ ಕೆಂಡಮನಿಟ್ಟುಂ, ಮೊಗುಂಬಾಯುಮುಸಿರ್ಮಿಡುಕಗುಡದೆ ಪಿಡಿಮುಂ, ಬಾಚಿಯಿಂ ತಡಂಗಡಿದುಂ, ಕೊಂತದಿಂ ತಗುಳ್ದಱಿದುಂ, ಖಡ್ಗದಿಂ ಪೂಣಿಸಿ ಪೊಯ್ದುಂ, ಬೆಟ್ಟೀಱುಗಳಿಂ ಪರಿತಂದಿಟ್ಟುಂ, ಪರಸಿನೊಳ್ದೆರೆಯಂ ಸೀಳ್ದುಂ, ಗಜಂಗಳಿಂದಿಕ್ಕಿ ಮೆಟ್ಟಿಸಿಯುಂ, ಸೈಱಿಸಲಾಱದೆ, ಪುಲಿವಿಂಡುಗಳಂ ಬಿಟ್ಟುಂ, ಸೀರ್ನಾಯ್ಗಳಿಂ ದಂಡಿಸಿಯುಂ, ಪೆರ್ನೊಣಂಗಳಿಂ ತಗಳ್ದೂರಿಸಿಯುಂ, ಕಾವಲಿಯೊಳಿಕ್ಕಿ ವಾಚಿಸಿಯುಂ, ಇಂತನೇಕವಿಧದಂಡನೆಗಳಿಂ ದಂಡಿಸಿಯುಂ, ಸೈಱಿಸಲಾಱದೆ] ಅರಿಸಿನದಂತೆ ಮೆಯ್ವತ್ತಿ ಪಿಣಿವರ್, ಕಾಜಿಯಂತೆ ಕೊರಲಂ ಪತ್ತಿ ಕೊಯ್ವರ್, ಗರಗಸದಂತೆ ಮೆಯ್ಯಂ ಕೊಱುವರ್, ಪಣಿಗೆಯಂತೆ ತಲೆಯಂ ಪತ್ತಿ ತೆಗೆವರ್, ವೊಲೆಯಂ ತೆರ್ದಿಯಂ ಪತ್ತಿ ನೆತ್ತಜಂ ಕುಡಿವರ್, ಉಗುರಂತೆ ಬೆರಲಂ ಪತ್ತಿ ಕೀಳ್ವರ್, ನಿಱಿಯಂತೆ ತೊಡೆಯಂ ಪತ್ತಿಯುಡಿವರ್, ಪೊಱೆಯಂತೆ ಮೊಣಕಾಲಂ ಪತ್ತಿ ಮುಱಿವರ್, ಸೀರೆಯಂತೆ ನಡುವಂ ಪತ್ತಿ ನೆಲಕ್ಕಿಕ್ಕುವರ್, ಬಾಸೆಯಂತೆ ಬಸಿಱಿಂ ಪತ್ತಿ ಕರುಳನುಗಿವರ್, ಕೂಸಿನಂತೆ ವೊಲೆಯಂ ಪತ್ತಿ ತಿಂಬರ್, ತಿಲಕದಂತೆ ನೊಸಲಂ ಪತ್ತಿ ಕಡಿವರ್, ಓಲೆಯಂತೆ ಕಿವಿಯಂ ಪತ್ತಿ ಪಱಿವರ್, ಕೇಶದಂತೆ ಬೆನ್ನಂ ಪತ್ತಿ ಬಾರನುಜ್ಜುವರ್, ಮೆಲ್ಲರಂತೆ ಬರಿಯಂ ಪತ್ತಿ ಕಳಲೆಗಟ್ಟುವರ್, ಪೇನಂತೆ ತಲೆಯಂ ಪತ್ತಿ ಪಲ್ಕಡಿವರ್, ತೇರ

ಣದಂತೆ ತಳಕ್ಕೆಂ ಪತ್ತಿ ಕತ್ತರಿಸುವರ್, ಕಂಕಣದಂತೆ ಮುಂಗೈಯಂ ಪತ್ತಿ ಕೊಱುವರ್, ಕಾಡಿಗೆಯಂತೆ ಕಣ್ಣಂ ಪತ್ತಿ ಬೆರಲೊಳಿಱುವರ್, ಕಂಪಿನಂತೆ ಮೊಗಂ ಪತ್ತಿ ಕೊಯ್ವರ್, ತಂಬುಲದಂತೆ ಪಲ್ಲಂ ಪತ್ತಿ ತಿವಿವರ್, ಸವಿಯಂತೆ ನಾಲಗೆಯಂ ಪತ್ತಿ ಮೆಲ್ವರ್, ಕೆರ್ಪಿನಂತೆ ಕಾಲಂ ಪತ್ತಿ ಕಡಿವರ್ ಅಂದುಗೆಯಂತೆ ಮೇಗಾಲಂ ಪತ್ತಿ ಸೊಪ್ಪುಗುಟ್ಟುವರ್, ಕುಪ್ಪಸದಂತೆ ಬೆನ್ನಂ ಪತ್ತಿ ಕೆತ್ತುವರ್, ಸಿಪ್ಪಿಗನಂತೆ ಪೊಲಿವರ್, ಕಮ್ಮಾಱನಂತೆ ಕಾಸಿ ಬಡಿವರ್, ಮೇದನಂತೆ ಸೀಳ್ವರ್, ಬಡಗಿಯಂತೆ ಕೆತ್ತುವರ್, ಅಗಸನಂತೆ ಬೀಸಿ ಪೊಯ್ವರ್, ಒಕ್ಕಲಿಗನಂತೆ ಮೆಟ್ಟಿ ಪರಗುವರ್, ಅಂಕದಂತೆ ಕುತ್ತುವರ್, ಮಲ್ಲರಂತೆ ಪೋಱುವರ್, ಲೇಖಕನಂತೆ ಕೀಸುವರ್, ಮಾದಿಗನಂತೆ ಬಾರೆತ್ತುವರ್, ನಾಯಂತೆ ಕಚ್ಚಿ ತೆಗೆವರ್, ಗೂಳಿಯಂತೆ ತಗುಳ್ದಿಱುವರ್, ಗಜದಂತಿಕ್ಕಿ ಮೆಟ್ಟುವರ್, ರಕ್ಕಸರಂತಡಸಿ ನುಂಗುವರ್, ಕಾಳಗದಂತೆ ತಳ್ತಿಱುವರ್, ಬಿರುದಂಕದಂತೆ ಪೋಗದೆ ಕಾದುವರ್, ಜಿಗುಳಿಯಂತೆ ನೆತ್ತರಂ ಕುಡಿವರ್, ಮಾಂಸಾಹಾರಿಯಂತಡಗಂ ತಿಂಬರ್, ನಱುಯಂತೆ ಕರುಳಂ ತೆಗೆವರ್, ತಗುಣಿಯಂತೆ ಮೆಯ್ಯಂ ತಿಂಬರ್, ಪುಲಿಯಂತೆ ಗಂಟಲಂ ತಿಂಬರ್, ಜಂತಿನಂತೆ ಬಸಿಱಂ ತಿಂಬರ್, ಪಂದಿಯಂತೆತ್ತುವರ್, ಗುಲ್ಮದಂತೊತ್ತುವರ್, ಪೋಱ್ಕಾಱಿನಂತೆ ಬಿಗಿದುಕಟ್ಟುವರ್ ಗುಡಿಯನೆತ್ತುವರಂತೆ ಗೂಂಟಮಂ ಪೆಟ್ಟುವರ್, ಪರ್ದಿನಂತೆ ಕೀಱ್ವರ್, ತೇಱುನಂತೆ ನೋಯಿಸುವರ್, ಕೋಱುಯಂತೆ ಕೆದಕುವರ್, ಸಿಡಿಲಂತೆ ಪೊಡೆವರಂತುಮಲ್ಲದೆ, ೭೩

ಅಲ್ಲಲ್ಲಿಗೆ ತೇಱೋಳಿಗ
ಳಲ್ಲಲ್ಲಿಗೆ ಕೂರಿತಪ್ಪ ಕಂಟಕತತಿ ಮೆ ।
ತ್ತಲ್ಲಲ್ಲಿಗೆ ತೀವ್ರಾಯುಧ
ಮಲ್ಲಲ್ಲಿಗೆ ಪರಿಯುತಿರ್ಪಱುಂಪೆಯ ತೊಂಡಲ್ ॥ ೭೪

ಅಲ್ಲಲ್ಲಿಗೆ ಕಾಱ್ಗುಚ್ಚುಗ
ಳಲ್ಲಲ್ಲಿಗೆ ಪತ್ತಿ ಕಡಿವ ತುಂಬಿಗಳುಂ ಮೆ ।

ತ್ತಲ್ಲಲ್ಲಿಗೆ ಮುಳ್ವಟ್ಟಿಗ
ಳಲ್ಲಲ್ಲಿಗೆ ಸುತ್ತಿ ಮುತ್ತಿ ತಿಂಬ ಕಡಂಪುಳಿ

ಅಲ್ಲಲ್ಲಿಗೆ ಸುಣ್ಣದ ಪೊನ
ಲಲ್ಲಲ್ಲಿಗೆ ರಾಸಿಗೆಯ್ವ ಕೆಂಡಂಗಳ್ಕ ।
ತ್ತಲ್ಲಲ್ಲಿಗೆ ತೀವ್ರಾಯುಧ
ಮಲ್ಲಲ್ಲಿಗೆ ಪರಿವ ಲೋಹ ನರಕದೊಳಲ್ಲಂ ॥ ೨೬

ಮತ್ತಂ ಪಾತಕಜೀವಂಗಳ್ ಎಳ್ಳಿನಂತೆ ಗಾಣಕ್ಕೆವಂದು, ಕಳ್ಳರಂತೆ ಶೂಲಕ್ಕೆವಂದು, ಪುಳ್ಳಯುಂತೆ ಕಿಚ್ಚಿಂಗೆವಂದು, ಕಬ್ಬೊನ್ನದಂತೆ ಇಕ್ಕುಳಿಗೆವಂದು, ಕಬ್ಬಿನಂತೆ ಕಡಿಹಕ್ಕೆವಂದು, ದ್ರೋಹಿಯಂತೆ ದಂಡನೆಗೆವಂದು, ಲೋಭಿಯಂತೆ ನಿಗ್ರಹಕ್ಕೆವಂದು, ಕುಸುಱಿಯಂತೆ ಕಟ್ಟಿಂಗೆವಂದು, ಪುಲ್ಲಂತೆ ಸೂಡಿಂಗೆವಂದು, ಕುಂಬಾರನ ಮಣ್ಣಿನಂತೆ ಮಿದಿಹಕ್ಕೆವಂದು, ಧಾನ್ಯದಂತೆ ಹಗೇವಕ್ಕೆವಂದು, ನಾರಂತೆ ಹೊಸೆಹಕ್ಕೆವಂದು, ಮೊಲನಂತೆ ಬಡಿಹಕ್ಕೆವಂದು, ಮುಡಿಯುಂತೆ ಮುರಿಹಕ್ಕೆವಂದು, ಎಲೆಯುಂತರಿಹಕ್ಕೆವಂದು, ತಪ್ತಮೋಸದಂತೆ ಕುದಿವೆಣ್ಣೆಗೆವಂದು, ಸತ್ತರ ಮನೆಯುಂತೆ ಅಟಲಿಂಗೆವಂದು, ಪರ್ದಿನಂತೆ ಕಂಡಕ್ಕೆವಂದು, ಮಡಿಸೀರೆಯಂತೆ ಗಟ್ಟಣೆಗೆವಂದು, ಮೈಲಗೆಯುಂತೊಗೆಹಕ್ಕೆವಂದು, ಹಕ್ಕಲಂತೆ ಬಡಿಹಕ್ಕೆವಂದು, ಮುಯ್ಯಿಲ್ಲದೊಕ್ಕಲಂತೆ ಬಡುಗುಲಿಗೆವಂದು, ಬೇಡನಂ ತೀಡಿಂಗೆವಂದು, [ಬಿಲ್ಲಾಳಿನಂತೆ ಬಟ್ಟೇಱಿಂಗೆವಂದು] ತಿಱನೆ ತಿರಿವುವಿಂತು ೨೭

[ಕೆಲಕೆಲವು ನಾಯ್ಗಳುರ್ಕಿಂ
ತೊಲಗದೆ ಪಾಯ್ದಿದು ತೆಗೆದು ತಿನೆಯುಂ ಮತ್ತಂ ।
ಕೆಲಕೆಲವು ನಾಯ್ಗಳೊರ್ಮೆಯೆ
ಮಲೆದಿಲ್ಲನೆ ಪೊಯ್ದು ಕಚ್ಚಿ ತಿನೆ ಪೆರ್ಗರುಳಂ ॥ ೨೮

ಪಿರಿದಪ್ಪೆರೆಯಂ ಕೊರಲೊಳ್
ಭರದಿಂದಂ ಕಟ್ಟಿ ಮೆಟ್ಟಿ ಕೊಳ್ಗಸರೊಳ್ ನಿ ।

ಪ್ಪುರದಿಕ್ಕಿ ವೆಟ್ಟ ಪುಱುಗಳ್
ಕರಮೆಲ್ಲಿಡೆ ಪತ್ತಿ ಬಗಿದು ತಿನೆ ಮೆಯ್ಯ್ಯಡಗಂ ॥ ೭೯

ಪೊಱಮೆಟ್ಟು ಸುಱಿಯೆ ಪಕ್ಕಿಗ
ಳಱಿಯಟ್ಟ ಮಿಗೆ ತಗುಳ್ದು ವೆಜ್ರತುಂಡದಿನೋರಂ ।
ತಿಱಿಯೆ ಬಿಡದಲ್ಲಿಗಲ್ಲಿಗೆ
ಮೆಱುಗುತ್ತುಂ ಬೆಂದು ನೊಂದು ಪೆಳಱುತ್ತಿರ್ದರ್ ॥] ೮೦

ಮೆತ್ತಂಗ್ರಹದಂತೆ ಪುಯ್ಯಲಿಡುವರ್, ತುಂಬಿಯಂತಾಱುತಿಗೊಳ್ವರ್, ಕೊಳ್ಳಟ್ಟರಂತೊಳಱುವರ್, ನ್ಯಾಯಮಿಲ್ಲದನೂರಂತೆ ಮೊಱೆಯಿಡುವರ್, ತುಳುನಾಡ ಸತ್ತವನೆಯಂತೆ ಪಱಿಯಿಸುವರ್, ಕುತ್ತಂ ಬಡೆದರಂತೆ ಬೀೞ್ವರ್, ಬಡಗೊಂದೆಯಂತೆ ದಡದಡಿಸುವರ್, ಪಾವಿನಂತೆ ಪೊರಳ್ವರ್, ನೊಂದ ಕರಡಿಯಂತೆ ಮೆಲ್ವಾಯ್ವರ್, ಪುಣ್ಸುಡಿಸಿಕೊಳ್ವರಂತೆ ಮಿಡುಮಿಡುಮಿಡುಕುವರ್, ಬಡಿವೆತ್ತರಂತೆ ಸುಯ್ವರ್, ಕೆಟ್ಟೊಕ್ಕಲಂತೆ ನಿಲಲಾಱದೆ ನಡುಗುವರ್, [1]ಕಂಪವಾತರೋಗಿಗಳಂತೆ ಕಂಪಿಸುವರ್, ತೊನ್ನರಂತೆ ರಸಿಗೆಸುರಿವರ್, ಪೆೞವರಂತೇಱಲಾಱೆವೆಂಬರ್, ಇಂತು ನರಕದೊಳಾವೆಡೆಯೊಳ್ ನೋಟ್ಪೊಡಂ, ೮೧

ಎಂದವಧಿತೀರ್ಗುಮೆದುತೀ
ರ್ವಂದುವರಂ ಮಾಣದೆಲ್ಲಿಯುಂ ಪಾಪಿಗಳಂ ।
ಕುಂದದೆ ನಾರಕರೀವಿಧ
ದಿಂದಂ ಬಾಧಿಸುತುಮಿರ್ಪರಿರುಳುಂ ಪಗಲುಂ ॥ ೮೨

ತೊಱೆಯೆಂದು ಸಾರೆ ಮಾಯದ
ತೊಱೆಗಳ್ಕಾಯ್ದಿಣ್ಣೆಯಾಗಿ ಪತ್ತಿ ಸುಡಲ್ಕೆ ।

---

1 ಪಾದರಿಗನಂತೆ ಬೆಚ್ಚೆವರ್, ಕಣ್ಣ ಬೀನೆಯುಳ್ಳವರಂತೆ ಕೂಗಿಡುವರ್, ದಾಳಿಖಪೂರಿನಂತೆ ಕಳವಳಿಸುವರ್, ಕಳ್ಳಂ ಪೊಕ್ಕ ಮನೆಯಂತೆ ತಲ್ಲಣಿಸುವರ್, ಕಾಳಿಗದೊಳ್ ಕೆಟ್ಟರಂತ ಕಾಲ್ ನಡುಗುವರ್, ಮುದುಕನಂತೆ ಕೈನಡುಗುವರ್, ಕಂಪವಾತಮುಳ್ಳರಂತ ಮೈನಡುಗುವರ್, ತೊನ್ನರಂತೆ (ಕ)

ಯ್ಯೀಯಿಯದೆ ಕರ್ಬುನದಂತಿರೆ
ನೆಱೆ ಬೆಯ್ಯುತ್ತಿಂತು ಮೆಱುಗುವರ್ ಸಲವುದಿನಂ ॥ ೪೩

ಬನವೆಂದು ಪ್ರೊರ್ದೆ ಮಾಯದ
ವನವೆಂತುಂ ಪ್ರೋಗಲೀಯದಂಬಿನ ಸರಿಯುಂ।
ಘನಮೊಗಿ ಸುರಿಯೆ ದುಃಖದಿ
ನೆನಿತಾನುಂಕಾಲವಿರ್ದರೋವ್ರೋಯೆನುತುಂ ॥ ೪೪

ಮೆರನೆಂದು ಪ್ರೋಗಿ ಸಾರ್ವುದು
ಮುರಿಗಳ ನಾಲಗೆಗಳಂತೆ ಮರದೆಲೆಯಿಲ್ಲಂ।
ಪಿರಿದಪ್ಪ ತೇಱ ರೂಪಿಂ
ದರೆಯಟ್ಟ ಮುಟ್ಟ ಕಡವುವು ಮುಳಿಸಿಂ ॥ ೪೫

ಮತ್ತಂ ಇಲಿಯ ಬೆಕ್ಕಿನ, ಪುಲಿಯ ಪುಲ್ಲಿಯ, ತಳಾಱಿನ ಕಳ್ಳನ, ನವಿಲ ಪಾವಿನ, ಸಿಂಗದಾನೆಯ, ನಾಯ ಮೊಲದ, ಕುದುರೆಯ ಕೋಣನ, (ಮುಳಿಸಿಂ) ನಾಯ್ ನಾಯೊಳ್, ಕೋಣಂ ಕೋಣನೊಳ್ ಕೋಱು ಕೋಱುಯೊಳ್, ಆನೆಯಾನೆಯೊಳ್, ಮೂರ್ಖಂ ಮೂರ್ಖನೊಳ್, ತಗರ್ ತಗರೊಳ್, ಮಲ್ಲರ್ ಮಲ್ಲರೊಳ್, ತಾಗುವೆಂತೆ ಕಿಚ್ಚುಂ ಕಿಡಿಯುಮಾಗಿ [ತಂತಮ್ಮೊಳ್ ತಾಗಿ ದುಃಖಂಬಡುವರೆಂದು ನರಕದೊಳಾದ ಮಹಾದುಃಖಮಂ ಭಾವಿಸಿ], ೪೬

ಆ ದುಃಖದೆಡೆಗೆ ಭಾವಿಪೊ
ಡೀದುಃಖಂ ಪಿರಿದೆ ಕರ್ಮವಶದಿಂದಾಸಿಂ।
ತಾದೆಂ ಕೇಳನಗಿಂ ಜಿನ
ಪಾದವೆ ಶರಣೆಂದು ಕನ್ನೆ ಸಿಕ್ಕಯಿಸುತ್ತುಂ ॥ ೪೭

[ಕರಿ ಬನಮಂ ಮದಾಳಿ ವನಜಾಕರಮಂ ಶಿಶು ತಾಯನೊಲ್ದ ಗಂ
ಡರನಬಲಾಜನಂ ನೆನೆವ ಮಾರ್ಗದಿನಿಂದ್ರನರೇಂದ್ರವಂದ್ಯನಂ
ಪರಮಜಿನೇಂದ್ರನಂ ನೆನೆಯುತುಂ ಜಿನಪೂಜೆಯನಾಗಳುಂ ಸವಿ
ಸ್ತರದೊಳ ಕೇಳಿ ಭಾವಿಸುತೆ ಮಾಡುತ ಜೈನಗುಣಸ್ತವಂಗಳಂ॥] ೪೮

ಅಂತಿರ್ದನ್ನೆಗಂ, ೮೯

ಕರಿಘಟೆಯುಂ ವ್ಯಗ್ರೇಂದ್ರತತಿಯುಂ ಪುಲಿವಿಂಡುಗಳುಂ ಮೃಗಂಗಳುಂ ಶರಭಸಮೂಹಮುಂ ಹರಿವಿರೋಧಿಗಳುಂ ಫಣಿಯುಂ ನಿಲ್ಲಳುಂ ಪುರುಡಿಪ ಕಾಗೆಯುಂ ನಲಿವ ಕೋಗಿಲೆಯುಂ ತೊಱೆದೆಯ್ದೆ ವೈರಮುಂ ನೆರೆದೊಡನಿರ್ದವಂಬುರುಹಲೋಚನೆಯಿರ್ದ ವನಾಂತರಾಳದೊಳ್ ॥೯೦

[ಅಂತು, ಪಗೆಕೆಳೆಯಿಲ್ಲದೆಲಾ ಮೃಗಂಗಳುಂ ಮಿತ್ರತ್ವದೊಳಿರೆ, ವನದೊಳ್ ಶಾಂತಿರಸಮೆಸೆಯೆ, ಕುಮಾರಿಯಿರ್ಪುದುಂ, ಶಂಖಪುರದೊಳೂರ್ವ ವನಚರನುಂ ಬೇಡಿತಿಯುಂ, ೯೧

ಪೊಲಕಾಗಿ ಬರುತುಮೊರ್ವೆಯೆ
ಲಲಿತಾಂಗಿಯನೊರ್ವೆ ಕಂಡು ದೇವತೆ ನಮ್ಮಂ ।
ತೊಲಗಿದೊಡೆ ಪಿಡಿದು ಕೊಲ್ಗಂ
ದೆಲೆ ಮಿಡುಕದೆ ನಿಂದು ಪೊರ್ದಿ ಬಂದಾವರದಿಂ ॥ ೯೨

ತಮ್ಮ ಪೊತ್ತುತಂದಿಪ್ಪೆಯ ಪೂವ್ಗಮುಂ ಬೇಳದ ಪಣ್ಣುಮುಂ ಕನ್ನೆಯ ಮುಂದೆ ಪೊಯ್ದು ಪೊಡೆಮಟ್ಟು ಪೋಗಿ ತಮ್ಮೊಳ್ದನಪ್ಪ ಬೇಡರಸಂಗೆ ದೇವತೆ ಬಂದು ಭೀಮವನದೊಳಿರ್ದಳಲ್ಲಿಗೆ ಪೋಗಿ ನಿಮ್ಮ ಬೇಳ್ಪ ವರಮುಂ ಬೇಡಿಕೊಳ್ಳಮೆಂದು ಬಿನ್ನಪಂಗೆಯ್ವುದುಂ, ೯೩

ಬೇಡರಸಂ ಕೇಳ್ದಾಗಳ
ನೀಡಿಲ್ಲದೆ ತದ್ವನಕ್ಕೆ ಬಂದಾ ಸತಿಯಂ ।
ನೋಡಿಯೆಮೆಯಿಕ್ಕುವುದಱಿಂ
ನಾಡೆಯುಮಿಮಾವನಿತೆ ದೇವಕನ್ನಿಕೆಯಲ್ಲಂ ॥ ೯೪

ಎಂದೇಱೆಯುಮಿೞಿಯೆಯುಂ ನೋಡಿ ತಾನಾಕೆಗಾಸಕ್ತನಾಗಿ ಕನ್ನೆಯನರಮನೆಗೊಡಗೊಂಡು ಪೋಗಿ ತನ್ನ ಮೆಹಿಮೆಯುಂ ಸಿರಿಯುಮುಂ ತೋಱಿ ಮೆಲ್ಲನೆ,][1] ೯೫

---

1 ಅಂತುಪಶಾಂತರಸಮೆಸೆಯೆ ಕನ್ನೆಯಿರ್ಪುದುಂ ಭೀಮನೆಂಬ ಕಿರಾತ ನಾಯಕಂ ಕಂಡು ತನ್ನ ಪುರಕ್ಕೆ ಕೊಂಡುಪೋಗಿ ತನ್ನ ಮಹಿಮೆಯುಂತೋಱಿ(ಗೆ)

ನಿನ್ನಂತೆ ನೋಂತ ಸತಿಯಾ
ರೆನ್ನಂತಪ್ಪ ಪ್ರತಾಪಿಯಂ ಪಡೆದೈ ರೂ।
ಪೊನ್ನತಿಯಿನೆನುತೆ ಮಾಣದೆ
ತನ್ನಲ್ಲಿಗೆ ಕರೆವುದುಂ ತಳೋದರಿ ಮನದೊಳ್ ॥ ೯೬

ಬೆಱಗಾಗಿ ಚಿಂತೆಯಿಂ ಬಾ
ಯ್ಬಱಬಿಱಬಿತ್ತು ತ್ತುವೋವೊ ಕೆಱಂಡೀ ವ್ರತಮಂ ।
ತೊಱೆವುದಱಿಂ ಸಾವುದು ಕರ
ಮುಱುವ್ರದು ಚಿಃ ಕಷ್ಟವೆಂದು ನಿಶ್ಚಲಮತಿಯಿಂ ॥ ೯೭

ಮೋನಂಗೊಂಡು [ಪಂಚನಮೆಸಕ್ಕಾರಮಂ ಜಪಿಸುತ್ತುಮಿಸರ ದಿರ್ಪುದುಂ, ಕಿರಾತರಾಜನೆನಿತಾನುಂ ತೆಱದಿಂದೊಡಂಬಡಿಸಲಾಱದೆ ಮುನಿದು ಕಿಡಿಕಿಡಿಯಾಗಿ ಮೀಸೆಯಂ ಕಡಿದು,][1] ೯೮

ಕೂಸೆಂಬುದು ತಪ್ಪದು ನಿ
ನ್ನಾ ಸೆಯೊಳಾಂ ನಿನಗೆ ಸಕಲರಾಜ್ಯಶ್ರೀಯಂ ।
ಲೇಸಾಗಿ ಮಾಡದಿರ್ದೊಡೆ
ದೇಸಿಗತನದಿಂದೆ ನವೆವುದೊಂದನೆ ಬಗೆವೆ ॥ ೯೯

ಎಂದು ಮಸಗಿ ಬಡಿದೊರ್ವೆಯೆ ನಿನಗೆ ಮುನಿವನಲ್ಲಿಂದಿನಿರುಳಿನೊಳಗೆ ನಿನ್ನ ಮನಮಂ ಸೈತುಮಾಡು, ಮಾಡದೊಱಂಟುತನಮಂ ಮಾಡಿದೆಯಪ್ಪೊಡೆ ನಿನಗೆ ತಕ್ಕ ವಿಧಿಯಂ ನಾಳೆ ಮಾಪ್ಪೆನೆಂದು ಬಲ್ಗಾಪಂ ಪೇೞ್ದು ಪೋದನನ್ನೆಗಮಿತ್ತಲ್ ಕುವರಿ,[2] ೧೦೦

ಪಿಡಿದೀ ವ್ರತಮಂ ನಾಂ ಸಾ
ವೊಡೆ ಸಾವೆಂ ಬಿಡುವೆನಲ್ಲವೆಂದೊಡೆ ಮೂರ್ಖಂ ।

---

1 ಇರ್ದಳಿಪ್ಪುದುಂ (ಗ)

2 ಎಂದು ಪಲವುದಿವಸವೊಡಂಬಡಿಸಲಾಱದೆ ಕಿನಿಸಿ ಮೀಸೆಯಂ ಕಡಿಪು ನಾಳೆ ನಿನ್ನಂ ದೆಸೆವಲಿಗೆಯ್ಯಲ್ಲದೆ ಮಾಣೆನೆಂದುಬಲ್ಗಾಪಂ ಪೇೞ್ದು ಪೋಪ್ಪುದುಂ (ಗ)

ಮಡಿಪದ ಮಾಣಂ ಬಲ್ಪಿಂ
ಪಿಡಿವೆಂ ಜಿನಪದಮನಿದುವೆ ಕಜ್ಜಂ ಪೆಱತೇಂ ॥ ೧೦೧

ಎಂದಾಳೋಚಿಸಿ ಕಳೆಯಬಾರದುಪಸರ್ಗಮಿದು ಪಿಂಗುವಿನಮೊ ಹಾರಶರೀರನಿವೃತ್ತಿಯೆಂದು ಪರಿಚ್ಛೇದಿಸಿಪ್ಪುದುಂ,[1] ಯಕ್ಷಿಗಾಸನಕಂಪ ಮಾಗೆ ಬಂದು ಕನ್ನೆಯ ಮನಮಂ ನೋಡಲೆಂದು ಕಿರಾತರಾಜನ ರೂಪು ಗೊಂಡು, ೧೦೨

[ವನರುಹಮುಖಿಯಲ್ಲಿಗೆ ತೊ
ಟ್ಟನೆ ಪಿರಿದಪ್ಪೊಂದುಲೀಲೆಯಿಂ ಬಂದೊಡನಿ ।
ರ್ದನಿಬರುಮೊಡನೆಸೆದಿರೆ ತ
ನ್ನನೆ ಪೊಗಳುತ್ತಿರ್ಪನಂ ಕಿರಾತಂ ನುಡಿದಂ ॥] ೧೦೩

ರತಿ ರಂಭೆ ತಿಲೋತ್ತಮೆ ಭಾ
ರತಿ ಯೆಂಬಿವರ ದೊರೆಗೆ ಮಿಗಿಲೆನಿಸಿದ ಪು ।
ತ್ಪತಿಯರ್ಪಲರಿರ್ದಪರು
ನ್ನತಿಯಿಂದಂ ನಂಬೆಯಪ್ಪೊಡಂ ನೀನಿವರಂ ॥ ೧೦೪

[2] [ನೋಡೆಂದು ತನ್ನ ಕೃತಕದಿಂ ಪಡೆದೊಳ್ಪಂಡಿರಂ ತೋಱು ಮತ್ತಂ] ೧೦೫

ರೂಪಿಲ್ಲೆನಗಿನ್ನೆಂಬೊಡೆ
ರೂಪಿಂ ಪ್ರತ್ಯಕ್ಷಕಾಮದೇವನೆ ನಾನಿಂ ।
ಚಾಪಳನಯನೆ ಮನೋಹರ
ರೂಪೆ ಮನೋಮುದದಿನೆನ್ನ ರೂಪಂ ನೋಡಾ ॥ ೧೦೬

---

[1] ಕೈ ಸಿಟ್ಟುಕೊಂಡಿರ್ಪುದುಂ (ಗ)

[2] ಆರೈದು ನೋಱಿಪ್ಪೆಯಪ್ಪೊಡೆ ವಾರಿಜಮುಖಿ ಖಚರಪತಿಪು ಸುರರಾಜನ ಭಂ। ಡಾರಕ್ಕವೆನ್ನ ಭಂಡಾರಕ್ಕಂ ಪಿರಿದಿಂತು ನಂಬಿಯಪ್ಪೊಡೆ ನೋಡಾ ॥ (ಗ)

[ಎಂದು ತನ್ನ ವಿಗುರ್ವಿಸಿದ ಕಾಮರೂಪಂ ತೋಱಿ, ಸಿರಿ ಬರೆ ಮೊಣಕಾಲನೊಡ್ಡಿದರೆಂಬಂತೆಲೆ ಮರುಳ್ ಭಾವಿಪೊಡೆನ್ನೊಳಾವೆ][1] ಕೊಱಿತೆಯಾಗಿರ್ದುದಂತಿಂತೆನ್ನ ದೆನಗೊಡಂಬಡುವುದೆಂಬುದುಮನಂತಮತಿ ತನ್ನೊಳ್, ೧೦೭

ಜಿನಪಾದಭಕ್ತಿಯಿಂ ನೆ
ಟ್ಟನೆ ಮೋಕ್ಷಶ್ರೀಲತಾಂಗಿ ದೊರೆಕೊಳ್ಗನೆ ಮೆ ।
ತ್ತಿನ ಸಿರಿಯುಂ ಗಿರಿಯುಂ ನೆ
ಟ್ಟನೆ ಸುಖಮುಂ ಗಿಱಮುಮೆಪ್ಪುದಾವುದು ಗಹನಂ ॥ ೧೦೮

ಎಂದು ಶುಭಭಾವನೆಯಿಂದವಱ ಮೇಲೆಳ್ಳನಿತುಮಪ್ಪ ಮನಮಿಲ್ಲದೆ ಪಂಚಪದಂಗಳಂ ನೆನೆಯುತ್ತುಂ ಮಱುಮೊತು ಗುಡದಿರ್ದುದುಂ ಯಕ್ಷಿ[2] ಮೆಱಕ್ಕೆ ತನ್ನ ದಿವ್ಯೇಸ್ವರೂಪಮುಂ ತೋಱಿ, ೧೦೯

ಜಿನನಾಥನಿಷ್ಟದೈವಂ
ನಿನಗಂ ಮತ್ತೆನಗಮೆಂಬ ಕತುವೋಹದಿನೀ ।
ವನಚರನಿಂದುಪಸರ್ಗಂ
ನಿನಗಾವುದನಱಿದು ಪಿಂಗಿಸಲ್ವೀಡಿ ಕರಂ[3] ॥ ೧೧೦

---

1 ತುರಗದಳಿಂಗಳ ನಾಯ್ಗಳ ನೆರವಿಯನಾಭರಣನಿಕರವುಂ ಕರಿಘಟೆಯುಂ ।
ವರವಸ್ತ್ರನಿಚಯವುಂ ಪಂಕರುಹಾನನೆ ನೋಡು ನಿನ್ನ ಕಣ್ತಣಿವಿನೆಗಂ ॥
ಗೋವಿಂಡುಗಳಂ ಮೊಲೆತೊರೆದಾವುಗಳಂ ಪೇಱಿಕ್ಕೆಗೇಳ್ವ ತೊಟ್ಟಿರ್ಕಳ ಸ ।
ದ್ಭಾವನಮನೆವೆಯ್ಮಯ ಪಿಂಡಂ ಭಾವಿಸು ನೋಡಂಬುಜಾಕ್ಷಿ ಚಿತ್ತೋತ್ಸವದಿಂ ॥
ಸಿರಿಯೆನ್ನೊಳಾವ ಕೊಱಿತೆ (ಗ)

2 ಮನದೊಳೆಳ್ಳನಿತುಮಪ್ಪೊಡಮವಱ ಮೇಲೆ ಕಾಂಕ್ಷೆಯಿಲ್ಲೆಂದು ಮುಸಿರದಿರೆ ಯಕ್ಷಿ (ಗ)

3 ಅಱಿದು ಮಾಣಿಸಲ್ಕಾಂ ಬಂದೆಂ, ಅಂಜದಿರೆಂದು ಸಂತೈಸಿ ಮಱೆದ ಪಟ್ಟದ ಭೀಮನಲ್ಲಿಗೆ ಪೋಗಿ ರೌದ್ರರೂಪಂ ತೋಱಿ (ಗ)

ಬೇಗಂ ಬಂದೆನಿದಕ್ಕಂಜವೇಡೆಂದು ಸಂತೈಸಿ ಪೋಗಿ ಮಱೆದೊಱಗಿದ ಕಿರಾತರಾಜನ ತಲೆಯಂ ಪೊಯ್ದು ವನನಂಜಿಸಲ್ವೇಡಿ ರೌದ್ರರೂಪಂ ವಿಗುರ್ವಿಸಿ ತೋಱಿ, ೧೧೧

ಆನಪ್ಪೊಡೆ ದೇವತೆಯೆಂ
ನೀನಱಿಯದೆ ಕೊರ್ವಿ ಚಪಳತನದಿಂದೆನ್ನಂ ।
ಮಾನಿಸೆಯೆ ಗೆತ್ತು ನುಡಿದೈ
ನಾನಾವಿಧದಿಂದಮಾದೊಡೇನಾಯ್ತಿನ್ನುಂ ॥ ೧೧೨

ನಿನ್ನ ಪೊಲ್ಲವೆಯಂ ಕೈಕೊಳ್ಳನೆನ್ನಂ ನಾಳೆ ಪೂಜಿಸಿ ಪೊಡೆಮಟ್ಟು ನೀನುಂ ನಿನ್ನ ಪರಿಜನಮುಂ ಕಾಂತಾರಮಂ ಪೊಱಮಡಿಸಿ ಬೇಗಮಯೋಧ್ಯಾಪುರದ ಬಟ್ಟೆಯುಂ ತೋಱಿ ಮಗುೞ್ವುದಲ್ಲದಂದು ನಿನಗೆ ನೀನೆಯಱಿವೆಯೆಂದು ದೇವಿಯದೃಶ್ಯಮಪ್ಪುದುಂ ಬೆಱ್ಗಿಯಾಗಳಚ್ಚರ್ತು,[1] ೧೧೩

[ಭಯದಿಂ ಕನಸಲ್ಲಿದು ನಿ
ಶ್ಚಯಮೆಂದಕ್ಕಳಿಕ್ಕ ನೋಡಿ ಮನೆಯೊಳ್ತಾಂ ಶಂ ।
ಕೆಯಿನಾಗಳ್ಪರಿಜನಮಂ
ನಯದಿಂ ಬರವೇೞ್ದು ಪೇೞ್ದು ಬೆಳಗಾದಾಗಳ್ ॥] ೧೧೪

ಬಂದು ಕಿರಾತರಾಜನಾ ಕನ್ನೆಯ ಪಾದಂಗಳಂ ಪಲತೆಱದಿಂದ ಱ್ಚಿಸಿ ಬಿಜಯಂಗೆಯ್ವುದೆಂದು ಕೈಮುಗಿದು ಪುಲ್ವಟ್ಟೆಯಿಂ ಪೇರಡವಿಯಿಂ ಪೊಱಮಡಿಸಿ ಕಿೞ್ದುಂ ದೂರಂ ಪೋಗಿ ಇದೆ ತೋಪ್ರ್ದಯೋಧ್ಯೆಯ ಬಟ್ಟೆಯೆಂದು ತೋಱಿ ಮಗುೞ್ದು ಪೋದನಿತ್ತಲನಂತಮತಿ ಬಂದೊಂದು ಬಸದಿಯೊಳ್ ದೇವರಂ ವಂದಿಸುತ್ತಿರ್ಪನ್ನೆಗಮಯೋಧ್ಯಾಪುರದಿಂ ಪುಷ್ಪಕನೆಂಬೊರ್ವಂ, ೧೧೫

ವೆರವೈಶ್ಯನಂದನಂ ವಿ
ಸ್ತರದಿಂದಂ ಪರದುವೋಪ ಸಮಕಟ್ಟಂ ಮೊ ।

[1] ನಿನ್ನಂ ಸೀಳ್ದು ಪರಪುವನೆನೆ, ಭಯಂಗೊಂಡೆಪ್ಪ (ಗ)

ಣ್ಡಿರದೆ ಪರಿದಪ್ಪ ತಂತ್ರಂ
ಬೆರಸು ಮನೋಮುದದಿನಲ್ಲಿ ನಿಂದಾದರದಿಂ ॥ ೧೧೬

[1] ದೇವರಂ ಬಂದಿಸುತಿರ್ದನಂತಮತಿಯುಂ ಕಂಡು ಧರ್ಮವಾತ್ಸ್ಯ ಲ್ಯದಿಂ ಬೀಡಿಂಗೊಡಗೊಂಡುಪೋಗಿಯುಚಿತಪ್ರತಿಪತ್ತಿಯುಂ ಮಾಡಿ ತದನಂತರಂ ನಿಮ್ಮ ದೇಶಮಾವುದು ಊರಾವುದು ತಂದೆಯಾರೆಂದು ಬೆಸ ಗೊಳ್ವುದುಂ, ೧೧೭

ಕ್ಷಮೆಯೆ ಕೆಳೆಯಂ ಶೀಲಂ ಪುತ್ರಂ ಸದಾಚರಿತಂ ಧನಂ
ವಿಮಳದಯೆ ತಾಯ್ತನ್ಯಂ ಪಜ್ಜಂ ಗುಣಂಗಳ ಸೋದರರ್
ಕ್ರಮದೆ ತನಯಳ್ ತತ್ತ್ವಂ ಸಮ್ಯಕ್ತ್ವವೊಪ್ಪುವ ತಂದೆ ಸಂ
ಯಮಮೆಮೆ ಭವನಂ ದೇಶಂ ಮೋಕ್ಷಂ ಜಿನೋಕ್ತಿಯೆ ಪಟ್ಟಣಂ ॥ ೧೧೮

ಎಂಬೀ ನುಡಿಯಿಂದೀಕನ್ನೆ ದರ್ಶನವಿಶುದ್ಧಿಯೆಂದು ಮೆಚ್ಚ ಮೆನೆಗೊಡಗೊಂಡು ಬಂದು ತನ್ನ ಭಾರ್ಯೆ ಗುಣವತಿಗೀಬಾಲೆಯುಂ ನಿನ್ನ ಮಗಳಂದು ಭಾವಿಸಿಯಾಂ ಮಗುಬ್ದು ಬರ್ಪಿನಂ ಪ್ರಯತ್ನದಿಂ ನಡೆಪುವುದೆಂದೊಪ್ಪೈಸಿ ಪುಷ್ಪಕಂ ಮೆಗುಬ್ದು ಪೋಪುದುಂ ಗುಣವತಿ ಕನ್ನೆಯುಂ ನೋಡಿ, ೧೧೯

ಸುರವನಿತೆಯಾನುಮೆಂಬರ
ಚರಿಯಾನುಂ ಕೃತಕದಿಂದವಿಾ ರೂಪಿಂ ಮೆ ।
ಯ್ಗರೆದಿರ್ದಳಲ್ಲದಿಂದಿನ
ನರವನಿತೆಪುರಿನ್ನ ರೊಳರೆ ರೂಪಿಂ ಚೆಲ್ವಿಂ ॥ ೧೨೦

---

[1] ದೇವರಂ ಕಾಣಲೆಂದು ಬಂದು ಜಿನಾಲಯಮುಂ ತ್ರಿಃಪ್ರದಕ್ಷಿಣಮುಂ ಗೆಯ್ದು ನಿಷಿದ್ಧೆಯಂದೊಳಗೆಂ ಪೊಕ್ಕು ನಾನಾವಿಧದರ್ಚನೆಯಿಂ ಪರಮೇಶ್ವರನನರ್ಚಿಸಿ ಕತ ಸಹಸ್ರಂಗಳಿಂ ಪರಸಿ ಸ್ತುತಿಯಿಸಿ ಬಳಿಕಂ,

ಜಲಿಯಿಸದಾಸನಮುಂ ಸಂಚಲಿಸದೆ ಪೆಱತೊಂದುಚಿತ್ತಮಿಲ್ಲದೆ ಕರಮು ।
ಮ್ಮಲಿಸದೆ ಜಿನಪದಪದ್ಮಂಗಳನರ್ತಿಯೊಳೊಲ್ದುನೋಡುತುಂ ಸುಸ್ವರದಿಂ ॥

ದೇವರಂ ಬಂದಿಸುತ್ತಿರ್ದ (ಕ).

[ಎಂದು, ಅಟಿಗಣ್ಣುವರಾದಿತ್ಯನಂ ನೋಟ್ಪಂತೆ ಕನ್ನೆಯು ರೂಪ ನಗಿದು ನೋಡಿ ಮನದೊಳಂಜಿ,] ೧೦೧

ಎನಗಪ್ಪೊಡೆ ಮುನ್ನಿನ ಜ
ವ್ವನಮುಂ ಲಾವಣ್ಯಮುಂ ವಿಳಾಸಮುಮಿಲ್ಲೀ।
ವನಿತೆಯಿರಲೋವೊ ಪೆರ್ಗಣ
ಮನಿಕ್ಕಿ ಮನೆವೊಡುವೆಂದವುಕ್ಕುಂ ಕಡೆಯೊಳ್ ॥ ೧೦೨

[ಎಂದು ತನ್ನ ಪುಟುಕುಮನದಿಂ] ದಿರಿಸಿಕೊಳಲಣ್ಮದೆ ವ್ಯಾಳಯೆಂಬ ಕುಂಟಣಿಗೆ ಮಾಡುವುದುಮಾಕೆ [ಸಹಸ್ರಸ್ತೊನ್ನಂ ಕೊಟ್ಟು ಮನೆಗೊಡಗೊಂಡು ಪೋಪುದುಂ, ಕುಮಾರಿ ತನ್ನೊಳ್, ೧೦೩

ಖಳಕರ್ಮೋದಯದಿಂದಂ
ಗಳಯಿಸುವೀ ದುಃಖಮೆನ್ನನೆನಿತೊಂದಿದೊಡಂ।
ಚಳಮಾಗೆನೆನ್ನ ಪಿಡಿದು
ಜ್ಜ್ವಳಿಸುವ್ರತಕೋವೊ ಭಂಗಮಂ ಮಾಡುವೆನೇ ॥ ೧೦೪

ಎನುತ್ತುಂ ವ್ರತದೊಳ್ ದೃಢೆಯಾಗಿರ್ಪುದುಂ, ವ್ಯಾಳ ಪತ್ತೆಂಟು ದಿವಸಂ ಪೋದಿಂಬಟಿಯಂ ಮುಲ್ಲನೆ ಕನ್ನೆಗಿಂತೆಂದಳ್ :— ೧೦೫

ಮರುಳಂತೆ ಮರುಳ ತಲೆಯಂ
ಪರಪಿರದೆ ಮನೋನುರಾಗದಿಂ ಮುಡಿ ಮುಡಿಯುಂ।
ಪರವಶಮಾದರ ತೆಱದಿಂ
ದಿರದೆ ಸರೋಜಾಕ್ಷಿ ನಲ್ಮೆಯಿಂ ನುಡಿ ಪೆಱರೊಳ್ ॥ ೧೦೬

ಬಲ್ಲದಿರ್ದೊಡವೊಲ್ವರಂತಿರೆ ನೋಟ್ಪುದನ್ಯರ ಚಿತ್ತಮಂ
ಮೆಲ್ಲಮೆಲ್ಲನೆ ನೋಟದಿಂ ನಗೆಯಿಂದಮಿರ್ಕುಳಿಗೊಳ್ವುದಂ
ತಲ್ಲಿಗಲ್ಲಿಗೆ ತರ್ಪುದಂ ನೆಱೆ ಮಾಡಿ ಮೆಲ್ವಚನಂಗಳಂ
ಚಲ್ಲವಾಡುವುದಾರೊಳಾದೊಡವೊಲ್ವಳೀ ವಧುವೆಂಬಿನಂ ॥ ೧೦೭

ತರಳಲೋಚನೆ ಮುಂಗುಚಂಗಳೂಳಾದ ಚೆಲ್ವುಗಳಂ ಮುಖಾಂ
ಬುರುಹದೊಂದು ವಿಲಾಸಮಂ ನಳಿತೋಳ ಭಂಗಿಗಳಂ ಪದಾಂ
ಬುರುಹಪಲ್ಲವವೆಂ ಕುರುಳ್ಗಳೂಳಾದದೊಂದುಬೆಡಂಗನೊ
ಪ್ಪರೆ ವಿಟರ್ಗನುರಾಗಮಾಗೆ ಸರೋರುಹಾನನೆ ತೋಱು ನೀಂ ॥ ೧೮೪

ಕುರುಳ ಪಂತಿಗಳಂ ಮನಂಬಿಡೆ ತಿರ್ದು ಚಂದನಪಂಕಮಂ
ಸರಸಿಜಾನನೆ ಪೂಸು ವೆಚ್ಚು ವ ಪೊನ್ನ ಮುತ್ತಿನನೇಕವಾ
ಭರಣಮಂ ತುಡು ದಿವ್ಯವಸ್ತ್ರಮನರ್ತಿಯಿಂದುಡು ರಾಗದಿಂ
ಸುರಗಿಯುಂ ಮುಡಿ ರೂಪನೇತಕೆ ಕುಂದಿಪೌ ಮರುಳಂದದಿಂ ॥ ೧೮೫

ರೂಹಿಲ್ಲದೊಡಂ ಕೆಲಬರ
ಸಹಾಯದಿಂ ಬಱ್ದೆ ತೊನೆದು ಕೆವ್ಮನೆ ವಿಟಸಂ ।
ದೋಹವನೆಸಲಿಸುವರೆಂದೊಡೆ
ರೂಹಂ ಪಡೆದೇಕೆ ಮರುಳ ನೀಂ ವೃಥೆಗಳವ್ವೆ ॥ ೧೫೦

ಕರೆವುದು ಕೆಲಕೆಲಬರ ನೆಱೆ
ನೆರೆವುದು ಭಾವಿಪ್ಪೊಡೊಂದೆ ನರರೊಳ್ ಭಾಗ್ಯಂ ।
ಮರುಳ್ ಸುರಸೂಳ ಧರೆಯೊಳ್
ಪರರ್ಗುಂಟೆ ಮನಕ್ಕೆವಂದ ಭೋಗಮೆದಾರ್ಗಂ ॥ ೧೫೧

ಪೊಸದುಡುಗೆ ನಿಚ್ಚ ನಿಚ್ಚಂ
ಪೊಸಗಂಡರ್ ಚೆಲ್ವರಪ್ಪ ಪೊಸವಸ್ತ್ರಂ ಭಾ ।
ವಿಸುವೆಂದು ಮೆಯ್ಯುಖಂ ರಂ
ಜಿಸೆ ಬೆಲೆವೆಣ್ಗಕ್ಕುಮುಱದ ಸತಿಯುರ್ಗುಂಟೇ ॥ ೧೫೨

ಅದುಕಾರಣದಿಂ ಮಿಾವುದುಣ್ಬುದುಡುವುದು ಮೋನದಿಂದಿರವೇ
ಡೆಂದು ಬುದ್ಧಿವೇಱೆ ಕನ್ನೆ ತನ್ನೊಳ್ ನಕ್ಕು, ೧೫೩

ಧರಣೀಚಕ್ರಮುಮೆಂ ವಿಯತ್ತಳಮುಮೆಂ ಗಂಟಿಕ್ಕುವರ್ಮಿಂಚನ
ಚ್ಚರಿಯಪ್ಪಂತಿರದೊಂದುವೊಡಿ ಸವೆವರ್ ಕಲ್ಲಲ್ಲಿ ನಾರೆತ್ತುವರ್

ತ್ವರಿತಂ ಬಿನ್ನಣದಿಂ ಬಿಸಿಲ್ಗುದುರೆಯುಂ ತಂದೇಱುವರ್ ಮೇರುವಂ
ಭರದಿಂದಂ ಪಿಡಿದೆತ್ತುವರ್ ಮುಳಲೊಳಂ ನೀರ್ಮೊಡುವರ್ ಜೋಡೆಯರ್ ॥ ೧೩೪

ಕುಂಟಣಿಯೆಂಬಳ್ ಸಾಮಾನ್ಯೆಯಲ್ಲದಱಿಂದಿವಳ್ಗನ್ನೀನೆಂದೊಡಮೆನಗೆ ವೋನದಿಂದಿರ್ಪುದೆ ಬುದ್ಧಿಯೆಂದುಸಿರದಿರೆ, ಕೆಲವುದಿನಮೊಗೆಯುಂ ಬಾಯುಂ ಬಡಿದೊಡಂಬಡಿಸಲಾಱದೆ, ೧೩೫

ಹರಿಣಾಕ್ಷಿ ನುಡಿಯಳಂತುಂ
ಮರುಳಾಗದೆ ಬೇಗವೊಯ್ದು ಕುಡುವೆಂ ಭೂಪಂ ।
ಗುರುವುದದಿನರ್ಥಲಾಭಂ
ಪಿರಿದಕ್ಕುಂ ಭೂಮಿಪಾಲನುಂ ಕರವೊಸೆಗುಂ ॥ ೧೩೬

ಎಂದಾ ಪುರಮನಾಳ್ವ ಸಿಂಹರಥನೆಂಬರಸನಲ್ಲಿಗೊಯ್ದು ಸ್ತ್ರೀರತ್ನಮಂ ದೇವಗೆ ಪಾಗುಡಂತಂದೆನೆಂದೊಪ್ಪಿಸುವುದುಮರಸಂ ವ್ಯಾಳಿಗೆ ಸಾಲ್ವನಿತು ಪೊನ್ನಂ ಕೊಟ್ಟು ಕನ್ನೆಯ ರೂಪಂ ಭಾವಿಸಿನೋಱಿಪ್ಪುದುಂ] [1] ೧೩೭

ಶತದಳಮುಖಿಯುಂ ಮೆಱೆಗೊಂ
ಡತನು ಕರಂ ಮುಳಿದು ಪೂವಿನಂಬುಗಳಿಂ ಸಂ ।
ತತಮೊರ್ದು ಪ್ರೋಗದಿಸುವುದು
ಮತಿಗೆಟ್ಟುಳ್ಳಿಕ್ಕಿ ಸೆಡೆದು ನೊಂದು ಮಹೀಶಂ ॥ [2] ೧೩೮

---

1 ಆಕೆ ಕೊಂಡು ತನ್ನ ಮಾತಂ ಕೇಳ್ದೊತ್ತೆಗೊಳಲೊಲ್ಲದೆ ವೋನಂಗೊಂಡಿರೆ ಬೀಸತತ್ತಾ ಪುರವನಾಳ್ವ ಸಿಂಹರಥನೆಂಬರಸಂಗೆ ಕುಡುವುದುಮರಸಂ ನೋಡಿ (ಗೆ)

[ಮಿಡುಕದೆ ಮೆಯ್ಯಿಕ್ಕದೆ ವನಿತಾರತ್ನಮಂ ವಜ್ರಲೇಪದೊಳ್ಪತ್ತಿದಂತೆ ನಟ್ಟು ದಿಟ್ಟಯುಂ ತೆಗೆಯಲಾಱದೆ ನೆಱೆಡಿನೋಡ ತನ್ನೊಳಿಂತೆಂದು ಭಾವಿಸಿದಂ :—

ಇವಳ ಪದಪಲ್ಲವಂಗಳನವಯವದಿಂ ಪೋಲ್ತಿರಂದಕೋಕೆಗೆ ಬೆದಿ ಕಾ।
ಪವನೀಯೆ ಕೇಳ ಫಲವಾಗವು ಭಯದಿಂ ಬೆಗಡುಗೊಂಡಕೋಕೆಗಳೆನ್ನುಂ ॥ ೧೩೯

ಸೊಗಯಿಸುವೀ ಸತಿಯುಂಗುಟದುಗುರ್ಗಂಗಜಸಿತ್ತನಂಗಕೀರ್ಣದ ಚೆಲ್ವಂ ।
ಬಗೆಯದಿನಿಸಿಂದೆ ಮುಳಿಸಿಂ ಪಗೆಯಂ ಕಂಡಂತೆ ಕಾಯ್ವನಿನ್ನುಂ ಸೂರ್ಯಂ ॥ ೧೪೦

ಈ ವನಿತೆಯ ಮೇಗಾಲ ಜನಾವೆಯು ಜೆಲ್ವುಗಳನೀಯೆ ಭಯದಿಂ ವನವಾ ।
ತಾವಂಜೆ ಪೊಳ್ತುದನೆ ಮುಂ ಕಾಲಿಂ ಪೊಱಿಗಾವೆಯೆಂಬವಡವಿಯೊಳಾಳವೇ ॥೧೪೧

ರಂಭೆಯು ಮಡಿವಿನ ಶೋಭೆಯನಂಬುಜಭವನೀಕಗೀಯೆ ಸಾವಿರಕಣ್ಣಿಂ ।
ದಂ ಬಿಸದೆ ನೋಟ್ಪನಬ್ಜಜನೆಂಬುದು ಪುಸಿಯಲ್ಲವಿನಿತುಕಣ್ಸಾರಗೊಳ್ವೇ ॥ ೧೪೨

ಈ ವನಿತೆಯ ಗುಲ್ಫಂ ಪರಿಭಾವಿಸುವಂದೆನ್ನ ಸತಿಯ ಗುಲ್ಫಕ್ಕಂ ಕೇ ।
ಳ್ತಾವಧಿಕವೆಂದು ಮನದೊಳ್ ಗೋವಿಂದಂ ಮುಱುಗಿ ಕಱುಯನಾದಂ ನೋವಿಂ ॥

ಎನ್ನ ದೊರೆಯೊಳ್ಪನಜನೀ ಕನ್ನೆಯ ಕಿಱುದೊಡೆಗೆ ಕೊಟ್ಟನೆಂಬೀ ಸಿಗ್ಗಿಂ ।
ತನ್ನಂ ಪೆಱಿಗೆರ್ದ ತೋಱಿಂ ಮುನ್ನಂ ಕಾವಂಗೆ ದೇಹಮಿರ್ದುದು ಪುಸಿಯೇ ॥೧೪೪

ಕಂಡಱಿಯದಂತು ಪಱಿತಂದಂಡಲಿದಜನಿವಳ ತೊಡೆಗೆ ಮದ್ವಲ್ಲಭೆಯಂ ।
ಕೊಂಪಿತ್ತನೆಂಬ ನೋವಿಂ ಬೆಂಡಾದುದು ಬಾಱಿ ಬಾಱಿಗುಂ ಬೆಂಡೊಳೆವೇ ॥ ೧೪೫

ಈ ಕಮಳವಮುಖಿಯ ಜಘನಕ್ಕಾ ಕಮಳಜನಿತ್ತನೆಮ್ಮ ಮಸ್ತಕದೆಸೆಯೊಂ ।
ದಾಕಾರಮನೆಂದಿರದತಿಭೀಕರದಿಂ ವನವನಿಭನವೂಹಂ ಪೊಕ್ಕುವು ॥ ೧೪೬

ಈಕೆಯ ಪೊಕ್ಕುಱ ಜೆಲ್ವೀ ಲೋಕದೊಳತಿಸೇವ್ಯಮಿದಜಿ ಪೊರೆಯೊಳ್ ನಾವಿ ।
ನ್ನೇಕಿರ್ಪರ್ವೆಂದು ನೆಜರೆ ನೀರಾಕರಮಂ ಪೊಕ್ಕುವೇವದಿಂ ಕಂಖಿಂಗಳ್ ॥ ೧೪೭

ಈ ನಾರಿಯ ಬಾಸೆಗೆ ಚತುರಾನನನೆಱೆದೀಯೆ ತನ್ನ ಶೋಭೆಯನಾರ್ತ ।
ಧ್ವಾನದಿನೆಲೆ ಮುರುಳಾದುವು ನೂನಂ ಮುರುಳಿರುಪೆಯೆಂಬುವುಂ ಮುನ್ನೊಳವೇ॥೧೪೮

ಈ ವನಿತೆಯ ನಸುವಿಂಗಜನಾವಗವೆಱೆದೀಯೆ ತನ್ನ ಮಧ್ಯದ ಸೊಬಗಂ।
ತಾವಂಜೆ ಬಳ್ಳಿವೊದರಂ ನೋವಿಂದಂ ಪೊಕ್ಕುವಂದು ವಾರಣಟಪುಗಳ್ ॥ ೧೪೯

ಈ ಸಸಿವದನೆಯ ತೆಳ್ವಸಿಗರ್ಗಾ ಸರಸಿಜಗರ್ಭನೀಯೆ ತವೆಯ್ಕಿಳ್ಪವುನಿಂ ।
ದೇಸಕತ್ತು ಪುಯ್ಯಲಿಡುವುವು ದೇಸಿಗರಂತೀಗಳಂ ಸುರಂಭೂದಳಗಳ್ ॥1 ೧೫೦

ಎಲೆ ಪೋಲ್ತಿರ್ನೀವೀಕೆಯ ವೊಲೆಯುಂದವನೆಂದು ಜಕ್ಕವಕ್ಕಿಗೆ ಮುಳಿಸಿಂ ।
ಜಲಜಭವನೀಯೆ ಶಾಪವನೊಲವಿಲ್ಲದಗಲ್ದು ಪೋಪುವಿರುಳೊಳ್ ವಿಧುನಂ॥ ೧೫೧

ಕರವೊಪ್ಪುವುದೀ ಕನ್ನೆಯ ಕೊರಲೆನ್ನೆ ದೆಗೆಂದು ನೋಡಿ ಬೆಱುಗಾಗಿ ವಸುಂ ।
ಧರೆಯೊಳ್ ಮೆಯ್ಯಱಿಯುದೆ ನಿಸ್ತರದಿಂ ಮತಿಗೆಟ್ಟು ಬಳೆದವಡಕೆಯ ಸಸಿಗಳ್॥೧೫೨

1 ಧೇಸಿಗರಂತಿನ್ನು ಪುರುಳಿಗಳ್ ಭಯವಕದಿಂ (ಕ).

ಎಱೆದೀವುದುಮುಜನೀಕೆಯು ನಳಿತೋಳಿಂಗೊಲ್ದ ತಮ್ಮ ಚೆಲ್ವಿಕೆಯುಂ ಕಂ ।
ಡೆಳಲತೆಗಳ್ಪೂವುಗಳಿಂ ತಳೆದಿರ್ದುಂ ತಳೆಯದಿರ್ಪುವಾ ಫಲಿನತೆಯುಂ ॥ ೧೫೩

ಜಳಜಭವಸತೊಲಿದು ಕನ್ನೆಯು ತಳಕಂ ತಂದೀಯೆ ವಾರಿಜಂಗಳ ಕೆಂಪಂ ।
ಬಿಳಿಯುಸರಸಿಗುಹವೂದುವು ಬಿಳಿಯುಸರೋಜಾತವೊಳವೆ ಮುನ್ನಿನ ಯುಗದೊಳ್

ಜನನೆನ್ನ ಸತಿಯ ಬೆರಲೊಪ್ಪುವುನೀನಧು ಕೊಂಡಳೆಂದು ಕರಿವಾಜಿಗಳಿಂ ।
ಬಿವನೇಱಿದೆ ಮುಳಿಸಿಂದೇಱಿವನಿನ್ನುಂ ಕೋಣನಂ ಮಹಾವ್ರತದಿಂದಂ ॥ ೧೫೫

ಒಳ್ಳಿದಳೆಂದಜನೀಕೆಯು ಸೆಳ್ಳುಗುರಿಂಗೀಯೆ ತನ್ನ ಚೆಲ್ವಂ ಪಿರಿದುಂ ।
ತಲ್ಲಣದಿಂ ಕೇದಗೆಗಳ್ ಮುಳ್ಳಿಳ್ ಪೊಕ್ಕಿರ್ಪವಿನ್ನುಮತಿಭಯದಿಂದಂ ॥ ೧೫೬

ಬಿದಿ ತಮ್ಮ ಬೆನ್ನ ಚೆಲ್ವಂ ಪದಪಿಂದೀವನಜಮುಖಿಯ ಬೆಂಗೀವುದುಮು ।
ಗ್ಗದ ನಾಗಕನ್ನೆಯರ್ಸಂಪದವುಂ ಬಿಸುಟೋಡಿ ರಸೆಯೊಳಿರ್ದಪರಿನ್ನುಂ ॥ ೧೫೭

ಜಳರುಹಗರ್ಭನೀಕೆಯುಧರಕ್ಕೆ ಮನೋಹರವಪ್ಪ ತಮ್ಮ ಪ
ಣ್ಗಳ ಚೆಲುವಂ ಕರುತ್ತೆಱಿದು ಕೂರ್ಪ್ಪೊಡೆ ಬೆರ್ಚಿ ವಟೋರ್ವಿಜಾಗಳೀ
ಗಳುವೊಡಗೂಡಿ ಕರ್ಪುವೆರಸಿರ್ಪುವು ಪೆರ್ಚಲದಿಂದವಲ್ಲದಂ
ದುಱುಪಸುರಕ್ಕೆ ಬೀಳಲಿನಿತೇಕಣವಾಗವು ನೋಡೆ ಲೋಕದೊಳ್ ॥ ೧೫೮

ಈ ಸತಿಯ ದಂತಪಂಕ್ತಿಗೆ ಭಾಸುರತರವಪ್ಪ ತನ್ನ ಚೆಲ್ವುಗಳಂ ಸಂ ।
ತೋಷದಿನಿತ್ತುದಱಿಂದಂ ಲೇಸಾಗಿರೆ ಮುತ್ತು ಪೂಜ್ಯವಾದುವು ಧರೆಯೊಳ್ ॥ ೧೫೯

ವರುಣಾನಿಯ ಬಾಯ್ದೆಱೆಗೀ ತರುಣಿಯ ಬಾಯ್ದೆಱೆಯ ಚೆಲ್ವನೆಂಬೀ ಚೆಲ್ವಂ ।
ನೆರೆದೀಶನುತುಪನಾದಂ ಪರಿಕಿಸುವಂದಮರರೊಳಗೆ ಕುಂಬರುಮೊಳರೇ ॥ ೧೬೦

ಈಕೆಯ ಕದಪಿನ ಶೋಭೆಯನೇಕಂಜವೆ ಪೋಲ್ತಿರೆಂದು ಶಾಪವನೀಯಲ್ ।
ಕೋಕನವಸುತಂ ಪಲರುಂ ಪೋ ಕೆವ್ಮನೆ ಚಲದಿನಱಿವರೆಲೆಗಳ ಮೂಗಂ ॥ ೧೬೧

ವಾರಿಜೋದ್ಭವನೀಸರೋಜದಳಾಯತ ಕ್ಷಿಯ ಮೂಗಿನಾ
ಕಾರಮಂ ನೆಱೆ ಪೊಲ್ತಿರೆಂದುಱೆ ನೋಡಿ ಸಂಪಗೆಗಳ್ಗೆ ನಿ
ಷ್ಕಾರಣಂ ಮುನಿಸಿರ್ದನಪ್ಪುದಱಿಂದದೇಂ ಮನದೆಲ್ಲಿಱಿಂ
ಸಾರಲಣ್ಮದೆ ಭಾವಿಪಂದವನೊಂದುಪೊರ್ದವು ತುಂಬಿಗಳ್ ॥ ೧೬೨

ಎಮ್ಮ ಕಣ್ಗಳ ಚೆಲ್ವನೀಕೆಯು ಕಣ್ಗೆ ಪದ್ಮಜನಿತ್ತನೆಂ
ಬುಮ್ಮಳಂ ಪಿರಿದಾಗೆ ಪುಲ್ಲೆಯು ವಿಂಡುಗಳ್ ಕಡುಚಿಂತೆಯಿಂ

ಸ್ಮೇರಿಸಲಾಜಿದೆ, ॥ ೧೭೦

ಸುವ್ಮನಾಗಿ ಜಶತ್ವದಿಂದೆಕಟೋವೊ ಚಿತ್ತವ ಬಲ್ಪುಗೆ
ಟೊಳ್ಪೆನ್ಮೆಯುಂ ಕಶುವೀರವಿಲ್ಲದೆ ಪಂದೆಸ[illegible]ಧಾತ್ರಿಯೊಳ್ ॥ ೧೬೩

ಜಳಿಜಜನೀಕಯು ತುಱುಗೆವೆಗಳನು. . . . .
ವ್ಮುಳಿಸಿ ಪೆಱಿಗಾಗಿ ಪಿರಿದುವ್ಮುಳಿಸಿಂದೆವೆಯಿಕ್ಕರವುರಕನ್ಯೆಯುರಿನ್ನುಂ ॥ ೧೬೪

ವನರುಹಗರ್ಭನೀಕ್ಷಿಸಿ ವೃಗಾಕ್ಷಿಯ ಕರ್ಣಯುಗಕ್ಕೆ ಕರ್ತು ವೆ
ಲ್ಲನೆ ಬಡಿದೀಯೆ ನವ್ಮ ಚೆಲುವಂ ಭರದಿಂದಿರಲಣ್ಮಿದೊಯ್ಯನಿಂ
ತನವರತಂ ಕರಂ ವುಗಿದು ನೀರೊಳಗಿರ್ದಿರುಳೆಲ್ಲವುಬ್ಬಗ
ರ್ಭನನೆ ವುಕ್ತೋತ್ಸವಂಬೆ ಸು ಭಾವಿಸುತಿರ್ಪ್ಪವು ನೆಯ್ದಿಲಾಗಳಿಂ ॥ ೧೬೫

ಈ ವನಿತೆಯ ಪ್ರಭ್ಯುಗಳಂ ನೀವಂಜದೆ ಪೋಲ್ತಿರೆಂದು ಸರಸಿಜಗರ್ಭಂ |
ಬೇವಿನ ವುರಕ್ಕೆ ಶಾಪವುನೀವುದುವುತು ಕೈಪೆಯೂದುದ ನೀತಳೆದೊಳ್ ॥ ೧೬೬

ನಯದಿಂದೀಕೆಯ ಚೆಲ್ವನಪ್ಪ ನೊಸಲಂ ಪದೆ್ಕೀಬ್ಬಂ ತನ್ನ ಕೂ
ರ್ವೆಯಿನೋರಂತಿರೆ ನೋಡಿನೋಡಿದನೆಲೇ ಲೋಕಕ್ಕೆ ದರ್ಶ್ಯರ್ಯವು
ಪ್ರಿಯವಲ್ಲಾನಿದಱಿಂದವಂ ಧರಿಯಿಸಲ್ವೇಱಿಚ್ಛೆಯಂದು ನೀಲೋತ್ಪಲ
ಪ್ರಿಯನಿನ್ನುಂ ನೆಱೆ ಪೆಱ್ಚುತುಂ ಕುಸಿಯುತುಂ ತಾನಿರ್ಪನಭ್ಯಾಸದಿಂ ॥ ೧೬೭

ಸರಸಿಜಭವನೀಕಾಂತೆಯ ಕುರುಳೋಳಿಗೆ ತವ್ಮ ಚೆಲ್ವನಿತ್ತುದರಿಂ ಪ |
ಲೆ್ಮರೆವುನಳಿನಿಕರಮಿನ್ನುಂ ಸರಸಿಜಸಂಭವನನಱಿಸಿ ಕಡುವುಳಿಸಿಂದಂ ॥ ೧೬೮

ಆ ಸರಸಿಜಭವನೀಕೆಯ ಕೇಶಕ್ಕೊಲಿದೀಯೆ ತವ್ಮ ಚೆಲ್ವಂ ವುನಿದೀ |
ದೇಶದೊಳಿರಲೊಲ್ಲದೆ ವುಲೆದೇಶದೊಳಿಂತಪ್ಪವಂಜೆ ನೀರೆಯ ತರುಗಳ್ ॥ ೧೬೯

ವಾದದಿಂ ಬಗೆಯದೆ ನೀವೀ ಸುವತಿಯ ಬಣ್ಣವುನೆ ಪೋಲ್ತಿರೆಂದತಿವುದದಿಂ |
ಬಿದಿ ಸಾಪವುನಿತ್ತುದಱಿಂ ಬಿದಿಗಳ್ ಫಲತೂಗಲೊಡನೆ ಸಾವುವು ಧರೆಯೊಳ್ ॥೧೭೦

ಅತಿಕಯವಿಾಕೆಯ ವೆಯ್ಗುಂದದಿರ್ಕೆಯಂ ಪೋಲ್ತಿರೆಂದು ವುಲಯಾಪಕಕ್ಕು |
ದ್ಧತಿಯಿಂ ಸಾಪವುನಿತ್ತೊಡೆ ಚಕವಾಸ್ಯಂ ತೆಯ್ದು ಬೊಟ್ಟನಿಡವರ್ಪಲರುಂ ॥೧೭೧

ಎಂದನಂತವುತಿಕುವಾರಿಯ ರೂಪನಾಶ್ಚರ್ಯಾಂಬುಟ್ಟಾಪಾದವುಸ್ತಕಂಬರೆಗಂ
ನೋಡಿ ನಾನಾವಿಧದಿಂ ಪೊಗಟ್ದಿ (ಬ.ಕ.)

ಧರೆಗಂ ಭಂಡಾರಕ್ಕಂ
ಪರಿಜನಕಂ ಭೃತ್ಯಸಂಕುಳಕ್ಕಂ ಮತ್ತೆ ।
ನ್ನರಸಿಯಗಂ ಮಾಪುರಕ್ಕಂ
ನಿರುತಂ ನೀನೊಡೆಯಳಾಗಿ ಸುಖಿ ಎರ್ ನಯದಿಂ ॥೧೭೩

[ಲಲನೆಯರಿಕ್ಕೆ ಚಾಮರಮನಂದಣಮಂ ಪದಪಿಂಡವೇಱು ಭೂ
ತಳದೊಳಗುರ್ವು ಪರ್ವಿ ಕರವೊಪ್ಪರೆ ಪಾಡುವ ಗೇಯದೊಂದು ಮೆ
ಲ್ಲುಲಿ ಕಿವಿಯುಂ ಪಳಂಚಲೆಯೆ ಮಂತ್ರಿಗಳುಂ ನೃಪರುಂ ಕುಮಾರರುಂ
ಸಲೆ ಬಸಗೆಯ್ಯೆ ನೀನೆನಗೆ ವಲ್ಲಭೆಯಾಗಿರು ರಾಜ್ಯಲಕ್ಷ್ಮಿವೋಲ್] ॥೧೭೪

ಎಂದು ನುಡಿದು ಕಯ್ಯಂ ಪಿಡಿದು ತಲೆಯ ಮೇಲಿಟ್ಟುಕೊಂಡು, ೧೭೫

ಉಸಿರದಿರವೇಡ ಕಾಮಂ
ಮುಸಗಿ ಕನಲ್ದಾರ್ದು ಕುಸುಮಸಾಯಕದಿಂ ಸೈ ।
ರಿಸದೆಚ್ಚಪನೆನ್ನಂ ಸಂ
ಕಿಸದಿನಿಸಂ ನುಡಿದು ಕಿಡಿಸು ನೀನವನೇಸಂ ॥ ೧೭೬

ಎಂದನಂತಮತಿಯುಂ ತನ್ನಿರ್ದಾಸನಕ್ಕೆವರೆ ತೆಗೆದಪ್ಪಿಕೊಂಡು
ಮೊಗಮಂ ನೋಡಿ [ಕಡುಮೋಹದಿಂ], ೧೭೭

ಆಯುಂಗಿಡೆ ಕಾಮಂ ಕೈ
ಗಾಯದೆ ನಿಂದಾರ್ದು ಮುತ್ತಿ ಕೊಂದಪನೆಲೆ ನೀ ।
ನೀಯವಸರದೊಳ್ ಕಾಯುತೆ
ಬಾಯೊಳ್ ತಂಬುಲಮನಿಕ್ಕು ಮೆದಗಜಗಮನೇ ॥ ೧೭೮

ಎಂದನೇಕಮೆಲ್ಲುಡಿಗಳಿಂದೊಡಂಬಡಿಸಲಾಱದೆ, ೧೭೯

ಎಳವಿದಿರಂದಮಂ ತನು ಸರೋರುಹದಂದಮನಾನನಂ ಮೆಹೋ
ಜ್ಜ್ವಳತೆಯುಂದಮಂ ನಿಮಿರ್ದ ತೋಳ್ಗಳ ಸುಪಾಲದ ಪಣ್ಣಿನಂದಮುಂ
ಪೊಳವೆಧರಂ ಕರಂ ನೆಜೆಯೆ ಪೋಲ್ವುದಱಿಂದರವಿಂದವಕ್ತ್ರೆ ಕೋ
ಮಳ ಕಡುಗಾಡಿಕಾರ್ತಿ ಮರವಾನಿಸೆಯೆಂಬುದನುಂಟುಮಾಡಿದೆ ॥೧೮೦

ಎಂದೊದವಿದ ಕೂರ್ಮೆಯಿಂ ನೋಯೆ ನುಡಿಯಲಾಱದೆ
ಸರಸದಿಂ ನುಡಿವುದುಂ ಅನಂತಮತಿ ತನ್ನೊಳಿಂತೆಂದಳ್ :— ೧೪೧

ಚಂದನಂಗಳ ಪುಳ್ಕಿಯಿಂದಡುವಂತೆ ಜೋಳದ ಕೂಳನಾ
ನಂದದಿಂ ಕಡಿದೊಟ್ಟಿ ಸುಟ್ಟು ಸುರೇಂದ್ರಭೂವಿರುಹಂಗಳಂ
ತಂದು ಸಾವೆಯನಲ್ಲಿ ಬಿತ್ತ್ಯವರಂತೆ ಮೋಕ್ಷದ ಸೌಖ್ಯಮುಂ
ಕಾಂದದೀವೆ ನುಹಾವ್ರತಂಗಳನೋವೊ ನಾಂ ಬಿಡಲಾರ್ಪೆನೇ ॥ ೧೪೨

ಪಾಲನೊಲ್ಲದೆ ನಾಯಿಗಳ್ಕಯ ಪಾಲನುಣ್ಬನುವೊಲ್ದು ಭೂ
ಪಾಲವರ್ಗಮನೊಲ್ಲದುದ್ಧತವೃತ್ತಿಯಿಂ ಕಡುರಾಗದಿಂ
ಕೀಳನೋಲಗಿಪಾತನುಂ ಜಿನಧರ್ಮಮುಂ ಬಿಸುಟರ್ತಿಯಿಂ
ಪಾಳಿಪಾತನುಮಿಂದ್ರಿಯಂಗಳ ಭೋಗಮುಂ ಮೆರುಳಲ್ಲನೇ ॥ ೧೪೩

ಸಿರಿಯು ಮಹಿಮೆಗೆ ರೂಪಿನೇಂಟ್ಗೆ ಮುಯ್ಯನಾಂತಱಬುದ್ಧಿಯಿಂ
ಸ್ಥಿರಮಿದೆಂದು ಮನುಷ್ಯಜನ್ಮಮನಣ್ಣ ನಂಬಿ ಜಡರ್ ಕೆಲರ್
ಪರಮಧರ್ಮಮನುತ್ತಮವ್ರತಸಂಕುಳಂಗಳನೊಲ್ಲದೋ
ಸರಿಸಿ ಭೋಂಕನೆ ಸತ್ತು ನಾರಕದುಃಖಮುಂ ನೆಱೆ ತಾಳ್ದುವರ್ ॥ ೧೪೪

ಬಿಸುಟು ಧರ್ಮಮನೊಲ್ಲದಗ್ಗಳಮಪ್ಪ ಸುವ್ರತಮುಂ ಮನಂ
ಕುಸಿದು ಜೈನರ ಪೇಕ್ಕೆಗಂಜಿ ವಿಶೇಷಸಚ್ಚರಿತಕ್ಕೆ ಸಂ
ಕಿಸಿ ಜಿನೋಕ್ತಿಗೆ ಕಾಮ್ಯಮಪ್ಪವರಿಂದ್ರಿಯಂಗಳನೆಯ್ದಿ ಪೆ
ರ್ಚಿಸಿ ವಿನೋದದಿನೆಯ್ದುವರ್ ನರಕಂಗಳಂ ಕಡೆಯೊಳ್ಪಲರ್ ॥ ೧೪೫

ಮುಗಿಲಂತಸ್ಥಿರಮಪ್ಪ, ಗಾಳಿಯಂತೆ ನಿರ್ನಿರಮಪ್ಪ, ಮೆಳಲೇರಿ
ಯಂತೆ ಲಯಮಪ್ಪ, ಕಬ್ಬುನದ ಕಡಲೆಯಂತೆ ಬಿಟ್ಟಿತಪ್ಪ, ಸುಣ್ಣ
ದಂತೆ ತೀವ್ರಮಪ್ಪ, ಕತ್ತರಿವಾಡೆಯಂತೆ ಸಾರಲರಿದಪ್ಪ, ರಾಜಕನ್ಯೆ
ಯಂತೆ ಬಯಸಲರಿದಪ್ಪ, ಮುಳ್ಳುಳ್ಳ ಬಟ್ಟೆಯಂತೆ ನಡೆಯಲರಿದಪ್ಪ
ರಕ್ಕಸಿಯಂತನುಭವಿಸಲರಿದಪ್ಪ, ನಡುವಗಲಾದಿತ್ಯನಂತೆನೋಡಲರಿದಪ್ಪ,
ಸುರಚಾಪದಂತೆ ಕ್ಷಣಿಕಮಪ್ಪ. ಬಯಲ್ವೊನಲಂತೆ ಕಿಡುವಂತಪ್ಪ,
ಪರಿವೆಂಬಿನಂತೆ ಕಡಿದಪ್ಪ, ಬಿದಿರಡವಿಯಂತೆ ಪುಗಲರಿದಪ್ಪ, ಸಮುದ್ರ

ದಂತೆ ದಾಂಟಲರಿದಪ್ಪ, ನಸುಗುನ್ನಿಯಂತೆ ಸಾರಲರಿದಪ್ಪ, ಮೆದದಾನೆಯಂತೆ ಪಿಡಿಯಲರಿದಪ್ಪ, ಕಿಚ್ಚಿನಂತೊಳಗೊಳಲರಿದಪ್ಪ, ಬಲ್ಲಿದನಾಣೆಯಂತೆ ವಿಸಲರಿದಪ್ಪ, ಚಕ್ರದಂತೆ ತಪ್ಪಿಸಲರಿದಪ್ಪ, ಸೂಜಿಯಮೊನೆಯಂತೆ ಕೂರಿತಪ್ಪ, ಕಾಳಗದಂತೆ ಪುಗಲರಿದಪ್ಪ, ಮೆಸಣದಂತಿರಲರಿದಪ್ಪ, ಬಿಸಿಲ್ಗುದುರೆಯಂತೆ ಮಾಯಮೆಪ್ಪ, ಐಂದ್ರಜಾಲಿಕನಂತೆ ಬಹುಪ್ರಕಾರಮೆಪ್ಪ, ಪೊಲಸಿನಂತಶುಚಿಯಪ್ಪ, ವಾತದಂತೆ ನಡುಕಮೆಪ್ಪ, ನೀರಿನಂತೆ ಕಟ್ಟಲರಿದಪ್ಪ, ವೋಹ್ಷದಂತಱಿಯಲರಿದಪ್ಪ, ಸಂಕ್ರಾಂತಿಯಂತೆ ನಿಚ್ಚಸಲರಿದಪ್ಪ, ಮೆರುಳಂತೆ ಕೊಂಡಾಡಲರಿದಪ್ಪ[1], ಪಡೆವ ತೊಱೆಯಂತೆ ಮಾಣಿಸಲರಿದಪ್ಪ, ರಾಜದ್ರವ್ಯದಂತೆ ಕುಂದಿಸಲರಿದಪ್ಪ, ಕೊಡದ ನೀರಂತೆ ಪೆರ್ಚಿಸಲರಿದಪ್ಪ, ಸಂಸಾರಮಂ ನಂಬಿ ದರ್ಶನಮುಮಂ ವ್ರತಮುಮಂ ಕೆಡಿಸುವುದೆಗ್ಗಿಕೆಯೆಂದು ವ್ರತಪರಿರಕ್ಷಣೋಪಾಯಮಂ ಚಿಂತಿಸುತ್ತಿರ್ದಳಿರ್ವರ್ನೆಗಂ, ೧೪೬

ಕಡುಚಪಳತೆಯಂ ಬಿಟ್ಟು
ನ್ನೊಡಗೂಡೊಡಗೂಡದಂದು ದೆಸೆವಲಿಗೆಯ್ವಂ ।
ತಡೆಯದೆನೆ ಕನ್ನೆ ತಾಂ ನಡು
ನಡುಗುತ್ತುಂ ಜಿನರ ಪದಮನುಱೆ ಸೇವಿಡಿದಳ್ ॥ ೧೪೭

ಅರಸನ ಕೋಪಂ ಪಿರಿದೋ
ಸರಿಸಿದೆ ಮೊಕ್ಕೊಳ್ಳದಾಗದೆನ್ನದೆ ಪಲವಂ ।
ಸ್ಮರಿಯಿಸದೆ ಕೂಡು ಕೂಡದೊ
ಡರವರಿಸುವೆನೆಲ್ಲನಕ್ಕ ಕೊಲ್ಲದೆ ಮಾಣಂ ॥ ೧೪೮

ಆರ ಮಗಳಂದು ಭೂಭುಜ
ನಾರಯ್ಯದೆ ನಿನ್ನನರಸಿಮಾಡಿದನೆಂಬೀ ।
ಕಾರುಣ್ಯಂ ಕೇವಳಮೇ
ಧಾರಿಣಿ ಬೆಸಗೆಯ್ಯೆ ಬಾಱ್ವುದಿದು ಬೇವಸವೇ ॥ ೧೪೯

ಎಂದು ಕಂಡಕಂಡವರೆಲ್ಲಂ ಗಲ್ಲಂಗುರಿಗೊಳ್,[2] ನವಿಲ್ ಕಾರ್ಗಾ

[1] ಮುಕ್ಕಳಂತೆ ಸಂತವಿಸಲರಿದಪ್ಪ (ಗ) [2] ಗಲ್ಲಗುಗ್ಗುರಿಗೊಳ್ (ಗ)

ಲಮೆಂ, ಹಂಸೆ ಸರೋವರಮೆಂ, ಮದದಾನೆ ವನಮೆಂ, ಪಸುಗೂಸು ವೊಲೆ
ಯುಂ, ಪೆಣ್ಗೂಸು ತವರ್ಮನೆಯಂ, ತುಂಬಿ ತಾವರೆಯಂ, ಕಱು ಕೆಚ್ಚ
ಲಂ, ನಲ್ಲಳ್ ನಲ್ಲನಂ, ವೈವಹಾರಿ ಪಡಪಂ, ಕೊಡುಗೂಸು ಮೆದುವೆಯಂ
ಬೆಳಸುಳ್ಳಂ ಮಡೆಯಂ, ನೆನೆವಂತು ಜಿನಪಾದಾಂಭೋಜಂಗಳಂ ನೆನೆ
ಯುತ್ತುಂ ಪರಿಚ್ಛೇದಿಸಿರ್ದಳಿರ್ಪುದುಂ, ಸಿಂಹರಥಮಹಾರಾಜಂ ಮುನಿದು
ಅಚ್ಚು ಳಾಯಿಲರಂ ಬರವೇೞ್ದೀಚಪಳಯಂ ಸಾಯೆ ಮೋದಿಯೆಂ
ಬುದುಂ, ೧೯೦

ಕಟ್ಟಿನೆ ಕಜ್ಜಿಯವೆರಾಗಳ
ಗಟ್ಟಿನೆ ಪರಿತಂದು ಮಾಣದಚ್ಚು ಳಕೋಲಿಂ ।
ತಿಟ್ಟಿನೆ ತಿರಿಪಿ ದುರಾತ್ಮರ್
ಚಟ್ಟಿನೆ ಕೆನ್ನೆತ್ತರೊಗೆಯೆ ತೊಲಗದೆ ಬಡಿದರ್ ॥ ೧೯೧

ಮುಳಿಸಿಂದೊಡನೊಡಸೆ ಛಳ
ಲ್ಛಳಲೆನೆ ಸೂಳಾಯ್ತುರಟ್ಟ ಪೊಯ್ವುದುಮಾಗಳ್ ।
ಕಳವಳಿಸದೆ ಬೆಂಬೀೞದೆ
ಮುಳಿಸಿಲ್ಲದೆ ಕನ್ನೆ ಮಂದರಾದ್ರಿವೊಲಿರ್ದಳ್ ॥ ೧೯೨

ಕ್ಷೋಣೀಶನ ಬೆಸದಿಂ ಕ
ಣ್ಗಾಣದೆ ಸೂಳಾಯ್ತುರಟ್ಟ ವೋದುತ್ತಿರಲುಂ ।
ಮಾಣದೆ ಜಿನೇಂದ್ರಪದಮಂ
ಜಾಣೆ ಮಹೋತ್ಸಾಹದಿಂದೆ ನೆನೆಯುತ್ತಿರ್ದಳ್ ॥ ೧೯೩

ಶರಣೆನಗೀಯುವಸರದೊಳ್
ಪರಮಜಿನೇಶ್ವರಪದಾಂಬುಜಾತವೆ ಪೆಱಿತಿಂ ।
ಶರಣಿಲ್ಲೆಂದುಱೆ ಪಿಡಿದಳ್
ಸುರುಳಿಲ್ಲದೆ ಬಂದಿವಿಡಿವವೊಲ್ಜಿನಪದಮಂ ॥ ೧೯೪

[ಆಂತು ತನ್ನೊಂದುನೋವಂ ಬಗೆಯದೆ ವ್ರತಂ ಕೆಟ್ಟಪುದೆಂಬ
ನೋವೆ ಪಿರಿದಾಗೆ ವ್ರತಮಂ ರಕ್ಷಿಪ್ಪುದಱಿಂ ಸಾವಂ ನಿಶ್ಚಯಿಸಿ ದೇಹಾ

ಖಿಲಾಷೆಯಂ ಬಿಟ್ಟು[1] ಪಂಚನಮಸ್ಕಾರಮಂ ಜಪಿಸುತ್ತಿರ್ದಳನ್ನೆಗಂ ಆ ಪುರದ ನಗರದೇವತೆಗಳ್ಗಾಸನಕಂಪಮಾಗೆ ಬೇಗಮೆಱಿದು ನೆರೆದು ಬಂದನಂತಮತಿಯುಂ ಕಂಡು ದೃಢವ್ರತೆಯೆಂದಱಿದು ಕೈಮುಗಿದು ನಾನಾಪ್ರಕಾರದಿಂ ಪೊಗೞ್ದು ಮತ್ತಮಿಂತೆಂದರ್ :—][2] ೧೯೫

ನಿಲ್ಲೊ ೀ ಕುವರಿ ತಲ್ಲಣ
ವಿಲ್ಲದೆ ಮುಳಿಸಿಲ್ಲದೊಂದೆಮನದಿಂದಂ ನೋ ।
ವಿಲ್ಲದೆ ಪದಪಿಂ ತ್ರಿಭುವನ
ವಲ್ಲಭನಂ ನಿನವ ಮಹಿಮೆಯಿದು ಕೇವೞವೀ ॥ ೧೯೬

ಧನವುಳ್ಳನುಮಂ ಬಿಡದೊ
ಯ್ಯನೆ ಸಾಯದೆ ಬಂದಿವಿಡಿದವಂ ಬಾೞ್ಗಿಂದಂ ।
ದನವರತಂ ಜಿನರಂ ಪಿಡಿ
ದ ನರಂಗೆರಡುಂಟೆ ಬಗೆವೊಡಿನ್ನೀ ಜಗದೊಳ್ ॥ ೧೯೭

ನರೆ ಬಂದನಿತಱೊಳ್ ನರರ್
ಪಿರಿಯರೆ ಜಿನನಾಥಸೇವೆಯುಳ್ಳ ಮನುಷ್ಯರ್ ।
ಧರೆಯೊಳ್ ಕೂಸಾದೊಡಮವ
ರೆರಡಿಲ್ಲದೆ ಪಿರಿಯರವರೆ ಧನ್ಯರ್ ಮಾನ್ಯರ್ ॥ ೧೯೮

ಪಿರಿದು ಕಿವಿ ಕೊೞಿನಂತಿರೆ
ಪಿರಿದಪ್ಪುದೆ ಬಲ್ಪಿನೆಡೆಗೆ ಜಿನಸೇವನೆಯು ।
ಳ್ಳರೆ ಕಿಱಿಯರಾದೊಡಂ ಕೇ
ಱ್ಪಿರಿಯರಿವರ್ ಕಿಱಿಯರೆಂತುಮೆದನೊಲ್ಲದವರ್ ॥ ೧೯೯

---

1 ವ್ರತನುಂ ಕಿಡಿಸುವುದು ಕಜ್ಜವುಲ್ಲೆಂದು ಸಾವಂ ಪರಿಚ್ಛೇದಿಸಿ ತನ್ನ ದೇಹಾ ಖಿಲಾಷೆಯಂ, ಬಿಟ್ಟು (ಕ).

2 ಆಗಳನಂತಮತಿಕನ್ನೆಗಾದುಪಸರ್ಗಮುಂ ನಗರದೇವತೆಗಳಱಿದು ಚೆಚ್ಚರಂ ಬಂದು ನೋಡಿ (ಗ)

ಪಾಲಲ್ಲದೆ ಪಿರಿದಪ್ಪುದೆ
ಮೇಲಪ್ಪುದೆ ತುಪ್ಪದೆಡೆಗೆ ಧರ್ಮಮನೊಲ್ವಾ ।
ಕೀಳುಂ ಮೇಲದನೊಲ್ಲದ
ಮೇಲುಂ ಕೀಳಕ್ಕುಮಲ್ಲಿ ಸಂದೆಯುಮುಂಟೇ ॥ ೧೦೦

ಬಱಿಯ ಜಿನಭಕ್ತಿಯಲ್ಲಿದು
ತಱಿಸಲ್ವುವು ನೆಱೆಯೆ ಪೆಂಪುಮೊಪ್ಪುಂ ಮನದೊಂ ।
ದಱಿವುಂ ವ್ರತದುನ್ನತಿಯಂ
ಪೆಱತೇನೀ ಕನ್ನೆಯಧಿಕಗುಣಯುತೆಯುಕ್ಕುಂ ॥ ೧೦೧

ಎಂದು ಪೊಗೞ್ದು ಕನ್ನೆಯ ನೋವೆಲ್ಲಮನರಸನ ಪಟ್ಟದರಸಿಯರ ಪರಿಜನದ ಕುಮಾರರ ಪ್ರಧಾನರ ಮೇಲಿಕ್ಕುವುದುಂ ॥ ೧೦೨

ಎಲ್ಲರ ಮೆಯ್ಗಳೂಳಂ ತಳು
ವಿಲ್ಲದೆ ಬಾಸುೞ್ಗಳೂಗೆಯೆ ಕಡುನೋವಿಂದಂ ।
ಪಲ್ಲಂ ಗಿಡಿಗಿರಿದಳುತುಂ
ನಿಲ್ಲದೆ ನೆತ್ತರನೆ ಕಾಱಿ ಕೆಡೆದರ್ ನೆಲದೊಳ್ ॥ ೧೦೩

ನೋವಿಂಗಿನಿಸಿರಲಾಱಿದೆ
ಸಾವಾಯ್ತೆಂದಳ್ಕ ಬೆಚ್ಚಿ ಗೋಳಿಟ್ಟಳುತೋ ।
ವೋವೆಂದು ಧೈರ್ಯಮಿಲ್ಲದೆ
ಭೂವಳಯಾಧಿಪನ ಮುಂದೆ ಪೊರಳುತ್ತಿರ್ದರ್ ॥ ೧೦೪

ಧರಣೀಶಂ ತಾಂ ನೋವಿಂ
ಗಿರಲಾಱಿದೆ ನೊಂದು ನಡುಗಿ ತಲ್ಲಣದಿಂದಂ ।
ಸೊರೆಯೊಳಗಿಲಿ ಪೊಕ್ಕಂತಿರೆ
ಪರಿವೆರಿದಲ್ಲಲ್ಲಿಗುರುಳುತಿರ್ದಂ ಭಯದಿಂ ॥ ೧೦೫

ಅಂತು ಜ್ವರಮೊದರಂತೆ ಕುಂಬಿಕ್ಕುವರಸನುಮುಂ ಮಗುವಿನಂತೆ ಪೊರಳ್ವರಸಿಯರುಮುಂ ನರಡಾದೆತ್ತಿನಂತೆ ನಾಲಗೆಯನುಱ್ಚುವ ಪರಿಜನ

ಮುಮಂ [ಕುಂದದಾವಿನಂತೆ ಕಾಲಂ ಬಡಿವ ಪುರಜನಮುಮಂ] ಮೈಲಾರದ ಗೊರವನಂತೆ ತಂತಮ್ಮನೆ ಬಡಿದುಕೊಳ್ವಚ್ಚಳಾಯಿಲರುಮೆಂ ಕೊರಳ್ಬಿಗಿದ ಕಱುವಿನಂತೆ ಗೋಳಿಡುವ ವಿಳಾಸಿನಿಯರುಮಂ ಕಱು ಸತ್ತೆಮ್ಮೆಯಂತೊಱಲುವ ಕುಮಾರರುಮಂ, ಜನ್ಮಾಭಿಷೇಕದಂದಿನ ಮಂದರದಂತಿರ್ದ ಕುಮಾರಿಯುಮಂ ನಗರದೇವತೆಗಳ್ ಕಂಡು ಕಯ್ಯಂ ಪೊಯ್ದು ಕಳಕಳಿಸಿ ನಕ್ಕ, ೧೦೪

ಆವಾವ ನೋವು ಬಂದೊಡ
ಮಾವಾವ ಪರೀಷಹಂಗಳಡಸಿದೊಡಂ ಮು ।
ತ್ತೋವೋಯೆನ್ನದೆ ಜಿನಪದ
ಭಾವನೆಯಿಂದಿರ್ಪ ಜೈನರಿಂ ಮಿಗಿಲೊಳರೇ ॥ ೧೦೫

ಕೇಡಾದುದೆಂದು ಬೆಚ್ಚದೆ
ಬಾಡದೆ ಬೆಂಬೀೞದಂಜಿ ಚಿಂತಿಸದೆರಡಂ ।
ಮಾಡದೆ ಮನಮಂ ಶುಭದೊಳ್
ಕೂಡಿರ್ಪ ಜಿನಾಗಮಜ್ಞರಿಂ ಮಿಗಿಲಾವಂ ॥ ೧೦೬

ಏಗೆಯ್ವುದೆಂದು ನೆಗೞದೆ
ರಾಗಮನೊಡರಿಸುವ ಬುದ್ಧಿಯಿಲ್ಲದೆ ಪಾಪೋ ।
ದ್ಯೋಗಮನೆ ಬಿಸುಟು ಧರ್ಮೋ
ದ್ಯೋಗದೊಳಡರಿರ್ಪ ಜೈನರಣ್ಣ ವಿದಗ್ಧರ್ ॥ ೧೦೭

ಕಿಡುವೊಡಲಂ ಧನಮಂ ಬಿ
ಟ್ಟೊಡರಿಸಿ ಸದ್ಧರ್ಮಮಂ ಮಹಾದುಪಕೃತಮಂ ।
ಕೆಡಿಸಿ ನಿರಂತರಸುಖಮಂ
ಪಡೆವೊಡೆ ಕೇೞ್ ಜೈನರಲ್ಲದಾರ್ವರ್ ಸುಮತಿಯೊಳ್ ॥ ೧೦೮

ಸುರಗತಿಯುಂ ನಿರ್ವೃತಿಯುಂ
ದೊರೆಕೊಳ್ವೊಡೆ ಧರ್ಮದಿಂದೆ ದೊರೆಕೊಳ್ಗುಂದಾ ।

ದರದಿಂ ಧರ್ಮದೊಳಸಗುವ
ಪರಮಗುಣಂ ಜೈನರಲ್ಲಿ ನೆಲಸಿದುದಲ್ತೇ ॥ ೨೧೧

ಸಿರಿಯೊಂದೊಡವಂ ಜವ್ವನ
ಭರಮುಂ ನಚ್ಚಿರ್ದು ಕೆಡುವರೀ ಕನ್ನೆಯವೋಲ್ ।
ಸುರಗತಿಯುಂ ನಿರ್ವೃತಿಯುಂ
ಪರಮೋರ್ಥಂ ಪಡೆಯಲಱಿವರೇ ಜಡಮತಿಗಳ್ ॥ ೨೧೨

ಎಂದು ದೇವದುಂದುಭಿಗಳಸೆಯೆ ಜಯಜಯನಿನಾದದಿಂ ಪುಷ್ಪ ವೃಷ್ಟಿಯುಂ ಸುರಿದು ತಮ್ಮ ರೂಪಂ ತೋಱಿ ಜನವೆಲ್ಲಮೊಚ್ಚರ್ಯಂಬಡೆ ಕುಮಾರಿಗೆ ಪೊಡೆಮಟ್ಟುಪಸರ್ಗಮಂ ಪಿಂಗಿಸಿ ಪೋದರ್. ಇತ್ತಲ್ ಸಿಂಹರಥ ಮಹಾರಾಜನುಂ ಪುರಜನಂಗಳುಂ ಜಿನಭಕ್ತಿಯೊಳಾದ ಮಹಾಮಹಿಮೆಯಂ ಕಂಡು ಅನಂತಮತಿಕುಮಾರಯಂ ಪೂಜಿಸಿ ಪೊಡೆಮಟ್ಟು ಸಕಲರುಂ ಶ್ರಾವಕವ್ರತಮಂ ಕೈಕೊಂಡು ಸಮ್ಯಕ್ತ್ವಸಮನ್ವಿತರಾದರ್. ಅನಂತಮತಿಯುಂ ರಾಜಶ್ರೇಷ್ಠಿ ಯುಪ್ಪ [ಜಿನೇಂದ್ರದತ್ತನುಂ ಮನ್ನಣೆಯಿಂ ತನ್ನ ಮನೆಗೊಪಗೊಂಡು ಪೋಗಲೆಂದಿರ್ಪನ್ನೆಗಂ, ೨೧೩

ನಾನಾವಿಧದರ್ಚನೆಯಿಂ
ದಾನಾರಿಯ ಪಾದಪದ್ಮಮಂ ಪೂಜಿಸಿ ನೀ ।
ನಾನಂದಮೂರ್ತಿ ದಿವಿಜಾಂ
ಗನೆ ನೀಂ ಕೈಕೊಂಡು ರಕ್ಷಿಸೆಮ್ಮಂ ದಯೆಯಿಂ ॥ ೨೧೪

ಎಂದರಸನುಂ ಸಕಲಪರಿಜನಂಬೆರಸು ಪೂಜಿಸಿ ಬಂಡಾರದ ಪೊನ್ನೆಲ್ಲಮೆಂ ಮುಂದೆ ರಾಸಿಮಾಡುವುದುಂ ಬಂದುಮೆಂ ಕೈಕೊಳಲೊಲ್ಲದೆ ಮನದೊಳ ನಕ್ಕು ಧರ್ಮದೊಳಂ ದೃಢರಪ್ಪುದೆಂದರಮನೆಯಂ ಪೊಱಮಟ್ಟು ಬರ್ಪಳಂ ಧರ್ಮವಾತ್ಸಲ್ಯದಿಂ ರಾಜಶ್ರೇಷ್ಠಿ ಯುಪ್ಪ] ಜಿನೇಂದ್ರದತ್ತಂ ಮನ್ನಣೆಯಿಂ ತನ್ನ ಮನೆಗೊಡಗೊಂಡು ಪೋಗಿ ನೀನೆನಗೆ ತಾಯು ಸಮಾನೆಳಾಗಿ ಸುಖವಿರ್ಪುದೆಂದು ಪ್ರಾರ್ಥಿಸುವುದುಂ ಅಂತೆ

ಗೆಯ್ವೆನೆಂದು ಮನೆಯೊಳಗಿರದೆ ಸೆಟ್ಟಿಯು ದೇಹಾರಮುಂ ಪೊರ್ದಿ ಕಮುಲ ಶ್ರೀಗಂತಿಯರಂ ಸಾರ್ದು; ೦೧೫

ಪರತತ್ವವಿಚಾರದಿನ
ಚರಿಯಾಗೆ ಜಿನೇಂದ್ರಭಕ್ತಿಯಿಂ ಸಂದ ಮಹಾ ।
ಪುರುಷರ ಕಥೆಗಳ ಕೇಳ್ವಯಿ
ನರವಿಂದದಳಾಕ್ಷಿ ಪಲವುಮೊಳ್ನೀಂಪಿಗಳಂ ॥ ೦೧೬

ಅಲಸದೆ ಮನದೊಳ್ ಚಿಂತಿಸಿ
ಪಲುಂಬಿ ಪಂಬಲಿಸದಿನಿಸನಪ್ಪೊಡವೊಂದು ।
ವ್ಯಕ್ತಿಸದೆ ಭೋಗಂಗಳ ಪಂ
ಬಲನೊಲದೆ ಜಿನರನೆಯ್ದಿ ಪಂಬಲಿಸುತ್ತುಂ [1] ॥ ೦೧೭

ಇರೆ, ಜಿನೇಂದ್ರದತ್ತನುಮೊತನ ವಲ್ಲಭೆ ವಸುದೇವಿಯುಮೆರಸನು ಮೆರಸಿಯರುಮೆಮ್ಮ ಗುರುವೆಂದು ಕೊಂಡಾಪುತ್ತಿರೆ ಕಾಲಮುಂ ಕಳೆಯುತ್ತುಮಿರ್ಪುದುಮತ್ತಂ ಚಂಪಾಪುರದೊಳ್ ಪ್ರಿಯದತ್ತಸೆಟ್ಟಿಯುಮೆಂಗ ಮತಿಯುಂ ಬಂಧುವರ್ಗಮುಮನಂತಮತಿಯು ಪೋಗಿಂಗೆ ವಿಸ್ಮಯಂ ಬಟ್ಟು, ೦೧೮

ತರುಣಿಯ ರೂಪಿಂಗಾರುಂ
ಸರಿದೊರೆಯೆನಿಪನ್ನರಿಲ್ಲ ಧಾರಿಣಿಯೊಳ್ಪಂ ।
ಕರುಹಾನನೆಯಂ ವಿದ್ಯಾ
ಧರನೊರ್ವಂ ಬೇಗಮುಯ್ದನಾಗಲೆವೇಱ್ಕುಂ ॥ ೦೧೯

ಅಲ್ಲದಂದಿಂತು ನೋಡೆನೋಡೆ ಅದೃಶ್ಯಮೆಂತಾದಳೆಂದು ಪ್ರಿಯದತ್ತಸೆಟ್ಟಿ ಸೈರಿಸಲಾಱದೆ, ೦೨೦

---

1 ಮೊಳ್ಪಂ ಪಲವುಂತೆಱಿದುಪಭೋಗಮನೊಲವಿಂ ಬಯಸದೆ ಸರೋರುಹಾನನೆ ಧರದಿಂ (ಕ)

ನಿನ್ನ ರೂಪನೆ ನೋಡಿ ಬಾಬುವೆನಾಗಳುಂ ಮನದರ್ತಿಯಿಂ
ನಿನ್ನ ಮುದ್ದನೆ ನಚ್ಚಿ ಮೆಚ್ಚು ವೆನಾಗಳುಂ ಪ್ರಿಯಚಿತ್ತದಿಂ
ನಿನ್ನ ಮೆಲ್ವಚನಂಗಳಂ ನೆಚ್ಚಿ ಕೇಳ್ದ ಮುಯ್ಯನೆ ಮಾಡುವೆಂ
ನಿನ್ನಗಲ್ಕೆಯೊಳಂತು ಸೈರಿಸುನೆಂ ಸರೋಜದಳಾನನೇ ॥ ೦-೦೧

ನಿನ್ನುಡುವ ವಸ್ತ್ರಾಚಯಮುಂ
ನಿನ್ನುನ್ನತಿವೆತ್ತ ಪಲವು ರನ್ನದ ತೊಡವಂ ।
ನಿನ್ನಾಡುವೆಡೆಗಳಂ ಮಾ
ನೋನ್ನತೆ ನೆನೆನೆನೆದು ದೇಹಮುರಿದಪುದಿನ್ನುಂ ॥ ೦-೦-೦

ಒಡನುಣಲಾರಂ ಕರೆವೆಂ
ತೊಡೆಗಳನನುನಯದಿನಾರನೇಱಿಸಿಕೊಳ್ವಂ ।
ಕಡುಗೂರ್ಮೆಯಿನಾರಂ ಮೆ
ಲ್ನುಡಿಯಿಂ ಮುದ್ದಾಡಿಪೆಂ ಸರೋರುಹವದನೇ ॥ ೦-೦೩

ಜಿನಪೂಜೆಗಳಂ ಮಾಡದೆ
ಮುನಿಗಳ್ಗಾಹಾರದಾನಮುಂ ಮಾಡದೆ ಭೋಂ ।
ಕನೆ ಪೋಗಲಾಗ ಮಗಳೇ
ಮನಕತಮಂ ಮಾಡಿ ಪೆತ್ತವರ್ಮಱುಗುವಿನಂ ॥ ೦-೦೪

[ಸಿರಿಗೆನ್ನೊಡನಾರ್ದೊರೆಸರಿ
ಕರಮಿಂತಪ್ಪೆನಗೆ ಪುಟ್ಟ್ಯಯುಂ ಮಗಳ ವೆಸುಂ ।
ಧರೆ ಪೊಗೞ್ದಿ ದಾನಮುಂ ನೀಂ
ಜಿನಪೂಜೆಯನೊಲ್ದು ಮಾಡದುಸಿರದೆ ಪೋಪಾ] ॥ ೦-೦೫

ಎಂದು [ಪೊಳ್ಮರನಂ ಕಿಚ್ಚಳುರ್ವಂತೆ ದುಃಖಾಗ್ನಿ ತನ್ನಂ ಸುಡೆ]
ಪ್ರಿಯದತ್ತೆಸೆಟ್ಟಿ ಪಱಿಯಿಸಿ ಮಾಣ್ಬುದುಮಂಗವತಿ, ೦-೦೬

ಪರಮೆಜಿನೇಂದ್ರಪೂಜೆಗಳನಚ್ಚರಿಯಾಗಿರೆ ಮಾಡಿ ಬಂಧುಗ
ಳ್ನೆರೆದೊಡಗೂಡಿ ನೋಡೆ ಪಜೆ ಭೋರೆನೆ ಬಾರಿಸೆ ಪೊನ್ನತೋರಣಂ

ಕರಮೆನೆದೊರ್ಪ್ಪಿ ಕಟ್ಟಿ ಗುಡಿಗಟ್ಟಿ ವಿವಾಹಮನರ್ತಿವೆಟ್ಟು ಪಂ
ಕರುಹದಳಾಕ್ಷಿಗಾಗಿಸುತೆ ನೋಪ್ಪಿನಿತಂನೆಱೆ ನೋಂತೆನಿಲ್ಲೆನಾಂ॥ ೨೨೭

ಬಸದಿಗೆ ಪೋಗಿ ದಿವ್ಯೇಮುನಿಪುಂಗವರಂ ಮನದರ್ತಿಯಿಂದೆ ಬಂ
ದಿಸಿ ಜಿನನಾಥನಂ ಸ್ತುತಿಶತಂಗಳಿನಾದರದಿಂದೆ ಕೂರ್ತು ಬ
ಣ್ಣಿಸಿ ಮನೆಗಾಗಳಂತೆ ಪರಿತಂದವರೆಂದುದನರ್ತಿವೆಟ್ಟು ರಾ
ಗಿಸೆ ಕೊರಲಪ್ಪಿ ಪೇಪ್ಪುವಿಮಳಾಂಗಿಯನಾನಿರದೆಲ್ಲಿ ಕಾಣ್ಬೆನೋ ॥ ೨೨೮

[ಎಂದು ಪಚಯಿಸಿ]

ಲತೆಯಂ ತತ್ಕರಳಾಕ್ಷಿಯಂಗಮೆನುತುಂ ನೀರೇಜಪತ್ರಂಗಳಂ
ಸತತಂ ಕನ್ನೆಯ ನೇತ್ರಯುಗ್ಮವೆನುತುಂ ಮತ್ಸ್ಯಾಳಿಸಂದೋಹಮಂ
ಮತಿಗೆಟ್ಟಾಕೆಯ ಕುಂತಳಂಗಳನುತುಂ ನಾನಾ ಪ್ರಕಾರಂಗಳಿಂ
ಸುತೆಯಿಂದಾವನಮೆಲ್ಲಮಂ ಮನದ ನೋವಿಂ ನಾಡೆಯುಂ[1] ನೋಡಿದಳ್ ॥ ೨೨೯

ಅಂತು ದುಃಖಾಗ್ನಿಯಿಂ ಬಂದು ಪೋಗಿ ಪಚಯಿಸುವಂಗಮತಿ
ಯುಮಂ ಪ್ರಿಯದತ್ತಸೆಟ್ಟಿಯುಮಂ[2] ವರದತ್ತಭಟ್ಟಾರಕರ್ ಬಂದು
ಸಂತೈಸಿ[3] ಧರ್ಮಮನಿಂತೆಂದು ಪೇಳ್ದರ್:— ೨೩೦

ಸುರಗಜೇಂದ್ರಮೆ ವಾರಣಂ ಪಿಡಿವಾಯುಧಂ ವೆವಜ್ರನು
ಚ್ಚರಿಸುರಾಳಿಯೆ ಸಂದ ಜೀವಿತದಾಳ್ಗಳಿರ್ಕೆಯ ಕೋಟೆಯೊ
ಪ್ಪಿರೆ ನೆಗಪ್ಪೆಯ ಸ್ವರ್ಗವಿಾದೊರೆಯೂರ್ಧ್ವಲೋಕದ ಚಕ್ರಿಗಂ
ಮರಣವಾಗದೆ ಮಾಣದೆಂದೊಡೆ ಗೆಲ್ವನಾವನೊ ಮೃತ್ಯುವಂ ॥ ೨೩೧

ನರರುಂ ಖೇಚರರುಂ ಸುರಪ್ರತತಿಯುಂ ಪೂರ್ಣಾಳ್ವಸಂಗೆಯ್ವರು
ರ್ವರೆ ಷಟ್ಖಂಡಮಿಭಾಳಿಗಂ ಕುದುರೆಗಂ ಸ್ತ್ರೀಸಂಕುಳಕ್ಕಂ ನಿಜಾ
ದರದಿಂ ವೇರೆಗಳಿಲ್ಲಿನಿಪ್ಪಧಿಕಲಕ್ಷ್ಮೀವಲ್ಲಭಂ ಚಕ್ರಿಗಂ
ಮರಣಂ ಬಾರದೆಮಾಣದೊಡುಚಿತವರ್ಗಿಲ್ವನ್ನರಾರ್ ಮೃತ್ಯುವಂ ॥ ೨೩೨

---

1 ಮನದೊಳಗಳ್ನಡೆಯುಂ(ಗ)
2 ನೋವಿಂ ಬಿಬ್ಬನೆ ಬಿರಿದ ಬಂಧುಗಳಿನುಂ ವರದತ್ತ(ಗ)
3 ಸಂಬೋಧನಾರ್ಥಂ ಧರ್ಮ (ಕ)

ಎಂಬುದುಮವರ ವಚನವುಂಬಮ್ಮೆತದಿಂ ತಮ್ಮ್ಗೆ ದುಃಖಾಗ್ನಿ [ನಂದೆ ಕೆಲವಾನುಂ ದಿವಸಂ ಪೋಗೆ ಪ್ರಿಯದತ್ತಸೆಟ್ಟಿ ಮಗಳಾಡುವೆಡೆಗಳಂ ನೋಡಿ ಕಡುನೋವಿಂ ಸೈರಿಸದುಮ್ಮಳಿಸಿ ನಂಟರ್ಗಱಿಪಲೊಲ್ಲದಾಪುರದಿಂ ಪೊಱಮಟ್ಟು ಕತಿಪಯದಿನಂಗಳಿಂದಯೋಧ್ಯೆಗೆ ಬಂದು ಜಿನೇಂದ್ರದತ್ತಸೆಟ್ಟಿಯು ಮನೆಯುಂ ಪೊಕ್ಕು ತನ್ನ ತಂಗೆಯಪ್ಪ ವೆಸುದೇವಿಗಮನಂತವುತಿಯ ಪ್ರಪಂಚಮುಂ ಪೇೞ್ವುದುಂ, ಎಸೞಿ

ತೊಟ್ಟನೆ ಕೊಳ ಕೇಳ್ದ ಮನಂ
ಗೆಟ್ಟು ಮಹಾದುಃಖದಿಂದವಿರಲಾಱದೆ ಬಾ ।
ಯ್ವಿಟೊಟ್ಟಳಱಿ ನೊಂದು ಸೈರಣೆ
ಗೆಟ್ಟಱ್ತಿಳ್ನನೆದು ನೆನೆದು ಕನ್ನೆಯ ಗುಣಮುಂ ॥ ಎಸೞಿಳ

ಅಂತು ದುಃಖಾನಳಂ ಸುಡೆ ಕಡುನೋವಿಂದಬುತ್ತುಮಿರ್ಪ ತಂಗೆಯುಂ ಧರ್ಮಶ್ರವಣದಿಂದೆಂತಾನುಂ ಮಾಣಿಸಿ [1] ಮಱುದಿವಸಂ ದೇಹಾರಕ್ಕೆ ದೇವರಂ ಕಾಣಲೆಂದು ಬಂದು ದೇಹಾರದ ಮುಂದಣಾ ॥ ಎಸೞಿಱ

ಸುರಮಹೀರುಹದೋಳಿಯಿಂ ಸಹಕಾರಭೂಜನಿಕಾಯದಿಂ
ಸರಸಿಜಾಕರದಿಂ ಲತಾಭವನಂಗಳಿಂ ಧ್ವಜದಿಂ ಫಲೋ
ತ್ಕರದಿನಿಂದ್ರವಿಮಾನದಿಂ ಹರಿಚಂದನಂಗಳ ಜೊಂಪದಿಂ
ಸುರನಗಂಗಳ [2] ಪಂಕ್ತಿಯಿಂದೆಸೆದಿರ್ದ ಪೂವಿನ ಮಾಲೆಯಿಂ ॥ ಎಸೞಿಟ

ರಮಣೀಯಮೆಪ್ಪ ರಂಗವಲಿಯುಂ ಕಂಡೀ ಹಸ್ತಕೌಶಲಮನಂತ ಮತಿಗಕ್ಕುಮುದರ್ಗಾಗದ [3] ಕಾರಣಮಿಲ್ಲಿರ್ಪಾಕೆಯೆ ನಿಕ್ಕುವಮನಂತ ಮತಿಯಕ್ಕುವೆಂದು ನೋಡಲ್ಕೆ [3] ಎಸೞಿಟ

---

1 ದುಃಖಾಗ್ನಿ ಮುಗ್ಗೆ ಕೆಲವಾನುಂ ದಿವಸಂ (ಗ) 2 ಘನಂಗಳ ಪಙ್ಕ್ತಿ (ಕ)

3 ರಂಗವಲ್ಲಿಯುಂ ಕಂಡು ವಿಸ್ಮಯಂ ಬಟ್ಟುವೆಲ್ಲಮುಕ್ಕನ ಕೈದಾಗೆಂದು ಮನದೊಳ್ ಬಗೆಯುತ್ತುನೊಳಗಣ್ಗೆ ಪೋಗಿ ದೇವರಂ ಕಂಡು ಬಂದಿಸಿ ಮನೆಗೆ ವಂದು ರಸಾಯನವಮೃತದ ದೊರೆಯೆಂಬಾಹಾರಮನುಂಡು ಕೈಗರ್ಚಿಕೊಂಡು ಪಾಸಿನ ಮೇಲೆ ಕುಳ್ಳಿರ್ದ ಕಣ್ಣನೀರ್ಗಳಂಗೆನೆಗೆ ಸುರಿದು, ಭೋರೆಂದು (ಕ). ಈ ಹಸ್ತಕೌಶಲ್ಯಂ ತಪ್ಪದನಂತಮತಿಯದಾಗಲೆ ವೀಳ್ಕುವೆಂದು ನೋಡಿ ನೋಡಿ (ಗ)

ಭೋರೆಂದು ಸುಯ್ದು ಮನದೊಳ್
ದೂರಿಸಿ ಸಂಬಳಿಸಿ ಮಱುಗಿ ಚಿಂತಿಸಿ ನೆನೆದಂ ।
ಭೋರುಹಮುಖಿಯಂ ಮನ್ಮಥ
ವಾರಣಗಮನೆಯನನಂತಮತಿಯುಂ ಸುತೆಯುಂ ॥ ೦೫೪

[ಅಱುತಿಪರ್ಣ್ಣನಂ ವೆಸುದೇವಿ ಕಂಡು ನೀವಿದೇಕಟ್ಟಿಪಿರೆಂದು ಬೆಸಗೊಳ್ವುದುಂ, ಪ್ರಿಯದತ್ತಸೆಟ್ಟಿಯೆಂದನಿಂದಾನುಂಡೂಟಮುಂ ನಿಮ್ಮ ದೇಹಾರದ ಮುಂದಣ ರಂಗವಲಿಯುಮನಂತಮತಿಯು ಹಸ್ತಕುಶಲತೆಯುಂ ಪೊಲ್ತುವಪ್ಪುದಱಿಂ ಮಗಳಂ ನೆನೆದಱಿಲಾಯ್ತೆಂಬುದುಂ ದೇಹಾರದೊಳಿರ್ದ ಕುಮಾರಿಯನೊಡಗೊಂಡು ಬಂದು ತೋರ್ಪುದುಂ,] [1] ೦೫೫

ಸುತೆಯಪ್ಪುದನಱಿಮು ಮಹೋ
ನ್ನತಿಯಿಂ ದುಃಖಾಗ್ನಿ ಪೋಗೆ ಮನದೊಳ್ ಲೋಕ ।
ತ್ರಿತಯಮನಾಳ್ದಂತೆ ವಣಿ
ಕ್ಪತಿ ಬರೆತಗೆದಪ್ಪಿಕೊಂಡು ಮೋಹೋದಯದಿಂ ॥ ೦೫೦

[ತೊಡೆಯನೇಱಿಸಿಕೊಂಡು ಕದಪಂ ಕರ್ಚಿ ಬಡವೆಂಗೆ ಕಡಾರಂ ಕೈಸಾರ್ದಂತಾನುಂ, ತಿಱುದುಂಬವೆಂಗೆ ರಾಜ್ಯಂ ದೊರೆಕೊಂಡಂತಾನುಂ ಮಗಳಂ ನೋಡಿ ಪಿರಿದಪ್ಪ ಸಂತೋಷದಿಂ, ೦೫೧

ವನಜಾನನೆ ನಿನ್ನಂ ಕಂ
ಡೆನಗೀಗಳ್ಮನದ ನೋವು ಪೋದುದು ಮುನ್ನಂ ।
ಮನಕತದಿಂ ಕಣ್ಗೆಟ್ಟವೊ
ಲನವರತಂ ಬೆಂದು ನೊಂದು ಮಱುಗುತ್ತಿರ್ದೆಂ ॥ ೦೫೨

ಮಗಳೀ ನೀನಿಲ್ಲದೆ ಮನ
ಬಗೆವೆಂದೆನಗಟ್ಟ ತಿಂಬ ಪಱುವಾದುದು ನೋ ।

---

[1] ಬಳಿಗೆ ಪೊಕ್ಕು ಸುಚಿತ್ತದಿಂ ನೋಡುತ್ತುಮಿರ್ದು (ಗ)

ಮಗಣಿತಮಪ್ಪುದಱಿಂದ
ಲ್ಲಿಗೆ ದುಃಖಕ್ಕಂಜಿ ಪಳ್ಳಿ ಬಂದಾನಿರ್ದೆಂ ॥ ೬೪೩

ಎಂದು ತನ್ನ ದುಃಖಮನಱಿಯಿಯುಂ ತೆಱೆಯಿಯುಂ ಪೇೞ್ದು ದುರ್ಮನಂತಮತಿಯುಂ,

ಮಾಣದೆ ಕಡುನೋವಿಂ ಕ
ಣ್ಗಾಣದೆ ಬಾಷ್ಪಾಂಬು ನೆಗೆಯೆ ಸೈರಣೆಗೆಟ್ಟ ।
ಹ್ಲೂಣಗುಣೆ ಕುಟಿಲಕುಂತಳ
ಜಾಣೆ ಮನೋಭವಮದೇಭಗಾಮಿನಿ ಬೇಗಂ ॥ ೬೪೪

ತನ್ನಂ ಕುಂಡಲಮಂಡಿತಖೇಚರನೊಯ್ದು ದು ಮೊದಲಾಗೆ ಜಿನೇಂದ್ರದತ್ತನ ದೇಹಾರಮಂ ಪೊರ್ದಿದುದುಮಂ ನಷ್ಟುವೆಡೆಯೊಳಾದ ತತ್ಪ್ರಪಂಚಮೆಲ್ಲಮುಮನುಂ ಪೇೞ್ದ ಸವಿಸ್ತರಂ ಕೇಳ್ದ ಪ್ರಿಯದತ್ತಸೆಟ್ಟಿ ಜೆಱಿಗಾಗಿ,

ಪಿರಿದಪ್ಪಾಪತ್ತೆಲ್ಲವ
ನರವಿಂದವಳಾಕ್ಷಿ ಬಿದಿರ ಗಂಟಂ ಕಡಿವಂ ।
ತಿರೆ ಕಡಿದು ಬರ್ದುಕಿ ಬಂದೈ
ದೊರೆ ನಿನಗಾರ್ಪುಣ್ಯದೇಱ್ಗೆಯೊಳ್ಪೇೞ್ಮಗಳೇ ॥ ೬೪೫

ಎಂದು ಮಗಳ ದುಃಖಮನಾಱಿನುಡಿದು ಪಿರಿದುಮುತ್ಸಾಹದಿಂ ಜಿನಾಭಿಷೇಕಪೂಜೆಯುಂ ಮಾಡಿ ಪತ್ತೆಂಟುದಿವಸಂ ಪೋದಿಂಬಱಿಕ್ಕಂ ಬಂದುದಿವಸಂ ಮಗಳಂ ನೋಡಿ,

ಇನ್ನಿರಲಾಗದು ಜವ್ವನ
ಮುನ್ನೆಱಿದುದು ಮೃಗನಿಭಾಕ್ಷಿಗಂಬುಜಮುಖಿಗೆಂ ।
ದುನ್ನತಚಿತ್ತಂ ಮದುವೆಯ
ನಿನ್ನೀಕ್ಕೆಗೆ ಮಾಡವೇೞ್ಕುಮೆಂದುತ್ಸವದಿಂ ॥ ೬೪೭

ತನ್ನ ಸೋದರಳಿಯಂ ಶ್ರುತಸಾಗರಂಗೆ ಕುಡಲ್ವೇಡಿ ಬಂಧುಗಳ್ಗಲ್ಲರ ಬಱಿಗಟ್ಟು ವಿವಾಹಮಂಟಪಮಂ ತಳಿರ ತಾವಣಮುಮಂ ಮಾಡೆ,

ಪೊಳವೆ ದುಕೂಲದ ಗುಡಿಯುಂ
ಮುಳಯಜದೆಳದಳಿರ ತೋರಣಂಗಳ್ ಮುಕ್ತಾ ।
ವಳಿಯುಂ ಪೊಸರಂಗವಲಿಯು
ವಿಳಸಿತವಾಗಿರ್ದವೆತ್ತಲುಂ ತದ್ಗೃಹದೊಳ್ ॥ ೨೫೧

ಮತ್ತಂ ಜಿನಾಭಿಷೇಕಕ್ಕೆ ಬಂದಿಹ್ಷುರಸ ಕ್ಷೀರ ದಧಿ ಘೃತಕುಂಭ ಕಾದಿ ಘಟಂಗಳುಮಂ ಬಳಗಜವಳಿಗೆಂದು ಬಂದ ಚೀನದುಕೂಲದ ಪಾರಾವಳಿಯ ಪಲವುದಿಂಡುಗಳುಮಂ ಯಾಚಕಕೋಟಿಗೆ ಜೀಡಿದುದ ನೀಯಲೆಂದು ಪೂಜಿಸಿದ ಪೊನ್ನರಾಶಿಯುಮನನಂತಮತಿ ನೋಡಿ ತಂದೆ ಯನಿದೇನೆಂದು ಬೆಸಗೊಳ್ವುದುಮಿಂತೆಂದಂ :— ೨೫೨

ಪಿರಿದುತ್ಸವದಿಂದುಜ್ಜೀ ಜೇಂ
ಕರಿಸಿ ಬುಧರ್ನಚ್ಚಿ ಮುಚ್ಚಿ ಬಣಿ ಸ್ಕರಮಾ ।
ದರದಿಂ ನಂಟರ್ಜೀಯೆನೆ
ಸರಸಿಜಮುಖಿ ನಿನ್ನ ಮದುವೆಯುಂ ಮಾಡಿವಪೆಂ ॥ ೨೫೩

ಎಂಬುದುಮನಂತಮತಿ ಮುಗುಳ್ನಗೆ ನಕ್ಕು ತಂದೆಗಿಂತೆಂ ದಳ್ :—] [1] ೨೫೪

ವಿಮಳಜಿನೇಂದ್ರಸಾಕ್ಷಿಯೊಳು ನೀಪೆನಗಂ ಕಿಱಿಯಂದು ವಿಕ್ಕ ಸಂ
ಯಮಜಲರಾಶಿಯುಪ್ಪ ವರದತ್ತಮುನೀಶ್ವರರಿಂದೆ ಬ್ರಹ್ಮಚ
ರ್ಯಮನನುರಾಗದಿಂ ಕೊಡಿಸಿದಿರ್ಮಱೆಯಲ್ಲಿ ಮಗಾಗದಾನುಮೆ
ಶ್ರಮದೊಳ ತಾಳ್ದಿದೆಂ ಮುದದಿನೀಯೆಡೆಯೊಳ್ಕಿಡಿಸಲ್ಕ ತಕ್ಕುದೇ ॥

[ಎಂಬುದುಮೊಗಳ್ ವೈಶ್ಯಕು
ಲಾಂಬರರನಿ ಮಗಳ ಮೊತಿನಂವಕ್ಕೆ ಕರಂ ।

---

1 ಸಂತೋಷಂಬಟ್ಟಪ್ಪುದುಂ, ಕುವಲಯಾವಿದ್ಯಾಧರನಮೊಯ್ದುದು ಮೊದಲಾಗಿ ಜಿನೇಂದ್ರದತ್ತನುಂಕಂಡಲ್ಲಿ ಪರಮಾದ ಪ್ರಪಂಚಮುಲ್ಲವುಂ ಪೇಳ್ವುದಮೆಲ್ಲರುಮುಟಿದು ಪರಮಸ್ನೇಹಿತರಾಗಿ ಪತ್ತೆಂಟುದಿನಸಂ ಸೋದಿಂಬಳಿಯುಮನಂತಮತಿಗಂ ವಸುದೇವಿಯ ಮಗನಪ್ಪ ಶ್ರುತಸಾಗರಂಗಂ ಮದುವೆಯಂ ಮಾಡಲೆಂದಿರ್ದುದುಮನಂತಮತಿ ಕಂಡಿಂತೆಂದಳ್ (ಗ)

ತಾಂ ಬೆಱಗಾಗಿ ಮತಾನೋ
ವಿಂ ಬೈದುಂ ಸುಯ್ದು ವಿಧಿಯು ಮೆನದಱಲಿಂದಂ ॥ [1] ೨೫೬

ನೋಡ ಮರುಳ್ಮಗಳ ದಿಟಂ
ಮಾಡುವುದೆಗ್ಗಲ್ತಿ ನಿನ್ನ ನಟ್ಕಿರೊಳಾಂ ಮು ।
ದ್ದಾಡಿಸೆ ಮುನಿಸನ್ನಿಧಿಯೊ
ಳ್ಳಕ್ಕಿದುದಂ ಛಾಂದಸಿಕ್ಕೆಯೊಂದೊದವಿಂದಂ ॥ ೨೫೭

ಂಬುದುಮೆನಂತಮತಿ ತಂದೆಗಿಂತೆಂದಳ್ :— ೨೫೮

ತಿರಿದುಂಬಂಗೆ ಸಿಧಾನಂ
ದೊರೆಕೊಳ ಕಡೆಗಣಿಸಿ ಪೋದೊಡಂ ಸಂಸೃತಿಯೊಳ್ ।
ತಿರಿವ ನರಂಗಂ ಧರ್ಮಂ
ದೊರೆಕೊಳ ಕಡೆಗಣಿಸಿ ಬಿಟ್ಪೊಪಂ ಸುಖಮುಂಟೇ ॥ ೨೫೯

ಕುರುಡಂಗೆ ಪುಣ್ಯದಿಂ ಕ
ಣ್ದೊರೆಕೊಳ್ವವೊಲೀಮಹೋಗ್ರಸಂಸಾರದೊಳಂ ।
ವರಧರ್ಮಮದೆಂತಾನುಂ
ದೊರೆಕೊಂಡೊಡೆ ನೆಗಟಿಲೊಲ್ಲದಾತನೆ ಗಾಂಪಂ ॥ ೨೬೦

ಸನ್ನುತಜಿನಧರ್ಮಂ ನೆಱೆ
ತನ್ನಿಂದಂ ತಾನೆ ಬಂದೊಡೊಲ್ಲದೆ ಬಿಡುವಾ ।
ತಂ ನೆಱೆ ಪೋಲ್ಕುಂ ಜಗದೊಳ್
ಪೊನ್ನಂಬಂ ನೀರೊಳಚ್ಚು ಕಿಡಿಸುವ ಮರುಳಂ ॥ ೨೬೧

ಸದಮಳಧರ್ಮಂ ದೊರೆಕೊಳ
ಲದನೊಲ್ಲದೆ ಮತ್ತ ಬಿಡುವ ಜಡಮತಿ ಪೋಲ್ಕುಂ ।
ಮುದದಿಂದೋಲಗದೊಳ್ಪಡೆ
ದುವನಿಂಭಿನೊಳಿರಿಸುವಲ್ಲಿ ಕಿಡಿಸುವ ಮರುಳಂ ॥ ೨೬೨

---

[1] ಎಂಬುದುಂ ಪ್ರಿಯದತ್ತಸಟ್ಟಿ ಬೆಱಗಾಗಿ ವಿಧಿಯಂ ಬೈದು (ಗ)

ಅದುಕಾರಣದಿಂ ಧರ್ಮದಿನನಂತಸುಖವುಕ್ಕುಮೆಂಬುದಂ ಅಧರ್ಮದಿನನಂತದುಃಖವುಕ್ಕುಮೆಂಬುದಂ ಸಂಸಾರಸುಖಮೆಲ್ಪುಮೆಂಬುದುಂ ನೀವಿಂಬಾಗಿ ಬಲ್ಲಿರಿಂತುಬಲೊಡಮೆನ್ನ ಪೇಲಣ ಪೂಹದಿಂದೀಮೊತಂ ನುಡಿವಿರಾದೊಡಂ ಧರ್ಮಾಭಿಪ್ರಾಯಮೆನಱಿವ ಸೀವವಗಿದಂ ನುಡಿಯಲಾಗದೆಂಬುದುಂ ಮಗಳೊಳಾದ ಕಡುಪೇಹದಿಂ ಪ್ರಿಯದತ್ತ ಸೆಟ್ಟಿ ಇಂತೆಂದಂ :— ೧೬೩

ವೆ ದಗಜಗಾಮಿನಿ ಮಾಣ್
ಕ್ಯದ ಮುತ್ತಿನ ಪೊನ್ನ ಪದ್ಮರಾಗದ ವ್ಯತೂ ।
ರ್ಯವ ಜಿನಚೈತ್ಯಾಲಯಮುಂ
ಮುದದಿಂದಂ ಪಲವನರ್ತಿಯಿಂ ಮಾಡಿಸು ನೀಂ ॥ ೧೬೪

ಪೊಂಗಳಸದಿಂದೆ ಪಲವು ಜ
ಪಂಗಿನ ಪೂವಾರದಿಂದಪೊಪ್ಪುವ ಜಿನಗೇ ।
ಹಂಗಳನನೇಕಮಂ ಪಲ
ವಂ ಗಱಿಪದೆ ಮಾಡಿಸರ್ತಿಯಿಂ ವನಜಮುಖೀ ॥ ೧೬೫

ಪಾಲಿಂದಂ ಮೊಸರಿಂದಂ
ಮೇಲೆನಿಸುವ ತುಪ್ಪದಿಂದಮೆಪುಗೆಗಳಿಂವಂ ।
ಲೀಲೆಯೊಳ ಮುನಿಕದಂಬಮ
ನೋಲಾಡಿಸು ಮಗಳ ನಿನ್ನ ಕಣ್ಣಾಣೆವಿನೆಗಂ ॥ ೧೬೬

ವೆದುವೆಯಾಗಲೆ ವೇಱ್ಕುಮೆಂದು [ಮೇಲುದಂ ಪಾಸಿ] ಬೇಪುದುಂ [ಅನಂತಮೆತಿ ನಕ್ಕು] ನೀಂ ಮುಂ ಪೇೞ್ದಿನಿತುಂ ಪುಣ್ಯಕ್ಕೆ ಕಾರಣಮೆಕ್ಕುಮೊದೊಡಂ ಎನ್ನ ಕೈಕೊಂಡ ವ್ರತಮನೇಗೆಯುಂದಂ ಕಿಡಿಸುವೆನೆಲ್ಲಂದು ಮಱುಮಾತಿಂಗೆಡೆಯಿಲ್ಲದಂತು ನುಡಿವುದುಂ, ಪ್ರಿಯದತ್ತಸೆಟ್ಟಿ ಮಗಳ ಪರಿಚ್ಛೇದಮನಱಿದುಸಿಂದಿರ್ದನನ್ನೆಗಂ ಮಾವನಪ್ಪ ಜಿನೇಂದ್ರದತ್ತಸೆಟ್ಟಿಯುಮತ್ತೆಯಪ್ಪ ಸುದತ್ತೆಯುಂ ಬಂದಿಂತೆಂದರ್ :— ೧೬೭

ಬೇಡ ಕಡುಮೊರ್ತನಮಂ
ಮಾಡದೆ ಪಿಡಿಯಚ್ಚು ಪಿಡಿದು ಮುನ್ನಿನ ಮಾತಂ ।
ನೋಡದೆ ಛಲಮಂ ಕೈಕೊಂ
ಡಾಡದೆ ನೀಂ ಮಗಳ ಮದುವೆಯಾಗಲೆ ವೇಟ್ಕುಂ ॥ ೦೬೪

ಎಂಬುದುಮೆನಂತಮತಿ [ಮೋವೆಗಮೆತ್ತೆಗಂ] ಇಂತೆಂದಳ್ :—
೦೬೫

ಸಾರಮೆಸಾರಮಿದೆಂದು ವಿ
ಚಾರಿಸಿ ಕೈಕೊಂಡು ಕಿಡಿಸಲಾರ್ಪುದೆ ಚಿಃ ನಿ ।
ಷ್ಕಾರಣಮದಱಿಂದನ್ಯರ್
ಬಾರಿಸೆ ಮಾಣ್ಬಂದು ಮೋವ ಕಂಚಿನ ದನಿಯೇ ॥ ೦೬೬

ಪಿಡಿದೀ ಸುವ್ರತಮಂ ಮು
ತ್ತೆಡೆಯೊಳ್ ಕಿಡಿಸುವೆನೆ ಕಿಡಿಸಲಱಿಯೆಂ ಬಗೆವೆಂ ।
ದುಡುವಿನ ನಾಲಗೆಯಂತಿರೆ
ದೃಢವ್ರತಗೊಂದಲ್ಲದೆಂಡುನಾಲಗೆಯೊಳವೇ [1] ॥ ೦೬೭

ಎಂಬುದುಮವರ್ ಮಾತುಗುತದಿರೆ ಕುಮೊರಿ ಪ್ರಿಯದತ್ತಸೆಟ್ಟಿ ಮೊದಲಾಗೆ ಬಂಧುಗಳಲ್ಲರುಮನೊಡಂಬಡಿಸಿ [ಜಿನಪೂಜೆಯಂಮಾಡಿ] ವರದತ್ತಭಟ್ಟಾರಕರ ಗುರುಗಳಾಗೆ ಕಮಳಶ್ರೀಗಂತಿಯರಲ್ಲಿ ಜಿನ ದೀಕ್ಷೆಯಂ ಕೈಕೊಂಡು, ೦೬೮

ಮನದೊಳರತ್ಯೆಯ ಸುಖಮಂ
ನೆನೆಯದೆ ಜಿನಚರಣಕಮಲಮಂ ನಂಬುಗೆಯಿಂ ।
ದನವರತಂ ಮೆಱೆಯದೆ ಭೋ
ಕನೆ ಸೆಡೆಯದೆ ತಪದೊಳಾದ ನೋವಿಂಗಿನಿಸಂ ॥ ೦೬೯

ಪೆಱವೆಱಸುಖಮಂ ಮನದೊಳ್
ಮೆಱೆದುಂ ಚಿಂತಿಸದೆ ಶಂಕೆಯಿಂ ವಿಘ್ನತ್ವ ।

---

[1] ದೃಢವ್ರತಂಗತ್ತೆಯಿರಡು (ಗ)

ಕ್ಕೆ ಅಗದೆ ಮುನಿಸೊಸಗೆಗಳಂ
ತೊಱೆದು ಕಷಾಯಂಗಳಂ ಮನಂಬಿಡೆ ಬಿಡುತುಂ ॥ ೦೭೪

ಪರಮೋಗಮಮೆಂ ಕರ್ಮದ
ಪರಿಣತಿಯುಂ [1] ಮುನ್ನವೊಳ್ಪಿನಿಂ ನೆಗಳ್ದ ಮಹಾ ।
ಪುರುಷರ ಕಥೆಗಳುಮಂ ತಾಂ
ಸ್ಮರಿಸುತ್ತುಂ ಪೊಬ್ಬುಗಳಯುತೀ ತೆಱದಿಂದಂ ॥ ೦೭೫

ಖಳಕರ್ಮರಾಜನೊವವಿದ
ಬಳವಂ ಕೆಡಿಸಲ್ಕೆ ವೇಡಿ ತೊಟ್ಟರ್ದಾ ಕ ।
ತ್ತಳವಂ ಪೋಲ್ತುದು ನೋಡಲ್
ಮಳವೋರಂತಮದರ್ ಕೂಡೆ [2] ಸರ್ವಾಂಗಮುಮೆಂ ॥ ೦೭೬

ಆಂ ಬೇಱೆ ದೇಹಮೆಬ್ಪೊಡೆ
ತಾಂ ಬೇಱೆಂದೆಂಬ ನಿಶ್ಚಯಂ ಮಿಗೆ ಪೋಹಾ ।
ಡಂಬರಮನುಚಿದು ತನುವಂ
ಸಂಬಲಿಸದೆ ಪೋಹ್ಪಸುಖಮನಾಪೇಕ್ಷಿಸುತುಂ ॥ ೦೭೭

ಅಱುಯೊಡಲಂ ನಂಬದೆ ಮಿಗೆ
ಯುಱುಸೊಗಮುಂ ಪಗೆಯುಂ ಕಂಡ ತೆಱದಿಂ ಕಾಣುಂ । [3]
ತ್ತಱಲಿಂ ಪಲವುಪವಾಸಂ
ಗಳನೋನೆದೆ ದೇಹಮಂ ಕರಂ ಕುಸಿಯಿಸುತುಂ ॥ ೦೭೮

ತಪದೊಳುತ್ತರೋತ್ತರಂ ನೆಗಳ್ದು ಕಡೆಯೊಳ್ ಸಮಾಧಿವಿಧಿಯಿಂ ಶರೀರಮಂ ಬಿಸುಟು ಪನ್ನೆರಡನೆಯ ಸಹಸ್ರಾರಕಲ್ಪದೊಳ್ ಪದಿನೆಂಟು

---

1 ಜಿನಪದ ಸರಸಿಜಮಂ (ಕ)

2 ಪತ್ತಿರ್ದುತನ್ಮಳವೋರಂತಮದರ್ ಕೂಡೆ (ಬ)
ಪೊತ್ತಿರ್ದುದು ತಾಂ ಮಳವೋರಂತಡದರ್ ಕೂಡೆ (ಕ)

3 ಅಳಯೊಡಲನಂಬಿಪುಂ ಬಿಡದಳಿವೆನಿತಪ್ಪುಖಮನೆಂದು ಪಥಯಾ ಕಂಡಂ ತಳಲು (ಗ)

ಸಾಗರೋಪಮಾಯುಷ್ಯಕ್ಕೊಡೆಯಂ ಸುಕಾಂತನೆಂಬ ಮಹತ್ತರದೇವನಾಗಿ ಪುಟ್ಟಿದಳಿಂತು, ೨೬೯

ದುರಿತವಿರೋಧಿಸೇನೆಯನಡರ್ತಿಱಿವಗ್ಗದ ಪೋಹ್ಮಲಹ್ಮಿಯೊಳ್ನಲೆವೆನಪೋಪೆಂಬ ಪುರುಷಂ ಮನದೊಳ್ತೊಡರಿಲ್ಲವಾಗಳುಂ [1]
ಪರಮಜಿನೇಂದ್ರಾಗಮದೊಳ್ ಕಾಂಕ್ಷಿತನಪ್ಪುದು ಮತ್ತಮಲ್ಲಿಯುಂ
ಪರಿಹರಿಸಿರ್ದ ತತ್ವಮನೆ ಭಾವಿಸುತುಂ ಪರಮವ್ರತಂಗಳಂ ॥ ೨೭೦

[ಚತುರ್ಗತಿಗಳೊಳಾವ ಸುಖವುಮಂಬನಿತುಮಂ ಬಿಟ್ಟು ಮೋಕ್ಷಸುಖಮನೆ ಬಯಸುವುದೆಂದು ನಿಷ್ಕಾಂಕ್ಷೆಯ ಕಥೆಯಂ ಗಣಧರದೇವರ್ ಪೇೞ್ದರ್] [2] ೨೭೧

ಪಿರಿಯಂ ಸಂತುಷ್ಟನಾವಂ ಮದನಕರಭಭೀರುಂಡನುದ್ಯದ್ಗುಣಂ ಮೆಂ
ದರಧೈರ್ಯಂ ವಾಗ್ವಧೂವೆಲ್ಲಭನಮಳಯಶೋರಾಶಿ ಸಮ್ಯಕ್ತ್ವರತ್ನಾ
ಭರಣಂ ತ್ರೈವಿದ್ಯಚಕ್ರೇಶ್ವರವಿಮಳಪದಾಂಭೋಜಭೃಂಗಂ ಜಿನತ್ರೀ
ಚರಣಾಲಂಕಾರತೀಕ್ಷ್ಣಂ ಸುಕವಿಜನಮನಃಪದ್ಮಿನೀರಾಜಹಂಸಂ॥ ೨೭೨

ಇದು ನಿಖಿಳದಿವಿಜಪರಿವೃಢಮುಕುಟತಟಘಟಿತನವಮಣಿನಿಕರವಿಲುಳಿತಕಿರಣ
ಚುಂಬನೀಯಮಹಿತಮುಜಿನಚರಣಯುಗಳಸರಸಿರುಹಮಧುಕರ
ನಿರುಪಮಸಮಸಹಜಕವಿಜನಪಥಪ್ರಥನೋದ್ಧಿಹಮುಕುರ ನುತಭುವ
ನುತ ದಿಗಂಬರದಾಸ ನಿರ್ಮಲಕವಿತಾವಿಲಾಸ
ಶ್ರೀಮನ್ನಯಸೇನವೇನವಿರಚಿತಮಪ್ಪ
ಧರ್ಮಾಮೃತದೊಳ್

ದರ್ಶನದ್ವಿತೀಯಾಂಗವ್ಯಾವರ್ಣನಂ

ತೃತೀಯಾಶ್ವಾಸಂ.

---

[1] ತೊಡರಿಲ್ಲದೇಗಳುಂ (ಕ)

[2] ಎಂದು ನಿಷ್ಕಾಂಕ್ಷೆಯ ಕಥೆಯ ಫಲಮುಂ ಮುನಿಕುಂಜರಂ ಪೇೞೆ ಕೇಳ್ದು(ಗ)

ಶ್ರೀನಿರ್ವಾಣಶ್ರೀಗಿದು
ತಾನಗ್ಗದ ತೂಡವೆನಿಪ್ಪ [1] ನಿಷ್ಕಾಂಕ್ಷೆಯನ ।
ತ್ಯಾನಂದದಿನಱಿದಂ ವಿಬು
ಧಾನಂದಂ ಸುಕವಿನಿಕರಪಿಕಮಾಕಂದಂ ॥ ೧

ಅಂತು [ನಿಷ್ಕಾಂಕ್ಷೆಯ ಕಥೆಯಂ ಲೇಸಾಗಱಿದು ಮತ್ತಂ ಗಣಧರಸ್ವಾಮಿಗಳ್ ಮಗಧನಾಯಕಂ ಪೊಡೆವಟ್ಟು ಕೈಗಳಂ ಮುಗಿದು ಮುಂದಣ ನಿರ್ವಿಚಿಕಿತ್ಸೆಯ ಕಥೆಯನೆನಗೆ ನಿಮ್ಮಡಿಗಳಱಿವಂತಾಗೆ ಬೆಸಸುವುದೆಂಬುದುಂ ವೋಕ್ಷಲಕ್ಷ್ಮಿಯ ಲಾವಣ್ಯೋತ್ಕರ್ಷವೆಸಕ ನಿರ್ವಿಚಿಕಿತ್ಸೆಯಸಿಂತೆಂದು] [2] ಪೇೞ್ದರ್:—

ಪದ್ಯದಂತೆ, [ಮುಂಟಿಪದಂತ ದ್ವಾರಬಂಧದಂತೆ] ಶ್ರುತಯಂತ್ರದಂತೆ [ವಸ್ತ್ರ]ದಂತ] ಮುಂದರವಂತೆ ಶ್ರೀಮುಂಚದಂತೆ ರಾಜನೀತಿಯಂತೆ ಧರ್ಮದಂತೆ ದಾನದಂತೆ ದರ್ಶನಮುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಮೆಂಬ ನಾಲ್ಕುಗುಣಂಗಳಿಂ ಕೂಡಿ ಶುದ್ಧಚಿತ್ತದಿಂ ನಡೆವುದು. ೨

ನಿರ್ವಿಚಿಕಿತ್ಸೆಯೊಳಱಿದಾ
ತುರ್ವರೆ ಕೈಕೊಂಡು ಬಣ್ಣಿಸಲ್ಕೆಗಚ್ಚಿ ನರಂ ।
ನಿರ್ವಾಣಪದದೊಳಿರಿಸುವ [3]
ಸರ್ವಜ್ಞ ಶ್ರೀಗೆ ಮೂತ್ತವೊದಲಿಗನಕ್ಕುಂ ॥ ೩

---

[1] ಸೊಬಗನಿಪ್ಪ (ಬ.ಕ)

[2] ನಿಷ್ಕಾಂಕ್ಷೆಯುಂ ಕೇಳ್ದ ಮುಂದಣ ನಿರ್ವಿಚಿಕಿತ್ಸೆಯ ಕಥೆಯಂ ಬೆಸಸಿವೆಂಬುದುಮಿಂತೆಂದು (ಗ) [3] ಪದದೊಳಿರಿಸುಗು (ಗ)

ಅನ್ನೆದಲಿ ಪೆಂಪಂ ಪೇಪ್ಪೊಡೆ:— ೪

[ಭರತಕ್ಷ್ಮಾವನಿತೆಗೆ ಪಂ
ಕರುಹಭವಂ ನಚಿ ಮೆಚಿ ಮಾಡಿದ ಮೀನಿನೂ :
ಪುರಮೆನಿಸಿ ಶೋಭೆಯಿಂದಂ
ಕರವೊಪ್ಪುವುದಿಂದ್ರಕಚ್ಛಿಯೆಂಬುದು ವಿಷಯಂ ॥ ೫

ಆವಿಷಯದೊಳೆ, ೬

ಪೊಱವೊಱಲ ಶೋಭೆಯಿಂ ಸು
ತ್ತಿಱಿದಿರ್ದ ಜಿನೇಂದ್ರಭವನದೋಳಿಗಳಿಂ ಪೆ ।
ರ್ಗೆಱೆಗಳ ಚೆಲ್ವಿಂ ಫಲದಿಂ
ತುಱುಗಿದ ತರುನಿಕರದಿಂದವೊಪ್ಪುವ ವನದಿಂ ॥ ೭

ಅಂತೊಪ್ಪುವುದು ರೌರವಪುರಮೊಪ್ಪುರಮೆನಾಳ್ವನೊದ್ದಾಯನ
ಮಹಾರಾಜನೆಂಬ ಮಹಾಮಂಡಳಿಕನಾತಂ ೮

ಕರಣಿಂದಂಗೆ ಪಯೋಧಿಯನ್ನ ನದಟಿಂ ಮಾಱುಂತು ಕೈಕೊಳ್ಳದಿ
ರ್ದರಿಭೂಪರ್ಗೆ ಗಜಾರಿಯನ್ನ ನಳಪಿಂ ಕಯ್ಯಾಂತ ಮರ್ತ್ಯರ್ಗೆ ಭಾ
ಸುರಕಲ್ಪದ್ರುಮೆದನ್ನ ನೂರ್ಜಿತಯಶಂ ಭೂಪೋನ್ನತಂ ಧೈರ್ಯಮಂ
ದರನುದ್ಯದ್ಗುಣವಂತರಾಜರ ಮನೋಜಂ ಭೂರಿಭೂವಿಜಯಾಯುತಂ ॥ ೯

ಪರಮಜಿನಪೂಜೆಯಂ ನಿ
ರ್ಭರತರಭಕ್ತಿಯೊಳ್ ಮಾಡುವೆಡೆಗೀತನೊಳಾ ।
ಭರತೇಶ್ವರನುಂ ದೊರೆಯೇಂ
ದೊರೆಯಾಗಿರನೆಂದು ಪೊಗಟ್ಟು ಕೊನೆವ್ರದು ಲೋಕಂ ॥ ೧೦

ಸೊಗಯಿಪ ದರ್ಶನದೊಳ್ಸಲೆ
ಮಿಗಿಲೆನಿಸ ಸನತ್ಕುಮಾರಚಕ್ರಿಗಮಂತಾ ।
ಸಗರಾಧಿಪಂಗವೀತನೆ
ಮಿಗಿಲೆಂದೋರಂತೆ ಪೊಗಟ್ಟುತಿರ್ಪ್ರದು ಭುವನಂ ॥ ೧೧

ನೆಗಲ್ದಿ ಚತುರ್ವಿಧದಾನ
ಕ್ಕಗಣಿತಗುಣನೀತನಿಂದೆ ಶ್ರೇಯಾಂಸಂ ತಾಂ।
ಮಿಗಿಲಿಲ್ಲವೆಂದು ಪೊಗಟ್ಪುದು
ಜಗತೀಚಕ್ರಂ ನಿರಂತರಂ ಪದಪಿಂದಂ ॥ ೧೦

ಅಂತು ಪೊಗಟ್ಕೆವೆತ್ತ ಒವ್ಪಾಯನಮಹಾರಾಜಂಗೆ ಪಟ್ಟದರಸಿ ಪ್ರಭಾವತಿಯೆಂಬಳ್ ॥ ೧೩

ವರಗುಣದೊಳ್ಪರೇಂದ್ರವಧುವಿಂಗೆಸೆವಿರ್ಪಡಿ ಜೈನಭಕ್ತಿಯೊಳ್
ವರವಧುವೆಪ್ಪ ರೋಹಿಣಿಗೆ ಮುಮ್ಮಡಿ ರೂಪಿನೊಳಬ್ಜವಾಸೆಗಂ
ಪರಿಣತರಪ್ಪವರ್ಬಗೆದು ನೋಡ್ಪೊಡೆ ನಾಲ್ಮಡಿ ಶೀಲದೇಪ್ಪೆಯೊಳ್
ಧರಣಿಜೆಗಂ ಸಹಸ್ರಮೆಡಿ ಭಾವಿಪೊಡಗ್ಗಳಮೀಧರಿತ್ರಿಯೊಳ್ ॥ ೧೪

ಎನಿಸಿ ನೆಗಟ್ತವಡೆದ ಪ್ರಭಾವತೀದೇವಿ ಮೊದಲಾಗೆಣ್ಣಾಸಿರ್ವರರ ಸಿಯರೊಳ್ ಕೂಡಿ ಸುಖಸಂಕಥಾವಿನೋದದಿಂದೊದ್ದಾಯನಮಹೀವಲ್ಲಭಂ] [1] ರಾಜ್ಯಂಗೆಯ್ಯುತ್ತುಮಿರ್ದುದುಮೊರ್ಮೆ ಸೌಧರ್ಮಕಲ್ಪದೊಳ್ ಸೌಧರ್ಮೇಂದ್ರಂ ಸುಧರ್ಮೆಯೆಂಬ ಸಭೆಯೊಳ್ [2] ೧೫

[ಸುರವಿಳಾಸಿನಿಯರ್ ಮನೋಹರರೂಪಿಯರ್ ಗಜಯಾನೆಯರ್
ತರಳಲೋಚನೆಯರ್ ವಿದಗ್ಧೆಯರಿಕ್ಕೆ ಚಾಮರಮೆಂ ಸುರರ್
ಸುರುಚಿರಾಭರಣಾಂಗಳೊಪ್ಪೆ ಮನೋಜಸನ್ನಿಭನರ್ತಿಯಿಂ
ನೆರೆದು ಕುಳ್ಳಿರೆ ಸುತ್ತಲುಂ ರಸಗೀತಮುಣ್ಮೆ ಪೊದಳ್ತ್ತೆಯಿಂ ॥ ೧೬

ಅಂತೋಲಗಂಗೊಟ್ಟರ್ದ ಸುರರಾಜಂಗೆ ಸಮಸ್ತದಿವಿಜನಿಕಾಯಮುಂ [ವಿನಯವಿನಮಿತರಾಗಿ] [3] ಕೈಗಳಂ ಮುಗಿದು ಬಿನ್ನಪಮೆಂದಿಂತೆಂದರ್:— ೧೭

---

1 ಇಂದ್ರಗಚ್ಛೆಯೆಂಬುದು ವಿಷಯಮಾವಿಷಯದೊಳ್ ಸೌರಾಷ್ಟ್ರಪುರಮೆಂಬುದು ಪುರಮುದನಾಳ್ವರಸನೊದ್ದಾಯನ ಮಹಾರಾಜನೆಂಬ ಮುಂಡಳಿಕನಾತನರಸಿ ಪ್ರಭಾವತಿಯೆಂಬಳಂತವರ್ಸುಖಸಂಕಥಾವಿನೋದದಿಂ ರಾಜ್ಯಂ (ಗ)

2 ಸಭೆಯೊಳಿರೆ ಸಮಸ್ತದಿವಿಜ (ಗ) 3 ಪೊಡೆವಟ್ಟು (ಗ)

ನಿರುಪಮಮೆಮ್ಮುಕ್ತಿಶ್ರೀಗಾ
ಭರಣಮಿದೆನಿಸಿರ್ದ ಜೀವಹಿತಮಂ ನುತಮಂ ।
ಪರಮಜಿನಾಗಮಮಮಂ ದೇ
ವರೆ ಬಲ್ಲಿರಿ ಪೆಱರ್ಗಮೆಱಿಯಲೇಂ ವೊಗ್ಗಾಯ್ತೀ ॥ ೧೪

ಅದುಕಾರಣಂ ದೇವರೆಮಗೆ ಸದ್ಧರ್ಮಮಂ ತಿಳಿವಂತಾಗೆ ಬೆಸ ಗಲ್ವೇಱ್ಕುವೆಂಬುದುಂ, ಅಮರರಾಜಂ ಸುಖನಿಧಾನದೀಪವರ್ತಿಯೆನಿಪ ಸದ್ಧರ್ಮಮನಿಂತೆಂದು ಪೇೞ್ದಂ :— ೧೫

ವರಸದ್ಧರ್ಮಮಿ ಜೀವ್ಗೋ
ತ್ಕರಕ್ಕೆ ಶರಣ್ಯವೆಸ್ತುಗಳ್ನಿಶ್ಚಯದಿಂ ।
ಶರಣಿಲ್ಲವೆಂಬುದಂ ವಿ
ಸ್ತರದಿಂದಂ ತಿಳಿದು ಧರ್ಮಮಂ ಪಿಡಿಗೆ ಬುಧಂ ॥ ೧೬

ಪುಸಿವೆವೞಂ ಕೊಲ್ವವೆವರಂ
ಬೆಸಸಿಗಳಂ ಕಳ್ಳರಪ್ಪರಂ ಕಂಡೊಡೆ ಸಂ ।
ಕಿಸುವರ್ ಪುರುಷರ್ ಪಾಪಂ
ವೆಸುಮತಿಯೊಳ್ಕಷ್ಟಮೆಂದು ಸಾಱುವ ತಱದಿಂ ॥ ೧೭

ಪಿರಿದಪ್ಪ ತಪದೊಳೂಡಲಂ
ವರಧರ್ಮದೊಳರ್ಥಮೆಲ್ಲಮಂ ತವಿಸುವರಂ ।
ಧರೆ ನಚ್ಚಿ ಮೆಚ್ಚಿ ಬಣಿ ಪು
ದೆರಡಿಲ್ಲದೆ ಧರ್ಮಮೊಳ್ಕೆಂದಱಿಪುವೆವೋಲ್ ॥ ೧೮

ಅದುಕಾರಣದಿಂ ಸ್ವರ್ಗಾಪವರ್ಗಸುಖಕ್ಕೆ ಧರ್ಮಮೆ ಕಾರಣಮೆಂಬುದುಮಂ [1] ನರಕತಿರ್ಯಗ್ಗತಿಮಹಾದುಃಖಕ್ಕೆ ಪಾಪಮೆ ಕಾರಣಮೆಂಬುದುಮಂ [1] ನೀವಱಿದುಮಱಿಗೆ, ೧೯

ಪೊಲೆಯರ್ ಭಾವಿಸುವೊಡೆ ಮು
ಷ್ಕಲರನುಪಮೆ [2] ಶುದ್ಧವೃತ್ತಿಯೊಳ್ನಡೆವೊಡೆ ಭೂ ।

---

[1] ಮುಂದೆಯುಂಟಪ್ಪ ಮಂ (ಪು. ೨೨೬) ಪಿಡಿಯಲಾಗಿದೆ (ಸಂ.)

ತಲಮೆಲ್ಲಂ ಬಣ್ಣಿಸುವುದು
ಕುಲದಿಂದಂ ಧರ್ಮಮಧಿಕವೆಂದಱಿಪುವವೋಲ್ ॥ ೮೪

ಕುಲಮುಳ್ಳಂ ಚಾರಿತ್ರ
ಕ್ಕಲಸಿ ಮಹಾವ್ಯಸನಿಯಾಗಿ ನಡೆವೊಡೆ ಧರಣೀ ।
ವಲಯಂ ಮುನಿವುದು ಧರ್ಮಂ
ಕುಲದಿಂದಂ ಪೂಜ್ಯನೆಂದು [1] ಸಾಱುವ ತೆಱದಿಂ ॥ ೮೫

ಅದುಕಾರಣದಿಂ ಪೊಲ್ಲವೆಯೊಳಗೊಂದದೆ ಚಾರಿತ್ರದೊಳ್ ಕೂಡಿ ನೆಗಟ್ಟಿ ಧರ್ಮವು ಸದ್ಧರ್ಮಂ ಪೊಲ್ಲವೆಯೊಳಗೊಂದಿ ದುಶ್ಚಾರಿತ್ರದೊಳ್ಕೂಡಿ ಸರ್ವ ಧರ್ಮವೆ ಕುಧರ್ಮವೆಂಬುದುಮೆನೀನುಡಿಗಳಿಂದಱಿಗೆ; ೮೬

ಪೆಸರುಂ ರೂಪುಂ ನುಡಿಯುಂ
ವಸುಮತಿಯೊಳ್ ಕೇಳ ಮಾನಿಸರ್ಗೆಲ್ಲಂ ಭಾ।
ಸಿಸುವೊಡೆ ಸಮಾನವೆನಿತಱಿ
ಳ್ ಸಮಾನರೆ ಮನುಜರಣ್ಣಾ ಕೀಱ್ಕೀಲಿಲ್ಲಾ ॥ ೮೭

ಅನ್ವಯದಿಂದವನೆಱಿಯದೆ ಬರುತ್ತಿರ್ಪ ಕುದ್ಧಚಾರಿತ್ರದಿಂದಿವರ್ ನಿಷ್ಪ್ರಾದಿ[2] ಮೇಲ್ಜಾತಿಗಳ್ ದುರಾಚಾರದಿಂದಿವರ್ಕಿರಾತಾದಿಕೀಳ್ಜಾತಿಗಳಂದಱಿವಂತೆ ಸದಾಚಾರರಪ್ಪ ಮಹಾತಪೋಧನರ [ತದ್ಭಕ್ತರಪ್ಪ] ಗೃಹಸ್ಥರ ನಡೆವೆಳಿಗಳುಮೆಂ ದುರಾಚಾರರಪ್ಪ ತಪೋಧನಲಿಂಗಿಗಳ [3] [ತದ್ಭಕ್ತರಪ್ಪ] ಗೃಹಸ್ಥರ ನಡೆವೆಳಿಗಳುಮೆಂ ಕಂಡಿದು ಮೋಕ್ಷಕ್ಕೆ ಕಾರಣಮೆಪ್ಪ ಧರ್ಮಮೆಂದಱಿಗೆ. ೮೮

ಬಸಗೆಗಮುತ್ಸಾಹಕ್ಕಂ
ಸಸಿಯುದಯಂ ರಂಜಿಪಂತೆ ಕಳ್ಳಂಗಂ ದು ।

---

[1] ಸಾರಮೆಂದು (ಕ. ಬ.)

[2] ಬ್ರಾಹ್ಮಣಾದಿ (ಗ.) [3] ದುಶ್ಚರಿತ್ರರಪ್ಪ, ಕುತ್ಸಿತರಪ್ಪ ತಪಸ್ವಿಗಳ(ಕ. ಬ)

ಬೆರ್ಸನಿಗವುತೆಱದಿಂ ರಂ
ಜಿಸಲಕ್ಕುಮೆ ಬಗೆದು ನೋಟ್ಪೊಡವನೀತಳದೊಳ್ [1] ॥ ೞಿಗ

[ಸಕಲಸುಖಕ್ಕೆ ನೆಲೆಯಾದ ಸದ್ದೃಷ್ಟಿಗೆ ರಂಜಿಸುವ ಸದ್ಧರ್ಮಂ ಬಹುವಿಧಮಾಗಿರ್ಪ ನರಕದುಃಖಂಗಳನನುಭವಿಸಲ್ವೇಡಿರ್ಪ ಕುದೃಷ್ಟಿಗೆಂತಾನುಂ ರಂಜಿಸಲಾಱದು.] [2] ೞಿಂ

ಕನ್ನಡಿಯಂ ತೋಱಿದೊಡ
ತ್ಯುನ್ನತಸಲ್ಲಕ್ಷಣಂಗೆ ಮುನಿಸಾಗದು ಮ।
ತ್ತೆನ್ನದೆ ಮೂಕೊಱೆಯಂಗಾ
ಕನ್ನಡಿಯಂ ತೋಱಿ ಬಡಿವನಿಱಿವೆಂ ಕೊಲ್ವಂ ॥ ೞಿಗ

ಅಂತು ನಿಷ್ಪಾಪಂಗೆ ಸದ್ಧರ್ಮಂ ರುಚಿಯಾಗಿರ್ಪುಂ ಮಹಾಪಾತಕಿಗೆ ಕೈಪೆಯಾಗಿರ್ಪುಂ. ೞಿಂ

ಜರಗನೊಯ್ಯನೆ ಕರ್ಚಿ ರಾಶಿಯ ಮೆಣ್ಣೊಳೂಪ್ಪವೆ ಪೊನ್ನನ
ಚ್ಚರಿಯೆನಲ್ಕೆಱಿ ಕಾಣ್ಬವೊಲ್ಮತಿವಂತರುಂ ಮರುಳಾಗಿ ಮು
ಚ್ಚರಿಸದಾಪ್ತನನೈದಿ ತತ್ವಮೆನಂತೆ ಧರ್ಮಮೆನಾಗಳೂ
ಪ್ಪಿರೆ ವಿಚಾರಿಸಿ ನೋಡಿ ನಂಬುಗೆಯಿಂದೆ ಮಾಟ್ಪುದು ಧರ್ಮಮಂ ॥ ೞಿೞಿ

ಶುದ್ಧಮಪ್ಪ ಪೊನ್ನೊಳ್ ದುಷ್ಟರಪ್ಪವರ್ ತಮ್ಮೞಾಭದಾಸೆಯಿಂ ಕಿಸು ಬೆಳ್ಳಿಯೆಂಬಿವಂ [3] ಬೆರೆಯಿಸಿ ಪೆಱರ ಕಣ್ಗಿಟ್ಟ ತಿರಿಪಿ ಮೇಲಪ್ಪ ಪೊನ್ನೆಂದು ತೋಱಿಸುವತೆಱದಿಂ [4]

---

[1] ಒಸಗೆಯೊಳೆಸಗುವ ಮನುಜಂ ಸಸಿಯುದಯಮುನೊಲ್ವನೊಲ್ವನೇ ಪಾದರದ। ವ್ಯಸನಮನೆ ಪಿಡಿದು ರಾಗದಿನೆಸಗುಗುಮುಸುಗತಿಯು ನೋಡ ಬಯಸುವ ಖಳನುಂ॥ (ಗ)

[2] ಆಂತು ಮೋಕ್ಷಕಾರಣಮಪ್ಪ ಚಾರಿತ್ರಮಿದೆಂದು ಪುರುಷಂ ಸದ್ಧರ್ಮಮನೊಲ್ವನಲ್ಲದೆ ನರಕದುಃಖಕ್ಕೆ ಭಾಜನನಪ್ಪ ಪುರುಷಂಸದ್ಧರ್ಮಮನೊಲ್ಲಂ (ಗ)

[3] ಕಿಸುವುಮಂ ಬೆಳ್ಳಿಯುಮಂ (ಗ) [4] ಪೊನ್ನೆಂಬಂತೆ (ಗ)

[ದಯಾಮೂಲವಾದ] ಸದ್ಧರ್ಮದೊಳಾದ ನೆಗಳ್ತೆಗಾಱಿದಲಸ
ರಪ್ಪರ್ ತಮ್ಮ ಮೆಯ್ಯ ಸುಖಕ್ಕೆ [1] ಪಾಪಹೇತುಗಳಪ್ಪ ಕುಧರ್ಮಮಂ
ಪೇೞ್ದ ಪೆಱರಂ ಮನುಳ್ಳಡಿ ಧರ್ಮಮೆಂದು ನೆಗೞಿಸುವೆರದುಕಾರಣ
ಮಾರಯುದ್ದ ನೋಡವೇೞ್ಕುಂ, [2] ೩೪

ಪಿತ್ತಳೆಯ ತೊಡವು ಪೊಲೆಯು
ರ್ಗುತ್ತಮಮೆಸಿಸಿರ್ದ ಪೊನ್ನ ತೊಡವೆನಿಸುವೆವೋಲ್ ।
ಚಿತ್ತದೊಳುತ್ಸಾಹದಿನ
ತ್ಯುತ್ತಮಮಾಗಿರ್ಕುಮೆಳೆಯುತಗರ್ಗಂ ಪಾಪಂ ॥ ೩೫

ಅದಱಿಂ ಪಾಪಹೇತುವಪ್ಪ ದುರ್ಧರ್ಮಗರ್ಗಮಂ ಪಿಡಿಯಬಹು
ವಿಡಿಯದೆ, ಪರದರೆಂತು ಕಿಸುಗಟ್ಟುಮಂ ಕಳ್ಳಬಹ್ಜ ಮಂ [ಕಂಚುಮೆಂ]
ಮಾಣ್ದೊರೆಗಂ [3] ತೂಕಕ್ಕಂ ಬರ್ಪ ಪೊನ್ನಂ ಕೊಳ್ವರಂತೆ ಸುಖಹೇತ್ವೆ
ವಪ್ಪ ಸನ್ಮಾರ್ಗದೊಳ್ನಗಱ್ವುದು :— ೩೬

ನಡೆವೆಡೆಯೊಳ್ ಪಡುವೆಡೆಯೊಳ್
ಮಡಿಸೀರೆಯನೆಂತು ದೂಳಿ ದಿನದಿನದೊಳ್ [4] ನೋ ।
ಪ್ಪೊಡೆ ಪೊರ್ದುಗಂತೆ ಚಪಳರ
ನಡೆನುಡಿಯೆಂಬಿವೆಱೊಳಗೊಂದುಗುಂ ಪಾಪಚಯಂ ॥ ೩೭

ಪೊದೆದಾತನಱಿಯದಂತೆ ಪೊದೆದ ಮಡಿ ಬಟ್ಟೆಯುಂ ಧೂಳಿಯೊಳ್
ಮಾಸಿಯಸಗನ ಬಾರಿಯೊಳ್ಬಿದ್ದು ನಿಗ್ರಹಕ್ಕೊಳಗಪ್ಪಂತೆ ಚಪಳರ್
ಜಿನತಪಸ್ವಿಗಳಂ ಜಿನತತ್ವಮನಿಂತುಟೆಂತುಟೆಂದು ಬಾಯ್ಗೆವಂದಂತಣ
ಕಚಣಕಂಗೆಡೆದು ನಗೆನಗೆಯೊಳ ಪಾಪಮೆಂ ಪೊರ್ದಿ ನಾರಕಬಾಧೆ
ಗೊಳಗಾಗಿ ಪಲಕಾಲಂ ದುಃಖಿಯಂಬಡುವರ್. ೩೮

ಕಿಸುವೆಂ ಮೂಲಿಕೆಯುಂ ಪೊ
ರ್ದಿಸೆ ನಗೆಯೊಳ ಹೇವುಮೆಪ್ಪ ತೆಱದಿಂದಂ ಸಂ ।

---

[1] ವನೆವಾಱ್ತೆಯಸುಖಕ್ಕೆ (ಕ.) [2] ಅದುವನಾರೈದುನೋಡಾ (ಗ).
[3] ಬಿಸುಟಿರೆಗಂ (ಗ) [4] ಮಿಗೆನುಡಿಯೊಳ್ (ಕ) ನಗೆನಗೆಯೊಳ್ (ಬ).

ಕಿಸದೆ ವರಧರ್ಮದೊಳ್ ಕೂ
ರ್ತಿಸಗುವ ನರನುಂ ವಿಶೇಷಸುಖಿಯಾಗಿರ್ಪಂ ॥ ೩೯

ಬಾಪೆಣ್ಗಿನಿದಪ್ಪುದೆಂತು ಸಹಜಂ, ಸಕ್ಕರೆಗೆ ಸಿಹಿಯಾಗಿಪ್ಪು
ದೆಂತು ಸಹಜಂ, ಮೊವಿನಪಣ್ಗೆ ರುಚಿಯಪ್ಪುದೆಂತು ಸಹಜಂ ಅಂತೆ
ಚಕ್ರವರ್ತಿಯು ದೇವೇಂದ್ರನ ಸರ್ವಜ್ಞನ ಪದವಿಯನೆಯ್ದುವ ಪುರು
ಷಂಗೆ ಸದ್ಧರ್ಮದೊಳಾದ ನಿರ್ದೋಷಿಯುಪ್ಪ ದೇವನೊಳಾದ ದಿವ್ಯಮು
ನಿಗಳೊಳಾದ ಪ್ರೀತಿಯುಂ ಕೊಂಡಾಟಮುಂ, ಭಕ್ತಿಯುಂ ಸಹಜ
ಮೊಗಿರ್ಪಂ; ಬೇವಿಂಗೆ ಕೈಪೆಯೆಂತು ಸಹಜಂ ಅಣಿಲೆಗೆ ತೊಗರೆಂತು
ಸಹಜಂ ಸುಂಟಿಗೆ ಕಾರವೆಂತು ಸಹಜಂ ತಾನಂತೆ ಬಡತನದ
ಪೀಡೆಯುಂ ಸದ್ಧರ್ಮದೊಳಾದ ಮುನಿಸುಂ ದೂಷಣಮುಂ ಔದಾ
ಸೀನ್ಯಮುಂ ನರಕದುಃಖದೆಡೆಗೆ ಸಲ್ವ ಪುರುಷಂಗೆ ಸಹಜಮೊ
ಗಿರ್ಪಂ ॥ ೪೦

ಬೋಳಾದ ತಲೆಯ ರೋಮಂ
ಮೇಲೆನಿಸದ ಬೆರಲ ಮುಱಿವ ಸೆಳ್ಳುಗುರುಂ ಸ।
ಲ್ಲೀಲೆಯೊಳ ಬಳವ ತೆಱದಿಂ
ಕೋಲಾಹಲಮಿಲ್ಲದೊದವ್ವತಿರ್ಪಂ ಪಾಪಂ ॥ ೪೧

ಬೋಳ ಮೆಂಡೆಯ ರೋಮಮುಂ ಮುಱಿದುಗುರುಂ ಮೆಲ್ಲನಾ
ರುಮೆಱಿಯದಂತೆ ದಿವಸಕ್ರಮದಿಂ ಬಳೆದು ತುಱುಂಬುಂ ಸೆಳ್ಳುಗುರು
ಮಪ್ಪಂತೆ ದುರ್ಜನರುಂ ಪಾಪಿಗಳುಂ ಧರ್ಮದ್ರೋಹಿಗಳುಂ ತಮ್ಮ ನ
ಱಿಯಲೀಯದೆ ದಿವಸಕ್ರಮದಿಂ ಬಳೆದ ಪಾಪದಿಂದಂ ಮಹಾನರಕದೊ
ಳ್ಪಟ್ಟದ್ದು ಬಹುದುಃಖಮನುಣ್ಬರ್ ॥ ೪೨

ಸಸಿಯುಂ ಕೌಂಗಿನ ತೆಂಗಿನ
ಸಸಿಯುಂ ನೆಱೆ ಬೆಳೆದು ಮೇಲೆ ಫಲಮುಂ ಕುಡುವೆಂ।
ತೆ ಸಮೆಂತು ಧರ್ಮಮುಂ ಸಂ
ತಸಮುಂ ಮೇಲೆಯ್ದಿ ಮಾಡುಗುಂ ಕ್ರಮದಿಂದಂ ॥[1] ೪೩

ದಿನದಿನಕ್ಕಿನಿತಿನಿತು ಬಳದುದೆಂದೊರ್ವರ್ಗರ್ಮಳಿಯಬಾರದುದಾಗಿಯುಂ ಬೆಳದು ಫಲಮಂ ಕೊಡುವ ಕೆಯ್ಯ್ ಕೌಂಗಿನ ತೆಂಗಿನ ತೋಂಟದಂತೆ ದಾನಪೂಜೆಯೊಳ್ ಕೂಡಿದ ಸದ್ಧರ್ಮಂ ಪ್ರತ್ಯಕ್ಷಫಲಮಂ ತೋಱಿದುದಾಗಿಯುಂ ನಿಂದು ಮೇಲೆಮೇಲೆ ಫಲಮಂ ಕುಡುಗುಂ ॥ ೪೪

ಕೂರ್ಮೆಯೊಳಲಸದೆ ಜೀವೆ
ಕ್ಕರ್ಮಂ ಪೆಱತಿಲ್ಲ ದುಃಖದಿಂದೆತ್ತುವ ಸ ।
ದ್ಧರ್ಮಮೆ ಹಿತಮೆಂದೇಳಿಸ
ದೊರ್ವೊದಲಱಿದಾತುರ್ ಧರ್ಮಮಂ ಪಿಡಿಗೆ ಬುಧಂ ॥ [1] ೪೫

ಆ ಧರ್ಮದೊಳ್ ನೆಗಳ್ದ ಭವ್ಯನೆಂತಪ್ಪನೆಂದೊಡೆ, ಕುದುರೆಯಂತೆ ಕೀಱಂ ಕೈಕೊಳ್ಳದೆ, ಗ್ರಪದಂತೆ ಮಂತ್ರಕ್ಕೆಱಗದೆ, ಕಟ್ಟರಸನಂತೆ ತಂತ್ರಕಾಸೆಗೆಯ್ಯದೆ, ಮಾಸದಂತೆ ಪಕ್ಷಮಿಲ್ಲದೆ, ದೀಪವರ್ತಿಯಂತೆ ಪೊಂಗೆರಗದೆ [ಅಱುಚಾಗಿಯುಂತೆ ಪೊಗೞ್ತ್ತೊಗಾಸೆಗೆಯ್ಯದೆ,] ಬೆಸದವರಂತೆ ಮುಯ್ಪುಂ ನೋಡದೆ, ತೇರಂಟೆಯಂತೆ ಕುಮತಕ್ಕೆ ಸೊರುಳದೆ, ಒನಲಿಯಂತೆ ಪೊಲ್ಲಸಿಯಂ ಪಿಡಿಯದೆ, ತೊಜೆಯುಂ ತೊರ್ಮೆ ಪೆರ್ಚಿ ಮೆತ್ತೊಸರ್ದ ಕುಂದದೆ [2], ಚಂದ್ರನಂತೆ ಕಳಂಕನಾಗದೆ, ಮಕ್ಕಳಂತೆ ಕಂಡಕಂಡವಕ್ಕೆಱಗದೆ, [ಗಿಳಿಯಂತೆ ಪೆಱರ ಶಿಕ್ಷೆಯಂ ಕಲಿಯದೆ,] ಕೋಗಿಲೆಯಂತೊರ್ಮೆ ನುಡಿದೊರ್ಮೆ ಮಾಣದೆ, [3] ಬಹುರೂಪಿಯಂತೆ ಪೊತ್ತಿಂಗೊಂದಂದಮಾಗದೆ, ಕಬ್ಬಿನ ತೋಂಟದಂತೆ ನಿಸ್ಸಾರನಾಗದೆ, ಪಾದರಿಗನಂತೆ ಪಲರ ಮುಂದೆ ನಾಣ್ಜದೆ, ಲೋಭಿಯಪ್ಪರಸಿನಂತವಿಚಾರಿಯಾಗದೆ, [4] ಶ್ರುತಮಿಲ್ಲದ ಲಿಂಗಿಯಂತೆ ಮೂರ್ಖನಾಗದೆ, ದೂರವಂದಿಯಂತೆ ತಲ್ಲಣಿಸದೆ, ತುಂಬಿಯಂತೆ ರಸಜ್ಞನುಂ ಭಂಡಾರದ ಪೊನ್ನಂತೆ ಶುದ್ಧನುಂ, ಬೆಟ್ಟನಂತೆ ಸ್ಥಿರನುಂ, ಮದದಾನೆಯಂತೆ ಮಹಾದಾನಿಯುಂ, ಸ್ಫಟಿಕದಂತೆ ನಿರ್ಮಳನುಂ, ಬಿಲ್ಲಂತೆ ಗುಣಧರನುಂ,

---

[1] ದುಃಖದಿಂದೆಂತುಂಸ । ಧರ್ಮದಿನಗ್ಗಳವೆಂದೊಸೆ । ದೊರ್ಮೆಯುಮುಱಿಯದೆಬಿಡದೆ ಪತ್ತುವುದಱಿಂ (ಗ) [2] ಮಾಗಿಯತೊಜೆಯಂತೆಳಸಿಯದೆ (ಗ)
[3] ಕೋಗಿಲೆಯುಂತೆ ಬಾವಳಿಸದೆ (ಗ) [4] ಬಱಿಬಾಗಿಯುಂತೆ ಮುಯ್ಪುಂನೋಡದೆ (ಗ)

ಸುಕವಿಯಂತೆ ಕುಮೋರ್ಗದೂರನುಂ, ಮಾಣಿಕಭಟ್ಟನಂತೆ ಪರೀಕ್ಷಕನುಂ, [ಮಹಾಕ್ಷತ್ರಿಯನಂತೆ ವಿಚಾರಪರನುಂ,] ದೇವರಂತೆ ಸುಮನನುಂ, ಪಾರ್ಥನಂತೆ ಧರ್ಮಪ್ರಿಯನುಂ, ಸಂಯಮಿಯಂತೆ ದಯಾಪರನುಂ, ಕವಿಯಂತೆ ಯತಿಪ್ರಿಯನುಂ, ಸಾಗರದಂತೆ ನಿಸ್ಸಾರದೂರನುಂ ನಿಚ್ಚಗಲಿಯಂತೆ [ಧರ್ಮದೊಳ್]ನಿಶ್ಶಂಕನುಮಪ್ಪುದು. ೪೬

[ಇವರಿಂ ಸ್ತ್ರೀವಶ್ಯಮಕ್ಕಿನ್ನಿವರಿನೆನಗೆ ಮಂತ್ರೋಪದೇಶಂಗಳಕ್ಕಿ
ನ್ನಿವರಿಂ ದಿವ್ಯಂ ಫಲಿಕ್ಕಿನ್ನಿವರಿನೆನಗೆ ದಿವ್ಯೋಪದೇಶಂಗಳಕ್ಕಿ
ನ್ನಿವರಿಂದೀಕಾರ್ಯಮಕ್ಕಿನ್ನಿವರಿನೆನಗೆ ಪೊನ್ನಕ್ಕುಮೆಂದಬ್ಬಕಂ ಮೊಡುವೆ ದಾನಂ ದಾನಮೆಲ್ಲಂತದು ಬಗೆವೊಡೆ ಮುಯ್ಬುಂಧುಗಳ್ಗೀವುದಕ್ಕುಂ] ॥ ೪೭

ಕೂಱೆವರ್ದಂತಱಗಂಜಿಯುಂ ಕುಡಿವ ಪೊನ್ನಿರ್ದಂತೆ ಕರ್ಗಲ್ಲಿನ
ತ್ಯಾಳಾಪಂ ಬಗೆಗೆಟ್ಟು ಕೊಳ್ವ ಧರಣೀಸಾಮ್ರಾಜ್ಯಮಿರ್ದಂತೆ ಬಂ
ದಾಳಾಗಿರ್ಪ ವಿಭೂತಿಯುಂ ಬಿಸುಟು ಭೈಕ್ಷಂಗೊಂಡು ತಾನುಣ್ಬ ಬೆ
ಳ್ಳಳಂ ಪೋಲನೆ ಮಂತ್ರವೈದ್ಯವಳಿಪಿಂ ಕೇಡೆಯ್ದಿಪಂ ಧರ್ಮಮಂ ॥

ಮಱೆಯುಳ್ಳೊಡೆ ಕೆಱೆ ತೊಱ್ಗ
ಳ್ವಳಾಸದಿಂ ತೀವಿ ಕೋಡಿವರಿವಂತವನೀ ।
ತಳದೊಳ್ ಪುಣ್ಯಂ ತನಗ
ಗ್ಗಳಮುಳ್ಳೊಡೆ ತನಗೆ ತಾನೆ ಬಾರದೆ ಸಿರಿಯುಂ ॥ ೪೮

[ಮತ್ತಂ] ಕಾವಿಲ್ಲದೆ ಕೊಡೆವಿಡಿವೆನೆಂಬಂತೆ, ಬಂದಿಗೆಯಿಲ್ಲದೆ ಸುರಿಗಿ[2] ವಿಡಿವೆನೆಂಬಂತೆ, ನಾಡುವಿಡಿಯದರಸುಗೆಯ್ವೆನೆಂಬಂತೆ, ಧೃತಮಿಲ್ಲದೂರನೂಡುವೆನೆಂಬಂತೆ, ಮವವೞಿಗನಿಲ್ಲದೆ ದಿಬ್ಬಣಂಬೋಪೆನೆಂಬಂತೆ, ಬಟ್ಟೆಯುಱಿಯದೆ ಪೊಲಂಬಿಗನಪ್ಪೆನೆಂಬಂತೆ, ಮೊತಱಿಯದೆ ಬಿನ್ನಪಂಗೆಯ್ವೆನೆಂಬಂತೆ, ಸುರಿಗಿಯಿಲ್ಲದೆ ಕಳನೇಱುವೆನೆಂಬಂತೆ, ಮೞಕೆ

---

1 ಬುಂಧುಗಳ್ ಕೂಲಿಯುಕ್ಕುಂ (ಬ.ಕ) 2 ಹರಿಗೆ (ಗ).

ಯಿಲ್ಲದಡುವೆನೆಂಬಂತೆ, ಸೂಳೆಯಿಲ್ಲದೆ ಬೊಜಂಗರಂ ಕರೆವೆನೆಂಬಂತೆ, ಮುನ್ನಿನ ಭವದೊಳಾದ ಜಿನಪೂಜೆಯಿಂ ದಾನದಿಂ ವ್ರತದಿಂ ತಪದಿಂದಾದ ಪುಣ್ಯಮಿಲ್ಲದೆ ಸಿರಿಯುಮಂ ಪೊನ್ನುಮಂ ಸುಖಮುಮಂ ಆಯುಷ್ಯಮುಮಂ ಮಂತ್ರ [ತಂತ್ರ ವೈದ್ಯಂ] ಗಳಿಂ ಪಡೆವೆನೆಂದು ದೆಸೆಗಿಡಲ್ವೇಡ; ಮಱುಗಿದೊಡಂ ಫಲಮಿಲ್ಲಂ. ೫೦

ಆ ರಾವಣಾಧೀಶರುಂ ಪಾಂಡವರಖಿಳಮಹೀವಲ್ಲಭರ್ ಕರ್ಮದಿಂ ಸಂ
ದಾರಣ್ಯಬೊಕ್ಕ ಕಾಂತಾಪರಿಭವದಚಲಿಂ ಬೆಂದು ನೊಂದಿರ್ದರಂತಾ
ಭೂರಾಮಾಧೀಶ್ವರರ್ಕೆ೯ಳಱಿಯುರೆ ನಯದಿಂ ಮಂತ್ರಮುಂ ವೈದ್ಯಮುಂ ನೀ
ನೋರಂತೇಕಣ್ಣ ಬಾಪ್ಪಾಸೆಯೊಳಱಿಗಿದಪ್ಪೈ ಕರ್ಮದಿಂ ಬಲ್ಲಿತುಂಟೇ॥೫೧

ಆ ಸಗರೇಶನಾಭರತನಾದ್ರುಮಸೇನನುದಾರವೀರದಿಂ
ದೀಸಕಲೋರ್ವಿಯಂ ತನಗೆ ಮಾಡಿದ ಪೆಂಪಿನ ಚಕ್ರವರ್ತಿ ಶಾಂ
ತೀಶರಿವರ್ಗೆ ದಿವ್ಯಸುಖಮಾದುದು ಮುನ್ನಿನ ಪುಣ್ಯದೇಱ್ಗೆಯಿಂ
ಭೂಸುರಪುಣ್ಯಮಂ ನೆರಪೆ [1] ಪುಣ್ಯಮೆ ತಾರದೆ ಸರ್ವಸೌಖ್ಯಮಂ ॥೫೨

[ಇಂತು ಮಂತ್ರೌಷಧಂಗಳಿಂ ಕಾವೊಡಮಾಯುಷ್ಯಮಿಲ್ಲದ ನರಂಗೆ ಸಫಲಮಾಗವಂತೆ ಮಂತ್ರದಿಂ ಗ್ರಹಂ ಪೋಪುದೆಂಬೀ ನುಡಿಯಂ ನಂಬದೆ ಪುಣ್ಯವೊಂದೆ ಕಾರಣಂ ಪುಣ್ಯದಿಂ ಮಿಗಿಲಪ್ಪುದೊಂದುಮಿಲ್ಲೆಂದು ಶಾಶ್ವತಸುಖಮುನೀವ ಸದ್ಧರ್ಮದೊಳ್ ಬುದ್ಧಿಯಂ ಸಿಕ್ಕಯಂ ಗೆಯ್ದಿರ್ಪುದು; ಮಣಿಮಂತ್ರೌಷಧಂಗಳೊಳಪ್ಪಾಸೆಯಂ ಬಿಡುವುದು]

ಏನಾನುಮೆನುದ್ದೇಶಿಸ
ದಾನಂದಂ [2] ಬೆರಸು ಭಕ್ತಿಪೂರ್ವಕದಿಂದಂ ।
ತಾನೊಸೆದು ಮಾಡ್ಪ ದಾನಂ
ತಾನದು ಮುಂವಣ್ಗೆ ಕುಡುವುದಹ್ಮೆಯಸುಖಮಂ ॥ ೫೪

---

1 ಮೂಡುವ ಮಂತ್ರದಿನಕ್ಕೆ ವೈದ್ಯದೊಂದಾಸೆಯಿನಕ್ಕೆ ಪೇೞ್ದಿರುಳಪುಣ್ಯಮೆ (ಕ. ಬ.) 2 ಉಳ್ಳನಿತ್ತುಮನಾನಂದಂ (ಗ)

[ರಾಜ್ಯಕ್ಕೆ ಚತುರಂಗಮುಂ ಮಂತ್ರಕ್ಕೆ ಚತುರ್ವಿಧೋಪಾಯ
ಮುಮೊಪ್ಪುವಂತಾದಾನಕ್ಕೆ ಶಾಸ್ತ್ರದಿದಾನಚತುಷ್ಟಯವೊಪ್ಪಗು
ಮಿಂತು, ೪೫

ಪರಮೋಗಮದಿಂದಲ್ಲದೆ
ಪರತ್ರೆಯಂ ಪಡೆವುಪಾಯಮಿಲ್ಲದಱಿಂದಂ ।
ವರಶಾಸ್ತ್ರಂ ಮಿಗಿಲೆಂದಾ
ದರದಿಂ ಮೂಡುವುದು ಶಾಸ್ತ್ರದಾನಮನಳಪಿಂ ॥] ೪೬

ಶ್ರುತವನಿತೆಯೆ ಮುಕ್ತಿಶ್ರೀ
ಸತಿಯಲ್ಲಿಗೆ ಬೇಗಮುಯ್ವ ದೂದವಿಯೆಂಬೀ ।
ಮತಮನಱಿದೋತು ಮೂಡುವು
ದತಿಶಯದಿಂ ಶಾಸ್ತ್ರದಾನಮೆಂ ಪದಪಿಂದಂ ॥ ೪೭

[1] [ಶ್ರುತಭಾವನೆಯೊಳಮತಿಮನ
ದ್ಯುತಿ ನಿರ್ಮಲಮನದಿನಘಹರಂ ತದ್ದರಿತ ।
ಹ್ಲತಿಯಿಂ ಕೈವಲ್ಯಶ್ರೀ
ಸತಿ ಸಾರ್ಗುಂ ಶಾಸ್ತ್ರದಾನದುನ್ನತಿ ಕಿಱಿದೇ ॥] ೪೮

ಏಗೆಟ್ಟತ್ತೆನ್ನದೆ ಮನ
ವೊಗಡಿಸದೆ ತೀರದಾಱೆನೆಂದುಡುಗದೆ ನಿ ।
ರ್ವೇಗಂ ಚಿತ್ತದೊಳಣಮಿನಿ
ಸಾಗದೆ ತಾಂ ಮೊಱ್ಪುದನ್ನದಾನಮೆನಱಿವಿಂ ॥ ೪೯

[ಕರಮೊದರದಿಂದನ್ನಮ
ನುರುಮುನಿಯೊರ್ವಂಗೆ ಕೊಟ್ಟ ತತ್ಫಲದಿಂದಂ ।

---

1 ನಾಲ್ಕಂ ಮಹಾದಾನವನೆನ್ನಿದ ಸಿಂಹಸೇನಮಹಾರಾಜ ರುಗ್ಮಿಣಿ ಮಹಾದೇವಿಯು ನಾರಾಯಣನ ಸ್ತುತಿಂಬುತ್ತುನ ಕಥೆಗಳಂ ಕೆಳ್ದು ನಂಬಿ ಮೂಡುವುದು· ಪರಮಯುಂ (ಗ)

ಶಿರಿಷೇಣನೃಪತಿ ಶಾಂತೀ
ಶ್ವರನಾದಂ ನೋಱ್ಪೊಡನ್ನದಾನಂ ಕಿಱಿದೇ ॥] ೬೦

ತನ್ನವರೆನ್ನವರೆನ್ನದೆ
ಸನ್ನುತಮತಿಯಾಗಿ ಸಕಲಜೀವಂಗಳುಮಂ ।
ತನ್ನಂ ರಕ್ಷಿಸುವಂತಿರೆ
ಬಿನ್ನಣಮೀನಱಿದು ರಕ್ಷಿಪುದು ಸತ್ಪುರುಷಂ ॥ ೬೧

[ನೆಗಟ್ದಭಯದಾನಫಲದಿಂ
ಮೃಗನಯನೆ ವಿದರ್ಭೆ ಸಂದ ರುಕ್ಮಿಣಿ ಲೋಕಂ ।
ಪೊಗಟೆ ಕಡುಜಸಮನಾಂತಳ್
ಜಗತೀವಳಯಕ್ಕೆ ಸೌಖ್ಯಭೂಜನೆಯಾದಳ್ ॥ ೬೨

ಉಕ್ಕೆವಮಿಲ್ಲದೆ ಮನದೊಳ್
ಕೊಕ್ಕರಿಸದೆ ಪಿಱರ ಮೇಲೆ ನೆವನಿಕ್ಕದೆ ಕೈ ।
ವಿಕ್ಕೊಕ್ಕಿಪಿಂ ಚಾತುರ್ವ
ರ್ಣ್ಯಕ್ಕಂ ಮಾಡುವುದು ರುಜೆಗೆ ದಿವ್ಯೌಷಧಮಂ ॥ ೬೩

[ಫಲಮಿನ್ನೌಷಧದಾನದ
ಫಲದಿಂ ತೀರ್ಥಕರನಪ್ಪ ಪುಣ್ಯಂ ಜೇಗಂ ।
ಫಲಿಯಿಸಿತು ವಿಷ್ಣುಗದಱಿಂ
ದಲಸದೆ ಭೈಷಜ್ಯದಾನಮಂ ಮಾಱ್ಕಱಿವಂ ॥] ೬೪

ಪರಮಾಯುಂ ಶ್ರೀಯು ಪೆಂಪುಂ ವನಿತೆಯರೊಲವುಂ ಕೀರ್ತಿಯುಂ ಧೈರ್ಯಮುಂ ಸುಂ
ದರರೂಪುಂ ವೀರಮುಂ ಭೋಗಮುಮೆಸೆವ ಮಹಾವೀರ್ಯಮುಂ ಚಾಗಮುಂ ವಿ
ಸ್ತರದಿಂ ಸದ್ಬುದ್ಧಿಯುಂ ತೇಜಮುಮುಳವು ಮಪ್ಪೈಶ್ವರ್ಯಮುಂ ದಿವ್ಯ ಸೌಖ್ಯೋ
ತ್ಕರಮುಂ ಸದಾ ನದಿಂದಂ [1] ನರಗೆ ಸಮನಿಕುಂ ಸಂತತೋತ್ಸಾಹದಿಂದಂ ॥ ೬೫

[1] ಧರ್ಮದಿಂದಂ (ಗ)

ಹೀನಾಯುಂ ಕಷ್ಟರೂಪುಂ ಬಡತನದೊದವುಂ ಕುತ್ಸವುಂ ಪೀಡೆಯುಂ ವಿ
ಜ್ಞಾನಂಗಟ್ಟುರ್ಪುದುಂ ಕೂಟ್ಪಡೆಯದೆ ಮೆಱುಗುತ್ತಿರ್ಪುದುಂ ಲೋಗರಿಂದೊಂ
ದಾನಂದಂಗೆಟ್ಟು ಚಿಂತಿಪ್ಪುದುಮೆನವರತಂ ಪೆಂಡರಿಂ ಮೆಕ್ಕಳಿಂ ಸ
ನ್ಮಾನಂಗೆಟ್ಟಿರ್ಪುದುಂ ಕೂಡುಗುವೊದವಿದ ಪೂರ್ವಾರ್ಜಿತಾಘೌಘದಿಂದಂ ॥ ೬೬

ಎಂದಿಂತು ಕಿಱಿದಿನೊಳ್ ಧರ್ಮಮಂ ಪೇೞ್ದ ಱಿದು ಸಂತಸಂಬಟ್ಟು ದೇವನಿಕುರಂಬಂ ಸೌಧರ್ಮೇಂದ್ರಂಗೆ ಪೊಡೆಮಟ್ಟು ಬಿನ್ನಪಮೆಂದಿಂತೆಂದರ್:— ೬೭

ಅರಿದು ನೆಗೞ್ತೆಗೆ ಫಲದೊಳ್
ಪಿರಿದಹ್ಮಯಲಕ್ಷ್ಮಿಯಿರ್ಪ ನೆಲೆ ಯೆನಿಸಿರ್ದೀ।
ನಿರುಪಮೆನಿರ್ವಿಚಿಕಿತ್ಸೆಯೆ
ಯರಿಮ ಗುಣಂಗಳೊಳಗೆ ಬಗೆವೊಡೆ [1] ಜಗದೊಳ್ ॥ ೬೮

[ಅದು ಕಾರಣದಿಂ] ಕಲಿಕಾಲಮಹೋರಗವಿಷಪೂರಿತಮುಂ ಸದ್ಧರ್ಮನಿವಾರಿತಮುಮೆಪ್ಪ ಭರತಕ್ಷೇತ್ರದೊಳ್ ಗುಣಹೀನರೆಯಲ್ಲದೆ ಗುಣವಂತರುಂ ಪಾಪಹರರುಂ ಪ್ರಚುರವಿಲ್ಲದೊಡಂ ನಿರ್ವಿಚಿಕಿತ್ಸೆಯೊಳ್ ನೆಗೞ್ವರಂ ದೇವರೆವುಗೆ ಬಿಸಿಸಿವೆನೆ ದಿವಿಜರಾಜನಿಂತೆಂದಂ:— ೬೯

[ರೌರವಪುರೇಶನಮಳನು
ದಾರಂ ಜಿನಪಾದಪದ್ಮಮಧುಪಂ ಸತ್ಯಾ।
ಧಾರಂ ಧರಣೀಸ್ತುತ್ಯಂ
ಚಾರುಚರಿತ್ರಂ ನೃಪಾನ್ವಯೈಕಪವಿತ್ರಂ ॥] ೭೦

---

1 ಪಿರಿದವ್ಯತಶ್ರೀಯುಗೇಹಮೆನಿಸುವ ಪೆಂಪಂ । ಧರಿಸಿದ ನಿರ್ವಿಚಿಕಿತ್ಸೆಯುಮುರಿದುಗುಣಂಗಳಲಿನೋಡಬುಗೆವೊಡೆ (ಗ)

ಬದ್ಧಾಯನಮೆಹಾರಾಜನೀಗಳಾ ಭರತಕ್ಷೇತ್ರದೊಳ್ ಪ್ರಸಿದ್ಧನೆಂ
ಬುದುಂ ಅಮರಸಮಿತಿ ವೆಂಚ್ಚಿ ಕೈಗಳಂ ಮುಗಿದು ನಾನಾಪ್ರಕಾರದಿಂ
ಪೊಗಟುತಿರ್ಪುದುಮೆವರೊಳ್ ವಾಸವನೆಂಬ ದೇವಂ ದೇವೇಂದ್ರನ
ಮಾತಿಂಗೆ ಬೆಱಗಾಗಿ, ೩೧

ನಿಶ್ಚಯಗುಣರೊಳರೆಂಬುದಿ
ದಾಶ್ಚರ್ಯಂ ಭರತಭೂಮಿಯೊಳ್ ಸುರಪತಿ ತಾಂ ।
ನಿಶ್ಚಲಗುಣಿಗಳನಲ್ಲದೆ
ದುಶ್ಚರಿತರನಘಸವೇತರಂ ಪೊಗಳ್ದಪನೇ ॥ ೩೨

[ಪೊಗಟಲಱಿಯಂ ಭರತಕ್ಷೇತ್ರದೊಳೀಗಳಪ್ಪೊಡೆ ಕುದೃಷ್ಟಿಗಳ
ನಲ್ಲದೆ ಸದ್ದೃಷ್ಟಿಗಳಂ ಕಾಣಲರಿದು, ಚಂಚಲಚಿತ್ತರನಲ್ಲದೆ ದೃಢಚಿ
ತ್ತರಂ ಪಡೆಯಲರಿದು, ಕುಮಾರ್ಗಾನುರಾಗಿಗಳನಲ್ಲದೆ ಸನ್ಮಾರ್ಗಾನು
ರಾಗಿಗಳಂ ಕೇಳಲ್ಬಾರದು, ವಿಚಾರಿಸುವೊಡಿಂದ್ರನ ನುಡಿಗೆ ನಗೆ ವಿಸ್ಮ
ಯಮೊದಪುದಿದನಾರಯ್ದುನೋಡವೇೞ್ಕುಮೆಂದು ದೇವಲೋಕದಿಂ][1]
ರೌರವಪುರಕ್ಕವತರಿಸಿ ಋಷಿರೂಪಂ ಕೈಕೊಂಡು, ೩೩

ಬಡವಾಗಿರ್ದೊಡಲೇಱ್ಗೆಟ್ಟ ನಡು ನೀರ್ ಭೋರೆಂದು ಪಾಯ್ವಚ್ಚಿ ನೋ
ಪ್ಪೊಡೆ ಕೀವಿಂ ಕೊಪೆಯಿಂ ಮೆಹಾರಸಿಗೆಯಿಂ ಪೊಂಗಿರ್ದ ಪುಣ್ಗುಂ
ಟುಗಾ
ಲೊಡೆದೋರಂತಿರೆ ಸೋರ್ವ ರಕ್ತಮೆಧಿಕಂ ಕಂದಿರ್ದ ಮೆಯ್ಯೊನ್ನಿನಿಂ
ದುಡುಗಿರ್ದಂಘ್ರಿ ಕರದ್ವಯಾಂಗುಶಿಚಯಂ ಕುಂದಿರ್ದ ಹೀನಸ್ವರಂ ॥೩೪

ಮತ್ತಮೊಜೆತೆಯಂತೆ ಮೆಯ್ಯಿಂದೊಜೆವ ರಸಿಗೆಯುಂ, ದುರ್ಜನನ ನುಡಿಯಂತೆ ಕೊಂಕಿ ಪರಿದ ಜಡೆಗಳುಂ, ಕುಟಿಲನ ಚಿತ್ತದಂತೆ ಬಹುಪ್ರಕಾರಮಾದ ಮೆಯ್ಯ ಬಣ್ಣಮುಂ, ಒಂಟೆಯ ಕೊರಲಂತೆ ನೀೞ್ದ ಕೊರಲುಂ, ನೀತಿವಿದನಲ್ಲದರಸಿನ ನಾಡಂತೆ ಅಸಿಯವಾದ

[1] ಅದಂ ನೋಡುವೆನೆಂದುರೌರವಪುರ (ಗ)

ಕಾಲ್ಗಳುಂ, ಊದುವ ತಿದಿಯುಂತೆ ಪೊಂಗಿದ ಪುಣ್ಗಳುಂ, ಮುಖ ರೋಗದವರಂತೆ ಬಿಡದೆ ಸುರಿವ ಶ್ಲೇಷ್ಮಮುಂ, ಅಚಿಗಣ್ಣ ವೆರಂತೆ ಕೊಚೆ ಗಣ್ಗಳುಂ, ಮಾಗಿಯು ದೇಸಿಗನಂತೆ ಬೂದಿವೆರಸಿದ್ದೊಡಲುಂ, ಎಱೆಯು ಕೆಱೆಯಂತೆ ಬತ್ತಿದ ಗಲ್ಲಮುಂ, ಆನೆ ಮೆಟ್ಟಿದ ಸಂಬಳಿಗೆಯಂತೆ ಬತ್ತಿದ ಮೊಗಂ, ಪೂಲಿಯ ಪಣ್ಣಂತೆ ಪೊಱವಾಯ್ವ ಕೀವುಂ, ಮುದುಕರಂತೆ ಲೋಳಸುರಿವ ಬಾಯುಂ, ಕೀವುಗಿವಿಯವರಂತೆ ಕೀವು ಸುರಿವ ಕಿವಿಯುಂ, ಬೇತಾಳನಂತೊಳಸಾರ್ದ ಬಸಿಱುಂ, ಪಡಿಕೆಯಂತೆ ನಾಱು ತಿರ್ದ ಪೆರ್ಬುಣ್ಗಳುಂ, ಕೆಮ್ಮುಳ್ಳರಂತೆ ಮೇಲೆತ್ತುವ ಶ್ವಾಸಮುಂ, ಗುಡಿಲಂತೆ ಬಾಗಿದ ಬೆನ್ನುಂ, ಪುಟ್ಟನಂತೆ ಬೆರಲ್ಗಳಿಲ್ಲದ ತಳಮುಂ, ಅದ್ಭುತಮೊಗೆ ಮೂಱುಂಲೋಕದ ಭೀಭತ್ಸವೆಸೆಲ್ಲಮೆನೊಂದುಮೊಡಿ ವಿಧಾತ್ರಂ ರೂಪುಮೊಡಿದನೆಂಬಂತೆ ಹೀನರೂಪಂ ಕೈಕೊಂಡು ॥ ೭೫

ನೊಳಗಳ್ಮುಸುಂಕಿ ಮೊಣದೆ
ಬಳಸಿಯುವೋರಂತೆ ಸುತ್ತಿ ನೆಱೆ ದುರ್ಗಂಧ ।
ಕ್ಕೆಳಸಿ ಮುನಿಪತಿಯನಗಲದೆ
ಸುಱಿವುವು ಜುಮ್ಮೆಂದು ಕಂಡವೆರ್ಪೀಸುವಿನಂ ॥ ೭೬

ಅಂತು ವಿಗುರ್ವಿಸಿದ ಕಿಸುಕುಳ ರೂಪಿಂ ಕೃತಕರ್ಷಿಯಾಗಿ ರೌರವಪುರದೊಳಗೆ ಚಂದ್ರಗತಿಯಿಂ ಚರಿಗೆವರ್ಪುದುಂ [1] ಕಂಡಕಂಡರೆಲ್ಲಂ, ಜಂತೆತ್ತಿದರಂತೋಕರಿಸುತ್ತುಂ, ಬಯ್ಕೆವೆಂಡಿರಂತುಗುಟುತ್ತುಂ, ನೀರೊಳಗೆ ಮುಟುಂಗುವರಂತೆ ಮೊಗಂ ಮುಚ್ಚಿಕೊಳ್ಳುತ್ತುಂ, ಬೆಳೆದ ಕೆಯ್ಯಂತೆ ತಲೆಯಂ ತೂಗುತ್ತುಂ, ಅಳಿಯನಂ ಕಂಡತ್ತೆಯಂತೆ ತೊಲಗುತ್ತುಂ, [ಋಷಿಯರಂತೆ ಕೊಕ್ಕರಿಸುತ್ತುಂ,] ಓಡಿಬಂದ ಬಂಟನಂ ಕಂಡೊಡೆಯನಂತೆ ಚಿಃ ಎನುತ್ತುಂ, ದಾಳಿಯುಂ ಕಂಡರಂತೆ ಮೆಗುಚ್ಚೊಡುತ್ತುಂ, ಬಲ್ವಗೆಯುಂ ಕಂಡಂತೆ ವೊಗಂದಿರಿಪುತ್ತುಂ, ಮುದುಪಬೊಜಂಗನಂ ಕಂಡ ಬೆಲೆವೆಣ್ಣಿನಂತೊಳಸಾ

[1] ಚರಿಗೆಗುಡುವುದುಂ (ಗ)

ರುತ್ತುಂ, ಪೊಲ್ಲವನೆಯು ಸೆಱೆಯಂತುಮ್ಮಳಿಸುತ್ತುಂ, ವೈದ್ಧನ ಕುತ್ತ
ಮನೋವುವ ತರುಣಿಯುಂತೆ ಪೇಸುತ್ತುಂ, ಪೇಳಿಗೆಯೊಳರ್ದ ಪಾವಿನಂತೆ
ದುರ್ಗಂಧಕ್ಕೆ ಮಿಡುಕುತ್ತುಂ, [ಪಗರಣಮುಂ ನೋಡುವರಂತ ನಗು
ತ್ತುಮಿಂತೆಂದರ್ :— ॥ ೭೭

ಈ ತೊನ್ನಂಗೀಕಷ್ಟಂ
ಗೀತೊಡವಿದೇಕೆ ಬಗೆವೊಡೆ ಮೆಯ್ಗೆ ।
ಟ್ಟಾತಂಗೆ ಕೂಜನಾವಂ
ಪ್ರೀತಿಯೊಳಿಕ್ಕಿದಪನೆಂದು ತವ್ಮೊಳ್ ನಗುತುಂ ॥ ೭೮

ಇಂತಿರ್ಪಿನಂ ನೆರೆದ ನೆರವಿಯುಂ ಕಳೆದು ಕಿಱಿದಂತರಮುಂ ಬರಲೆ
ಡೆಯೊಳೊರ್ವಂ ಜಾತಿಮೂಢನಿಂತೆಂದಂ :— ೭೯

ಒಡಲೆಲ್ಲಂ ಕೆಟ್ಟುದು ಮೆಯ್
ಬಡವಾದುದು ಕಾಲ ಕೈಯ ಬೆರಲೆಲ್ಲಂ ತ ।
ಮ್ಮೆಡೆಯಿಂ ಪೋದುವು ಪೇಱ್ಪಿ
ತ್ತೊಡೆ ಪುಟ್ಟರೆ ತನಗಿದೇಕೆ ಬಾಯ್ಕೆಯ ಮೋಹಂ ॥ ೮೦

ಎನುತ್ತುಮಿಪ್ರಾದುಂ ದುರ್ಗತಿಸಮನ್ವಿತಂಗೆ ಯೀಮಾತು ತಕ್ಕು
ದೆಂದು ನಗುತ್ತುಂ ಬರೆ ಪಚ್ಚಪಸಿಯೆಗ್ಗರೆಲ್ಲಂ ನೆರೆದಿಂತೆಂದರ್:— ೮೧

ಈ ದುಃಖಂ ತನಗೇಕೆ ಪೇಱಿ ಮನಸಂ ಸೈತಿಟ್ಟು ಬಾಪ್ವಾಸೆಯಿಂ
ಬಂದಂಬಿಟ್ಟು ವಿಮೋಹಮುಂ ಬಿಸುಟು ಕಣ್ಣಂ ಮುಚ್ಚಿ ವೀರರ್ಕಳಿ
ನ್ನಾದಂ ಬಣ್ಣಿಸೆ ಕಿಚ್ಚನಿಕ್ಕಿ ಜಲಮುಂ ಮೇಣಕ್ಕೆ ಪಾಯ್ದಣ್ಣಿ ಸ
ತ್ತೀದುಃಖಾಗ್ನಿಯನೋವೊ ನೀಗದಿರಲಿಂದೀ ಬಾಯ್ಕೆ ಮೇಣ್ಪಟ್ಟವೋ ॥

ಎಂಬ ಮಾತಂ ಕೇಳ್ದು ಸಂಸಾರಸಮುದ್ರದೊಳೋಲಾಡುವವ
ರ್ಗೀ ವಚನಮೆ ಪೂಜ್ಯನೆಂದು ಪೋಗುತ್ತಿರೆ ವಿಚಾರಪರರಪ್ಪವರಿಂತೆಂ
ದರ್: — ೮೩

ಪಸಿವುಂ ನೀರಡ್ಕೆಯುಂ ದುರ್ವ್ಯಸನಮುಮೆಂಬಿವಧಿಕಂ ಪೆಱರ್ಗುಂ ತೊನ್ನಾರಪ್ಪ
ಗೆಱ್ ಸಮೆಂತೀಜೈನಮಾರ್ಗಂ ಕರಮೆರಿದದನಿಂತೋವೊ ತಾಳ್ದಿರ್ದುಮೆತ್ತಂ
ಪಸಿವೆಂ ನೀರಡ್ಕೆಯುಂ ದುರ್ವ್ಯಸನಮುಮೆನಣಂ ಧೈರ್ಯದಿಂನಾಡೆಯುಂಸೈರಿಸಿ ಶುದ್ಧಾಚಾರದಿಂದಂ ನಡೆವ ಗುಣದೊಳೀ ಯೋಗಿನಾಥಂ ಕೃತಾರ್ಥಂ ॥ ೪

ಎಂದು ನುಡಿದ ಮಾತಂ ಕೇಳ್ದು ಕರ್ಮೋಪಶಮಮುಳ್ಳವಗರ್ಜಿತವಿದು ಮೇಣಲ್ಲಮೆಂದು ಮೆಲ್ಲನೆಲ್ಲನೆ ನಡೆಯೆ ಜಾತಿಕರುಣಿಗಳಿಂತೆಂದರ್ :—

ಕುರುವೊಂದೇಱಲ್‌ವೊದಲಾ
ಗಿರೆ ಸೈರಿಸಬಾರದೀ ಮಹಾಪುರುಷಂ ನಿ ।
ಷ್ಠುರಮಪ್ಪೀ ಪೆರ್ಗುತ್ತದ
ನಿರೋಧಮಂ ತಾಳ್ದಿ ಮೆಱ್ಗುಗದೆಂತಿರ್ದಪನೋ ॥ ೬

ಎಂದು ಕೈಮುಗಿದವರಂ ಕಂಡು ದೇವಗತಿಗೆ ಸಲ್ವಂತಪ್ಪೀ ಲಘು ಕರ್ಮಿಗಳ್ಗೀ ವಚನಮೆ ಬರ್ಕುಮೆಂದು ಪೋಗೆ ಶ್ರಾವಕರೊಡನಾಡುವೆರಿಂತೆಂದರ್ : —

ಈ ಕುಜೆಯೊಂದುವೇದನೆಗೆ ಬೆಚ್ಚದೆ ಕಾಂಕ್ಷಿಸಿ ತನ್ನ ಮೆಚ್ಚಿದಾ
ಹಾರಮುಮಕ್ಕೆ ಬಂದೊಡರೆಪಲ್ದಿ ಱಿದೋವದೆ ಕಂಡಕಂಡರಂ
ಸೈರಣೆಗೆಟ್ಟು ಬೇಡದೆ ಜಿನಾಗಮದೋಜೆಯೊಳೋಜೆದಪ್ಪದೀ
ವೀರನ ವೀರವೈತ್ತಿಯೊಳವಂ ನೆಱಿ ಬಣ್ಣಿಸಲಾರ್ಪನಾವನೋ ॥ ೭

ಎಂದು ಬಣ್ಣಿಸುವವರಂ ಕಂಡು ನೇರಿದರ ನೀತಿ ಸುರಲೋಕಮೆಂಬುದು ತಪ್ಪದೆನುತ್ತುಂ ಪೋಗೆ ಮುಂದೆಡೆಯೊಳ್ಮೂರ್ವ್ ದುರ್ಜನರೊಡನಾಡುವ ಚಪಳನಿಂತೆಂದಂ:—

ಲೋಕದೊಳಾಂ ಕಾಣದರಿ
ಲ್ಲೀಕುತ್ತಂ ಪೊರ್ದಿ ನವೆವ ಮೌನಿಸರಂ ಕೇ ।
ಳೀಕಷ್ಟ್ಯನಂದದಿಂ ಮೆ
ಯ್ಯಾಕಾರಂಗೆಟ್ಟು ನವೆವರಂ ಕಂಡಱಿಯೆಂ ॥ ೯೦

ಎಂಬುದುಂ ದುರ್ಜನಸಂಗತಿಯಪ್ಪೀತಂಗೀ ನುಡಿಯೆ ಸೇವ್ಯ ಮೆಂದು ನುಡಿಯೆ, ಋಷಿಯರ ಮೊಗರ್ಗಮನಱಿದವರಿಂತೆಂದರ್ :—೯೧

ಕರುಣಿಸಿ ಲೋಗರೀರಱಿಗೆ ಮೆದುರ್ಗಳಂ ಮನವೋತು ಮೊಱ್ಪೊಡಂ
ಕರಮೆರಿದಣ್ಣ ನಾಮೆಱುವೆವೀಮುನಿಪುಂಗವರೊಂದುಮೊರ್ಗಮಂ
ಕರಮತಿಭಕ್ತಿಯಿಂ ನಿಲದೆಯುಣ್ಬದು[1] ನೂರ್ಮೆಯು ಮುಂತೆಸಾವೊಡಂ
ಪರಿಹರಿಸಲ್ಕೆವೇಱ್ಕುಮಳಿಪಿಲ್ಲದೆ ನೋಡ ಸಮಸ್ತವಸ್ತುವಂ ॥೯೨

ಎಂದು ಪೇಱ್ವುದುಮವರಂ ಕೃತಕಕ್ಷಿ ನೋಡಿ ನೀರ ತಡಿ ಕೆಸಱಿಕ್ಕುಮೆಂಬುದು ತಪ್ಪದೆಂದು ಪೊಗಱುತ್ತಿರೆ ಬುದ್ಧಿವಂತರ್ಕಂಡಿಂತೆಂದರ್ :— ೯೩

ಮಾತೇಂ ಕಡುದುಃಖಿತನ
ಪ್ಪೀತಂ ಮೊದಲಾದ ಜೈನಮೊರ್ಗಮೆನೆಂತುಂ ।
ಭೂತಳದೊಳ್ಬಡನೆನಲುಪ
ಮಾತೀತಂ ಜೈನರಿಂದಮಗ್ಗಳರೊಳರೇ ॥ ೯೪

ಮತ್ತೊಂದೆಡೆಯೊಳ್ ಜಡಮತಿಗಳಿಂತೆಂದರ್ :— ೯೫

ಆದರದಿಂದೀ ಮುನಿಪಂ
ಪೋದೊಡವಿಪಾಪುರದೊಳಿವರ ತನುವಿನ ಮುರ್ಗಂ ।
ಧೋದಯಮೆಱುದಿಂಗಳ್ಗಂ
ಪೋದಪುದೆ ಪೋಗಲಱಿಯದೆನುತ್ತುಂ ನಕ್ಕರ್ ॥ ೯೬

---

[1] ನಿಲದಲುಣ್ಬದು ನೋರ್ಮೆಯಿ ಮತ್ತೆಸಾವೊಡಂ (ಕ. ಬ.)

ಮತ್ತೊಂದೆಡೆಯೊಳ್ ಶೂನ್ಯಹೃದಯುರಿಂತೆಂದರ್ :—] ೯೩

ವ್ಯಾಧಿಯೊಳಲ್ಲಂ ಕುಷ್ಠ
ವ್ಯಾಧಿಯೆ ಕಡುಕಷ್ಟಮಿದಱ ವೇದನೆಯೆಂಬಂ ।
ಬೋಧಿಯೊಳಗಿರ್ದೆನಂ
ಸಾಧಿಸಲಿರ್ದಪಸೊ ಬಿಡದೆ ಜೀವಮೆನೀತಂ ॥ ೯೪

ಮತ್ತೊಂದೆಡೆಯೊಳ್ ಬದ್ಧಮಿಥ್ಯಾದೃಷ್ಟಿಗಳಪ್ಪವರಿಂತೆಂದರ್ :— ೯೫

ಶ್ರಾವಕರಪ್ಪವರ್ನಿರೆದು ನಿಶ್ಚಯದಿಂ ಮುನಿಗಳ್ [1]ಕೂರ್ತು ನಾನಾವಿಧಭಕ್ಷ್ಯದಿಂ ಪಲವುಬಾಡುಗಳಂ ತಿಳಿದುಪ್ಪದಿಂ ಸಮಂ
ತಾವಗಮಿಸಿವರೊಳ್ಳಣಿಸನೆಂಬಖಿಲಾಪೆಯೊಳೀರುಜಾನ್ವಿತಂ
ಭಾವಿಸಿಕೊಂಡನೀತಪಸಮನೆಂದು ಜಡರ್ ನುಡಿಯುತ್ತುಮಿರ್ಪಿನಂ ॥೧೦೦

ಅನಂತಕಾಲಮುಂ ದುಃಖಭಾಜನರಪ್ಪವರ್ಗಮಿಮಾಮಾತು ಮಾರ್ಗ
ಮೆಂದು ಪೋಗುತ್ತುಮಿರ್ಪುದುಮೊರ್ವನಾ ಶ್ರಾವಕಂ ಕಂಡು, ೧೦೧

ಬಾಯೊಳ್ ತಂಬುಲವಿರ್ದಪು
ದೀಯೆಡೆಯೊಳ್ ಕೆಪ್ಪುಗಾಲೊಳಿರ್ದಪೆನೆಂದಾ । [2]
ಮಾಯಾವಿ ನಿಲಿಸಲಾಱಿದು
ಪಾಯದಿನೊಳಸಾರ್ದು ಪೊಕ್ಕನೊಂದಂಗಂಡಿಯಂ ॥ ೧೦೨

ಮತ್ತೊರ್ವಂ ಸಂಶಯಶ್ರಾವಕಂ ಕಂಡು, ೧೦೩

ಕರವೆನ್ನ ಸತಿಯ ಮುಂದಾಂ
ಪರಮಶ್ರಾವಕನೆನೆಂದು ಬೀಱುವೆನಿವರಂ ।
ಭರದಿಂ ನಿಲಿಸದೊಡೆನ್ನಂ
ವರವಧು ನಗುಗೆಂದು ಕಾಣನೆಂಬಂತಿರ್ದಂ ॥ [3] ೧೦೪

ಮತ್ತೊರ್ವಂ ಮಿಶ್ರಶ್ರಾವಕಂ ಕಂಡು, ೧೦೫

---

1 ರುಷಿಯರ್ಗೆ (ಬ. ಕ.) ನಿಲಿಸೆನಿಲ್ಲಣಮಿಲ್ಲೆಂದಾ (ಗ) 3 ನಿದ್ರೆಗೆಯ್ದುಂತಿರ್ದಂ (ಬ. ಕ)

ಲಲನೆಗೆ ನೀನೀ ಮುನಿಯುಂ
ನಿಲಿಸೆನೆ ನಾನಱಿಯೆನೋವೊ ನೀನೇ ಮುನಿಯುಂ ।[1]
ನಿಲಿಸೆಂದಿರ್ವರುಮೊಗಳ್
ಕಲಹಂಗೆಯ್ಯುತ್ತುಮಿರ್ಪುದುಂ ಮುನಿ ಪೋದಂ ॥ ೧೦೬

[ಮತ್ತೊಂದೆಡೆಯೊಳೊರ್ವಂ ಪೊಸಶ್ರಾವಕಂಕಂಡು, ೧೦೭

ಆಮನೆಯುವರಾಮನೆಯುವ
ರೀಮನೆಯುವೆರಟ್ಟ ನಾರ್ಪ ದುರ್ಗಂಧಕ್ಕಂ ।
ತೀ ಮುನಿಯುಂ ನಿಲಿಸಿದರಿ
ಲ್ಲೀವೊತೊ ನಾನುಮೊಜೆನೆಂದೊಳಗುಱುದಂ ॥ ೧೦೮

ಮತ್ತೊರ್ವಂ ಕೋಳ್ಪಯಿಲ್ಲದ ಶ್ರಾವಕಂ ಕಂಡು, ೧೦೯

ಮುನಿಪನ ಬರವಂ ದೂರದೊ
ಳನುನಯದಿಂ ಕಂಡು ನಿಲಿಸಲಾಱದೆ ತಾಂ ತ ।
ನ್ನಿನಿಯಳನಿವರಂ ನಿಲಿಸೆನೆ
ವನಜಾನನೆ ಪಿತ್ತಲತ್ತಲೋಡಿದಳಾಗಳ್ ॥] ೧೧೦

ಮತ್ತೊರ್ವಂ ಯಶೋರ್ಥಿಶ್ರಾವಕಂ ಕಂಡು, ೧೧೧

ನೆರೆವನೆಯಾತನೆನ್ನೊಡನುದಾರಗುಣಕ್ಕೆ ಜಸಕ್ಕೆ ನಾಡೆ ಮೆ
ಚ್ಚರಿಸುತುಮಿರ್ಪನೀ ಮುನಿಯನಾಂ ಕರಮಾದರದಿಂದೆ ತಾಂಗಲೋ[2]
ಸರಿಸದೊಡಟ್ಟದೂಱುಗುಮವಂ ಮನೆಗೀಗಳೆ ಬಾರನನ್ನೆಗಂ
ತ್ವರಿತದೆ[3] ಪೋಪೆನೆಂದುಣಿಸುಮಂ ಬಿಸುಟೋಡಿದನಾತ್ಮಗೇಹದಿಂ॥೧೧೨

ಮತ್ತೊರ್ವನಱಿತಕ್ಕೆ ಬೀಗುವ ವೃಥಾಶ್ರಾವಕಂ ಕಂಡು, ೧೧೩

ಯಾನಾಱೆನೊವೊಬಲ್ಲೊಡೆನೀನೇ (ಗ)

2 ಮುನಿಯುನಾದರದಿಂದವೆತಾಂಗಲೊಲ್ಲದೋ (ಗ) 3 ಬಾರದಾಂಸವಿಸ್ತರದೊಳಪೋಪೆ (ಬ. ಕ.)

ಅಱುವೆವೆರೆನ್ನನೊಂದೆಕೊರಲಿಂ ಪೊಗೞ್ವರ್ ಧರೆಗೆಲ್ಲಮಾನುಮಿ
ನ್ನಱಿಕೆಯ ಜೈನನೆಂ ನಿಲಿಸಲೊಲ್ಲದೆ ಮಾಣ್ದುಟಿದಿರ್ದೆನಪ್ಪೊಡಂ
ನಿಱಿಸದ ಕಷ್ಟನೆಂದುಲಿವೆರಿಲ್ಲಿಗುಪಾಯಮಿದೆಂದು ಬುದ್ಧಿಯಿಂ
ಪೊಱಮೆಡದಿರ್ದನಾತ್ಮಗೃಹದಿಂ ಕಳೆದಾಮುನಿ ಪಿಂಗಿ ಪೋಪಿನಂ ॥ ೧೧೪

[ಮತ್ತೊರ್ವಳ್ ಶ್ರಾವಕಿಯಿಂತೆಂದಳ್ :— ೧೧೫

ಶ್ರಾವಕನ ಸತಿಯೆ ನಾನುಂ
ಶ್ರಾವಕನಪ್ಪವನ ಮಗಳಯುಗ್ರೋಗ್ರತೆಯಿಂ ।
ದೇವರೆನಿಪಿವರ ಕಂಡೆಂ
ಭಾವಿಸುವಂದಿನಿಸುಪೇಸುತಪಮಂ ಕಾಣೆಂ ॥ ೧೧೬

ಮತ್ತಮೇನುಮಿಲ್ಲದ ನಿಱಿಶ್ರಾವಕಿ ಕಂಡು (ಇಂತೆಂದಳ್) :— ೧೧೭

ಓದಿನೊಳಂ ರೂಪಿನೊಳಂ
ಬಾದೇಂ ನಮ್ಮೊಳೊರೊಳಿರ್ದ ಮುನಿಗಳವೋಲೀ [1] ।
ಮೇದಿನಿಯೊಳೊಳರೆ ಮುನಿವರ
ರೀದೀನನ ತೆಱದಿನಿಟ್ಟಕೊಳ ನಾರ್ತಪರೇ] ॥ ೧೧೮

ಮತ್ತೊರ್ವಂ [ಪ್ರವೀಣನಪ್ಪ] ಬಡಶ್ರಾವಕನಿಂತೆಂದಂ :— ೧೧೯

ಬಡಲೆಂತುಂ ಕಿಡಲಿರ್ದುದು
ಕಿಡುವೊಡಲಂ ತವಿಸಿ ಕಿಡದ ಮುಕ್ತಿಶ್ರೀಯುಂ ।
ಪಡೆಯಲ್ಕೀಜಿನರೂಪಂ
ದೃಢಮನದಿಂ ಪಿಡಿವೊಡಱಿವರಿವೆರೆ ಕೃತಾರ್ಥರ್ ॥ ೧೨೦

ಮತ್ತೊರ್ವಂ ಬರ್ದಿನ ಶ್ರಾವಕಂ ಕಂಡು (ಇಂತೆಂದಂ) :— ೧೨೧

ಈ ರೂಪಿಂದಲ್ಲದೆ ಸಂ
ಸಾರದೊಳೂದವಿರ್ದ ದುಃಖಮುಂ ಗೆಲಲರಿದೆಂ ।
ದಾರಯ್ದು ಜೈನರೂಪಂ
ಧೀರತೆಯಿಂ ಧರಿಸಿದಂ ಧರಾಧರಧೈರ್ಯಂ ॥ ೧೨೨

ಮತ್ತೊಂದೆಡೆಯೊಳ್ ನೆರೆದಿರ್ದ ನೀತಿವಿದರ್ಕಳಿಂತೆಂದರ್ [2] :— ೧೨೩

---

[1] ರುಷಿಯರವೋಲೀ (ಬ.ಳ.) [2] ಮತ್ತಂವಿವೇಕಿಗಳ್ ಕಂಡು (ಗ)

ಅರಸರೊಳಪ್ಪ ಬಾಧೆಗಳಿನಿಸ್ಪರಗಲ್ಕೆಯಿನೊಲ್ಲೆನೆಂಬ ಪೆಂ
ಡಿರ ದೆಸೆಯಿಂ ದರಿದ್ರತೆಯಿನೂತ್ತನ ಕುತ್ತದಿನೆಂತುಮೆಕ್ಕುಮ
ಚ್ಚರಿಯೆ ಮಹೋಗ್ರದುಃಖತತಿ ಕರ್ಮಫಲೋದಯದಿಂದಮಿಾ ಮಹಾ
ಪುರುಷನೆ ಧನ್ಯನೀರುಜೆಯೊಳೀ ತಪಮೆಂ ನೆಱೆ ತಾಳ್ದಿದೋಜೆಯಿಂ॥೧೭೪

ಎಂದು ನಾನಾಪ್ರಕಾರದಿಂ ನುಡಿವೆ ಬಹುಜನದ ಮಾತುಗಳುಮಂ ಪಲಸ್ತಂತೆಱದ ಪರಿಣಾಮಂಗಳುಮಂ ಕಂಡು ಕೇಳ್ದ [ಕೃತಕರ್ಷಿ ತನ್ನೊಳಿಂತೆಂದಂ :—] ೧೭೫

ಮರನೆಂಬೀಪೆಸರೆಲ್ಲಾ
ತರುಗಳ್ಗಂ ತಾಂ ಸಮಾನಮೆನಿತೞೊಳಲ್ಲಾ ।
ತರುಗಳ ಪಣ್ಣಂ ಪೆಸರಂ
ತಿರೆ ನೋಡ ಸಮಾನಮಾಗಲಱಿಗುಮೆ ಸವಿಯೊಳ್ ॥ ೧೭೬

ಬಾೞೆಯ ಪಣ್ಣದೊಂದು ರುಚಿ ನೇಱಿಲ ಪಣ್ಣೊಳಗುಂಟೆ ಭಾವಿಪಂ
ದೀಳೆಯ ಪಣ್ಣದೊಂದು ರುಚಿ ಮಾವಿನ ಪಣ್ಣೊಳಗುಂಟೆ ಸಂದ ಕಿ
ತ್ತೀಳೆಯ ಪಣ್ಣದೊಂದು ರುಚಿ ಬೀವಿನ ಪಣ್ಣೊಳಗುಂಟೆ ತಾನಣಂ
ತಾಳಫಲಂಗಳೊಂದು ರುಚಿ ತುಂಬುರ ಪಣ್ಣೊಳಗುಂಟೆ ಲೋಕ
ದೊಳ್ ॥ ೧೭೭

ಅಂತು ಮಾನಿಸಗೆ ಮಾನಿಸರೆಂಬ ಪೆಸರೆ ಸಮಾನಮಾದೊಡಂ ಮಾತುಗಳುಂ ಪರಿಣಾಮಮುಂ ಬೇಱೆವೇಱಯಕ್ಕುಮೆಂದು ॥೧೭೮

ಪಾದಱಿಯದೊಂದು ಕುಸುಮಾ
ವೋದಂ ಪೊರ್ದಲ್ಕೆ ನೀರ್ ಸುಗಂಧಮೆನಕ್ಕುಂ ।
ಬಾದೇಂ ಬೇವಿನ ಕುಸುಮಾ
ವೋದಂ ಪೊರ್ದಲ್ಕೆ ಕಯ್ಪೆಯಕ್ಕುಂ ತೋಯಂ ॥ ೧೭೯

[ಅಂತೆ ಲೋಕದ ಜೀವಂಗಳ್ಗಂ] ಶುಭಕರ್ಮದ ಪೊರ್ದುಗೆಯಿಂ ಸುಬುದ್ಧಿಯುಮೆ ಶುಭಕರ್ಮದ ಪೊರ್ದುಗೆಯಿಂ ದುರ್ಬುದ್ಧಿಯುಮೆಕ್ಕುಮೆಂದು ತನ್ನೊಳ ಭಾವಿಸುತ್ತುಂ ॥ ೧೮೦

ಪರಮಜಿನೇಶ್ವರಚರಣಾಂ
ಬುರುಹದ್ವಯಮೆತ್ತಮೆಧುಪನೊದ್ದಾಯನಭೂ ।
ವರವಲ್ಲಭನರಮೆನೆಗಾ
ಗಿರೆ ಕೃತಕಮುನೀಂದ್ರನೊಯ್ಯನೊಯ್ಯನೆ ನಡೆದಂ [1] ॥ ೧೩೧

ಅನ್ನೆಗಂ ॥ ೧೩೨

ವರರತ್ನ ದ ದೀವಿಗೆಗಳ್
ಶರಮಲ್ಲದೆ ತೊಳಗಿ ಬೆಳಗಿ ವಿಂಚಂ ಸುತ್ತಂ ।
ಸರಪಿದವೊಲೆಸೆಯೆ ನಾನಾ
ವಿರಚನೆಯಿಂದೊಪ್ಪಿ ತೋರ್ಪ ಸಿಂಹಾಸನದೊಳ್ ॥ ೧೩೩

[ಇದು ಪೂರ್ವಾಚಲಮೆಲ್ಲದಿನ್ನಿದು ಸುರೇಂದ್ರಾಶಾದ್ರಿ ಭಾವಿಪ್ಪೊಡಿ
ನ್ನಿದು ನೋಡೊಪ್ಪುವ ಮೂಡಲಲ್ಲದಿದು ತಾಂ ಮೂಡಲ್ಕನೋರಾಗದಿಂ
ದಿದನೇಱಿರ್ದವನಲ್ಲನಂಬುಜಸಖಂ ಪ್ರತ್ಯಕ್ಷಶೀತಾಂಶು ಕೇ
ಳಿದನೇಱಿರ್ದವನರ್ಕನೆಂದೆನಿಸಿ ತಾಂ ಸೌಂದರ್ಯದಿಂ ಭೂಭುಜಂ ॥೧೩೪

ಅವೆಷ್ಟಂಭದೊಳ್] ಕುಳ್ಳಿರೆ, ೧೩೫
ತೊಳಗುವ ಶಶಿಮಂಡಲಮಂ
ಬಳಸಿದ ತಾರಾಳಿಯಂತೆ ಸುತ್ತಿರ್ದುದು ಭೂ ।
ತಳಪತಿಯಂ ನೃಪಸುತರುಂ
ವಿಳಾಸದಿಂ ಮಕುಟಬದ್ಧರುಂ ಪಂಡಿತರುಂ ॥ ೧೩೬

ಮುತ್ತಿನಹಾರವೊಪ್ಪೆ ಕುಚಮಂಡಲದೊಳ್ ಪೊಸಜಾದಿಚೆಲ್ವನೀ
ಯುತ್ತಿರೆ ದೇಸಿಯಿಂ ನಿಮಿರ್ದ [2] ಸೋಮ್ಮಾಡಿಯೊಳ್ ನೊಸಲಲ್ಲಿ

ಶೋಭನಂ

ಬೆತ್ತಿರೆ ಚಾರುಚಂದನದ ಬೊಟ್ಟು ದುಕೂಲಮೊಮರ್ಕೆವೆತ್ತು ಚೆ
ಲ್ವಿತ್ತಿರೆ ಪೆಂಡವಾಸದೊಳುವೆಂಡಿರಲಂಕೃತಿಯಿಂದಮಿರ್ಪಿನಂ ॥ ೧೩೭

---

[1] ವರನಪ್ಸರಪಾದಸರಸಿಜ । ನರವರನೆಗೆ ಮನೋನುರಾಗದಿಂ ಬರೆ ಮುನಿಪಂ (ಬಿ. ಕ.)

[2] ಕೆರಿಬೆದ್ದುರತಾಳದು. (ಗ) ೫ ಪ. ಕ್ಕೂರ್ಮನ ಕೆರ್ದವತ್ತು ಮೆಯ್ಯಿ ತಿರೆ (ಗ)

ನಾರಂಗಸ್ತನೆಯರ್ ಮನೋಹರೆಯರಂಭೋಜಾಕ್ಷಿಯರ್ ಬಿಂಕದಿಂ
ದೋರಂತೊಪ್ಪಿ ವಿಳಾಸಮಂ ಮೆಱೆಯುತುಂ ಲಾವಣ್ಯಮುಂ ಬೀಱುತುಂ
ಹಾರಾದ್ಯಾಭರಣಂಗಳಂ ವಿವಿಧವಸ್ತ್ರಾನೀಕದಿಂದಂ ಚಮ
ತ್ಕಾರಂ ಕೈಮಿಗೆ ಪೊನ್ನ ಚಾಮರಮನುರ್ವೀವಲ್ಲಭಂಗಿಕ್ಕಿದರ್ ॥ ೧೩೪

ಪಡೆವಳನಾಗೆ ಹಾರಮಮದೊಪ್ಪುವ ಪೆರ್ಮೊಲೆ ತಂತ್ರಮಾಗೆ ಪೊಂ
ದೊಡವಿನೊಳಾದ ನಿಸ್ವನಮೆ [1] ದುಂದುಭಿಯಾಗೆ ವಿಳಾಸಲೋಚನಂ
ಕಡುಪಿನ ಬಾಣಮಾಗೆ ಧನುವಾಗೆ ನೆಗಪ್ಪೆಯ ಪುರ್ವು ಮೇಲುದುಂ
ಗಡಗುಡಿಯಾಗೆ ಕಾಂತೆಯರನಂಗನ ಪೆರ್ವಲದಂತಿರೊಪ್ಪಿದರ್ ॥ ೧೩೫

ಕೊಸಗಿನ ಪೂವಿನೊಂದು ರುಚಿಯುಂ ತನು ತುಂಬಿಯು ಬಿಂಬಲಂ ಕುರು
ಳ್ಪೊಸದಳಿರಿಂದಮುಂ ಕರತಳಂ ದನಿ ಕೋಗಿಲೆಯುಂ ನುಗುಳ್ದಳಂ [2]
ಮಿಸುಗುವ ದಂತಪಂಕ್ತಿ ಲತೆಯುಂ ನಳಿತೋಳ್ನಡೆ ಪೋಲ್ತು ನಾಡೆ ರಂ
ಜಿಸುವ ವಿಳಾಸಿನೀನಿಕರದಿಂ ಪೊಸಸುಗ್ಗಿವೊಲಿರ್ದುದೋಲಗಂ ॥ ೧೩೬

ಚಾರುವಿಶಾಲಲೋಚನಯುಗಂ ಕಣೆಯುಂ [3] ಬಿಲೆ ಚಕ್ರಮುಂ ಕಚಂ
ಸಾರಮನಿಪ್ಪ [4] ಚೆಂಬರಿಗೆಯುಂ ನಳಿತೋಳಸಿಯುಂ ಸಮೆಂತು ಪೋ
ಲ್ತಾರಮಣೀನಿಕಾಯದಿನನಂಗನ ನಚ್ಚಿನ ದಿವ್ಯಶಸ್ತ್ರಾಭಂ
ಡಾರದ ಗೇಹಮುಂ ನಿಜಯೆ ಪೋಲ್ತುದು ಭೂವನಿತೇಶನೋಲಗಂ॥೧೩೭

[ನಿಱಿದಲೆ ನೀಳ್ದ ಪುರ್ವು ನಳಿತೋಳ್ನಿಡುಗಣ್ ಸುಲಿಪಲ್ ಘನಸ್ತನಂ
ತುಱುಗೆಮೆ ಕೋಮಲಾಂಗನುಳವಟ್ಟು ಕುರುಳ್ಪವಳಾಧರಂ ಕರಂ
ಮಿಱುಗುವ ದಂತಪಂಕ್ತಿ ನಯನಂ ಗೆಡೆಗೊಂಪ ಮುಖಂ ನಖಂ ಕಚಂ
ನೆಜೆ ರಮಣೀಯಮಾಗೆ ರಮಣೀನಿಕರಂ ನೆರೆದಿರ್ದುದೊಪ್ಪಿದಂ ॥]೧೩೮

ಬೆರಲೊಳು ರತ್ನಮುದ್ರಿಕೆ ವಿರಾಜಿಸೆ ಕಂಠದೊಳೊಪ್ಪೆ ಮುತ್ತಿನೈ
ಸರಮುಳವಟ್ಟು ಹಸ್ತಯುಗದೊಳ್ ಮಣಿಕಂಕಣಮೆಯ್ದೆ ಶೋಭಿಸು

---

[1] ಬೆಳ್ಪೊಡರಿಪನೂಪುರಸ್ವರಮು (ಗ). [2] ಕೋಗಿಲೆಮೌಕ್ತಿಕಂಗಳಂ (ಗ)
[3] ವಿಳಾಸನೇತ್ರಯುಗಳಂ ಸರಲಂ (ಗ) [4] ನೇರಿದವಪ್ಪ (ಗ)

ತ್ತಿರೆ ಕಟಿಸೂತ್ರವೊಪ್ಪೆ ಕಟಿಯೊಳ್ ತಲೆಯೊಳ್ ನೆಱೆ ಚೆಲ್ವ ಪೂಗಳೂ
ಪ್ಪಿರೆ ಗಣಿಕಾಜನಂ ಸ್ಮರನ ದೀಪದ ಪುಲ್ಲೆಯೊಲಿರ್ದುದೊಪ್ಪದಿಂ॥ ೧೪೩

[ಪೂಸಿದರೊಂದು ಕುಂಕುಮವೆಸೆ ತಾಂ ತಿಮಿರಾಗೆ ಲಲಾಟಪಟ್ಟದೊಳ್
ಭಾಸುರಮಪ್ಪದೊಂದು ತಿಲಕಂ ತಿಲಕಕ್ಕೆಣೆಯಾಗೆ ಸೆಳ್ಳುಗುರ್
ದೇಸಿಯಿನೊಪ್ಪುವತ್ತಮರ್ದ ಕೂರಲಗಾಗೆ ಲೀಲೆಯಿಂದವಿ
ದಾರ್ ಶಶಿವಕ್ತ್ರೆಯರ್ನೆಗಱ್ದಿ ಕಾವನ ಮಾಸವಳಂಬೊಲೊಪ್ಪಿವರ್॥]

ಪೊಳವ ವಿಶಾಲಲೋಚನದ ಮುತ್ತಿನಹಾರದ ಬೆಳ್ಪು ನೀಲಕುಂ
ತಳದ ಪೊದಱ್ದಿ ಕಾಡಿಗೆಯಾಕಪ್ಪಧರಂಗಳ ಪಾಣಿಪಲ್ಲವಂ
ಗಳ ಗೆಡೆಗೊಂತ ಕೆಂಪು ಕರವೊಪ್ಪಿರೆ ಕೋಭೆಯಿನೊಪ್ಪುದಾಳ್ದ [1] ಕೋ
ಮಳಯುರನಂಗರಾಜನ ವಿನೋದದ ಚಿತ್ರಪಟಂಬೊಲೊಪ್ಪಿದರ್॥ ೧೪೪

[ಧರಣೀಧ್ರನೋಲಗಕ್ಕಂ
ಸುರಪತಿಯೊಡ್ಡೋಲಗಕ್ಕಮಿದುವಿಗಿಲೆಂಬೋಲ್।
ಕರವೊಪ್ಪಿರ್ದುದು [2] ಸಭೆಯಾ
ತರಳಾಕ್ಷಿಯರಿಂ ಪೊದಱ್ದಿ ನೂರ್ಮಡಿಚೆಲ್ವಂ॥] ೧೪೫

ರಸದ ಮಱೆ ಕರೆದಪ್ಪುದು ಸಂ
ತಸದಿಂ ಮೂಡಿದೆ ರಸಾಯನದ ಕೂಸದೊಳಂ।
ಬೆಸಕದಿನಸದಳವೆಸೆದುದು
ರಸಗೀತಂ ವಸುಮತೀಶನಾಸ್ಥಾಯಿಕೆಯೊಳ್॥ ೧೪೬

ಇವು ಮತ್ತೀಭಂಗಳುದ್ದಂನುಡಿಯುದೆ ಭಯದಿಂದಟ್ಟಿದಂ ಮೂಳವೆಂ ಮು
ತ್ತಿವು ಜಾತ್ಯಶ್ವಂಗಳುರ್ಕಂ ಬಿಸುಟು ವಿನಯದಿಂದಟ್ಟಿದಂ ಪಲ್ಲವಂ ಮು
ತ್ತಿವು ನಾನಾರತ್ನಮಂ ಮುಂತೊಱೆದ ಮಹಿಮೆಯಿಂದಟ್ಟಿದಂ ಚೌಳಕಂ ತಾ
ನಿವು ಕಾಶ್ಮೀರೇಶನೊಲ್ದಟ್ಟಿದ ನಿರುಪಮವಸ್ತೂತ್ಕರಂ ದಿವ್ಯವಸ್ತ್ರಂ॥

---

[1] ಕೋಭೆಗ ಮುಖ್ಯಮಾದ (ಗ) [2] ವಿವರಗುಣಸಾ। ಗರವೊಪ್ಪಿರ್ದುದು (ಬ. ಕ.)

ಎಂದು ಪರದೇಶಾಧೀಶ್ವರರಟ್ಟಿದ ಕಪ್ಪಮುಮಂ ಬಂದ ದೂತರುಮಂ ತೋಱಿ ಬಿನ್ನಪಂಗೆಯ್ವ್ ದೌವಾರಿಕರಿಂ[ದಮೆಸೆದುದು; ಮತ್ತಂ. ೧೪೯

ಮನಸಿಜರಾಜಂ ನೋಟಕ
ಜನಕ್ಕೆ ಲೇಸಾಗಿ ಠಕ್ಕನಿಕ್ಕಿದನೆಂಬಂ।
ತನವರತಂ ರಂಜಿಸಿದುವು
ಜನಪತಿಯೋಲಗದೊಳಾದ ಪಲವುಂ ನೃತ್ಯಂ ॥ ೧೫೦

ವಾರಸ್ತ್ರೀನಿಕುರಂಬದಿಂ ಮುಕುಟಬದ್ಧಾನೀಕದಿಂ ಭವ್ಯರಿಂ
ಭೂರಾಮೋಪಿಪರಿಂ ಬುಧಪ್ರತತಿಯಿಂ ಸಾಮಂತರಿಂ ಜಾಣರಿಂ
ಶೂರರ್ಧೀರರುದಾರರಪ್ಪ ಪಲಬರ್ಚಾತುರ್ಯರಿಂ ವೀರರಿಂ
ದೋರಂತೊಪ್ಪಿದುವನ್ನತಿಕ್ಕೆಯೊದವಿಂ ಭೂಪಾಲನೊಡ್ಡೋಲಗಂ ॥

ಅಂತಮರೇಂದ್ರಲೀಲೆಯಿಂದೊಡ್ಡೋಲಗಂಗೊಟ್ಟರ್ದೊರ್ದಾಡಿಯನ] [1] ಮುಸಾವಾಜಂ ತನಗೆ ಮುಕ್ತಿಶ್ರೀಯಟ್ಟಿದ ದೂತನಂತೆ ಬರ್ಪ ಕೃತಕರ್ಷಿಯಂ ಕಂಡು, ೧೫೧

ಮನದೊಳ್ ರಾಗಂ ಭೋಂಕನೆ
ತನಗಾಗಳ್ ಪುಟ್ಟೆ ಹಸ್ತಕಮುಲದ್ವಯಮುಂ।
ಜನನಾಥಂ ಮುಗಿದು ಮುನೀಂ
ದ್ರನನಿದಿರ್ಗೊಳಲೆಂದು ಭಕ್ತಿಪೂರ್ವಕದಿಂದಂ ॥ ೧೫೨

ದುಕೂಲವಸ್ತ್ರೋತ್ತರಾಸನಂಬೆರಸಿ ಇದಿರಾಗಿ ಬಂದು, ೧೫೩

ವರಮುಕ್ತಿಶ್ರೀಯಲ್ಲಿಗೆ
ಭರವಶದಿಂದೇಱಲೆಂದು ನಿಚ ಣಿಗೆಯುನೂ।

---

1 ಮೇಲೆ ಬಿದ್ದ ಪಾವನಕ್ರಿಯೆಯಿದೆಯಿರ್ದ ಒಡ್ಡೋಲಗದ ಮಹಿಮೆಯಿಂದಿರ್ದ ಒದಾ ಯನ (ಗ)

ವಸ್ತ್ರೋತ್ತರಾಸನಮನಿಕ್ಕಿ ಕೊಂಡು (ಬ.ಕ.)

ಪ್ಪಿರೆ ಪಿಡಿವ ಮೊಱ್ಕ್ಕಯಿಂದಂ
ನರೇಶ್ವರಂ ಪಿಡಿದನಾ ಮುನೀಂದ್ರನ ಕಾಲಂ ॥ ೧೫೫

[ತಾಂ] ಗುಣನಿಧಾನದೀಪವರ್ತಿಯಪ್ಪುದಱಿಂ ಗುಣನಿಳಯನ ಪಾದಕ್ಕೆಱಗಿ ಪೊಡೆಮಟ್ಟು ನಿಲಿಸಿ [ರಾಗದಿನೊಡ] ಗೊಂಡು ಬಂದುಚ್ಚಾಸನದೊಳ್ಕುಳ್ಳಿರಿಸುವುದುಂ, ೧೫೬

ನಿಲಲಾಱದೆ ದುರ್ಗಂಧ
ಕ್ಕಲಸಿ ಕೆಲರ್ಜರ್ಗುಱ್ದು ಪೋದರವನಿಪನಲ್ಲಿಂ ।
ತೊಲಗಿದೊಡೆ ಕೊಲ್ಗುಮೆಮ್ಮಂ
ಮುಳಿದೆಂದುಂ ಕೆಲಬರಂಜಿ ಪೋಗದೆ ನಿಂದರ್ ॥ ೧೫೭

ಮೂಗೊಡದಂತಿರೆ ತಲೆಯುಂ
ಬಾಗಿ ಕೆಲರ್ನೊರ್ೀಡಲಾಱದಿರ್ದರ್ಮನದೊಳ್ ।
ರಾಗಂಗೆಟ್ಟು ಕೆಲಂಬರ್
ಮೊಗಂ ಮುಚ್ಚಿರ್ದರಾಱದುಮ್ಮಳಿಸುತ್ತುಂ ॥ ೧೫೮

ಮತ್ತಂ ದುರ್ಗಂಧಕ್ಕಿರಲಾಱದೆ ಲೆಂಕರ್ ದಂಡಂಗೊಂಡರಂತೆ ಶಂಕಿಸುತ್ತುಂ ಪೆಱುಪಿಂಗೆ, ಪರಿಚಾರಕೆಯರಿರಲಾಱದೆ ನುಸುಳ್ದೊಡೆ, ಬಾಣಸಿಗರಿದೇನ್ನಾಣ ಪುತ್ತೆಂದು ಪೋಗೆ, ಕರವಳರರಿದಾಯ್ತೆಂದು ಪಿಂಗೆ, ಡವಕೆಯವರ್ ಶ್ರಮಂಗೊಂಡ ಪಾತ್ರದಂತುಮ್ಮಳಿಸೆ, ಚಾಮರಿಯು ದುರ್ಗಮಂಪೊಕ್ಕ ಕಣ್ಣಂತೆ ನೋಡಲಾಱದಿರೆ, ಅರಸಿಯರ್ ಪರವಶಮಾದರಿಂತೆ ಕೇರ್ಗಳಂ ನೆವ್ಮ್ಮಿ, ವಲ್ಲಭೆಯರ್ ಪೊಲ್ಲಗೆಯ್ದರಂತುಸಿರದೆ ಕುಳ್ಳಿರೆ, ವಿಳಾಸಿನಿಯರ ವಿಳಾಸಂಗೆಟ್ಟರಂತೆ ಕುಂದೆ, ನಾರಿಯರ್ ವಾರಿಸಲಾಱದಕ್ಕರಿಗರಂತೆ ಮಿನುಕೆ [1], ಸಂತೋಷದಾಳಿಯರ್ [2] ತೊಂತುವೋದ ಪರವಿಯಂತೆ ಬಿಟ್ಟು ಪರಿಯೆ, ಪ್ರಭಾವತೀಮಹಾದೇವಿ ತನ್ನೊಳಿಂತೆಂದಳ್:— ೧೫೯

---

[1] ಪಾಡಿಸಲಱಿಯದಕ್ಕರಿಗರಂತೆ ಮಿಸುಕದಿರೆ (ಬ. ಕ.)
[2] ಸಂತೋಷವಾರಿಯರ್ (ಬ.ಕ.ಗ.)

ವೆರರತ್ನಂ ಪೇಲೊಳ್ ಬಿ
ದ್ದಿರೆಯದು ಪೊಲ್ಲೆಂದು ಬಿಸುಡಲಪ್ಪುದೆ ತಪದೊಳ್ ।
ಪಿರಿಯುರೆನಿಸಿದರ ರುಜೆಗೋ
ಸರಿಸುವುದೆ ಜಿನೇಂದ್ರಮಾರ್ಗದೊಳಗಂ ಬಲ್ಲಂ ॥ ೧೬೦

ಎಂದು ತನ್ನ ಮನದೊಳ್ ಕೊಕ್ಕರಿಕೆಯಿಲ್ಲದೆ ದರಿದ್ರಂ ನಿಧಾನಮುಂ ಕಂಡಂತೆ ಸಂತೋಷದಿಂದೊರ್ವಳ್ ನಿಲ್ವುದುಂ [1], ಸಮ್ಯಕ್ತ್ವ ವ್ರತಚೂಡಾಮಣಿ ನವವಿಧಪುಣ್ಯದೊಳಂ ಸಪ್ತಗುಣಂಗಳೊಳಂ ನೆರೆದು ಮುನಿಗಾಹಾರದಾನಮುಂ ಕುಡುವುದುಂ ಕಂಠಪ್ರಮಾಣಮುಂಡು, ೧೬೧

ಮಱುಗೆ ಶರೀರಂ ಕಣ್ಗಳ್
ಪೊಱಮಡೆ ಮೇಲ್ಸ್ವಸಮೆತ್ತೆ ಸಿಡೆದಳ್ಕ ಬಲಂ ।
ಪಱುವಡೆ ಜೊಮ್ಮನೆ ಜೋಲ್ದುಂ
ತೆಱಪಂ ಪಾರ್ದಿರದೆ ತಡೆಯದೊರ್ಮೆಯೆ ಮುನಿಪಂ ॥ ೧೬೨

ಕರಮೆಲ್ಲದೆ ದುರ್ಗಂಧಂ
ಪಿರಿದಾಗೆ ನಗಾಗ್ರದಿಂದೆ ಧಾರಾಜಲಮು ।
ರ್ವರೆಗೀಡಿವಂತೋವೆಂದೋ
ಕರಿಸಿ ನರೇಶ್ವರನ ಮೇಲೆ ಕಾಱುದನಾಗಳ್ ॥ ೧೬೩

ಅಂತು ಕಾಱುವುದುಂ, ೧೬೪

ಶಿರದಿಂದಂ ಮುಖದಿಂದಂ
ಕೊರಲಿಂದಂ ಕುಚಯುಗಂಗಳಿಂದಂ ಪಾದಂ ।
ಬರೆಗಂ ಪೆರ್ವೊನಲಂತಿರೆ
ಪರಿತಂದುದು ಮುಚ್ಚಿ ಮುಸುಱುಕೊಂಡವನಿಪನಂ ॥ ೧೬೫

ಕೊಱೆಯುಂ ಬಿಣ್ಪುಂ ಲೋಳೆಯು
ಮಳವಲ್ಲದ ವಜ್ರಲೇಪದಂತಿರೆ ಧಾತ್ರೀ ।
ತಳಪತಿಯು ಮೆಯ್ಯೊಳಲ್ಲಂ
ತಳಿಪಂ ತಳಿದಂತೆ ಕೂಡಿ ಪತ್ತಿತ್ತಾಗಳ್ ॥ ೧೬೬

---

[1] ಕಂಡಂತೆರಾಗಿಸುತ್ತಿರೆ, (ಗ)

ಅಂತು ತನಗೆ ಸುಗತಿವನಿತೆ ಮೋಹ್ಷಪದಕ್ಕಡ್ಡಮಾದ ಕರ್ಮ ರಾಜನೊಡ್ಡಂ ಕಿಡಿಸಿ ಬಂದೆನ್ನೊಳ್ ಬೀಗಂ ನೆರೆಗೆಂದು ತನ್ನ ಕೂರ್ಮೆಯಿಂದಟ್ಟಿದ ವಜ್ರಕತ್ತಳದಂತಿರ್ದ ಲೋಳಗ್ ಕೊಕ್ಕರಿಸದೆ, ಮುನಿಪತಿಗೆ ಛರ್ದಿಯಾದುದಕ್ಕೆ ನಾಡೆಯುಂ ಮನದೊಳ್ ನೊಂದು, ೧೬೬

ಕೆಟ್ಟೆಂ ಮುನೀಂದ್ರನಿಚ್ಛೆಯ
ನೋಟ್ಟಜೆಯಿಂದಱಿಯದೇಂ ಮಹಾಪಾತಕನೋ।
ತೊಟ್ಟನೆ ಕೊಳಲನ್ನಿಚ್ಛೆಗೆ
ನೆಟ್ಟನೆ ಬಡ್ಡಿಸಿದೊಡಿನಿತುನೋವಾಯ್ತೀಗಳ್ ॥ ೧೬೭

ಎಂದು ತನ್ನಂ ತಾನೆ ನಿಂದಿಸಿಕೊಂಡು ತಡವರಿಸಿ ಬೀೞ್ವ ಮುನಿನಾಥನಂ ಬೀೞಲೀಯದೆ ತಕ್ಕೈಸಿಕೊಂಡು ಕಣ್ಗಳಂ ತಳಂಗಳಿಂದಂ ನೀವಿ ಮೆಯ್ಯೊಳಾದ ಲೋಳೆಯೆಲ್ಲಮುಂ ತೊಳದು ಕಳದು ; ೧೬೮

ಪಿರಿದಪ್ಪ ಶ್ರಮದಿಂ ನಿ
ತ್ತರಿಸದೆ ತಲೆತಿರುಗಿ ಮಱುಗಿ ಮೇಲುಸಿರಿಟ್ಟು ।
ರ್ವರೆಗೆ ಕೆಡೆದುರುಳ್ವ ಮುನಿಪನ
ನರಸಂ ತಾಳ್ದಿರ್ದನೊಂದುಜಾವಂಬರೆಗಂ ॥ ೧೬೯

ಅಂತಿರ್ದು ಶ್ರಮಂ ಪೋದಿಂಬಱಿಕ್ಕ [ಮೊಯ್ಯನೆ ಮಾಯಾರುಷಿಯುಂ ತಾನುಂ ಪ್ರಭಾವತೀಮಹಾದೇವಿಯುಂ ಮೞ್ಜನದವನೆಗೊಯ್ದು ಬಿಸಿನೀರಿಂ] ಮೆಯ್ಯೆಲ್ಲಮುಂ ಕರ್ಚಿ [ಪೆಯ್ಯ್ ನೀರಂದುಕೂಲಾಂಬರದಿಂ ತೊಡೆದು ಕಳದು, ೧೭೧

ಪಿರಿದಪ್ಪದೊಂದು ಮಣೆಯೊಳ್
ನರಮುನಿಯಂ ತಂದು ಕುಳ್ಳಿರಿಸಿ ನೃಪನೆಂದಂ ।
ಪಿರಿದಪ್ಪ ಕ್ಲೇಶಂ ನಿಮ
ಗಿರದೆನ್ನಿಂ ಪಾಪಕರ್ಮನಿಂದಾಯ್ತಿನಿಸುಂ ॥ ೧೭೦

ಎಂದು ವಿನಯದಿಂ ಪೊಡೆಮಟ್ಟು ಪ್ರಭಾವತೀಮಹಾದೇವಿ ಮಜ್ಜನಂಬೊಕ್ಕು ದಿವ್ಯವಸ್ತ್ರಮನುಟ್ಟು ಮಗುಳ್ದು ಬಂದು ಕೃತಕರ್ಷಿಯ ಕಾಲನೊತ್ತುತ್ತುಮಿಂತೆಂದಳ್. -][1] ೧೭೩

ತನುವಂ ಭಾವಿಸುವೊಡಮೆ
ಳ್ಳನಿತುಂ ಶುಚಿಯಲ್ಲಮಶುಚಿದೇಹಮನಿದನಿ ।
ನ್ನನುಪಮಮೆಂದೆನಲಾಗದು
ಜಿನಮತದೊಳ್ ಪೊಂದಿಯಱಿವಿನೊಳ್ನಗ್ಪ ನರಂ ॥ ೧೭೪

ಪುತ್ತಂವೊಡುವ ಬಱಲೆಯಂತೆ ಪಾಪಮಂ ನೆರಪುವುದು, ಕಿರ್ಚಿನಂತೆ ಪೊರ್ದಿದರಂ ಕಿಡಿಸುವುದು, ಪಂದೆಯಂತೆ ಪೆಱಗುಱುವುದು, ಬಡತನದಂತೆ ಬಗೆದುದನೀಯದು, ಪೃಷ್ಣಿನಂತೆ ನೋವಂ ಮಾಟ್ಪುದು, ಗ್ರಹದಂತೆ ಪೀಡೆಯಂ ಮಾಟ್ಪುದು, ಬಸಿಱ ಕುತ್ತದಂತೆ ನವೆಯಿಸುವುದು, ಪಂದಿಯಂತೆ ಱೊಪ್ಪಂಗೊಳ್ವುದು, ಕೃಷ್ಣಪಕ್ಷದಂತೆ ಶುಭಮನೊಲ್ಲದು, ಪಗೆಯಂತೆ ಭಯಮಂ ಮಾಟ್ಪುದು, ಕೂಸಿನಂತೆ ಕೂಡದುದಂ ಬಯಸುವುದು, ಪುಲ್ಲ ಕಿಚ್ಚಿನಂತೆ ಸ್ಥಿರಮಲ್ಲದು, ಪೊಳ್ತಿನಂತೆ ನಿಲಿಸಲರಿದಪ್ಪುದು, ತೊಱೆಯಂತೆ ಪಾಯಲರಿದಪ್ಪುದು ಗಾಳಿಯಂತೆ ಪಿಡಿಯಲರಿದಪ್ಪುದು, ಪೊಲೆಗೇರಿಯಂತೆ ಮೂಳೆಯುಮೆಯುಮೆಪ್ಪುದು, ಕೆರ್ಪಿನಂತೆ ತೊಗಲನುಳ್ಳುದು, ಬೀಣೆಯಂತೆ ನರದೊಳ್ ಕೂಡಿದುದು, ತಿಪ್ಪೆಯಂತೆ ಪೇಸುಪತಮೆಪ್ಪುದು, [ಪಡಿಕೆಯಂತೆ ದುರ್ಗಂಧಮೆಪ್ಪುದು,] ಕೋಱೆಯಂತೆ ಕ್ರಿಮಿಪ್ರಿಯನಪ್ಪುದು, [ಜಿಗುಱೆಯಂತೆ ನೆತ್ತರಪ್ರಿಯನಪ್ಪುದು], ನೊಳವಿನಂತೆ ಶ್ಲೇಷ್ಮಪ್ರಿಯನಪ್ಪುದು, ಪಶುವಿನಂತೆ ಮೂತ್ರಪ್ರಿಯನಪ್ಪುದು, ತೊನ್ನಿನಂತೆ, ರಸಿಗೆಯನುಳ್ಳುದು ಸೊಂಬನಂತೆ ಅಲಸಮೆಪ್ಪುದು, ಮೂರ್ಖನಂತಪ್ಪುದಂ ಮಾಡದು, ಬೆಟ್ಟೀ ಱುಕಾಱನಂತೆ ಧರ್ಮಮೆನೊಲ್ಲದು, ಪಿಶಾಚಿಯಂತೊಳ್ಕೃತ್ತಂ ಮಾಡದು,

1 ಮಣೆಯುಮೇಲೆ ಕುಳ್ಳಿರಿಸಿ ತಾಮಿರ್ವರುಂ ಮಜ್ಜನಂ ಬೊಕ್ಕು ಬಂದು ಕೃತಕರುಷಿಯ ಕಾಲನೊತ್ತುತ್ತುಮಿಂತೆಂದಳ್ (ಗ).

ಪೆಣನಂತೆ ಬಾರ್ತೆಯಲ್ಲದು, ಮೊಳೆಯಂತೆ ಭಂಡಮೆಲ್ಲದು, ಪೊಲೆಯು
ನಂತೆ ವರ್ಣಕ್ಕೆ ಸಲ್ಲದು, ಕೆಡುವ ಭಂಡದಂತೆ ಮಾಜುವೋಗದು,
ಪೇನಂತೆ ಪತ್ತುವಿಡದು, ಬಣಗಿನಂತೆ ನೇರಿತಲ್ಲದು, ಬಗೆವಂದೀ ಶರೀರಂ
ಕಷ್ಟಮಿದಂ ಬಿಟ್ಟು ರತ್ನತ್ರಯಭಾವನೆಯಿಂ ಸ್ವಸ್ವರೂಪದೊಳ್
ಕೂಡುವುದೆಂದು ಧರ್ಮಮಂ ಪೇೞ್ದರಸಿನಂದಕ್ಕೆ ವಾಸವಂ ವಿಸ್ಮಯಂ
ಬಟ್ಟು ತನ್ನೊಳಿಂತೆಂದಂ : — ೧೬೫

ಸುರಪತಿಯ ಪೊಗಪ್ಪೆಗವೀ
ನರನಾಥಂ ಸಚ್ಚರಿತ್ರದೊಳ್ [1] ಭಾವಿಪೊಡು ।
ರ್ವಿಯೊಳ್ ನೂರ್ಮಡಿ ಪಿರಿಯಂ
ಧರಣೀಂದ್ರನುವಿವನ ಗುಣಮನಾರ್ಪನೆ ಪೊಗೞಲ್ ॥ ೧೬೬

ಎಂದು [ಪೊಗೞ್ದು,] ೧೬೭

ಪರಮಜಿನಚರಣಸೇವನೆ
ವೆರಸಿರ್ದವನಂತ್ಯಕಾಲದೊಳ್ ಕಷ್ಟಕಳೇ ।
ವರಮಂ ಬಿಸುಟ್ಟು ದಿವ್ಯ
ಸ್ವರೂಪನಪ್ಪಂತು ವಾಸವಂ ತತ್ಕ್ಷಣದೊಳ್ ॥ ೧೬೮

ಕೃತಕರೂಪಮಂ ಬಿಟ್ಟು, ೧೬೯

ತನುರುಚಿ ಮುಂದರಾಚಳದ ಪೊಂಗೆಣೆಯಾಗಿ ಪಳಂಚಿ ಮಿಂಚೆ ಸೂ
ರ್ಯನ ಕಿರಣಂಬೊಲೊಪ್ಪೆ ಪೊಳವಾಭರಣಾವಳಿ ದಿವ್ಯವಸ್ತ್ರಮಿಂ
ಬಿನೊಳಮರ್ದೊಪ್ಪಿ ಶೋಭಿಸೆ ಸುರೇಶ್ವರನಾಗಳ ದಿವ್ಯಮಪ್ಪ ಮು
ನ್ನಿನ ನಿಜದೇಹಮಂ ನೆಜೆಯೆ ತಾಳ್ದ ನರೇಂದ್ರನ ಮುಂದೆ ನಿಲ್ವುದುಂ ॥

[ಬದ್ಧಾಯನಮಹಾರಾಜಂ ಮುನ್ನಿನ ಋಷಿರೂಪಮೆಂ ಬಱು
ಕ್ಕಿನ ದಿವ್ಯಸ್ವರೂಪಮಂ ತೊಟ್ಟನೆ ಕಂಡು ವಿಸ್ಮಯಂಬಟ್ಟಪ್ಪುದುಂ
ತದ್ದೇವನಿಂತೆಂದಂ :—] [2] ೧೭೦

[1] ಕುಕ್ಷ್ಯವೃತ್ತಿಯೊಳ್ (ಗ.)

[2] ಅರಸನನುರಸಿಯು ನೋಡುತ್ತುಮಿರ್ಪುದುಮಿಂತೆಂದಂ (ಗ)

ಸುರರಾಜನ ಸಭೆಯೊಳ್ ದೇ
ವರ ತಂಡಂ ದರ್ಶನದ ತ್ರಿತೀಯಾಂಗದೊಳಾರ್ ।
ಭರತಕ್ಷೇತ್ರದೊಳೊಳ್ಳಿದ
ರೆರಡಿಲ್ಲದೆ ದೇವ ಪೇಳ್ವುದೆನೆ ದೇವೇಂದ್ರಂ ॥ ೧೪೨

ಒದ್ದಾಯನ ಮಹಾರಾಜನೊಳ್ಳಿದ [ನೆಂದು ಕೊಂತು ಕೊನೆದು,
ಪೊಗಟೆ ಸುರಸಮಿತಿ ನೆಱೆ ಕೈ
ಮುಗಿವುದುಮೆನಗಮರಪತಿಯು ಮಾತಿಂಗೆ ಕರಂ ।
ಜಗತೀವಿಸ್ಮಯಮುಂ ಕೈ
ಮಿಗೆ ನಿನ್ನಂ ನೋಡಲೆಂದು ಬಂದೆಂ ದಿವದಿಂ ॥] [1] ೧೪೩

ಎನ್ನ ಪೆಸರ್ವಾಸವನೆಂಬುದು [ಸಕಲಗುಣಂಗಳೊಳಂ ನೀನಾ
ಸೌಧರ್ಮೀಂದ್ರನ ಪೊಗಟ್ತೈಗಂ ಸಾಸಿರ್ಮಡಿ ಮಿಗಿಲ್ ;]ನಿನ್ನ ಗುಣಮ
ನಾರಯ್ವೆನೆಂಬಾತಂ [2] ಚಾಮೀಕರಶೈಲಮಂ ಗುದ್ದಲಿಯಿಂದಗುಚ್ಚಿ
[ಕೆಡೆಯೆ] ನೂಂಕುವೆನೆಂಬೆಗ್ಗನಂ ಪೋಲ್ಕುವೆಂದು ಪಲತೆಱದಿಂ ಸ್ತುತಿ
ಯಿಸಿ ಪ್ರಭಾವತೀಮಹಾದೇವಿಯು ಮೊಗಮಂ ನೋಡಿ, ೧೪೪

ಎನಿಸುಜ್ಜ್ವಳಮಾದೊಡೆ [3] ಚಂ
ದ್ರನ ತೇಜಂ ರವಿಯ ತೇಜಮೆಂ ಗೆಲ್ಗುಸಿ ಪೆ ।
ಣ್ಣಿನಿತೊಳ್ಳಿದಳಾದೊಡೆ [4] ಪ್ರರು
ಷನೊಳಾದ ಮಹಾಗುಣಂಗಳಂ ಪೋಲ್ತಪಳ್ ॥ ೧೪೫

[ಅದುಕಾರಣದಿಂ ಪ್ರಭಾವತೀಮಹಾದೇವಿಯ ಗುಣಮೆಂ ಮತ್ತಿ
ನ ವನಿತೆಯರೊಳ್ ಪೋಲಿಸಲ್ಬಾರದು ;] ೧೪೬

---

1 ನೊಳ್ಳಿದನೆನೆ ಕೇಳ್ದು ನೋಡಲ್ಬಂದೆಂ (ಗ)
2 ನಿನ್ನ ಸಮ್ಯಕ್ತ್ವಮಂ ಪರೀಕ್ಷಿಸುವನೆಂಬಾತಂ (ಗ)
3 ಮಾದೊಡೆ (ಗ),
ಮಾದೊಡಂ (ಗ)

ನರಪತಿ ಕೇಳೀ ವನಿತೆಯ
ಪರಮಗುಣಂಗಳನೆ ನೆಱೆಯೆ ಬಣ್ಣಿಪೆನೆಂಬಂ ।
ದುರಗಾಧಿಪತಿಗಮರಿದೆನೆ
ನರರಾರ್ತರೆಂದು ನುಡಿವುದೊಂದೆಗ್ಗಲ್ತೀ ॥ ೧೪೪

[ಅದೆಂತೆಂದೊಡೆ, (ಈ) ಪುಣ್ಯಮೂರ್ತಿಗೆ ಶೀಲವತಿಯೆಂಬೀ ಪೆಸರ್ ಪ್ರಸಿದ್ಧಮಾದ ಪ್ರಪಂಚಮೆಲ್ಲಮಂ ಲೇಸಾಗಿ ಪೇೞ್ದಪೆಂ] [1] ಕೇಳೆ ವೆಂದಿಂತೆಂದಂ :— ೧೪೫

ಪರದೇಶಾಧೀಶ್ವರರಂ
ಧುರದೊಳ್ ತಳ್ತಱಿದು ಕಪ್ಪಮಂ ಕೊಳಲೆಂದೋ ।
ಸರಿಸದೆ ಸೆಡೆದಿರದೆ ಮಹೀ
ಶ್ವರ ನೀನದಟಿಂದವೆಂತಿ [2] ಪೋಪ್ರದುಮಿತ್ತಲ್ ॥ ೧೪೦

ನಾರಾಯಣವತ್ತಿಯೆಂಬಳ್ ಪ್ರಭಾವತೀಮಹಾದೇವಿಯ ಬಾಲ್ಯ ಕಾಲದ ಕೆಳದಿ ಕಿಱಿಯುಂದೆ ರಂಡೆಯಾಗಿ ತರ್ಕಶಾಸ್ತ್ರಂಗಳನೋದಿ ಪಂಡಿತೆ [ಯೆಂದು ಪೆಸರನಿಟ್ಟುಕೊಂಡು ಬ್ರಹ್ಮಚಾರಿಯಾಗಿ ಶಾಪಾನುಗ್ರಹಸಮರ್ಥೆಯರೆನ್ನಂ ಬಿಟ್ಟು ಪೆಱರೊರ್ವರುಮಿಲ್ಲೆಂದು ತನ್ನಂ ತಾನೆ ಲೋಕದೊಳಗುರ್ವುಮಾಡಿಕೊಂಡಿರೆ, ೧೪೧

ನಾಡವರೆಲ್ಲಂ ನೆರೆದುಂ
ನೀಡಿರದಱ್ಕುರ್ತು ಭಕ್ತಿಪೂರ್ವಕದಿಂ ಕೊಂ ।
ಡಾಡೆ ಗುರುವೆಂದು ಧರೆಯೊಳ್
ಕೂಡೆ ಮಹಾರೂಢಿಯಾಗೆ ಪೆಂಪೊದವುವಿನಂ ॥ ೧೪೨

ಸುತ್ತಲುಮಿರ್ದೊಂದುದಿವಸಂ ಪ್ರಭಾವತೀ ಮಹಾದೇವಿಯ ತನ್ನ ಕಿಱಿಯುಂದಿನ ಕೆಳೆತನಮಂ ನೆನೆದು ತನ್ನೊಳಿಂತೆಂದಳ್:— ೧೪೩

---

[1] ಈ ಮಹಾಸತಿಗೆ ಶೀಲವತಿಯೆಂಬ ಪೆಸರಾದ ವೃತ್ತಾಂತಮುಂ. (ಗ)

[2] ಶ್ವರನಾದರಿಂದವೆಂತಿ. (ಗ)

ವಿನಯುದಿನವಳ ಶ್ರಾವಕ
ತನಮಂ ಲೇಸಾಗಿ ಕಿಡಿಸಿ ತಿಳಿಪಿ ಬಱಿಕ್ಕಾ ।
ವೆನಿತೆಯನೇಗೆಯುಂ ಮೆ
ಲ್ಲನೆ ನಯದಿಂದೆನ್ನ ಧರ್ಮದೊಳ್ಪತ್ತಿಸುವೆಂ ॥ ೧೯೪

ಎಂದು ಪೂಣ್ದು ರೌರವಪುರಕ್ಕೆವೆಂದರಮನೆಯ ಬಾಗಿಲೊಳ್ ನಿಂದು ಪಡಿಯರರಂ ಕರೆದು ನಿಮ್ಮ ಬಾಲಸಖಿಯಪ್ಪ ನಾರಾಯಣದತ್ತೆ ನಿಮ್ಮಂ ಕಾಣಲೆಂದು ಬಂದಳೆಂದು ಪ್ರಭಾವತೀಮಹಾದೇವಿಗೆ ಪೇೞಿ ಮೆಂಬುದುಂ, ಅವಪ್ರೋಗಿ ಪೊಡೆಮಟ್ಟು ಬಿನ್ನಪಮೆಂದಿಂತೆಂದರ್ :—

ಅಣುಗಿನ ಕೆಳದಿಯೆ ನಾಂ ಸ
ದ್ಗುಣಿಯೆನಿಸಿದ ನಿಮ್ಮ ರಾಜಪತ್ನಿಯ ನಾರಾ ।
ಯಣದತ್ತೆಯೆಂಬೆನೆನ್ನಂ
ಹ್ವಣದಿಂದೊಯ್ದನ್ನ ನಿಮ್ಮ ಕಾಣಿಸವೇೞ್ಕುಂ ॥ ೧೯೬

ಎಂಬುದುಂ, ಮುನ್ನಮೆ ತಂದು ಕಾಣಿಸಲಣ್ಮದೆ ದೇವಿಯಲ್ಲಿಗೆ ವಂದೆಮೆಗೆ ಬೆಸನಾವುದು ಎನೆ ಪ್ರಭಾವತೀಮಹಾದೇವಿ ನಾರಾಯಣದತ್ತೆ ಮುನ್ನಿನಂತೆ ಶ್ರಾವಕಿಯೆಂದು ಧರ್ಮವಾತ್ಸಲ್ಯದಿಂ ತಂದು ಕಾಣಿಸಿ ಮೆಂಬುದುಂ, ಪಡಿಯರರ್ ತಂದು ಕಾಣಿಸುವುದುಂ, ಆರಸಿ][1] ನಾರಾಯಣದತ್ತೆಯ ವಿಥ್ಯಾವೇಷಮಂ ಕಂಡು [ಮುನ್ನಿಸದು]ದಾಸೀ ನಂಗೆಯ್ದಿರ್ದುದುಂ [ನಾರಾಯಣದತ್ತೆ] ಮುನಿದು, ೧೯೭

ಉರಗನ ವಿಷಮೇಱಿದರುಂ
ಸಿರಿಯುಳ್ಳರು ಮದ್ದು ಗುಣಿಕೆಯುಂ[2] ತಿಂದವರುಂ ।
ಪಿರಿದುಂ ಪಿತ್ತಾಧಿಕರುಂ
ಧರೆಯೊಳ್ ಮೆಯ್ಯಱಿಯರೆಂಬ ನುಡಿ ತಪ್ಪಗುಮೇ ॥ ೧೯೮

---

[1] ಯೆಂಬ ಪೆಸರೆಸೆಯೆ, ತೊಳಲುತ್ತಿರ್ದಾಕೆ ರೌರವಪುರಕ್ಕೆ ವಂದರಸಿಯುಂ ಕಾಣ್ಬುದುಂ (ಗ) [2] ಮುತ್ತಕುಣಿಕೆಯುಂ (ಗ)

[ನೀನೆನಗಾಬಾಲ್ಯಕಾಲದೊಳ್ ಮಾಡುವ ಮನ್ನಣೆಯನೀಗಳ್ ಸಿರಿಯಿಂದುಡಾಸೀನಂಗೆಯ್ದಿಯೆಂಬುದುಮರಸಿ ಮೆಱುಮೊತುಗುಡಲೊಲ್ಲದುಸಿರದಿರ್ದುದುಂ] [1] ಕೆಲದೊಳಿರ್ದ ವಿದಗ್ಧಸೌಂದರಿಯೆಂಬ ವಿಳಾಸಿನಿ ಅರಸಿಯ ಮನಮನಱಿದು ಆಕೆಯ ಬಾಸೆಯೊಳಿಂತೆಂದಳ್ [2] :—

ವಾರಿಜಷಂಡಮಂ ಪದೆದು ಪೊರ್ದು ವೆವೊಲ್ ಕಳಹಂಸೆ ತಿಪ್ಪೆಯುಂ
ಸಾರಮಿದೆಂದು ಪೊರ್ದುಗುಮೆ ತಾರಗೆಗಳ್ಗೆ ಱಿವಿಂದುವಂ ಸವಿ
ಸ್ತಾರದೊಳೂಂದುವಂತೆ ಪದೆದೊಂದುಗುಮೇ ರವಿಯುಂ ಸುಧರ್ಮದೊಳ್
ಧೀರರೆನಿಪ್ಪರುಂ [3] ಮರುಳ್ ಪೊರ್ದು ವರೇ ಜಡರಂ [4] ದುರಾತ್ಮರಂ ॥೨೦೦

[ಎಂಬುದುಮೊಕೆಯ ಮಾತಿಂಗೆ ನಾಡೆಯುಂ ಸಿಗ್ಗಾಗಿ ತನ್ನ ನೆಲೆಗೆವೋಗಿ ಪ್ರಭಾವತೀಮಹಾದೇವಿಯ ಶ್ರಾವಕತ್ವಮಂ ಕಿಡಿಸುವ ಉಪಾಯಮುಂ ಚಿಂತಿಸಿ ತನ್ನೊಳಿಂತೆಂದಳ್ :—] [5] ೨೦೧

ಕೇರಳಮಂಡಲಾಧಿಪತಿಯಪ್ಪೊಡೆ ಜೈನನುದಗ್ರನಪ್ಪ ಕಾ
ಶ್ಮೀರಮಹೀಶನಪ್ಪೊಡೆ ಜಿನೇಶ್ವರಧರ್ಮದೊಳೊಳ್ಳಿದಂ ಗುಣಾ
ಧಾರನುದಾತ್ತನಂಗಧರಣೀಶ್ವರನಪ್ಪೊಡೆ ಜೈನಮಾರ್ಗದೊಳ್
ಸಾರನಪೂತಿಪಂಡ್ಯಧರಣೀಶ್ವರನಪ್ಪೊಡೆ ಧರ್ಮತತ್ಪರಂ ॥ ೨೦೨

[ಮೆತ್ತಮುಱುದ ದೇಶಾಧೀಶ್ವರರುಂ ಧರ್ಮಾನುರಾಗಿಗಳಲ್ಲದೆ ಪರಾಂಗನಾಪೇಕ್ಷಕರಲ್ಲರವೆರಲ್ಲಿಗೆ ಪೋದೊಡಮೆನ್ನೆತ್ತಿಕೊಂಡ] [6] ಕಾರ್ಯಂ ತೀರದು, [ಮೊಳವೇಶ್ವರನಪ್ಪ] ಚಂಡಪ್ರದ್ಯೋತನಿಂ ತೀರ್ಗುಮೊತಂ, ೨೦೩

---

1 ಎಂದೊಡರಸಿ ನುಡಿಯುದಿರೆ (ಗ)

2 ಪುನರಮನಱಿದು ತಕ್ಕೊಕ್ಕಿಯಿಂದಮಿಂತೆಂದಳ್ (ಗ)

3 ನೇರಿದರಪ್ಪರುಂ (ಗ) 4 ಖಳರಂ (ಗ)

5 ಎಂಬುದುಂ ನುನಿದು ಪೋಗಿ ಪ್ರಭಾವತಿದೇವಿಯುಂ ಬ್ರತವುಂ ಭಂಗವಾಡುವೆನೆಂಬ ಬಗೆಯಿಂ (ಗ) 6 ಅವರೊಳಮೆನ್ನ (ಗ)

ಸ್ತ್ರೀಯೆಂಬೀಪೆಸಱುಂ ಪೆಣ್
ನಾಯಾದೊಡವೊಲ್ವ ಕಷ್ಟನೀಪ್ರತ್ಯಹ ।
ಸ್ತ್ರೀಯಂ ಸುರವಧುವೆಂ ಪೋ
ಲ್ವೀಯುವತಿಯನಱಿದೊಡೊಲ್ಲೆನೆಂಬವನಲ್ಲಂ ॥ ೦೦೪

ಎಂದು ಪ್ರಭಾವತಿಯ ರೂಪಂ ಪಟದೊಳ್ ಸವಿಸ್ತರಂ ಬರೆದು ಕೊಂಡುಚ್ಚಯಿನಿಗೆ ಪೋಗಿ ಚಂಡಪ್ರದ್ಯೋತಂಗೆ ತೋಱುವ್ರದು ಮೂತಂ ಕಂಡು, ೦೦೫

ಮೆಸೆದಲರ ಪೊಳೆವ ಬಾಣದಿ
ನಸದಳವೊಡನೊಡನೆ ಸೆರಗುವಾರ್ದೊರ್ವುಯೆ ಸೈ ।
ರಸದಿಸೆ ಮನೋಜರಾಜಂ
ವಸುಧೀಕಂ ಗಂಡುಗೆಟ್ಟು ಬೆಂಡಾಗಿರ್ದಂ ॥ ೦೦೬

[ಇರ್ದಿದಾರ ರೂಪು ನೀವಿದನಿಲ್ಲಿಗೇಂ ಕಾರಣಂ ತಂದಿರೆನೆ, ನಾರಾಯಣದತ್ತ ನೃಪನೊಲವೆನಱಿದಿಂತೆಂದಳ್:—][1] ೦೦೭

ರೌರವಪುರಾಧಿನಾಥನ
ನಾರಿಯು ರೂಪಿದು ಮಹೀಶ ಭಾವಿಸುವೆಂದಾ ।
ನಾರಿ ಮನೋಜನ ಸತಿಗಂ
ಶ್ರೀರಮಣಿಗಮಿಂದ್ರವನಿತೆಗಂ ಮಿಗಿಲಪ್ಪಳ್ ॥ ೦೦೮

[ನಿನಗಾಕೆ ಪ್ರಾಣವೆಲ್ಲಭೆಯಾಗಲೆವೇಱ್ಕುಂ ನಿನಗೆ ತಕ್ಕಳೆಂಬುದನಱ್ಕರಿಂ ಪೇೞಲೆಂದು ಬಂದೆನೆಂಬುದುಂ, ನಾರಾಯಣದತ್ತಂಗಂ ಚಿತ್ತವುಂ ಕೊಟ್ಟು ಸಂತಸಂಬಡಿಸುವುದುಂ ತನ್ನ ಬಗೆ ತೀರ್ದುದೆಂದು ರಾಗಿಸಿ ಶಕುನನೆಂದು ಸೆಱಗಂ ಗಂಟಿಕ್ಕಿಕೊಂಡು ಮಾಳವೇಶ್ವರಂಗಿಂತೆಂದಳ್ :— ೦೦೯

---

1 ಇದಾರ ಪಟವೆಂದು ಬೆಸಗೊಳ್ವುದುಂ (ಗ)

ಪಲವೇನೊದ್ದಾಯನಭೂ
ಲನೇಶನುಮೂರೊಳಿಲ್ಲ ಪಿರಿದುಂ ನೀಂ ಪೆ ।
ರ್ವಲದಿಂದಲ್ಲಿಗೆ ಪೋದೊಡೆ
ಲಲಿತಾಂಗಿ ಮನೋನುರಾಗದಿಂ ಕೈಸಾರ್ಗುಂ ॥ ೧೧೦

ಇಂದು ನಾಳೆಯೆಂದೆಣಿಸದೆಯಿರ್ದೆಯಪ್ಪೊಡೆ, ಒದ್ದಾಯನಮೆ ಹಾರಾಯನನ್ನೆಗಂ ಬರ್ಪನಾತಂ ಬಂದನಪ್ಪೊಡೆ ನಿನಗಾಸ್ತ್ರೀರತ್ನಂ ದೊರೆಕೊಳ್ಳಳಂಬುದುಂ, ಆ ಮಾತಿಂಗೆ ಒಡಂಬಟ್ಟನ್ನೆಳಿಸಿರ್ದುದು ಚಿತವೆಲ್ಲಿಂದು ಚತುರ್ಬಲಂವೆರಸೆತ್ತಿ ಕತಿಪಯಪ್ರಯಾಣಂಗಳಿಂ ಬಂದು ರೌರವಪುರಮಂ ಮೂಱಿಸೂಳಾಗಿ ಮುತ್ತಿಕೊಂಡು ಸಾಳಂ ಕಾರನೆಂಬ ತನ್ನ ಪೆರ್ಗಡೆಯಂ ಬರಿಸಿ ಪ್ರಭಾವತಿಯಲ್ಲಿಗಟ್ಟುವುದುಂ ಅವಂ ಬಂದಿಂತೆಂದಂ :—] [1] ೧೧೧

ಎಮ್ಮರಸಂ ಮಾಳವಪತಿ
ಸಮ್ಮತಮಪ್ಪಂತು ನಿಮಗೆ ಸುಖಮಪ್ಪಂತಿ ।
ನ್ನೆಮ್ಮಂ ನಿಮ್ಮಡಿಯಲ್ಲಿಗೆ
ತಾಂ ಮುದದಿಂದಟ್ಟಿದಂ ಮಹೋತ್ಸವದಿಂದಂ ॥ ೧೧೨

ಅಂತಿಂತೆನ್ನದೆ ಪಲವೆಂ
ಚಿಂತಿಸದೆ ಪೊಡರ್ಪನುಡುಗಿ ನಿಮಗಂ ತಮಗಂ ।
ಸಂತಸದಿಂದಂ ಸುಖಮ
ಪ್ಪಂತಿರೆ ಕೈಕೊಳ್ವುದೆವ್ಮ ನುಡಿಯಂ ನಯದಿಂ ॥ ೧೧೩

[ಎಂದೊರ್ಮೆಯೆ ತಮ್ಮ ಕಾರ್ಯಮಂ ಪೇೞದೆ ವಿನಯದಿಂ ದುಚಿತವಚನಂಗಳಿಂ ನುಡಿದು ಬಳಿಯಂ ತಮ್ಮರಸನ ಮಹಿಮೆಯನಿಂತೆಂದು ಪೊಗೞ್ದಂ :—] [2]

---

1 ನಿನಗರಸಿಯಾಗಲ್ತಕ್ಕಳಾಕೆಯ ಗಂಡನೂರೊಳಗಿಲ್ಲ ; ನಿನಗಿದವಸರಮೆನೆ ದಾಳಾದಾಳಿಯಿಂ ಬಂದು ಪುರಮಂ ಮೂಱಿಸುತ್ತಾಗಿ ಸುತ್ತಿಕೊಂಡು ಸಾಳಂಕಾಯನೆಂಬ ಪೆರ್ಗ್ಗಡೆಯನಟ್ಟುವುದುಮಾತಂ ಪ್ರಭಾವತಿದೇವಿಯಲ್ಲಿಗೆ ಬಂದಿತೆಂದಂ. (ಗ)

2 ಎಂದುಮತ್ತಮಿಂತೆಂದಂ (ಗ)

ಸಿರಿಗೆಮ್ಮ ರಸಂ ಮೆಘವನ
ದೊರೆಯರುಮಂ ಭರತರಾಜನನ್ನ ರುಮಂ ಖೇ।
ಚರಪತಿಯನ್ನ ರುಮಂ ದೇ
ವರಾಜ [1] ನನ್ನ ರುಮನೇಳಿದಂಗೆಯ್ದಿರ್ದಂ ॥ ೧೧೫

ಅನುಪಮಭರತಾಧೀಶ್ವರ
ನನುಜನುಮಂ ಸಂದ ಕಾಮದೇವನುಮಂ ರೂ।
ಪಿನೊಳಾವಂ ಭಂಗಿಸಿ ತ
ಜ್ಜನಪಂ ಕೈಕೊಳ್ಳನಾವನಂ ಬಣ್ಣಿಪೂಡಂ [2] ॥ ೧೧೬

ಸುರಭೂರುಹಮುಮನಗ್ಗ ದ
ಸುರಭಿಯುಮಂ ಚಾಗಗುಣದೊಳಮ್ಮ ರಸಂ ತ್ರ।
ಸ್ತರಿಯಾಡುವನೆಂದೊಡೆ ಪೋ
ಲ್ವರಾರೊ ಮತ್ತಿನ ಮಹೀಭುಜರ್ಗೋಭಾತ್ಮರ್ ॥ ೧೧೭

ಪರದೇಶಾಧೀಶ್ವರರೆ
ಮ್ಮ ರಸನ ಪೆಸರ್ಗೊಂಡೊಡಳ್ಕಿ ಭಯದಿಂದಂ ಬೆ।
ಳ್ಕೆರಲೆವೊಲೋಡುವರಾತನ
ಬಿರುದಂ ಮಾರ್ಕೊಳ್ವ [3] ಗಂಡರಾರ್ ವಸುಮತಿಯೊಳ್ ॥ ೧೧೮

[ಎಂದು ಪೊಗಟ್ಟುವುದುಂ, ಪ್ರಭಾವತೀಮಹಾದೇವಿ ನಕ್ಕು "ಬಹು ರತ್ನಾ ವಸುಂಧರಾ" ಎಂದು ಲೋಕದೊಳ್ ಕವಿಗಳುಂ ಚಾಗಿಗಳುಂ ಒರ್ವರೊರ್ವರ್ಗೆ ನಿಡಿಯರ್ಗೆ ನಿಡಿಯರೊಳಾರದೇನಪೂರ್ವಮೆನ್ನೆಗಂ ನಿಮ್ಮ ಬಂದ ಕಾರ್ಯಮಂ ಪೇಚಿಮೆನೆ, ಪೆರ್ಮಡೆಗಳಿಂತೆಂದರ್:—೧೧೯

ತರಳಾಕ್ಷಿ ನಿಮ್ಮ ರೂಪಂ
ಬರೆಯುತ್ತುಂ ಪಟದೊಳಮ್ಮ ಮಹಿಪತಿಗದನ।

---

1 ಖೇಚರಾಧಿಪತಿಯನ್ನ ರುಮಂ। ಸುರರಾಜನುಮಂ ಮೇಣ್ಭರತರಾಜ (ಗ)

2 ರೂ। ಏನೊಳಾವಭಂಗಿಗಸ್ಮಜ್ಜನಪತಿ ಕೈಕೊಳ್ಳನವರನಾರ್ಬಣ್ಣಿಪೂಡಂ(ಗ)

3 ಬೆಂಕೊಂಬ (ಬ. ಕ.)

ಚ್ಚರಿಯಾಗಿ ತೋಱುವುದುಮೆ
ಮ್ಮೆರಸನದಂ ಕಂಡು ಸೋಲ್ತು ವಿರಹಾನಳನಿಂ ॥ ೮೦

ಬೆಂದು ನೊಂದು ತಾಂ ಪ್ರತಾಪಿಯಪ್ಪುದಱಿಂದೆತ್ತಿ ಬಂದನಿಲ್ಲಿ ಸೆರಗಂ ಪಾರ್ವೆ ಗಂಡನಲ್ಲ; ನಿಮ್ಮೞಿ ಮತೊಂದಂ ಬಗೆಯದೆ ಬೇಗ ಮೆಮ್ಮೆರಸಂಗೆ ಮನೋನಯನವೆಲ್ಲಭೆಯಾಗಿರ್ದುದೆನೆ ಪ್ರಭಾವತಿಯಿಂ ತೆಂದಳ್:—][1] ೮೧

ಪರವೆನಿತೆಗೆಱಗಿದಾತಂ
ಗುರುಮೊದದಿಂ[2] ನೋಡ ಕ್ಕೈದು ಬೆಸಕೆಯ್ಯುದು ನಿ।
ಷ್ಕರತೆಯಿನೆಂದೊಡೆ ಚಿಃ ಸ
ತ್ಪುರುಷಂ ಪರವನಿತೆಗೆಱಗೆ ಪರವನಿತೆ ವೆಲಂ[3] ॥ ೮೨

[ಅದು ಕಾರಣದಿಂ ನಿಮ್ಮೆರಸನಪ್ಪೊಡೆ ಮಹಾಪುರುಷನಿಂತಪ್ಪುದಕ್ಕೆ ಬಯಸಲಾಗದು] ಎಂಬುದುಮವರಿಂತೆಂದರ್:— ೮೩

ದಿವದೊಳ್ ಭೋಗಿಪೆನೆಂದೀ
ಭವದ ಮಹಾಸೌಖ್ಯಮೆಲ್ಲಮಂ ಕಿಡಿಸಿ ಶರೀ।
ರವನೊಕ್ಕು ಕುದಿದು ಕೆಮ್ಮನೆ
ಸವಣಮೆರುಳ್ಗೊಳ್ವರಸಿ ಸುಖಮೆನೆ ಬಗೆಯಾ ॥ ೮೪

---

1 ಎಂಬುದುಮವರಸಿ 'ಬಹುರತ್ನಾ ವಸುಂಧರಾ' ಎಂದು ಲೋಕದೊಳ್ ನಿಡಿಯರ್ಗೆ ನಿಡಿಯರೊಳರಡಚ್ಚರಿಯಲ್ಲದನ್ನೆಗಂ ನಿಮ್ಮ ಬಂದ ಕಾರ್ಯಮಂ ಪೇಳಿಮೆನೆ, ಶಾಳಂಕಾಯನಿಂತೆಂದಂ:—ನಾರಾಯಣದತ್ತ ನಿಮ್ಮ ರೂಪಿನ ಪಟ ಮನೆಮ್ಮರಸಂಗೆ ತೋಱಿದೊಡೆಮ್ಮರಸನುಂ ನಿಮ್ಮ ಭಾಗ್ಯದಿಂ ನಿಮಗೆ ಸೋಲ್ತು ನಿಮ್ಮ ವೋಹದಿಂ ಬಂದನಲ್ಲಿ ಸಗಮುಮಂ ಬೆರಗುಮಂ ಪಾರ್ವ ಗಂಡನಲ್ಲೆಂಬುದು ಮರಸಿಯಿಂತೆಂದಳ್ (ಗ)

2 ಪರವನಿತೆಗೆ ಸೋಲ್ತಾತಂಗಿರತ್ತೆಯೊಳ್ (ಬ. ಕ.)

3 ಪರವನಿತೆಗೆಱಗಲಪ್ಪುದೆಧರೆಯೊಳ್ (ಬ. ಕ.)

ಎಂಬುದುಂ, ಪ್ರಭಾವತಿಯಿಂತೆಂದಳ್ :— ೦೦೫೫

ಖಳರಂ ಪಾದರಿಗರನೀ
ಗಳ ನೋಡಿರೆ ಕಂಡೊಡಡಸಿ ಜಡಿವರ್ಬಡಿವರ್ ।
ಮುಳಿಸಿಂ ಕೊಲ್ವರ್ ನರಕ
ಕ್ಕೀವುದನಿಂಬಾಗಿ ತೋಱಿ ಸಾಱುವ ತೆಱದಿಂ ॥ ೦೦೬
[ಅದಱಿಂ ಪಾದರಂ ಕಷ್ಟವೆನೆ ಪೆರ್ಗಡೆಗಳಿಂತೆಂದರ್ :—][1] ೦೦೭

ತಡೆಯದೆ ನೀನೆನ್ನೊರಸನ
ನೊಡಗೂಡೊಡಗೂಡಲೊಲ್ಲದೊಂದಕ್ಕೊಂದಂ ।
ನುಡಿಯುತ್ತಿರ್ದೊಡೆ ಕಡೆಯೊಳ್
ಕಡುಚಪಳನ ಗೋಷ್ಠಿ ಬಱಿದೆಯಾದಂತಕ್ಕುಂ [2] ॥ ೦೦೮
ಎನೆ ಪ್ರಭಾವತೀಮಹಾದೇವಿಯಿಂತೆಂದಳ್ :— ೦೦೯

ಮೆರಣಕ್ಕಂಜದೆ ಗುಣಮೆಂ
ಪರಿಹರಿಸದೆ ಶೀಲರತ್ನಮಂ ರಕ್ಷಿಸಿ ಸ ।
ತ್ತರ ಸಾವು ಸಾವೆ ಶೀಲವು
ನುರವಣೆಯಿಂ [3] ಬಿಟ್ಟ ಖಳರ ಬಾಟುಂ ಬಾಟೇ ॥ ೦೧೦
ಎನೆ ಸಾಳಂಕಾರನಿಂತೆಂದಂ :— ೦೧೧

ಉಡುವುದು ದಿವ್ಯಾಂಬರಮೆಂ
ತುಡುವುದು ಭೂಷಣಮೆನುಣ್ಬುದೊಳ್ಳುಣಿಸಂ ತಾಂ ।
ಪಡೆದೊಡೆ ದೊರೆಕೊಂಡೊಡವಂ
ಬಿಡುವುದದೇಂ ಕೇಳ್ ಪರತ್ರೆಯಂ [4] ಕಂಡವರಾರ್ ॥ ೦೧೨
ಎನೆ ಸಮ್ಯಕ್ತ್ವರತ್ನಾಕರೆಯಿಂತೆಂದಳ್ -— ೦೧೩

---

1 ಎನೆಸಾಳಂಕಾಯನಿತೆಂದಂ (ಬ. ಕ.)
2 ಬಱಿದೆಯಾದುದನಱಿಯು (ಗ) 3 ಉರಿವರಿಯಿಂ (ಗ)
4 ಬಿಡುವುದೆ ವೇಳಣಪರತ್ರೆಯಂ (ಗ)

ಕುರುಡಂ ಮುಂದಿರ್ದಿಭಮುಮೆ
ನೆರಡಿಲ್ಲದೆ ಕಾಣದಂತೆ ದುರಿತೋದಯದಿಂ ।
ನರಕಂಬೊಗಲಿರ್ದವರುಂ
ಪರತ್ರೆಯುಂ ಕಾಣರೆಂಬುದೇನಚ್ಚರಿಯೇ ॥ ೦೩೪

[ಅದುಕಾರಣದಿಂವಱಿಸಿಲ್ಲ, ಜೀವನಿಲ್ಲ, ಪರತ್ರೆಯಿಲ್ಲೆಂಬ ಜಡರ ನುಡಿ ಪ್ರಮಾಣಮೆಲ್ಲೆಂಬುದುಂ, ಪೆರ್ಗಡೆಗಳಿಂತೆಂದರ್ ;—] [1] ೦೩೫

ಜಳಜಮುಖಿ ಪಲವುಮಾತಂ
ಗಱಿಪದೆ ಮದ್ವಲ್ಲಭಂಗೆ ವಲ್ಲಭೆಯಾಗೀ ।
ಪೊಱಿಲಂ ನಾಡಂ ಕಿಡಿಸದೆ
ಕಳಕುಳಮಂ ಪ್ರಜೆಗೆ ಮಾಡದೀಗಳೆ ಬೇಗಂ ॥ ೦೩೬

ಪರಿಸುಗುಮಿಲ್ಲಿ ಭೋರ್ಗರೆವ ನೆತ್ತರ ಪೆರ್ಮೊನಲಂ ಧಗದ್ಧಗೆಂ
ದುರಿಸುಗುಮುಗ್ರಕೋಪಶಿಖಿಯಿಂ ಪ್ರರಮೆಲ್ಲಮೆನಟ್ಟು ಮೆಟ್ಟು ಸಂ
ಗರದೊಳನೇಕರಂ ತಱಿದು ಖಂಡದೊಳಿಂಡೆಯನಾಡುಗುಂ ಮನೋ
ಹರೆ ಬಿಡು ನಿನ್ನ ದರ್ಪಮನವಂಗಿದಿರಾಗಿ ಬದುರ್ಂಕುವನ್ನರಾರ್ ॥ ೦೩೭

[ಎಂದು ಭಯಮುಂ ತೋಱಿ ನುಡಿಯೆ, ವನಿತಾರತ್ನೆ ಯಿಂತೆಂದಳ್:—] [2] ೦೩೮

ಧರಣಿಜೆಯುನುಯ್ದ ಲಂಕಾ
ಪುರೇಶನಂತಪ್ಪ ಗಂಡರುಂ ಸತ್ತರ್ ನಿ ।
ತ್ತರಿಸದೆನೆ ಕೇಳ ಮತ್ತಿನ
ಧರೆಯರಸರ್ ಸರವೆಧೂಪ್ರಿಯರ್ ಬಱ್ಪಿರೇ ॥ ೦೩೯

ಎಂಬುದುಂ, ಸಾಳಂಕಾರಂ ಮುನಿದು ಎನ್ನ ಮಾತಂ ಕೇಳಲೊಲ್ಲದ ಫಲವೆಂ ತಡೆಯದೆ ಕಾಣ್ಬೆಯೆಂದು ಪೊಱಮಟ್ಟು ಪೋದನ

[1] ಎನೆ ಸಾಳಂಕಾಯನಿಂತೆಂದಂ (ಗ) [2] ಎಂಬುದುಂ ಸಮ್ಯಕ್ತ್ವ ಚೂಡಾವಮಣಿ ಯಿಂತೆಂದಳ್ (ಗ)

ನ್ನೆಗಮುಗ್ರಸೇನನೆಂಬ [1] ದಂಡಾಧಿಪಂ ಕೋಂಟೆಯುಂ ಬಲಿದು ಕಾದುವೆ
ಸಮಕಟ್ಟಿಂದಿರ್ದುದುಂ ಪ್ರಭಾವತೀಮಹಾದೇವಿ, ೨೪೦

[ಪಿರಿದುಂ ಬಲಸ್ಥನಿವನೀ
ಧುರದೊಳ್ ನಿಲ್ವನ್ನರಿಲ್ಲ ಮದ್ವಲ್ಲಭನುಂ।
ಪರದೇಶದೊಳಿರ್ಪಸಿಂ
ದರಿದಾಯ್ತೆಂದಳ್ಕಿ ಕಾಂತೆ ತಳವೆಳಗಾದಳ್ ॥ ೨೪೧

ಆನೀಗಳ್] ಜಿನಪೂಜೆಯಂ ಮಾಡಿ, ಘೋರೋಪಸರ್ಗವೆಂದು ಪಿಂಗುವಿನಂ ಆಹಾರಶರೀರನಿವೃತ್ತಿಯೆಂದು ಕೈಯಸಿಕ್ಕಿಕೊಂಡಿರ್ದಳನ್ನೆಗಂ, ೨೪೨

[ಪೊನ್ನ ವಿಮಾನಮನೇಱಿ ಮೆ
ಹೋನ್ನತಿಯಿಂ ದೇವಲೋಕದಿಂ ಮೇರುವಿಗ।
ಕ್ಕಾನ್ನಯದಿಂದಂ ಪೋಗುತೆ
ಸನ್ನುತಜಿನಭವನಮೆಲ್ಲಮಂ ಪೂಜಿಸಿದೆಂ ॥ ೨೪೩

ಪೂಜಿಸಿ ನುತ್ತಂ ನಂದೀಶ್ವರದ್ವೀಪಮಂ ಕಾಣಲೆಂದು ಭಕ್ತಿಯಿಂ ಪೋಗುತ್ತಿರಲೆನ್ನ ವಿಮಾನವಿಮಾಪುರದ ಮೇಲೆ ಪೋಗದೆ ಕೀಲಿಸಿ ನಿಲ್ವುದುಂ, ಅವಧಿಲೋಚನದಿನೀಸತಿಗಾದುಪಸರ್ಗಮನಱಿದು,] [2] ೨೪೪

ಮುಳಿಸಾಗೆ ಮಾಳವೇಶನ
ಬಳಮೆಲ್ಲಮನುಯ್ದು ಪುಡುಕುನಿರಳ್ದ ವೆನೆಂ (?)
ಬಳಮಾಗಿ ಮತ್ತೆ ಮಾಣ್ದೆಂ
ತಿಳಿವಾಂ ಸದ್ದೃಷ್ಟಿಯಪ್ಪ ಕಾರಣದಿಂದಂ [3] ॥ ೨೪೫

---

1 ಎನೆ ಸಾಳಂಕಾಯನುಂ ಮನಿದು ನೀನಿದಕ್ಕಿ ಫಲಮುಂ ಕಾಣ್ಬೆಯೆಂದು ಪೋದನಿತ್ತಲುಗ್ರಸೇನನೆಂಬ (ಗ)

2 ಆಸನ್ನಕಂಪದಿಂದದನಱಿದು ಬಂದು (ಗ)

3 ಬಳಲಾಗಿಮನವೆದೆಯಿಯುಂ। ಮುಳಿಸಂ ಮಾಣ್ದಿವನಬಲವಾನವಯವ
ಂದಂ (ಗ)

[ಅಂತು ಕರುಣಿಸಿ ಚಂಡಪ್ರದ್ಯೋತನ ಬಲಮೆಲ್ಲಮಂ] ಮಹಾ ವಾಯು ತಲಿಗೆಲೆಯನೆತ್ತುನಂತೆತ್ತಿ ಕೊಂಡುಯ್ದು ಜ್ಜಯಿನಿಯ ಮಹಾ ಕಾಳದೊಳಿರಿಸಿ, ೨೪೬

ಈರಮೆಣಿಯ ಶೀಲಮೆನಿದ
ನಾರಯ್ಗಲ್ವೇಱುಮೆಂದು ತದ್ಭೂಮಿಪನಾ ।
ಕಾರಮನೆ ಕೊಂಡು ಪುರಮಂ
ವಾರಿಧಿಯೊಲ್ಸುತ್ತಿ ಮುತ್ತಿಕೊಂಡುಗ್ರತೆಯಿಂ ॥ ೨೪೭

ಪೊಱಮಲೆಲ್ಲಮಂ ಮಾಯಾನಿದ್ರೆಯೊಳಿಕ್ಕಿ [ಚತುರಂಗಬಲಮಂ ವಿಗುರ್ವಿಸಿ ಕೋಂಟೆಯುಂ ಕೊಂಡು,] ೨೪೮

ಉರಿವಂತೆ ಪುರವರಂ ಸಂ
ಗರದೊಳ್ ಕೆಡೆವಂತೆ ಪೆರ್ವಲಂ ಬೀದಿಗಳೊಳ್ ॥
ಪರಿವಂತೆ ರಕ್ತಮವನಿಪ
ನರಮನೆಯಂ ಸುಟ್ಟು ಸೂಱೆಗೊಳ್ವಂತೆ ಭಟರ್ ॥ ೨೪೯

[ಚನೆತ್ಕಾರಮಂ ಮಾಡಿ ಭಯಮುಮುದ್ಭ್ರಮಮುಮೊಗೆ ಪ್ರಭಾವತೀಮಹಾದೇವಿಯಲ್ಲಿಗೆವೆಂದು ಮುಂದೆ ನಿಂದಿರ್ದು, ೨೫೦

ಎನಗಿದಿರಾಂಪವರಾರ್ಮೀ
ದಿನಿಯೊಳ್ ನಾಂ ಮುನಿದೊಡಂ ಜವಂ ಮುಳಿದೊಡಮು ।
ರ್ಬಿನೊಳಾಂತು ಸೆಣಸಿ ಕಾದುವೆ
ಜನವೆಂಗೆಂಟೆರ್ದೆಯೆ ಮರುಳ ನೀನೆತ್ತಱಿವೆ ॥ ೨೫೧

ಮತ್ತಂ] ನಿನ್ನ ಪ್ರಾಣವಲ್ಲಭನಪ್ಪೊದ್ದಾಯನಮಹಾರಾಜನ ಬಿಂಕಮಂ ಸುಂಕಂಗೊಂಡು ವೀರಮಂ ದೂರಂಮಾಡಿ [ಬೆಳ್ಳರಲೆಯುಂ ಬೆಂಗೊಂಬಂತೆ ತಗುಬ್ದಿ] ಪಿಡಿದುಕೊಂಡು ಕೋಡಗಗಟ್ಟುಗಟ್ಟು ತಂದೆಂ; ನಂಬೆಯಪ್ಪೊಡೆ [ಯಿವನಂ ನೋಡೆಂದೆನೆ ಕಾಂತೆ,] ॥ ೨೫೨

ಎನ್ನಾ ಣ್ಮನದಟನುಡುಗಿಸು
ವೆನ್ನ ರ್ಪಿಅರೊಳರೆ ಗಂಡರವೆನೀತಳದೊಳ್ ।
ಪನ್ನಗನೀಕಡುದುರ್ಜನ
ನೆನ್ನಂ ನುಡಿಸಲ್ಕೆವೇಡಿ ಮಱುಗಿಪನಱಿವೆಂ [1] ॥ ೨೫೩

[ಈತನೊಡನೆ ಮಾರಿಯುಂ ಬಳಾರಿಯುಂ ನುಡಿಗೆ ಯಾನೇನಂ ಮಾಡಿದೊಡಮನ್ನ ಶೀಲಮನೇಗೆಯ್ದುಂ ಕಿಡಿಸುವೆನಲ್ಲೆಂದು ಪರಮಜಿನ ಚರಣಮನೆ ಮನದೊಳ್ ತಾಳ್ದಿ ಪಂಚನಮಸ್ಕಾರಮನೋದುತ್ತುಂ ಮುನ್ನಿನ ಮಹಾಪುರುಷರ ಕಥೆಗಳಂ ಭಾವಿಸುತ್ತುಮಿರೆ,] [2] ೨೫೪

ನಿನ್ನು ರಿಪದಿಂದೆ ಪುರವರ
ಮನ್ನಾಡುಂ ಕೆಟ್ಟು ಮೊಟ್ಟನಾದದು ಮತ್ತಂ ।
ನಿನ್ನಾ ಣ್ಮಂಗೀವಿಧಿಯಾ
ಯ್ತಿನ್ನಿರವೇಡೆನ್ನೊಳಚ್ಚಱಿಂದಂ ಕೂಡಾ ॥ ೨೫೫

ಆನಳಿಪುವೆನ್ನ ರೊಳರೇ
ಮಾನಿನಿಯರ್ನಿನ್ನ ಪುಣ್ಯದಿಂದಂ ನೀರೇ ।
ಜಾನನೆಯಾಂ ದೊರೆಕೊಂಡೆಂ [3]
ಹೀನತೆಯಂ ಬಿಸುಡು ಮೋಹದಿಂ ಕೂಡೆನ್ನೊಳ್ ॥ ೨೫೬

ಪತಿ ಬಂದಪನೆಂಬಾಸೆಯೊ
ಳತಿಶಯದಿಂದಿರ್ಪ್ಯಪ್ಪೊಡಂ ನಿನ್ನ ಮಹೀ ।
ಪತಿಯುಮೆನಾಂ ಪಿಡಿದೆಂ ಸಿತ
ಮತಮಂ ಬಿಟ್ಟೆನ್ನೊಳಚ್ಚಱಿಂದಂ ಕೂಡಾ ॥ ೨೫೭

---

1 ನುಡಿಯಿಸಲುನೇಡ ನುಡಿದಪನಱಿವೆಂ (ಗ) 2 ತನ್ನೊಡನೆಪೋದ ಪಡೆಮಾತಿನ ನುಡಿಗೆ ತಾನೇನಂ ಮಾಡಿದೊಡಮಾನೆನ್ನಶೀಲಮನೆಳೆವೆನಲ್ಲೆಂದುಸಿರ ದಿರ್ಪ್ಪದುಂ (ಗ) 3 ಪತಿಯಾದಪೆನಾಂ (ಗ)

ತರುಣವಯಸಿನೊಳ್ ಮೆಚ್ಚಿದ
ಪುರುಷರೊಳೊಡಗೂಡಿ ಕಾಲಮಂ ಕಳೆಯದೆ ಪಂ ।
ಕರುಹಾಕ್ಷಿ ಶೀಲಮಂ ಪಿಡಿ
ದುರವರಿಯಿಂ ಬಂದ ಸುಖಮನೆಡೆಯೊಳ್ ಕಿಡಿಪೌ [1] ॥ ೦೫೪

[ಎಂದು ನಾನಾಪ್ರಕಾರದಿಂ ನುಡಿದೊಡಂ ಮಾರ್ನುಡಿಯದಿರೆ ಮೆಚ್ಚಿ ಮನದೊಳ ಪೊಡೆಮಟ್ಟಿನ್ನ ದಿವ್ಯಸ್ವರೂಪಮಂ ತೋಱಿ ನಿಮ್ಮ ಪಸರ್ಗಂ ಪೋಯ್ತುಕ್ಕೆಯನೆತ್ತಿಕೊಳ್ಳಂದು ಪುರದೊಳಗಣ ಮಾಯಾ ನಿದ್ರೆಯಂ ಮಾಣಿಸಿ ಓಗುರ್ವಣೆಯನುಡುಗಿಸಿ ಸುರತರುಕುಸುಮದಿಂ ಪೂಜಿಸಿ ಶೀಲವತಿಯೆಂಬ ಮಾಂಗಲ್ಯನಾಮಮನಿಟ್ಟು ದೇವಲೋಕಕ್ಕೆ ಪೋದೆನೀವನಿತಾರತ್ನಂ ಕೇವಳಮಲ್ಲೆಂದು ಪೊಗಲ್ದು ತದನಂತರಂ,] [2] ೦೫೫

ವಿವಿಧರತುನಂಗಳಿಂದೊ
ಪ್ಪುವ ಸಿಂಹಾಸನಮನಾಗಳಾಹ್ವಣದಿಂ ತ ।
ದ್ದಿವಿಜಂ ಮಾಡಿ ಧರಿತ್ರೀ
ರಮಣನನರಸಿಯುಮನಿರಿಸಿ ಪಿರಿದುತ್ಸವದಿಂ ॥ ೦೬೦

ಅರಲ ಮೆಳ ಕರೆಯೆ ಭೋರೆನೆ
ಸುರದುಂದುಭಿ ಮೊೞಗೆ ತೆಂಕಣೆಲರೆಸಗೆ ಮನೋ ।
ಹರಮಾಗೆ ಮೃದುನಿನಾದಂ
ಕರವೆಸೆದಿರೆ ಪಾಡೆ ದೇವಿಯರ್ವಂಗಳಮೆಂ ॥ ೦೬೧

ಸುರುಚಿರರತ್ನದಿನೊಪ್ಪುವ
ಸುರರ ವಿಮಾನಂಗಳೊಂದು ತಿಂತಿಣಿಯಿಂದಂ ।

---

1 ಶೀಲಮಂ ಬಿಟ್ಟರತ್ರೆಯೊಳ್ಬಂದ ಸುಖಮನೇಕೆಯೊ ಕಿಡಿಪೈ (ಬ.ಕ.)

2 ಅಂತನೇಕುಪಸರ್ಗಮಂ ಮಾಡಿದೊಡವೊಡಂಬಡದಿರೆ ಮೆಚ್ಚಿ ಸ್ವರೂಪಂ ತೋಱಿ ಪಿರಿದಪ್ಪುಪಸರ್ಗಮಂ ಪಿಂಗಿಸಿ ಸುರತರುಪುಷ್ಪಂಗಳಿಂ ಪೂಜಿಸಿ ಪೊಡೆವಟ್ಟು ಶೀಲವತಿಯೆಂಬ ಪೆಸರನಿಟ್ಟು ಪೋದೆನದುಕಾರಣದಿಂದೀಸತಿ ಮಹಾಸತಿಯೆಂದು ಪೊಗೞ್ದ (ಗ)

ಬರವೆಲ್ಲಂ ತೀವಿರ್ದುದು
ನರನಾಥನ ಕೀರ್ತಿಲತೆಯ ಪೂಗಳ ತೆಱದಿಂ ॥ ೧೬೦

ಅಂತು ಜನವೆಲ್ಲಂ ಬೆಱಗಾಗೆ ಜೆನಭಕ್ತಿಯೆಂಬ ಬೆಳಸಿನ ರಾಶಿಯುಂ ತೋರ್ಪಂತೆ ಪಾಲ ಸಮುದ್ರದ ನೀರಿಂದಭಿಷೇಕಂಮೊಡಿ ಪೂಜೆಸಿ [1] ಸವ್ಯೇಕ್ತ್ಯ ವಚೊಡಾಮಣಿಯುಂ ವಾತ್ಸಲ್ಯರತ್ನಾಕರನುಂ ಸುಕವಿಸಿಕರಪಿಕಮಾಕಂದನುಂ ಸಹಜಕವಿಮನೋಹರೋದ್ಯಾನಕಳಹಂಸಕಳಕಂಠನುವೆಂಬೀ [2] ಪ್ರಶಸ್ತನಾಮಂಗಳನಿಟ್ಟು ತಣಿಯುಂಡ ಭೂತವಂತೆ ಪಲತೆಱದ ಪೊಗಪ್ಪೆಗಳಿಂ ಪೊಗಟ್ಟು ವಾಸವಂ ದಿವಿಜಸಿವಾಸಕ್ಕೆ ಪೋದನಿಂತು, ೧೬೧

ಪುರುಷರತುನಂ ಪುರಾತನ ·
ಚರಿತಂ ಜಿನಚರಣಕಮಲಭೃಂಗಂ ಸತ್ಯಾ ।
ಭರಣಂ ದಯಾಂಬುನಿಧಿ [3] ಮಂ
ದರಧೈರ್ಯಂ ನೃಪಕಿರೀಟಘಟ್ಟಿತಚರಣಂ ॥ ೧೬೨

ಧರೆ ಕೊಂಡುಕೊನೆದು ಬಣ್ಣಿಪು
ವರಿದೆ ಗುಣೋನ್ನತಿಯಿನೀ ಮಹಾತ್ಮಂ ಧರೆಗ ।
ಚ್ಚರಿಯಾಗೆ ಭಕ್ತಿಯಿಂದಂ
ಸುರರಿಂದಂ ಪೂಜೆವೆಡೆದನಿನ್ನರುಮೊಳರೇ ॥ ೧೬೩

ಎಂದೊದ್ದಾಯನಮಹಾರಾಜನಂ ಲೋಕವೆಲ್ಲಂ ಬಂದೆ ಕೊರಲೊಳ್ ಕೊಂಡಾಡೆ [4] [ಸದ್ಗುಣದೊಳ್ ಕೂಡಿ] ಪಲಕಾಲಂ ರಾಜ್ಯಂಗೆಯ್ದಿಂದುದಿವಸಂ [ತನ್ನೊಳಿಂತೆಂದಂ :—] ೧೬೪

---

1 ಅಂತಗುವರ್ಗಿಗೆ ವಿಗುರ್ವಿಸಿ ಕ್ಷೀರಜಲಧಿಯ ನೀರಂ ಪೊಂಗಳಸಂಗಳಿಂ ತಂದ ಭಿಷೇಕಂಗೆಯ್ದು ನರೇಶ್ವರಂಗೆ ಮೆಚ್ಚಿ ಸವ್ಯೇಕ್ತ್ಯ್ಯ, (ಬ. ಕ.)

2 ಮಾಕಂದನುಂ, ಸುಕವಿಜನವನಃಪಯಃಪಯೋಧಿಹನುಳರನುತಭಾವಯುತದಿಗಂಬರದಾಸಂ ಜಿನಶ್ರೀಚರಣಾಲಂಕಾರಶೀರ್ಷನುವೆಂಬ (ಗ)

3 ಜಿನಸಮಯವಾರ್ಧಿವರ್ಧನಚಂದ್ರಂ । ಪರಮಗುಣಾಭರಣಂ (ಗ)

4 ಕೈವಾರದಿಂಪೊಗಡೆ (ಬ. ಕ.)

ಮತಿಗೆಟ್ಟನ್ನೆವರಂ ಸಂ
ಸೃತಿಯೊಳ್ ನಾಂ ತೊಡರ್ದು ಮುಟ್ಟುಗೆಟ್ಟಿರ್ದೆಂ ಸಂ ।
ಸೃತಿಯುಂ ಬಿಟ್ಟಂ ನಾಂ ನಿ
ರ್ವೃತಿಯಂ ಸಾಧಿಸುವುಪಾಯಮುಂ ಚಿಂತಿಸುವೆಂ ॥ ೦೬೫

[ತನುವೆಪ್ಪೊಡೆ ನಿಲ್ಲದು ಜ
ವ್ವನಮಪ್ಪೊಡೆ ನೀರ ಬೊಬ್ಬುಳಿಕೆ ಕಡುಗೂರ್ಪಂ ।
ಗನೆಯರ್ ನಂಟರ್ ತನುಭವ
ರನುಜಾದಿಗಳಪ್ಪರೇ ಶರಣ್ಯಾವೆಡೆಯೊಳ್] ॥ ೦೬೬

ಎಂದು ಬಗೆದು [1] ಸಂಸಾರಕ್ಕೆ ಪೇಸಿ [ವೈರಾಗ್ಯಂ ಪುಟ್ಟಿ ತನ್ನ] ಪಿರಿಯ ಮಗನಪ್ಪರಿಂಜಯಂಗೆ [ರಾಜ್ಯಾಭಿಷೇಕಂಮಾಡಿ] ಧರಾಭಾರಮನೊಪ್ಪಿಸಿ, ೦೬೭

ಧರೆಯುಂ ನೋಯಿಸದಿರ್ ಜಿನೇಶ್ವರಸದಾಂಭೋಜಾತನುಂ ಭಾವಿಸು
ತ್ತಿರು ಜೈನಾಗಮದೋಜೆಯಿಂ ನಡೆ ಬುಧವ್ರಾತಕ್ಕೆ ಲೇಸಾಗು ಮಾ
ಣ್ಮಿರದಿರ್ಧರ್ಮಮನುಗ್ರಮಂ ಪಿಡಿಯುದಿರ್ ಧೂರ್ತಾದಿದೋಷಂಗಳಂ
ಪರದಿಂ ಪೊರ್ದದಿರೊಲ್ದುಮಾಡು ಮುನಿಸಂದೋಹಕ್ಕೆ ನೀನರ್ತಿ
ಯಂ ॥ ೦೬೮

ಎಂದಪ್ಪೈಸಿ ರಾಜ್ಯಮಂ [ಕೊಟ್ಟವ ದಕ್ಕಂ ತೊಱೆವಂತೆ] ತೊಱೆದು ವೀರಸ್ವಾಮಿಯ [2] ಪಾದಮೂಲದೊಳ್ ಜಿನದೀಕ್ಷೆಯಂ ಕೈಕೊಂಡು ಗ್ರೈವೇಗ್ರತಪಶ್ಚರಣದಿಂದಪ್ಪ ವಿಧಕರ್ಮಂಗಳಂ ನಿರ್ಮೂಲಮಂಮಾಡಿ [3] ನಿಶ್ರೇಯಸಶ್ರೀಯೊಳ್ ಕೂಡಿದಂ. ಶೀಲವತೀಮಹಾದೇವಿಯುಂ ಸುವ್ರತಗಂತಿಯರಲ್ಲಿ ದೀಕ್ಷೆಯಂ ಕೈಕೊಂಡು [ಕರವೆರಿದೆನಿಸುವ ತಪದೊಳ್ ನೆಗಚ್ದು] [4] ಸನ್ಯಸನವಿಧಿಯಿಂ ಮುಡಿಪಿ ಬ್ರಹ್ಮಕಲ್ಪದೊಳ್ ಪತ್ತು ಸಾಗರೋಪಮಕಾಲಮಾಯುಷ್ಯಕವೊಡೆಯ [ಮಹರ್ದ್ಧಿಕದೇವ] ನಾಗಿ ಪುಟ್ಟಿದಳ್. ೦೬೯

1 ಎಂದು ವೈರಾಗ್ಯದೊಡವಿಂ (ಗ) 2 ವರ್ಧಮಾನಸ್ವಾಮಿಯ (ಗ)
3 ಕಿಡಿಸಿ (ಗ) 4 ಕಡೆಯೊಳ್ (ಗ)

ಅದಱಿಂ ನಿರ್ವಿಚಿಕಿತ್ಸೆಯೆ
ವಿದಿತಂ ಕೈವಲ್ಯಸತಿಗೆ ತಿಲಕಂ ಸೌಖ್ಯಾ ।
ಭ್ಯುದಯಂ ಸಮೆಸ್ತದುಪಕೃತ
ಮದೇಭಕೇಸರಿ ಗುಣಕ್ಕೆ ರತ್ನದ ಕಲಶಂ ॥ ೨೬೦

ಎಂದು ನಿರ್ವಿಚಿಕಿತ್ಸೆಯೊಳಾದ ಫಲಮುಂ ಗಣಧರಸ್ವಾಮಿಗಳ್ ಪೇೞ್ದುದುಂ, ೨೬೧

ಧರಣೀಸ್ತುತ್ಯಂ ಗುಣಾಂಭೋನಿಧಿ ಜಿನಚರಣಾಂಭೋಜಮೆತ್ತಾಳಿ ಧಾತ್ರೀ
ಧರಧೃಯರ್ಮಂ ವಾಗ್ವಧೂವಲ್ಲಭನಮಳಯಶಂ ನಿರ್ಮಳಂ ನಿಷ್ಕಷಾಯಂ
ವರಭವ್ಯಾಂಭೋಜಸೂರ್ಯಂ ನಿರುಪಮನೊಸೆದಂ ಕೇೞ್ದ ತ್ರೈವಿದ್ಯ ಚಕ್ರೇ
ಶ್ವರಪಾದಾಂಭೋಜಭೃಂಗಂ ಸುಕವಿಜನಮನಃಪದ್ಮಿನೀರಾಜಹಂಸಂ [1] ॥

ಇದು ನಿಖಿಲದಿವಿಜಪರಿವೃಢಮುಕುಟತಟಘಟಿತಮಣಿಕಿರಣವಿಲುಳಿತ
ಚರಣಾಂಬುಜೇಯಪರಮಜಿನಚರಣಯುಗಳಸರಸಿರುಹಮಿತ್ತ
ಮಧುಕರ ನಿರುಪಮಸಹಜಕವಿಜನ ಮನಃಪಯಃ
ಪಯೋಧಿಹಿಮಕರ ನುತಭಾವಯುತ
ದಿಗಂಬರದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧರ್ಮಾಮೃತದೊಳ್
ದರ್ಶನತೃತೀಯಾಂಗವ್ಯಾವರ್ಣನಂ
ಚತುರ್ಥಾಶ್ವಾಸಂ.

---

1 ಪರಮಶ್ರೀಜೈನತತ್ವಪ್ರಿಯನಮಳಯಶೋಭಾಜನಂ ಲೋಕಪೂಜ್ಯಂ
ಧರಣೀಸ್ತುತ್ಯಂ ಗುಣಾಂಭೋನಿಧಿ ಜಿನಸಮಯವ್ಯೋಮಶೀತಾಂಶು ಸತ್ಯಾ
ಭರಣಂ ತ್ರೈವಿದ್ಯಚಕ್ರೇಶ್ವರವಿಮಳಪದಾಂಭೋಜಭೃಂಗಂ ಜಿನಶ್ರೀ
ಚರಣಾಲಂಕಾರಶೀರ್ಷಂ ಸುಕವಿಜನಮನಃಪದ್ಮಿನೀರಾಜಹಂಸಂ ॥ (ಗ)

ಪಂಚಮಾಶ್ವಾಸಂ.

ಶ್ರೀಮನ್ನಿರ್ವಿಚಿಕಿತ್ಸೆಯ
ಮಾವೈಯೆಯೆ ಮೋಕ್ಷದಲ್ಲಿಗುಯ್ಯಲ್ ಸಾಲ್ಕಂ ।
ದೇವಾತ್ಮೊ ಮನದೊಳ್ಮೂಸೆದಂ
ಶ್ರೀವಿಹಿತಂ ಸುಕವಿನಿಕರಪಿಕಮೊಕಂದಂ ॥ ೧

ಅಂತು [ನಿರ್ವಿಚಿಕಿತ್ಸೆಯೊಳಾದ ಫಲಮಂ ಲೇಸಾಗಿ ಅಱಿದು ಮತ್ತಂ ಗೌತಮಸ್ವಾಮಿಗಳ್ಗೆ ಮಗಧನಾಯಕಂ ಪೊಡೆವಟ್ಟು ಮುಂದ ಣಮೂಢದೃಷ್ಟಿಯ ಕಥೆಯುಂ ನಿನ್ನಡಿ ಬೆಸಸಲ್ವೇೞ್ಕುವೆನೆ ಗಣಧರ ಸ್ವಾಮಿಗಳ್ ನಿರ್ವಾಣಶ್ರೀವನಿತೆಯ ಕುಚದೊಳಲಂಕರಿಸಿರ್ದ ಹಾರಯ ಷ್ಟಿಯಿದೆನಿಸುವ ಅಮೂಢದೃಷ್ಟಿಯ ಕಥೆಯನಿಂತೆಂದು] [1] ಪೇೞ್ದರ್:—
ಜಿನರಂತೆ [ಸಿಂಹದಂತೆ] ಗರುಡನಂತೆ ಕಾಮನಂತೆ ಭೋಜನಂತೆ [2] ಕ ರ್ಮಭೂಮಿಯಂತೆ ಮನುಷ್ಯರಂತೆ [3] ಸಂಯುತನಂತೆ ಮಹಾವ್ರತಂ ಗಳಂತೆ ಪಾಂಡುಕುಲದಂತೆ [4] ಜ್ಯೋತಿರ್ಲೋಕದಂತೆ ವ್ಯಾಕರಣದಂತೆ ಜೋಯಿಸದಂತೆ ಸಪ್ತಮತೀರ್ಥಂಕರಧರಣೀಂದ್ರನಂತೆ ದರ್ಶನಮುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿತ್ವ ಮುಮೆಂಬಾಯ್ದುಜೊಳಂ ಕೂಡಿ ಶೋಭಿಸುವುದು ॥ ೨

ಮೂಢತೆಯುಂ ಬಿಟ್ಟು ಪೆಱರ್
ಮಾಡುವ ಡೊಂಬಿಂಗೆ ಬೇಗಮೆಱಗದೆ ಮೂರ್ಖರ್ ।
ಮಾಡುವುದಂ ಲೇಸೆನ್ನದೆ
ಕೂಡುವುದಾರಯ್ದಮೂಢದೃಷ್ಟಿಯೊಳಾವಂ ॥ ೩

---

[1] ನಿರ್ವಿಚಿಕಿತ್ಸೆಯುಂ ಕೇೞ್ದ ಮುಂದಣಮೂಢದೃಷ್ಟಿಯ ಕಥೆಯಂ ಬೆಸಸುವುದೆಂಬುದುಮಿಂತೆಂದು (ಗ) [2] ಪ. ಗದಂತೆ ಸುಭೋಜನಂತೆ ಸಂಯುಮಿಯಂತೆ (ಗ)
[3] ಜೈನರಂತೆ ಸಂಯುತ (ಗ) [4] ಪಂಚಕರದಂತೆ (ಗ)

ಇನ್ನದಱ ಮಹಿಮೆಯೆಂತೆಂದೊಡೆ: —

[ಧರಣೀವನಿತೆಯು ತೊಟ್ಟಾ
ಭರಣಮಿದೆನಿಪಾಮಡಂಬಖರ್ವಡದಿಂದಂ ।
ಪುರದಿಂ ಖೇಡಾದಿಗಳಿಂ
ಕರವೆಸೆವುದು ಶೂರಸೇನವೆಂಬಾ ವಿಷಯಂ ॥ ೪

ಆ ವಿಷಯದೊಳ್ ॥ ೫

ಅನುಪಮದೇವವಿಮಾನವಿ
ದೆನಿಸುವ ಜಿನಭವನದೋಳಿರಿಂ ಸುತ್ತಿದ ನಂ ।
ದನವೆನದ ಕೋಭೆಯಿಂದಿಂ
ದ್ರನ ಪುರದಂತೊಪ್ಪುತಿರ್ಕುಮತಿಶಯದಿಂದಂ ॥ [1]] ೬

ಉತ್ತರಮಧುರೆಯೆಂಬುದು ಪುರಮೆದನಾಳ್ವಂ , ವೆರುಣನೆಂಬ ಮಹಾಮಂಡಳಿಕನಾತನ ಪಟ್ಟದರಸಿ ರೇವತಿಯೆಂಬಳ್ ॥ ೭

[ಜಿನಪದಭಕ್ತಿಯೊಳಿಂದ್ರನ
ನಿತಯು ಪಾಸಟಿ ಪತಿವ್ರತಾಗುಣದೊಳೆ ರಾ ।
ಮನ ಸತಿಯು ದೊರ ವಿಳಾಸದೊ
ಳನಂಗನಂಗನೆಗೆ ಬಗೆವೊಡೆಣೆ ಧಾರಿಣಿಯೊಳ್ ॥ ೮

ಎನಿಸಿ ನೆಗಟ್ಟೆವೆಡೆದ ಸದ್ಗುಣಾಭರಣೆಯುಂ ಅಪರಿಮಿತಜಿನಭಕ್ತೆಯುಮೊಗಿ ರೇವತೀಮಹಾದೇವಿ ಸುಖಸಂಕಥಾವಿನೋದದಿಂ] [2] ರಾಜ್ಯಂಗೆಯ್ಯುತ್ತುಮಿರೆ, ವಿಜಯಾರ್ಧಪರ್ವತದ ದಕ್ಷಿಣಶ್ರೇಢಿಯ ಮೇಘಕೂಟವೆಂಬ [ವುರಮಂ ॥ ೯

ಧರಣೀಸಂಸ್ತುತ್ಯಂ ಖೇ
ಚರಪೂಜ್ಯಪದಂ ಜಿನೇಂದ್ರಪದಸರಸಿಜಷ ।

---

1 ಸೂರಸೇನವೆಂಬುದು ವಿಷಯವಾವಿಷಯದೊಳ್ (ಗ.)

2 ಅಂತವರ್ ಸುಖದಿಂ (ಗ)

ಟ್ಟ ರಣಂ ದಯಾಳು ಸದ್ಗು ಣ
ಭರಣಂ ಚಂದ್ರಾಭನೆಂಬನದನಾಳ್ವರಸಂ ॥] [1] ೧೦

ಆತನ ಪಟ್ಟದರಸಿ ಸುಮತಿಮಹಾದೇವಿಯೆಂಬಳಾಯಿರ್ವರ್ಗರ್ಗಂ [ಚಂದ್ರಕೇಖರನೆಂಬ ಮಗನಾಗೆ, ಆತನ ವಿನೋದಮೆ ವಿನೋದ ಮಾಗೆ] [2] ಸುಖ ಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತುಮಿರ್ದು ಚಂದ್ರಾಭಮಹೀರಾಜನೊಂದುದಿವಸಂ ॥ ೧೧

[ನೆರೆದ ವಿಯಚ್ಚ ರೇಶ್ವರರ ಖೇಚರಿಯರ್ಕಳ ಭಂಗಿ ಚೆಲ್ವುವೆ
ತ್ತಿರೆ ಬಳಸಿರ್ದ ನಾಯಕರ ವೀರರ ರೂಪು ಮಹೋನ್ನತಿಕ್ಕವ
ತ್ತಿರೆ ನಯದಿಂದಮಿರ್ದ ನುತನೃತ್ಯನಿಕಾಯದ ಗಾನದೊಳ್ಪು ಬಿ
ತ್ತರದಿನಗುರ್ವಿನಿಂ ಸೊಗಯಿಸುತ್ತಿರೆ ಕೋಭಿಸುತಿರ್ಪ ಮಾಡದೊಳ್॥೧೨

ಪಿರಿದನುರಾಗದಿಂ ಖೇಚರರಾಜಂ ದೆಸೆಗಳಂ ಮಹೋತ್ಸವದಿಂದಂ ಬರಚರರಂ ನೋಡುತ್ತುಂ ನಿರುತಂ ಸಂಗೀತವಿದ್ಯೆಯುಂ ಕೇಳುತ್ತುಂ ಇರ್ದು ತನ್ನೊಲಗದ ಚೆಲ್ವಿಂಗೆ ತನ್ನ ಮೊವೆಚ್ಚಮಾಗಿ ರಾಗಿಸಿ ನೋಡಿ ಖಚರರಾಜನೆನ್ನಂಬಿಟ್ಟಾರಂದು ಮನದೊಳ್ ಪರ್ಚಿ ತೊಟ್ಟನೆ ಯಾಕಾಶಮಂ ನೋಡುವ್ರದುಂ ॥] [3] ೧೩

ಕರಿಘಟೆಯೊಡ್ಡಿನಂತೆ ಮೃಗಸಂಕುಲದಂತೆ ಘಟಿಂಗಳಂತೆ ಕೇ
ಸರಿಗಳ ಪಿಂಡಿನಂತೆ ವನದಂತೆ ನವಿಲ್ಗಳ ತಂಪದಂತೆ ಕೇ
ಸುರಿಗಳ ಬಂಬಲಂತೆ ಶರಭಾವಳಿಯಂತೆ ಮನುಷ್ಯರಂತೆ ವಾ
ನರಚಯದಂತೆ ಗೋನಿವಹದಂತೆಸೆದೊಪ್ಪುವ ಮಾಡದಂದಮಂ ॥ ೧೪

[ನಾನಾಪ್ರಕಾರದ ಮುಗಿಲೊಡ್ಡಂ ಚಂದ್ರಾಭಮೆಹಾರಾಜಂ ಕಂಡು ಮಹಾವಿಸ್ಮಯಂಬಟ್ಟು ಕಣ್ಣಮೆಯಿಕ್ಕದೆ ನೋಡುತ್ತುಮಿರ್ಪನ್ನೆಗಂ ॥] ೧೫

---

[1] ಪುರವದನಾಳ್ವಂ ಚಂದ್ರಾಭನೆಂಬ ವಿದ್ಯಾಧರಂ (ಗ.)

[2] ಪುಟ್ಟಿದ ಮಗಂ ಚಂದ್ರಕೇಖರನೆಂಬನನೆಂತವರೆ (ಗ.)

[3] ಮಾಡದವೇಲೆ ಪಗಲೊಲಗಂಗೊಟ್ಟು ಚಂದ್ರಾಭಮಹಾರಾಜಂ ವಿಮಾನದೊಳ್ (ಗ)

ಸ್ಥಿರಮಲ್ಲದು ಕೇಳಂಬರ
ಚರಪತಿ ಸಂಸಾರಸೌಖ್ಯಮಿಯಂದದಿನಂ ।
ದರಸಂಗೆ ಪೇಳ್ವಿ ತೆಱದಿಂ
ಕರಗಿದವಾಹ್ವಣವೆ ಮೇಘದೊಡ್ಡುಗಳನಿತುಂ ॥ ೧೦

[ಅಂತು ಮುಗಿಲೊಡ್ಡು ನೋಡೆ ನೋಡೆ ಕರಗುವುದುಂ ವಿಚ
ಚ್ಛರರಾಜಂ ಕಂಡು ಮನದೊಳ್ ವೈರಾಗ್ಯಂ ಪುಟ್ಟೆ] [1] ತನ್ನೊಳ
ತೆಂದಂ ॥ ೧೧

ಸಿರಿ ಸುರಚಾಪದಂತೆ ಪೊಸಜವ್ವನಮಿದ್ದಿಲ ಬೂದಿಯಂತೆ ಪೆಂ
ಡಿರ ಸುಖಮುಣ್ಮಿ ಪೊಣ್ಮುವ ಬಯಲ್ದೊಡ್ಡಿಯಂತೆ ವಿಭೂತಿ ಮಂಜಿನ
ತರಸಿನೊಳಾದ ಪೆಂಪಿನ ಮೆಹೋನ್ನತಿಗಳ್ ಮಳಲೇರಿಯಂತೆ ಪೆಯ್
ದರಿಯು ಮಹೀಪದಂತೆ ಕಿಡಲಲ್ಲದೆ ತಾಂ ಸ್ಥಿರಮಾಗಲಾರ್ಕುಮೇ ॥ ೧೨

ಅರಳೆಯು ಕಿಚ್ಚಿನಂತೆ ಧನಮಾಯು ವಸಂತದ ಕೋಧೆಯಂತೆ ಪೆ
ರ್ದೆರೆಗಳ ಬಂಬಲಂತೆ ಸೊಬಗೊಡ್ಡಿದ ಮೇಘಸಮೂಹದಂತೆ ನಂ
ಟರ ಕಡುಗೂರ್ಮೆ ಪಣ್ತು ಮರನಂತೆ ವಿಳಾಸದಗರ್ತವೆಮ್ಮೆಯು
ಭ್ಯರಮೆದು ನೀರ ಬೊಬ್ಬುಳಿಕೆಯಂತೆ ನಿರಂತರಮಲ್ಲದೆಲ್ಲಿಯುಂ ॥ ೧೩

[ಎಂದು ಸಂಸಾರದನಿತ್ಯತೆಯಂ ಭಾವಿಸಿ ಭೋಗೋಪಭೋಗ
ಗಳ್ಗೆ ಸೊಲ್ಲದುಗೆಯೊಡ್ಡಿಲ್ಲದ ಪೆಂಡತಿಗೆ ಪೇಸಿನಂತೆ ಪೇಸಿ ॥ ೧೪

ಪರಮಾರ್ಥಂ ಭಾವಿಸುವೊಡೆ
ಕರಮಂತಾ ಸ್ಪರ್ಶನೇಂದ್ರಿಯೋನ್ನತಿಯಿಂದಂ ।
ಕರಿಪತಿಗಳ್ ಮೊದಲಾಗಿರೆ
ನರಗರ್ಂ ಬಸಮಾಗಿ ಕಟ್ಟುವೆಟ್ಟುವು ಜಗದೊಳ್ ॥ ೧೫

ನೆಱೆ ನಯನೇಂದ್ರಿಯದೆಱಕದಿ
ನಱಿಯದೆ ಮತಿಗೆಟ್ಟು ಬಿದ್ದು ಸಾವುವು ಸೊಡರೊಳ್ ।

---

1 ಅವಂ ಕಂಡು (ಗ)

ನುಱುಗಿ ಪತಂಗಾವಳಿಯಿನೆ
ಕುಱಿಯೆಲ್ಲನೆ ಕಣ್ಣ ಸೋಲಮುಂ ಸಲ್ಲಿಸುವಂ ॥ ೨೦

ಮುಂದಣ ಮೃಗವಂ ಕಣ್ದೋ
ರ್ಕೆಂದು ಕೊರಲ್ನೋಡ ಗೀತರವದಿಂ ತಾವುಂ ।
ಪೊಂದುವುವು ಸಾರ್ದ ಮೃಗಚಯ
ಮೆಂದೊಡೆ ಶ್ರೋತ್ರದ ಸುಖಕ್ಕೆ ಪದೆವನೆ ಗಾಂಪಂ ॥ ೨೧

ಮರನಂ ಛೇದಿಸುವುವು ಪ
ಟ್ಟರಣಂ ಗಂಧಕ್ಕೆ ಸೋಲ್ತು ತಾವರೆಯೆಸಳಂ ।
ಭರದಿಂ ಛೇದಿಸಲಾಱದೆ
ಪಿರಿದಪ್ಪತಿಮೋಹದಿಂದಮಳಿವುವು ಧರೆಯೊಳ್ ॥ ೨೨

ರಸನೇಂದ್ರಿಯವಶದಿಂ ಸೈ
ರಿಸಲಾಱದೆ ಗಾಳದೆರೆಗೆ ಪಾಯ್ದುಳಿವುವು ವೀ ।
ನಸಹಾಯವೆಂದೊಡಕ್ಕಟ [1]
ವಸುನುತಿಯೊಳ್ ಜಿಹ್ವೆ ಕಿಡಿಸದಾರಂ ಪದಪಿಂ ॥ ೨೩

ಒಂದೊಂದು ಜೀವಿಯಿಂದ್ರಿಯ
ವೊಂದೊಂದಱಿನಳಿವುದೆಂದೊಡೈದಿಂದ್ರಿಯನುಂ ।
ಸಂದಿಸಿ ಕೂಡಿರ್ದ ನರಂ
ಸಂದೆಯಮೇಂ ಕಿಡುವುದಱಿವುದವನೀತಳದೊಳ್ ॥ ೨೪

ಎಂದಿಂದ್ರಿಯಂಗಳ ದೆಸೆಗೆ ನಾಡೆಯುಂ ಬಯಂಗೊಂಡು ॥ ೨೫

ಸಿಂಬುಳನಾಳಿ ಮೊಗುಗುಱಿಪೆರ್ದೊಜೆ ಬಾಯ್ ಮಲದಾಗರಂ ಬಸಿರ್
ತಾಂ ಬಗೆವಂದ ಕಿಳ್ಳೆ ಮಡು ಕಣ್ಕಿವಿ ಕೊಗ್ಗಿಯ ಪುತ್ತು ಚರ್ಮದಿಂ
ದಂ ಬಳಸಿರ್ದ ಕೋಂಟೆ ತನು ಕೀವಿನ ನೆತ್ತರ ತಿಪ್ಪೆ ಬೀವಿನಿಂ
ದಂ ಬಿಗಿದಿರ್ದ ಪೆರ್ನೆಣದ ಖಂಡದ ಮೊಂಸದ ತಾಣಮೆಲ್ಲವೇ ॥ ೨೬

---

[1] ನೆಟ್ಟನೆ ಖಿಂಗಳೆಂದೊಡಕಷ್ಟ (ಬ.ಕ.)

ಎಂದು [ಶರೀರದೊಳಾದ ಅಶುಚಿತ್ವವುಂ ಭಾವಿಸಿ ಸಂಸಾರಕ್ಕೆ ಪಿರಿದುಂ ನಿರ್ವೇಗವಮಾಗೆ ॥ ೨೯

ಪಿರಿದುಂ ಕೋಪದಿನಟ್ಟ ತಿಂಬ ಪುಲಿಯುಂ ಬಾರ್ಬಟ್ಟೆಯೊಳ್ಕಂಡವೋಲ್ ಭರದಿಂದಟ್ಟ ತಗುಳ್ದ ಕೊಲ್ವ ಕರಿಯುಂ ಮೊರ್ವಟ್ಟೆಯೊಳ್ಕಂಡವೋಲ್ ಕರಮಂತೊರ್ಮೆಯೆ ಪಾಯ್ವ ಸೀಕರಡಿಯುಂ ತಪ್ಪೀಹದೊಳ್ಕಂಡವೋಲ್

ಸಿರಿಗಂಪ್ಪೆವೆಗಮುನ್ನತಿಕ್ಕೆಗಮಣಂ ಭೋಗಕ್ಕವೇನಾಸೆಯೇ ॥ ೩೦

ಅಂತು ಸಂಸಾರದೊಳಾದ ಸುಖಕ್ಕೆ ನಾಡೆಯುಂ ಭಯಸ್ಥನಾಗಿ ಪಿರಿಯ ಮಗನಪ್ಪ ಚಂದ್ರಕೇತುವರಂ ಬರಿಸಿ ಮುಂದೆ ಕುಳ್ಳಿರಿಸಿ ಚಂದ್ರಾಭಮಹೀರಾಜನಿಂತೆಂದಂ ॥] [1] ೩೧

ಸಿರಿಯಿಂದಂ ವೆಯ್ಯುಱಿಯದೆ
ಪರತ್ರೆಯುಂ ಕಿಡಿಸಿ ರಾಜ್ಯಮೋಹೋದಯದಿಂ । [2]
ಮರುಳಾಗಿ ಮೆಂದಬುದ್ಧಿಯಿ
ನೆರಡಿಲ್ಲದೆ ಕೆಟ್ಟೆನಿನ್ನೆವರೆಗಂ ಮಗನೇ ॥ ೩೨

ಇನ್ನೆನಗೆ ಮುಕ್ತಿಶ್ರೀಯುನೊಲಿಸುವ ಜಿನರೂಪಂ ಶರಣ್ಬುಗಲ್ವೇಟುಕ್ಕ ಮಿಖೇಚರ] ರಾಜ್ಯಭಾರಮುಂ [ಕೈ] ಕೊಳ್ಳಂಬುದುಂ ಕುವೆಮಾರನಿಂತೆಂದಂ ॥ ೩೩

ಕೇಡಿಲ್ಲದ ನಿರ್ವೃತಿಯೊಳ್
ಕೂಡುವುದಂ ದೇವರೆತ್ತಿ ಕೊಂಡೆನಗಱುವಂ ।
ಮಾಡುವುದಂ ದುರ್ಗತಿಯೊಳ್ [3]
ಕೂಡುವುದಂ ರಾಜ್ಯಭಾರಮುಂ ದಯೆಗೆಯ್ವಾ ॥ ೩೪

ಎಂದು ಸಂಸಾರಕ್ಕಂ ಶರೀರಕ್ಕಂ ಪೇಸಿ ಪಿರಿಯ ಮಗನಪ್ಪ ಚಂದ್ರಕೇತುವರಂಗಿಂತೆಂದಂ (ಗ) [2] ಮೆಯ್ಯುಱಿಯದೆ ನಾನಿರತ್ರೆಯುಂ ಪಿಡಿದು ಪರಭವನಳಿದೇಂ ಪಿರಿದುಂ (ಕ.ಖ.) [3] ಮಾಡುವುದುಮನರ್ಥಿಯೊಳಂ (ಗ)

[ಬಗೆದು ನೋಡಿ ಲೇಸಪ್ಪ ವಸ್ತುವನೊಲ್ದೀವರಕ್ಕಱಿಂ ಕೂರ್ಪವರ್
ಜಗದ ಮೊನಿಸರ್ಪೊಲ್ಲದಂ ಕುಡುವರೆ ಕೂರ್ಪವೆಗೆ ಕುಡರೆಂದುಂ
ದೇವರ್
ಮಿಗಿಲೆನಿಸಿರ್ಪ ನಿರಂತರಸುಖವೆನಾರ್ಜಿಸುವ ಕಜ್ಜವನೆತ್ತಿಕೊಂಡೆ
ನಗೆ ತರಳರಾಜ್ಯಮಂ ದುರ್ಗತಿಗೊಯ್ವುದಂ ದುಷ್ಕರ್ಮಹೇತುವಂ
ಕುಡಲಪ್ಪುದೇ ॥೩೫

ಅದುಕಾರಣದಿಂ ದೇವರೆನ್ನವೀಲೆ ಮೋಹಮುಂ ಸ್ನೇಹಮು
ಮುಳ್ಳೊಡೆ ಶಾಶ್ವತಸುಖಮನೀವ ತಪಶ್ರೀಯಂ ದಯೆಗೆಯ್ವುವಲ್ಲದೆ
ನರಕಗತಿಗುಯ್ವ ರಾಜ್ಯಶ್ರೀಯಂ ದಯೆಗೆಯ್ಯವೇಡೆಂಬುದುಂ ವಿಯ
ಚ್ಚರ] [1] ರಾಜನಿಂತೆಂದಂ ॥ ೩೬

[ನಿನ್ನೆಂದುದೆ ಕಾರ್ಯಂ ಮು
ತ್ತೆನ್ನದೆ ಕೈವಲ್ಯಲಕ್ಷ್ಮ್ಮಯಂ ಬಯಸುವವೆಂ ।
ಗುನ್ನತಿಯಿಂದಾದೊಡೆ ಮೇ
ಣೇನೆಂಬುದನಂತುಟಂತುಟೆನ್ನದೆ ಕೇಳಿಂ ॥ ೩೭
ಎಂದು ಪ್ರಿಯಾತ್ಮಜಂಗೆ ಕರಕಮಳಮಂ ಮುಗಿದು —] ೩೮

ಈ ವಿಯಚ್ಚರರಾಜ್ಯಮೆಂ ಪ್ರತಿಪಾಲಿಸಲ್ಮಗನೊರ್ವನಂ
ಭೂವಧೂಪ್ರಿಯನಂ ಮನೋಹರರೂಪನಂ ಪಡೆದಿಂಬಱಿ
ಕ್ಕೀ ವಿಯಚ್ಚರರಾಜ್ಯಭಾರಮನಾಕುಮಾರವರಂಗೆ ಕೊ
ಟ್ಟೆವಗಂ ಬಱಿಕಾರ್ತು ಮಾಱ್ಪುದು ಘೋರವೀರತಪಂಗಳಂ ॥ ೩೯

[ಎಂದಾಪ್ರಧಾನರುಂ ತಾನುಂ ಮೃದುವಚನಂಗಳಿಂ ಲಲ್ಲೆಗೆಯ್ದಿಂ
ತಾನುವೊಡಂಬಡಿಸಿ ಕುಮಾರಂಗೆ ಪಟ್ಟಮಂ ಕಟ್ಟಿ ಧರಾಭಾರಮಂ
ಕೊಟ್ಟು ಮಗನ ಮೊಗಮಂ ನೋಡಿ] [2] ೪೦

---

[1] ಎಂಬುದುಂ ಚಂದ್ರಾಭಮಹಾ (ಗ) [2] ಎಂದೊಡಂಬಡಿಸಿ (ಗ)

ಚಾರುಚರಿತ್ರನಪ್ಪುದು ಗುಣಾನ್ವಿತನಪ್ಪುದು ಧರ್ಮದೊಳ್ಪುದಾ
ಚಾರನೆನಿಪ್ಪುದುಜ್ಜ್ವಲಚಿನೇಂದ್ರಸದದ್ವಯಭಕ್ತನಪ್ಪುದಿ
ನ್ನಾರುಮನುರ್ಕಿ ಸೊರ್ಕಿ ಸಲೆ ನೋಯಿಸದಿರ್ಪುದು ಜೈನಯೋಗಿವೃಂ
ದಾರಕರಲ್ಲಿ ಭಕ್ತಿಭರದಿಂ ನೆಜ್ ತೋಱುವುದುತ್ತರೋತ್ತರಂ ॥ ೪೧

[ಮತ್ತಂ 'ದೇವ ನೀಂ ಕೊಟ್ಟ ಕುನ್ನಿ ಬೆಳವೆಳಯೆ ನಾಯಾಯ್ತೆಂ' ಬನಾಟ್ನುಡಿಯಂ ನನ್ನಿ ಮೂಡದೆ, ತಾವರೆಯೆಲೆಯ ಮೇಲಣ ನೀರಂತೆ ಸಂಸಾರದೊಳಪ್ಪ ದುಃಖಮುಂ ಪಾಪಮುಂ ಪೊರ್ದದೆ, ಸಿಪ್ಪಿನೊಳ್ ಪುಟ್ಟಿಯುಂ ಮತ್ತಾ ಸಿಪ್ಪಿಂದಂ ತಾಂ ಭಿನ್ನನೆಂತಂತೆ ನೀನುಮೆನ್ನಿಂದಂ ಸಕಲಗುಣಂಗಳೊಳಂ ಧರ್ಮದೊಳಂ ರಾಜನೀತಿಯೊಳಂ ಜಿನಭಕ್ತಿಯೊಳಂ ಮಿಗಿಲಪ್ಪದೆಂದು ಬೇಡಿಕೊಂಡು ಬುದ್ಧಿವೇಱ್ದು ॥][1] ೪೨

ತುಚ್ಛಿಲಾಳ್ಕನ್ನಿಸದಾಳ್ದನಂ ಸುಚರಿತಂ ದುಷ್ಕರ್ಮಮಂ ಸಜ್ಜನರ್
ಪಚ್ಚುಯುಂ ಜಾರೆಯನಾಯುಮೊಳ್ಳ ಪುರುಷಂ ನಿರ್ವ್ಯಾಜಂ ಸೂಳೆಯರ್
ಖಳನಂ ಧರ್ಮಪರರ್ ವಿಶೇಷಮಱಿವಂ ಮಿಥ್ಯಾತ್ವಮೆಂ ಧಾರಿಣೀ
ತಳದೊಳ್ ಕೇಳ್ಪಿಡುವಂತೆ ರಾಜ್ಯದಳಿಪಂ ಬಿಟ್ಟಂ ಜಗಾಧೀಶ್ವರಂ ॥ ೪೩

ಅಂತು [ಸಕಲ] ರಾಜ್ಯಮುಮಂ ತೂಱೆದು ಪುರದಿಂ ಪೊಱಮಟ್ಟು ನಿರೂಪಾನಾರೂಢನಾಗಿ ಪಾಂಡ್ಯದೇಶದ ದಕ್ಷಿಣಾಸುಧುರೆಗೆ ಬಂದ [ಪೊಱವೊಱಲೊಳ್ ಸಿಂದು— ೪೪

ವಿಳಿರ್ವ ಪತಾಕೆಯಿಂ ಕುಳಿರ್ವ ನಂದನದಿಂ ತಳರ್ವಂಚೆಯಿಂ ಬೆಡಂ
ಗಳವಡೆ ರತ್ನದೀಧಿತಿಯೊಳಾಂದಿ ಪಳಂಚುವ ಬಿಳ್ಳಿವಾಡದಿಂ
ಕಳಸದ ಮತ್ತವಾರಣದ ಶೋಭೆಗಳಿಂ ಕಡುರಮ್ಯಮೆಪ್ಪ ನಿ
ರ್ಮಳಜಿನಮಂದಿರಂಗಳ ವಿಳಾಸಮನೆಚ್ಚರಿವಟ್ಟು ನೋಡಿದಂ ॥ ೪೫

ಅಂತು ನೋಡುತ್ತುಂ ಭಕ್ತಿಭರತಯಿಂ ಕಯ್ಯುಂ ಮುಗಿದು ಪೋ
ಲೊಳಗೆ ಪೊಕ್ಕು ಮೆಲ್ಲಮೆಲ್ಲನೆ ಬರುತ್ತುಂ, ೪೬

[1] ಎಂಬುಬುದ್ಧಿಯುಂ ಪೇಳ್ದ (ಗ)

ಕಿವಿವರಮೆಯ್ದೆ ನೀಳ್ದ ಕಡೆಗಣ್ ಕರಮಕ್ಕಜುನೀಯೆ ರಾಗಮುಂ
ವಿವಶಿಸೆ ಪುರ್ವಿನುವ್ರ್ ಸುಲಿಪಲ್ ಮನಮುಂ ಸೆರೆಗೆಯ್ಯೆ ಸೋಲಮುಂ
ಸುವಿಟಜನಕ್ಕೆ ಮಾಡೆ ವದನಾಂಬುರುಹಂ ಜಿನನೋಲಗಕ್ಕೆ ಬ
ರ್ಪ ವನಜಪತ್ರನೇತ್ರೆಯರನಾಖಚರಂ ಮನವೊಲ್ದು ನೋಡಿದಂ ॥ ೪೩

ತರಳವಿಶಾಲಲೋಚನದ ಬೆಳ್ಪು ಕುರುಳ್ಗಳ ಚೆಲ್ವು ಭೂಷಣೋ
ತ್ಕರದ ಬೆಡಂಗು ತೆಳ್ವಸಿಱಿ ಭಂಗಿ ಕುಚಂಗಳ ತೋರ್ಪ್ ಕಣ್ಗೆವಂ
ದಿರ ವಿಟರಂ ಪಡಲ್ವಡಿಸಲೆಂದು ಮನೋಜನ ದಾಱು ಬರ್ಪವೊಲ್
ಪರಮಜಿನೇಂದ್ರನೋಲಗಕೆ ಬರ್ಪ ವಿದಗ್ಧಯರೊಪ್ಪಿ ತೋಱಿದರ್॥೪೪

ಅಂತು ಜಿನಾಧೀಶ್ವರನೋಲಗಕ್ಕೆ ಬರ್ಪ ವಿಲಾಸಿನಿಯರಂ ನೋ
ಡುತ್ತುಂ ಸಂತೋಷದಿಂ ಬರುತ್ತುಂ, ೪೯

ಪೊನ್ನ ತೋರಣಮುಂದ್ರನೀಲದ ರಂಗಮಾದನೆಯುಂಗುಡೀ (?)
.....ನೀಲಮೀಳಮನೊಪ್ಪಿ ಮುತ್ತಿನ ಸೂಸಕಂ
ಚೆನ್ನಮಾಗಿರೆ ತಾರೆಯುಂ ನೆಱೆ ಪೊಲೆ ಜೈನಗೃಹಂಗಳ
ತ್ಯುನ್ನತಿಕ್ಕೆಯು ನಾಳ್ದು ವೆಂಬರದಂತೆ ರಂಜಿಸಿ ನಾಡೆಯುಂ ॥ ೫೦

ಕನಕದ ತೋರಣಮುಂ ಮು
ತ್ತಿನ ತೊಳಗುವ ರಂಗವಲ್ಲಿಯುಂ ಪಂಚಮಹಾ ।
ಧ್ವನಿನಾದಮುಮೊಳ್ಪೊಜೆಯುಂ
ಮನವೆರತಂ ಬಸದಿಯೋಳಿಯೊಳ್ ರಂಜಿಸುಗುಂ ॥ ೫೧

ಮುತ್ತಮುಮರಲೋಕದಿಂ ತತ್ಪುರಮೆಂ ನೋಡಲೆಂದು ಧರೆಗವ
ತರಿಸಿ ತಂತವ್ಯ ವಿಮಾನಂಬರಸಿರ್ದರೆಸಿಸಿ ತರತರದಿಂದಿರ್ದ ಜಿನಾಲ
ಯದೋಳಿಗಳಮವೆಱ ಮುಂದಣ ನಾನಾರತ್ನರಚಿತಮೆಪ್ಪ ಬಾಗಿಲ್ವಾ
ಡಂಗಳಂ ಅವೆಱ ಮುಂದಣ ಚಂದ್ರಾದಿತ್ಯರ ಬೆಳಗಿನೊಳ್ ಮುಚ್ಚರಿಸಿ
ತೊಳಗುವ ಮಕರತೋರಣಂಗಳಂ ಚೀನಮಹಾಚೀನದ ಮಹಾಧ್ವ

ಜಂಗಳಂ ಸಚ್ಚೈಯ ಪಲಿಳದ ಪೊಲಿವೆತ್ತ ಸೋಪಾನಂಗಳಂ ಮೋಹ್ಹ
ಶ್ರೀಯ ಸಿಂಹಾಸನವೆನಿಸಿ ಪ್ರಾಕಾರಂಗಳಂ ನೋಡುತ್ತುಮಿರ್ದ
ನ್ನೆಗಂ ॥] [1] ೪೦

ತುರಗದಳಂಗಳಿಕ್ಕಲದೊಳಂ ಬರೆ ಮುಂದೆ ಮಹಾವಿಭೂತಿಯಿಂ
ಪರಿಯೆ ಪತಾಕೆಗಳ್ ನೃಪಕುಮಾರಕರೋಜೆಯಿನೆಯ್ದಿ ಸುತ್ತಲುಂ
ಬರೆ ತಪೆ ತಳ್ತ ನಂದನವನಾಕೃತಿಯಂತಿರೆ ತೂರ್ಯನಾದವೊ
ಪ್ಪಿರೆ ಗಣಿಕಾಳಿ ಚಾಮರಮನಿಕ್ಕೆ ಸುರಾಧಿಪನಂತೆ ಲೀಲೆಯಿಂ ॥ ೪೧

[ತತ್ಪುರಾಧೀಶ್ವರನಪ್ಪ ಚಿತ್ರವಾಹನಮಹಾರಾಜಂ ತನಗೆಲ್ಲ ಜಿನಾ
ಲಯಂಗಳಂ ಕಾಣ್ಬುದು ನಿತ್ಯವ್ರತಮಿರ್ದುದರ್ಕುಂ ಜಿನಭವನಂಗಳ
ಲ್ಲಮಂ ಪೂಜಿಸುತ್ತೆ ಬಂದು ಭೂತಹಿತಮಂಬ ತಮ್ಮ ನ್ವಯದ ಬಸದಿಯ
ನೆಯ್ದಿ ॥ ೪೨

ಕರಮಾಗರದಿಂ ಬಡವಂ
ಗುರುಮುದದಿಂ ಪೊನ್ನ ರಾಶಿ ದೊರೆಕೊಂಡಂತಾ ।
ಧರಣೀನಾಥಂ ಭಕ್ತಿಯ
ಭರದಿಂ ಬಲವೆಂದು ಮೊಱಿಸೂಡಿ ಜಿನಗೃಹಮೆಂ ॥ ೪೩

ಸಿಷ್ಟಿದ್ದಿಯಿಂದೊಳಗಂ ಪೊಕ್ಕ— ೪೪
ಇರುವಂತಿ ಜಾಜಿ ಪಾದರಿ
ಸರಸಿರುಹಂ ಸುರಗಿ ಮಲ್ಲೆ ಪೊಸಸಂಪಗೆಯಾ ।
ಅರಲಿಂ ಭಕ್ತಿಯಿನಾತಂ
ಪರಮಜಿನೇಶ್ವರನ ಪಾದಮಂ ಪೂಜಿಸಿದಂ ॥ ೪೫

ಮತ್ತಂ ಪಲವುರತುನದ ಮೆಣಿಹಾರಂಗಳಿಂದಂ ಚಾಮೀಕರಪ್ರ
ಪ್ಪಮೊಲೆಗಳಿಂದಂ ಮುತ್ತಿನ ಲಂಬಣಗಳಿಂದಂ ತಾನೆ ತನ್ನ ಕಯ್ಯಾರ
ಪೂಜಿಸಿ ಬಟ್ಟುಕ್ಕಂ— ೪೬

---

1 ಪುರದ ಚೆಲ್ವುವುಂ ಸುತ್ತಿ ಬಳಸಿದ ಬಸದಿಗಳ ವಿಲಾಸಮುವುಂ ನೋಡಿ
ತ್ತುನಿರ್ಪನ್ನೆಗಂ (ಗ)

ಸುರರಾಜಂ ಪರಮಜಿನೇ
ಶ್ವರನಂ ತನ್ನೊಂದು ಭಕ್ತಿಯಿಂದೋಲಗಿಪಂ ।
ತಿರೆ ಪಾಂಡ್ಯಾನ್ವಯಕುವಲಯ
ಶರನಿಧಿನಂದನನುವೊಪ್ಪಿ ಚೆಲ್ವಪ್ಪಿನೆಗಂ ॥ ೫೯

ಸುರಿದಪುದು ರಸದ ಮಂಡೆ ಭೋ
ರ್ಗರೆದು ರಸಾಯನದ ಪೆರ್ವೊನಲ್ಪರಿದಪುದ ।
ಚರಿಯಾಗಮೃತದ ತೊಜೆಯು
ಬ್ಬರಮಾಗಲ್ ತೀವಿ ಬಂದುದೆಸಿಪತಿಶಯದಿಂ ॥ ೬೦

ಕಿಱುದುಬೇಗವೋಲಗಂಗೊಟ್ಟರ್ದು ತದನಂತರಂ ತ್ರೈಲೋಕ್ಯ ಮೊಂಗಲ್ಯನಂ ಕಣ್ಣಾರ ನೋಡಿ ಮನದ ಪೆರ್ಚಿಂದಂ ಕರಕಮಳಂಗಳಂ ಮುಗಿದು ನಿಂದಿರ್ದು[1] ॥ ೬೧

ಶ್ರೀಯು ಸಿರಿಕ್ಕೆಗಂ ಸುಖದಳಿಕ್ಕೆಗಮುನ್ನತಕೀರ್ತಿಗಂ ಯಶ
ಶ್ರೀಯೊದವಿಂಗವೊಪ್ಪುವಳವಿಂಗೆ ಮಹಾಬಳಕಂತು ಸದ್ವಚ
ಶ್ರೀಯೊದವಿಂಗಮಾಟಪೊಡೆ ಪೂಜಿಸು ನಿರ್ಮಳನಾಗಿ ನಿರ್ವೃತಿ
ಶ್ರೀಯುವತೀಶನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೨

ಚಾರುವಿಲಾಸನೇತ್ರೆಯರನುತ್ಪಲಗಂಧಿಯರಂ ಮನೋಹರಾ
ಕಾರೆಯರಂ ವಿದಗ್ಧ ಸುರಸುಂದರಿಯರ್ಕಳನಾಗಳುಂ ಸಪಿ
ತ್ತಾರದೊಳೊಂದಿ ಭೋಗಿಸುವೆನೆಂಬೊಡೆ ಪೂಜಿಸು ಕೂಡೆ ನಿರ್ವೃತಿ
ಶ್ರೀರಮಣೀಶನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೩

---

[1] ಚಿತ್ರವಾಹನ ಮಹಾರಾಜನೆಂಬನಾ ಪುರಮನಾಳ್ವರಸಂ ಪಾಂಡ್ಯವಂಶತಿಳಕನೆಲ್ಲಾ ಬಸದಿಗಳುಮಂ ವಂದಿಸಿಯರ್ಚಿಸುತ್ತುಂ ತಮ್ಮನ್ವಯದ ತ್ರಿಭುವನತಿಲಕವೆಂಬ ಬಸದಿಗೆ ವಂದು ಮಾಣಿಕ್ಯದ ಮಣಿಶರಂಗಳಿಂದಂ ಪೊನ್ನ ಪುಷ್ಪಮಾಲೆಗಳಿಂ ಮುತ್ತಿನ ಲಂಬಣದಿಂದಂ ತಾನೆ ತನ್ನ ಕಯ್ಯಾರೆ ಪೂಜೆಸಿ ಕಯ್ಮುಗಿದು ನಿಂದಿರ್ದಂ (ಗ)

ಚೋಳನ ಮೇಲೆ ನೀಡಿ ಕರಮೆಂ ಪದಪಲ್ಲವಮೆಂ ಕಳಿಂಗಭೂ
ಪಾಲನ ಮೇಲೆ ನೀಡಿ ಮಗಧಾವನಿಪಾಲಕನಂ ಮೆಲಂಗಿಸಲ್
ಲೀಲೆಯೊಳರ್ಪನೆಂಬ ಮನಮೊಳ್ಕೊಡೆ ಪೂಜಿಸು ದೇವಪಾಲಭೂ
ಪಾಲಕವೆಂದ್ಯನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೪

ಆದರದಿಂದಮೆಯ್ದೆ ಪರಿಚಾರಕರಿತ್ತವಧಾರಿಸೆಂದು ಹಾ
ರಾದಿದುಕೂಲಮೊಡಿವರಭೂಷಣಮಂ ನುತವಸ್ತ್ರಮಂ ಮಹಾ
ಹ್ಲಾದದಿನುಟ್ಟುತೊಟ್ಟು ಸುಖಮಿರ್ಪೊಡೆ ಪೂಜಿಸು ನಚ್ಚಿ ಪೆಚ್ಚಿ ಕೂ
ರ್ತಾದರದಿಂದವೊಲ್ದು ದುರಿತಾರಿಚತುರ್ಮುಖಶಾಂತಿನಾಥನಂ ॥ ೬೫

ಭೋಗಕೆ ರೂಪಿನುನ್ನತಿಗಮಿಂದ್ರನರೇಂದ್ರಮಹಾವಿಭೂತಿಗಂ
ಬಾಗದ ವೀರದೇಪ್ಸೆಗಮನಂತಸುಖಕ್ಕಮಿಳಾತಳಕ್ಕಗು
ರ್ವಾಗೆ ಜಸಕ್ಕಮೊಟಪೊಡೆ ಪೂಜಿಸು ನಿಶ್ಚಲನಾಗಿ ನಿರ್ವೃತಿ
ಶ್ರೀಗಧಿನಾಥನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೬

ಧಾರಿಣಿಯೊಳ್ಸಮಸ್ತತಿರಿಕಂಗಳೊಳಂ ನೆಜೆ ಪುಟ್ಟಿ ಸತ್ತು ಸಂ
ಸಾರಸಮುದ್ರದೊಳ್ತಿರಿಯದಿಂದ್ರವಿಭೂತಿಯೊಳರ್ಪನೆಂಬೊಡಾ
ಚಾರದೊಳೂಂದಿ ಶುದ್ಧಮನದಿಂ ನೆಜೆ ಪೂಜಿಸು ಕೂರ್ತು ನಿರ್ವೃತಿ
ಶ್ರೀರಮಣೀಶನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೭

ನೋವಿನೊಳಿರ್ದುಡೊಳ್ಬಳವೆ [1] ಕಿರ್ಚಿನೊಳಿಕ್ಕುವ ಸೀಳ್ವ ಕೊಪ್ಪಿಕೊ
ಯ್ದೊವೆದೆ ಬೈವ ಪೊಯ್ವ ನರಕಂಗಳ ದುಃಖದೊಳೂಂದದಾಗಳುಂ
ದೇವವಿಭೂತಿಯೊಳ್ನೆರೆವೆನೆಂಬೊಡೆ ಪೂಜಿಸು ಕೂರ್ತು ನಿರ್ವೃತಿ
ಶ್ರೀವನಿತೇಶನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೮

ಆದಿಯನಾದಿಗೊಂಡು ಬಹುದುಃಖಮನೂಡುವ ಕರ್ಮವೈಹ್ಲಮಂ
ಛೇದಿಸಿ ವೈರಿವೋಹಮನಡರ್ತಿಱಿದುನ್ನತಿವೆತ್ತ ಮೋಹ್ಲ

[1] ಮುಱಿವ (ಗ)

ಶ್ರೀದಯಿತೇಶನಾಗಿ ಸುಖಮಿರ್ದೊಡೆ ಪೂಜಿಸು ಕೂರ್ತು ನಿರ್ವೃತಿ
ಶ್ರೀದಯಿತೇಶನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೯

ಎಂದು ಸ್ತುತಿಶತಸಹಸ್ರಂಗಳಿಂ ಚತುರ್ಮುಖಶಾಂತಿನಾಥನಂ ಸ್ತುತಿಯಿಸಿ ಸಮಸ್ತಗುಣಭಟ್ಟಾರಕರಂ[1] ವಂದಿಸಿ ನಿತ್ಯವ್ರತಂಗಳಂ ಕೈಕೊಂಡು [ಸಿದ್ಧಸೇಸೆಯಂ ಕೊಂಡು] ಕಿಱಿದುಬೇಗಂ ಧರ್ಮಮಂ ಕೇಳ್ದ [ಚಿತ್ರವಾಹನಮಹಾರಾಜಂ ತನ್ನರಮನೆಗೆ ಪೋದನಿತ್ತಲ್ ಚಂದ್ರಾಭಮಹಾರಾಜಂ ಪಾಂಡ್ಯಕುಲಚೂಡಾಮಣಿಯು ಸಮ್ಯಕ್ತ್ವಕ್ಕೆ ಮೆಚ್ಚಿ ತನ್ನೊಳಂತೆಂದಂ ॥ ೭೦

ಕುಲದೊಳ್ಪಾಂಡ್ಯಮಹೀಶರಲ್ತೆ ಪಿರಿಯುಚ್ಚರ್ಮಪಾಲರೊಳ್ಮತ್ತಮಾ
ಕುಲಜರ್ಗರ್ಗದ ಪೊಂಗೆ ಕಂಪೆನಿಸವೊಲ್ ದೇವಂ ಜಿನಾಧೀಶ್ವರಂ
ಕುಲದೈವಂ ಗಡಮೆಂದೊಡಿಂನೆಱಿಯೆ ಭಾಷಮ್ಮಮ್ಮ ಬಣ್ಣಿಪ್ಪರಾ
ರೆಲೆ ಭಾವಿಪ್ಪೊಡೆ ಪಾಂಡ್ಯದೇಶಜರೆ ಧನ್ಯರ್ ನೋಡೆ ಭೂಚಕ್ರದೊಳ್ ॥

ಎಂದು ಮತ್ತಂ,] ೭೨

ಈ ನರೇಶ್ವರಧರ್ಮಬುದ್ಧಿಯುಮೆಂ ವ್ರತಂಗಳ ಪೆಂಪುಮೆಂ
ಹೀನಮಪ್ಪ ನೆಗಱ್ತಿಯೊಳ್ ಖತಿಯುನ್ನತಿಕ್ಕೆಯ ಗುಣ್ಪುಮೆಂ
ತಾನೆ ಕೇಳರೆ ಪೇೞ್ದು ಮೋಳಯೊಳೂಪ್ಪುವೀಜಿನಬಿಂಬಮೆಂ
ದಾನರೇಶ್ವರನಚ್ಚರಿಂ ಪೊಗೞ್ದಂ ಮಹೀವಳಯೇಶನಂ ॥ ೭೩

ಎಂದು ಪೊಗೞ್ದು ಪುರದ ಮಹಿಮೆಗೆ ಆಶ್ಚರ್ಯಂ ಬಟ್ಟು, ೭೪

ನೋಡದಿರನ್ಯಕಾಂತೆಯರುಮಂ ಪದೆದಚ್ಚಿನಂತೆ ಪೆರ್ಚಿ ಮಾ
ತಾಡದಿರೊಂದುಮಂ ಮನಜದಿಂ ಪೆರ್ಬುಸಿಯಂ ದುರಿತಾನ್ವಿತರ್ಕಳೊಳ್
ಕೂಡದಿರೆಂಬ ಮಾತುಗಳನಲ್ಲದೆ ಕೇಳ್ಕ್ಕುದೃಷ್ಟಿಯೆಂದು ಮಾ
ತಾಡಿಸಬಾರದೀ ಪುರದೊಳಂದೊಡೆ ಧರ್ಮಮನೇನನೆಂಬುದೋ ॥ ೭೫

[1] ಮುನಿಗುಪ್ತ ಭಟ್ಟಾರಕರಂ (ಗ)

ಎಂದು ಪುರದೊಳಿಹ ಸತ್ಪುರುಷರುಮಂ ಪೊಗಳ್ದು — ೫೬

ಜಿನಭಕ್ತಿಯೊಳುರ್ವಿಯೊಳ್ ತನೆ ಟಗೆವೊಡೆ ದೇವನೆಂದು ಕೈಕೊಂಡು ಜಗ ।
ಜ್ಜನಮೊಲ್ದು ಪೊಗಱ್ದು ಪಡೆದಂ
ಜನಾಧಿಪಂ ಪಾಂಡ್ಯದೇವನೆಂಬೀ ಪೆಸರಂ ॥ ೫೭

ಎಂದು ಮನದಣ್ಕೆ ಱಂ ಚಿತ್ರವಾಹನಮಹಾರಾಜನಂ ಪೊಗಳ್ದು ಜಿನ ಭವನಮಂ ತ್ರಿಃಪ್ರದಕ್ಷಿಣಂಗೆಯ್ದು ನಿಷಿದ್ಧಿಯಿಂದೊಳಗಂ ಪೊಕ್ಕು ದರ್ಶ ನಸ್ತುತಿಯಂ ಪೇೞ್ದು ಮುನಿಗುಪ್ತಭಟ್ಟಾರಕರಂ ಬಂದಿಸಿ ಪರಿವಿಡಿಯಿಂ ದುೞಿದ ಮುನಿವರರಂ ಬಂದಿಸಿ ಕುಳ್ಳಿರ್ದು ॥ ೫೮

ಮುನಿಕುಲಸರೋಜತರಣಿಗೆ
ಜಿನಸಮಯಾಂಬರನಿಶಾಕರಂಗನುಪಮೆಸ ।
ಜ್ಜನವಂದಿತಂಗೆ ದುರ್ಗುಣ
ವನನಿಧಿಬಡಬಾನಲಂಗೆ ಖಚರ[illegible]ಂ ॥ ೫೯

ವಿನಯವಿನಮ್ರಮುಖನಾಗಿ ಕೈಮುಗಿದಿರ್ದು ತನ್ನ ಬಂದ ಕಾರ್ಯಮಂ ಪೇೞ್ವುದುಂ ಮುನಿಗುಪ್ತಭಟ್ಟಾರಕರಿಂತೆಂದರ್ ॥][1] ೬೦

ಮಗನೆ ತಪಂ ವೊಗ್ಗಲ್ಲದು
ಜಗದೊಳ್ ವೈರಾಗ್ಯಮಿಲ್ಲದಂಗಾತಪಮು ।
ಭೃಗಮಂ ಮಾಡುಗುಮೆಲ್ಲದೆ
ಖಗೇಶ ಪೆಱಿತೊಂದುಸೌಖ್ಯಮಂ ಮಾಡುಗುಮೇ ॥ ೬೧

---

1 ರಾಜಭವನಕ್ಕೆ ಪೊ[illegible]ಂ ಚಂದ್ರಾಭಮಹಾರಾಜಂ ಪಾಂಡ್ಯನಂ ಪಲತೆ ಱಿದಿಂಪೊಗಳ್ದು ಜಿನಾಲಯಮಂ ತ್ರಿಃಪ್ರದಕ್ಷಿಣಂಗೆಯ್ದು ನಿಸಿದಿಯಿಂದೊಳಗಂ ಪೊ ಕ್ಕು ದೇವರಂ ವಂದಿಸಿ ಮುನಿಗುಪ್ತಭಟ್ಟಾರಕರಂ ವಂದಿಸಿ ತನ್ನ ಬಂದ ಕಾರ್ಯ ಮುನಱಿಪುವುದುಮವರಿಂತೆಂದರ್ (ಗ)

ಪಿಂಡಿಯಂ ಬಿಡಿಸಪ್ಪೋದ [1] ಮರುಳ್ ಖಂಡುಗೆಣ್ಣೆ ಯನಾಂತು ಬಂದುದೆಂಬನಾಚ್ಚಿಡಿಯಂತೆ ಮೆರ್ಕಟವೈರಾಗ್ಯದಿಂ [ಶ್ರುತಿವಿಹೀನರಪ್ಪವರ್ ಸ್ವರ್ಗಾಪವರ್ಗ] [2] ಸುಖಮಂ ಬಯಸಿ ಜಿನದೀಕ್ಷೆಯಂ ಕೈಕೊಂಡು ತಪದ ಬೇವಸಕ್ಕಾಱದೆ ಪ್ರಚ್ಛನ್ನ [3] ದೋಷಿಗಳಾಗಿ [ಮೆಱುಭವದೊಳ್ಪಿರಿದಪ್ಪ ದುಃಖಮಂ ಪೊರ್ದುವರದಱಿಂ ॥] [4] ೪೦

[ನೀರುಂ ಪುಳ್ಳಿಯು ಕಿಚ್ಚು ಮೆ
ದಾರಯ್ವಂದಡುವೆ ಲಲನೆಯುಂ ಮಡಕೆಯು ವಿ ॥
ಸ್ತ್ರೀರದೊಳೂಲೆಯುಮಿವೆಲ್ಲಮೆ
ದೋರಂತೊಡಗೂಡೆ ಕೂಚಿನಡುವಂತೆ ವೆಲಂ ॥ ೪೧

ಅದೆಂತೆಂದೊಡಷ್ಟಾವಿಂಶತಿಮೂಲಗುಣಮುಂ ಪದಿಮೂಱು ತೆಱದ ಚಾರಿತ್ರಮುಂ ದರ್ಶನಮುಂಬೆರಸು ಮೋಕ್ಷಮಂ ಸಾಧಿಸುವುದು ॥ ೪೨

ಇವೆಱೊಳಗೊಂದು ಗುಣಂ ಹೀ
ನವಾಗೆ ಕೈವಲ್ಯಮಿಲ್ಲ ಕೇಳದಱಿಂ ಭೂ ।
ಭವನದೊಳದಕ್ಕೆ ತಪದೊಳ್
ವಿವೇಕಿಯೆನಿಸಿದನೆ ನೆಗಟ್ಟುವದನಿತುಂ ಗುಣದೊಳ್ ॥ ೪೩

ಅದೆಂತೆಂದೊಡೆ ನೀರನುಂ ಪುಳ್ಳಿಯುಮುಂ ಅಕ್ಕಿಯುಮುಂ ಅಡವನುಮುಂ ಕಿಚ್ಚು ಮನೊಲೆಯುಮುಂ ಮಡಕೆಯುಮುಂ ಕೂಡಿಸುವೆಲ್ಲಿ ಇವೆಱೊಳವೊಂದಿಲ್ಲದೊಡಂ ಕೂಟಾಗದೆ ಕಿಡುವಂತೆ ಮೂಲಗುಣಂಗಳೊಳಿರ್ದುಗುಣಮಾದೊಡಂ ಹೀನಮಾದೊಡೆ ಕೈವಲ್ಯಸುಖಂ ಸವೆಸಿಸಲಱಿಯದು ॥ ೪೪

ಮೂಲಗುಣಮಾದಿಸಕಲಗು
ಣಾಳಿಯೊಳಂ ಕಿಡದೆ ನೆಗಟ್ಟುವೆದೇಗೆಟ್ಟೆತ್ತೆಂ ।

---

1 ಪಿಡಿಸಪ್ಪೋದ (ಗ) 2 ಮೇಲಣ (ಗ) 3 ಗುಪ್ತ (ಗ)
4 ಸಂಸಾರವೃದ್ಧಿಯಂ ಮಾಡಿಕೊಳ್ವರದಱಿಂ (ಗ)

ದೇಳಿಸಿಯೊಂದಜಿಯೊಳಂ
ಕೀಳಾದೊಡೆ ತನಗೆ ಪರದ ಸುಖಮದು ಕಿತುಗುಂ ॥ ೪೩

ಸಲವುಂ ಶಾಸ್ತ್ರಮನೋದಿದ
ಬಲದಿಂ ವೆಯ್ಯೊರ್ಚಿ ಗರ್ವದಿಂ ಧರ್ಮದ ಪಂ ।
ಬಲನುಱದು ಪಿರಿಯರಪ್ಪರ
ನೆಲೆಯುಂ ಕೈಕೊಳ್ಳದುದ್ಧತಂ ಮುನಿಯಲ್ಲಂ ॥ ೪೪

ತನಗೆ ಸೊಗಯಿಸದ ವಸ್ತುಗ
ಳನಿತುಮನಿಂಬಾಗೆ ತೊಱೆದು ಪುಱುಡಿಸಿ ಪಱನಾ ।
ವನೊ ಪೊಲ್ಲಮೆಂದೊಡಂತಾ
ತನುಮಂ ಕೈಕೊಳ್ಳದಾತನುಂ ಮುನಿಯಲ್ಲಂ ॥ ೪೫

ಕೂಸುಗಳಂ ಮುಡ್ಡಾಡಿಸಿ
ದೇಸಿಯ ಮಾತುಗಳನಾಡಿ ಪೆರ್ಚಿಸಿ ಪಿಱರಂ ।
ಲೇಸಾಗಿ ತನಗೆ ಜೊತ್ತಿಸು
ವಾಶಾಪರನೈದಲಾಱನುರುನಿರ್ವೃತಿಯಂ ॥ ೪೬

ಒಡನೆಯು ಋಷಿಯಂ ಕಳದೋ
ಗಡಿಸದೆ ಗೃಹಪತಿಗಮವನ ಪೆಂಡತಿಗಂ ನೇ ।
ರ್ಪಡೆ ಪೆಱರನಟ್ಟಿ ದೂಪಿಸಿ
ನುಡಿವ ದಿಗಂಬರನಮೋಘವೆಯ್ದುಂ ಸುಖಮುಂ ॥ ೪೭

ತಡೆಯದೆ ಜಿನಪೂಜೆಗಳಂ
ಕಿಡಿಸಿ ಮನಂಪೆರ್ಚಿ ತನ್ನ ಪಹ್ನದ ಮನೆಗ ।
ಳ್ಗಡಿಗಡಿಗಟ್ಟುವ ಮುನಿಪಂ
ಕಿಡುಗುಂ ವೇಲಪ್ಪ ದೇವಸಿಳಯದ ಸುಖಮುಂ ೪೮

ನೀನೆಮ್ಮ ಗುಡ್ಡನ್ಯೆ ಪೆಱ
ತೇನೆಂಬುದು ಪೆಱಗೆ ಭಕ್ತಿಮಾಡಲ್ವೇಡಂ ।
ದೇನೊ ಬಿಡೆ ಜಡಿದು ಮೊಣಿಪ
ಹೀನಗುಣಂಗೆಱಗಲಾಗದಱಿವುಳ್ಳ ನರಂ ॥ ೯೩

ಉಗುರಂ ಮೆಸೆಯಿಸಿ ಗುರುವಂ
ಬಗೆಯದೆ ಜಿನವಚನರಚನೆಯಂ ಮೆಱಿಯಿಸಿ ಕೆ ।
ಮ್ಮಗೆ ತಮ್ಮಿಚ್ಛೆಗೆ ಕಥೆಯಂ
ಬಗೆಗೊಳ್ಗಂತಂತೆ ಪೇೞ್ವಿನುಂ ಮುನಿಯುಲ್ಲಂ ॥ ೯೪

ತನ್ನಯ ಸಮುದಯಮಂ ಪೊಗ
ೞ್ವನ್ನೆಱೆ ಕೈಕೊಂಡು ಪೆಱರ ಸಮುದಾಯಮನ ।
ತ್ಯನ್ನ ತಿಗಿಡೆ ಪಱಿಯುತ್ತಿ
ರ್ದನ್ನಂ ನರಕಕ್ಕಮಿಱುಗುವೆಂಬುದು ಸತ್ಯಂ ॥ ೯೫

ಪೆಱರೊಳ್ಳಿದರಾದೊಡಮೇ
ತಱಿ ತಪಸಿಗಳೆಂದು ಪಱುವೆನುಂ ತನ್ನ ವರಂ ।
ಪೆಱಿತೇಂ ದುರ್ಜನರಾದೊಡ
ಮುಱಿ ಮನದೊಳ್ಕೃತ್ಯ ಪೊಗೞ್ವಿನುಂ ಮುನಿಯಲ್ಲಂ ॥ ೯೬

ಮೆಲ್ಲನೆ ಚರ್ಚಿಸಿ ನೀನಿವೆ
ರ್ಗಲ್ಲದೆ ಬೆಸಗೆಯ್ಯವೇಡ ಪೆಱರಿವರಿಂ ಬಿ ।
ಟ್ಟೊಳ್ಳಿದರಾರೀಧರೆಯೊಳ
ಗಿಲ್ಲೆಂದುಱಿ ನಚ್ಚಿ ಪಾತನುಂ ಮುನಿಯಲ್ಲಂ ॥ ೯೭

ಬಗೆವೆಂದೀಬಾಡೀಕೂ
ಟಗಣಿತರುಚಿಯಾದುವೆಕ್ಕ ನಿನ್ನಂತಾರೀ ।
ಜಗದೊಳಡಬಲ್ಲರೆನ್ನುತೆ
ವಿಗೆ ಪೊಗೞ್ದುಂಬಿವನೆ ರುಷಿಯರೊಳ್ ಬೂತೆನಿಕುಂ ॥ ೯೮

ಮತ್ತಂ] ಋಷಿಯುರಗುಣಮುಂ ಪೇಳ್ವೊಡೆ:-ಪಾದರಿಗೆಯು ದೂದ ವಿಯಂತೆ ಪೆಱರಂ ಸಂಕೇತಂಗೊಳಿಸದೆ, ಮನ್ನೆಯರಾಳಂತೆ ಕೋಳಿಂ ಗಾಸಿಗೆಯ್ಯದೆ, ಬಯಲ ನೀರಂತೆ ಮಾರ್ಗಂಬಿಟ್ಟು ನಡೆಯದೆ, ಕೋಣನಂತೆ ಇರ್ದ ಸಮುದಾಯಮುಂ ಕದಡದೆ, ಕರಡಿಯಂತೆ ಪಿರಿಯರ ನುಡಿಗೆಡೆವಾಯದೆ, ಪುಲ್ಲಯುಂತೆ ಗುಣವಂತರ ಕೂಟಕ್ಕೆ ಒದರದೆ, ಒಡೆದ ಪಾಲಂತೆ ಮೂಲಗುಣಂಕೆಡದೆ, ನೀರೊಳಪ್ಪಕ್ಕೆಣ್ಣೆಯಂತೆ ಪೆಱರ ದೋಷಮುಂ ಪರಪದೆ, ಪುಲಿಯ ಬಾಲದಂತೆ ಗುರುವಚನಮುಂ ವಿಾಱದೆ, ಮುಗಿಲಂತೆ ಪೊತ್ತಿಗೊಂದು ಬಣ್ಣಮಾಗದೆ, ಕೋಡಗದಂತೆ ಕಂಡಕಂಡರ ನೇಳಿಸದೆ, ದೇಸಿಗನಂತೇಕಾಕಿಯಾಗದೆ, ತೂಜಿಯೊಳ್ಮಂದನಂತೆ ಪರೀಷಹಕ್ಕೆ ನಡುಗದೆ, ಬೂತಿನಂತೆ ಪೆಱರವಗುಣಮುಂ ದೂಱದೆ, ಸೂಳೆಯಂತೆ ಚೆನ್ನಂ ಮೆಱೆಯದೆ, ಬಾಲಕನಂತೆ ಪೊಲ್ಲಮುಂ ಪಿಡಿಯದೆ, ಹಜ್ಜೆಯ [1] ಕಟ್ಟಿಗೆಯಂತೆ ಖಳರ ನುಡಿಗಳ್ಗಾಡದೆ, ಇಱುವೊಲದ ನೀರಂತೆ ಕುಪಥಕ್ಕೆಱಗದೆ, ಪುತ್ತಿನಂತೆ ತಪದೊಳ್ಮಲಿಸಿಯನಾಗದೆ, ತಱಿಯದ ಮರನಂತೆ ವಕ್ರನಾಗದೆ, ಬಾಲೆಯಂತೆ ತಪದ ಕ್ಲೇಶಕ್ಕೆ ಬೆಂಡಾಗದೆ ಸಂಜೆಯಂತೆ ಪೊಲ್ಲ ವಸ್ತುವಿನೊಳ್ ರಾಗಿಯಾಗದೆ, ಉಕ್ಕಿನಂತತಿನಿಷ್ಠುರನಾಗದೆ, [2] ಪಟೆಯ ನೀರೆಯಂತೆ ಗುಣದೊಳ್ ನೂನಮಾಗದೆ, ಕಾಗೆಯಂತೆ ಪೆಱಗೆ ಪೀಡೆಯುಂ ಮಾಡದೆ, ನಾಯಂತೆ ಗೋತ್ರಕಲಹಮುಂ ಮಾಡದೆ, [3] ತೊಟ್ಟಿನಂತೆ ಪೆಱರ ವೇಶಮಾಗದೆ, ಕೂಲಿಯು ಬಂಟನಂತೆ ಬೆಲೆಯುಂ ಪಾರದೆ [4] ದಾಱುಕಾಱುನಂತಟ್ಟಿಟ್ಟ ಪೋಗದೆ, ರಾಜಪುತ್ರನಂತೆ ಲೀಲೆಯುಂ ಮಱೆಯದೆ, [ಸೂಳೆವಂಡತಿಯಂತೊಲ್ದೊಲಿಸದೆ, ಗ್ರಹದಂತೆ ಬೇಡಿಕೊಂಡುಣ್ಣದೆ, ಮಕ್ಕಳಂತೆ ಕಾಡಿಯುಣ್ಣದೆ, ಅರಸಾಳನಂತೆ ನೋಯಿಸಿಯುಣ್ಣದೆ ಸೂಱೆಗಾಱಿನಂತೆ ಪೆಱರಂ ಕ್ಲೇಶಂಗೊಳಿಸದೆ, ಬಟ್ಟೆಗುತ್ತನಂತೆ ಉಪವಾಸಮುಂ ತೋಱಿ ಕಾಡದೆ, ಭಟ್ಟನಂತೊಂದೊಂದಂ ತೋಱಿ ಬಯ್ಯದೆ], ವೈದ್ಯನಂತೆ ಕಾತ್ತಮುಂ ತೋಱಿ ಮುನಿ

---

1 ಹವ್ವೆಯು (ಗ). 2 ತರಗೆಲೆಯಂತೆ ನೂಚ್ಚದನಾಗದೆ (ಗ)

3 ಮುರಕಟವಕ್ಕಿಯತೆಂಪೊಲ್ಲನಸನಂ ಮಾಡುತ್ತಿರದೆ (ಗ).

4 ಬೆಲೆಗೆ ಸೂಡದೆ (ಗ).

ಯದೆ, ತೊಱೆಯಂತೆ ಮಳಮಂ ತೋಱಿ ಬೆರ್ಚಿಸದೆ, ಕಿರ್ಚಿನಂತೆ [1] ಆಡಕಮಂ ತೋಱಿ ನಂಬಿಸದೆ, ದಾಱುಯಂತೆ ಡಾಹಮಂ ಮಾಡಿ ಕಿಡಿಸದೆ, [ಪೊಟಿಲಂ ಪುಗುವುಡುವಿನಂತೆ ಜನೇಂದ್ರಮತವಂ ಪತ್ತುವಿಕ್ಕದೆ,] ಬಡವನಂತೆ ಮನ್ನಣೆಗಾಸೆಗೆಯ್ಯದೆ, ವ್ಯಂತರನಂತೆ ಪೂವೂಜೆಗೆಱಗದೆ, ದ್ರೋಹರಂತೆ [2] ಗುಜುಗುಜುಗೊಳ್ಳದೆ, ಪೆರ್ಗಣದಂತೆ [ಪೊಸ ಖುಷಿಗೆ] ಗುಱುಗುಱಿಸದೆ, [ಪುಲಿಯಂತೆ ಪೆಱಿರ್ಗೂಪದ್ರವಮಂ ಮಾಡದೆ ಮೆರಕುಟಿವಕ್ಕಿಯಂತೆ ಬಾಯಂ ಬಡಿಯುದೆ,] ತುಂಬಿಯಂತೆ ಕುಸುಮಪ್ರಿಯನಾಗದೆ, ತಱಗೆಲೆಯಂತೆ ಅಲ್ಲಲ್ಲಿಗೆ ಪಾರದೆ, [3] ತಳಾಱಿನಂತೆ [ಪೆಱಿರ] ಪೊಲ್ಲವೆಯಂ ಪಾರದೆ, [ಸೂಳೆಯ ಮನೆಯ ಗಿಳಿಯನಂತೆ ತನ್ನನೊಲ್ಲದರಂ ಪಱುದು ಬಲ್ವರಂ ಪೊಗೞ್ದೆ,] ಪಾವಿನಂತೆ ಗೀತಕ್ಕೆಱಗದೆ, ಪುಲುಬೂತಿನಂತೆ ಕಂಡರನೇನಾನುಮಂ ಬೇಡುತ್ತಿರದೆ [4], ಇಱುಂಪೆಯಂತೆ ಕಂಪಿಗೆಱಗದೆ, ಗಾಣದೆತ್ತಿನಂತೆ [ನಿಯಮಂಗೆಟ್ಟು ತೊಱಲುತ್ತಿರದೆ, ಆಲದ ಬಿಱಿಲಂತೆ ನೆಲಕ್ಕೆಱಗದೆ, ಮರದ ಬಿಱಿಲಂತೆ ಪೊಂಗೆಱಗದೆ, ಬಿಲಾಱನಂತೆ ನಾರಿಗಾಸೆಮಾಡದೆ; ಹಂಸೆಯಂತೆ ಸಾರಗ್ರಾಹಿಯುಂ, ಶರತ್ಕಾಲದ [5] ತೊಱೆಯಂತೆ ನಿರ್ಮಳನುಂ, ಸಹಸ್ರಕಿರಣನಂತೆಲ್ಲರ್ಗಮೇಕರೂಪನುಂ, [ತಂ] ಗಾಳಿಯಂತೆ ಮೃದುಗಮನನನುಂ, ಸಮುದ್ರನಂತ ನಿಸ್ಸಾರಪೂರನುಂ, ಕೌಂಗಿನಂತೆ ವಕ್ರಗುಣರಹಿತನುಂ, [6] ಭಯದ ಬಟ್ಟೆಯೊಳ್ಪೊಪನಂತೆ ಸಂಸಾರಭೀತನುಂ, ತಂತ್ರಪಾಲನಂತೆ ಗುಣಪಾಲನುಂ, ಬಲ್ಗೊಂಟೆಯಂತೆ ವಿಖ್ಯಾತ್ವಕ್ಕಭೇದ್ಯನುಂ, ಮುತ್ತಿನ ಸತ್ತಿಗೆಯಂತೆಲ್ಲಾದೆಸೆಯೊಳ್ ಸೇವ್ಯನುಂ, ಪಡವಳನಂತೆ ಸಂವರಣಕಾಱನುಂ, ಸತ್ಪುರುಷನಂತೆ ನಿರ್ಮತ್ಸರನುಂ, ಶರ್ಕರೆಯಂತೆ ನಿಷ್ಕಷಾಯನುಂ, ಕರುಣಾಳುವಪ್ಪರಸಿನಂತೆ ತ್ರಿದಂಡವರ್ಜಿತನುಂ, [ಮಱಿಯಂತೆ ಸಕಲ

---

1 ಬೆಕ್ಕಿನಂತೆ (ಗ). 2 ಪೊಲೆಸೂಳೆಸೋಲ್ತಂತೆ. (ಬ. ಕ.)

3 ಕಾವೇರಿಯ ನೀರಂತಲ್ಲಲ್ಲಿಗೆ ಪರಿಯದೆ (ಗ)
ಪಱಿರಾರುಮಂ ನೆನೆಯದೆ (ಬ. ಕ.)

4 ಮಾಗಿಯ (ಗ) 5 ನೀರಿದನುಂ (ಗ)

ಜೀವನನುಂ,] ಯುದ್ಧಸನ್ನದ್ಧನಂತೆ [1] ವೀರನುಂ, ಬುದ್ಧಿಶಾಲಿಯಂತಾ ರೈಕೆ [2] ಯುಳ್ಳನುಂ, ದೂರದರ್ಶಿಯಂತೆ ವೇಲನಱಿವನುಂ, ಬಲ್ಮಂತ್ರಿಯಂತೆ ಪ್ರಮಾದರಹಿತನುಂ, [3] ಮಂದರದಂತೆ ಕ್ಷಮಾನ್ವಿತನುಂ, ಕುತ್ತಂಗುಳಿಯಂತೆ ಹಿತಾಹಾರನುಂ, ಚಂದ್ರನಂತೆ ಶಾಂತರೂಪನುಂ, ವಿವಾಹಕಾಲದಂತೆ ಶುಭೋದಯನುಂ, ಮಂಗಲಚರಿತನಂತೆ [4] ಕಲ್ಯಾಣವಚನನುಂ, ನೀತಿಪರನಂತೆ ಲೋಕ [ಸ್ವರೂಪ] ಜ್ಞನುಂ, ದಂಡಂ ನಡೆಯಿಸುವೆನಂತೆ, ದೇಶಜ್ಞನುಂ, ಅವಧಿಜ್ಞನಿಯಂತೆ ಸಕಲಾಂತರಂಗಜ್ಞನುಂ, [ಮನೆವರ್ಗಡೆಯಂತ ಬೇಸಱುಂ ಮಾಡದನುಂ, ಬಾಣಸಿಗನಂತೆ ಪೆಱರಿಚ್ಛೆಯನಱಿವನುಂ, ಗಜವಾಹಕನಂತೆ ಮುಂದಱಿವನುಂ, ತುರಗಾರೂಢನಂತೆ ಬಟ್ಟೆಯನಱಿವನುಂ] ಪಱುಗೋಲನೇಱಿದನಂತಡಕಮುಳ್ಳನುಂ, ರಾಜಸೇವಕನಂತಡಕವೆಂತನುಮಪ್ಪುದು ॥ ೯೯

[ಮುನಿಯುದಿಪ್ಪುದು ಧರ್ಮದೊಳ್ ವೃಥನಪ್ಪುದಾಗಮಮನಂದಮುಂ
ನೆನೆಯುತಿಪ್ಪುದು ಪೊಲ್ಲರೊಳ್ಕಳಗೊಳ್ಳದಿಪ್ಪುದು ಶಿಷ್ಟರೊಳ್
ವಿನಯಮುಂ ಪ್ರತಿಪಾಲಿಸಪ್ಪುದು ಜೀವರಕ್ಷಕನಪ್ಪುದಾ
ಗಮಮನೋವದೆ ಮೆಚ್ಚಿ ಚರ್ಚಿಸದಿಪ್ಪುದೊಯ್ಯನೆ ಭಾಷದೊಳ್॥೧೦೦

ಜಿನವಚನಮೆಂತುಟಂತುಟು
ಮನನುನಯದಿಂ ಪೇೞದಂತೆ ತನ್ನಿಚ್ಛೆಗೆ ಕೆ ।
ಮ್ಮನೆ ತಟ್ಟೆ ಗಱಿಪಿ [5] ಪೆಱರಂ
ತನಗೆ ವಶಂವೊಱ್ಪಿನೆಯುದ್ದುಗುಂ ಸುಗತಿಯುಂ ॥] ೧೦೧

ಪೆಱರವಗುಣಮುಂ ಕಂಡೊಡೆ
ಯಱಿಯಟ್ಟ ತಗುಳ್ದ ದೂಱವೇಡವರಾರುವರ್ ।
ಪೆಱರೇಗೆಯ್ದೊಡಮೇಂ ತಾಂ
ಕಱಿಮಱಿಯಣಮಿಲ್ಲದಂತು ನೆಗೞ್ವುದು ಮುನಿಪಂ ॥ ೧೦೨

---

1 ನಿಚ್ಚಟಗಲಿಯಂತೆ(ಗ) 2 ಪಗೆಯುಳ್ಳನಂತಾರೈಕೆ (ಗ)
3 ಬೆಲ್ಮೊಕ್ಕಲಂತೆ ಭಯಸ್ಥನುಂ (ಗ) 4 ಮಂಗಲವೃತ್ತದಂತೆ (ಗ)
5 ಕಟ್ಟೆಗೆಱಿಪಿ (ಜ. ಕ.)

[ಪೊಲೆಯರ್ಬಡಿವ ಪಜ್ಜಿಯೋಜೆಗಾಡುವ ಪಗರಣಿಗರಂ ಕಂಡವರ್ನಗುವರಲ್ಲದೆಯುವರಾಟಕ್ಕೆ ಲಕ್ಷಣಮಂ ನೋಡರ್; ಕೃತ್ಯದೊಳ್ ಪರೀಕ್ಷೆಯುಂ ಮಾಲ್ಪಂತೆ, ಮಿಥ್ಯಾಜ್ಞಾನಿಗಳ ಕುಹೇತುದೃಷ್ಟಾಂತಕ್ಕಂಜಿ ದುಶ್ಚಾರಿತ್ರದೊಳ್ನಗಬ್ವರಲ್ಲಿಯ ದೋಷಮಂ ಪಾರ್, ತತ್ವದೊಳ್ ದೃಢರಾಗಿ ಸದಾಚಾರದೊಳ್ನಗಬ್ವರಲ್ಲಿ ಗುಣದೋಷಮೆನಿಸುವರದಱಿಂ ॥] ೧೦೩

ಭಾವಿಸುವೊಡಂತರಂಗಂ
ಕೇವಳಮೀ ಸಾಲ್ಗು ಮೊಂದೆ ಬಹಿರಂಗಮೆನಿ ।
ನ್ನೈವುದಣಮೆಂದು ಬಿಡುವಾ
ಗಾವಿಲನಾರ್ತಪನೆ ಕಿಡಿಸಲಘಸಂತತಿಯಂ [1] ॥ ೧೦೪

ನೆಱೆ ಬಹಿರಂಗಮೆ ಸಾಲ್ಗಂ
ದಱಿಯದೆ ಪೆರ್ಚಿಂದಮಂತರಂಗದ ದೆಸೆಯುಂ ।
ಮಱೆದು ಮತಿಗೆಟ್ಟು ಮಾಡುವ [2]
ಕುಱಿ ತಾನಾರ್ತಪನೆ ಕಿಡಿಸಲಘಸಂತತಿಯಂ ॥ ೧೦೫

ಅವಱಿಂದಂತರಂಗದೊಳಂ ಬಹಿರಂಗದೊಳಂ ಕೂಡಿ ನೆಗಬ್ವ [ಬುದ್ಧಿವಂತನೆ ಸಕಲಕರ್ಮಮುಂ ಕಿಟ್ಟಿಟ್ಟು ಶಾಶ್ವತಸುಖಮೆಂ ಪ್ರೌರ್ಢಗೆಮಂತೆರಡಕ್ಕಮೊಱೆದೊಂದಱೊಳ್ ನೆಗಬ್ದು ನಿರಂತರಸುಖಮಂ ಪಡೆವೆನೆಂಬ ನಿರ್ಬುದ್ಧಿ] [3] ಯೊಂದೆಗಾಲಿಯೊಳ್ ರಥಮಂ ನಡೆಯಿಸುವೆನೆಂಬ, [4] [ನೀರಲ್ಲದೆ ಕೂಱಿನೆಡುವೆನೆಂಬ,] ಕಾವಿಲ್ಲದೆ ಕೊಡಲಿಯೊಳ್ ಮರನಂ ಕಡಿವೆನೆಂಬ [ಛಾರ್ಯಿಯಿಲ್ಲದೆ ಮೆಗನಂ ಪಡೆವೆನೆಂಬ ಕೈದುವಿಲ್ಲದಿಱಿವೆನೆಂಬ] ನಾರಿಲ್ಲದೆ ಪೂಗಟ್ಟುವೆನೆಂಬ, [5] ಪೆರ್ಗಾವಿಲನಂ ಪೋಲ್ಕುವಿಂತು ॥ ೧೦೬

---

1 ಕರ್ಮಪ್ಯರಿಯಕಿಡಿಸಲ್ (ಬ. ಕ.) 2 ಮತಿಗೆಟ್ಟುಕೇಳ್ದೀ (ಗ)

3 ಆತನೆ ಮೋಕ್ಷಲಕ್ಷ್ಮಿಗೆ ವಲ್ಲಭನಕ್ಕುವೊಂದಱೊಳ್ ನೆಗಳ್ದು ಮುಕ್ತಿಯಂ ಪಡೆವೆನೆಂಬಾತಂ (ಗ) 4 ಬಂದೆ ಕಾರೊಳ್ ಪರವೆನೆಂಬ, ಹೊಕ್ಕಿಲ್ಲದೆ ಸೀರೆಯನೆಯ್ವೆನೆಂಬ, ಮದವಳಿಗನಿಲ್ಲದೆ ಮದುವೆಯುಂ ಮಾಡುವೆನೆಂಬ, ಸೂಜಿಯಿಲ್ಲದೆ ಪೊಲಿವೆನೆಂಬ, ಕತ್ತರಿಯಿಲ್ಲದೆ ಗಾಣವಾಡುವ ಎಗ್ಗನಂ (ಗ)

5 ಬಂದೆ ಕೈಯೊಳ್ ಪಾಲ್ಗಡೆವೆನೆಂಬ, ಬಾದೆಯೆತ್ತಿನೊಳುಳುವೆನೆಂಬ (ಗ)

ಲೇಸು ಬಹಿರಂಗವಿಲ್ಲದೊ
ಡಾಸೆಯದೇನಂತರಂಗಮುಂ ತನಗಿನಿಸುಂ ।
ಲೇಸಾಗಲಱಿಯದೆಂತೆನೆ
ತ್ರಾಸಿನ ಕೊಡನೊಂದು ಬಿರ್ದೊಡೊಂದುಱುದಪ್ಪುದೇ ॥ ೧೦೬

[ಎನಿಸುಬಲಮೆಳ್ಳನುಂ ಭೋಂ
ಕನೆ ಪರಿಯಲ್ಬಾರದೊಂದೆ ಕಾಲಿಂದಂ ತಾ ।
ನೆನಿತಱಿದೊಡವೊಂದಂಗದೊ
ಳನಘಶ್ರೀವಧುವನೆರೆಯಲೆಂತುಂ ನೆಱೀಯಂ ॥ ೧೦೯

ಅದಱಿಂದೊಂದನೆ ಪಿಡಿದು ಕರ್ಮಮಂ ಗೆಲ್ವೆನೆಂದು ಗಾವಿಲತನದಿಂದಿರದೆ ಬಹಿರಂಗದೊಳಮೆಂತರಂಗದೊಳಂ ಕೂಡಿ ನಗಱ್ಪು ದುರಿತಮಂ ಕಿಡಿಸಿ ನಿರ್ಮಳನಪ್ಪುದು ॥] ೧೧೯

ಕರವೊಳ್ಳಿದನಿವನೆಂದೊ
ರ್ವರ ಶಿಷ್ಯನನೂಱಿತೋಱಿ ನುಡಿದೊಯ್ಯನೆ ಮಾ ।
ಣ್ಡಿರದೊಯ್ದು ದೀಕ್ಷೆಗುಡುವಂ
ಪರಮಾರ್ಥಂ ಸುಱುಗುಮುಗ್ರಸಂಸೃತಿವನದೊಳ್ ॥ ೧೧೦

[ಏನುಮನಱಿಯದ ಮುನಿಪಂ
ಹೀನಗುಣಂ ಬಂದು ದೀಕ್ಷೆವೇಡಿದೊಡವನಂ ।
ತಾನಳಿಪಿಂ ಕೈಕೊಳ್ಳದೆ
ನೂನಂ ನಿಱಿಸುವ್ರದು ಮುಸ್ನಿನಂದದೊಳವನಂ ॥] ೧೧೧

ಮುನ್ನಿನ ಕುಲಮಂ ಸಿರಿಯಂ
ತನ್ನೂರಂ ತನ್ನ ಪೆಂಡಿರಂ ಮಕ್ಕಳುಮಂ ।
ತನ್ನ ಮಹಿಮೆಗಳನಳಿಪಿಂ
ದಂ ನೆನೆಯುತ್ತಿರ್ದ ದುರ್ಜನಂ ಮುನಿಯಲ್ಲಂ ॥ ೧೧೨

ತಾಂ ಪೊಲ್ಲವೆಯಲ್ಲದೊಡಂ
ಗಾಂಪರನುತ್ಸುಕರನಳಪರಂ ಕಂಡೊಡೆ ಕೇಳ್ ।
ಪೆಂಪಿಂದಮಿರದೆ ಭಯದಿಂ
ಕಂಟಿಸಿ ಹೃವೆಮಿಗೊಂಡು ನೆಗಟ್ಟುವದಧಿಕನೆನಿಪ್ಪಂ ॥ ೧೧೩

ಎಮ್ಮರಿಸಿ ಯೆಮ್ಮ ಜಿನಗೃಹ
ವೆಮ್ಮೊಡವೆಗಳೆಮ್ಮ ಗುಡ್ಡೆರೆಮ್ಮರ್ಥಂ ಮು ।
ತ್ತೆಮ್ಮ ನೆಲನೆಂದು ಪೂಣದೆ
ಕೆಮ್ಮನೆ ದೆಸೆಗೆಟ್ಟು ನುಡಿವ ಮುನಿ [1] ಮುನಿಯಲ್ಲಂ ॥ ೧೧೪

ಮುನ್ನಂ ವ್ರತಮಿತ್ತವರಂ
ತಮ್ಮಳಿಪಿಂ ಪಱುದು ಕಿಡಿಸಿ ಪೂರ್ವವ್ರತಮಂ ।
ಮನ್ನಣೆಯಿಂ ವ್ರತಮಂ ಕುಡು
ವಂ ನರಕಕ್ಕಿಱುದು ಪೋಪುದೇನಚ್ಚರಿಯೇ ॥ ೧೧೫

ಜಿನಭವನಮೆಲ್ಲಮಂ ಸ
ಜ್ಜಿನಚೈತ್ಯಾವಳಿಗಳೆಲ್ಲಮಂ ದಿವ್ಯತಪೋ ।
ಧನರೆಲ್ಲರುಮಂ ಸಮನಾ
ಗನವರತಂ ಕಾಣ್ಬ ಮುನಿಯೆ ಮುನಿವರನೆನಿಕುಂ ॥ ೧೧೬

[ರಾಗದ್ವೇಷಂ ತನಗುಂ
ಟಾಗೆ ತಪಂಬಟ್ಟು ನಮೆವನವನೆನಿಸಾನುಂ ।
ರಾಗದ್ವೇಷಂ ತನ್ನಿಂ
ಪೋಗೆ ತಪಂಬಟ್ಟುನಮೆವನವನೆನಿಸಾನುಂ ॥ ೧೧೭

---

1 ನುಡಿವನುಂ (ಗ) 2 ಪೂಲೆಯವ್ವ್ಡಿವಪಱುಗಾಡುವವ್ಗರಣದಾಟಕ್ಕೆನಗುವರಲ್ಲದೆ ಲಕ್ಷಣಮನಱಿವ ಸತ್ಪಾತ್ರದೊಳ್ ಲಕ್ಷಣಮಂ ನೋಡುವರಂತೆ ಮಿಥ್ಯಾದೃಷ್ಟಿಗಳ ಬೇಳ್ಕೆಯಿಂ ನಡೆವರ್ಗಳ್ಗೆ ದೋಷಮಂ ಮಾಡುವರದಱಿಂ ದೋಷಮಿಲ್ಲದಂತಾಗಿ ನಡೆವುದು. ಜಿನಭವನ....(ಗ).

ಬಿಡದ ಪರಿಗ್ರಹಭರದೊಳ್
ತೊಡರ್ದುಂ ನಿರ್ಗ್ರಂಥನಾಗಿಯುಂ ಸಗ್ರಂಥಂ ।
ತೂಡರ್ದ ಪರಿಗ್ರಹಭರಮುಂ [1]
ಬಿಡುವಂ ಸಗ್ರಂಥನಾಗಿಯುಂ ನಿರ್ಗ್ರಂಥಂ ॥ ೧೧೯

[ಅದುಕಾರಣದಿಂದೆ ತಪವೆಂಬುದು ಸಾಮಾನ್ಯಮಲ್ಲದು; ನೀನುಂ ನಿನ್ನ ಮುನ್ನಿನ ವಿದ್ಯಾಧರರಾಜ್ಯಮಂ ಕೈಕೊಂಡು ಸುಖದಿನಿರೆಂಬುದುಂ, ಚಂದ್ರಾಭಮಹಾರಾಜಂ ಮುನಿಗುಪ್ತಭಟ್ಟಾರಕರ್ಗಿಂತೆಂದಂ॥] [2] ೧೧೯

ಎನಿತು ಪೆಸವಾದೊಡಂ ಮೇ
ದಿನಿಯೊಳ್ಕಿರ್ದ ಕೂಚಿನುಂಬರೆ ನರರಾಂ ।
ಮನವೊಸೆದು ಬಿಟ್ಟ ರಾಜ್ಯಾಂ
ಗನೆಯುಂ ಕೈಕೊಳ್ವನಲ್ಲೆನೆಂತುಂ ಮುನಿಪಾ ॥ ೧೨೦

ಎಂಬುದುಂ [ಮುನೀಂದ್ರೋತ್ತಮಂ ವಿಯಚ್ಚರರಾಜಂ ನುಡಿದ ಪರಿಚ್ಛೇದಕ್ಕಂ ಮನದ ವೈರಾಗ್ಯಕ್ಕಂ ಮೆಚ್ಚಿ ಮೆನಃಪೂರ್ವಕಂ ಪರಿಗ್ರಹವೆಲ್ಲಮುಂ ತೊಱೆ ಬೇಗವೆಂಬುದುಂ ಗುರುಸನ್ನಿಧಿಯೊಳ್ ಪರಿಗ್ರಹವೆಲ್ಲಮಂ ತೊಱೆದು ಕೆಲವು ವಿದ್ಯೆಗಳಂ ತೊಱೆಯದಿರೆ ಮುನಿಗುಪ್ತಭಟ್ಟಾರಕರವೞೊಳಳಿಪು ನಿನಗೇತಕ್ಕೆನೆ ಗಗನಚರಾಧೀಶಸಿಂತಂದಂ ॥] [3] ೧೨೧

ಮನದರ್ತಿ ಪೋಪಿನಿಂ ಮೇ
ರುನಗದಕೃತ್ರಿಮ ಜಿನಾಲಯಂಗಳನಾನಿಂ ।
ತನವರತಂ ನೋಡುವ ಭಾ
ವನೆ ಪೋಗದು ತಿಱ್ಱವಿನ್ನು ಮುದುಕಾರಣದಿಂ ॥ ೧೨೨

ಕಡೆಗಣಿಸಿ ಪರಿಗ್ರಹಮಂ (ಬ)

[2] ಯೆಂಬೀ ಭಾವನೆಯಿಂ ತಪಮಂ ಭಾವಿಸುತ್ತಿರು ನಿನಗೆ ಮಹಾತಪದೊಳಾದ ತೋಟ ವೇಡೆನೆ ಚಂದ್ರಾಭಮಹಾರಾಜನಿಂತೆಂದಂ (ಗ)

[3] ಎಂಬುದುತುರಿತಾದೊಡೆಪರಿಗ್ರಹಮನ್ನಿಮಂ ಮನವಾರೆ ಬಿಟ್ಟು ಪರಿಚ್ಛೇದಿಸನೆ ವಿದ್ಯಾಧರಮಹಾರಾಜನಿಂತೆಂದಂ (ಗ)

[ಕೆಲವು ವಿದ್ಯೆಗಳಂ ಬಿಡಲಾಜ್ಞೆಯೆಂಬುದುಂ, ಮುನಿಪತಿ ನಕ್ಕು ನಿಸಗನ್ನೆಗಂ ಮಹಾವ್ರತಂಗಳ ತೊಡರ್ಪುವೇಡಣುವ್ರತಧಾರಿಯಾಗಿರ್ಪುದೆಂಬುದುಂ, ಅವೆಂತಪ್ಪುವವಱ ಸ್ವರೂಪಮುಂ ಬೆಸಸಿವುನೆ, ಗುಣೋತ್ತಮ] [1] ರಿಂತೆಂದು ಪೇೞ್ದರ್ ॥ ೧೦೩

ಪರಮದರ್ಶನವಿಶುದ್ಧತೆ
ನಿರುಪಮಮೆನಿಸಿದ್ದ ಪಂಚಗುರುಪದಯುಗಪಂ ।
ಕರುಹವರಭಕ್ತಿ ಭಾವಿಪೊ
ಡುರುಸಂಸೃತಿದೇಹಭೋಗಮಿವಱಿ ವಿರಾಗಂ ॥ ೧೦೪

ನೆಲದ ಬೆಟ್ಟಿನಂತೆ, ಸಮುದ್ರದ ಜಲದಂತೆ, ಪಗಲಾದಿತ್ಯನಂತೆ, ನಕ್ಷತ್ರದ ಚಂದ್ರನಂತೆ, ಮೇರುವಿನ ಕರ್ಮಭೂಮಿಯಂತೆ, ಸ್ತ್ರೀಯರ ನೊಲೆಯಂತೆ, ಪುರುಷರ ಮಿಾಸೆಯಂತೆ, ಆವಿನ ಕೆಚ್ಚಲಂತೆ, ಗಜದ ದಂತದಂತೆ, ಬೆಂಕಿಯುಷ್ಣದಂತೆ, ತಾವರೆಯ ಸೂರ್ಯನಂತೆ, ನಯ್ದಿಲ ಚಂದ್ರನಂತೆ, ಸ್ತ್ರೀರತ್ನದ ಚಕ್ರವರ್ತಿಯಂತೆ, ನೀರ ಪಾಲಂತೆ, ನಖದ ಮಾಂಸದಂತೆ [ಪೂವಿನ ಕಂಪಿನಂತೆ] ತುಪ್ಪುವ ಬಣ್ಣದಂತ, ತಾಯ ಶಿಶುವಿನಂತೆ, ಕರುವಿನೆಳಗಂದಿನಂತೆ, ಲೋಭಿಯ ಪೊನ್ನಂತೆ, ಪಂಚಪರಮೇಷ್ಠಿಗಳೞಿಪ್ಪ ಪತ್ತುಗೆವೆರಸು; ಪಿರಿದು ತೆತ್ತೊಕ್ಕಲಂತೆ, ಗಂಡನೊಲ್ಲದ ಸ್ತ್ರೀಯಂತೆ, ಪಂದೆಯಂ ಕಂಡಾಳ್ದನಂತೆ, ಪಾದರಿಗೆಯುಂ ಕಂಡಗಂಡನಂತೆ, ಬೇಸಗೆಯೊಳ್ಪಯಣಂಬೋಪರಂತೆ, ದೂರಕ್ಕೆ ಪೊಱವೆರಸು ಪೋಪರಂತೆ, ಪೊಗೆಯೊಳಿರ್ದರಂತೆ, ಬಡವನ ಮಗಳಂತೆ, ಹಡಪಾಳಿಸತ್ತ ಮನೆಯಂತೆ, ಪ್ರಭು ಕೆಟ್ಟ ನಾಡಂತೆ, ಸಂಸಾರದ ಶರೀರದ ಭೋಗದ ಮೇಲೆ ಬೇಸಱುಂ; ಬಕ್ಕಂ ಕಂಡಿಲಿಯಂತೆ, ಪಾವಂ ಕಂಡ ಕಪ್ಪೆಯಂತೆ, ಕಳ್ಳನಂ ಕಂಡ ಪಥಿಕನಂತೆ, ಪರ್ದಂ ಕಂಡ ಪಾವಿನಂತೆ, ತಳಾಱನಂ ಕಂಡ ದ್ರೋಹನಂತೆ, ಕೋಣನಂ ಕಂಡ ಕುದುರೆಯಂತೆ,

1 ಗಗನಗಾಮಿನೀವಿದ್ಯೆಯೊಂದು ಪೊಱಗಾಗಿ ಯಲ್ಲಮಂ ತೊಱೆವೆನೆನೆ ಮುನಿಗುಪ್ತಭಟ್ಟಾರಕರ್ನಕ್ಕು ನೀನಂತಾದೊಡನ್ನೆವರಮೇಕಾದಶಕ್ರಾವಕಸ್ಥಾನದೊಳೊಂದೆ ಬಿಡದು ನಡೆಯೆನೆ ನಿವ್ಮಡಗಳಲಱಿ ವ್ರತಸ್ವರೂಪಮಂ ಬೆಸಸುವುದೆಂಬುದುಂ ಮುನಿಖ್ಯಂದಾರಕರಿಂತೆಂದು ಪೇೞ್ದರ್ (ಗ).

ನಾಯುಂ ಕಂಡ ಬೆಕ್ಕಿನಂತೆ, ಪುಲಿಯಂ ಕಂಡ ಪುಲ್ಲೆಯಂತೆ, ಇಹಲೋಕದ ಪರಲೋಕದ ಮರಣದ ಕುತ್ತದ ಪಱಿವಿನಗಿಲ್ಲೆಂಬ ಮೆಯ್ಗೆ ಮಱೆಯಿಲ್ಲೆಂಬ ತೊಟ್ಟನಡಸುವ [1] ಸಪ್ತಭಯಂಗಳ್ಗೆ ನಡುಗದುದುಂ; ರಕ್ಕಸಿಯಂ ಮಾನಿಸಂ, ಸಿಂಹಮೆನಾನೆ, ಲೋಗರಂ ಶಿಶು, ಮೆರುಳನಂ ಬುದ್ಧಿಶಾಲಿ, ದುಶ್ಚರಿತ್ರನಂ ಸದಾಚಾರಂ, ಕಳ್ಳನಂ ಸದ್ಧರ್ಮಂ, ವ್ಯೆಸನಿಯಂ ಜಿತೇಂದ್ರಿಯಂ ಪೊರ್ದದಂತೆ, ಜೂಜುಂ ಬೇಂಟೆಯುಂ ಕಳ್ಳುಂ ಮಾಂಸಮುಂ ಕುತ್ಸಿತವೇಶ್ಯೆಯುಂ ಪರದಾರಮುಂ ಕಳವುಮೆಂಬ ಸಪ್ತವ್ಯೆಸನಂಗಳಂ ಪೊರ್ದದಿರ್ಪುದುಂ; ಕುಡುವ ಬೊಜಂಗನನಂ ಪಡೆದ ಕುಂಟಿಣಿಯಂತೆ, ಸಿರಿವಂತನ ಕಯ್ಯಂ ಪಿಡಿದ ಬಡವೆಯಂತೆ, ನಾಡುವ ಡೆದ ಪಸಾಯಿತನಂತೆ, ತೇಜಂಬಡೆದರಸಿನಂತೆ, [2] ಮನ್ನಣೆವಡೆದ ಕೀಷ್ಟಾಜ್ಞೆತಿಯಂತೆ, ಪೂಜೆವೆಡೆದ ವ್ಯೆಂತರಿಯಂತೆ, ಗೆಲ್ಲಂಪಡೆದ ಪಂದೆಯಂತೆ, ಜವ್ವನಂಬಡೆದ ಮುದುಪನಂತೆ, ನಿಶ್ಶಂಕಾದ್ಯಷ್ಟಗುಣಂಗಳೊಳಾದ ಮಹಾಪ್ರೀತಿಯುಂ, ಮೆದ್ದು ಗುಣಿಕೆಯುಂ ತಿಂದರಂತೆ, ಪಿತ್ತಂ ತಲೆಗೇಱಿದರಂತೆ, ಮೆರುಳ್ಗೊಂಡರಂತೆ, ಶಾಶ್ವತಂಬಡೆದರಂತೆ, ಜವೆನೂಳೋಲೆಯುಂಡಿಗೆಯಂ ತಂದರಂತೆ, ಕಳ್ಳುಡಿದರಂತೆ, ಸ್ವೇಚ್ಛಾಮರಣಿಗಳಂತೆ, ಸಾವಿಲ್ಲದರ ಬಸಿಱೊಳ್ ಬಂದರಂತೆ, ಜಾತ್ಯೈಶ್ವರ್ಯ ಪೂಜಾಕುಲಬಲತಪರೂಪಜಾತಿಯೆಂಬೆಂಟುಮದಂಗಳೊಳ್ಪೊರ್ದುಗೆಯಿಲ್ಲದುದುಂ; ಕೊಲ್ವ ಪಾವಂ ಕಳ್ವ ಪೆಂಡಿರಂ ಪಿಸುಣನಪ್ಪೊಡವುಟ್ಟಿದನಂ ತಿಂಬ ನಾಯುಂ ಪೆಂಡಿರ್ಗಳಿಪುವ ಬಂಟನಂ ಕವರಿಸುವನಂಟನಂ ಗೆಂಟುಮಾಡುವಂತೆ, ಮಿಥ್ಯಾದೈವಂ ಮಿಥ್ಯಾಲಯಂ ಮಿಥ್ಯಾತಪಂ ಮಿಥ್ಯಾತಪಸ್ವಿ ಮಿಥ್ಯಾಜ್ಞಾನಿ ಮಿಥ್ಯಾವ್ರತಮೆಂಬೀ ಷಡಾಯತನ ಸೇವೆಯುಂ ಗೆಂಟುಮಾಡುವುದುಂ; ಅಡವಿಯ ಕೊಳನಂ ನೆಗಳ ಬಾವಿಯಂ ಬಡವಾಗ್ನಿಯಂ ಪೋಲ್ವ ಮಿಥ್ಯಾತ್ವಮುಮೆಂ, ಜಾರೆಯ ಮಗನಂ ಗಡಿಯ ನಾಯಕನಂ ನಂಬಿಸಿ ಕೊಲ್ವವನಂ ಪೋಲ್ವ ಸಮ್ಯಗ್ಮಿಥ್ಯಾತ್ವಮುಮಂ ಬ್ರಾಹ್ಮಣನೊಡನಿರ್ದ ಸೂಳೆವಂಡತಿ ನಡಪಿದ ಮಗನಂ

---

[1] ತೊಟ್ಟನೆನಡಸುವ (ಬ. ಕ. ಗ.) [2] ಅರಸಯಂತೆ, (ಗ)

ಪ್ರಜೆಪರಿವಾರಂ ಪಿಡಿಯದರಸಂ ಪೋಲ್ವ ಸಮ್ಯಕ್ತ್ವ ಪ್ರಕೃತಿಯಂ ಪರಿಹರಿಪುದುಂ ; ಕೆಟ್ಟ ರಾಜ್ಯಂ ಕೈಸಾರ್ದನಂತೆ ಸಂವೇಗದೊಳಂ ಬಟ್ಟೆಯೊಳ್ ಬಂಡಮಂ ಕೊಳ್ಬಟ್ಟನಂತೆ ನಿರ್ವೇಗದೊಳಂ, ಪೊಲ್ಲದಂ ಮಾಡಿದ ಸೂಚಿಯಂತೆ ನಿಂದೆಯೊಳಂ ಬಡಿಸಿದ ಮಕ್ಕಳಂತೆ ಅಳಲ್ವೆಯೊಳಂ ನೀರ್ ಮುಟ್ಟಿದ ಕೆಂಡದಂತುಪಶಮದೊಳಂ, ಕೂರ್ಪ ಪೆಂಡಿರ ಕೂಟದಂತೆ ಪಂಚಪರಮೇಷ್ಠಿಗಳೊಳಿಪ್ಪ ಭಕ್ತಿಯೊಳಂ, [ಮಾಗಿಯೊಳ್ಕಿಂದ ರಂತನುಕಂಪೆಯೊಳಂ] [1] ಅಳಯನಂ ಕಂಡ ಮಾವನಂತೆ ವಾತ್ಸಲ್ಯದೊಳಂ ನೆರೆದಿರ್ದುದುಂ ; ದೇವರೊಳಾದ ಶಂಕೆಯುಂ, ಭೋಗದೊಳಿಪ್ಪಕಾಂಕ್ಷೆಯುಂ, ಶರೀರದೊಳಿಪ್ಪ ನಿರ್ವಿಚಿಕಿತ್ಸೆಯುಂ ನಿರ್ದೋಷಿಯಪ್ಪಾತನಂ ಪೊಗಜ್ವಿಲ್ಲಿ ಅನ್ಯಾದೃಷ್ಟಿಪ್ರಶಂಸೆಯುಂ, ಸದೋಷಿಯಪ್ಪಾತನಂ ಪೊಗಜ್ವಿಲ್ಲಿ ಅನ್ಯಾದೃಷ್ಟಿಸಂಸ್ತವನೆಮುಮೆಂಬ ಪಂಚಾತಿಚಾರದೊಳಂ ಕೂಡದುದುಂ, ಒಂದನೆಯ ದಾರ್ಶನಿಕನೆಂಬ ಶ್ರಾವಕಂಗಕ್ಕುಂ [1] ॥ ೧೦೫

[ಪರಮಜಿನನಾತ್ಮನಂತಾ
ಪರಮಶ್ವರನೆಂದುದಾಗಮಂ ನಿರ್ಗ್ರಂಥಂ ।
ಪರಮೆತಪಂ ಧರ್ಮಂ ದಯೆ
ವೆರಸಿದುದೆಂದಿಂತು ನಂಬುವುದೆ ಸಮ್ಯಕ್ತ್ವಂ ॥] ೧೦೬

ತತ್ಸಮ್ಯಕ್ತ್ವಂಬೆರಸು ಮು
ಹೋತ್ಸವದಿಂ ಬೆಸನವೇೞುಮುಂ ಬಿಸುಟುಱಿ [2] ನಿ ।
ರ್ಮತ್ಸರದಿಂ ಸದ್ಗುಣದೊಳ್
ವಾತ್ಸಲ್ಯಮನುಂಟುಮಾಡಿ ಕರಮಾದರದಿಂ ॥ ೧೦೭

[ಕ್ರೂರತೆಯಿಂ ಪ್ರಾಣಿಗಳಂ
ಧಾರಿಣಿಯೊಳ್ಕೊಲ್ಲನೆಂತುಮುಗ್ರತೆಯಿಂ ನಿ ।
ಷ್ಕಾರಣಮಱಿಯದೆ ಕೊಂದೊಡ
ಮಾರಯ್ಯದೆ ಕೊಂದೆನೆಂದು ಮನದೊಳ್ನೀವಂ ॥ ೧೦೮

---

[1] ಶ್ರಾವಕನಕ್ಕುಂ (ಬ. ಕ. ಗ.) [2] ದೋಷವಿಲ್ಲದಧಿಕತೆಯಿಂ (ಗ)

ವ್ರತಮಂ ಕೊಳದಿರ್ದೊಡಮ
ವ್ರತಿಯಾಗಂ ಕ್ಷಿತಿಯೊಳಸೆವ ಕುಲಬಲಸಂಪ ।
ತ್ಪ್ರತತಿಯೊಳಮಿರ್ದು ಸಜ್ಜಿನ
ಮತದೊಳ್ದರ್ಶನಿಕನೆಂಬನೊಂದನೆಯಾತಂ ॥ ೧೮೯

ವರಸಮ್ಯಕ್ತ್ವಂಬೆರಸು
ರ್ವರೆಯೊಳ್ ಶಲ್ಯತ್ರಯಂಗಳಂ ತೊಱೆದು ಸದಾ ।
ಚರಿತನಿವನೆನಿಸಿ ಗುಣಮಂ
ಧರಿಯಿಸಿ ಪೆಱಗಿಕ್ಕಿ ಪಂಚವಿಂಶತಿಮೆಲಮೆಂ ॥] ೧೯೦

ಬಸಿಱೊಳಿರ್ದಂಬಿನಂತೆ, ಮನೆಯೊಳಿರ್ದ ಪಾವಿನಂತೆ ಕೂಪೊಳಗಿರ್ದ ನಂಜಿನಂತೆ, ಪೊಲ್ಲಮೆಯಂ ಮಾಡುವ [1] ಮಿಥ್ಯಾಶಲ್ಯಂ ಮೊಂಗಾಶಲ್ಯಂ ನಿಧಾನಶಲ್ಯಮೆಂಬ ಮೂಱುಂ ಶಲ್ಯಂಗಳಿಂ ಪಿಂಗಿದಂ। ನಿಧಾನದಂತೆ ರಾಜ್ಯದಂತೆ ಕೂರ್ಪರ ಕೂಟದಂತೆ ಪಗೆವರ ಕೇಡಿನಂತೆ ಸ್ಥಿರಮಪ್ಪ ಜವ್ವನದಂತೆ ಸೊಗಯಿಸುವ ಕೊಲ್ಲದ ಪುಸಿಯದ ಕಳ್ವದ ಪರಸ್ತ್ರೀಯರ್ಗೆ ಅಗದ ನಿಯಮಿತಪರಿಗ್ರಹಮೆಂಬ ಪಂಚಾಣುವ್ರತಂಗಳ ಕೂಟನನುಳ್ಳ ಮುಖಭಾಜನಮಲ್ಲದ [2] ಶೀಲಸಪ್ತಕದೊಳ್ ಕೂಡಿದಂ; ಬಂಧವಧಚ್ಛೇದಾತಿಭಾರಾರೋಪಣಾನ್ನಪಾನನಿರೋಧಮೆಂಬೀ ಕೊಲ್ಲದ ವ್ರತದೈದತಿಚಾರದೊಳಂ, ಮಿಥ್ಯೋಪದೇಶ ರಹೋಭ್ಯಾಖ್ಯಾನ ಕೂಟಲೇಖನ ಕ್ರಿಯಾನ್ಯಾಸಾಪಹಾರ ಸಾಕಾರಮಂತ್ರಭೇದಮೆಂಬ ಪುಸಿಯದ ವ್ರತದೈದತಿಚಾರದೊಳಂ, ಸ್ತೇನಪ್ರಯೋಗ ತದಾಹೃತಾದಾನೆ ವಿರುದ್ಧರಾಜ್ಯಾತಿಕ್ರಮ ಹೀನಾಧಿಕಮಾನೋನ್ಮಾನ ಪ್ರತಿರೂಪಕವ್ಯವಹಾರಮೆಂಬ ಕಳ್ವದ ವ್ರತದೈದತಿಚಾರದೊಳಂ, ಪರವಿವಾಹಕರಣೇತ್ವರಿಕಾಪರಿಗ್ರಹಾಪರಿಗೃಹೀತಾಗಮನಾನಂಗಕ್ರೀಡಾಕಾಮತೀವ್ರಾಭಿನಿವೇಶಮೆಂಬ ಪರಸ್ತ್ರೀಗೆಱಗದ ವ್ರತದೈದತಿಚಾರದೊಳಂ, ಕ್ಷೇತ್ರವಾಸ್ತುಹಿರಣ್ಯಸುವರ್ಣಧನಧಾನ್ಯ ದಾಸೀದಾಸ ಕುಪ್ಯಭಾಂಡಾತಿಕ್ರಮಮೆಂಬ ಪರಿಮಿತಪರಿಗ್ರಹದೈದತಿಚಾರದೊಳಂ, ಊರ್ಧ್ವಾಧಸ್ತಿರ್ಯ

ಗ್ವ್ಯತಿಕ್ರಮ ಕ್ಷೇತ್ರವೃದ್ಧಿ ಸ್ಮೃತ್ಯಂತರಾಧಾನವೆಂಬ [1] ದಿಗ್ವಿರತಿವ್ರತ
ದೈದತಿಚಾರದೊಳಂ, ಆನಯನ ಪ್ರೇಷ್ಯಪ್ರಯೋಗ [2] ಶಬ್ದರೂಪಾನು
ಪಾತ ಪುದ್ಗಲಕ್ಷೇಪವೆಂಬ ದೇಶವಿರತಿವ್ರತದೈದತಿಚಾರದೊಳಂ,
ಕಂದರ್ಪ ಕೌತ್ಕುಚ್ಯ ಮೌಖರ್ಯಾಸಮೀಕ್ಷ್ಯಾಧಿಕರಣೋಪಭೋಗ
ಪರಿಭೋಗಾನರ್ಥತ್ವವೆಂಬನರ್ಥದಂಡವಿರತಿವ್ರತದೈದತಿಚಾರದೊಳಂ ;
ಕಾಯದುಷ್ಪ್ರಣಿಧಾನ ವಾಗ್ದುಷ್ಪ್ರಣಿಧಾನ ಮನೋದುಷ್ಪ್ರಣಿ
ಧಾನಾನಾದರಸ್ಮೃತ್ಯನುಪಸ್ಥಾನವೆಂಬ ಸಾಮಯಿಕಶಿಕ್ಷಾವ್ರತದಯ್ದತಿ
ಚಾರದೊಳಂ, ಅಪ್ರತ್ಯವೇಕ್ಷಿತಾಪ್ರಮಾರ್ಜಿತೋತ್ಸರ್ಗಾಪ್ರಮಾರ್ಜಿ
ತಾದಾನಾಪ್ರತ್ಯವೇಕ್ಷಿತಾಪ್ರಮಾರ್ಜಿತಸಂಸ್ತರೋಪಕ್ರಮಣಾನಾದರ
ಸ್ಮೃತ್ಯನುಪಸ್ಥಾನವೆಂಬ ಪ್ರೋಷಧೋಪವಾಸವೆಂಬ ಶಿಕ್ಷಾವ್ರತದ
ಯ್ದತಿಚಾರದೊಳಂ, ಸಚಿತ್ತಾಹಾರಸಚಿತ್ತಸಂಬಂಧಾಹಾರ ಸಚಿತ್ತ
ಸಮ್ಮಿಶ್ರಾಹಾರಾಭಿಷವಾಹಾರ ದುಷ್ಪಕ್ವಾಹಾರವೆಂಬುಪಭೋಗ
ಪರಿಭೋಗಪ್ರಮಾಣವೆಂಬ ಶಿಕ್ಷಾವ್ರತದಯ್ದತಿಚಾರದೊಳಂ, ಸಚಿತ್ತ
ನಿಕ್ಷೇಪ ಸಚಿತ್ತಾಪಿಧಾನ ಪರವ್ಯಪದೇಶ ಮಾತ್ಸರ್ಯ ಕಾಲಾತಿಕ್ರಮ
ವೆಂಬತಿಥಿಸಂವಿಭಾಗಶಿಕ್ಷಾವ್ರತದೈದತಿಚಾರದೊಳಂ ; ಭಂಡಾರದ ಸೇನ
ಬೋವನಂತೆ ರಾಣಿವಾಸದ ಪೆರ್ಗಡೆಯಂತೆ, ಪೊನ್ನಧ್ಯಕ್ಷವಾದನಂತೆ
ಬೆಳಗೆಯ್ಯಂ ರಕ್ಷಿಸುವನಂತೆ, ಮದಗಜಮನೇಱುವನಂತೆ, ಬಿನ್ನಪಂ
ಗೆಯ್ವನಂತೆ, ತೊಱೆಯೆನೀಸುವನಂತೆ, ಕಟ್ಟಾನಾಡಂ ಸಂತವಿಡುವನಂತೆ,
ಮೂರ್ಖರ ಭರಮೆಂ ತಿರ್ದುವನಂತೆ, ರತ್ನಾಭರಣಮಂ ತೊಟ್ಟು
ಬಟ್ಟೈವೋಪನಂತೆ, ಚಕ್ರವರ್ತಿಯು ಬಾಗಿಲಂ ಕಾವನಂತೆ, ನಯಮುಂ
ಬುದ್ಧಿಯುಮೊಜ್ಜಿಕೆಯುಂಬೆರಸು ನಡೆವಾತಂ, ೧೩೧

ಅತ್ತಿಯು ಬಸರಿಯು ಗೋಳಿಯು
ವೆತ್ತರಳಿಯು ವಟಿದ ಪಣ್ಣನಡಗಂ ಜೀನಂ ।
ಬಿತ್ತರಮದ್ಯಮನಾಗೆಂ
ಬುತ್ತಮಸಂಸೇವ್ಯಮೂಲಗುಣಮಿಂತೆಯೆಂಟುಂ ॥ ೧೩೨

---

[1] ಸ್ಮೃತ್ಯಂತರಾಭಿಧಾನವೆಂಬ (ಗ) [2] ಅಪಾಹಾರ (ಗ)

ಸಂದೋಲ್ಮೆತ್ತಕೀರ್ಗವಡ
ಗಂದಿಸ ತಾಂ ತೊಳೆದ ವೆಸ್ತು ಸತ್ತ ಕ್ರಿಮಿಗಳ್ ।
ಸಂದಸ್ಥಿಯೆಂಬಿವೇಟುಂ
ಕುಂದದೆ ಮುಟ್ಟುಪಡಮೆಕ್ಕುಮರ್ಹನ ಮತದಂ ॥ ೧೩೩

[ಮೊದಗುಣವಂಟಱೊಳಂ ಕೂಡಿ ಸಪ್ತಾಂತರಾಯಂಗಳಂ ಪಿಂಗಿಸಿ ಪಂಚಾಣುವ್ರತದೊಳ್ಗೊಳ್ಳಿದನೆನಿಸಿ ಗುಣವ್ರತತ್ರಯದೊಳಂ ನೆರೆದು ಶಿಕ್ಷಾವ್ರತಚತುಷ್ಟಯದೊಳವೆಸಗಿ ಧರ್ಮಶಾಲ್ಯಂಕುರಕ್ಕೆಡೆಯೆನಿಪ ಅಱುವತ್ತೆರ್ಡತಿಚಾರವನುಮೆಂ ಪಿಂಗಿಸಿ ನೆಗಪ್ತಾವ್ರತ][1] ನೆರಡನೆಯ ವ್ರತಿಕನೆಂಬ ಶ್ರಾವಕನಕ್ಕುಂ. ೧೩೪

ಸ್ಥಿರನಾಗಿ ಶುದ್ಧವೃತ್ತಿಯೊ
ಳಿರವರಿಸದೆ ಪೆಱಗೆ ಪೇೞ್ದ ಸುವ್ರತಮನಿತುಂ[2] ।
ಪರಸು ವಧೆಯಿವರಸು ರಾಗಂ
ಪರಸು ಸದಾಚಾರನಾಗಿ ನಿರ್ಮಲಮನದಿಂ ॥ ೧೩೫

ಸಮತೆವರಸು ಕರ್ಮರಾಜನಂ ಕಯ್ವಾರಂಗೊಂಡು ಮೋಹರಾಜನಟ್ಟಿದ ತಂತ್ರವೆಲ್ಲಿಸುವ [ಮೂವತ್ತೆರಡುಂ ದೋಷಂಗಳಂ ಪತ್ತುವಿಟ್ಟು] ಮೆಚ್ಚಿಲ್ಲದೆ ಜಡನಾಗಿ ದೇವಗುರುಗಳಂ ಪೊರ್ದದೆ, ಪೆಱರ್ಗೆ ಪೀಡೆಯುಂ ಮಾಡುತ್ತುಂ [ಮೆಯ್ಯುಂ ತೂಗುತ್ತುಂ] ಉನ್ಮತ್ತಚೇಷ್ಟೆಯಿಂ ದೆರೆಯಂತಿಂದ ವಿಾನಂತ ಪೊಟೆಯುತ್ತುಂ, ಪೊಲ್ಲಮೆನನಾಗಿ ಕಯ್ಯುಂ ತಳ್ತಿಱಿದು ಪೆಱರ್ಗಂಜೆ ಪೆಱರ ನೆವದಿಂ ಪೆಂಪು ಕಾರಣಮಾಗ[3] ಗುರುಗಳಂ ಕಳ್ದ ಗುರುಗಳ್ಗೆ ಪ್ರತಿಕೂಲನಾಗಿ ಗೃಹಂ ಮೊದಲಾಗೆ ಶಲ್ಯಂ ಬೆರಸು ನುಡಿಯುತ್ತುಂ ಪೆಱರನೇಡಿಸುತ್ತುಂ ನೊಸಲನೆತ್ತುತ್ತುಂ ಕಂಪಿ

---

1 ಇಂತೀಯಿನಿತಱೊಳೊಂದಿನಡವಾತ, (ಗ)
2 ಪೆಱಗೆ ಪೇೞ್ದಿಗುಣಮೆನಿತನಿತುಂ, (ಗ)
3 ಸುಖಮೂಟವುಂಕಾರಣಮಾಗಿ, (ಗ); ಸುಖಂಕಾರಣಮಾಗಿ. (ಬ)

ಸುತ್ತುಂ ಋಷಿಯರಂ ಕಂಡು ಕಾಣಲೀಯದೆ ಸಂಘನಿರೋಧದಿಂ ಕಯ್ಯಂ ಬಿಟ್ಟು ಪಡಪು ಕಾರಣಮಾಗೆ, ಮೇಲ್ವಡೆವೆಸೆಂದು ಕುಂದಿಸಿ ಪೆರ್ಚಿಸಿ ಸನ್ನೆಗೆಯ್ಯುತ್ತುಂ, ಪೊಲ್ಲದನಿಯಿಂ ಗೀತಂಮಾಡುತ್ತುಮಿಪ್ಪುದೆಂಬೀ ಮೂವತ್ತೆರಡು ದೋಷಂಗಳಿಂ ಪಿಂಗಿ, ಮೊಱುಂಪೊತ್ತುಂ ದೇವರಂ ಬಂದಿಸುವಂ; ಮತ್ತಂ ಕುದುರೆಗಾಲಿಕ್ಕುತ್ತುಂ, ಲತೆಯಂತೆ ಬಳ್ಕುತ್ತುಂ, ನೆಮ್ಮಿ ಕೇರಂ ಮೆಲಂಗಿ ಮೊಳಿಗೆಯಂ ಪೊತ್ತು ಗುಹ್ಯ ನಿರೋಧನಾಗಿ ಸಂಕಲೆಯೊಳಿರ್ದಂತೆ ನೇಲ್ದು [1] ಕೊರಲನೆತ್ತಿ ಮೊಲೆಯಂ ನೋಡುತ್ತುಂ, ಕಾಗೆಯಂತೆ ಕಡೆಗಣ್ಣೊಳ ನೋಡುತ್ತುಂ, ಕೀಟಿಟ್ಟ ಕುದುರೆಯಂತೆ ಬಾಯಂ ಪೊಳಕಿಸುತ್ತುಂ, ಕೊರಲಂ ನೀಡಿ ಕಯ್ಯಂ ಪಿಡಿದು ತಲೆಯುಂ ಕೊಗುತ್ತುಂ, ಸನ್ನೆದೋಱುತ್ತುಂ, ಬೆರಲನಾಡಿಸುತ್ತುಂ, ಪುರ್ವಿಕ್ಕುತ್ತುಂ, ಸೊಕ್ಕಿದವರಂತ ಮರುಳಾಗ್ಗಂಚರಂತೆ ದೆಸೆಯುಂ ನೋಡುತ್ತುಂ, ಕೊರಲಂ ಕುಸಿಯುತ್ತುಮುತ್ತರಿಸಿದ ಕುದುರೆಯಂತೆ ಮೋಡೆಯಂ ನೆಗಪುತ್ತುಂ, ಮೆಯ್ಯಾ ಮುಟ್ಟುತ್ತುಂ, ಕೊರಲಂ ತಿರಿಪುತ್ತುಂ, ಕೈಯನಾಡಿಸುತ್ತುಂ, ಪಲ್ಲಂ ಕುಱುಕುತ್ತುಂ, ಮೆಯ್ಯಾಂ ತೊನೆಯುತ್ತುಂ, ಭೋಗಂಗಳಂ ಚಿಂತಿಸುತ್ತುಂ, ಕಣ್ಣನ್ನೆಗೆಯ್ಯುತ್ತುಂ, ಪರವೆಶಮಾದರಂತೆ ಜಡನಾಗುತ್ತುಮಿರಲಾಗದೆಂಬೀ ಮೂವತ್ತೆರಡು ದೋಷಂಗಳಿಂ ಪಿಂಗಿ ಕಾಯೋತ್ಸರ್ಗಂ ಮಾಡುವೆ [ಶುದ್ಧಬುದ್ಧಿಯಿಂ ಮೊಱುಂಪೊಚ್ಚಿಸೊಳಂ ದೇವತಾಸ್ತವವಿಧಿಯೊಳಾಗುವಾತಂ] ಮೊಱನೆಯ ಶ್ರಾವಕಂ ಸಾಮಯಿಕನೆಂಬಂ. ೧೫೬

ತಿಂಗಳ್ ನಾಲ್ಕುಂ ಪರ್ವದಿ
ಸಂಗಳೊಳಂ ಪೆಱಿಗೆ ಪೋದ್ದಿ ಗುಣಮುನಿತಪೋಳಂ।
ಪಿಂಗದುಪವಾಸಯುತನು [2]
ತ್ತುಂಗಂ ಬಾಪೆಂದು ಧಾತ್ರಿ ಕೈಮುಗಿಪಿನೆಗಂ [3] ॥ ೧೫೭

---

1 ಸಂಕಲೆಯಸಿಕ್ಕಿದಂತೆನಿಲ್ದು, (ಬ. ಕ.)

2 ಪಿಂಗದೆ ಗುಣನಿಳಯದೊಳು, (ಬ. ಕ)

3 ಪೇಳ್ ಪ್ರೋಷದೋಪವಾಸಂ ಪೆಸರಂ, (ಗ)

ಉಪವಾಸದೊಳ್ಮಗಱ್ದು ಪ್ರೋಷಧೋಪವಾಸನೆಂಬ ನಾಲ್ಕನೆಯ
ಶ್ರಾವಕನಕ್ಕುಂ ॥ ೧೩೪

ಪೆಱಗಣವುಸಹಿತವೊಳ್ಪಂ
ಮಱೆಯದೆ ದಯೆವೆರಸು ಪಸಿಯು ವೆಸ್ತುಗಳಂ ತಾಂ ।
ನುಱಿಪುಂ ಕೊಳಲೊಲ್ಲದವಂ
ಪೆಱತೇಂ ಸಚ್ಚಿತ್ತನೆಂ ಎನ್ನೈದನೆಯಾತಂ ॥ ೧೩೫

ಇರುಳಲ್ಲದೆ ಪಗಲೊಳ್ಪಂ
ಡಿರ ಸೇವೆಯನೆಯ್ದೆ ಬಿಟ್ಟು ನುಂ ಪೇೞ್ದ ಗುಣಂ ।
ಬೆರಸಿರ್ದಾ ಶ್ರಾವಕನು
ರ್ವೆರೆವೊಳ್ ತಾಂ ರಾತ್ರಿಭಕ್ತನಾಹಿನೆಯಾತಂ ॥ ೧೩೬

ಸುರಿತು ಕಟ್ಟೆ ನುರ್ಗತಿಯು ಬಟ್ಟೆ ಕಳಂಕವ ಪೊಟ್ಟೆ ದುಃಖವಾ
ಗರಮನರಿಂದು ಕಾಮಿಸಿಸಿಮರೊಂದುಪಭೋಗವನೆಯ್ದೆ ಬಿಟ್ಟು ಸ
ಚ್ಚರಿತದೊಳಾರ್ತು [ಕೂರ್ತೆ ಸಗುವುತ್ತಮಸದ್ಗುಣನಲ್ತೆ ಧಾತ್ರಿಗ
ಚ್ಚರಿ ಸಕಲೈಕಪುಣ್ಯನಿಧಿ ದುರ್ಗುಣದೂರನುದಾರನುತ್ತಮಂ ॥ ೧೩೭

ಬ್ರಹ್ಮಚಾರಿಯೆಂಬೇೞನೆಯ ಶ್ರಾವಕಂ ॥] [1] ೧೩೮

ಆರಂಭದ ದೆಸೆಯಂ ಬಿ
ಟ್ಟೋರಂತಿರೆ ಪೆಱಗೆ ಪೇೞ್ದ ಗುಣಮೆಸೆತೞಿಂಗೊಳಂ ।
ಸಾರವಿದನೆಸಿಸಿ [2] ನಡೆವವ
ನಾರಂಭನಿವೃತ್ತನೆಂಬನೆಂಟನೆಯಾತಂ ॥ ೧೩೯

ಧರದಿಂ ಮುಂಪೇೞ್ದ ಗುಣಂ
ಬೆರಸು ಪರಿಗ್ರಹದ ಚಿಂತೆಯಂ ಬಿಸುಟ್ಟು ಸದಾ ।

---

1 ಕೂರ್ತು ನಡೆಯುತ್ತಮನಗ್ಗದ ಬ್ರಹ್ಮಚಾರಿ ವಿಸ್ತರದೊಳುಪಾಸಕಾ
ನೆಸಲ್ಕನೇೞನೆಯಾತನನಂಗಪೆರ್ದನಂ, (ಗ) 2 ಸಾರಮಿವನೆನಿಸಿ. (ಬ. ಕ.)

ಚರಿತನೆನಿಸಂ ಪರಿಗ್ರಹ
ವಿರತಂ ಪಾಪಾದ್ರಿವಜ್ರ [1] ನೊಂಬತ್ತನೆಯುಂ ॥ ೧೪೪

ಅನುಮತಿಯೆಂಬಂ ತಾಂ ಪ
ತ್ತನೆಯಾತಂ ತನಗೆ ಪೇಳ್ದಿ ಮೊರ್ಗಮೆನೆಂದುಂ [2] ।
ಮನವೊಸೆದು ಸೇವಿಸದೆ ಮು
ನ್ನಿನ ಗುಣದೊಳ ಕ್ಕಿಡಿ ನೆಗಳ್ವನುನ್ನತಿಯಿಂದಂ ॥ ೧೪೫

ಕನ್ನಂ ಕುಱುತ್ತು ಮೊಡಿ
ರ್ದನ್ನಮನೌಷಧಮನೊಲ್ಲನುತ್ಸವದಿಂದಂ ।
ಮುನ್ನಿನ ಗುಣದೊಳಕ್ಕಿಡಿ
ರ್ದನ್ನೆಯುದ್ದಿಷ್ಟ ವಿರತಪನ್ನೊಂದನೆಯುಂ [3] ॥ ೧೪೬

ಇಂತು ದಾರ್ಶನಿಕಂ ವ್ರತಿಕಂ ಸಾಮಯಿಕಂ ಪ್ರೋಷಧೋಪವಾಸಂ ಸಚಿತ್ತವಿರತಂ ರಾತ್ರಿಭಕ್ತಂ ಬ್ರಹ್ಮಚಾರಿ ಆರಂಭನಿವೃತ್ತಂ ಪರಿಗ್ರಹವಿರತಂ ಅನುಮತಿವಿರತಂ ಉದ್ದಿಷ್ಟವಿರತಂ ಎಂದು ಶ್ರಾವಕಸ್ಥಾನಂ ಪನ್ನೊಂದಕ್ಕುಮೆಂದು [ಮುನೀಂದ್ರೋತ್ತಮರ್] ಪೇಳೆ ಖೇಚರರಾಜಂ ॥ ೧೪೭

[ಅನುಪಮಮೆನಿಸುವ ಪನ್ನೊಂ
ದನೆಯ ಮಹಾಶ್ರಾವಕತ್ವಮೆಂ ದಯೆಯಿಂದಂ ।
ಮುನಿಪತಿ ದಯೆಗೆಯ್ವುದು ಮೆ
ತ್ತೆನಗೆಂ ಖೇಚರನ ನುಡಿಗೆ ಮೆಚ್ಚಿ ಮುನೀಂದ್ರಂ ॥ ೧೪೮

ಕಾರುಣ್ಯಂಗೆಯ್ವುದುಂ ಪಿರಿದುಪಾದರದಿಂದುಪಾಸಕರ ನೆಗಳ್ತೆಯೊಳಿರಿದೆನಿಸುವ ಏಕಾದಶಸ್ಥಾನಮುಂ ಕೈಕೊಂಡು ಉತ್ತರೋತ್ತರ

---

1 ಕರ್ಮಾರಿವಜ್ರ, (ಗ)

2 ಅನುಮತಿಯುಂಬುಂ ಪನ್ನೊಂದನೆಯಾತಂ ತನಗೆ ಪೇಳ್ದ ಮಾರ್ಗಮು ನೆಂದುಂ, (ಗ) ಉದ್ದಿಷ್ಟವಿರತಪತ್ತನೆಯಾತಂ, (ಗ)

ಮೊಗೆ ನೆಗಱುತ್ತುಂ] [1] ಸಲಕಾಲಂ ಗುರುಪಾದಸೇವೆಯೊಳಿರ್ದೊಂದು ದಿವಸಂ ಶರೀರಸೇನವಿಷಯದುತ್ಕತಮಧುರೆಯ ಜಿನಾಲಯಂಗಳಂ ಬಂದಿಸುವೆನೆಂಬ ಬಗೆ ಪುಟ್ಟಿ [ತನ್ನೊಳಿಂತೆಂದಂ:— ೧೪೯

ಗುರುವಚನಮನುಲ್ಲಂಘಿಸಿ
ಚರಿಯಿಸಲಣಮಾಗದಂತೆ ಪಿರಿದುಂ ಸುಖಮುಂ ।
ಪರದೊಳ್ ಲೇಸಾಗಿರೆ ಚೆ
ಚ್ಚರದಿಂದಂ ಪಡೆವನೆಂಬ ಶಿಷ್ಯಂ ಜಗದೊಳ್ ॥ ೧೫೦

ಆದುಕಾರಣದಿಂ ಗುರುಗಳನೊತಂಬಡಿಸಿದೊಡಲ್ಲದಾವೆಕಾರ್ಯಮುಮುಂ ನೆಗೞಲ್ಬಾರದೆಂದು ಮುನಿಗುಪ್ತಭಟ್ಟಾರಕರ್ಗೆ ವಿನಯದಿಂ ವಂದಿಸಿ ಕೈಗಂ ಮುಗಿದು ಮಲ್ಲನೆ ನಿಜಸ್ಥಾನದೊಳಿರ್ದಮಿಪುತ್ರರುಮಿವರ್] [2] ತಮ್ಮೊಳಿಂತಂಗರ್. — ೧೫೧

ಸ್ಥಿರನಾಗಿ ಗುಣದೊಳಸಗುವೆ
ನರನುಂ ವೈರಾಗ್ಯಮುಳ್ಳನುಂ ಲಜ್ಜಿತನುಂ ।
ಪಿರಿದಱಿವಾತನುಮೆಂದೆರೆ
ಚರಿಯಿಸುವೊಡಮುಚಿತರಲ್ಲರುತ್ತಮಗುಣಮುಂ ॥ ೧೫೨

[ಎಂದಾತನ ಗುಣಮೆನಱಿದರಪ್ಪುದಱಿಂ ಪೋಗಿ ತೀರ್ಥವಂದನೆಯುಂ ಮಾಡಿ ಬನ್ನಿವೆಂದಿಂತೆಂದರ್,] ೧೫೩

ಗುಣಿಗಳನಲ್ಲದೆ ನೀಂ ಮು
ನ್ನರ್ಗುಣರಂ ಪೊರ್ದಿದಿರ ಲೋಗರೇನಾನುಮೆನೊಂ ।

---

[1] ಪನ್ನೊಂದನೆಯ ಶ್ರಾವಕವ್ರತಮಂ ಕೈಕೊಂಡು. (ಗ)

[2] ತನ್ನ ಪೋಗಂ ಗುರುಗಳಿಗಱಿಪುವುದುಮವರಿಂತೆಂದರ್, (ಗ)

ದಣಿಕದಿನೆಂದೊಡೆ ಮನದೊಳ್
ಸೆಣೆಯದಿರೊಳ್ತಪದೊಳತಿ [1] ಗುಂದದಿರಿನಿಸುಂ ॥ ೧೫೪

ಎಂದು [ಪೋಗಲ್ವೇಱ್ದು] [2] ವರುಣಮಹಾರಾಜನರಸಿಯಪ್ಪ ರೇವತೀಮಹಾದೇವಿಗೆ ಪರಕೆಯುಂ ಉಂಪುರುಳಿಭಟ್ಟಾರಕಗೆ೯ ಪ್ರತಿವಂದನೆಯುಮುಂ ಮಾಱೆಯದೆ ಪೇೞ್ವಮೆನೆ ಗುರುಗಳ ಮಾತಿಂಗೆ [ಬ್ರಹ್ಮಚಾರಿ] ನಕ್ಕು ನಿಮಗಾನಪುರದ ಶ್ರಾವಕಜನಂ ಭವಸೇನಾಚಾರ್ಯಮೊದಲಾದಯ್ವರ್ಮುನಿಗಳುಮಿರ್ದಂತೆ [ಯಿಾ ರೇವತೀಮಹಾದೇವಿಯು ಬಡವಟ್ಟರ್ದುಂಡುರುಳಿಭಟ್ಟಾರಕರ ಮೇಲೆ ಕಡುಮೋಹವೇಕೆಂಬುದುವೆವರ ಸಂಬಂಧವೆಲ್ಲಮಂ ನಿನಗೆ ಬೆಸಗೊಳ್ವ ಗಸಣಿ ಬೇಡೆನೆ ಮತ್ತಂ ಪೇೞ್ದಪೆ ಕಿಱುಬೆಸಗೊಳ್ ನಮ್ಮನೀಂವ್ರ] [3] ನಿಂತೆಂದಂ ॥ ೧೫೫

ಬೇವಿನ ಗಿಡುವಾಂ ತಂದಿ
ಟ್ಟಾವಿನ ನೊೞಲಿವಾಲನೆಱೆದು ನಡಪಿದೊಡಾಂ ಕೇೞ್ ।
ಬೇವಿಂಗೆ ಕೈಪೆ ಪಿಂಗದು
ಭೂವಳಯದೊಳೆಂಬ ತೆಱದಿನಾಪುರವರಮುಂ ॥ ೧೫೬

[ಸತ್ಯಮೆನಿಸುವ ಧರ್ಮಮುಂ ಕೇೞ್ದೊಡಂ ಸಂಶಯತುಲಾರೂಢರಪ್ಪುದಱಿಂ ಪರಕೆಯುಮುಂ ವಂದನೆಯುಮುಂ ಪೇೞ್ದಿವಿಲ್ಲಿನೆ ಬ್ರಹ್ಮಚಾರಿ ಬೞಿಕ್ಕಾಗಿ ॥] [4] ೧೫೭

ಕನಸಂತರಿಕ್ಷಮಂಗ
ಧ್ವನಿಕಾರೇೞುಕಲಿಸ ಲಕ್ಷಣಂ ಮೆತ್ತಂವೇ ।

---

1 ಬೞ್ಕದೊಳರ್, (ಬ. ಕ.)

2 ಪ್ರತ್ಯಭಿವಂದನೆಯುಂ ಮೊಗದುಂ ನೆ ರಿಡಿ. (ಗ)

3 ನಿಮ್ಮಡಿಗಳವರ್ವರ ಮೇಲೆ ಮೋಹವೇಕಾದ್ದೆಂ ನಿನಗದಱ ಗಸಣಿ ಬೇಡಸಿರದಿರೆನಿ ಮತ್ತಂ ಕಿಱುಬೆಸಗೊಳ್ವುದುಂ ವಾತ್ಸಲ್ಯವತ್ಸಲಕರ್, (ಗ)

4 ಭವಸೇನಾಚಾರ್ಯಪ್ರಭೃತಿ ರುಷಿಯಗಂ ಸತ್ಯಮಾ ರೂಢ ಪ್ಪುದಱಿಂದುದಾಸೀನಮಾಗಿ ಪೆಱತಱ್ದು. (ಗ

ದಿನಿಕಂಪವೆಂಬವೆಪ್ಪಾಂಗ
ಗನಿಮಿತ್ತಂಬಗವೊಡವೆಗ್ಗೆ ಶುದ್ಧಗೆಯಲ್ತೆ ॥ (?) ೧೩೪

[ಅದಕ್ಕಿಂದವರಕ್ಕಿಯದ ವಿಷಯಮಿಲ್ಲಪ್ಪುದಕ್ಕಿಂದಿವರ ಮಾತೇ ಗೆಯ್ದುಂ ತಪ್ಪಲಕ್ಕಿಯದೆಂದು ನಿಶ್ಚಯಿಸಿ ಗುರುಗಳಂ ಬಂದಿಸಿ ಬೀಕೊಂಡು ಏಕ್ಕೈಯಿಂ ಪಿಗುರ್ವಿಸಿದ ರತ್ನತ್ರಯವಿರಾಜಿತಮಪ್ಪ ಪೊನ್ನ ವಿಮಾನಾಗ್ರಂನೇಕಂ ಗಗನತಲಾಗ್ರದಿಂದುತ್ತರಮಧುರೆಗೆ ಬಂದು ಧರೆ ಗವತರಿಸಿ ಬ್ರಹ್ಮಚಾರಿಯಾಗಿ ಭವಸೇನಾಚಾರ್ಯರಲ್ಲಿಗೆ ಬಂದು॥][1] ೧೩೫

ಪಿರಿದಪ್ಪ ಖ್ಯಾತಿಗೆ ನೀ
ವಿರೆ ನೋಂತವರಾರೊ ಜಗದೊಳಕ್ಕಿಂ ನಿವ್ಮಂ ।
ಪಿರಿದರ್ತಿಪರಸು ನೋಡುವೆ
ಭರವಸದಿಂ ಪಾಂಡ್ಯದೇಶದಿಂದು ಬಂದೆಂ ॥ ೧೩೬

[ಎಂಬುದುಂ ಭವಸೇನಾಚಾರ್ಯರ್ ಬ್ರಹ್ಮಚಾರಿಯ ವಚನಕ್ಕೆ ಸಂತೋಷಂಬಟ್ಟಿಪ್ಪುದುಂ ಬ್ರಹ್ಮಚಾರಿ ಭವಸೇನಾಚಾರ್ಯರ ಸಮ್ಯಕ್ತ್ವಮಂ ನೋಡಲೆಂದು ನೂಱುಂ ನಾಲ್ಕುಂ ದಿವಸಂ ಪೋದಿಂಬಟಿಕ್ಕೊಂದುದಿವಸಂ ॥][2] ೧೩೭

ಮರುಳಿಂಗಟ್ಟುದನುಂಡರೋ ಬಗೆವೋಡಂ ತಾವ್ರಂ ಮರುಳ್ಗೊಂಡರೋ ಪರಮುಂಟೆಂಬುದನಾರು ಬಲ್ಲರಱುವಿಂ ನಿಷ್ಕಾರಣಂ ಶಾಶ್ವತ ಕರ್ಗರುಳ್ದಂ ಕಟ್ಟಿ ವಿಶೇಷಮಪ್ಪ ಧನಮುಂ ಸಂಕ್ಲೇಶದಿಂ ಪೆತ್ತು ವಿ ಸ್ತಾರದಿಂ ಭೋಗಿಸಲೊಲ್ಲದೇಕೆ ಕಿಡುವರ್ನಿರ್ಬುದ್ಧಿಯಿಂ ಧರ್ಮದೊಳ್[3] ॥

[1] ಇವರ ವಚನಮುಂ ತಪ್ಪವೆಂದು ನಂಬಿ ವಿಮಾನಾಗ್ರ ಧನ ಗಿಯುಂ ತತ ಣದಿಂದುತ್ತರ ಮಧುರಗೆ ಬಂದು ಭವಸೇನಾಚಾರ್ಯರಂ ಕಂಡು, (ಗ)

[2] ಎಂದವರ್ಗೆ ಸಂತೋಷಂಬಡಿಸಿ ಸಂತೋಷವರ್ಗಿ ನುಡದು ನಾಲ್ಕನೆಯ ದಿವಸವಿರ್ದು ಭವಸೇನ ಚಾರ್ಯರ ಸಮ್ಯಕ್ತ್ವಮಂ ನೋಡಲೆಂದು ಬ್ರಹ್ಮಚಾರಿ ಇಂತೆಂದಂ, (ಗ) [3] ಕೆಡಿಪರ್ ನಿರ್ಬುದ್ಧಿಯಿಂದಾನದೊಳ್, (ಗ)

[ಎಂದು ಭವಸೇನಾಚಾರ್ಯರಂ ಬೆಸಗೊಳ್ವುದುಂ ಮೆಲ್ಲನೆ ನಕ್ಕು ಧರ್ಮಾದಿಂ ಪರತ್ರೆಯೊಳ್ ಸುಖಮುಂಟೆಂಬುದಾಗಮದೊಳ್ ಪೇಱುರ್ಕುಮಲ್ಲದಾವೆಱಿಯೆಮೆಂಬುದುಂ ಬ್ರಹ್ಮಚಾರಿ ನಕ್ಕು ತನ್ನೊಳ್ ಮತ್ತಂ ॥] [1] ೧೬೩

ತ್ರಸಮೆಂ ವಿದ್ಯೋಗಳಂ ವಿಗುರ್ವಿಸಿ ಬಱುಕ್ಕಂತಾತ್ರಸವ್ರತಮುಂ
ಮಿಸುಕಲ್ಕೀಯದೆ ಮೆಟ್ಟು ನಿಷ್ಕರುಣದಿಂದಲ್ಲಿರ್ದವಪರ್ಯಾಪ್ತಿಗು
ಬ್ಬಸಮೆಂ ಮಾಡದಿರೆಂದೊಡಾವುನಿಮುನೀ ಜೀವೆಂಗಳುಂ ಜೀವಮೇಂ
ಬೆಸಸಿಂ ನಿಶ್ಚಯಮೆಂದೊಡಾವಱಿಯೆವೆಂತೆಂಬರ್ಮುನೀಂದ್ರೋತ್ತಮರ್ ॥ ೧೬೪

[ಮೆತ್ತವುಪಶ್ಯನೀರವುಂ ಗುಂಡಿಯೊಳ್ತೀವಿತಂದುಕುಡುವುದು ಮುಂದಾದಿರೆ ಸಕ್ಕ ॥] [2] ೧೬೫

ನೀರೊಳ್ಗಾಳಿಯೊಳಗ್ನಿಯೊಳ್ಧರಣಿಯೊಳ್ಜೀವಂಗಳುಂಟೆಂಬರಾ
ನೀರೊಳ್ಗಾಳಿಯೊಳಗ್ನಿಯೊಳ್ಧರಣಿಯೊಳ್ಜೀವಂಗಳಂ ಕಂಡರಿ
ನ್ನಾರೀಲೋಕದೊಳಿಲ್ಲ ಜೀವನೆಳವೋ ಪುಣ್ಣಿಲ್ಲವೋ ಪೇಱು ನೀ
ವಾರಯ್ದಿನ್ನೆನಗೆಂದೊಡಾವಱಿಯೆವೆಂತೆಂಬುದಾಶ್ಚರ್ಯದಿಂ ॥ ೧೬೬

ಎಂಬುದುಮವರ ಮಾತಿಂಗಮಾಗಮದೊಳಿರ್ದ ವಿಶ್ವಾಸಕ್ಕಂ ತಲೆಯಂ ತೂಗಿ, ॥ ೧೬೭

ರಸಗೀತಂ ಪೊಣ್ಮೆ ತೂರ್ಯಧ್ವನಿಗಳಸಯೆ ಸಪ್ರಾಗದಿಂ ತುಪ್ಪದಿಂದಂ
ವೊಸರಿಂದಂ ಕ್ಷೀರದಿಂದಂ ಮುದದಿನೆಭಿಷವಂ ಮಾಡುವರ್ಭಕ್ತಿಯಿಂ ಭ
ವ್ಯಸಮೂಹಂ ವೀತರಾಗ[3]ಗಿವರೊಳ ಫಲಮೇನೆಂದು ತತ್ಸಾಧುವಂ ಸಂ
ತಸದಿಂದಂ ಕೇಳ ನಾವೇನಱಿವವು ಮುನಿಪರ್ಪುಣ್ಯಾನುಮುಂಟೆಂದು
ಪೇೞ್ವಿರ್ ॥ ೧೬೮

---

[1] ಉಳ್ಳುದುಂ ಪೇಳೆವೆನೆ ದಾನದುಂಸುಖಮುಂಟೆಂಬುದಂ ಆಗಮದಲ್ಲಿ ಪೇೞ್ದುದಲ್ಲದಾವಱಿಯೆವೆಂಬುದು ನಕ್ಕು (ಗ) [2] ಏಕಾದಶಾಂಗದರಿಯಾಗಿಯುಂ ಮಿಸಗಿರ್ಪಂತೀವುತಕ್ಕುವೆ ಜಗದೊಳ್ ಭವ್ಯತ್ವಮೆಂ ಕಷ್ಟಮೆಂದು ಮನದೊಳ್ [3] ವೀತರಾಗನೆಂ (ಗ)

ಎಂದು, ತಾವರೆ ನೀರಂ ಪೊರ್ದದಂತೆ, ಪೊಲೆಯಕ್ಕುಲಜರಂ ಪೊರ್ದದಂತೆ [ಪಲ್ ತಾಳುಗೆಯುಂ ಪೊರ್ದದಂತೆ, ಪುವ್ರ್ ಕಿವಿಯುಂ ಪೊರ್ದದಂತೆ] ಮುಗಿಲ್ನೆಲನಂ ಪೊರ್ದದಂತೆ, ನಕ್ಷತ್ರಂ ಮೇರುವಂ ಪೊರ್ದದಂತೆ, ಪತಂಗಂ ಸೂರ್ಯನಂ ಪೊರ್ದದಂತೆ, [1] ಆಪ್ತಾಗಮ ಪದಾರ್ಥಂಗಳೊಳ್ ಪೊರ್ದುಗೆಯಿಲ್ಲದಿರೆ [ಬ್ರಹ್ಮಚಾರಿ ತನ್ನೊಳಂ ತೆಂದಂ ॥] ೧೬೯

ವನರುಹಮಂ ಸಱಿಯೊಳ್ ಬೇ
ವಿನ ಗೊಟ್ಟೆಯೊಳಿನಿದನರ್ಕನೊಳ್ ತಂಪಂ ಮೇ ।
ದಿನಿಯೊಳಭವ್ಯರೊಳೂಳ್ಪಂ
ಘನಮೊಗಿರಲಱಿಸಿ ತೊಱಿಲುವಾತನೆ [2] ಗಾಂಪಂ ॥ ೧೭೦

ಕಿಸುವಿಂ ಜಿನರೂಪಂ ಮಾ
ಡಿಸಿ ಪೂಜಿಸೆಯುಂ ಕಿಲುಂಬು ಮಾಣದ ತೆಱದಿಂ ।
ವಸುಧೆಯೊಳಭವ್ಯರುಂ ಭಾ
ವಿಸುವೊಡೆ ಜಿನರೂಪನೆಯ್ದುಯುಂ ಪೊಲ್ಲೆನಿಪರ್ [3] ॥ ೧೭೧

[ಅದಱಿಂ] "ಸಂಸ್ಕಾರಶತೇನಾಪಿ ನ ಗುಂಡಃ ಕುಂಕುಮೋಯತೇ" ಎಂಬ ವಾಕ್ಯಾರ್ಥದ [ಂತೆ ಮಿಥ್ಯಾದೃಷ್ಟಿಗಳುಮಭವ್ಯರುಂ ತಮ್ಮ್ ನೆನಿತು ಸಮಱಿದೊಡಂ ನಡೆದೊಡಂ ಪ್ರಸಿದ್ಧರಾದೊಡಂ ನಿರಂತರ ಸುಖಪ್ರಾಪ್ತರಲ್ಲೆಂಬುದಂ ತನ್ನೊಳ್ ಬಗೆಯುತ್ತುಂ ಉಂಡುರುಳಿ ಭಟ್ಟಾರಕರ ಸವ್ಯೇಕ್ಷ್ವಮೆನಾರಯ್ಯಲೆಂದು ಅವರಲ್ಲಿಗೆ ಬಂದು ಅವನ್ನೋಡೆನೋಡೆ ॥ ೧೭೨

ತಡೆಯದೆ ವಿದ್ಯೆಗಳಿಂದಾ
ಗಡೆ ತಗುಣೆಯನಿಱಿಪೆಯುಂ ನೊಣಂಗಳನೊಪ್ಪಂ ।

---

1 ಪೊನ್ನು ಮಾಣಿಕಮುಂ ಪೊರ್ದರಂತೆ (ಗ)

2 ತಡೆಯದಱಿಸುವಾತನೆ (ಗ) 3 ವಸುಮತಿಯೊಳ್ಪುಜ್ಞರುಂ ಪೆಸರ್ಪಡೆದುಂ ತಮ್ಮ ಸಹಜವುಂ ಬಿಟ್ಟಪರೇ (ಬ. ಕ)

ಬಡೆದಿರ್ದ ಪಸಿಯು ಪುಲ್ಗಳ
ನುಡುಗದೆ ತಾಂ ಪಡೆದು ಪಲವುಮಂ ತತ್ಕ್ಷಣದೊಳ್ ॥] [1] ೧೩೩

ಇಱುಬೆಗಳಂ ಮೆಟ್ಟುತ್ತುಂ
ಪಱಿಯುತ್ತುಂ ಪಸಿಯ ಪುಲ್ಗಳಂ ತಗುಣಿಗಳಂ ।
ಪೆಱತೇನೊರಸುತ್ತುಂ ಮೆ
ಯ್ಯಱಿಯದೆ ಕೊಲುತುಂ ನೊಣಂಗಳಂ ನಿರ್ದಯೆಯಿಂ ॥ ೧೩೪

ಇಪ್ಪುದುಮೆದನುಂಡುರುಳಿಭಟ್ಟಾರಕರ್ಕಂಡು [ತಮ್ಮೊಳಿಂತೆಂದರ್ ॥] ೧೩೫

ಇದು ಪೇಳಿದು ಮೆಯ್ನೀರೆಂ
ಬುದನಱಿಯದೆ ಮೆಯ್ಗೆ ಪೂಸಿಕೊಳ್ವುವು ಮೆಕ್ಕಳ್ ।
ಪದಪಿಂದೆ ಮತ್ತೆ ಮಿಥ್ಯಾ
ತ್ವದ ಪುದುವಿಂ ಬಳರುವುಶುಭಕರ್ಮಂಗಳುಮಂ [2] ॥ ೧೩೬

ಶುಭಕರ್ಮಂಗಳಂದು ನೆಗಱ್ವುದಾವುದು ಜೋದ್ಯಮೆಂದು ಬಗೆದಾತನೊಳಾದ ನಿಷ್ಕ್ರುಣತೆಗೆ [ನಾಡೆಯುಂ] ಕೊಕ್ಕರಿಸಿ [ಬ್ರಹ್ಮಚಾರಿಯಲ್ಲಿಗೆ ಮೆಲ್ಲನೆ ಪೋಗಿ ಮೃದುವಚನಗಳಿಂದಿಂತೆಂದರ್ ॥] [3] ೧೩೭

ದಯೆಯಿಲ್ಲದ ಸದ್ಧರ್ಮಮು
ನಯಮಿಲ್ಲದ ಸತಿಯುಮೊತ್ಮನಿಲ್ಲದ ತನುವುಂ ।
ಜಯಮಿಲ್ಲದ ಕಾಳಗಮುಂ
ಪ್ರಿಯಮಿಲ್ಲದ ಬಿರ್ದುಮೊಪ್ಪಲಾಱಿವು ಜಗದೊಳ್ ॥ ೧೩೮

---

1 ಫಲದಂತೆ ಅಭವ್ಯರುಮೆನಿಸೋದಿದೊಡಂ ದರ್ಶನದೊಳ್ ದೃಢರಲ್ಲರೆಂದು, ಅಲ್ಲಿಂದಮುಂಡುರುಳಿಭಟ್ಟಾರಕರ ಸಮ್ಯಕ್ತ್ವಮನಾರಯ್ಯಲೆಂದುಮವರಿರ್ದ ವೋಪರಿಗೆ ಬಂದು ನಿದ್ರೆಯಂ ಪಡೆದು (ಗ) 2 ಪುದುವಿಂ ಕೊಲೆಯೆ, ಕೆಲಗೆರ್ ಸುಖಮಾಗಿರ್ಪುಂ (ಗ)

3 ಬೇಗಮವರಲ್ಲಿಗೆ ಬಂದಿಂತೆಂದರ್ (ಗ)

[ಜಿನಧರ್ಮವೆಂಬುದಿದು ಜೀ
ವನಿಕಾಯುಷಾತ್ಮಧರ್ಮಮೊತ್ಮಹಿತಮೆಳಕುಲಜೀ ।
ವನಿಧಿಬಡವಾನಲಂ ಸ
ಜ್ಜನವೆಂದ್ಯಂ ಸುವ್ರತೈಕನಿಧಿ ಗುಣನಿಳಯಂ ॥ ೧೭೯

ಜನನಿ ಸಹೋದರರಿಷ್ಟರ್
ವನಿತೆ ಸುತರ್ತಂದೆ ಕೆಳಯರೆಂಬಿನಿಬರುಮೇಂ ।
ಮನವೊಲ್ದು ಮಹಾಜಿನರೂ
ಪನೆ ಪೊರ್ದಿದೆಯೆಂದೊಡಖಿಲಭೂಮಂಡಲದೊಳ್ ॥ ೧೮೦

ಇನ್ನು ನಿನ್ನಂತು ಧನ್ಯರುಂ ಮಾನ್ಯರುವಿಲ್ಲದಱಿಂದೆ ಕೇವಲ ವೀರದಿಂ ಜಿನರೂಪಂ ಪೊರ್ದಿದೆಯಿನ್ನ ಲಸನಾಗದೆ ಗುಣವಂತರಂ ಪೊರ್ದಿ ಪರಮಾಗಮಮೆನೋದುವುದು ॥ ೧೮೧

ಪರಮಾಗಮದಿಂದಲ್ಲದೆ
ನಿರುತಂ ಸದ್ಧರ್ಮಮಱಿಯಬಾರದು ಧರ್ಮಂ ।
ದೊರೆಕೊಂಡೊಡಲ್ಲದಕ್ಷಯ
ಸಿರಿಯುಂ ಕೈಸಾರಲಱಿಯದತಿಶಯದಿಂದಂ ॥ ೧೮೨

ಅದುಕಾರಣದಿಂದಾಗಮಮೆನೋದುವುದು; ಪರಮಾಗಮಮನೋದಿದೊಡಲ್ಲದೆ ದಯಾಮೂಲಮಪ್ಪ ಧರ್ಮಮನಱಿಯಲ್ಬಾರದು; ನೀಂ ನಿರ್ದಯರಂತೆ ಜೀವಂಗಳ್ಗೆ ಬಾಧೆಯಂ ಮಾಡವೇಡೆನೆ ಬ್ರಹ್ಮಚಾರಿಯಿಂ ತೆಂದಂ ॥] [1] ೧೮೩

ತನುವಂ ತಪದೊಳ್ಕುಂದಿಸಿ
ವನಿತೆಯರಂ ತೊಱೆದಿಹತ್ರೆಯೊಳ್ಸುಖಮುಂ ಕೆಂ ।

---

1 ಜೀವದಯವಿಲ್ಲದ ತಪಮುವೊಪ್ಪದು ನೀಕರುಣಿಗಳಂತೆ ಪ್ರಾಣಿವಧೆಯಂ ಮಾಡಲಾಗದು ಜಿನಧರ್ಮವೆಂಬುದು ಜಿನಧರ್ಮಮುಂ ಜಿನಾಗಮಮಂ ನೀಂ ಮನದೊಳ್ಕೊವಿಸಿ ಜಿನಮತವನೆ ತಿಬ್ಬಂ ಪಡಿದು ನಡೆವುದು ದಯೆಯಿಂದಂ (ಗ)

ಮನೆ ಕಿಡಿಸಿ ಮೇಲೆ ಸುಖಮಂ
ಮನದೊಳ್ಪಯಸುವನೆ ಗಾಂಪನದನಾರಱಿವರ್ ॥ ೧೪೪

ಎಂಬುದುಂ [ಉಂಡುರುಳಿಭಟ್ಟಾರಕರಿಂತೆಂದರ್ :—] ॥ ೧೪೫

ನೆಱೆ ನಿನ್ನ ಬೆನ್ನನೇನೆಂ
ದಱಿಯೈ ನೀನಿನಿತಱಿಂದೆ ಬೆನ್ನಿಲ್ಲೆಂಬಾ ।
ಪಱಿವಾಯ್ತುನದಿಂದೇನೆಂ
ದಱಿಯದೆ ಗಱಿಪುವರ ನುಡಿಗಳಂ ಕೈಕೊಳ್ವಾ ॥ ೧೪೬

ನೀಂ ನಿನ್ನ ಕಣ್ಣ ಪಾಪೆಯ
ನುನ್ನತಿಯಿಂದಱಿಯದನಿತಱಿಂ ಪಾಪೆಗಳಿ ।
ಲ್ಲೆನ್ನಲ್ಕಕ್ಕುಮೆ ಗುಣಮಂ [1]
ಭಿನ್ನಗುಣರ್ಗಂಬದನಿತಱಿಂದಿಲ್ಲೆಂಬಾ ॥ ೧೪೭

ನೀಂ ನಿನ್ನೆ ತಾಯು ಬಸಿಱೊಳ್
ನೀನಿರ್ದುದನೀಗಳಱಿಯೆಯೆಂಬನಿತಱೊಳಂ ।
ಮಾನಿತಗುಣ ಪುಸಿಯೆಂಬಾ
ನೀನಱಿಯದೊಡನಿತಱಿಂ ಪರತ್ರೆಯುಮಿಲ್ಲಾ ॥ ೧೪೮

ಎಂಬುದುಂ ಬ್ರಹ್ಮಚಾರಿ [ಯಿಂತೆಂದಂ ॥] ೧೪೯

ಸುರಲೋಕಸುಖಂ ತಪದಿಂ
ದೊರೆಕೊಳ್ಗಂದೋದು ಪೇೞ್ವುದಲ್ಲದೆ ಸತ್ತರ್ ।
ಸುರಗತಿಯಿಂದಂ ಬಂದೊ
ಪ್ಪಿರೆ ಪೇೞ್ದಿರೆ ನೀಮಿದೇಕೆ ಪರಮುಂಟೆಂಬಿರ್ ॥ ೧೫೦

[ಎನೆ ಮುನೀಂದ್ರೋತ್ತಮ] [2] ರಿಂತೆಂದರ್ :— ೧೫೧

[ದೂರದೊಳಪರ್ವಗ್ರಹಣಮು
ನಾರಾನುಂ ಕಂಡರೊಳರೆ ಕೇಳೋದಿದೊಡಂ ।

---

[1] ಪೇೞ್ ಪರಮಂ (ಗ) [2] ಎಂಬುದುಮುಂಡುರುಳಿಭಟ್ಟಾರಕ (ಗ)

ಧಾರಿಣಿಯೊಳಱಿದು ಪೇೞ್ವರ್
ಸಾರಗುಣರ್ಗೆವೊಡೋದಿನೊಳ್ ಪುಸಿಯುಂಟೇ ॥ ೧೯-೦

ಅಮೆವಾಸೆಯಂದು ಲೋಕಂ
ಹಿಮಕರನಂ ಕಾಣದನಿತಱಿಂ ಸಸಿಯಿಲ್ಲಾ ।
ಭ್ರಮೆಯಿಂದಂ ನೀನತಿದು
ಪ್ಪಮದೊಳ್ಪೇಱ್ ಜಿನರನಱಿಯದಿರೆ ಜಿನರಿಲ್ಲಾ ॥ ೧೯-೧

ಸಸಿಯಿರ್ದಪನಮವಾಸೆಯ
ಬಸದಿಂ ಕಾಣಲ್ಕೆ ಬಾರದಂತಿರೆ ಜಿನರುಂ ।
ವಸುಧೆಯೊಳಿರ್ದಪರಿರ್ದುಂ
ಮಿಸುಕುವ ಕಲಿಗಾಲದೆಸಕದಿಂ ತಲೆದೋಱರ್ ॥ ೧೯-೨

[ಎಂಬುದುಮಂತಾದೊಡೆ] [1] ನಿಮ್ಮಾಗಮದೊಳ್ ಪೇೞ್ದ
ಮೊಱುಂಲೋಕಂಗಳನಾವಂ ಪೊತ್ತಿರ್ದಪಂ ಪೇೞುವೆನೆ ॥ ೧೯-೩

ಅಂಬರದೊಳ್ ಶಶಿದಿನಕರ
ಬಿಂಬಮನಾರ್ತಾರ್ದ್ದ ಪೊತ್ತುಕೊಂಡಿರ್ದರ್ ಪೇ ।
ೞುಂಬಿಲ್ಲದೆ ಲೋಕತ್ರಯ
ಬಿಂಬಂ ತನ್ನ ಸ್ವಭಾವದಿಂ ನೆಲಸಿರ್ಕುಂ [2] ॥ ೧೯-೪

[ಮತ್ತಂ ಪರಮಾಗಮಮೆಂ ಪುಸಿಯೆಂಬೆಯಪ್ಪೊಡೀ ಸಿದ್ಧಾಂತದೊಳ್ ಪೇೞಪಟ್ಟ ಗಣಿತಜ್ಯೋಯಿಸಂಗಳ್ಗೇಕೆ ತಪ್ಪವದಱಿಂದೊಂದು ಪುಸಿಯನೆವೇಡೆಂಬುದುಮೆಂತಪ್ಪೊಡೆ ನಿಮ್ಮಾಗಮದೊಳ್ ಪೇೞಪಟ್ಟ ಷಡ್ದ್ರವ್ಯ ಸಪ್ತತತ್ತ್ವ ನವಪದಾರ್ಥ ಪಂಚಾಸ್ತಿಕಾಯಮೆಂಬಿವು ಮೊದಲಾದ ಪಲವುಂತತ್ತ್ವಂಗಳುಂ ದಿಟಮೆ ಪೇೞುವೆಂಬುದುಂ ಉಂಡು ರುಳಿಭಟ್ಟಾರಕರಿಂತೆಂದರ್ ॥] [3] ೧೯-೫

---

1 ಅಂತೆ ತಾಂ (ಗ) 2 ನೆಲಸಿರ್ದವೂ (ಬ. ಕ.)

3 ಎಂಬುದುಮಂತಾದೊಡೆ ನಿಮ್ಮ ದೇವನಪ್ಪ ವರ್ಧಮಾನಸ್ವಾಮಿಯುಂ ಪೇೞ್ದ ಪಂಚಾಸ್ತಿಕಾಯಾದಿ ಪದಾರ್ಥಂಗಳಂ ದಿಟಮೆ ಪೇೞಿಮೆನಿ (ಗ)

ಖರಕರನುಷ್ಣಮಂ ತೊಱೆದು ತಣಿದನಪ್ಪೊಡವಿಂದು ತಣ್ಪನ
ಚ್ಚರಿಯೆನೆ ಬಿಟ್ಟುತೀವ್ರಕರನಪ್ಪೊಡವೊಪ್ಪವೆ ವಾರ್ಧಿಸಂಕುಲಂ
ಪರಿಹರಿಸಿರ್ಪೊಡಂ ಜಲಮನಿಂದ್ರನಗಂ ನೆಲೆಯಿಂದಗಲ್ವೊಡಂ
ಪರಮಜಿನಾಗಮಂ ಮರುಳ ತಪ್ಪುಗುಮೇ ವಸುಧಾತಳಾಗ್ರದೊಳ್ ॥

ಎಂಬುದುಂ ಕವಿಯ ಪಾಲೆಯ, ಮಹಾನದಿಯ ಸಮುದ್ರದ, ಗಜದಂತಪರ್ವತದ ಮೇರುವಿನ, ಪಾಸಿನ ಪೊಕ್ಕಿನ, ಮಾಣಿಕದ ಕಾಂತಿಯ, ನಿಷಧದ ವಿದೇಹದ, ಜಿತ್ತೆಯ [1] ವಜ್ರೆಯ, ಮೊಲೆಯ ಕೆಚ್ಚಲ, ಮರನ ಕಿಚ್ಚಿನ, ಬೆಲ್ಲದ ಸವಿಯ, ಸಿಂಹದ ಕೇಸರದ, ಗಜದ ದಂತದ, ತಳದ ರೇಖೆಯ, ಪುರ್ವಿನ ನೊಸಲ, ಕಣ್ಣ ಪಾಪೆಯ, ಸ್ತನದ ಚೂಚುಕದ, ಬಸಿಱ ಬಾಸೆಯ, ಕೂಟದಂತೆ ಮಹಾಪುರುಷರ ಸಮ್ಯಕ್ತ್ವದೊಳಾದ ಕೂಟಮುಮತಿಶಯಮೆಂದು [ಲಡುರುಳಿಭಟ್ಟಾರಕರ ಸಮ್ಯಕ್ತ್ವಕ್ಕೆ ಮೆಚ್ಚಿ ಮನದೊಳ್ ಪೊಡೆಮಟ್ಟು ಮತ್ತಂ ಹ್ಲಹೆಯಿಂ ಪರೀಕ್ಷಿಸಲೆಂದು ॥ ೧೯೯

ಪಟ್ಟರ್ದರನಱಿಯದವೋಲ್
ಮೆಟ್ಟುವುದುಂ ಕಾಲೊಳಾದ ಕೆಸಱೆಲ್ಲಂ ಮೇ ।
ಲೊಟ್ಟಿದ ತೆಱದಿಂ ಪತ್ತಿದೊ
ಡೊಟ್ಟಜೆಯಿಂದಿರ್ದು ಗಜಱು ಗರ್ಜಿಸದಿನಿಸುಂ ॥ ೨೦೦

ಮೆಲ್ಲನೆ ಕುಳ್ಳಿರ್ದು ತಮ್ಮಂ ಪೆಱರಾರಾನುಂ ತಾಗಿ ಬಿರ್ದರೆಂದು ತಮ್ಮಂ ತಾವೆ ನಿಂದಿಸಿಕೊಂಡು ಪ್ರಾಣಿಹಿತಮಪ್ಪುದಱಿಂದೇನ್ವೊಬ್ತುಂ ಮೆಲ್ಲನೆ ನೋಡಿ ಪೋಗಿವೆನೆ ಮನದೊಳಾದ ದಯೆಗೆ ಮೆಚ್ಚಿ ನುಱುದಿವೆಸಂ ॥ ೨೦೧

ಅನಿರ್ಪಿಡಿಯೂಳ್ದೊರ್ತಿಂ
ನೀನೆನ್ನಂ ಬಗೆಯದುದ್ದ ತಿಕ್ಕೆಯೊಳಿರ್ದೈ ।
ನೀನೇಱಿಂದಲ್ಲಿಂದಱಿ
ಮಾನಂಗಿಡೆ ಜಡಿದು ಬಡಿದು ಕೆಡೆನೂಂಕುವುದುಂ ॥ ೨೦೨

---

[1] ಚಿತ್ತೆಯು (ಗ)

ಮನದೊಳಳ್ಳನಿತಪ್ಪೊಡಂ ಮುನಿಸಿಲ್ಲದೆ ತಾಂ ಪಾಪಭೀರುಗಳ ಪ್ಪುದಱಿಂ ಬ್ರಹ್ಮಚಾರಿಗೆ ತಮ್ಮಿರ್ದೆಡೆಯನಿತ್ತು ಹ್ಲವೆಗೊಂಡು ಮತ್ತೊಂದೆಡೆಗೆ ಪೋಪುದುಂ ಕರಮೊಚ್ಚರ್ಯಂಬಟ್ಟು ಕೃತಕರೋಷಮಂ ಬಿಟ್ಟು ತನ್ನೊಳಾದ ಕೃತಕಮೆಲ್ಲಮಂ ಪೇೞ್ದು ॥ ೬೦೩

ಕರಮೊದರದಿಂ ಭಕ್ತಿಯ
ಭರದಿಂ ಮೆಯ್ಯಱಿಯದಾಮುನೀಂದ್ರನ ಪಾದಾಂ ।
ಬುರುಹಕ್ಕೆ ವಿನತನಾದಂ
ಸರಸಿರುಹಕ್ಕಳಿಗಳಕ್ಕರಿಂದೆಱಗುವವೋಲ್ ॥ ೬೦೪

ಅಂತು][1] ವಂದಿಸಿ ಮುನಿಗುಪ್ತಭಟ್ಟಾರಕಂ ಪ್ರತಿವಂದನೆಯಂ ಪೇೞ್ದ ಮಱುದಿವಸಂ ರೇವತೀಮಹಾದೇವಿಯೊಳಾದಮೂಢದೃಷ್ಟಿತ್ವಮನಾಱಯಲೆಂದು ತತ್ಪುರದ ಮೂಡಣ ದೆಸೆಗೆ ಬಂದು ವಿದ್ಯೋಗಳಂ ನೆನೆದು ಬರಿಸಿ ವಿಗುರ್ವಣೆಯಿಂ ॥ ೬೦೫

ವರಕಮಂಡಲವೊಪ್ಪೆ ಹಸ್ತದೊಳ್ಕೋಜೆವೆತ್ತಿರೆ ಬೆಳ್ಳಿಯು
ತ್ತರಿಗೆ ಜನ್ನಿವರಂ ಬೆಡಂಗಳವಟ್ಟು ಬಾಲದಿನೇಶನಂ
ತಿರೆ ತನುಚ್ಛವಿ ನಾಡೆ ಶೋಭಿಸೆ ಹಂಸೆ ರಂಜಿಸಿ ತೋಱೆ ಭೂ
ಸುರಚತುರ್ವದನಂ ವಿರಾಜಿಸೆ ಧಾತ್ರಿಗಚ್ಚರಿಯಪ್ಪಿನಂ ॥ ೬೦೬

ಬ್ರಹ್ಮನ ರೂಪಂ ಕೈಕೊಂಡು ಮಹಾವಿಭೂತಿಯಿಂದಿರ್ಪುದು ಮೊಪೊಲೊಳಾದಶಿಶ್ರಾವಕರುಂ ಸಂಶಯಶ್ರಾವಕರುಂ[2] ಕೇಳ್ವಯಿಲ್ಲದ ಶ್ರಾವಕರುಂ ನಾಮಶ್ರಾವಕರುಂ ಚರ್ಚಾಶ್ರಾವಕರುಂ ಯಶೋರ್ಥಿಶ್ರಾವಕರುಂ ಕುಮತಿಶ್ರಾವಕರುಂ ಕಾರ್ಯಾರ್ಥಿಶ್ರಾವಕರುಂ [ಪೋಷ (?) ಶ್ರಾವಕರುಂ][3] ಮೊದಲಾಗೆ ಕಲ್ಲೆಯುಂ ಕವಿಲೆಯುಮಾಗೆ ಡೊಂಬರ

---

[1] ಮೆಚ್ಚಿ ತಾನವರಂ (ಗ) [2] ಪೊಳಲೊಳಗಣ ಶ್ರಾವಕರುಂ ಮಿಶ್ರಶ್ರಾವಕರುಂ (ಗ)

[3] ಸಂಘಾತಶ್ರಾವಕರುಂ, ಚರ್ಚಕಶ್ರಾವಕರುಂ, ಕಾರ್ಯಾರ್ಥಿಶ್ರಾವಕರುಂ ಗುಪ್ತಶ್ರಾವಕರುಂ, ಮಂತ್ರಾರ್ಥಿಶ್ರಾವಕರುಂ (ಗ)

ಬೀಡಂ ತೊಱೆ ಪಾಯ್ವಂತೆ ಕಳಕಳರವಂ ಪೆರ್ಚಿ ಯೊರ್ವ ನೊರ್ವಸಂ ವಿಗೆ ಪರಿದೆಯ್ದಿ ಪೂಜಿಸಿ ಪೊಡೆಮಡುತ್ತಿರ್ಪನ್ನೆಗಂ ಪೊಱಲೊಳಾದ ಜನದುಲಿಪ್ರಮಂ ಪಱೆಯು ರವಮುಮಂ [ಮಾಡದೇಱ ನೆಯ ನೆಲೆಯೊಳ್] ರೇವತೀಮಹಾದೇವಿವೆರಸು ನಾಲ್ಕುಸಾಸಿರ ಮಕುಟ ಬದ್ಧರಿಂ ಪರಿವೃತನಾಗಿಯೊಡ್ಡೋಲಗಂಗೊಟ್ಟರ್ದ ವರುಣಮೆಹಾ ರಾಜಂ ಕೇಳ್ದಾಶ್ಚರ್ಯಂಬಟ್ಟುದೇನೆನೆ [ಕೆಲದೊಳಿರ್ದವರ್ ಬಿನ್ನಪಮೆಂದಿಂತೆಂದರ್ ॥] [1] ೞಂಕ

ಸರಸಿಜಾಸನನಿಂದು ನಮ್ಮ ಪೊಱಲ್ಗೆ ದೇವ ಮಹೋತ್ಸವಂ
ಬೆರಸು ತನ್ನ ನಿವಾಸದಿಂ ಪೊಱಮಟ್ಟು ತನ್ನ ಪರಿಗ್ರಹಂ
ಬೆರಸು ದುಂದುಭಿನಾದಮೊಪ್ಪಿರೆ ರಾಗದಿಂ ವೆನವೊಲ್ದು ಭೂ
ಸುರರ ಪೆರ್ಮಡೆ ಕೀರ್ತಿಸುತ್ತಿರೆ ಬಂದು ಮೈಮೆಯೊಳಿರ್ದಪಂ [2] ॥ ೞಂಳ

ಎಂಬುದುಂ [ಅರಸನಾಶ್ಚರ್ಯಂಬಟ್ಟು] ರೇವತೀಮಹಾದೇವಿಯ ವೊಗಮುಂ ನೋಡಿ ॥ ೞಂಗ

ಸರಸಿಜಗರ್ಭಂ ಗಡಮಿಾ
ಪುರಕ್ಕೆ ಬಂದಿರ್ದನೆಂದೊಡಿನ್ನಮ್ಮಿಂದಂ ।
ಪಿರಿಯರ್ಪೆಱರಾರ್ಗೆವೊಡೆ
ಧರೆಯೊಳ್ ನಮ್ಮಂತು ನೋಡ ನೋಂತವರೊಳರೇ ॥ ೞಂಂ

[ನಾವಾಪರಮೇಶ್ವರರಂ ಪೂಜಿಸಿ ಪೊಡೆಮಟ್ಟು ಬರ್ಪಮೇಱಿ ವೆನೆ ರೇವತೀಮಹಾದೇವಿ ನೃಪನ ದೇವತಾಮೂಢಕ್ಕೆ ಕಳಕಳಿಸಿ ನಕ್ಕಿಂತೆಂದಳ್] [3] ೞಂಂ

---

[1] ಬಿನ್ನಪಮೆಂದೊರ್ವನಿಂತೆಂದಂ (ಗ)

[2] ಏಂ ಬ್ರಹ್ಮಲೋಕದಿಂದಂ ತಾಂ ಬ್ರಹ್ಮಂ ಬಂದು ದೇವ ಪುಣ್ಯೋದಯದಿಂ ॥ ದಂ ಬ್ರಹ್ಮವೆರಸು ಜನವೆಲ್ಲಂ ಭ್ರಾಂತಿಂ ನೆರೆದು ನೋಡೆ ಮೂಡಣ ದೆಸೆಯೊಳ್ ॥ ಇರ್ದಪಂ (ಗ)

ಈ ಜಗದ ನರವೆರ್ಮಾಪ್ಪಱ
ಪೂಜೆಗೆ ಮಾಯಾವಿಯೊರ್ವನರ್ತಿಯೊಳಂ ನಿ ।
ವ್ಯಾಜದೊಳ್ ತೊಡರ್ದು [1] ಖೇಚರ
ರಾಜಂ ವೇೞ್ ವ್ಯಂತರಾಧಿಪಂ ವೇೞಿನಿಸಂ ॥ ೧೧೨

ಮಾಡಿಕೊಂಡಿರ್ದಪಂ [ದೇವರಿವನಂ ಬ್ರಹ್ಮನೆಂದು ನಿಶ್ಚಯಿಸಿ ನಂ
ಬಲ್ವೇಡೆಮ್ಮಾಗಮದೊಳಪ್ಪೊಡೆ ಕಾಲವುವಸರ್ಪಿಣಿಯೆಂಬುದೀಕಾಲದ
ೊದಲೊಳಾದಿಬ್ರಹ್ಮನೆಂಬ ಪ್ರಥಮತೀರ್ಥೇಶ್ವರನಾದನಾ ಪರಮಾತ್ಮನು
ಮುಂದೇ ಮೋಕ್ಷಲಕ್ಷ್ಮಿಯ್ಕ] [2] ಯೊಳ್ಕೂಡಿದನೆಂಬುದುಮೆರಸಂ ಪೋಗದಿರ್ದ
ನನ್ನೆಗಮಿತ್ತಲ್ ಕೃತಕಬ್ರಹ್ಮಂ ॥ ೧೧೩

ಅವರಿವರೆನ್ನದೆ ಪಟ್ಟಣ
ದವರೆಲ್ಲಂ ಬಂದರೆನ್ನನರ್ಚಿಸಲತ್ಯು ।
ತ್ಸವದಿಂ ರೇವತಿದೇವಿಯೆ
ವಿವಿಧಗುಣಾಭರಣೆ ಬಂದಳಿಲ್ಲನುನಯದಿಂ ॥ ೧೧೪

[ಎಂದು ವಿಸ್ಮಯಂಬಟ್ಟು] ತದ್ಭಾಷನುಸಸಂಪರಿಸಿ ಮಱುದಿನಂ
ದಕ್ಷಿಣಭಾಗಕ್ಕೆ ಬಂದು ಕೌತುಕಮೆಪ್ಪಿನಂ [3] ॥ ೧೧೫

ಕೊರಲೊಳ್ ಕೌಸ್ತುಭಹಾರವೊಪ್ಪೆ ಗದೆಯುಂ ಕೋದಂಡಮುಂ ಶಂ
ಖಮುಂ
ವರಚಕ್ರಾಯುಧಮುಂ ಚತುರ್ಭುಜದೊಳಂ ಚೆಲ್ವಾಗೆ ನೀಲಾದ್ರಿಯಂ
ತಿರೆ ದೇಹಚ್ಛವಿ ಶೋಭಿಸುತ್ತಿರೆ ವಿಭೂಷವ್ರಾತಮೆತ್ತಂ ಮನೋ
ಹರಮೊಗಲ್ಗರುಡಂ ವಿರಾಜಿಸೆ ಮಹೀಚಕ್ರಂ ಮನಂಗೊಳ್ವನಂ ॥ ೧೧೬

ದೇಸಿಯಿನೊಪ್ಪರೆ ತೋಯರು
ಹಾಸನೆ ವೊದಲಾಗೆ ತನ್ನ ಕಾಂತೆಯರೀರೆ ।

---

[1] ಮನನಚ್ಚಿ (ಬ. ಕ.)

[2] ಅವಸರ್ಪಣಿಕಾಲದೊಳ್ ಆದಿಬ್ರಹ್ಮನಾದಪರಮೇಶ್ವರನುಮುಕ್ತಿ (ಗ)

[3] ಮಱುದಿವಸಂ ತೆಂಕಣದೆಸೆಯೊಳ್ ಪುರಕ್ಕಗುರ್ವಪ್ಪಿನಂ (ಗ)

ಕ್ಷ್ಮಾಸಿರ್ವರ್ಮೊತ್ತೀರೆ
ಕ್ಷ್ಮಾಸಿರ್ವರ್ಮೆಕುಟಬದ್ಧರುಂ ನಿಲೆ ಕೆಲದೊಳ್ ॥ ೨೧೩

ನಾರಾಯಣರೂಪಂ ಕೈಕೊಂಡಿಪ್ಪುದುಂ ಪುರದವರೆಲ್ಲಂ ವಿಷ್ಣು ಪ್ರತ್ಯಕ್ಷಮಾಗಿದರ್ನೆಂದು ಮುನ್ನಿನಂತೆ ಬಂದು [ಪೂಜಿಸಿ ಪೊಡೆವಟ್ಟು ತಿರ್ದರನ್ನೆಗಂ ಅದನರಸನಱಿದು ರೇವತೀಮಹಾದೇವಿಯು][1] ವೊಗಮುಂ ನೋಡಿ ॥ ೨೧೪

ನಿನ್ನೆ ವಿರಿಂಚಂ ಬಂದೊಡ
ದಂ ನಂಬುಗೆಯಿಲ್ಲದೊಲ್ಲನೆಂದೈ ಕೇಳ ।
ತ್ಯುನ್ನತಿಯಿಂ ಧರೆ ಬಣ್ಣಿಸೆ
ಪನ್ನಗಪತಿಶಯನನಪ್ಪ ಸರಸಿಜನಾಭಂ ॥ ೨೧೫

[ಬಂದಿರ್ದನದುವೆಂ ಪುಸಿಮಾಡದೆ ನಮ್ಮ್ಗ ಪರಿಜನಂಬೆರಸು ಪೋಗಿ ವಿಷ್ಣುವನರ್ಚಿಸಿ ಪೊಡೆವಟ್ಟು ಬರ್ದಮೆನೆ ವನಿತಾರತ್ನೆ][2] ಯಿಂತೆಂದಳ್ ॥ ೨೧೬

ಇವನುಂ ಮಾಯಾಪುಂಜಂ
ಭುವನದೊಳಿರ್ಪೂಜೆಗಾಟಿಸುವ ಖಳನೇ ಮೇ ।
ಣವೆನಿಪ ನಿಶ್ಚಯದಿಂ ಕೇ
ಶವನಲ್ಲಂ ದೇವ ಬಗೆವೊಡೆಮ್ಮ್ಗಾಗಮದೊಳ್ ॥ ೨೧೭

ನವಕೇಶವರುರ್ವರೆಯೊಳ
ಗವರುಂ ಮುನ್ನಾಗಿ ಪೋದರೀಗಳಿದೇನಾ ।
ನುವನೊರ್ವನಂತೆ ಮಾಡಿದೊ
ಡವಂಗೆ ನೀಂ ಭಕ್ತಿಯಿಂದಮೆಱಗುವೆನೆಂಬಾ ॥ ೨೧೮

ಎಂಬುದುಮರ [ಸನರ] ಸಿಯು ಮಾತಿಂಗೆ ಚೋದ್ಯಂಬಟ್ಟು ಪೋಗದಿರ್ದನನ್ನೆಗಮಿತ್ತಲ್ ಮಾಯಾವಿಷ್ಣು ರೇವತೀಮಹಾ [ದೇವಿ ಯೊರ್ವಳ

[1] ಪೂಜಿಸುತ್ತಿರೆ ವರುಣಮಹಾರಾಜನಱಿದರಸಿಯು (ಗ)
[2] ಇಂದು ಪುಸಿಯೆಯಾದೊಡಂ ಪೂಜಿಸಿ ಪೊಡೆವಟ್ಟು ಬರ್ದಮೇಳಿವೆನೆ ರೇವತಿಮಹಾದೇವಿ (ಗ)

ಬಾರದುದಕ್ಕೆ ವಿಸ್ಮಯಂಬಟ್ಟು ವಿಗುರ್ವಣೆಯನದೃಶ್ಯಂಮಾಡಿ ಮೆತ್ತಂ ಮಱುದಿವಸಮಾಪುರದ] [1] ಪಡುವಣ ದೆಸೆಗೆ ಬಂದು ಮಹಾದ್ಭುತ ಮಪ್ಪಿನಂ ॥ ೨೦೩

ಶಿರದೊಳ್ ಗಂಗಾಜಲವೊ
ಪ್ಪಿರೆ ಜಡೆಯೊಳ್ಶುಶಶಾಂಕನೆಸೆದಿರೆ ನೊಸಲೊಳ್ ।
ಕರಮುರಿಗಣ್ಣಳವಟ್ಟಿರೆ
ಗಿರಿಸುತೆ ವಾಮಾರ್ಧದೊಳ್ವಿರಾಜಿಸೆ ಮುದದಿಂ ॥ ೨೦೪

ಕರದೊಳ್ ಫಣಿಕಂಕಣಮೆಸೆ
ದಿರೆ ಶೂಲಂ ಡಮರುಗಂ ಕಪಾಲಂ ತಳದೊಳ್ ।
ಕರವೊಪ್ಪೆ ಶಲ್ಯಭೂಷೋ
ತ್ಕರಮಂಗದೊಳಯ್ದೆ ಕೂಭವೆತ್ತಿರೆ ಚೆಲ್ವಿಂ ॥ ೨೦೫

ನಿರುಪಮತಾರಾಚಳದಂ
ತಿರೆ ದೇಹಪ್ರಭೆಯಿಯಿರ್ಪ ಸೃಷ್ಟವಾಹನಮ ।
ಚ ರಿಯಾಗೆ ಮುರುಳ ಪೆರ್ವಡೆ
ಕರಮತ್ಯಾಶ್ಚರ್ಯಮಾಗೆ ಬಂದಿರೆ ಕೆಲದೊಳ್ ॥ ೨೦೬

[ಈಶ್ವರನ ರೂಪಂ ವಿಗುರ್ವಿಸಿ ಬಂದಿರ್ಪುದುಂ ಪುರದವರೆಲ್ಲಮು ಚ ರಿವಟ್ಟು ಕಿವಿಯೊಳ್ಕಳ್ವೀಶ್ವರನಂ ಕಣ್ಣಾರ ಕಂಡೆವೆಮ್ಮಂ ಬಿಟ್ಟು ನೋಂತವರಾರೆಂದು ಬಗೆದ ಬಣ್ಣಿಕೆಯ ಪೂಜೆಗಳಂ ಮಾಡಿ ಪೊಡೆಮಡು ತಿರ್ಪನ್ನೆಗಮಿತ್ತಲೀಶ್ವರಂ ಬಂದನೆಂಬುದಂ ವರುಣಮಹಾರಾಜಂ ಕೇಳ್ದು ತನ್ನಗ್ರಮಹಿಷಿಯು] [2] ನೊಗಮಂ ನೋಡಿ ನಗುತ್ತುಮಿಂ ತೆಂದಂ ॥ ೨೦೭

---

1 ದೇವಿಯ ಬರವಂ ಕಾಣದೆ ರೂಪನುಪಸಂಹರಿಸಿ ಮಱುದಿವಸಂ (ಗ)

2 ಆಂತೀಶ್ವರನ ರೂಪಂ ಕೈಕೊಂಡಿರ್ಪುದುಂ, ಪುರಮೆಲ್ಲಂ ಕಿವಿಯೊಳ್ ಕೇಳ್ವೀಶ್ವರನಂ ಕಣ್ಣಾರೆ ಕಂಡವು ತನ್ನಿಮ್ಮಂ ಕೃತಾರ್ಥರಾಂದು ಪೂಜೆಸಿ ಪೊಡೆವಟ್ಟು ಕೊಂಡಾಡುತ್ತಿರೆ ವರುಣಮಹಾರಾಜನಱಿವರಸಿಯು (ಗ)

ವನಜಮುಖಿ ಕೇಳ ನೀಂ ಮೊ
ನ್ನಿನ ಶೂನ್ಯವೇಚನಮುಂ ನುಡಿಯುದೆ ನೆ ।
ಟ್ಟನೆ ಬರ್ಪುದಿಂದು ಗೌರೀ
ಶನ ಪದಮೆಂ ಕಾಣಲೆಂಬುದುಂ ಸತಿ ನುಡಿವಳ್ ॥ ೨೦೮

ದೇವ ಬಿನ್ನಪವೆಮ್ಮಾಗಮದೊಳ್ ಭೀಮಾವಳ ಮೊದಲಾದೇ ಕಾದಶರುದ್ರರುಂ ಮುನ್ನಾಗಿ ಪೋದರಿವೆಂ ರುದ್ರನಲ್ಲನೆನೆ ಭೂಮಿಶ್ವರಂ ಬೆಱಗಾಗಿ ರೇವತೀಮಹಾದೇವಿ ಪೋಗದಿರ್ದೊಡೆ ತಾನುಂ ಪೋಗದಿರ್ದನನ್ನೆಗಮಿತ್ತಲ್ಮಾಯಾಹರಂ [1] [ರೇವತೀಮಹಾದೇವಿಯ ಬರವಂ ಕಾಣದೆ ವಿಸ್ಮಯಂಬಟ್ಟು] [2] ಮೆತ್ತವಾ ಮಹಾನುಭಾವೆಯ ಸಮ್ಯಕ್ತ್ವಮೆನಾ ರಯಲೆಂದು ಮಱುದಿವಸಂ ಬಡಗಣ ದೆಸೆಗೆ ಬಂದು [ಜಗಕಾಶ್ಚರ್ಯಮೆಪ್ಪಿನಂ] ॥ ೨೦೯

ವಿಳಿರ್ವಶೋಕೆಯ ವೃಕ್ಷದಿಂ ಹರಿಪೀಠದಿಂ ಸುರತೂರ್ಯದಿಂ
ಪೊಳವ ಚಾಮರದೋಳಿಯಿಂ ನೆಱೆ ದಿವ್ಯನಿಸ್ವನದಿಂ ಸುರ
ತಳವೆ ಪುಷ್ಪಸಮೂಹದಿಂದೊದವಿರ್ದ ಮೊಕ್ಕೊಡೆಯಿಂ ಪ್ರಭಾ
ವಳಯದಿಂ ರಮಣೀಯಮಾಗಿರೆ ಧಾತ್ರಿಗಚ್ಚರಿಯಪ್ಪಿನಂ ॥ ೨೧೦

ಶ್ರೀವರ್ಧಮಾನಸ್ವಾಮಿಯ ರೂಪುಗೊಂಡಿರ್ಪುದುಂ ಮುನ್ನಿನಂತೆ ಎಲ್ಲರುಂ ಪರಿದು ॥ ೨೧೧

ಕೆಲರಂಭೋರುಹದಿಂ ಕೆಲರ್ ಸುರಗಿಯಿಂ ಚೆನ್ನೈದಿಲಿಂದಂ ಕೆಲರ್
ಕೆಲರೊಂದುತ್ಪಲದಿಂ ಕೆಲರ್ವಕುಳದಿಂ ತಾಂಬೂಲದಿಂದಂ ಕೆಲರ್
ಕೆಲರೊಪ್ಪಿರ್ದ ಸುವರ್ಣಪುಷ್ಪಚಯದಿಂ ಕರ್ಪೂರದೀಪಂಗಳಿಂ
ಕೆಲರಾನಂದದಿನಿಂತು ಪೂಜಿಸಿ ಜಿನಾಧೀಶಾಂಘ್ರಿಪದ್ಮಂಗಳಂ ॥ ೨೧೨

---

[1] ಈತನೀಶ್ವರನಲ್ಲನೆನೆ ವರುಣಮಹಾರಾಜಂ ಪೋಗಲೊಲ್ಲದಿರ್ದನತ್ತಲ್ ಮಾಯಾಹರಂ (ಗ)

[2] ಪೆರ್ಮೊನೆಯಿಂಗಿವಿಸುವನೆನುರ್ವರೆಯೊಳ್ ಬೀಗಮೆಂಬ ಗಾಂಪನೆ ತೆಱದಿಂ ನಿರ್ವೃದ್ಧಿಗಳಪ್ಪುನ್ನರ್ ಸರ್ವಗುಣಾಬ್ಧಿಯಪ್ಪ ಚಿತ್ತಮುಂ ಕದಲುವರೇ ॥ ೨೦೯ ಎಂದು ಕೆಮ್ಮುಗಿದು ಮತ್ತಂ (ಗ)

[ಅಂತು ಪೂಜಿಸಿ] ಪೊಡೆವೆಡುತಿರ್ದನ್ನೆಗಂ ವರ್ಧಮಾನಸ್ವಾಮಿ ವೆಹಾಮಹಿಮೆಯಿಂ ಬಂದಿರ್ದನೆಂದು ವರುಣಮೆಹಾರಾಜಂ ಕೇಳ್ದು ರೇವತೀಮೆಹಾದೇವಿಗಿಂತೆಂದಂ ॥ ೦೩೨

ನನಜಾತಾನನೆ ಮುನ್ನಿನ
ವನರುಹನಂದನನುಮಂ ವೃಷಾರೂಢನುಮಂ ।
ವನರುಹನಾಭನುಮಂ ನಂ
ಬಿ ನಿತಾಂತಂ ಕೇಳ ಪೋಗಿ ಪೊಡೆಮೆಡದಿರ್ಪೆರ್ ॥ ೦೩೪

ಅದು ನಿನಗುಚಿತಮಪ್ಪುದೀಗಳ್ ನಿನ್ನ ಕುಲಸ್ವಾಮಿ [ಯಪ್ಪ ವರ್ಧಮಾನಸ್ವಾಮಿಬಂದಿರ್ದಪನಾಪರಮೊತ್ಸವನಂ ಪೂಜಿಸಿ ಪೊಡೆಮಟ್ಟು ಬರ್ಪಮರ್ಚನೆವೆರಸು ಪೊಱಮಡುವುದೆನೆ ಸಮ್ಯಕ್ತ್ವರತ್ನಾಕರೆಯಿಂ ತೆಂದಳ್] [1] ॥ ೦೩೫

ಇವನುಂ ಕೈವಲ್ಯಶ್ರೀ
ಧವನಪ್ಪ ಜಿನೇಂದ್ರನಲ್ಲನೆಮ್ಮಾಗಮದೊಳ್ ।
ಭುವನೇಶ್ವರ ಜಿನನಾಥ
ರ್ವಿವರಿಪೊಡಿಪ್ಪತ್ತನಾಲ್ವರಮರಸ್ತುತ್ಯರ್ ॥ ೦೩೬

ಅವರುಂ ನಿಶ್ಶ್ರೇಯಸಶ್ರೀಯೊಳ್ ಕೂಡಿರ್ದ ಪರಮೇಷ್ಠಿಗಳಾಗಿ [ಪ್ರ್ದಱಿಂದೀತಂ ವರ್ಧಮಾನಸ್ವಾಮಿಯೆಂಬ ಮಾತುಂ ಪುಟಿಯಿಸದೆಂಬುದುಂ ರೇವತೀಮಹಾದೇವಿಯ ಮಾತಿನಂದಕ್ಕೆ ವರುಣಮಹಾರಾಜಂ ವಿಸ್ಮಯಂಬಟ್ಟು ಮೆಲ್ಲಗಿಂತೆಂದಂ ॥ ೦೩೭

ಸರಸಿರುಹವದನೆ ನಿನ್ನಿಂ
ಮರುಳ್ಗಳೀಂ ಭಕ್ತಿವರಸು ಪರಿದೆಯ್ದಿ ಜಿನೇ ।

---

1 ಬಂದಿರ್ದಪಂ ಪೋಗಿ ಪೂಜಿಸಿವಂದಿಸಿ ಬರ್ಪವರ್ಚನೆವೆರಸು ನಡೆಯಿಮೆನೆ ರೇವತೀಮಹಾದೇವಿ ನಕ್ಕು (ಗ)

ಶ್ವರನೆಂದೆಱಗುವ ನಮ್ಮಾ
ಪುರದೊಳಗಣಪಾಸತಕ್ಕರೆಲ್ಲರುಮಿಹಾಗಳ್ ॥ ೦೩೪

ಎಂಬುದುಮರಸಿ ಯಿಂತೆಂದಳ್] [1] ದೇವಾ ಪುಣಿಸೆಯು ಪೂವೆಲ್ಲಂ ಕಾಯಪ್ಪುವೇ, ನೆಲನನಗುಜ್ಜಿರೆಲ್ಲಂ ನಿಧಾನಮುಂ ಕಾಣ್ಬರೇ, ಕೈಕಾಲುಳ್ಳರೆಲ್ಲಂ ಚಕ್ರವರ್ತಿಗಳೇ, ಮರನಾದುವೆಲ್ಲಂ ಶ್ರೀಖಂಡಮೇ, ಮೊಲೆಮುಡಿಯುಳ್ಳರೆಲ್ಲಂ ಸ್ತ್ರೀಯರೇ, ಪಗಿನಾದುವೆಲ್ಲಂ ಕರ್ಪೂರಮೇ, ಕೋಡುಳ್ಳವೆಲ್ಲಂ ಕರೆವವೇ, ಗಿರಿಯಾದುವೆಲ್ಲಂ ಪೊನ್ನೇ, ಶಿಲೆಯಾದುವೆಲ್ಲಂ ವಜ್ರವುಮೇ, ಸಮುದ್ರವಾದುವೆಲ್ಲಂ ಪಾಲೇ, ಧಾನ್ಯವಾದುವೆಲ್ಲಂ ಕಳವೆಯೇ, ನುಡಿಯುಳ್ಳವರೆಲ್ಲಂ ಮಂತ್ರಿಗಳೇ, ಬಂಟರಾದವರೆಲ್ಲಂ ನಾಯಕರೇ, ಕಾದುವರೆಲ್ಲಂ ವೀರರೇ, ಪಡೆವರೆಲ್ಲಂ ಸೂಳೆಯರೇ, ಪಾಡುವರೆಲ್ಲಂ ಗಾಂಧರ್ವರೇ, ವೊಱೆವುವೆಲ್ಲಂ ತುಂಬಿಯೇ [ನೀರಾದುವೆಲ್ಲಂ ರುಚಿಯೇ] ಪುಷ್ಪವಾದುವೆಲ್ಲಂ ಕಮ್ಮಿದುವೇ, ಸಜ್ಜನರಾದರೆಲ್ಲಂ ಪತಿವ್ರತೆಯರೇ, ಶ್ರಾವಕರಾದವರೆಲ್ಲಂ ಸಮ್ಯಗ್ದೃಷ್ಟಿಗಳೇ, ಮೂಢತ್ರಯಮಿಲ್ಲದರ್ ಜೈನರೇ, ಎನೆ ಮೂಢತ್ರಯುಂಗಳಾವುವಂ ಪೇೞುಮೆನೆಯರಸಿಯಿಂತೆಂದಳ್ :-- ೦೩೫

ಅನಲನನರ್ಕನಂ ಶಶಿಯನಿಂದ್ರನನಂತಕನಂ ಮರಂಗಳಂ
ವನಧಿಯನುರ್ವಿಯಂ ಮಡಕೆಯಂ ತೊಱೆಯಂ ಕೆಱೆಯಂ ಗೃಹಂಗಳಂ
ಜನನಿಯನಯ್ಯನಂ ಪಶುವನೆತ್ತುಗಳಂ ಕುಲದೈವಮೆಂದು ಮೆ
ಲ್ಲನೆ ಪೊಡೆಮಟ್ಟು ಪೂಜಿಸುವ ಗಾಂಪನೆ ದೈವವಿಮೂಢನುರ್ವಿಯೊಳ್ ॥
ಧುರದೊಳ್ ಕಮ್ಮರಿಯೊಳ್ ಮದೋರ್ವಿರುಹದೊಳ್ ಸಪ್ತಾರ್ಚಿಯೊಳ್ ನೀರ್ಗಳೊಳ್
ಖರದಿಂ ದೇಹಮನಿಕ್ಕಿಯುಜ್ಜುಗದೆ ಮಿಥ್ಯಾತೀರ್ಥಮುಂ ಮಿಂದುಮಾ
ದರದಿಂ ದುಷ್ಪರ ಪೇೞ್ಕೆಯೊಳ್ ನೆಗೞ್ದುಮತ್ಯಾನಂದದಿಂದೆಯ್ದುವೆಂ
ಸುರಲೋಕಂಗಳನೆಂಬ ಗಾವಿಲನವಂ ತಾಂ ಲೋಕಮೂಢಂ ನೃಪಾ ॥

---

[1] ಪ್ಪರನೆ ವಹೀವಲ್ಲಭಂ ನಕ್ಕು ಪುರದೊಳಗಣ ಶ್ರಾವಕರುಂ ಋಷಿಯರುಂ ಜಿನೇಶ್ವರನೆಂದು ಪೋಗಿ ಪೊಡೆಮಡುತ್ತಿರ್ದಪರವರ್ನಿನ್ನಿಂ ಮರುಳ್ಗಳ ಪೇಳೆನೆ ರೇವತಿಮಹಾದೇವಿ (ಗ) [3] ತನುಗುಣಲಕ್ಷಿದೊಳಿಣಿಸ ಹೊತ್ತುಗಳಂ (ಬ, ಕ)

[ಧರ್ಮೋಪದೇಶಮಿಲ್ಲದೆ
ಕರ್ಮವೆನುಪಶಮಿಪ ಚರಿತಮಿಲ್ಲದೆ ದುಃಖ ।
ಕ್ಕಾರ್ಮವೆನಿಸಿರ್ದ ಲೌಕಿಕ
ಧರ್ಮದೊಳಸಗುವನೆ ಸಮಯಮೂಢಂ ನೃಪತೀ] ॥ ೭೪-೦

ವರವಿಪ್ರಾವುದೆಂದು ದೈವವೆ
ನೆರೆವವನುಂ ದೈವವಿಗಳೀವುದು ಪುಸಿಯೇ ।
ಪರವರ್ಥವೆಂದು ನಂಬುವ
ನರನುಂ ಭೂಪಾಲ ಸಮಯಮೂಢನೆನಿಕ್ಕುಂ ॥ ೭೪೩

[ಜಗದೊಳ್ ಮಹೇಂದ್ರಜಾಲಾ
ದಿಗಳಂ ತೋರ್ಪವರನಿವರೆ ದೇವರ್ದಿಂಡರ್ ।
ಬಗೆವೊಡೆ ಕೇಳನ್ನು ತೆ ನಂ
ಬುಗೆಯಿಂದೆಱಗುವನೆ ಸಮಯಮೂಢಂ ನೃಪತೀ ॥ ೭೪೪

ಪುರುಷನಂ ವಧುವಾಗೆ ತದ್ವಧುವಂ ಮನೋಹರನಪ್ಪಿನಂ
ಪುರುಷನಾಗೆ ವಿನೋದದಿಂ ಪಗಲಂ ದಿಟಕ್ಕಿರುಳಾಗೆ ತಾ
ನಿರುಳನುಂ ಪಗಲಾಗೆ ಮಾಡುವ ದೇವರುಳ್ಳೊಡೆ ಧಾರಿಣೀ
ಶ್ವರನ ಮುಂಗಡೆ ತೋಱಲಾಗದೆ [1] ತೋರ್ಪೆನೆಂಬವನುರ್ವಿ
ಯೊಳ್ [2] ॥ ೭೪೫

ಎಂದು ಧರ್ಮಶ್ರವಣಂಗೆಯುಸ್ತುತಿರ್ಪನಮತ್ತಲ್ ಕೃತಕಜಿನಂ
ರೇವತೀಮಹಾದೇವಿಯ ಬರವಂ ಕಾಣದೆ ತನ್ನೊಳಿಂತೆಂದಂ ॥ ೭೪೬

ಸ್ಥಿರಮೆಪ್ಪೀಗುಣವಿಪ್ರಸರ
ಸಿರುಹಾಕ್ಷಿಯ ಮೆಯ್ಯೊಳಿಲ್ಲದಿರೆ ಮುನಿಗುಪ್ತೀ ।

---

1 ಶ್ವರನುತೋರಗೆಲಾಗದೆ (ಬ. ಕ.) 2 ಪುರುಷರನೆಯ್ದೆ ಕಾಮಿನಿಯರಾಗಿ ಸುಕಾಮಿನಿಯಕ್ಕರ್ಳಂ । ಪುರುಷರ ಮಾಳ್ಪೊಡಂ ಪಗಲನಿರುಳಮಾಗಿರೆ ರಾತ್ರಿಯುಂ ಸವಿ । ಸ್ತರಮುಸುಗೆ ಮಾಳ್ಪವರರ್ದಿದಮಾಡಿದರಿಂಗೆ ಪುಣ್ಯದಿಂ ಸಿರಿಬರೆ । ಪಾಪದಿಂಬಡತನಂ ಬರೆ ಮಾಡುವರಾರ್ ಧರಿತ್ರಿಯೊಳ್ ॥ ಇದನಱಿದು (ಗ)

ಶ್ವರರೀಪರಕೆಯನೇಂ ವಿ
ಸ್ತರದಿಂ ಪೇೞ್ದಿಟ್ಟುವರ್ಮಹೋತ್ಸವದಿಂದಂ ॥ ೭೪೭

ಎಂದು ಕೃತಕಜಿನರೂಪನುಡುಗಿಸಿ ನೆರೆದ ನೆರವಿ ನೊಡೆನೋಡೆ ಪೂರ್ವಸ್ವರೂಪವುಂ ಕೈಕೊಂಡು ರೇವತೀಮಹಾದೇವಿಯಲ್ಲಿಗೆ ವೆಂದು ನಿಂದಿರ್ದು ಪಲತೆಱದಿಂ ಪೊಗೞ್ದು ಪೆಱಗಾದ ಸಂಬಂಧವೆಲ್ಲಮಂ ತಿಳಿಯು ವೇೞ್ದು ಮುನಿಗುಪ್ತಭಟ್ಟಾರಕರ ಪರಕೆಯಂ ಪೇೞ್ದು ತತ್ಪುರದೊಳಾದ ಜಿನಾಲಯಂಗಳಂ ಬಂದಿಸಿ ದಕ್ಷಿಣಮಧುರೆಗೆ ಬ್ರಹ್ಮಚಾರಿ][1] ಪೋದ ನಿತ್ತಲ್ ॥ ೭೪೮

ಶ್ರಾವೆಕರೆಲ್ಲರುಮಿರ್ದಂ
ತಾವರೆಮುನಿ ನೋಡ ಕೂರ್ತು ಪರಕೆಯನಿಂತೀ ।
ದೇವಿಗೆ ಪೇೞ್ದಿಟ್ಟದನೆನ
ಲೀವೆನಿತಾರತ್ನೆಯಂತು ನೋಂತವರೊಳರೇ ॥ ೭೪೯

[ಪರಮಗುಣನಿಳಯೆ ಜಿನಮತ
ಸರೋಜಿನೀರಾಜಹಂಸೆ ಶೀಲಾಂಬುಧಿ ಸ ।
ಚ್ಚರಿತವಿಭೂಷಣೆ ಭವ್ಯೋ
ತ್ಕರಪೂಜಿತೆ ನಿಷ್ಕಲಂಕನಿರ್ಮಳ ಜಗದೊಳ್ ॥ ೭೫೦

ಎಂದು ಪುರಜನವುಂ ಪರಿಜನವುಂ ಜಗಜ್ಜನವುಂ ಪೊಗೞ್ದು ತ್ತುಂ ಪೊಡೆವೆಡುತ್ತುಮಿರೆ ವರುಣಮಹಾರಾಜಂ ಸದ್ಧರ್ಮವುಂ ಲೇಸಾಗಿ ನಂಬಿ ಮೂಢತ್ರಯದಿಂ ಪಿಂಗಿ ತನ್ನ ಪಿರಿಯ ಮಗನಪ್ಪ ಶಿವಕೀರ್ತಿಗೆ ಪಟ್ಟವುಂ ಕಟ್ಟಿ ರಾಜ್ಯವುಂ ಕೊಟ್ಟರಿಂಜಯಭಟ್ಟಾರಕರ ಪಾದಮೂಲದೊಳ್ ದೀಕ್ಷೆಯುಂ ಕೈಕೊಂಡಂ. ರೇವತೀಮಹಾದೇವಿ ದಾನಪೂಜಾ ಶೀಲೋಪವಾಸಮೆಂಬಿವಱೊಳಿರ್ತಿ ತನಗುಂಟಪ್ಪುದಱಿಂ ಪಲವುಕಾಲಂ॥

---

[1] ಎಂದು ತತ್ವಮಂ ಪೇೞುತ್ತಿರ್ಪನ್ನೆಗಂ ಕೃತಕಜಿನಂ ರೇವತೀಮಹಾದೇವಿಯಲ್ಲಿಗೆ ನೆರೆದ ನೆರವಿ ನೋಡೆ ವಿಗುರ್ವಣೆಯನುಡುಗಿ ಮುನ್ನಿನ ರೂಪಂ ಕೈಕೊಂಡುಱುಂದು ತತ್ಪ್ರಪಂಚಮೆಲ್ಲಮಂ ಪೇೞ್ದು ನಾನಾವಿಧದಿಂ ಪೊಗೞ್ದು ಮುನಿಗುಪ್ತಭಟ್ಟಾರಕರ ಪರಕೆಯಂ ಪೇೞ್ದು (ಗ)

ಜಿನಪೂಜೆಗಳಂ ಕಣ್ಣಿಂ
ವಿನೆಗಂ ಮುನಿಗನ್ನದಾನಮಂ ಮನಮಾರಲ್ ।
ವನಜಾಸ್ಯೆ ಮಾಡಿ ಧರೆ ಜೀ
ಯೆನೆ ಕಡೆಯೊಳ್ತೊಱೆದು ಸಕಲಸಾಮ್ರಾಜ್ಯಮುಮೆಂ॥][1] ೨೫೦

ಮುನಿಗುಪ್ತಭಟ್ಟಾರಕರೆ ಗುರುಗಳಾಗೆ ಸುವ್ರತಗಂತಿಯರಲ್ಲಿ ದೀಕ್ಷೆಯಂ ಕೈಕೊಂಡು ಏಕಾದಶಾಂಗಧಾರಿಯಾಗಿ ಪಲವುಂಕಾಲಂ ತಪದೊಳ್ ಚರಿಯಿಸಿ ದಕ್ಷಿಣಮಧುರೆಯ ಜಿನಭವನಮೆಲ್ಲಮಂ ಬಂದಿಸು ವೆನೆಂಬರ್ತಿಯಿಂದುತ್ತರಮಧುರೆಯಿಂ ಪೊಱಮಟ್ಟು ಅಜ್ಜಿಕಾಸಮುದಾಯಂಬೆರಸು ಬರುತ್ತುಂ ಕರಹಾಟನಗರದೊಳ್ ॥ ೨೫೧

ತೊಟ್ಟನೆ ಕೊಳಲಾಲಸ್ಯಂ
ಪುಟ್ಟ ಮಹಾರುಜೆ ಶರೀರವೇದನೆಗಿನಿಸಂ ।
ಕೆಟ್ಟೆಂ ಪೋಗೆನ್ನದೆ ಬಾ
ಯ್ವಿಟ್ಟರದೆ ಶರೀರವೋಹವಿಲ್ಲದೆ ಮನದೊಳ್ ॥ ೨೫೨

[ಶುಭಭಾವನೆವೆರಸು] ಸಂನ್ಯಸನಂ [ಗೆಯ್ದು ಸಮಾಧಿ] ವಿಧಿಯಿಂ ಮುಡಿಪಿ ಪದಿನಾಱನೆಯ [ಅಚ್ಯುತ] ಕಲ್ಪದೊಳ್ ಇಪ್ಪತ್ತೆರಡು ಸಾಗರೋಪಮಕಾಲ[ಮಾಯುಷ್ಯ]ಕೊಡೆಯಂ ಮಹರ್ದ್ಧಿಕದೇವನಾಗಿ ಪುಟ್ಟಿದಳ್ ॥ ೨೫೩

ರೇವತಿಗಂತಿಯರುತ್ತಮ
ಭಾವನೆಯಿಂ ಮುಡಿಪಿದೆಡೆ ಮಹೀವಳಯಂ ಸ ।

---

1 ಎಂದರಸಂ ಪೊಗೞ್ದ ಅದುವೆ ನಿರ್ವೇಗವಾಗಿ ತ್ರಿಮೂಢದಿಂ ಪಿಂಗಿ ತನ್ನ ಪಿರಿಯ ಮಗನಪ್ಪ ಶಿವಕೀರ್ತಿಗೆ ರಾಜ್ಯಮಂ ಕೊಟ್ಟು ಅರಿಂಜಯಭಟ್ಟಾರಕರಲ್ಲಿ ಸುಸಿರ್ವರ್ ಮುಕುಟಬದ್ಧರ್ ಪೆರಸು ದೀಕ್ಷೆಯಂ ಕೈಕೊಂಡಂ. ರೇವತಿಮಹಾದೇವಿಯುಂ (ಗ)

2 ಪಲವುಂ ಕಾಲಂ ತಪಂಗೆಯ್ದು ದಕ್ಷಿಣಮಧುರೆಯ ಜೈತ್ಯಾಲಯಂಗಳಂ ವಂದಿಸು ಪೋಗುತ್ತುಂ ಕರಹಾಟವಿಷಯದೊಳ್ (ಗ)

ದ್ಭಾವದ ನೆಲೆ ಸಲೆ ಬಣ್ಣಿಸೆ [1]
ರೇವತಿಸತ್ತೀರ್ಥವೆಂಬುದಾದುದು ಪೆಸರಿಂ ॥ ೨೫೬

ಅದುಕಾರಣದಿಂ ಸೌಖ್ಯಾ
ಭ್ಯುದಯಕ್ಕಾಟಿಸುವೆನೆಂಬ ಮನುಜಂ [2] ಮನದೊಳ್ ।
ಬೆದೆಬೆದೆಬೇಯದೆ ತಾಂ ಬಿಡು
ವುದು ದುಷ್ಕೃತಬಂಧಮಪ್ಪ [3] ಮೂಢತ್ರಯಮಂ ॥ ೨೫೭

ಎಂದು [ಪೇಳ್ವುದುಂ ರೇವತೀಮಹಾದೇವಿಯು] [4] ಕಥೆಯಂ
ಲೇಸಾಗಿ ಕೇಳ್ದು ॥ ೨೫೮

ನೃಪವೆಂದ್ಯಂ ವಾಗ್ವಧೂವೆಲ್ಲಭನಮಳಯಶಂ ನಿರ್ಮಳಂ ಕಿಲ್ಬಿಷೈಕ
ದ್ವಿಪಪಂಚಾಸ್ಯಂ ಮೆನೋಜ್ಞೋತ್ಪಲರವಿ ಸುಜನಾಂಭೋಧಿಶೀತಾಂಶು
ವಾರಾ
ಶಿಪರೀತಖ್ಯಾತನುದ್ಯದ್ಗುಣನಿಧಿಯೊಸೆದಂಖ್ಯಾತತ್ರೈವಿದ್ಯಚಕ್ರಾ [5]
ಧಿಪಪಾದಾಂಭೋಜಭೃಂಗಂ ಸುಕವಿಜನವನೇಃಪದ್ಮಿನೀರಾಜಹಂಸಂ ॥

ಇದು ನಿಖಿಲದಿವಿಜಪರಿವೃಢಮುಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧು
ಕರನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತದಿಗಂಬರದಾಸನೂತ್ನಕವಿತಾವಿಳಾಸ
ಶ್ರೀವಿನ್ನಯಸೇನದೇವವಿರಚಿತಮಪ್ಪ
ಧರ್ಮಾಮೃತದೊಳ್
ದರ್ಶನಚತುರ್ಥಾಂಗವ್ಯಾವರ್ಣನಂ
ಪಂಚಮಾಶ್ವಾಸಂ.

---

1 ಮುಡಿಬೀದಿಮಹಿತಳದೊಳ್ ಸದ್ಭಾವದೆ ಸಲೆ ನಿಲೆ ಬಣ್ಣಿಸಿ (ಗ)
2 ಆಟಿಸುತ್ತುಮಿರ್ಪ ಭವ್ಯರ್ (ಗ) 3 ಕಿಲ್ಬಿಷಬಂಧವೆನಿಪ (ಗ)
4 ಅವಮೂಢರೈಸಿಪ್ಪತ್ವದ (ಗ) 5 ಗುಣಗಣನಿಧಿತ್ರೈವಿದ್ಯ (ಕ. ಬ.)

ಶ್ರೀವನಿತೆಗೆ ನಿರ್ವಾಣ
ಶ್ರೀವನಿತೆಗೆ ತೊಡವಮೊಳೆದೃಷ್ಟಿತ್ವಂ ಸ ।
ದ್ಭಾವದೊಳಂದಧಿಕಗುಣಂ
ಭಾವಿಸಿದಂ ಸುಕವಿನಿಕರಪಿಕಮಾಕಂದಂ ॥ ೧

[ಅಂತಮೂಢದೃಷ್ಟಿತ್ವದೊಳಾದ ಕಥೆಯಂ ತಿಳಿದು ಮತ್ತಂ ॥೦

ಭೂವಿಖ್ಯಾತಂ ಗಣಧರ
ದೇವರ ಪಾದದ್ವಯಕ್ಕೆ ಪೊಡೆವಟ್ಟು ವಚ ।
ಶ್ರೀವನಿತೆಗೆ ನಿರ್ವಾಣ
ಶ್ರೀವನಿತೆಗೆ ತೊಡವಿದೆನಿಸುವುಪಗೂಹನಮಂ ॥ ೫

[ಎನಗಱಿವಂತಾಗೆ ನಿಮ್ಮಡಿ ಕಾರುಣ್ಯದಿಂ ಬೆಸಸುವುದೆಂಬುದುಂ ನಿರ್ವಾಣಲಕ್ಷ್ಮ್ಮಿಯನೊಲಿಸುವುದಕ್ಕಿದು ಮೋಹನಶರಮೆನಿಸುವುಪಗೂಹನದ ಕಥೆಯನಿಂತೆಂದು ಪೇಳ್ದರ್] [1] ॥ ೪

ಚಕ್ರವರ್ತಿಯಂತೆ ಮಧುಕರಂಗಳಂತೆ [2] ವಶ್ಯಮಂತ್ರದಂತೆ ಪರ್ಯಾಪ್ತಿಸಮೇತನಂತೆ ಋತುವಿನಂತೆ ಉತ್ಸರ್ಪಿಣಿಯಂತೆ ಸಿದ್ಧಾಂತದಂತೆ [3] ಸಂಜ್ಞಿಜೀವದಂತೆ ಪೊತ್ತಗೆಯಂತೆ ಆವಶ್ಯಕದಂತೆ [4] ದರ್ಶನ

---

[1] ಅಂತಮೂಢದೃಷ್ಟಿತ್ವದ ಕಥೆಯಂ ಕೇಳ್ದು ಮುಂದಣುಪಗೂಹನದ ಕಥೆಯುಂ ಬೆಸಸುವೆಂಬುದುಮಿಂತೆಂದು ಪೇಳ್ದರ್ (ಗ)

[2] ಪಟ್ಟದರಂತೆ ಷಟ್ಪದದಂತೆ (ಗ) [3] ಕಾರಕದಂತೆ (ಗ)

[4] ನಯದಂತೆ (ಗ)

ವುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢ ದೃಷ್ಟಿತ್ವಮುಂ ಉಪಗೂಹನಮುಮೆಂಬಾಱುಱೊಳಂ ಸಂಪೂರ್ಣನಾಗಿ ಶೋಭಿಸುವುದು ॥ ೫

ಪೆಱಪೆಱವೆಸದಾಳಾಪ
ಕ್ಕೆಱಗದೆ ಸಮ್ಯಕ್ತ್ವಮೆಂಬ ಖಡ್ಗಕ್ಕಿದು ಸಂ ।
ದೊಱೆಯೆನಿಪುಪಗೂಹನದೊಳ್
ಮೆಱೆವುದು ಸದ್ಗುಣಮೆನಱಿವಿನೊಳ್ ನೆರೆದ ನರರ್ ॥ ೬

ಇನ್ನದಱ ಮಹಿಮಾಸ್ಪದಮೆಂತಪ್ಪುದೆಂದೊಡೆ ॥ ೭

[ಕರಮೊಪ್ಪುವುದತಿಶಯದಿಂ
ಧರಿತ್ರಿಯೊಳ್ ಗೊಲ್ಲವಿಷಯಮೆಂಬುದು ವಿಷಯಂ ।
ಕರಮೊಪ್ಪುವುದಾವಿಷಯದೊ
ಳುರುಮುದದಿಂ ಕಾಮಲಿಪ್ತಿಯೆಂಬುದು ನಗರಂ ॥ ೮

ಅದನಾಳ್ವಂ ಮನೋಹರನೆಂಬರಸನಾತನ ರಾಜಶ್ರೇಷ್ಠಿ ॥ ೯

ಆಪುರದೊಳಗಖಿಲಗುಣಗ
ಣೋಪೇತಂ ವೈಶ್ಯವಂಶಗಗನಾರ್ಕಂ ಭೂ [1] ।
ವ್ಯಾಪಿತಯಶಂ ಮನೋಹರ
ರೂಪಂ ಜಿನಭಕ್ತನೆಂಬನನುಪಮೆನಿರ್ಪಂ ॥ ೧೦

ಆತನ ಸಿರಿಯಂ ಪೇೞ್ವೊಡೆ
ಭೂತಳದೊಳ್ ರೂಢಿವೆತ್ತ ಧನದಂಗಂ ಪೆ ।
ರ್ಮಾತಿನ ದೇವೇಂದ್ರಂಗಂ
ಮಾತೇಂ ಬಗೆವೆಂದು ನಾಲ್ವೆರಲ್ ತಾಂ ಪಿರಿಯುಂ ॥ ೧೧

ಸುರರಾಜನೆ ದೊರೆ ಭೋಗ
ಕ್ಕೊಕ್ಕರೆಯಲ್ಲಂ ಜೈನಭಕ್ತಿಯೊಳ್ ಶ್ರೇಯಾಂಸಂ ।

[1] ವೈಶಾನ್ವಯಾಂಬರಾರ್ಕಂಭುವನ (ಬ. ಕ.)

ದೊರೆ ಜಗದೊಳ್ ಪಿಱರಾರುಂ
ದೊರೆಯಲ್ಲರ್ದಾನದೆಡೆಗೆ ವೈಕ್ಯೋತ್ತಮನೊಳ್ ॥ ೧೮

ಎನಿಸಿ ನೆಗಟ್ಟೆವೆತ್ತ ಜಿನೇಂದ್ರಭಕ್ತಸೆಟ್ಟಿ ಸುಖಸಂಕಥಾವಿನೋದದಿಂದಿರ್ಪುದುಂ ಅತ್ತ ಮಗಧವಿಷಯದ ಪಾಟಲಿಪುತ್ರಮೆಂಬ ಪೊಱಲ ನಾಳ್ವಂ ವೀರಧ್ವಜನೆಂಬರಸನಾತನರಸಿ ಸುಸೀಮೆಯೆಂಬಳಾಯಿರ್ವರ್ಗಂ ಪ್ರಿಯನಂದನಂ ವೀರಕುಮೊರನೆಂಬನಾತಂ ದುರ್ಜನಪ್ರಿಯನುಂ ವಿಟಜನಾನಂದನುಂ ತಸ್ಕರವಿನೋದನುಂ ದುಷ್ಟಪ್ರಸಂಗನುಮೊಗಿ ಪಲವುದಿವಸಂ ಸಮಸ್ತದುರಾಚಾರಜನಪರಿವೃತನಾಗಿ ಪೊಱವೊಱಲೊಳ್ ಕುಳ್ಳಿರ್ದು ಕಳವಿನೊಳಾದ ಮಾತುಗಳಂ ನುಡಿಯಿಸಿ ಕೇಳುತ್ತುಮಿರ್ಪುದುಂ ಅಲ್ಲಿ ಚೋರಪ್ರಧಾನನೆಂಬನೊರ್ವನಿಂತೆಂದಂ] [1] ॥ ೧೩

ಚಪಳನಿವೆಂ ಕಡುಗಱಪಂ
ವಿಪರೀತಮನೆನ್ನ ಮುಂದೆ ನುಡಿದಪನೆಂದು ।
ರ್ವಿಪ ಮುನಿಯವೆಡ ಕೇಳ್ಬ
ನ್ನಪಮಂ ನೀನೊಂದೆಚಿತ್ತದಿಂದಂ ನೃಪತೀ ॥ ೧೪

ಎಂದು ವೀರಕುಮೊರಂಗಭಿಮುಖನಾಗಿ ನಿಂದು, ದೇವಾ ನಾಂ ಪುಗದ ದೇಶಮುಂ ಕಳದ ವೆಸ್ತುಗಳುಮಿಲ್ಲ; ಗೊಲ್ಲವಿಷಯದೊಳ್ ಕಾಮಲಿಪ್ತಿಯೆಂಬ ಪುರದೊಳೂರ್ವ ಜಿನೇಂದ್ರಭಕ್ತನೆಂಬ ಪರದನ ದೇಹಾರದ ದೇವರ ಮುಕ್ಕೊಡೆಯೊಳಗೊಂದು ವೈಡೂರ್ಯಮಾಣಿಕಂ ಕೀಲಿಸಿದುರ್ದಾರತ್ನಮುಮೆನಘರ್ಘ್ಯರತ್ನಮೆನಿಪ್ಪುದದಕ್ಕೆ ಮೂಱುಂಲೋಕಂ ಬೆಲೆಯಲ್ಲೀ ಲೋಕದೊಳಪೂರ್ವಮಂ ಕಂಡೆನೆಂಬುದುಂ [ವೀರಕುಮೊರನಾ

---

1 ಗೊಲ್ಲವಿಷಯದೊಳ್ ತಾಮ್ರಲಿಪ್ತಿಯೆಂಬುದು ಪುರಮದನಾಳ್ವಂ ಮನೋಹರನೆಂಬರಸನಾತನ ರಾಜಶ್ರೇಷ್ಠಿ ಜಿನೇಂದ್ರಭಕ್ತಸೆಟ್ಟಿಯುಂ ಸುಖಸಂಕಥಾವಿನೋದದಿಂದಿರ್ಪುದುಮತ್ತಲ್ ಮಗಧವಿಷಯದ ಪಾಟಲಿಪುರವೆಂಬ ಪುರಮದನಾಳ್ವಂ ವೀರಕುಮೊರನೆಂಬರಸನೊಂದುದಿನಸಂ ತಸ್ಕರರ ಗೋಷ್ಠಿಯೊಳಿರ್ದು ಕಳ್ಳರಂ ಮಾತಾಡಿಸಿ ಕೇಳುತ್ತುಮಿರ್ಪುದುಮಲ್ಲಿ ಕಳ್ಳರಿಗೆ ಕಳ್ಳನೆಂಬನಿರ್ದು ಬಿನ್ನಪಮೆಂದಿಂತೆಂದಂ (ಗ)

ತನ ಮಾತಿಂಗೆ ವಿಸ್ಮಯಂಬಟ್ಟು ತನಗಾರತ್ನದ ಮೇಲೆ ಚಿತ್ತಮಾಗೆ ಚೋರಪ್ರಧಾನಂಗಿಂತೆಂದಂ ॥ ೧೫

ಸಂದ ಕಳ್ಳರೊಳಲ್ಲ ನೀನೆ ಮಹಾವಿವೇಕಿಯೆ ಲೋಕದೊಳ್
ಕುಂದದುರ್ವರೆಯೊಲ್ಲಮಂ ಕಡುಧೂರ್ತರಂ ಕವರ್ವಂದದಿಂ
ಸಂದ ವಸ್ತುಗಳಲ್ಲಮಂ ನೆಱೆ ನೀನೆ ಸಾಧಿಸಿಕೊಂಡೆಯಿ
ನ್ನೆಂದೊಡಾವರರತ್ನಮೀಂ ಗಡ ಸಾಧಿಸಲ್ಕರಿದಾದುದೇ ॥ ೧೬

ಎಂಬುದುಂ ಚೋರಪ್ರಧಾನನಿಂತೆಂದಂ ॥ ೧೭

ಕನ್ನವನಿಕ್ಕುವೊಡವನೀ
ಶೋನ್ನತ ನೆಲಗಟ್ಟು ವಜ್ರಮಯವೇಱುವರಾರ್ ।
ತನ್ನಿಂದಂ ಪುಗುವೊಡೆ
ಪನ್ನೆರಡೆಡೆ ಕಾಪು ಪುಗುವವಂಗೆಂಟೆರ್ದೆಯೇ ॥ ೧೮

ಮತ್ತಮೊಪುರದೊಳಗೆ ಕೆಲವುದಿವಸಮಿರ್ದು ಕಾಪಿನವರಂ ವಂಚಿಸಿ ಪುಗುವೆನೆಂಬೊಡಮಣಮುಮಾಱದು ; ಜಿನೇಂದ್ರದತ್ತಸೆಟ್ಟಿಜಿನಾರ್ಚನವಿನೋದದೊಳಂ ಜಿನಸಮಯಮಹೋತ್ಸವದೊಳಂ ಜಿನಕಥಾಳಾಪದೊಳಂ ನೇಸಪರ್ಪಟ್ಟು ನೇಸಮೂಡುವಿನಮೆಲ್ಲಿಯೆ ನೆಲಸಿರ್ಪನೆನೆ ವೀರಕುಮಾರಂ ಬೆಱಗಾಗಿ ಸೂಚಿಯು ಪಿನ್ನೆಯೊಳಂ ಮಣಿಯು ದ್ವಾರದೊಳಂ ನುಸುಱ್ದುರ್ವರಿರ್ದೆಡೆಯೊಳೂರ್ವನಂ ಕಳ್ವಂತಪ್ಪ ಕಳ್ಳರ ಕಳ್ಳನಿವಂ ಮೊದಲಾಗೆ ಪುಗಲರಿದೆಂದಪನಿನ್ನಾ ಮಹಾರತ್ನಮಂ ಕಳ್ವಂತಪ್ಪ ಗಂಡರಾರೆಂದು ಚಿಂತಿಸಿ ನೆರೆದಿರ್ದ ಕಳ್ಳರುಮಂ ನೋಡಿ ಕುಮಾರನಿಂತೆಂದಂ ॥ ೧೯

ಆವಾವುಪಾಯದಿಂದೆನ
ಗಾವಸ್ತುವನದಟನಾಗಿ ಪೋಗುತ್ತುಂ ತಂ [1] ।

ಪೋಗಿಬೇಗಂತಂ (ಖ. ಕ.)

ದೀವವನುಳ್ಕೊಡೆ ಕುಡುವೆಂ
ಭಾವಿಸದೆನ್ನರ್ಥರಾಜ್ಯಮುಂ ನಿಶ್ಚಯದಿಂ ॥ ೦೦

ಎಂಬುದುಮೊಮ್ಮೊತಿಂಗೆ ಸೂರ್ಪನೆಂಬ ಕಳ್ಳನೆರ್ದು ಕುಮಾರಂಗ ಭಿಮುಖನಾಗಿ ದೇವ ನಾನಾವೆಸ್ತುವಂ ತಂದಪೆನೆಂಬುದುಂ ಕುಮಾರಂ ಪೆರ್ಚಿ ಕರವೊಳ್ಕೆಂದು ಕರ್ಪೂರವೀಳೆಯಮುಂ ಕುಡುವುದುಂ ಪಿರಿದುಂ ಪೂಣ್ದ ವೀರಕುಮಾರನಂ ಬೀಳ್ಕೊಂಡು ತನ್ನ ಮನೆಗೆ ಬಂದು ರತ್ನಮಂ ಕಳ್ವ ಉಪಾಯಮುಂ ತನ್ನ ಮನದೊಳಗೆ ಭಾವಿಸಿನೋಡಿ॥ ೦೧

ಆದೊರೆಯ ಮಹಾಕಲಿಯುಂ
ಭೇದಿಸಲಣಮಾಱನೆಂದೊಡಾರತ್ನಮನಾರ್ ।
ಭೇದಿಸುವರೆಂದು ತಸ್ಕರ [1]
ರಾದಿಯು ಕಳ್ಳಂಗೆ ಚಿಂತೆ ಪುಟ್ಟ್ಪದುದಾಗಳ್ ॥ ೦೨

ಪಱಿಯಾಳ್ತನದಱುಗಂಡಿಂ
ದಱಿಯದೆ ಮೆಯ್ವೆರ್ಚಿ ಪೋಗಿ ಪರದನ ಮನೆಯಂ ।
ತಱುವೆಲಿತನದಿಂ ಪೊಕ್ಕೊಡೆ
ಕುಱಿ ಸಾವೆಂತಲ್ಲಿ ಸಾವು ನಿಶ್ಚಯಮಕ್ಕುಂ ॥ ೦೩

ಭಾವಕನಿಧಿ ಜಿನಭಕ್ತಂ
ಶ್ರಾವಕನಱಿವೆಂದು ಕೊಲ್ವನಲ್ಲಂ ಪೆಱರಿ ।
ನ್ನಾವಿಭುವನಱಿಯಲಾಱದೆ [2]
ತಾವದಯಂ ಕೊಲ್ವರಲ್ಲಿ ಸಂದೆಯಮುಂಟೇ ॥ ೦೪

ತಾಂ ಕನ್ನಮಿಕ್ಕಿ ಧನಮೆಂ
ಭ್ರಾಂತಿಂದಂ ಕಳ್ವನೆಂಬನುಂ ಕಳ್ಳನೆ ಕೇಳ್ ।

---

1 ವರಾರೊಮಿಕ್ಕವರ್ (ಬ. ಕ.)

2 ಶ್ರಾವಕನಱಿದಂದು ಕೊಲುವನಲ್ಲದೆ ಪೆಱಿದಿಂನಾವಿಭುವನಱಿಯಲೀಯದೆ (ಬ. ಕ.)

ಎಂತುಂ ನೋವುಂ ಸಾವುಂ
ಚಿಂತೆಯುಮೆಣಮೋಗದಂತು ಕಳ್ವನೆ ಕಳ್ಳಂ ॥ ೫೫

ಅದುಕಾರಣದಿಂದಱಚಟ್ಟಂ ತಲೆ ಬುಗುಂಟುವ್ರೋದುದೆಂಬ ನಾಱ್ನುಡಿಯುಂತಱಬಂಟಿಂ ಪೊೞಿಗಿ ಪೊಕ್ಕೆನಪ್ಪೊಡೆ ಕಾಪಿನವರ ಕಯ್ಯ ಸಾವು ನಿಶ್ಚಯಂ ಸಮೆನಿಸುಗುಮುತ್ಸುಕತನದಿಂ ಮೂರ್ಖನಾಗಿ ಪುಗುವುದು ಬುದ್ಧಿಯಲ್ಲದು, ಕೆಲವು ವರುಷಂ ತಡೆದೊಡಂ ಕಡೆಗಲ್ಲಿಗುಪಾಯಮೆಂ ಲೇಸಾಗಿ ಬಲ್ಲೆನಾತನೆರಡಿಲ್ಲದ ಶ್ರಾವಕಂ ಜಿನಧರ್ಮದೊಳ್ ಸ್ಥಿರಚಿತ್ತಂ ಋಷಿಯರ ಮೇಲೆ ಮಹಾಪ್ರೀತನದಱಿಂದೆ ಮಾಯಾ ಋಷಿಯ ರೂಪಂ ಕೈಕೊಂಡುಗ್ರೋಗ್ರತಪದೊಳನ್ನಂ ಲೋಕದೊಳ್ ಪ್ರಸಿದ್ಧನಂ ಮಾಡಿಕೊಂಡು ಕಾಮಲಿಪ್ತನಗರಮನೆಯಿಂ ಜನೇಂದ್ರಭಕ್ತ ಸೆಟ್ಟಿಯ ಮನೆಯಂ ಪೊಕ್ಕು ಮೆಲ್ಲನೆ ಮೇಲ್ಪಡಿಸಿ ರತ್ನಮನೆನ್ನ ಕಯ್ಗೊಮಾಡುವೆನೆಂಬ ಕಜ್ಜಮನೆತ್ತಿಕೊಂಡು ತನ್ನ ಪೆಂಡಿರುಮಂ ಪುತ್ರರುಮಂ ಬಂಧುಗಳಮಂ ಕರೆದಿಂತೆಂದಂ ॥ ೫೬

ಪಿರಿದಪ್ಪ ಬೆಸನನೆನಗಿಂ
ದರಸಂ ಕಡುಗೂರ್ಮೆವೆತ್ತು ಬೆಸಸಿದನಾನುಂ ।
ಭರದಿಂದಂತಾಬೆಸನಂ
ಕರಮಲ್ಲದೆ ಪೂಣ್ದು ವೀರದಿಂ ಕೈಕೊಂಡೆಂ ॥ ೫೭

ಅದುವುಂ ಸಾಮಾನ್ಯದ ಬೆಸನಲ್ಲದಾಬೆಸನೆನ್ನ ಪುಣ್ಯೋದಯದಿಂದೊರೆಕೊಂಡುದಕ್ಕುಮಪ್ಪೊಡೆ ವೀರಕುಮಾರನರ್ಧರಾಜ್ಯಮಂ ಮತ್ತೆನಿಸದೆ ಕೈಸಾರ್ಗುಮೆದುಕಾರಣದಿಂ ಉಪಾಯದೊಳಮಾಬೆಸನಂ ಸಾಧಿಸಿಕೊಂಡಲ್ಲದೆ ಬಾರೆನೆನ್ನ ದೆಸಗಂಜವೇಡ; ನೀವೆಲ್ಲರೆನ್ನ ಬರ್ಪಿನೆಗಂ ಬುದ್ಧಿವಂತರಾಗಿರ್ಪುದೆಂದಪ್ಪೈಸಿ ತತ್ಪರದಿಂ ಪೊಱಮಟ್ಟು ಪೂರ್ವದೇಶಮಂ ಪೊಕ್ಕೊಂದೂರೊಳ್ ಬಂದು ಬಸದಿಯಂ ಸಾರ್ದು ಋಷಿಯರ ಮಾರ್ಗಮಂ ಕಲಿಯಲೆಂದು ಕೃತಕವೈರಾಗ್ಯದಿಂ ಸಂಸಾರಕ್ಕೆ ಪೇಸುವರಂತೆಲ್ಲಾ ಋಷಿಯರ್ಗಂ ಚಾಟುಕಾಱಿಕವಿನಯದಿಂ ಪೊಡೆವೆಡುವುದುಂ ಮುನಿವರರಿಂತೆಂದರ್ ॥ ೫೮

ಎಲ್ಲಿಂದಂ ಬಂದಿರ್ಪುದ
ನ್ನೆಲ್ಲಿರ್ದಿರ್ನಿಮ್ಮ ದೇಶಮೊವುದು ನೀಮಿ ।
ನ್ನೆಲ್ಲಿಗೆ ಪೋದಪಿರೆನೆ ತಳು
ವಿಲ್ಲದೆ ಮುನಿಸಂಕುಲಕ್ಕೆ ತಸ್ಕರನೆಂದಂ ॥ ೨೯

ಪರದೇಸಿಯೆ ನಮ್ಮವರೆ
ಲ್ಲರುಮೆಂ ಮನಮೊರೆ ತೊಱೆದು ತಪಮಂ ಕೈಕೊಂ।
ಡರವೆರಿಸದೆ ನೆಗಱ್ದ ಘಮಂ
ಹರಿಯಿಪೆನೆಂಬರ್ತಿಯಿಂದಮಿಲ್ಲಿಗೆ ವಂದೆಂ ॥ ೩೦

ಒಡವೆಯು ನಂಟರ ಮಕ್ಕಳ
ಕಡುಗೂರ್ಪಂಗನೆಯು ತಾಯು ತಂದೆಯು ಕೂರ್ತಾಂ ।
ನಡಪಿರ್ದ ಬಂಟನೆಂದೋ
ಗಡಿಸದೆ ಮೋಹಾಗ್ನಿಯಿಂದಮೆಱುವುದು ಜೀವಂ ॥ ೩೧

ಸಂಸಾರಂ ಶಾಶ್ವತಮೆ
ಲ್ಲಂ ಸೆಡೆಯದೆ ತಪದೊಳಾದ ಕಡುಚೆಲ್ವಿಂದಂ ।
ತಾಂ ಸಂದಘಮಂ ಹರಿಸಿ ದಿ
ಟಂ ಸುರಗತಿವೆಡೆದು ಭೋಗಿಪ್ರದು ತತ್ಫಲಮಂ ॥ ೩೨

ಎಂದು ಮೇಲ್ಪಡೆ ನುಡಿದು ಕೆಲವುದಿವಸಮೆಲ್ಲಿರ್ದು ನಡೆನುಡಿವೆ ಉಣ್ಬ ಬಂದಿಸುವ ಪಟ್ಟಿರ್ಪ ಕುಳ್ಳಿರ್ಪ ನಿಂದಿರ್ಪ ಕ್ರಿಯೆಗಳಂ ಮಾಬ್ಪ ಭಂಗಿಗಳಲ್ಲಮಂ ಲೇಸಾಗಿ ಅಭ್ಯಾಸಂಮಾಡಿ ಲೋಚಿಂಗಾಱದೆ ತಪಮಂ ಕೊಳಲಂಜೆ ಮೆಲ್ಲನಲ್ಲಿಂ ಜಗುಱ್ದುಪೋಗಿ ತಲೆಯಂ ಬೋಳಿಸಿಕೊಂಡು ಬ್ರಹ್ಮಚಾರಿವೇಷಮಂ ಕೈಕೊಂಡು ॥ ೩೩

ವೀರಧ್ವಜಾತ್ಮಜಾತನ
ಧಾರಿಣಿಯರೆ ಸಾರ್ಗುಮೆಂಬ ಕಡುಮೋಹದಿನಾ ।

ವೀರಭಟಂ ವೈಸುಖಮಂ
ಪಾರದೆ ತಾಳ್ದರ್ದನಧಿಕಮೆನಿಸುವ ಮೆಲವಮಂ ॥] [1] ೫೪

ಆರತ್ನದಿನವನೀಶ
ಶ್ರೀರಮೆ ಕೈಸಾರ್ಗುಮೆಂದು ತಾಳ್ದದನಾಗಳ್ ।
ಚೋರಂ ಮಾಯಾತಪಮಂ
ಧಾರಿಣಿಯೊಳ್ ಮೋಹಮುಳ್ಳರೇನಂ ಮಾಡರ್ ॥ ೫೫

[ಧರೆ ಬೆಱಗಾಗಿರೆ ಪಲರುಂ
ಕರಮೆಱಗಿಯೆ ಜಡರ್ಗೆ ಚೋದ್ಯಮಪ್ಪಂತಿರೆ ನಿ ।
ಷ್ಠುರಮಪ್ಪ ಬಾಹ್ಯತಪಮಂ
ಧರಿಯಿಸಿದಂ ಸೂರ್ಪನಂದು ಮಾಯಾತಪಮಂ ॥ ೫೬

ಒಡಲೆಲ್ಲಂ ಬಡತನದಿಂ
ಗಡ ಗಿಡಿಗಿಡಿಜಂತ್ರಮಾಗೆ ಕಣ್ಣೆಲ್ಲಂ ತ ।
ಮ್ಮೆಡೆಗಾಣಬಾರದೆನಿಸಿರೆ
ಕಡುಗಲಿ ನಿತ್ಯೋಪವಾಸದೊಳ್ನಿಱೆ ನೆಗಳ್ದಂ ॥] ೫೭

ಮತ್ತಮೇಕರಾತ್ರದ್ವಿರಾತ್ರನುಪವಾಸತ್ರಯೋತ್ಪವಾಸಮೊ
ಸೋಪವಾಸಂಗಳಂ ಕರ್ಬುನಮೆಂ ತಿಂದರಂತೆ ತನು ಕುಂದಲುಂ, ಬಂದ
ಗುಳೂಳ್ಮಾಡಿದಂತೊಡಲಸಿದಾಗಲುಂ, ಬೇತಾಳನ ಬಸಿಱಿಂತೆ ಬಸಿ
ಱೆ ಬೆನ್ನಂ ಪತ್ತಲುಂ, ಪಱವಾವಿಯ ನೀರಂತೆ ಕಣ್ಣೊಳಗಡಂಗಲುಂ,
ಪಾಲ್ಮನೆಯ ಗಳುವಿನಂತೆ ಬರಿಯ ಎಲ್ವುಗಳ್ ಪೊಱಮೆಡಲುಂ, [ಅಲ್ಪ

---

1 ಆ ಮಾತಿಂಗೆ ಸೂರ್ಪ್ಪನೆಂಬ ಕಳ್ಳವಾಕ್ಯವಾರಂಗಭಿಮುಖನಾಗಿ ನಿಂದು ದೇವ ಬೇಗನಾವಸ್ತುವಂ ತಂದಪೆನೆಂಬುದುಂ ಕುಮಾರಂ ಪೆಚ್ಚಿ ತಂದಡೆ ನಿನಗರ್ಧ ರಾಜ್ಯಮುಂ ಕೊಡುವೆನೆಂದು ವೀಳಯವುಮಂ ಕೊಡುವುದುಂ ಪರಿದುಂ ಪೋಗಿ ವೀರಕುಮಾರನಂ ಬೀಳ್ಕೊಂಡು ಪೂರ್ವದೇಶಕ್ಕೆ ಪೋಗಿ ಋಷಿಯರ ನಡೆನುಡಿಯನ ಭ್ಯಾಸಂ ಮಾಡಿ ಲೋಚಿಂಗಾಱದೆ ಮಾಯಾಬ್ರಹ್ಮಚಾರಿಯಾಗಿ (ಗ)

ಶ್ರೀವೆಂತನಂತೆ ನಡೆ ತಡವಾಗಲುಂ,] ಕಾಗೆದೊಂಡೆಹಣ್ಣಿನಂತೊಳಗ
ಶುಭಮುಂ [1] ಪೊಜಿಗೆ ರಮಣೀಯಮುಮೆಪ್ಪಂತು ನೆಗಱ್ದು ॥ ೩೯

[ಒಂದೆಡೆ ಮನ್ನಣೆ ಪಿರಿದುಂ
ಟೆಂದಿರ್ದೊಡೆ ಕೀರ್ತಿ ಪರಿಯಲಱಿಯದು ನಯಮೊ ।
ದಂದಲ್ಲದೆ ಪುಗಬಾರದು
ಸಂದೊಪ್ಪವೆ ಕಾಮಲಿಪ್ತಿಪುರಮೆಂ ಬೇಗಂ ॥ ೩೯

ಉಪವಾಸಕ್ಕಲಸಿ ಕರಂ
ತಪಮಂ ಬಿಸುಡಲ್ಕೆ ಬಾರದವನೀತಳದೊಳ್ ।
ವಿಪರೀತಮೊಗೆ ಪೆಱಗಣ
ತಪದಿಂದಲ್ಲದೆ ಪೊಗಪ್ತ್ಯಯಾಗದು ಬೇಗಂ ॥ ೪೦

ಆಡಂಬರದಿಂದಲ್ಲದೆ
ನಾಡವರಲ್ಕರ್ತು ಪೂಜಿಸಲ್ನೆಱೆ ಕೈಕೊಂ ।
ಡಾಡರದಱಿಂದವಿಳಯೊಳ್
ಮೊಡುವೆನುಗ್ರೋಗ್ರಮಾಯತಪಮಂ ॥ ೪೧

ಎಂದೊಂದೆಡೆಯೊಳ್ನಿಲ್ಲದೆ ಗ್ರಾಮನಗರಖೇಡಖರ್ವಟಮಡಂಬ
ಪಟ್ಟಣದ್ರೋಣಾಮುಖಂಗಳಂಬವೆಱೊಳ್ಗಲ್ಲಂ ವಿಹಾರಿಸುತ್ತುಂ ಕೆಲ
ವಾನುಂ ದಿವಸಂ ಪೋದಿಂಬಱಿಕ್ಕೆ ಗೊಲ್ಲವಿಷಯಮೆಂ ಪೊಕ್ಕು ಕಾಮ
ಲಿಪ್ತಿಯಂ ಪುಗದೆ ತತ್ಪುರಕ್ಕೆ ರಡುಮೂಱುಗಾವುದದಂತರದೊಳಿರ್ದು
ಸುತ್ತಣ ಗ್ರಾಮಂಗಳೊಳ್ ತನ್ನಂ ಪ್ರಸಿದ್ಧಿಗೆ ಸಲಲ್ವೇಡಿ ಚರಿಯಿಸುತ್ತು
ಮಿರ್ದು ಕೆಲವಾನುಂದಿವಸಂ ಪೋದಿಂಬಱಿಕ್ಕೆ ॥] ೪೨

ಕರಮುಗ್ರಮಪ್ಪ ತಪದೊಳ್
ಚರಿಯಿಸುವವರಾರಿಳಾಗ್ರದೊಳ್ತನುವೆಂ ನಿ ।

---

1 ಕಾಗೆವೂರಿಯು ಪಣ್ಣಿನಂತೊಳಗಕುದ್ಧನುಂ (ಗ)

ಪ್ಪರಮಪ್ಪುಪವಾಸಂಗಳಿ
ನಿರದಿಂತೋವೋವೊ [1] ತವಿಸುವ್ರನ್ನ ತನಾವಂ ॥ ೪೩

[ಎನ್ನೊಡಲಲ್ಲದಿದೆಂಬವೊ
ಲನ್ನಮ ನೆಜೆ ತೊಱೆದು ತನ್ನ ಸುಖಮಂ ಬಿಟ್ಟ ।
ರ್ಪನ್ನ ರ್ಪೆ ಅರಾರೀಗುಣಿ
ಯನ್ನ ರ್ಧಾರಿಣಿಯೊಳಱಿದು ಭಾವಿಸಿ ನೋಡಲ್ ॥] ೪೪

ಎಂದು ನಾಡೆಲ್ಲವೊಂದೆ ಕೊರಲೊಳ್ ಪೊಗಚೆ [ರೂಢಿಯಾಗಿ ಕಾಮು ಲಿಪ್ತಿನಗರಮಂ ಪುಗುವುದುಂ ಜಿನೇಂದ್ರಭಕ್ತಸೆಟ್ಟಿ ಮೊದಲಾಗೆ ತಪ್ಪು ರಶ್ರಾವಕರೆಲ್ಲಂ ಕೇಳ್ದು ಮಹಾಸಂತೋಷದಿಂ ದೂರದೊಳ್ ಕೇಳ್ವ ಮಹಾಪುರುಷರಂ ಕಣ್ಣಾರೆ ಕಾಣಲ್ಪಡೆದೆವಿನ್ನೆವ್ಮಂ ಬಿಟ್ಟು ಕೃತಾರ್ಥ ರಾರೆಂದು ಒಂದು ಪೊಡೆಮಟ್ಟು ಪೂಜಿಸೆ] [2] ಜಿನೇಂದ್ರಭಕ್ತಸೆಟ್ಟಿ ಬೇಗ ಮೊಬ್ರಹ್ಮಚಾರಿಯ ತಾಱಿದೊಡಲುಮಂ ಬಳಗಡಂಗಿದ ಕಣ್ಣುಮಂ ಮಾಯಾಸಂಯಮಮುಮಂ ಮನದೊಳ್ ಮೆಚ್ಚಿ ॥ ೪೫

ಪಿರಿದುಂ ವೈರಾಗ್ಯಂ ತನ
ಗುರುಮುದದಿಂದುಂಟದಲ್ಲದಂದೀತಪಮಂ ।
ಧರಿಯಿಸಿ ತನುವಂ ತಪದಿಂ
ಕರಗಿಸುವೀನಿಸ್ಪೃಹತ್ವಮಂ ತಾಳ್ದುವನೇ ॥ ೪೬

ಎಂದಾತನೊಳಾದ ಮಾಯಾವೇಷಮನಱಿಯದೆ ನಿಶ್ಚಯ ವೈರಾಗ್ಯಮುಳ್ಳನೆಂದು ನಂಬಿ ಭಕ್ತಿಭರತೆಯಿಂದೊಡಗೊಂಡು ಬಂದು ತನ್ನ [ದೇಹಾರಮಂ ಪುಗಿಸುವ್ರದುಂ ಮಾಯಾವಿ ಜಿನೇಂದ್ರಭಕ್ತನೊಳಾದ ಭಕ್ತಿಯುಮಂ ಪಿರಿದಪ್ಪಾದರಮುಮಂ ಕಂಡು ತನ್ನ ಬಯಕೆ ತೀರ್ದುದೆಂದು ಪೆರ್ಚಿ ಗುಡಿಗಟ್ಟಿಯಾಗಿ ನಟ್ಟಂತೆ ವೈಶ್ಯೋತ್ತಮನ ಭಕ್ತಿಯಂ ಸ್ಥಿರಮಾಪ್ಪೆನೆಂಬ ಬಗೆಯಿಂದಿಂತೆಂದಂ ॥ ೪೭

---

[1] ನಿಂದಿಂತೊಪ್ಪುವತದಿಂ (ಗ) [2] ಕಾಮುಲಿಪ್ತಿಗೆ ಬರ್ದುದಂ (ಗ)

ಪೊನ್ನ ತೋರಣದಿಂ ದುಕೂಲದ ಸೂಸಕಂಗಳಿನೊಪ್ಪುವೆ
ತ್ತುನ್ನತಧ್ವಜದೋಳಿಯಿಂ ಬಿಡುಮುತ್ತಿನಿಂ ಕಡುಶೋಭೆವೆ
ತ್ತುನ್ನಯಂಬಡೆದಿರ್ದು ಚೆಲ್ವಿನ ರಂಗವಲ್ಲಿಯನೆಲ್ಲಿಯುಂ
ರನ್ನದಿಂ ಪಿರಿದುನ್ನತಿಕ್ಕೆಯಿನಿರ್ದುದೀ ಜಿನಮಂದಿರಂ ॥ ೪೪

ಮನವೊಲ್ದ ಪರತ್ರೆಯುವೇ
ಲನವರತಂ ಮೋಹಮುಳ್ಳವಂಗೀಭವದೊಳ್ ।
ಕನಸಿನೊಳಂ ಪೊನ್ ತಾಂ ನೆ
ಟ್ಟನೆ ಕಂಡೊಡದಕ್ಕೆ ಬೆಚ್ಚಿ ನಡುಗಲೆವೇಟ್ಟುಕ್ಕಂ ॥ ೪೫

ನಿನ್ನ ದೇಹಾಕಾರಮೆಪ್ಪೊಡೆ ರತ್ನಮಯಮೆಂದಱಿಯೊಳಮಿಗಿರ್ದುದು ಚಿತಮಿಲ್ಲದು ನೀನೆವ್ಮನಿರಿಸುವೆನೆಂಬೆಯಪ್ಪೊಡೆ ಬೇರೊಂದು ಶೂನ್ಯಾಲಯದೊಳಿರಿಸುವುದೆಂಬುದುಂ ಜಿನೇಂದ್ರಭಕ್ತಸೆಟ್ಟಿ ಪಿರಿದುಂ ಪ್ರಾರ್ಥಿಸಿ ಪೊಡೆವೆಟ್ಟೊಡಂಬಡಿಸಿದೊಡಲ್ಲಿರ್ದು ॥ ೪೦

ಗಾವಿಲತನದಿಂ ಪೊಕ್ಕೊಡೆ
ಸಾವೆಪ್ಪುದು ಪುಸಿಯೆ ಬರ್ದುಕಿದೆಂ ಪುಣ್ಯದಿನಿಂ ।
ತೀ ವಿಭುವಿನ ಮನೆಯಂ ಪುಗ
ಲಾವೆಮರರುಮೊಱೆಂದೊಡುಳಿದವರಳವೇ ॥ ೪೧

ಎಂದು ಜಿನೇಂದ್ರಭಕ್ತಸೆಟ್ಟಿಯ ಮನೆಯ ಬಾಗಿಲ ಕಾಪಂ ಕಂಡು ಬೆಚ್ಚಿ ಬೆಗಡುಗೊಂಡು ॥ ೪೨

ಏಳಿಸಿ ಪುಗಬಾರದು ವೈ
ಶ್ಯಾಲಯಮಂ ಕೃತಕದಿಂದೆ ಮಾಯಾತಪಮಂ ।
ವೇಳಿಸಿ ಪೊಕ್ಕಂ ಮಿಕ್ಕಿಂ
ತಾಳಾಪಂಗೆಯ್ದು ಪುಗುವೆ ಗಂಡರುಮೊಳರೇ ॥ ೪೩

ಇಂತಪ್ಪ ಬಲ್ಗಾಪುಂಟಪ್ಪುದಱಿಂದಂತಪ್ಪ ಕಳ್ಳರಕಳ್ಳಂ ಮೊದಲಾಗೆ ಪ್ರಗಲ್ಭನಿದನಿಲ್ಲ, ಬುದ್ಧಿಬಲದಿಂ ಭೋಂಕೆನೆ ನಂಟರ ಮನೆಯುಂ

ಪುಗುವಂತು ಪೊಕ್ಕೆನೆನ್ನಂತು ಸಂದ ಕಳ್ಳರಿಲ್ಲಿಂದು ಮುಯ್ಪುಂ ನೋಡಿ ಮತ್ತಂ ತನ್ನೊಳಿಂತೆಂದಾಳೋಚಿಸಿದನುತ್ಸುಕತನದಿಂ ಪೆಟ್ಟುವೆಚ್ಚಿ ಕಡುವೆಸನಂ ಮಾಬ್ಪಿ ಸೊಸೆ ಮಾವನ ಮಂಡೆಯಂ ಬೋಳಿಸಿದಳಿಂ ಬಂತೆ ರಾಗದಿಂದವಿಸಾ ರತ್ನ ಮನೀಗಳ್ ನೆಗಪಿದೆನಪ್ಪೊಡೆ ಪೋಗಲ್ಬಾರದು ಉಪವಾಸಂಗಳಿಂದೆಲ್ಲರುಮಂ ನಂಬಿಸಿ ತಪದೊಳ್ಳಿದನೆನಿಸಿ ಮೆಲ್ಲನೆ ನಿಂದು ಕಾರ್ಯಮಂ ನೆಗಪ್ವೆನನ್ನೆಗಂ ॥] [1] ೫೪

ಸಂದ ಮಹಾನಿಸ್ಪೃಹನಿವೆ
ನೆಂದೆನ್ನಂ ಕಾಪಿನಾಳ್ಗಳುಂ ಶ್ರಾವಕರುಂ ।
ಕುಂದದೆ ವೈಶ್ಯಾನ್ವಯವಿಕ
ಚೇಂದೀವರಕಶಿ ಜನೇಂದ್ರಭಕ್ತನುಮಾದಂ ॥ ೫೫

ಎನ್ನ ದೆಸೆಗೆ ಭಯಸ್ಥರಾಗದಂತು ಮೇಲ್ಪಡಿಸುವೆನೆಂಬ ಬಗೆಯಿಂದುಪವಾಸದಮೇಲುಪವಾಸಮುಮನಲಾಭದಮೇಲಲಾಭಮುಮಂ ಮಾಡುತ್ತುಂ ತಾನಾಗಮದೂರನಪ್ಪುದಱಿಂದೆನ್ನ ರೂಢಿಗರಾನುಮೆಱವರ್ಬಂದು ಏನಾನುಮಂ ಬೆಸಗೊಂಡೊಡಾಂ ಪೇೞದಿರ್ದೊಡೆ ಮಹಾಕಷ್ಟಮಕ್ಕುಂ ಸೆಟ್ಟಿಯ ಭಕ್ತಿಯುಂ ಕಿಡುಗುಮೆಂಬ ನೆವದಿಂ ಮೋನಿಯಾಗಿ ॥ ೫೬

ತರುಣಿಯರೊಳ್ ಮಾತಾಡಂ
ತರುಣಿಯರಂ ಕಂಡೊಡಣ್ಣಿನಿದಿರೊಳ್ ನಿಲೆ ಪಂ ।
ಕರುಹಾಕ್ಷಿಯರಂ ನೋಡಿದೊ
ಡೆರಡಿಲ್ಲದೆ ತನಗಲಾಭಮಂದಿನ ದಿವಸಂ ॥ ೫೭

ಅಂತು ಮಾಯಾಕೃತಕದಿಂದವಿಮುಕ್ತನಾಗಿ [2] ॥ ೫೮

ಪೊನ್ನೆಂದೊಡೆ ಕಿವಿಯುಂ ಮ
ತ್ತೆನ್ನದೆ ಮಾಯಾವಿ ಮುಚ್ಚಿ ಕೊಳ್ವಂ ತನ್ನಂ ।

---

1 ದೇಹಾರದೊಳಿರಿಸುವುದುಮಲ್ಲಿರ್ದ್ (ಗ)

2 ಕೃತಕಗಂಡವಿಮುಕ್ತನಾಗಿ (ಗ)

ಪೊನ್ನಾಭರಣಂ ತೊಟ್ಟವ
ರಿನ್ನಱಿಯದೆ ಮುಟ್ಟೆ ಬೇಗವೊಂದುಪವಾಸಂ ॥ ೫೯

ಇಂತು ಬಕವೇಷಿತನದಿಂ ಮಾಯಾನಿಸ್ಪೃಹನಾಗಿ [1] ॥ ೬೦

ಭೋಗಮನೊಲ್ದು ನೋಡನುಣಿಸೆಂದೊಡೆ ಬೆಕ್ಕುತುಮಿರ್ದನಾರೊಳಂ
ರಾಗಿಸಿ ಮಾತನಾಡನೆರೆಯಂ ಪೆಱತಂ ಪೆಱರೇನನೆಂದೊಡಂ
ಬೇಗವೆದಕ್ಕೆ ಕೋಪಿಸನಣಂ ಪೆಱರೀವೊಡವೊಲ್ವನಲ್ಲಮಿಂ
ತಾಗಳುಮೊಳಂ ಪೆಱರ್ಗೆ ನಂಬುಗೆಯಾಗಿರೆ ಠಕ್ಕವೃತ್ತಿಯಿಂ ॥ ೬೧

ಅಂತೆ ಕುಱಿಯಂತೆ ಕವಿದತಲೆಯುಂ ಬೆಕ್ಕಿನಂತೆ ದುಷ್ಟ
ಬುದ್ಧಿಯುಂ ಬೆಳ್ಳಕ್ಕಿಯಂತೆ ಮಾಯಾಮಾರ್ಗನುಂ ಪುಲಿಯಂ
ತೋಜಾಯಿಲನುಂ ಅತ್ತಿಯಪಣ್ಣಿಂತೊಳಗಶುದ್ಧನುಂ ವೆಟಫಲದಂತೆ
ಪೊಱಗೆ ಸೇವ್ಯನುಂ ಬಂದತೊಱೆಯಂತೆ ಕದಡಿದ ಚಿತ್ತನುಂ ಮಯೂ
ರವ್ಯಾಘ್ರನಂತೆ [2] ಪೊಱಗೆ ಶಾಂತನುವೊಳಗೆ ಕ್ರೂರನುಮಾಗಿ ಕೆಲವು
ದಿವಸಮಿರ್ದುದುಂ ॥ ೬೨

ಜಿನಪಾದಾಂಬುಜಮೆಧುಪಂ
ಜಿನಸಮಯಸಮುದ್ರಚಂದ್ರನನುಪಮೆಗುಣಿ ಸ ।
ಜ್ಞನವೆಂದ್ಯಂ ವಿನಯದ ಕಣಿ
ಜಿನತತ್ವಾಂಬುರುಹಷಂಡರಂಜಿತಹಂಸಂ ॥ ೬೩

ಆಂತಪ್ಪ ಜಿನೇಂದ್ರಭಕ್ತನೊಟ್ಟೆಯೊಂದುದಿವಸಂ ಪರದುವೋಪೆನೆಂಬ
ಬುದ್ಧಿ ಪುಟ್ಟ ತಡೆಯದಲ್ಲಿಗೆ ತಕ್ಕ ಬಂಡಮಂ ಕೊಂಡು ತನ್ನನಾಶ್ರಯಿಸಿ
ಬರ್ದರೆಲ್ಲರುಮೆಂ ಕೂಡಿಕೊಂಡು ಶುಭದಿನಸುಮುಹೂರ್ತದೊಳ್ ಜಿನೇಂ
ದ್ರಾಭಿಷೇಕಮುಮಂ ಜಿನಮಹಾಪೂಜೆಗಳುಮಂ ಮಾಡಿಸಿ ಪೊಱವೀಡಂ
ಬಿಟ್ಟು ತನ್ನ ದೇಹಾರದೊಳಿರ್ದ ಬ್ರಹ್ಮಚಾರಿಗೆವೆಂದು ತಾನವರ್ಗತಿಭಕ್ತ
ನಪ್ಪುದಱಿಂದವನೆಯೊಳಾದ ಮಾಯಾಮಾರ್ಗಮನಱಿಯದೆ ಜಿನಮಾರ್ಗ
ದೊಳ್ ದೃಢನೆಂದು ಕಯ್ಯಂ ಮುಗಿದಿಂತೆಂದಂ ॥ ೬೪

---

[1] ಮಾಯಾಪುಂಜನಾಗಿ (ಗ) [2] ಅಂಜಮುಖವ್ಯಾಪ್ತನಂತೆ (ಖ. ಘ.)

ಎಲ್ಲಿಯುಮೋರಂತೊಂದೆಡೆ
ನಿಲ್ಲದೆ ತೊಱಲುತ್ತುಮಿರ್ಪುದೆನ್ನಯ ಪುಣ್ಯಂ ।
ಬಲ್ಲಿತ್ತು ಪಲವುದಿವಸಂ
ಪಲ್ಲಟಿಸದೆ ನಿಂದಿರನ್ನೆಗಂ ಮದ್ಗೃಹದೊಳ್ । ೬೫

ನಿಮ್ಮನ್ನರಿನ್ನೆವರೆಗಂ
ಪೆರ್ಮೆಯಿನೊಸೆದಿರ್ದರೆಂದೊಡೆನ್ನಂ ಬಿಟ್ಟಾ ।
ರಿಮ್ಮಿಕ್ಕಭ್ರಾವಿಸುವೊಡೆ
ನಿಮ್ಮಡಿ ಪುಣ್ಯಕ್ಕೆ ತಾನೆ ನೋಂತೆಂ ಜಗದೊಳ್ ॥ ೬೬

ಅದುಕಾರಣದಿಂದೆನ್ನಂತು ಧನ್ಯರುಂ ಮಾನ್ಯರುಮಿಲ್ಲ ; ಸ್ಥಳ ಯಾತ್ರೆಗೆ ಪೋಗಿ ಬರ್ಪನ್ನೆವರಂ ನೀವೆನ್ನಂ ಪರಸುತ್ತುಮಿರ್ಪುದೆಂದು [ಬೇಡಿಕೊಳ್ವುದುಂ ಮಾಯಾವಿ ತನ್ನ ಬಗೆಗೂಡಿದುದಕ್ಕೆ ಪೆಟ್ಟುವೆರ್ಚಿ ತನ್ನೊಳಿಂತೆಂದಂ :— ೬೭

ಬಲ್ಲಾಳ್ತನದಿಂದೆಡೆದುಕೊಳ್ವಂಗೆ ಕಡಂಗೊಟ್ಟರೆಂಬಂತೆ ಪ್ರಾಣ ಮನಿಕ್ಕಿಯುಂ ಸೆಱಗುಮೆಂ ಬೆಱಗುಮೆಂ ಬಗೆಯದೆ ಸದ್ರತ್ನಮಂ ಕೊಳ್ವನೆಂದಿರ್ದನಗೆ ಸೆಟ್ಟಿಯ ಪೋಗಿನೊಳಿಂಬಾದುದೆಂದು ತನ್ನ ಪುಣ್ಯಕ್ಕೆ ತಾನೇ ನಾದವೇಱಿಯಂತೆ ಪೊಂಗಿ ಪಾಲುಂ ಕೂರ್ಮೆಯುಂ ಮೆಱುಗಿದೊಡಲ್ಲದೆ ಲೇಸಾಗವೆಂದು ತನ್ನಂ ಪ್ರಿಯಂಮಾಡಲ್ವೇಡಿ ಜಿನೇಂದ್ರಭಕ್ತಂಗಿಂತೆಂದಂ ॥ ೬೮

ವನಿತೆಯುಮಂ ನಂಟರುಮಂ
ಜನಕನುಮಂ ಪೆತ್ತ ತಾಯುಮಂ ವೈತ್ತೆಯುಮಂ ।
ಮನಮುರಿದು ತೊಱೆದು ತಪಕಂ
ತನುವಂ ತಂದೊಡ್ಡಿ ಸೆಟ್ಟಿ ಮತ್ತಂ ಪದಪಿಂ ॥ ೬೯

ಒಂದೆಡೆಯೊಳ್ಮೀಹೋದಯದಿಂದಂ ಪತ್ತಿರ್ಪನೆಂಬನುಂ ಸುಖಮೆಂ ಪೊಂ ।

ದೆಂದುಂ ಪಾಟಿಸುತಿರ್ಪನು
ವೆಂದುಂ ಸುರಲೋಕವೆಯ್ದಲಾಱನವೋಷಂ ॥ ೬೦

ಅದಱಿಂದೆವ್ಮಂತಪ್ಪ ನಿಸ್ಪೃಹರ್ಗೆ ಕೂಟಿಂಗಾಟಿಸಿ ಮೈ ಸುಖಮುಂ ಪಾಟಿಸಿ ಮನ್ನಣೆಗಾಸೆಗೆಯ್ದೊಂದೆಡೆಯೊಳ್ ಪತ್ತಿಕೊಂಡಿರಲಾಗದು; ಕಡುಮೋಹದಿಂದಿರ್ದೆನಪ್ಪೊಡೆ ಮೇಲೆ ಗತಿವಡೆವುದರಿದು; ನೀವೆನಗೆ ಭಕ್ತರಪ್ಪುದಱಿಂ ಪುಣ್ಯವೈದ್ಧಿಯಂ ಮಾಡಲೆಂದಿನ್ನೆವರೆಗಂ ಪರಿಸುತು ಮಿರ್ದೆವದಂ ಪುಸಿಯೆಂಬಿರಪ್ಪೊಡೆ ನಮ್ಮ ಮುನ್ನಿನ ನಡೆವಳಿಯುಮಂ ನೀವೆ ಬಲ್ಲಿರೆಮಗಿಪ್ಪುದಿಷ್ಟಮಿಲ್ಲ; ದೇಶದೇಶದೊಳಂ ವಿಹರಿಸಿ ಕಾಲಮಂ ಕಟಿಸಿ ತಪೋವೈದ್ಧಿಯಂ ಮಾಡುವುದೆ ಮನದೊಳರ್ತಿಯೆನೆ ವೈಶ್ಯ ಪ್ರಧಾನನಿಂತೆಂದಂ ॥ ೬೧

ಮೊಲೆಗಳವೀಲಿರ್ದುಂ ಪೆ
ರ್ಮಲೆಗಳ ಮೀಲಿರ್ದರಧಿಕಗುಣಗಣಯುಕ್ತರ್ ।
ಮಲೆಗಳ ಮೀಲಿರ್ದುಂ ಪೆ
ರ್ಮೊಲೆಗಳ ಮೀಲಿರ್ದರಧಿಕದುಶ್ಚಾರಿತ್ರರ್ ॥ ೬೨

ಜಲದೊಳಗಿರ್ದುಂ ತಾವೆರೆ
ಜಲಮುಂ ಪೊರ್ದುವುದೆ ಚಾರುಚಾರಿತ್ರಯುತರ್ ।
ಮಲರಹಿತನಿರ್ಮಳರು
ಜ್ವಲರೆನಿಸುವರೆತ್ತ ಪೊಕ್ಕೊಡಂ ಕೆಟ್ಟಪರೇ ॥ ೬೩

ನೀವೊಳ್ಳಿದರೆಂಬುದನವೆ
ನೀವಳಯದೊಳುತ್ತರೋತ್ತರಂ ನೆಗಳ್ವೀನಿ ॥
ಮ್ಮಾವರಕಾಯುಕ್ಲೇಶಮೆ
ಭಾವಿಸಿ ನೋಱ್ಪಂತು ತಾನೆ ಪೇೞ್ದೆ ನಯಮುಂ ॥ ೬೪

---

1 ಮೊಲೆಗಳ (ಬ. ಕ.)

ಅದಱಿಂ ನಿಮ್ಮಂತಪ್ಪ ಮಹಾಪುರುಷರೆಲ್ಲಿರ್ದಪ್ಪೊಡೇಂ ಪುಣ್ಯೋಪಾರ್ಜಕರಲ್ಲದೆ ಪಾಪೋಪಾರ್ಜಕರ ನೆಗಪ್ತೆಯಿಲ್ಲದು; ನೀವೆನಗೆ ಕಾರುಣ್ಯಂಗೆಯ್ದಿರಪ್ಪೊಡೆನ್ನ ಮಾತಂಸಲಿಸಿನೆಂದು ಪಲವುಸೂಪೊಡೆಮೆಟ್ಟು ವ್ರತವಿಶೇಷದಿಂ ಪ್ರಾರ್ಥಿಸುವ್ರದುಮೊಡಂಬಟ್ಟಲ್ಲಿ ಸುಖದಿಂ ಸಂತೋಷದಿಂ ಮನೆಗೆ ಪೋಗಿ ಮಱುದಿವಸಂ ಪರಿಗ್ರಹಸಂಬಂಧಿಗಳ್ಗಂ ಪೆಂಡಗರ್ಗಂ ಧರ್ಮಕಾರ್ಯಮುಮಂ ದಾನಮುಮಂ ಪ್ರಯತ್ನದಿಂ ಮಾಱ್ಪುದೆಂದಪ್ಪೈಸಿ ಬಿಟ್ಟಬೀಡಿಂಗೆ ಪೋಗಿರ್ದುದುಮಿತ್ತಲ್ ಮಾಯಾಬ್ರಹ್ಮಚಾರಿ ತನ್ನೊಳಿಂತೆಂದಂ ॥] [1] ೨೫

ಪಿರಿದಪ್ಪ ದುಃಖಮೆಂದೋ
ಸರಿಸದೆ ಸೆಡೆದಿರದೆ ಬಿಟ್ಟು ಮೈಸುಖಮೆಂ ಭಾ ।
ಸುರಮೆಪ್ಪ ರತ್ನಕಾಂಕ್ಷೆಯಿ
ನರಿದೆನಿಸುವೆ ತಪದೊಳಿನ್ನೆವರೆಗಂ ನವೆದೆಂ ॥ ೨೬

ಇನ್ನಿರಲಾಗದಬ್ಬೆ ಬೇೞ್ಪುದವರೆಯ ಪಿಟ್ಟೆಂಬಂತೆನ್ನ ಬಗೆಗೊಡಂಬಟ್ಟಂತೆ ಪುಣ್ಯದಿಂ ಜಿನೇಂದ್ರಭಕ್ತಿಪಟ್ಟಯುಂ [ಪೋದನೊಳ್ಳಿತವಸರಮಾಯ್ತೆಂದು ನಡುವಿರುಳಪ್ಪಾಗಳ್ ಕಾಪಿನ ಕಡಿತಕಾರರ್ ಮೆಱ್ದು ನಿದ್ರೆಗೆಯ್ದುದನಱಿದು ಮೆಲ್ಲನೆೞ್ದು ಗರ್ಭಗೃಹಮಂ ಪೊಕ್ಕು ಮುಕ್ಕೊಡೆಯೊಳರ್ದ ವೈಡೂರ್ಯಮಾಣಿಕಮಂ ನೋಡಿ ॥] [2] ೨೭

ನಿನ್ನಕತದಿಂದೆ ನವೆದೆಂ
ನಿನ್ನಂ ನಡೆನೋಡಿ ಸುಖಮೆನಱಿದೆಂ ಮತ್ತಂ ।
ನಿನ್ನಿಂದಂ ಪಿರಿದಪ್ಪ ಮ
ಹೋನ್ನತಿಯಂ ಪಡೆನೆನೆಂದು ದುಃಖಂಬಟ್ಟೆಂ ॥ ೨೮

---

1 ಬೇಡಿಕೊಂಡು ಸೆಟ್ಟ ಪೊಱವೀಡುವಿಟ್ಟಪ್ಪುದುಂ ಮಾಯಾವಿ ತನ್ನ ಬಗೆದ ಬಯಕೆ ಕೈಗೂಡಿದುದಕ್ಕೆ ಪೆರ್ಚಿ (ಗ)

2 ಪೋದನೊಳ್ಳಿತ್ತಪ್ಪವಸರಮುಂ ನೋಡಿ (ಗ)

ಕಡುತಪದಿಂದಂ ದೇಹಂ
ಬಡವಾದುದು ನಿನ್ನ ದೂಸಱಿಂ ಧರೆಯರೆಯುಂ ।
ಪಡೆವೆಂ ರಾಜ್ಯಶ್ರೀಯೊಳ್
ತಡೆಯದೆ ಕೂಡಿರ್ಪೆನೆಂಬ ಪರಮೋತ್ಸವದಿಂ ॥ ೬೯

ಎಂದು [ತ್ಸಾಹದಿಂ] ಮೆಯ್ಯೞಿಯದೆ ರತ್ನದೊಡನೆ ನುಡಿದು ಪೆಱರ್ಕೆೞದಂತಾಟಿಸಿ ಕೀಲಂ ಕಳದು ನೆಳಕ್ಕೆ ಬೀೞಿಲೀಯದೆ ಪಿಡಿದು ಕೊಂಡು ತಳದೊಳಕ್ಕಿಕ್ಕಿಕೊಂಡು ನೋಡಿ ॥ ೭೦

ಉರದೊಳಮರ್ಚಿಕೊಂಡು ತಲೆಯೊಳ್ಪಿಡಿದೊಯ್ಯನೆ ಪೊತ್ತುಕೊಂಡು ಮೂ
ಣ್ದಿರದತಿಮೋಹದಿಂ ನೊಸಲಮೇಲೆ ಮುಹೋತ್ಸವದಿಂದಮಿಟ್ಟುಕೊಂ
ಡಿರದದನಚ್ಕರಿಂದಡರೆ ಭಾವಿಸಿ ಭಾವಿಸಿ ನೋಡಿ ನೋಡಿ ಚಕ್ಷ
ಶ್ರವಮವನೀತಳಂ ತನಗೆ ಸಾರ್ದವೊಲೊರ್ವೊದಲುಣ್ಮಿ ಪೊಣ್ಮಿದಂ ॥೭೧

ಅಂತು ರಾಗರಸದಿಂ ಪೊಂಗಿ ತಡೆದು ತಿಳಿನೀರಸುಂಡುದೆಂಬ ನಾಲ್ಮುಡಿಯಂತೆ ತನ್ನ ಕೈಕೊಂಡು ನವೆದ ಕಡುದುಃಖಂ ಸಫಲ ಮೊಯ್ತೆಂದು ತನ್ನೊಳ್ ನುಡಿದು ॥ ೭೨

ಸುರರಾಜಂಗಂ ಭೇದಿಸ
ಲರಿದೆನಿಸುವ ದಿವ್ಯರತ್ನ ಮೆನಗವಯವದಿಂ ।
ದೊರೆಕೊಂಡುದು ವೀರಮಹೀ
ಶ್ವರನಲ್ಲಿಗೆ ಪೋಗಿ ಪಡೆವೆನುರ್ವರೆಯರೆಯುಂ ॥ ೭೩

ಸ್ಫುರಿಯಿಪ ಸದ್ರತ್ನ ಮನಿದ
ನರಸಂ ಕೇಳ್ದಾಣಲೊಡನೆ ತಾಂ ತನ್ನಾಟ್ವ ।
ರ್ವರೆಯರೆಯನೀವನಿತ್ತೊಡೆ
ಧರೆಯರೆಯುಂ ಸುಖದೆ ಲೀಲೆಯಿಂ ಭೋಗಿಸುವೆಂ ॥ ೭೪

ಮನಕೆವೆಂದ ಹಯಂಗಳಂ ಮದಸಿಂಧುರಂಗಳನೇಱುವೆಂ
ಮನಕೆವೆಂದ ನವಾಂಬರಂಗಳನರ್ತಿಯಿಂದುಡುವೆಂ ಕರಂ
ಮನಕೆವೆಂದ ಸುಗಂಧವೆಸ್ತುವನೆಲ್ಲಕಿಂದಮೆ ಪೂಸುವೆಂ
ಮನಕೆವೆಂದೊಳುವೆಂಡಿರೊಳ್ನರೆವೆಂ ಮನಂಬಿಡೆ ನಿಚ್ಚಲುಂ ॥ ೪೫

ಎಂದು ತೊಱ್ಗಾಣದೆ ಕೆರ್ಪುಗಳದು ನಗಿಸುವೆಗ್ಗನಂತೆ ಮುಂದಣ ತನಗಪ್ಪ ರಾಜ್ಯವಿಭೂತಿಯನಾಳೋಚಿಸಿ ಸೊಡರಂ ಕಳದು ಪೊಱ ಮಟ್ಟು ಪೋಪುದುಂ ಕರ್ಮವಶದಿಂ ಖಲ್ವಬಿಲ್ವಸಂಯೋಗದಂತೆ ಪೊಱ ಲೊಳಗೆ ತೊಱಲ್ವರಸನ ತಳಾಱರೋಡುವ ಮಾಯಾವಿಯು ಕೈಯೊಳ್ಪ ಲಾರ್ಕನಂತೆ ಪ್ರಜ್ವಲಿಸುವ ರತ್ನದ ಬೆಳಗಂ ಕಂಡು ಕಳಕಳರವಮುಂ ಮಾಡುವುದುಂ ॥ ೪೬

ಒಳಗಿರ್ದ ಬಂಟರಾಕಳ
ಕಳಕ್ಕೆ ಭಯದಿಂದಮೆರ್ದಿದೇನೆಂದಾಗಳ್ ।
ನೋಱ್ಪುದುಮೊಳಗು
ಜ್ಜ್ವಳಿಸುವ ಸೊಡರಿಲ್ಲದೆಯ್ದೆ ನಂದಿರೆ ಮನದೊಳ್ ॥ ೪೭

ನೊಂದು ದೇಹಾರದ ಮನೆಯಂ ಪೊಕ್ಕು ತಡವರಿಸಿ ನೋಡಿ ಮಾಯಾವಿಯುಂ ಪಡುವಣೆಡೆಯೊಳ್ಕಾಣದೆ ಠಕ್ಕನೆಂದಱಿದು ರತ್ನದ ದೆಸೆಗೆ ಭಯಸ್ಥರಾಗಿ ಸೊಡರಂ ತರಿಸಿ ನೋಡಿ ದೇವರ ಮುಕ್ಕೊಡೆಯೊಳರ್ದ ವೈಡೂರ್ಯಮಾಣಿಕಮುಂ ಕಾಣದೆ ಪೊಱಮಟ್ಟು ತಾಮುಂ ತಪ್ಪುರದ ತಳಾಱರುಂ ಸುತ್ತಿ ಮುತ್ತಿಯಿನ್ನೆತ್ತ ಪೋದಪೆಯೆಂದು ಬೆನ್ನಟ್ಟ ತಗುಳ್ದಿಡುವುದುಂ ಖಳಲ್ ಖಳಲ್ ತೊಪ್ಪುತೊಪ್ಪ ಛಳಲ್ ಛಳಲೆಂದು ಕೊಳ್ವ ಬಡಿಗಂ ಚಳಿತು ॥ ೪೮

ಬಟ್ಟೈಸಿ ಪೋಗಲರಿದೊಣದೊಣ
ಬಟ್ಟೆಯ ಕಿಱುಗಲ್ಲ ಬಡಿಯು ಕೋಳಿಂದಂ ಕಾಲೆ ।
ಕೆಟ್ಟವು ಜವಜವನಾದುವು
ನೆಟ್ಟನೆ ಮೈಸತ್ತೆನೆಂದು ಕಡುಭಯದಿಂದಂ ॥ ೪೯

ಅತ್ತಲುಮಿತ್ತಲುಮೋವೋ
ಯೆತ್ತಲುಮಾತಂಗೆ ಕೂಪಮಂ ತೆಱದಂತಾ ।
ಯ್ತೊತ್ತುತೆ ವೊತ್ತುವೆ ತೆಱದಿಂ
ದತ್ತಿತ್ತಲ್ ಮಿಡುಕಬಾರದವೆಗುದ್ಧತೆಯಿಂ ॥ ೯೦

ತಡೆದಿಲ್ಲಿ ನಿಂದೆನಪ್ಪೊಡೆ
ಮಡಿವಾದಪ್ರದುಱುವೆನಪ್ಪೊಡೆಲ್ಲಿಡೆ ಮುಂದೊಂ ।
ದಡಿಯುಂ ತೆಱಪಣಮಿಲ್ಲೀ
ಯೆಡೆಗಾವುದುಪಾಯಮೆಂದು ಮೊಯಾಪುಂಜಂ ॥ ೯೧

ಚಿಂತಾಕ್ರಾಂತನಾಗಿ ಮಹಾಪ್ರಳಯಂ ಕವಿದಂತೆ ದುಃಖಂಬಟ್ಟು ಪಲವು ನಾಯ್ಗಳ ನಡುವಣ ಪ್ರಲ್ಲಿಯಂತೆ ನಡುನಡುಗಿ ॥ ೯೨

ಜಡಿದುಂ ಬೈದುಂ ವೋಹದಿ
ನೊಡಗೊಂಡುಣ್ಬವರೆ ಲೇಸು ದಿಟಮೆಂಬೀ ನಾ ।
ಱ್ನುಡಿಯಂತೀ ಪ್ರಾಣಿಗಳಂ
ಮಡಿಪದುಪಾಸಕರೆ ಲೇಸು ಒಗೆವೊಡೆ ಜಗದೊಳ್ ॥ ೯೩

ಅದಱಿಂ ಸಮ್ಯಕ್ತ್ವಚೂಡಾಮಣಿಯುಪ್ಪ ಜಿನಭಕ್ತಸೆಟ್ಟಿಯ ಪ್ಪೊಡೆ ಪರಮಶ್ರಾವಕನೂಂದಿಱುಂಪೆಯ ಪ್ರಾಣಕ್ಕಂ ವೊದಲಾಗೆ ತಪ್ಪಲಱಿಯದಾತನೆನ್ನಂ ಕಂಡೊಡೇಗೆಯುದ್ದಂ ಕೊಲ್ವನಲ್ಲೀನಿಷ್ಠುರನಪ್ಪತಳಾ ಅನ ಕೈಯೊಳ್ ಕಡಿಗಂಡಮಾಗೆ ಜೀಱುೞೆ ಪೊಯ್ಸಿಕೊಂಡು ಸಾಯದೆ ವಾತ್ಸಲ್ಯರತ್ನಾಕರನ ಮಱೆಯಂ ಪುಗುವೆನೆಂದು ಪೊಱಬೀಡು ಬಿಟ್ಟುರ್ದ ಜಿನೇಂದ್ರಭಕ್ತನ ಬೀಡಂ ನೋಡಿ ಪೊಕ್ಕು ಜಿನಧರ್ಮನಿರ್ಮಳನ ಮೆಱೆಯಂ ಪುಗುವುದುಂ ಸೆಟ್ಟಿ ಮಾಯಾವಿಯು ಮುನ್ನಿನ ತಪದೊಳಾದ ಸಾಧುತ್ವಮುಮಂ ಬಱುಕ್ಕಮಾದ ದುರ್ಜನತ್ವಮುಮಂ ಕಂಡು ಬೆಱಗಾಗಿ ತನ್ನೊಳಿಂತೆಂದಂ ॥ ೯೪

ನಾಡಾಡಿಯನಾಡುವರೊಳ್
ಕೂಡುವೊಡದು ದೋಷಮಲ್ಲಮೆದು ಕುಕ್ಕುಟಮೆಂ ।
ಮಾಡುವರೊಳ್ನಿಂಬುಗೆಯಿಂ
ಕೂಡಿದೊಡೇನಾನುವೊಂದು ದೋಷಂ ಸಾಗರ್ಮಂ । ೯೫

ಧರೆಯೊಳ್ ವಿವೇಕಿಯೆನಿಸುವ
ಪುರುಷಂ ಪೆಂಡಿರೊಳಮರ್ಥದೊಳವಿನ್ನೆಂತ ।
ಪ್ಪರುಮೆಂ ನಂಬಿರಲಾಗದು
ಪರವಶದಿಂದೆಂಬ ನೀತಿಯೊಳ್ ಪುಸಿಯುಂಟೇ ॥ ೯೬

ಬಿಸನಿಯ ಸತ್ಯಮುಂ ಖಳನ ಧರ್ಮಮು ಮೂರ್ಖನ ಸಜ್ಜರಿತ್ರಮುಂ
ಪುಸಿವನೆ ಶೌಚಮುಂ ಬಡವನಪ್ಪನ ಭೋಗಮುಮೋಜಿರುಗದೊಳ್
ಕುಸಿವನೆ ವೀರಮುಂ ಬಧಿರನಪ್ಪನ ಕೇಳ್ಪಯುಮಾಯತಿಕ್ಕೆಯುಂ
ಬಿಸುಟನ ಕೀರ್ತಿಯುಂ ವಿಟನ ಶೀಲಮುಮುರ್ವಿಯೊಳೂಪ್ಪಲಾರ್ಪುವೇ॥

ಕುರುಡನ ಕಾಣ್ಕೆಯುಂ ವನಿತೆಯರ್ಗೆಳಸಿರ್ಪನ ರಾಜ್ಯಮುಂ ವಿನಂ
ಮುರಿವನೆ ಧೈರ್ಯಮುಂ ಪತಿಗೆ ಮಾರ್ಮಲೆದಿರ್ಪನ ಸಜ್ಜನಿಕ್ಕೆಯುಂ
ಪರಮಜಿನಾಗಮೋಕ್ತಿಯನೆ ಮಾಣದೆ ಭಾವಿಸದಾತನೋದು ಭಾ
ಸುರತರಮುಂ ಮಹಾಗುಣಮುಮೊಪ್ಪುವು ಧಾರಿಣಿಯೊಳ್ನಿರಂತರಂ॥ ೯೮

[ಚರಿತಪುರಾಣಮೆನಱಿಯದೆ
ತುರಿಪದಿನಧ್ಯಾತ್ಮಿಯಾಗಿ ನೆಗಜ್ವನ ತಪಮುಂ ।
ಮರುಳನ ಸಿರಿಯುಂ ಪಂದೆಯ
ಬಿರುದುಂ ಸುಖಮೊಗಲಾಱುವೆಂದುಂ ಕಡೆಯೊಳ್ ॥] ೯೯

ಸಿದ್ಧಾಂತಮೆನಱಿಯದೆ ಪಿರಿ
ದುದ ತೆಯಿಂ ಸೊಂಬತನದಿನಧ್ಯಾತ್ಮಮುಮೆಂ ।[1]

---

[1] ಅನ್ಯಾಗಮಮುಂ (ಗ)

ಶ್ರದ್ಧೆಯಿನೋದುವ ಕಡುನಿ
ರ್ಬುದ್ಧಿ ಮಹಾಸುಖಮೆನ್ಪೈದಲಾಱಿಂ ಕಡೆಯೊಳ್ ॥ ೧೦೦

ಮೊದಲೊಳಾದದೆ ರಾಗದಿಂ ಪ್ರಥಮಾನುಯೋಗಮೆನರ್ತಿಯಿಂ
ತುದಿಯ ಸೂಹ್ಮಮೆನೋದುವಾತನುಮೊಜೆಯೊಳ್ ಸಲೆ ಕೈದುವಿ
ಲ್ಲದೆ ಕಡಂಗಿ ವಿನೋದದಿಂ ಪುಗುವಾತನುಂ ನೃಪಕಾಂತೆಯುಂ
ಪದೆದು ಕಾಮಿಸಿ ನೋಡಿ ಪೊರ್ದುವೆ ಗಾಂಪನುಂ ಮರುಳಲ್ಲನೇ ॥ ೧೦೧

ಆಗಮವೆಱಿಯದ ತಪಮುಂ
ರಾಗಿಯೆನಿಪ್ಪವನ ರಾಣಿವಾಸದ ಕಾಪುಂ ।
ವೇಗಿಯ ಕೆಳೆಯುಂ ಬಡವನ
ಭೋಗಮುಮತ್ಯಂತದುಃಖಮುಂ ಪುಟ್ಟಿಸುಗುಂ ॥ ೧೦೨

ಲೋಭಿಯು ಕೋಡುಂ ಪದಪಿಂ
ದೀಭವದ ಸುಖಕ್ಕೆ ಮೆಱುಗಿ ಕುದಿವನ ತಪಮುಂ ।
ಲಾಭಮನೆಱಿಯದ ಪರದುಂ
ಶೋಭಿಸಲಾರ್ತಪ್ರವೆ ಬಗೆವೊಡವನೀತಳದೊಳ್ ॥ ೧೦೩

ಎಂದು ಮನದೊಳ್ ಭಾವಿಸುತಿರ್ಪನ್ನೆಗಂ ಕಲ್ಲೆಯುಂ ಕವಿಲೆಯುಮಾಗಿ ನೆರವಿ ಪೆಱಗೆ ಬರೆ ಪುರದ ತಳಾಱರುಂ ತನ್ನ ದೇಹಾರದ ಕಾಪಿನ ಬಂಟರುಂ ಕಳ್ಳನಿಲ್ಲಿ ಪೊಕ್ಕನೆಂದು ಬೀಡಿನೊಳ್ ಪೊಕ್ಕು ಗುಡಿಗೂಡಾರಂಗಳೊಳಂ ಬೆಟ್ಟಾಗೊಟ್ಟರ್ದ ಪೇಱಿನಿಟ್ಟೆಡೆಗಳೊಳಂ ಕೊಟ್ಟಗೆಯೆತ್ತಿನ ಪಟ್ಟಗಳೊಳಂ ಪುಂಜಿಸಿದ ಚೀನದ ದಿಂಡುಗಳೊಳಂ ಪಾಸಿನೆಡೆಗಳೊಳಂ ಕೈದೀವಿಗೆಯ ಬೆಳಕಿನೊಳ್ ನೋಡುತ್ತುಂ ಕಳಕಳರವದಿಂ ಬಿದಿರುಂ ಬೞಯುಂ ಪಾಸುಂ ಪೊಕ್ಕುಂ ತಿಗುರಿಯುಂ ಬುಗುರಿಯುಂ ಜಾತಿಯುಂ ಭೀತಿಯುಂ ಆಗೆ ಪರಿವಾಗಳವರಂ ವಣಿಗ್ವಂಶಲಲಾಮಂ ಕಂಡು ತನ್ನೊಳಿಂತೆಂದಂ ॥ ೧೦೪

ಈಪಾತಕನಪ್ಪೊಡೆ ಮು
ನ್ನೀಪುರದೊಳ್ ಪಿರಿದು ಕೀರ್ತಿಯಂ ತಪದಿಂದಂ ।
ವ್ಯಾಪಿಸಿದಂ ಪಲರಿಂದಂ
ಪಾಪಾಂತಕನೆನಿಸಿ ನೆಱೆಯೆ ಕೈವುಗಿಯಿಸಿದಂ ॥ ೧೦೫

ಮೊದಲೊಳ್ ಮುಳ್ಳಿನ ಮೊನೆಗಳ್
ಮೈದುವೆಪ್ಪುವು ಬಱಿಕೆ ಬೆಟ್ಟ್ಪತಪ್ಪುವು ಖಳರುಂ ।
ಮೊದಲೊಳ್ ಗುಣಿಯೆನಿಸಿರ್ಪರ್
ತುದಿಯೊಳ್ ತಂತಮ್ಮ ಮಾಯೆಯುಂ ಪ್ರಕಟಿಸುವರ್ ॥ ೧೦೬

ಪೊಳ್ಳುಂ ಬಿತ್ತುಂ ಸಸಿಗಳು
ಮೊಳ್ಕಿದುವೆನಿಸಿರ್ಪವೆಯ್ದೆ ಫಲದೊಳ್ ತೋಱುಂ ।
ಪೊಳ್ಳಪ್ಪುದು ಪೊಳ್ಳುಂ ಕರ
ಮೊಳ್ಕಿದುವೆನಿಸಿರ್ಪ ಬಿತ್ತು ಧಾನ್ಯಮುಮಕ್ಕುಂ ॥ ೧೦೭

ಎಲ್ಲರ ಪೊಱಗಣ ಚೇಷ್ಟೆಯು
ನಲ್ಲದೆ ಪೇಟೊಳಗನಱಿವನಾವನೊ ! ನೆರನೇ ।
ಕಲ್ಲೀ ಬಿದಿರೇ ಸೀಳ್ದಂ
ಮೆಲ್ಲನೆ ನೋಱ್ಪಿಂತೆ ನೋಡೆ ಮೊನಿಸರೆದೆರ್ದಿಯುಂ ॥ ೧೦೮

ಇವನಪ್ಪೊಡೆ ತಾನೊರ್ಮರ
ತವುಡಿಂಗಂ ಪೋಗನಿವನ ಕತದಿಂದಂ ತ್ರೈ ।
ಭುವನಂಬಡೆವೀಧರ್ಮಮ
ನವಿವೇಕಿಗಳಳಸಮೆನ್ವಿತರ್ಕಿಡೆನುಡಿವರ್ ॥ ೧೦೯

ಅದುಕಾರಣದಿಂದಿವನ ಪೋದ ಪೋಗಂ [1] ಮಾರಿಯಱಿಗೆ ಸದ್ಧರ್ಮಕ್ಕೆ ಪಱಿಯಾಗವಂತೆ ನೆಗಳ್ವನೆಂದು ಪಿರಿಯ ಮಣಿಯ ಮೇಲಾತನಿರಿಸಿ ಮಹಾಭಕ್ತಿಯಿಂ ಪ್ರತ್ಯಕ್ಷಂ ಮಾಯಾವಿಯ ಕಾಲನೊತ್ತುತ್ತು

ಮಿರ್ದುದುಮೆನ್ನೆಗಂ ತಳಾಱನಾಯಕಂ ಪರಿತಂದು ಜಿನೇಂದ್ರಭಕ್ತ ಸೆಟ್ಟಿಯಲ್ಲಿಗೆ ಭೋರೆನೆ ಪ್ರೋಗಿ ಸೆಟ್ಟಿಯ ಮೇಲೆ ಕಾಲನವಷ್ಟಂ ಭದಿಂ ನೀಡಿ ಮಹಾಮಹಿಮೆಯಿಂದಿರ್ದ ಕೃತಕವೇಷಧಾರಿಯುಂ ಕಂಡು ॥ ೧೧೦

ನೀವೇನೆಂದೀತಸ್ಕರ
ಕೀವಿಲಚರಣದ್ವಯಂಗಳಂ ಮೆಲ್ಲನೆ ಸ ।
ಧ್ಭವೆದಿನೊತ್ತುತ್ತಿರ್ದಿರೊ
ನೀವಱಿಯಿರೆ ಚಪಳನಾಡಿದಾಟಮನಿನ್ನುಂ ॥ ೧೧೧

ಸಿತಗಂ ಮಾಯಾತಪಮಂ
ಕೃತಕದಿನಱೆಯಟ್ಟಿ ಮೂಡಿ ಮೇಳಿಸಿ ಪಿಱಿರು ।
ನ್ನತರತ್ನಮೆನೊಯ್ದ ಪನು
ನ್ನತಿಯಿಂ ದುರ್ಜನರನಿನ್ನರಂ ಕಂಡಱಿಯೆಂ ॥ ೧೧೨

ಪೊಱಗೀ ಖಳನಂ ಕಂಡೊಡೆ
ಪೆಱದೆಗೆಯದೆ ಸಂದಿಸಂದಿಯಂ ಪರಸಿಂದಂ ।
ತಱಿಯೆನೆ ಗರಗಸದಿಂದಂ
ಕೊಱೆಯೆನೆ ಖಳನಿಲ್ಲಿ ಪೊಕ್ಕ ಬದುಕಿದನಿನ್ನುಂ ॥ ೧೧೩

ಆಶ್ವಾಸಂಗುಡದಿವನಂ
ನಿಸ್ವನಮಜ್ಞಾನಿಯಂ ಮಹಾಪಾತಕನಂ ।
ವಿಶ್ವಾಸಘಾತುಕನನಮ
ರೇಶ್ವರನಿಭವಿಭವ ತಡೆಯದೊಪ್ಪಿಸು ಬೇಗಂ ॥ ೧೧೪

ಮಹಾಮಾಯಾವಿಯು ತುಡುಗುಗೊಂಡ ತೊಱ್ತುನಂತೆ ಬಾಯುಂ ತೆಱೆದುಕೊಂಡು ತಾನಲ್ಲದಂತೆ ಬೆಣ್ಣೆಯಂ ತಿಂದ ಬೆಕ್ಕಿನಂತೆ ನಿಮ್ಮ ಮಱೆವೊಕ್ಕು ನುಣ್ಣನಿರ್ದಪನೆಂದು ನಾನಾಪ್ರಕಾರದಿಂ ತಿರಸ್ಕರಿಸಿ

ಸೆಟ್ಟಗಂಜಿ ಮೇಲ್ವಾಯ್ದು ತೆಗೆಯಲ್ಕಣದಿರ್ದುದುಂ, ಜಿನೇಂದ್ರಭಕ್ತ ಸೆಟ್ಟ ತಳಾಜಿನಾಯಕನ ಮೊಗಮುಂ ನೋಡಿ ನೆರವಿಯೆಲ್ಲಂ ಕೇಳ್ವಂತಾಗೆ ಗಂಭೀರನಾದದಿಂದಿಂತೆಂದಂ ॥ ೧೧೫

ಪುರದೊಳಗೆ ಕೆಟ್ಟುದೇಂ ತ
ಸ್ಕರನಾವಂ ಕಳ್ದು ತಂದ ಧನಮಾವುದು ನಿ ।
ಷ್ಠುರತನದಿಂದೀ ಪೆರ್ಚಿಡೆ
ವೆರಸು ನುಹಾನೆರವಿವೆರಸು ಕಟ್ಟಾಳ್ತನದಿಂ ॥ ೧೧೬

ಪರಿತಂದು ಪೊಕ್ಕ ಉಸುವೊಡೆನ್ನ ಬೀಡು ಕೊಟ್ಟಮೆಲ್ಲದು ನೀನಿಂದು ಕಟ್ಟಲೆಯಂ ತಿಂದ ಪಸುವಿನಂತಾನುಂ ಮೆದ್ದುಗುಣಿಕೆಯಂ ತಿಂದ ಮೊನಿಸನಂತಾನುಂ ಮೆಯ್ಯುಱಿಯದೆನ್ನೊಡಮೆಯನೆನ್ನಲ್ಲಿಗೆ ತಪ್ಪ ಬಡಸಾದುರುಷಿಯಂ ಕಳ್ಳನೆಂದು ಬೆನ್ನಟ್ಟದೆಯಿಂತೀ ಸಾಧು ತಪಸ್ವಿ ನಿಶ್ಚಯಂ ಕಳ್ಳನಪ್ಪೊಡೆ ಮತೊಂದು ದೆಸೆಗೆ ಪೋಗದೆನ್ನ ಬೀಡನೇಕೆ ಪುಗುವನದಱಿಂದಮೆಱಿಯಲ್ವೇಡಾ ॥ ೧೧೭

ಪಿರಿದುಂ ಕಾಲಂ ನೀನೀ
ಪುರಮುಂ ಜೀಯೆನಿಸಿ ಬುದ್ಧಿಗಂ ತೇಜಕ್ಕಂ ।
ಬಿರುದಿಂಗಂ ಪೆಂಪಿಂಗಂ
ಕರವೊಳ್ಳಿದನೆನಿಸಿ ರಕ್ಷಿಸಿದೆಯಿನ್ನೆ ವರಂ ॥ ೧೧೮

ಮುನ್ನಮಿಂತಪ್ಪ ನಿರ್ಬುದ್ಧಿತನಮಿಲ್ಲ ನಿನ್ನಂತಪ್ಪ ಬುದ್ಧಿವಂತರುಂ ಪೆರ್ಮೆಯ್ತುಂಗೊಂಡರಂತೆ ಬಡಸಾದುವಂ ಕಳ್ಳನೆಂದು ಬೆನ್ನಟ್ಟ ಬಂದು ದಕ್ಕೆಮಗೆ ಪಿರಿದುಂ ವಿಸ್ಮಯಮಾದಪುದೆಂಬುದುಂ ಸೆಟ್ಟಯ ಮಾತಿಂಗೆ ತಳಾಜಿನಾಯಕಂ ಬೆಱಗಾಗಿ ತನ್ನೊಳಿಂತೆಂದಂ ॥ ೧೧೯

ಈ ವೈಶ್ಯೋತ್ತಮನಪ್ಪೊಡೆ
ಕೇವಳಮೀ ಬುದ್ಧಿಯೊಡೆಗೆ ನೂರ್ಮಡಿ ಮಿಕ್ಕಂ ।

ದೇವೇಶನುಮೆಂ [1] ಬಗೆವೊಡೆ
ಭೂವಿನುತಂ ಕಳ್ಳನಪ್ಪವಂಗೆಱಗುವನೇ ॥ ೧೭೦

ಅನುಪಮಗುಣಿಯೆಂದಸ್ಮ
ಜ್ಜನವಂ ಮೊದಲಾಗೆ ಕೂರ್ಮ್ಮಯಿಂ ಕೈಮುಗಿವಂ ।
ಜಿನಭಕ್ತಸೆಟ್ಟಗೆಂದೊಡೆ
ಜಿನಭಕ್ತಂ ಕಳ್ಳನಪ್ಪವಂಗೆಱಗುವನೇ ॥ ೧೭೧

ಅಂತಲ್ಲದೊಡಂ ॥ ೧೭೨

ಈತಂ ತಸ್ಕರನಪ್ಪೊಡೆ
ಭೀತಿಯಿನತ್ತಿತ್ತಲೋಡುಗಲ್ಲದೆ ದಿಟವಿಂ ।
ತೀತನ ಬೀಡಂ ಪುಗುವನೆ
ಮಾತೇನೀಸಾಧು ಕಳ್ಳನಲ್ಲಂ ಶುದ್ಧಂ ॥ ೧೭೩

ಎಂದಿವೆಲ್ಲವೆನ್ನ ನಿರ್ಬ್ಬುದ್ಧಿ ತನವೆಂದು ತಳಾಱನಾಯಕಂ ಸಿಗ್ಗಾಗಿ ಬಂದ ಬಟ್ಟೆಯನೆ ಮಗುೞ್ದು ಸಿರದೆ ಪೋದಂ ; ಪೋಪುದುಂ ನೆರೆವ ನೆರವಿಯೆಲ್ಲಂ ತಮ್ಮೊಳಿಂತೆಂದರ್ ॥ ೧೭೪

ಸೆಟ್ಟಿಯು ಪೇಪ್ಪೆಯಿನೊಯ್ಯನೆ
ನೆಟ್ಟಗೆ ವೈಡೂರ್ಯರತ್ನಮಂ ತರ್ಪನನೆ ।
ಬ್ಬಿಟ್ಟ ಖಳನೆಂದು ಕಲ್ಲಿಂ
ದಿಟ್ಟು ಕುಕಿಲಾದ್ದುರ್ ಬಱಿದೆ ನೋಡ ತಳಾಱಿಂ ॥ ೧೭೫

ಕೊಂಡಂ ಮುನ್ನೆಂದು ತಳಾಱನಾಯಕನ ಪೊಲ್ಲಮೆಯನೆಲ್ಲಂ ಭೋರೆಂದುಲಿಯುತ್ತುಂ ಪೋದರಿತ್ತಲ್ವಣಿಗ್ವಂಶತಿಲಕಂ ಮಾಯಾವಿಯು ನೇಕಾಂತಕಕ್ಕಯ್ದು ಮೆಲ್ಲನಿಂತೆಂದಂ ॥ ೧೭೬

---

[1] ದೇವೇಶ್ಯನುಮುಂ (ಬ. ಕ.) ಸುವೈಶ್ಯನುಮುಂ (ಗ)

ಕರಮಿಲ್ಲದೆಯ್ದೆ ನಿನ್ನಂ
ಪುರಮೆಲ್ಲಂ ಕೊಂಡು ಕೊನೆದು ದೇವಂ ದಿಟದಿಂ ।
ನಿರುತಮಿವನೆಂದು ಬಣ್ಣಿಸು
ತಿರೆ ಗುಣಮಂ ಬಿಟ್ಟು ಕೆಟ್ಟು ಪುರಿಯೋಡುದ್ಯೆ ॥ ೧೮೩

ಬಿತ್ತಲ್ಲದದು ಫಲದೊಳಱಿಪಿತ್ತೆಂಬ ನಾಲ್ಕುಡಿಯಂತೆ ತಪದಿಂದಂ ಗುಣದಿಂದಂ ಪುರದೊಳ್ ಪಲವುದಿವಸಂ ಮೆಚ್ಚಾಗಿರ್ದಲ್ಲಿಯೆ ಬಂಡುವೋದ್ಯೆ; ಆನೆಯುನೀಱಿರ್ದಲ್ಲಿಯೆ ಬೇರಂಟಿಯಾಯ್ದ್ಯೆ; ನಿನ್ನಂ ಬಿಟ್ಟು ಪಾತಕರುಂ ವಿಶ್ವಾಸಘಾತಕರುಂ ಮಾಯಾವಿಗಳುಮಿಲ್ಲ; ಬೆಕ್ಕು ಪಾಲನಲ್ಲದೆ ಮೇಲಣ ಬಡಿಯುಂ ಕಾಣದೆಂಬಂತಿಲ್ಲಿಯು ಸುಖಮನೆ ಬಗೆದೆಯುಲ್ಲದೆ ಮಱುಭವದೊಳಾದ ಮಹಾದುಃಖಮುಂ ಬಗೆದೆಯಿಲ್ಲಂ. ಅನ್ಯಾಯದೊಳ್ಪಡೆದರ್ಥಂ ನಡುನೀರೊಳಕ್ಕಿದೊಡಂ ಕಿಡುಗುಮೆನ್ನ ಮುನ್ನ ಮಾಡಿದ ಸುಪಾತ್ರದಾನದ ಫಲದಿಂ ದೊರೆಕೊಂಡುದೀ ಮಹಾನರ್ಘ್ಯ ರತ್ನಂ; ಕುತ್ಸಿತನಪ್ಪೀನಿನಗೆನಿತಾಪತ್ತುವಟ್ಟೊಡಂ ದುಃಖಮೆ ಕೈಸಾರ್ಗುಮೆಲ್ಲದೆ ರತ್ನಂ ಕೈಸಾರಲಱಿಯದು; ಎಲ್ಲೆಡೆಯೊಳಂ ಪಕ್ಷಮಿಲ್ಲದೊಂದೆ ಮಾರ್ಗದಿಂದೆಱಗಿ ವಿಷ ಸುರಿದೊಡಂ ನೀರ್ ಪುಣ್ಯಮಿಲ್ಲದ ಸ್ಥಾನಮಂ ಪರಿಹರಿಸಿ ಬಂದು ತೊಱೆಕೆಱೆಬಾವಿಗಳೊಳ್ ತೀವುವಂತೆ ಸಕಲಪಸ್ತುಗಳುಂ ತೆರಳ್ದ ನಿರ್ಭಾಗ್ಯರಂ ಬಿಟ್ಟು ಪುಣ್ಯಾಧಿಕರೊಳ್ ನೆರೆಗುಮೆಂತು ತೊಱೆಕೆಱೆಬಾವಿಯ ನೀರೆಲ್ಲಂ ಕಾಲಕ್ರಮದಿಂ ಸಾರ್ದು ಸಮುದ್ರದೊಳೂಕ್ಕಡುವಂತೆ ಅಲ್ಪಪುಣ್ಯರ ವಸ್ತುಗಳುಂ ತೆರಳ್ದ ಮಹಾಪುಣ್ಯಾಧಿಕರೊಳ್ನಲಸುಗುಮದುಕಾರಣದಿಂ ॥ ೧೮೪

ಸಾವುದನೆ ಮಾಡಿಕೊಂಡೈ
ಕೇವಲವರಮಾಣಿಯಲ್ಲಿ ಭಾವಿಸಿ ಕೇಡಾಂ [1] ।
ಶ್ರಾವಕನಪ್ಪುದಱಿಂದಂ
ಕೀವಿಲಿ ನಿನಗೊಂದು ಕಂಟಕಂ ಪೋಯ್ತೀಗಳ್ ॥ ೧೮೫

1 ಕೇವಲದವಮಾಳಿಯಲ್ಲಯಿನಿಸಾನುಂನಾಂ (ಬ. ಕ.)

ಆನಱಿಯದೊಡಿಂತಕ್ಕಟ
ನೀನಾ ನಿಷ್ಠುರನ ಕೆಯ್ಯೊಳರಡಿಲ್ಲದೆ ಪೇ ।
ರಾನೆಯ ಬಾರಿಗೆ ಬಿರ್ದಾ
ಶ್ವಾನನ ತೆಱಿದಂತೆ ಬಾಧೆಗೊಳಗಾಗಿಪ್ಪೈ ॥ ೧೩೦

ಈರೂಪಂ ಧರಿಯಿಸಿ ಸಂ
ಸಾರಮನದಟಲಿದು ಮುಕ್ತಿವಡೆಯದೆ ಮಾಯಾ ।
ಧಾರಿ ಗುಣಹಾರಿ ರೌರವೆ
ವಾರಿಧಿಯೊಳ್ನಲಸಿ ನಿಲ್ವ ಬಗೆಯನೆ ಬಗೆದೈ ॥ ೧೩೧

ಈರತ್ನ ಮೆಂಬುದೆಂತುಟು
ವೀರಜಿನಸ್ಮರಣೆಯಿಂದೆ ಮುಕ್ತಿಸುಖಂ ಕೈ ।
ಸಾರುಗು ಮೆಂದೊಡೆ ಗುಣದಿಂ
ಧಾರಿಣಿಯೊಳ್ ಗಹನಮುಂಟೆ ಮೆತ್ತಿನ ಸಿರಿಗಳ್ ॥ ೧೩೨

ಮತ್ತಂ "ಕಳ್ಳನೊಕ್ಕಲಾದುದಿಲ್ಲ ನಾಯಿ ಜಂಗುಳಿಯಾದುದಿಲ್ಲ" ಂಬ ನಾಣ್ಣುಡಿಯನಱಿದೆಯಿಲ್ಲಕ್ಕುಂ; ಪುಣ್ಯಮಿಲ್ಲದೆ ಬೆವಸಾಯದಿಂ [1] ಸಿರಿಯಕ್ಕುಮೆಂದೆಯಪ್ಪೊಡೆ ನೆತ್ತಿ ತಱುಂಟಾಗೆ ಪುಳ್ಳಿಯನಡಕುವೆ ಬಡವರ್ಗಂ ಬಟ್ಟೆಗಟ್ಟ ಬಡಿವೆ ಬೇಡರ್ಗಂ ಸಿರಿಯೇಕಾಗದು ನಡೆದೊಡೆ ತಡತಡಿಸುವೆ ಕುಳ್ಳಿರ್ದೊಲ್ಲೇರೊರ್ವರಂ ಮಲಗುವೆ ಕಟ್ಟಲ ಸರಪ್ಪರಸುಗಳ್ಗ ರಾಜ್ಯಶ್ರೀ ಕೈಗಣ್ಮಿ ಪೊಣ್ಮುವುದದುಕಾರಣದಿಂ ಸಿರಿಗಂ ಸೌಭಾಗ್ಯಕ್ಕಂ [ಶಾಶ್ವತಮೆಪ್ಪ ಸುಖಕ್ಕಂ] ಜಿನಪೂಜೆಯುಂ ಸುಪಾತ್ರದಾನಮುಂ ವಿಷಯಕಷಾಯನಿಗ್ರಹಮುಂ ಮಿಥ್ಯಾತ್ವಭೀತಿಯುಂ ಜೀವದಯೆಯುಂ ಮುಖ್ಯಂ ॥ ೧೩೩

ಕರಧಿಯು ನೀರಂ ನದಿಗಳ್
ಧರಿಯಿಸಲಾರ್ತಪುವೆ ತೊಱೆಯ ನೀರಂ ಕೆರೆಗಳ್ ।
ಧರಿಯಿಸಲಾರ್ಕುಮೆ ಭಾವಿಗ
ಳರಿದೆನಿಸುವ ತೊಱೆಯ ನೀರ್ಗಳಂ ತಾಳ್ದುಗುಮೇ ॥ ೧೩೪

1 ಅದರಿಂದಂ ಕಳವಿಂದಂ (ಬ. ಕ.)

ಅಂತೆ ಮಹಾಪುಣ್ಯಾಧಿಕರ್ ತಾಳ್ದುವ ಸಿರಿಯುಂ ಪುಣ್ಯಹೀನರಪ್ಪ ವೆರೇಸುಮೆನಂಕುದಿದುಂ ಮುಱುಗಿಯುಂ ತಾಳಲಾಱರರದುಕಾರಣಂ ॥

ಧರ್ಮಮೆ ನೆರಪುವುದುಂ ತ
ದ್ಧರ್ಮದಿನೆಲ್ಲಾಸುಖಂಗಳುಂ ಸಮೆನಿಸುಗುಂ ।
ಧರ್ಮಮನೇಳಿಸಿ ಬಿಟ್ಟೊಡೆ
ಕರ್ಮದಿ ನೆವನೆವದಿನಡಸುಗುಂ ಕಡುದುಃಖಂ । ೧೫೬

[ಲಲನೆಯುರೊಲ್ಲದೊಡಂ ಸಿರಿ
ತೊಲಗಿದೊಡಂ ಪೋಗದಟ್ಟ ಕುತ್ತಂ ತನ್ನೊಳ್ ।
ನೆಲಸಿದೊಡಮೆಂತು ಮುನ್ನಿನ
ಕೊಲೆಯಲೆದಪುದೆಂದು ಮುಱುಗುವವೆರಂ ಕಾಣಾ ॥ ೧೫೭

ವನಿತೆಯು ಮೋಹದಿಂ ಸುತರ ಮೋಹದಿನಿಷ್ಟರೊಳಾದ ಮೋಹದಿಂ
ಧನಮೆನುಪಾರ್ಜಿಸಲ್ಮಱುಗುವಂ ಕಳವಿಂ ಧನಲಾಭಮಾದೊಡಾ
ವನಿತೆಯುಮಿಷ್ಟರುಂ ಸುತರುಮೊಣ್ಬೆಡೆಯೊಳ್ ಪುದುಗಳ್ಳನೆಂದು ಭೋಂ
ಕನೆ ಕಡಿದಿಕ್ಕೆ ಪೆರ್ದೆಸೆಯೊಳಲ್ಲಿದವೆರ್ಪುದುವಾಗಳಾರ್ಪರೇ ॥ ೧೫೮

ಆದಱಿಂ ಪೆಱರ್ಪೆಱರೆ ತಾಂ ತನಗೆಂದು ನಡುಗಿ ಪಾಪಭೀರುವೆ
ಪ್ಪದುಂ ॥ ೧೫೯

ಕಡುಗಾಯ್ದ ಪಾರೆಯೆಂತುಂ
ಸುಡಲಱಿಯದು ಸತ್ಯಮುಳ್ಳನಂ ಪುಸಿವೆವನಂ ।
ಸುಡುವುದದಱಿಂದೆ ಸತ್ಯಮು
ನುಡಿವನೆ ಸುಖಿ ಕೇಳ ದುಃಖಿ ತಾಂ ಪುಸಿವಾತಂ ॥ ೧೬೦

ಆದುಕಾರಣದಿಂ ಅಸತ್ಯಮೆ ದುಃಖಕ್ಕೆ ಕಾರಣಮೆಂದು ನಂಬಿ ಪುಸಿಯಂ ಬಿಡುವುದು ॥ ೧೬೧

ಅರವೆರಿಸದೆ ಪಲರುಂ ಪಾ
ದರಿಗನಿವಂ ಕಷ್ಟನೆಂದು ಕುಜಿಯಂ ಕೊಳ್ವಂ ।
ತಿರೆ ಕೊಂದು ಪೊಲೆಯರಿಂ ಚೆ
ಚ್ಚರವೆಟ್ಟಿಸುವರಟ್ಟ ದೂಱುವರ್ಪರ್ವರ್ಡಿಯೊಳ್ ॥ ೧೪೦

ಆದುಕಾರಣದಿಂದಂ ಮೆಹಾದುಃಖಕ್ಕೆ ಪಾರದಾರನೆ ಮೊದಲೆಂದು
ಬೆರ್ಚಿ ಪರಸ್ತ್ರೀಯರಂ ತಾಯುಂ ಕಾಣ್ಬಂತೆ ಕಾಣ್ಬುದು ॥ ೧೪೧

ಜಿನಪತಿಯುಂ ಪೂಜಿಸದೊ
ಯ್ಯನೆ ಪಂಚಾಣುವ್ರತಂಗಳಂ ತಾಳ್ದದೆ ಕೆಂ ।
ಮನೆ ದೇವಲೋಕಸುಖಮಂ
ಮನದೊಳ್ ಪಂಬಲಿಸಿ ಮಱುಗಲೇಂ ಸಮನಿಕುಮೇ ॥ ೧೪೨

ಎನಗೆ ಸುಖಮಾಗವೇಱ್ಕೆಂ
ದನವರತಂ ಬಯಸುತಿರ್ಪ ಮೆನುಜಂ ಜಿನನಾ ।
ಥನನರ್ಚಿಸುವುದು ಮನದೊಳ್
ಜಿನಪದಮಂ ನೆನೆಯುತಿರ್ಪುದಿರುಳುಂ ಪಗಲುಂ ॥ ೧೪೩

ಜಿನರಂ ಪೂಜಿಸಿದವರೇಂ
ದ್ರನ ಸುಖಮಂ ಖೇಚರೇಂದ್ರನತ್ಯುನ್ನತಿಯಂ ।
ಮನುಜೇಂದ್ರನ ವಿಭವಮೆನಾ
ವನಾದೊಡಂ ಬಯಸಿ ಮಱುಗಿದೊಡೆ ಕೊಂಡಪುದೇ ॥ ೧೪೪

ಮುದದಾನೆಯನೇಱಿ ಮೆನೋ
ಮುದದಿಂ ಚಾಮರಮನಿಕ್ಕೆ ದಿವ್ಯಾಂಗನೆಯ ।
ರ್ವಿದಿತಂ ಬರ್ಪುದನೊಲ್ವೊಡೆ
ಮುದನಾರಿಯ ಪಾದಪದ್ಮಮಂ ನೆನೆ ಮನದೊಳ್ ॥ ೧೪೫

ದಾನಚತುಷ್ಟಯಮೆಂ ಮನೆ
ದಾನಂದಂಬೆರಸು ಮಾಡದಳಿಪಿಂ ಸುಖಮೆಂ ।
ಹೀನಬ-ಯಸುತುಮಿರ್ದಂ
ತೇನಾಸುಖಮಿದಿರೊಳಿರ್ದ ಕೊಗ್ಗಯ್ಯ ಜೇನೇಂ ॥ ೧೪೪

ಮನಮೊಸೆದನ್ನ ಮನುತ್ತಮೆ
ನೆನಿಸುವ ಜಿನಮುನಿಗೆ ಕುಡದೆ ಬಯಸಿ ಜಿನೇಂದ್ರಾ ।
ರ್ಚನೆಯಂ ಮಾಡದೆ ಸುಖಮೆಂ
ಮನದೊಳ್ ಬಯಸಿದೊಡೆ ಕೂಡಲಱಿಗುಮೆ ಧರೆಯೊಳ್ ॥ ೧೪೫

ಶೀಲವ್ರತಮೆಂ ತಾಳ್ದದೆ
ಮೇಲೆನಿಸುವ ಪಾತ್ರದಾನಮೆಂ ಮಾಡದೆ ಸ ।
ಲ್ಲೀಲೆಯಿನಿಂದ್ರನ ಸಿರಿಯಂ
ಪೂಲಿಸಲೆಲೆ ಮರುಳ ಬಾರದವನೀತಳದೊಳ್ ॥ ೧೪೬

ಜಳನಿಧಿಪರಿವೈತಧಾತ್ರೀ
ತಳಮೆಂ ಬೆಸಕೈಸಿಕೊಳ್ವಾಡಂ ಕಪ್ಪುರದಂ ।
ಟುಲಮೆಂ ಮಾಣದೆ ಮೆಲ್ವಾಡ
ಮೊಳಪಿಲ್ಲದೆ ಪೂಜಿಸಿಂದ್ರವಂದ್ಯನ ಪದಮೆಂ ॥ ೧೪೭

ಸ್ಮರಸುಖಮೆಂ ಸಲಿಸುವ ಸೌಂ
ದರಿಯರೊಳೂಡಗೂಡಿ ಲೀಲೆಯಿಂದಿರ್ದೊಡಮೆಂ ।
ಬರಚರರಾಜ್ಯಶ್ರೀಯಂ
ಧರಿಯಿಸುವೊಡಮುಲಸದರ್ಚಿಸರ್ಹತ್ಪದಮೆಂ ॥ ೧೪೮

ಎಂದುಂ ದುಃಖಮೆನಱಿಯದೆ
ನಂದನರೊಳ್ ಸಕಲಮಿತ್ರರೊಳ್ ಬಾಂಧವರೊಳ್ ।
ತಂದೆಯೊಳಚ್ಚಿಯೊಳೂಡನೋ
ತೊಂದಿರ್ದೊಡೆ ಪೂಜಿಸಾಗಳುಂ ಜಿನಪದಮೆಂ ॥ ೧೪೯

ಮೆಲಯಜಮಂ ಪೂಸಿ ತಳ
ತ್ತಳಿಸುವ ಚೆಂಬೊನ್ನ ರತ್ನದಾಭರಣಮೆನು ।
ಜ್ಜ್ವಳಮಾಗೆ ತೊಟ್ಟು ಸುಖವಿರ
ಲೆಳಸುವೊಡಂತನ್ನದಾನಮಂ ಮಾಡೊಳ್ಪಂ ॥ ೧೫೪

ಚೀನಮಹಾಚೀನಂಗಳ
ನಾನಂದದಿನುಟ್ಟು ಪೂಸಿ ಪೊಸಕತ್ತುರಿಯಂ ।
ಮಾನವರೊಳಧಿಕಮೆನಿಸುವೊ
ಡಾನಂದದಿನೊಸೆದು ಪೂಜಿಸರ್ಹತ್ಪದಮಂ ॥ ೧೫೫

ತನ್ನಂ ತಪದಿಂ ನೋಯಿಸ
ದುನ್ನತಿಯುಂ ದಿವ್ಯಭೋಗಮಂ ಬಯಸುವ ಗಾಂ ।
ಪಂ ನೆಱೆ ಪೋಲ್ಕುಂ ಸಾಲಿಸ
ದಿನ್ನಳಪಿಂ ಬಡ್ಡಿವೇಡಿ ಮಱುಗುವ ಮರುಳಂ ॥ ೧೫೬

ಜಿನಮತಮಂ ಪೊರ್ದದೆ ಜಿನ
ಮುನಿಗನ್ನಮನಿಕ್ಕಿ ಧವಳಜೈನಾಗಮಮಂ ।
ಮನದೊಳ್ ನಂಬದೆ ದೇವೇ
ಶನ ಚಕ್ರೇಶ್ವರನ ಸಿರಿಗೆ ಮೆಱುಗಿದೊಡುಂಟೇ] ॥ ೧೫೭

ತರುಣಿಯರಿಕ್ಕೆ ಚಾಮರಮನಿರ್ಕೆಲದೊಳ್ ಕಡುಶೋಭೆವೆತ್ತು ಕು
ಳ್ಳಿರೆ ನೃಪರುಂ ಮನೋಹರೆಯರುಂ ಬುಧರುಂ ಭಟರುಂ ಕವಿವಾದರುಂ
ಬಿರುದರುಮರ್ತಿಯಿಂ ಬಿಡದೆ ಕಟ್ಟಿಗಹಾಱುಫೇಯುಫೇಯೆನು
ತ್ತಿರೆ ನೃಪಲೀಲೆಯಂ ಪಡೆವೆನೆಂಬೊಡೆ ಪೊರ್ದು ಜಿನೇಂದ್ರಧರ್ಮಮಂ ॥

ಸುರುಚಿರಮಪ್ಪ ರತ್ನಚಯದಿಂದೆಸೆದೊಪ್ಪುವ ದಿವ್ಯಸಿಂಹವಿ
ಷ್ಟರದೊಳಗುರ್ವಿನಿಂ ನೆಲಸಿ ರಾಜಕುಮಾರರ ಮೇಲೆ ನೀಡಿ ಕೈ

ಯಿರಡುಮನಳ್ಕುಱುಂ ಮನಕೆ ಬಂದ ವಿದಗ್ಧೆಯರೊಂದುರೂಪಿನ
ಚ್ಚರಿಯನೆ [1] ನೋಡುತಿರ್ದ ಮನಮುಳ್ಕೊಡೆ ಪೊರ್ದು ಜಿನೇಂದ್ರಧರ್ಮ
ಮಂ ॥ ೧೫೯

ಕರಿಸಿಕುರಂಬದಿಂ ಹಯನಿಕಾಯದಿನುದ್ಭಟಕೋಟಿಯಿಂ ನೆಲಂ
ಬಿರಿಯಿನಮೆತ್ತಲುಂ ನೆರೆದು ನಂದನದಂತಿರೆ ಛತ್ರರಾಜಿ ತ
ಳ್ತಿರೆ ಲವಣಾಬ್ಧಿಯಂತೆ ಪಡೆ ಘೂರ್ಣಿಸೆ ವಾಸವನಂತೆ ರಾಗದಿಂ
ಸ್ಥಿರತರಮಪ್ಪೆನೆಂಬ ಮನಮುಳ್ಕೊಡೆ ಪೊರ್ದು ಜಿನೇಂದ್ರಧರ್ಮಮಂ ॥

ಇನಿಯುಳವೀಲೆ ಕಾಮಸುಖಮಂ ಕೊಳಲೆಂದು ಮಲಂಗಿ ಮೆಲ್ಲನಾ
ನನವನಜಾತಮಂ ಕುರುಳವಂಶಿಗಳಂ ಪೊಳವೆಕ್ಷಿಯುಗ್ಮಮಂ
ಕನಕಘಟೋಪಮಸ್ತನಯುಗಂಗಳನೀಕ್ಷಿಸುತುಂ ವಿನೋದದಿಂ
ಮನಮೊಸೆದಿರ್ಪೆನೆಂಬ ಮನಮುಳ್ಕೊಡೆ ಪೊರ್ದು ಜಿನೇಂದ್ರಧರ್ಮ
ಮಂ ॥ ೧೬೦

ಪವಪಿಸೊಳೀಱುವೆಂ ಸುರಗಜೇಂದ್ರಮನಿರ್ಪೆನನಂತಸೌಖ್ಯದೊ
ಳ್ಪಾದಿದಮರಾವಳೀಪುರದೊಳಾದರದಿಂ ಬೆಸಕೈಸಿಕೊಳ್ವನೊ
ಳ್ಪೊರ್ದಲೊಳ ದೇವಸಂಕುಲಮನುರ್ವಶಿಯೊಳ್ನಲ್ವೆಂ ದಿನಕ್ಕೆ ನಾಂ
ವೊವಲಿಗನಪ್ಪೆನೆಂಬ ಮನಮುಳ್ಕೊಡೆ ಪೊರ್ದು ಜಿನೇಂದ್ರಧರ್ಮಮಂ ॥

ಒಡನೆ ಸುರಾಳಿ ದೇವೆ ಬೆಸನಾವುದು ಜೀಯ ಮಹಾಪ್ರಸಾದ ನಿ
ಮ್ಮೊಡಿ ಬೆಸಸೆಂದು ಮುಂದಿರೆ ಸುರಾಂಗನೆಯರ್ಚಪಳಾಕ್ಷಿಯರ್ಮನಂ
ಬಿಡೆ ಮೃದುವಪ್ಪ ಮುದ್ದನುಡಿಯಿಂ ಸ್ಮರರಾಜನ ಬಯ್ಕೆಯರ್ಥಮಂ
ಕುಡೆ ಸುಖಮಿರ್ಪೆನೆಂಬ ಮನಮುಳ್ಕೊಡೆ ಪೊರ್ದು ಜಿನೇಂದ್ರಧರ್ಮ
ಮಂ ॥೧೬೨

ಸುರಕುಜಮೊಗಳುಂ ಬಗೆದ ವಸ್ತುವನೀಯೆ ಮರುನ್ನಿಕಾಯವೊ
ಪ್ಪಿರೆ ನಲಿದಾಗಳುಂ ಬಿಡದೆ ಪೊರ್ದಿ ಮರುಲ್ಲಲಿತಾಂಗಿಯರ್ನಿಜಾ
ದರದೊಳ ಮೆಚ್ಚು ವಿಚ್ಛೆಗಳನಚ್ಚರಿಯಾಗಿರೆ ಕೂಡಿ ಭೋಗಿಪಂ
ನಿರ್ಮಿತಮವೊಕ್ಷಮೆಂಬ ಮನಮುಳ್ಕೊಡೆ ಪೊರ್ದು ಜಿನೇಂದ್ರಧರ್ಮ
ಮಂ ॥ ೧೬೩

---

1 ರೂಪನಚ್ಚರಿವಡೆ (ಕ. ಬ.)

ತನುಸೋಂಕಿಂ ಸೋಂಕಿ ಸೋಲಂಬೆರಸು ವರಕಟಾಹ್ಷಂಗಳಿಂ ನೋಡಿ ವೋಹಂ
ಮನದೊಳ್ಕೃಗಣ್ಮೆ ಕೈಯಂ ಪಿಡಿದು ನೊಸಲವೇಲಿಟ್ಟುಕೊಂಡಲ್ಕುರಿಂ ಚೊ
ಮ್ಮನೆ ಜೋಲ್ದಂತಪ್ಪಿಕೊಂಡೊಯ್ಯನೆ ಸುರತದೊಳಾಹ್ಲಾದಮೆಂ ಮೂಜ್ಜಿ ದೇವಾಂ
ಗನೆಯರ್ಗಿನ್ನೆಣ್ಣ ನೀನಾಟಿಸುವೊಡೆ ಜಿನನಂ ಪೂಜಿಸುತ್ತಾಹದಿಂದಂ ॥

ಮತ್ತಂ ಚಂದನಕಾಶ್ಮೀರಕರ್ಪೂರಾದಿಸುಗಂಧದ್ರವ್ಯಂಗಳಂ ಪೂಸುವೆನೆಂಬ ಚಿತ್ತಮುಳ್ಳೊಡಂ, ಚೀನಮಹಾಚೀನದುಕೂಲಾದಿವಸ್ತ್ರಂಗಳನುಡುವೆನೆಂಬ ಮನಮುಳ್ಳೊಡಂ, ಹಾರಕೇಯೂರಕಟಕಕಟಿಸೂತ್ರ ಕುಂಡಲರತ್ನಮುದ್ರಿಕಾಮುಕುಟಾದ್ಯಾಭರಣಂಗಳಂ ತೊಡುವೆನೆಂಬ ವೋಹಮುಳ್ಳೊಡಂ, ಕಲ್ಯಾಣಕರಾಮೃತಾಹಾರಂಗಳನಾರೋಗಿಸುವೆನೆಂಬಭಿಲಾಷೆಯುಳ್ಳೊಡಂ, ಮೃದುಶಯ್ಯಾತಲದೊಳೂಜುಗುವೆನೆಂಬಿಚ್ಛೆಯುಳ್ಳೊಡಂ, ಭೂಗೋಪಭೋಗಂಗಳನನವರತಮನುಭವಿಸುವೆನೆಂಬ ಬಗೆಯುಳ್ಳೊಡಂ, ಅರ್ಹದ್ಭಕ್ತರಣಂಗಳಂ ಮನದರ್ತಿಯಿಂ ಪೂಜಿಸಲುಂ ಸಕಲಶಾಸ್ತ್ರದಾನಮನುತ್ಸಾಹದಿಂ ಮಾಡಲುಂ ಸುಪಾತ್ರಕನ್ನಮನಲಸದೀಯಲುಂ ಚಾತುರ್ವರ್ಣ್ಯಕ್ಕೆ ರೋಗಾಪಹಾರಾರ್ಥಮೌಷಧದಾನಮುಂ ಮಾಡಲುಂ ಸಮಸ್ತಜೀವರಾಶಿಗಳ್ಗಭಯದಾನಮನೆಸೇಳದಂಗೆಯ್ಯದೆ ಮಾಡಲುಂ ಸುಖಮನೆಯುದ್ದುಗುಮೆಲ್ಲದೆನಿಸು [1] ಕುದಿದೊಡಂ ಕಳ್ದೊಡಂ ನೆಲನಂ ಪೊಕ್ಕೊಡು [2] ಭೈರವಂ ಬೈದೊಡಂ [ಬಾಯಂ ಬಿಟ್ಟೊಡಂ] ಬಡಿದುಕೊಂಡೊಡಂ ದ್ರವ್ಯಮುಳ್ಳರಂ ಪೊರ್ದಿದೊಡಂ ಕಮ್ಮರಿವಾಯ್ದೊಡಂ ಮೊಳೆಯಿಟ್ಟೊಡಂ [3] ದೊರೆಕೊಳ್ಳದು ॥ ೧೬೬

---

1 ಕುಲುವುದಲುವುದಲ್ಲದಂತು ಸುಖವೆನಿಸು (ಕ. ಬ.)

2 ಮುಳಿಬಟ್ಟೊಡಂ, ಪಲವು ದೈವಕ್ಕೆ ಪರಸಿದೊಡಂ, ತನ್ನನಿಕ್ಕಿದೊಡಂ, ನಂಟರ ಸಂಗೆಯಾಡಿ ತಿನಿಸು ಕೊಂಡೊಡಂ ರಣವೆಳಿಸಿದೊಡಂ ಬಿಟ್ಟಯಂ ಬಯ್ದೊಡಂ ತಲೆಯನೂಳಿಯಿದೊಡಂ ಬಾಯಂ ಬಿಟ್ಟೊಡಂ (ಗ)

3 ಬಂದಿನಿಸಿದಡಂ ಪೆಗೆಳಿಟ್ಟೊಡಂ ಬೇವ ಕಿಚ್ಚಿನೊಳುಬಿದ್ದೊಡಂ ಕೂಗಿಟ್ಟೊಡಮೆಂತುಂ (ಗ.

ಅದುಕಾರಣದಿಂ ಸುಖದೊಳ್
ಪದುಳಂ ನೆಲಸಿರ್ದೆನೆಂಬ ಮನಮುಳ್ಳೊಡೆ ಮಾ ।
ಱುದು ದಾನಪೂಜೆಯೆಂಬುದ
ನೊದವಿದ ಮನದೆಱಿಕದಿಂದವೋರಂತಱಿವಂ ॥ ೧೬೭

ಕೆಮ್ಮನೆ ಪಾಪಹೇತುಗಳೊಳೊಡರ್ದು ಪರತ್ರೆಯೊಳ್ ಸುಖಮುಂ ಬಯಸುವಾತಂ ಜೋಳಮಂ ಬಿತ್ತಿ ಕಳವೆಯಂ ಬಯಸುವೆಗ್ಗನುಮಂ ಬೇವಿನಾರವೆಯನಿಟ್ಟು ಮಾವಿನ ಪಣ್ಣನಱಿಸುವ ಗಾವಿಲನುಮಂ ಕೋಣನಂ ಪೊರೆದು ಪಾಲನಱಿಸುವ ಗಾಂಪನುಮೆಂ ಬಿಡದುಯ್ಯಂ ಕುಟ್ಟಿ ಪದೆದಕ್ಕಿಯನಱಿಸುವ ಬೆಳ್ಪನುಮೆಂ ಮೆಳಲಂ ಪಿಱಿದೆಣ್ಣೆಯನಱಿಸುವ ನಿರ್ಬುದ್ಧಿಯುಮೆಂ ಪೋಲ್ಕುಮಿಂತು ॥ ೧೬೮

ಪಡೆವೆಂ ಮೋಕ್ಷಮೆನೆಂಬೊಡೆ
ಕಡೆಗಣಿಸದೆ ಮೂಡು ಧರ್ಮಮಂ ದೂರ್ತಿಂದಂ ।
ಬಡಿದುಂ ಬೈದುಂ ಕಳ್ದಂ
ಪಡೆವಂತಿರೆ ಮುಕ್ತಿ ಮರುಳ ಬಡವನ ಧನಮೇ ॥ ೧೬೯

ಜಿನಪತಿಗೆಱಗದೆ ಬಲ್ಲಾ
ತ್ಮನದಿಂದಂ ಮಾಡಿಕೊಳ್ವೆನೆಂಬೊಡೆ ಸುಖಮುಂ ।
ತನಗದು ವೊಗ್ಗಾದುದೆ ಮಾ
ವಿನ ಪಣ್ಣೀಂ ದೋಟಿಯಿಕ್ಕಿ ತೆಗೆವಂತೆ ಸುಖಂ ॥ ೧೭೦

ಬಲವಿಂ ಪಾತ್ರಕ್ಕನ್ನಮ
ನಲಸದೆ ಕುಡದದಟನಾಗಿ ಪಡೆವಂತೆ ಸುಖಂ ।
ಸಲೆ ವೊಗ್ಗಾದುದೆ ಭಾವಿಪೊ
ಡೆಲೆಗಳ ನುರ್ಚಿಂಗೆ ಕೊಳ್ವ ತುಂಬೆಯ [1] ಬಾಡೇ ॥ ೧೭೧

---

[1] ತುಂಬಿಯ (ಗ)

ಜಿನಪತಿಗೆಱಗದೆ ಮುನಿಗ
ಳ್ಗನವರತಂ ಭಕ್ತಿವೆರಸು ಬೆಸಕೆಯ್ಯದೆ ಕೆಂ ।
ಮನೆ ತೊನೆದು ಮಾಣದರಸಾ
ಳ್ತನದಿಂ ಪುಗುವಂತು ದೇವಗತಿ ಪಾಪ್ಮನೆಯೇ ॥ ೧೭೦

ಎನಿತುತಾಳಮುರನನೇಱಿದೊಡಂ ತಲೆಗೆ ಕಾಲ್ಕಳಗೆಂಬಂತೆ ಧರ್ಮದರಿದ್ರಂಗವೆನಿಸು ಕುದಿದೊಡಂ ದುಃಖಮೆಕ್ಕುವುಲ್ಲದೆ ಸುಖ ಮೊಗಲಱಿಯದು ॥ ೧೭೧

ಪರಮಜಿನೇಶ್ವರಂ ಮುನಿ
ವರರಂ ಪೂಜಿಸದೆ ಬಿಟ್ಟು ಕಳನಂ ಪುಗುವಂ ।
ತಿರೆ ವೀರವೃತ್ತಿಯಿಂದಂ
ಸುರಲೋಕಮನಣ್ಣ ರಂಡೆಯಾಳ್ದಪಳಲ್ಲಳ್ ॥ ೧೭೪

ಮತ್ತಂ ಕರ್ಮಫಲಮಂ ಪೇಱೆ್ವಾಡೆ, ಕರಟದ ಕದಿರಂತೆ ತಿರ್ಯಗ್ಗತಿಯೊಳ್ ತಿಱ್ಱನೆ ತಿರಿದುಂ, ಕಡಗೋಲಂತೆ ಸುಖಾಸುಖಂಗಳಂ ಸೂಱ್ಪೊಪೊಳ್ತನುಷ್ಯಭವದೊಳಾಂತುಂ, ಕೆರಕಂ ತುಱಿಸುವಂತೆತ್ತಾನುಮೊನೆ್ಮ ರಾಜ್ಯಲೀಲೆಯೊಳಿರ್ದುಂ, ತಿರಿದುಂಬರಂತೆ ಪಲವುಭವಕೆ್ಕಮೆ್ಮ ಕರ್ಮೋದಯವದಿಂ ದೇವಲೋಕದೊಳಾದ ಸುಖಮನನುಭವಿಸಿಯುಂ, ಗಾಣದೊಳಕ್ಕಿದ ಕಬ್ಬಿನಂತೆ ನರಕದೊಳ್ ದುಃಖಂಬಟ್ಟುಂ, ಬೇಸಗೆಯ ಬಿಸಿಲ್ಗಂಜಿ ಬೆಯ್ವ ಮರನಂ ಪೊರ್ದುವಂತಾನುಂ ಕರಡಿಗಂಜಿ ಪುಲಿಯ ಗುಹೆಯಂ ಪುಗುವಂತಾನುಂ ಬೆಲ್ಲದ ಮೋಹಕ್ಕೆ ಸುರಗಿಯ ಬಾಯ ಧಾರೆಯಂ ನೆಕ್ಕುವಂತಾನುಂ ಕಳ್ಳಂಗಂಜಿ ಬೇಡವಳ್ಳಿಯಂ ಪುಗುವಂತಾನುಂ ತೇಟಿಂಗಂಜಿ ಕಡಂದುಱುಗೂಡುಂ ಪುಗುವಂತಾನು ಪುಲಿಗಂಜಿ ಪುತ್ತವೇಱುವಂತಾನುಂ [ರಕ್ಕಸಿಗಂಜಿ ನೆಗಱುಳ್ಳ ಮಡುವಂ ಪುಗುವಂತಾನುಂ] ಸಂಸಾರದೊಳ್ತಾದ ಬಡತನದ ಕುತ್ತದ ತಿರಿಗುತ್ತವ ರಾಜಬಾಧೆಯ ನಂಟರಗಲ್ಕೆಯ [ತೆಱೆಯ ಪೊಱೆಯ] ಸೀತದ ವಾತದ ಬಿಸಿಲ ಕಳ್ಳರ ಬಂದಿಕಾಱರ ಪಿಸುಣರ ಧೂರ್ತರ ದೆಸೆ

ಯಿಂದಪ್ಪ ಪೀಡೆಯ ಸಾವಿನ ನೋವಿನ ಧನದಹರಣದ ಪೆಂಡಿರೊಳ್ಮೆಯ
ಪುರುಡಿಸ ಪಸಿವಿನ ಮುಪ್ಪಿನ ಪಿರಿದಪ್ಪವಮೊನೆದ ಮಹಾದುಃಖಮಂ
ಕಂಡು, ಮತ್ತುಂ ಮೂಡಿಗೆ ಜೋಳಯ ತೆಲ್ಲಟಿಯೆಂಬ ನಾಲ್ಕು ವಿಯುಂತೆ
ಪಾಪಮೆನೆ ಪೆರ್ಚಿಸಿ ಸತ್ತು ನರಕದೊಳಾದ ಮಹಾದುಃಖವೆಂಬುಗ್ಗಿಗೆ
ತಮ್ಮ ಶರೀರಮೆಂಬ ಪುಳ್ಳಿಗಳನಿಕ್ಕುವರದೇಂ ಸಾಸಿಗರೋ ॥ ೧೫೫

ಪೊತ್ತಿದ ನತ್ತಿಗೆ ಕಾಣಬೆ
ತುತ್ತಿಲ್ಲದೆ ಬಡಿಯೆ ಜಡಿಯೆ ಕಂಡವರೆಲ್ಲಂ ।
ಚಿತೆತ್ತೋತ್ಸಾಹಂಗಿಡುವ
ರ್ಮತ್ತೆನಿಸದೆ ಜೈನಪೂಜೆಯಂ ಕಿಡಿಸಿದವರ್ ॥ ೧೫೬

ಕಯ್ಯೋಱದೆ ಕಾಲೇಱದೆ
ಮೆಯ್ಯೆಲ್ಲಂ ತೊನ್ನುಗೊಂಡು ದುಃಖಂಬಟ್ಟೋ ।
ವೊಯ್ಯೆಂದೊಳಮುತ್ತಿರ್ಪರ್
ಚಯರ್ಗಾದಿಜಿನೇಂದ್ರಧರ್ಮಮಂ ಪಱದವರ್ಗಳ್ ॥ ೧೫೭

ಉಣಲಿಲ್ಲದೆ ಪಸಿವಿಂ ಬಾ
ಬಲಬಾಡಿ ಮಹಾಕ್ಷುಧಾಗ್ನಿಯಿಂದಂ ಪಿಱಿರಂ ।
ಗಣದೊಳ್ ಕುಳ್ಳಿರ್ದರ್ಥಾ
ರ್ಥಿಯೊಳ್ ಮುನ್ನನ್ನದಾನಮಂ ಕಿಡಿಸಿದವರ್ ॥ ೧೫೮

ಏಕಾಕ್ಷರಾಗಿ ಮೊಣದ
ನೇಕವ್ಯಾಧಿಗಳೊಳಾಂದಿತೊನ್ನಿಂದಂ ತ ।
ಮ್ಮಾಕಾರಂಗೆಟ್ಟು ಮಹಾ
ಕೋಕಾನ್ವಿತರಪ್ಪರಮಳಪೂಜೆಯನಱದರ್ ॥ ೧೫೯

ಮೊಂಟಾಗಿ ಕೈಗಳರಡುಂ
ಗೆಂಟಾಗಿರೆ ತನಗೆ ಸಿರಿಯು ಕೂಟಿಂ ಕೊಲುಂ ।
ಕುಂಟಾಗಿ ನಮೆಯುತಿರ್ಪ
ರ್ಟೆಂಟಱಿಸಿ ಮಹಾತಪಂಗಳಂ ಕಿಡಿಸಿದವರ್ ॥ ೧೬೦

ಕ-ೆಿತಾಗೆ ಕಣ್ಗಳೆರಡುಂ
ಚರಣಂಗಳೆ ಪಱದು ಬೀಡೆ ತೊನ್ನಿಂದಂ ವೈ ।
ಳರಗಿ ಕಡುದುಃಖದಿಂದಂ
ತಿರಿವೆರ್ದಾನಾಂತರಾಯಮುಂ ಮೊಡಿದವರ್ ॥ ೧೪೧

ನುಡಿವೊಡೆ ನಾಲಗೆ ಪೊರಳದೆ
ಕಿಡುಗುಂ ನೆಱೆ ಮೂಗನಾಗಿ ನಮಿಗುಂ ನಯಮೆಂ ।
ನುಡಿದೊಡಮೆದು ಕೊಂಕಕ್ಕುಂ
ಜಡಿವೆರ್ಪಿಱರೋದಿನಂತರಾಯದ ಫಲದಿಂ ॥ ೧೪೨

[ಬಗೆದದು ಕೂಡದು ಕೂಡಿದ
ಬಗೆಯುಂ ಕಿಡುಗೇನನೆಂದೊಡಂ ಕಡುಗಜಪಂ ।
ಜಗದೊಳವನೆಂವು ನೂಂಕುವೆ
ರಗಣಿತಶ.ಸ್ತ್ರಾಂತರಾಯಕರ್ಮೆಂದ ಫಲದಿಂ ॥ ೧೪೩

ಸಿರಿಯೆಲ್ಲಂ ಮಂಜಿನವೋಲ್
ಕರಗುಗು ಕಡುದುಃಖವೊರ್ಮೆಗೊರ್ಮೆಗೆ ಕರಮು ।
ಬ್ಬರಮಕ್ಕುಂ ತಿರಿದೊಡೆ ಕೂಪ್
ದೊರೆಕೊಳ್ಳದು ಪೂಜೆಯಂತರಾಯದ ಫಲದಿಂ ॥] ೧೪೪

ತರುವಲಿಯಾಗಿರ್ದರ್ನಿ
ಷ್ಠುರದುಃಖಮೆನೆಯ್ದುವೆರ್ದರಿದ್ರತೆಯಿಂದಂ ।
ಪಿರಿದಪ್ಪ ನೋವನೆಯ್ದುವೆ
ರೆರಡಿಲ್ಲವೆ ದಾನದರ್ಥಮಂ ಕಳ್ದವರ್ಗಳ್ ॥ ೧೪೫

ಸ್ಮರತಾಪಮೊವವೆ ಭೋಗಾಂ
ತರಮೆಕ್ಕುಂ ನೋಡೆ ಕಂಡರೆಲ್ಲಂ ಕಾಯ್ವರ್ ।
ತಿರಿದುಣ್ಬರ್ಮ ಅನುಭವದೊಳ್
ಕರಮೆಲ್ಲದೆ ಪೂಜೆಯರ್ಥಮಂ ಕಳ್ದವರ್ಗಳ್ ॥ ೧೪೬

ನಾಯುಂಗಿ ಪುಟ್ಟುತು ಕಂಡ
ಪ್ರೋಯೆಂದಿಡೆ ಬೆಂದು ನೊಂದು ದುಃಖಾನಲನಿಂ ।
ಬಾಯಂ ಬಿಟ್ಟರದೆಲ್ಲಿಯುಂ
ಮಾಯಾಸಂಬಡುವೆರಳಸಮನ್ವಿತರಪ್ಪರ್ ॥ ೧೪೭

ಮತ್ತಂ ಮೋಯಾವಿ ನಾಯುಂಗಿಯುಂ ಮಹಾಮೋಯಾವಿ ವೊಲ ನಾಗಿಯುಂ ಕೋಪಿ ಪುಲಿಯುಂಗಿಯುಂ ಮಹಾಕೋಪಿ ಸಿಂಹನಾಗಿಯುಂ ಲೋಭಿಯೆಯುಯ್ಯಾಗಿಯುಂ ಮಹಾಲೋಭಿ ಚಮರೀಮೃಗವಾಗಿಯುಂ ಮಾನಕಷಾಯಿ ಮಿಾನಾಗಿಯುಂ ಮಹಾಮಾನಕಷಾಯಿ ಪಾವಾಗಿ ಯುಂ [ರೌದ್ರಂ ಭೇರುಂಡನಾಗಿಯುಂ ಮಹಾರೌದ್ರ ರಭಸನಾಗಿಯುಂ ಗುಣದೂಷಕಂ ಪಂದಿಯಾಗಿಯುಂ ಕುಮೋರ್ಗಾನುರಾಗಿ ಕೋಳಿಯಾ ಗಿಯುಂ ಸದ್ಧರ್ಮದ್ವೇಷಿ ಪುಲ್ಲೆಯಾಗಿಯುಂ ಜಾತಿಮೆಡಪುಳ್ಳಂ ಬೆಕ್ಕಾಗಿಯುಂ ವಿದ್ಯಾಮೆದಮುಳ್ಳಂ ಗೂಗೆಯಾಗಿಯುಂ] ತಪೋಮೆದ ಮುಳ್ಳಂ ನಾಯಾಗಿಯುಂ ಶ್ರೀಮೆದಮುಳ್ಳಂ ವೊಸಳೆಯಾಗಿಯುಂ ರೂಪಮೆದಮುಳ್ಳಂ ಕಪ್ಪೆಯಾಗಿಯುಂ ಆಜ್ಞಾಮೆದಮುಳ್ಳಂ ತೇರಜೆ ಯಾಗಿಯುಂ ಪುಸಿಯುಳ್ಳಂ ಕರಡಿಯಾಗಿಯುಂ ಹಿಂಸಾನಂದಮುಳ್ಳಂ ಕುಱಿಯಾಗಿಯುಂ ಕಳವಿನೊಳ್ವ್ಯಾಸನಮುಳ್ಳವನೆತ್ತಾಗಿಯುಂ ಪರವಧೂ ಪ್ರಿಯಚಿತ್ತಂ ಕುದುರೆಯಾಗಿಯುಂ ಸಪ್ತವ್ಯಸನೋಪೇತಂ ಸೀನಾ ಯಾಗಿಯುಂ ದುರ್ಗುಣಪಕ್ಷಪಾತಿ ಗಿಡುಗನಾಗಿಯುಂ ಪುಟ್ಟಿ ಪೇಱಿನ ಮೇಲೆ ಕರಡೆಯೆಂಬಂತೆ ಪಿರಿದಪ್ಪ ಪಾಪಮೆಂ ನೆರಪಿ ನರಕದೊಳ್ ಪುಟ್ಟಿ ಪಲಕಾಲಂ ಸೈರಿಸಲ್ಬಾರದ ಮಹಾದುಃಖಕ್ಕೆ ಭಾಜನರಪ್ಪರ್ ॥ ೧೪೮

[ಛುಱ್ಱಿಂದೆಣ್ಣೆಯೊಳಿಕ್ಕಿಯುಂ ತ್ವರಿತದಿಂ ಕೈಗಾಯದೋರೊರ್ವರಂ
ಗಿಱ್ಱಿಂದಾರ್ದಿರಿಗಿ ಬಂದು ತಲೆ ಜೇಱೀಱೆ ಪೊಯ್ದುಗ್ರದಿಂ
ಹಜ್ಜೆಂದೇಡಿಸಿ ರಕ್ತನುಂ ಕುಡಿದು ಪೆರ್ಗೆಂಡಂಗಳಂ ಸೂಸುತುಂ
ಗಜ್ಜಿಂದೋವದೆ ತೇಗಿಯುಂ ಪಿಡಿಗಳಂ ಕುಂಟಾಗೆ ಕೊಯ್ದುಂ ಖಳರ್॥

ಪೆರ್ಗಲ್ಲಿಂದದಪ್ಪುತ್ತುಂ
ಕರ್ಗಲ್ಲಂ ನೆರಪಿ ತಂದು ಬರಿಯೆಲ್ವೆಲ್ಲಂ ।

ನುರ್ಗಾಗಿ ಚಿಟಲ್ಲಿ ಟಲೆನೆ
ಕುರ್ಗುತ್ತುಂ ನೆಲದೊಳೊರಸಿ ಮೇಲ್ಕುತ್ತುತ್ತಂ ॥ ೧೯೦

ಕಿಱಿಕಿಱಿದಾಗಿರೆ ಕೈರಂ
ತಱಿದವನರಿದರಿದು ಕೊಳ್ಳಿಯಿಂದಂ ಮೊಗಮಂ ।
ನೆಱೆ ಚುಚರ್ಕುತ್ತುಂ ಛನ್ನಿಂ
ದಱುಗುಱಿಗಳ ನೆರವೆನಱಿದು ಪೋಗದೆ ಪಿಣಿವರ್ ॥ ೧೯೧

ಬಡಿಬಡಿ ತಿವಿತಿವಿ ಪೊಡೆಪೊಡೆ
ಕಡಿಕಡಿ ತಱಿತಱಿ ಕಡಂದುಱಿಂ ಪ್ರಣಮ್ಮಿಳಗಿಂ ।
ಬಿಡುಬಿಸು ತಲೆಯಂ ತೂಂತಾ
ಗಡೆಯಡೆ ಕೊಯ್ ಕೊಯ್ ಮಗುಳ್ಗಗುಳ್ಸಿಳರ್ದೆಯಂ ॥೧೯೨

ಅರಿಅರಿ ಪೊಯ್ ಪೊಯ್ ಸೀಳ್ಸೀಳ್
ಕರಿಘಟೆಯಿಂದಿಕ್ಕಿ ಮೆಟ್ಟಿಸವನೆರ್ದೆಯಂ ಸೀ ।
ಳ್ದು ರಿಯೆನ್ನೆಯನೆಱೆಯೆಱೆ ತಲೆ
ಯರಿದೋವೆಂದೊಳಱಿ ಬೀಱೆ ಕಿಡೆನೂಂಕುರಿಯೊಳ್ ॥ ೧೯೩

ಎಂದು ನಾನಾಪ್ರಕಾರದಿಂ ನಾರಕದರ್ದಂಡಿಸುವರೆಂ] ದಿಂತು ಕಿಱಿದರೊಳ್ ಧರ್ಮಾಧರ್ಮಂಗಳ ಫಲಮೆನಱಿಪುವುದುಂ ಮಾಯಾವಿಯುಪ್ಪ ಸೂರ್ಪಂ ಮುನ್ನಿನ ತನ್ನಾಡಿದಾಟಕ್ಕಂ ಬಱುಕಿನ ಸೆಟ್ಟಯ ಮಾಡಿದ ಮೋಟಕ್ಕಂ ಮುನ್ನಿನ ಕರ್ಮದ ತೀವ್ರತೆಗಂ ಬಱುಕಿನ ತನ್ನ ಮೆನದು ಪಕಮಕ್ಕಂ ಮುನ್ನಿನ ತನ್ನ ಮೆನದ ಕಾಂಕ್ಷೆಗಂ ಬಱುಕಿನ ತನ್ನ ನಿಷ್ಕಾಂಕ್ಷೆಗಂ ಮುನ್ನಿನ ತನ್ನ ಸಂಸಾರದೆಱಕಕ್ಕಂ ಬಱುಕಿನ ತನ್ನ ಸಂಸಾರ ವಿರಕ್ತಿಗಂ ಬೆಱಗಾಗಿ ॥ ೧೯೪

ಅಳಪಿಂದೀರತ್ನಮೆನೊ
ಯ್ದಿಳಗೀಶಂಗಿತ್ತು ಸತ್ತು ನರಕಾರ್ಣವದೊಳ್ ।

ಸುಚಿಯುದೆ ಬುದುಕಿದೆನಿಂತಾಂ
ಕಳಬಂದುದು ಸಫಲಮಾಯ್ತು ಪುಣ್ಯೋದಯದಿಂ ॥ ೧೯೫

ನೋಂತಗೆ ಪುರಿದು ಬಿತ್ತಿದೊಡ
ಡಗ ತತೆಯುದೆ ಬೆಳಗುವೆಂಬ ನಾಣ್ಣುಡಿಯಂತೋ ।
ರಂತೆ ಲಘುಕರ್ಮಿಯಪ್ಪಂ
ಗಂ ತತ್ಕ್ಷಣದಿಂ ಸುದರ್ಶನಂ ದೊರಕೊಳ್ಗುಂ ॥ ೧೯೬

ಆನೇಕೆ, ವೀರಕುಮಾರನಂ ಕಳವಿನ ಮಾತನಾಡುವುದೇಕೆ, ಜೋರಪ್ರಧಾನನೀರತ್ನಮಂ ಪೊಗಟ್ಟುವುದೇಕೆ, ಕುಮಾರನವಕ್ಕೆ ಬಯಸು ತದ್ರತ್ನಮಂ ತಂದಂಗರ್ಧರಾಜ್ಯಮಂ ಕುಮಾರನಪ್ಪಂಬುದೇಕೆ, ನೃಪಸುತನ ಮಾತನೆಲ್ಲರುಮಿರ್ದಂತಾಂ ಕೈಕೊಳ್ವುದೇಕೆ, ಮಾಯಾತಪಮಂ ಪೊಣ್ಮುವುದೇಕೆ, ವೆಲ್ಲನೆ ಕಳ್ಳ ಕೊಂದು ಪೋಪುದೇಕೆ, ಯಿಂತಕ್ಕಾಱಿಂ ಕಾಣ್ಬುದೇಕೆ, ನಾಂ ಭಯದಿಂದತ್ತಿತ್ತಲೋಡದೆ ಜಿನೇಂದ್ರಭಕ್ತನ ಬೀಡಂ ಬಂದು ಪುಗುವುದೇಕೆ, ಮತ್ತೀ ಮಹಾಪುರುಷನಿಂದಂ ಸರ್ವಸ್ವಂ ದೊರೆಕೊಳ್ವುದೇಕೆ, ಭಾವಿಪೊಡವೆಲ್ಲಂ ಜಿನೇಂದ್ರಭಕ್ತಸಮ್ಮಯ ಪ್ರಸಾದದಿಂ ದೊರೆಕೊಂಡುದೆಂತುಮುಪದೇಶಂಗೊಟ್ಟರ್ ಋಣಂಗೊಟ್ಟರೆಂಬ ನಾಣ್ಣುಡಿಯುಂಟದಱಿನೆನಗೆ ॥ ೧೯೭

ಈತನೆ ಮಿತ್ರನೀತನೆ ಸಹೋದರನೀತನೆ ತೆತ್ತ ತಂದ ಮೆ
ತ್ತೀತನೆ ದೇವನೀತನೆ ಸುಬಾಂಧವನೀತನೆ ಕೂರ್ಮೆಯಾಣ್ಮನಿಂ
ತೀತನೆ ಸಜ್ಜನಜ್ಜನೆನಗೀತನೆ ತಾಯ್ ಪಱತೇನೊ ಭಾವಿಪಂ
ದೀತನೆ ನೋಱೊಪ್ಪಿಡಾಪ್ತನೆನಗಿಪ್ಪನುಮಿತನೆ ಭೂತಳಾಗ್ರದೊಳ್ ॥ ೧೯೮

ಎನಗೆಂದುಂ ದೊರೆಕೊಳ್ಳದ
ಜಿನಧರ್ಮಂ ಸಾರ್ದುದೀಮಹಾತ್ಮನಿನದಱಿಂ ।
ದೆನಗೀತನೆ ಜೀವಂ ಮೆ
ತ್ತೆನಗೀವೈಶ್ಯಾತ್ಮಭವನೆ ಕಣ್ಣುಂ ಮತಿಯುಂ ॥ ೧೯೯

ಖರಕರನುದಯಂಗೆಯ್ಯದೆ
ಸಂಸಿರುಪಾನೆಳಗಳಲರಲಿಗುಮೆ ಜೀವೋ ।
ತ್ಕರಮುಂ ಪೇಷ್ ಸದ್ಧರ್ಮಂ
ದೊರೆಕೊಳ್ಳದೆ ತನುಗೆ ತಾವೆ ತಿಳಿವವೆ ಧರೆಯೊಳ್ ॥ ೦೦೦

ಹಿಮಕರನುದಯಂಗೆಯ್ಯದೆ
ತಮೋಂಧಕಾರಂ ತೆರಳ್ದ ಪೋಕುಮೆ ಜೈನಾ ।
ಗಮನಮುಂ ಧ್ಯಾನಂತಿಂದಱಿವರ್
ಕ್ರಮದಿಂದಂ ಪೇಱದಘಕುಲಂ ಕೆಟ್ಟಪುದೇ ॥ ೦೦೧

ತನಗೋರಂತಿರ ಧರ್ಮಮ
ನನವರತಂ ಕೀರ್ತಿ ತೋಱಿ ಪೇಳ್ವಿನೆ ನಂಟಂ ।
ತನಗೋರಂತಿರೆ ಪಾಪಮ
ನನವರತಂ ಕೀರ್ತಿ ತೋಱಿ ಪೇಳ್ವಿನೆ ಪಗೆವಂ ॥ ೦೦೨

ಎಂದು ಭಾವಿಸಿ ಸದ್ಧರ್ಮಂ ಕೈಸಾರ್ದವಕ್ಕೆ ಮನದೊಳ್ ಗುಡಿಗಟ್ಟಿ ಮುಖೋತ್ಸವದಿಂ ಮಯ್ಯುಬ್ಬಿಯುದೆ ಹರ್ಷಚಿತ್ತದಿಂ ವಾತ್ಸಲ್ಯರತ್ನಾಕರನ ಪಾದಪದ್ಮಂಗಳ್ಗಱಿಗಿ ತನ್ನ ಮುನ್ನಿನ ಮೋಯಾಪ್ರಪಂಚಮುಂ ಪೇಳ್ದು ॥ ೦೦೩

ನಿನ್ನಿಂದವಮಾನಗೆ ಸದ್ಧ
ರ್ಮಂ ನಯದಿಂ ಕಾರ್ದವದಱಿನೆನಗುರ್ವರೆಯೊಳ್ ।
ನಿನ್ನನ್ನರ್ಕಳೆ ಮಿತ್ರರ್
ಸನ್ನುತಗುಣನಿಳಯವಂಶ ವೈಶ್ಯಲಲಾಮಾ ॥ ೦೦೪

ಕರುಣಾಗಿಯುಂ ಮತಿಯಾಗಿಯುಂ ನೀನೆ ಶರಣೆನಗೆ ಪೆಱರೊರ್ವರುಮಿಲ್ಲೆನ್ನ ಮುನ್ನಿನ ಪೊಲ್ಲವುಗಳಂ ಕೈಕೊಳ್ಳದೆ ಕಾರುಣ್ಯದಿಂದಂ ನಿಮ್ಮ ಧರ್ಮಾಘಿಪತ್ವದ ಮನಿನ್ನುಂ ಲೇಸಾಗಿ ಪೇಱ್ದು ಶಾಶ್ವತಮಪ್ಪ ಸುಖಕ್ಕೆ ಕಾರಣಮಪ್ಪ ಪ್ರತರತ್ನತ್ರಯಮಂ ವಯೆಗೆಯ್ವುದೆಂದು ಕೈಗಳಂ ಮುಗಿದು ವಿನಯದಿಂದಿದ್ದುದುಂ ಸಮ್ಯಕ್ತ್ವಚೂಡಾಮಣಿ ಸೂರ್ಪಂಗಿಂತೆಂದಂ ॥ ೦೦೫

ಚದುರನೆನಿಪ್ಪಂ ಮಿಥ್ಯಾ
ತ್ವದ ಬಾರಿಗೆ ಪೋಗಿ ಬಿದ್ದು ಸಂಸಾರಸಮು ।
ದ್ರದೊಳದ್ದು ಕಿಡದೆ ಮುನ್ನ ಮೆ
ಪದುಱುಗನಾಗಱಿದು ಪಿಡಿವ್ರದೀದರ್ಶನಮೆಂ ॥ ೧೦೬

ಅಂತು ಶುದ್ಧದರ್ಶನಮೆಂ ಸಂಶಯಂಗಿಡದೆ ತಿಳಿದು ನಂಬಿ ಬಱು ಕ್ಕಮತಿಶಯಸುಖನಿಳಯಮಪ್ಪ ನಿರ್ವೃತಿಶ್ರೀಯನೆಯ್ದಿಸುವ ಶ್ರಾವಕ ಧರ್ಮದೊಳಕ್ಕೆ ನಡೆವ್ರದು ॥ ೧೦೭

ಯತಿಧರ್ಮಮೆಂಬುವದು ನಿ
ರ್ವೃತಿವನಿತೆಯ ತೊಟ್ಟ ತೊಡವು ಜಯಲಕ್ಷ್ಮಿಯ ರಂ ।
ಜಿತಮೆಪ್ಪ ಜವ್ವನಂ ಸಂ
ಸೃತಿವನಿತೆಯ ಸೊಬಗು ಕೀರ್ತಿಲಕ್ಷ್ಮಿಯ ನಿಳಯಂ ॥ ೧೦೮

ಎನಿಸಿ ಮಹಿಮೆವೆಡೆದ ಯತಿಧರ್ಮದೊಳ್ನಡೆವಾತಂ ಮೂಲೋತ್ತರಗುಣಂಗಳೞಿಜೆವೆರಸು ಸಕಲದೋಷಂಗಳುಂ ತನ್ನಂ ಪೊರ್ದದಂತಾಗೆ ನಡೆವ್ರದು. ಪಾಲಂ ಕಾಯಿಸುವಂತೆ ಮನಮುಂ ಬೆದಱಲೀಯದೆ, ದುರ್ಭಾವೆಮುಂ ಬಿಟ್ಟು ದುರ್ಜನರಂ ಸಾರದೆ ದುರಾಚಾರಂಗಳಂ ಪೊರ್ದದಾಗಮಮುಂ ಪೊದಿ ನಡುಗಡಲೊಳ್ ಪಱುಗೋಲಂ ನಡೆಯಿಸುವಂಬಿಗನಂತೆ ದುರ್ಮಾರ್ಗವೆಂಬ ತೆರೆಗಳಂ ವಂಚಿಸಿ ಮಿಥ್ಯಾತ್ವವೆಂಬ ಸುಱುಗಳಂ ತಪ್ಪಿಸಿ ವಿಷಯಂಗಳ್ಗಂಬ ಪೊಯಲ್ಗಳಂ ಸಾರಲೀಯದೆ ಕ್ರಿಯೆಸಹಿತಂ ಶುಭಧ್ಯಾನದಿಂ ಸಂಸಾರಮೆಂಬ ಮಹಾನದಿಯಂ ದಾಂಟುವ್ರದು ॥ ೧೦೯

ಶ್ರಾವಕಧರ್ಮಂ ಕೀರ್ತಿ
ಶ್ರೀವನಿತೆಯ ಕುಚಯುಗಂ ಮಹೀವನಿತೆಯ ವಾಕ್ ॥
ಶ್ರೀವನಿತೆಯ ಲಾವಣ್ಯಂ
ಶ್ರೀವನಿತೆಯ ಜಯಲತಾಂಗಿಯುಡುವ ದುಕೂಲಂ ॥ ೧೧೦

ಎನಿಸಿ ಪೆಂಪುವೆಡೆದ ಶ್ರಾವಕಧರ್ಮದೊಳ್ನಡೆವಾತಂ ದಾನಪೂಜೆ ಶೀಲೋಪವಾಸಂಗಳಂ ಕುಂದಲೀಯದೆ ಸುವ್ರತವರ್ಧಮಾನನಾಗಿ ದ್ವಿಷಾ

ಚಾರದಿಂ ಸಮುದ್ರದೊಳ್ ಭೈತ್ರಮಂ ನಡೆಯಿಸುವಂತೆ ದುಶ್ಚಂಕಿತ
ಮೆಂಬ ಕಳ್ಳರಂ ಪೊರ್ದಲೀಯದೆ ದುರಾಚಾರವೆಂಬ ತೆರೆಗಳಂ ತಪ್ಪಿಸಿ
ಅಱಿವೆಗಚ್ಚು ಯೆಂಬ ವೊಸಳೆಯಂ ತೊಲಗಿಸಿ ಸಂಶಯವೆಂಬ ಮಹಾ
ಮತ್ಸ್ಯಮನೋಸರಿಸಿ ವಿಧ್ಯಾತ್ವವೆಂಬ ನೆಗಟಿಂಗೊಳಗಾಗದೆ ತುಪ್ಪಮಂ
ಕಾಸುವಳಂತೆ ಚಿತ್ತ ಮನಗಲೀಯದೆ ಜಿನಾಗಮದೋಜೆಯಿಂ ನಡೆದು
ಸಂಸಾರಸಮುದ್ರಮನುಪಾಯದಿಂ ಕಱಿಪುವುದು ॥ ೧೧೧

ಮೆಲ್ಲನೆ ಮೇಳಿಸಿ ಪರ್ಚುವ
ಲಲ್ಲಯಿಸುವ ಪೆಱರನಟ್ಟಿ ದೂಱುವ ಪಲವುಂ ।
ಪೊಲ್ಲವೆಯಂ ಕಲಿಸುವ ಮುನಿ
ಯಲ್ಲಿ ಜಿನೋಕ್ತಿಯನೆ ಕೇಳಲಾಗದು ಚತುರಂ ॥ ೧೧೨

ಪೆಱರಂ ದೂಱುವರೊಳ್ ತೆಱ
ನಱಿಯದೆ ನುಡಿವವರೊಳಾಗಮೋರ್ಥಮನೇನಂ ।
ದಱಿಯದರೊಳ್ ಪುರುಡಿಗರೊಳ್
ಬಱುದಲೆಯೆಂದೆಳಸಿ ಕೇಳಲಾಗದು ಪುರುಷಂ ॥ ೧೧೩

ಅಲ್ಲಲ್ಲಿಗೆ ಭಾಷಿಸುವಂ
ದೆಲ್ಲರ್ಗಂ ನುಡಿವ ಬಲ್ಮೆಯಿಂ ತಪದಿಂದಂ ।
ಬೆಲ್ಲಂಪಚ್ಚಂತಿರೆ ಕರ
ವೊಳ್ಳಿದರಪರೆನಿಪರಲ್ಲಿ ಕೇಳ್ವುದು ಕಥೆಯಂ ॥ ೧೧೪

ಪುರುಳಿಲ್ಲದರೊಳ್ ನುಡಿಯೊಳ್
ಪರಿಣತರೊಳ್ ಪಕ್ಷಮಿಲ್ಲದವರೊಳ್ ಗುಣದೊಳ್ ।
ಪಿರಿಯರೆನಿಪವರೊಳಪೆಕುಲ
ವಿರಹಿತರೊಳ್ ಕೇಳ್ವುದಾಗಮೋರ್ಥಮನಱಿವಿಂ ॥ ೧೧೫

ಜಿನಗೇಹಾಳಿಯೊಳುನ್ನತ
ಮುನಿವರರೊಳ್ ಭವ್ಯತತಿಯೊಳಾದರಮಂ ನೆ ।

ಟ್ಟನೆ ಮಾಪ್ಪಿ ತತ್ತ್ವವಿದರೊಳ್
ಜಿನಮತಮಂ ಕೇಳ್ಗ ಸೌಖ್ಯಮಂ ಬಯಸುವವೆಂ ॥ ೧೧೬

ಮತ್ತಂ ಜಿನಾಗಮಾರ್ಥಂಗಳಂ ಸಂಬಂಧಿಸಲಱಿಯದೆ ದುರಾಗ್ರಹದಿಂದಾನೆ ದೇವರೆಂದು ಡೊಳ್ಳುಮಂ ಪೊಱಿಗಣ ಕಾಯಕ್ಲೇಶಮುಮೆಂ ತೋಱಿ ಪಾವಂ ಪೆತ್ತವರ್ಬೀಲಿಯುಂ ಪೊಕ್ಕರೆಂಬಂತೆ ತಮ್ಮ ನುಡಿದುದನೆ ತಲೆಮೆಟ್ಟಿ ಸಾಧಿಸಿ[1] ಬಾಯುಂ ಬಡಿದಾವಿನ ಕಱುವನೆಮ್ಮೆಗೆ ಬಿಟ್ಟೆಮ್ಮೆಯಕಱಿವನಾವಿಂಗೆ ಬಿಡುವಂತೇನಾನುಮನೆಕ್ಕಸಕ್ಕಮನೇಣ ಗೋಣಿಂಗಳಂ ಪೇೞ್ವಿರಲ್ಲಿ ಜಿನತತ್ತ್ವಮಂ ಸೂಕ್ಷ್ಮಮತಿಯಪ್ಪವೆಂ ಕೇಳವೇಡ ॥ ೧೧೭

ಇಲ್ಲಿಗಿದುಚಿತಂ ತಕ್ಕುದಿ
ದಿಲ್ಲಿಗೆದೆಂದಱಿದು ಸಂದ ಸೂತ್ರಾರ್ಥಮನಂ ।
ತಲ್ಲಲ್ಲಿಗೆ ವಿಪರೀತತೆ
ಯಿಲ್ಲದೆ ಪೇೞ್ವವರೊಳಾಲ್ದ ಕೇಳ್ಗಾಗಮಮುಮಂ ॥ ೧೧೮

ಮತ್ತಂ ಕೇಳ್ವಾತನುಂ ಪರಿಣತನಾಗಿ ಕೇಳಲ್ವೇೞ್ವುದದೆಂತಂದೊಡೆ, ಪಾತ್ರಮುಂ ನೋಡಲೆಂದು ಪ್ರೋಸಾತಂ ಮುಂದೊಂದೆಡೆಯೊಳಗ ಪ್ರೋಪಾತನಾಡಳಯಿಂದೊಡೆ ಮಗುಚಿ ಸಂಬಂತೆ[2] ಮಾಡದೆ ತಲೆಯೆಂದೊಡೆ ತಲೆಯೆಂದುಂ ಪುಲ್ಲೆಯೆಂದೊಡೆ ಪುಲಿಯೆಂದುಂ ವಿಪರೀತಮಂ ಕೈಕೊಳದೆ ಕೇಳ್ವುದು ॥ ೧೧೯

ಶ್ರಾವಕನಪ್ಪಂ ನಿಜಿಸ
ದ್ಭಾವೆದಿನೆಸಗುವುದು ನಾಲ್ಕು ಧರ್ಮಂಗಳೊಳಂ ।
ಭಾವಕನೆನಿಸುವ ಮುನಿಯುಂ
ಸಾವದ್ಯಂ ಸಾರದಂತು ನಡೆವುದು ದಯೆಯಿಂ ॥ ೧೨೦

---

1 ತಲೆಮುಟ್ಟುಸಾಱಿಸಿ (ಗ) 2 ನಾಡಳಯಿಂದೊಡಾತಳಿಗಡದುವುದ ಳ್ವನೆಂಬಂತೆ (ಗ)

ವರಸಂಯಮಿಯೆನಿಸಿಪ್ಪುದು ದು
ರ್ಧರತಪದಿಂ ನಿಷ್ಕಷಾಯದಿಂ ಮುನಿಯೆನಿಸಂ ।
ಪರಮಶ್ರಾವಕನೆನಿಪಂ
ಕರವೊಳ್ಪಿದನಿಪ್ಪುದೆಸೆವ ದಾನಾದಿಗಳೊಳ್ ॥ ೨೨೧

ಎಂತೀಗಳ್ ಸುಯರ್ಮಂಗೊೀ
ರಂತಿರೆ ತೀವ್ರೋಷ್ಣವೊಪ್ಪಗುಂ ಭಾವಿಸುವಂ ।
ದಂತ ತಪಸ್ವಿಗಳ್ಗಾದೊೀ [1]
ರಂತೊಪ್ಪಗು ಸಿಸ್ಪೃಪತ್ವವುಂ ಸಂಯಮಮುಂ ॥ ೨೨೨

ಜಲಜಾತಪರೋಧಿಗ ಶೀ
ತಳವೊಪ್ಪಗುಮಿಾಗಳಂತು ತಾನಂತೆ ಮಹೀ ।
ತಳದೊಳುಪಾಸಕನಪ್ಪಂ
ಗಳವಟ್ಟೊಪ್ಪುಗು ಮಕೊೀನ್ನತಿಕ್ಕೆಯ ದಾನಂ ॥ ೨೨೩

ದಾನದೊಳಂ ಪೂಜೆಯೊಳಂ
ತಾನೊಳ್ಪಿದನಿಪ್ಪುದವನಿಯೊಳುಪಾಸಕನಿಂ ।
ಧ್ಯಾನದೊಳಂ ಸಂಯಮದೊಳ
ಮೀನಿವರುರ್ವರೆಯೊಳಧಿಕರೆನಿಪ್ಪುದು ಮುನಿವರ್ ॥ ೨೨೪

ಎತ್ತಿಂಗೆ ಪಿಣಿಲೊಪ್ಪಗುಮೆಲ್ಲದೆ ಕೆಚ್ಚಲೊಪ್ಪದಾವಿಂಗೆ ಕಚ್ಚಲೊಪ್ಪಗುಮೆಲ್ಲದೆ ಪಿಣಿಲೊಪ್ಪದು ಪ್ರದುಷ್ಟಂಗೆ ಗಡ್ಡವಿಾಸೆಯೊಪ್ಪಗುಮೆಲ್ಲದೆ ಪೆರ್ಮೊಲೆಗಳೊಪ್ಪವು ಸ್ತ್ರೀಯರ್ಗೆ ಪೆರ್ಮೊಲೆಗಳೊಪ್ಪುಗುಮೆಲ್ಲದೆ ಗಡ್ಡವಿಾಸೆಯೊಪ್ಪವದಱಿಂ ಗೃಹಸ್ಥಂಗೆ ದಾನಾದಿ ಧರ್ಮಂಗಳೊಪ್ಪುಗುಮೆಲ್ಲದೆ ತಪದೊಳಾದಾಚರಣೆಯೊಪ್ಪದು ತಪಸ್ವಿಗಂ ದಾನಾದ್ಯಯನ ಸಂಯಮಾದಿಗಳೊಪ್ಪಗುಮೆಲ್ಲದೆ ಗೃಹಸ್ಥಾಚರಣಮೊಪ್ಪದದುಕಾರಣದಿಂ ತಂತಮ್ಮ ಮೀರೆಯಂ ದಾಂಟವೇಡಾ ॥ ೨೨೫

---

[1] ಎಂತಪ್ಪತಪಸ್ವಿಗಮೀ (ಗ)

ಸೊಡರುಂ ಕಿಚ್ಚಾ ಕಿಚ್ಚುಂ
ಗಡ ಕಿಚ್ಚಂತೆರಡುವೆಸೆವೆ ನಂಟರ್ತನಗಾ ।
ದೊಡೆ ಗಾಳಿ ಮೆಸಗಿ ಸೊಡರಂ
ಕಿಡಿಸುವವೊಲ್ ಕಿಚ್ಚನೇಕೆ ಕಿಡಿಸದೊ ಮುನಿಸಿಂ ॥ ೨೭೬

ಅಂತೆ ತಪಸ್ವಿಗಪ್ಪಾಚಾರಮಣುವ್ರತಿಗಳವೆಡದು; ಅಣುವ್ರತಂ ಗಪ್ಪಾಚಾರಂ ತಪಸ್ವಿಗಳವೆಡದು; ಮುನ್ನಂ ದಾನದಿಂ ಪೂಜೆಯಿಂ ಶೀಲದಿಂದುಪವಾಸದಿಂದನಂತಸುಖಮೆನೆಯ್ದಿದ ಶ್ರೀಷೇಣಮಹಾರಾಜನ ಧನ್ಯಕುಮೊರನ ಕರಿಕಂತಮಹಾರಾಜನ [1] ಸೌಧರ್ಮೇಂದ್ರನ ಸೀತಾ ದೇವಿಯು ಮಹಾದೇವಿಯ [2] ನಾಗಕುಮೊರನ ಯೋಧನವುಂಡನ [3] ಕಥೆ ಗಳಂ ಕೇಳ್ದು ನಂಬಿ ದಾನಾದಿಧರ್ಮದೊಳಸಗುವುದು ॥ ೨೭೭

ದಾನಾದಿಗಳೊಳ್ ನೆಗೞ್ದಿ
ತಾನಾಱದೆ ಪೇನಿಯಪ್ಪವಂ ಮುನಿವರನುಂ ।
ತಾನಪ್ಪೆನೆಂದು ದೂರ್ತಿಂ
ವೋಸಂಗೊಂಡಿರ್ದೊಡಾಗದಹ್ಲಯಸೌಖ್ಯಂ ॥ ೨೭೮

ಪರಮೆಶ್ರೀಸತಿಶಾಂತಿತೀರ್ಥಕರನತ್ಯಾನಂದದಿಂ ದಾನಮುಂ
ಸಿರಿಷೇಣಾವನಿಪಾಲನಾದ ಭವದೊಳ್ ತಾಂ ಮಾಡೆ ತದ್ದಾನದಿಂ
ಪಿರಿದಪ್ಪುನ್ನತಿವೆತ್ತು ನೋಡ ಕಡೆಯೊಳ್ ನಿರ್ವಾಣಲಕ್ಷ್ಮೀವನೋ
ಹರನಾದಂ ದೃಢಚಿತ್ತದಿಂ ಸುಜನರುಂ ಮೊಕ್ತಿರ್ತಿಯಿಂ ದಾನಮುಂ ॥

ಅಂತೆ ದಾನಚತುಷ್ಟಯದಿಂ ಪುಣ್ಯಬಂಧಮೆಕ್ಕುಮಾಪುಣ್ಯಬಂ ಧದಿಂ ಕ್ರಮೆಕ್ರಮೆದಿಂ ನಿರ್ವಾಣಸಾಮ್ರಾಜ್ಯಂ ದೊರೆಕೊಳ್ಗುಮೆಂ ಬುದಂ ಶಾಂತಿತೀರ್ಥೇಶ್ವರನ ಕಥಾಂತರದಿಂದಱಿದು ಬೆಣಕಚಂಗೆಡೆವ

1 ಕರಕಂಡುಮಹಾರಾಜನ (ಕ. ಬ.)
2 ಶೀಲವತಿಮಹಾದೇವಿಯು ಸೀತಾದೇವಿಯು (ಕ. ಬ.)
3 ಖದನವುಂಡನ (ಕ. ಬ.); ಯೊದನವುಂಡನ (ಗ)

ಮೌತಂ ಕೇಳ್ದ ದಾನಾದಿಗಳೊಳಪ್ಪರ್ಥವ್ಯಯಕ್ಕೆ ಮನದೊಳ್ ಮೆಱುಗಿ ಮಾಡನೇಡ ॥ ೬೩

ತಪದ ನೆಗಚ್ಚ್ತಿಗೆ ಬೇಸ
ತ್ತು ಪವಾಸಕ್ಕಲಸಿ ಮನದೊಳಾಗಮಮಂ ತಾಂ ।
ಚಪಳತೆಯಿಂದಮಹರ್ನಿಶ
ಮುಪಾಯದಿಂ [1] ಪಿಡಿವ ಮುನಿಗೆ ನಿರ್ವೃತಿ ದೂರಂ ॥ ೬೪

ನಮ್ಮ ಸೆಟ್ಟಿಯು ಮೌತೊಳ್ಪಿದುವು ಬಳ್ಳಂ ಕಿಱಿದೆಂಬಂತೆ ಮಾಡದೆ ಪ್ರಥಮತೀರ್ಥೇಶ್ವರನಂತೆ ವಿಯ್ಯೂ ಮೋಹವಿಲ್ಲದೆ ಸನತ್ಕುಮಾರ ಮುನಿಯಂತೆ ಜಿಹ್ವಾಲಂಪಟತೆಯಿಲ್ಲದೆ ಬಾಹುಬಲಿಯಂತೆ ನಿಂದೆಡೆಯಿಂ ತಳರದೆ ಗುರುದತ್ತಮುನಿಯಂತೆ [2] ಘೋರೋಪಸರ್ಗಕ್ಕೆ ತಲ್ಲಣಿಸದೆ ಕುಮಾರಸ್ವಾಮಿಯಂತೆ ಚಿತ್ತದೊಳಳ್ಕದೆ ಧೈರ್ಯಸಮನ್ವಿತನಾಗಿ ಪೊಡೆ ಕೇವಲಜ್ಞಾನಮೊಪ್ಪುಗುಂ [3]. ಈ ಕಾಲದವರ್ಗಳ್ ದರ್ಶನ ಶುದ್ಧರಾಗಿ ತಪದೊಳೊಳ್ಪಿದರೆನಿಸಿ ನಡೆವುದು, ನಡೆಯೆ ಪುಣ್ಯಬಂಧ ಮಕ್ಕುಮಪೂರ್ವಪುಣ್ಯಬಂಧದಿಂ ಅಪ್ಪವಿಧಕರ್ಮಂಗಳಂ ನಿರ್ಮೂಲಂ ಮಾಪ್ಪಿ ಶಕ್ತಿ ದೊರೆಕೊಳ್ಗುಮದು ದೊರೆಕೊಳೆ ಕೈವಲ್ಯಲಕ್ಷ್ಮಿ ಕೈಸಾರ್ಗುಮದಱಿಂ ಕ್ರಿಯೆಸಹಿತಂ ತಪೋಮಾರ್ಗದೊಳಸಗುವುದು ॥ ೬೫

ಪುರುದೇವಂ ದೇವದೇವಂ ಪರಹಿತಚರಿತಂ ವಿಶ್ವಲೋಕಾಧಿಪಂ ಖೇ
ಚರನಾದಾಕಾಲದೊಳ್ ಮಾಡಿವ ತಪವ ಮಹಾಪುಣ್ಯದಿಂ ಸ್ವರ್ಗಸೌಖ್ಯೋ
ತ್ಕರಮುಂ ಕೈಸಾರ್ದು ವಿಭ್ರಾಜಿಸುವ ಮಹಿಮೆಯುಳ್ಳಹ್ಮಯ [4] ಶ್ರೀಯೊಳಾತಂ
ನೆರೆದಂ ಕೇಳ್ಮಾಯೆಯಿಂದಂ ಸುಱುಯದ ತಪಮಂ ಮಾಡ್ಕೆ ನಿರ್ಮಾಯೆಯಿಂದಂ ॥ ೬೬

---

1 ಮನದೊಳಧ್ಯಾತ್ಮಮನಿಂ ಚಪಳತೆಯಿಂದೀಕಾಲದೊಳುಪಾಯದಿಂ(ಕ. ಬ.)
2 ಗಣಧರಮುನೀಂದ್ರನಂತೆ (ಕ. ಬ.)
3 ಇರ್ಪೊಡಧ್ಯಾತ್ಮವೊಪ್ಪುಗುಂ(ಕ. ಬ.); ಇರ್ಪೊಡಾತ್ಮವೊಪ್ಪುಗುಂ(ಬ.)
4 ಮೂಳ್ಪೈಶ್ವರ್ಯವೊಳನುಭವಿಸಿರ್ದಹ್ಮಯ (ಕ. ಬ.)

ಅಂತೆ ತಪದಿಂ ಪುಣ್ಯಬಂಧಮಕ್ಕುಮಪುಣ್ಯದಿಂ ಮೆಲ್ಲಮೆಲ್ಲನೆ ನಿಶ್ರೇಯಸಶ್ರೀಯೊಳಕ್ಕುಡಲಕ್ಕುಮೆಂಬುದನಾದಿತೀರ್ಥೇಶ್ವರನ ಕಥಾಂತರದೊಳ್ ತಿಳಿವುದು. ಸೋಂಬರ ಮಾತಂ ಕೇಳ್ದು ತಪದೊಳಾದ ಬೇವಸಕ್ಕಲಸವೇಡ ॥ ೬೩

ಇರುಳೊಳ್ ಒಂದ್ರನ ಪಗಲೊಳ್
ಖರಕರನುದಯಂಗಳಾಗದಭ್ಯುದಯಂ ಮೆ ।
ತ್ತಿರುಳೊಳಭ್ಯರ್ಯಂ ಪಗಲೊಳ್
ಸರಸಿಜರಿಪುವೊಗೆಯೆ ಜಗದೊಳದ್ಭುತಮಲ್ತೇ ॥ ೬೪

ಆದಱಿಂ ಕೇವಲಧ್ಯಾನಂ [2] ಮುನ್ನಂ ಸಂದ ಮಹಾಪುರುಷರ್ಗಳವೆಡುಗುಮಲ್ಲದೆ ಈಗಳಿನವರ್ಗಳವಡದು ॥ ೬೫

ಜಿನವಚನದೋಜೆಯಿಂದಂ
ಮನಮಂ ಸೈತಿಟ್ಟು ಬಿಟ್ಟು ದುರ್ಮಾರ್ಗಮನಾ ॥
ರ್ದನಿತಂ ಸುವ್ರತದೊಳ್ ನೆ
ಟ್ಟನೆ ಮಾಱ್ಪುದು ನೆಗಱ್ವ ತಪಮುಮಂ ದಾನಮುಮಂ ॥ ೬೬

ಎಂದು ಯತಿಧರ್ಮಮುಮಂ ಶ್ರಾವಕಧರ್ಮಮುಮನಿಂಬಾಗಿರೆ ಜಿನೇಂದ್ರಭಕ್ತಸೆಟ್ಟಿ ಸಂಕ್ಷೇಪದಿಂ ಪೇೞ್ದ ಸೂರ್ಪಂ ಕೇಳ್ದು ತಪದೊಳತಿ ಪ್ರೀತನಾಗಿ ಸಂಸಾರಕ್ಕೆ ಪೇಸಿ ಜಿನದೀಕ್ಷೆಯಂ ಕೈಕೊಂಡುಗ್ರೋಗ್ರ ತಪದಿಂ ನೆಗಱ್ದು ಕಡೆಯೊಳ್ ಸಮೋಧಮರಣದಿಂ ಮುಡಿಪಿ ದೇವಗತಿ ವೆಡೆದಂ. ಸಮ್ಯಕ್ತ್ವಚೂಡಾಮಣಿಯುಮುಪಗೂಹನದ ಫಲದಿಂದಿಹ ತ್ರೈಯೊಳಾದ ಕೀರ್ತಿಗಂ ಪರತ್ರೆಯೊಳಾದ ಸೌಖ್ಯಕ್ಕಂ ಭಾಜನನಾದ ನಿಂತು ॥ ೬೭

ಪರಮಶ್ರಾವಕನೆನಿಸುವ
ಪುರುಷಂ ಕಣ್ಣಾರೆ ಮುನಿಯ ಪೊಲ್ಲಮೆಯಂ ವಿ ।

---

1 ಇಳೆಯೊಳಿಹುದಯಂ (ಗ) 2 ಅದುಕಾರಣದಿಂದದಾತ್ಮ (ಕ ಖ)

ಸ್ತರದಿಂದಂ ಕಂಡದನು
ರ್ವರೆಯೊಳ್ ನೆಲೆ ದೂರದುಸಿರದಿಪ್ಪುದು ನಯದಿಂ ॥ ೬೫

ಜಲಧಿಯೊಳು ಕಪ್ಪೆ ಸತ್ತೊಡೆ
ಜಲಧಿಯು ನೀರೆಲ್ಲಮಿಟ್ಟ ಕೊಳನಾಗ್ಪುದೆ ನಿ ।
ರ್ಮಲನಲ್ಲದೊರ್ವನಿಂದಂ
ಮಳನತೆ ಪೊದ್ದುವುದೆ ವಿಮಳಸದ್ಧರ್ಮಕ್ಕಂ ॥ ೬೬

ಉಪಗೂಹನಮಂ ಮಾಡ್ಪುದು
ವಿಪರೀತಮನುಳ್ಳ ಧರ್ಮಮಂ ಬಿಡುವುದು ಜೈ ।
ನಪದಾಂಬುಜಾತಮಂ ಮಿ
ಕ್ಕಪವರ್ಗದ ಬಟ್ಟೆಯೆಂದು ಪಿಡಿವುದು ಭವ್ಯಂ ॥ ೬೭

ಎಂದುಪಗೂಹನದೊಳಾದ ಕಥೆಯಂ ಗೌತಮಸ್ವಾಮಿಗಳ್ ಪೇ
ಳ್ದುದುಂ ॥ ೬೮

ಭುವನಪ್ರಖ್ಯಾತಕೀರ್ತಿಧ್ವಜನಮಳಯಶಂ ಸತ್ಯವಾರಾಶಿಚಿತ್ತೋ
ದ್ಭವಮೋಘನೀಕತೀವ್ರಾನಳನಘಹರಣಂ ಕೂರ್ಮಯಿಂ ಪೇಪೆ ಚಿತ್ತೋ
ತ್ಸವದಿಂ ತ್ರೈವಿದ್ಯಚಕ್ರೇಶ್ವರವಿಮಳವದಾಂಭೋಜಭೃಂಗಂ ವಿನೇಯ
ಪ್ರವರಂ ಸಾನಂದನಾವಂ [1]ಸುಕವಿಜನಮನಃಪದ್ಮಿನೀರಾಜಹಂಸಂ॥ ೬೯

ಇದುನಿಖಿಳದಿವಿಜಪರಿವೃಢನುಕುಟತಟಘಟಿತಮಣಿಗಣನಿಕರವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹವತ್ಸಮಧುಕರ
ನಿರುಪಮಸಹಜಕವಿಜನಮನಃಪಯೋಧಿಹಿಮಕರನುತಭುವಯ ತ
ದಿಗಂಬರದಾಸನೊತ್ನ ಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತವುಪ್ಪ
ಧರ್ಮಾಮೃತದೊಳ್
ದರ್ಶನಪಂಚಮಾಂಗವ್ಯಾವರ್ಣನಂ
ಪಷ್ಠಾಶ್ವಾಸಂ

ಅಘಹರಣಂಭೂತತೀರ್ಥಪೂರಂ । ದಿವಿಜೇಂದ್ರಾರ್ಚಿತವಂಸಜ್ಜನನರುಚ
ಚೆಂಡಾಂಶುತ್ರೈವಿದ್ಯಲಕ್ಷ್ಮೀ । ರಮಣಪಾದಾಬ್ಜಭೃಂಗಂ (ಕ. ಬಿ.)

ಶ್ರೀನಿರ್ವೃತಿವನಿತೆಗೆ ಪೆಱ
ತೇನುಪಗೂಹನಗುಣಂ ಲಸನ್ಮಣಿಹಾರಂ [1] ।
ತಾನೆಂದು ನಂಬಿದಂ ವಿಬು
ಧಾನಂವಂ ಸುಕವಿನಿಕರಪಿಕಮೊಕಂದಂ ॥ ೧

ಅಂತುಪಗೂಹನದೊಂದು ಕ
ಥಾಂತರಮುಂ ಕೇಳ್ದ ನಂಬಿ ಮನದೊಳ್ ಪಿರಿದುಂ ।
ಸಂತೋಷಮಾಗೆ ಧಾತ್ರೀ
ಕಾಂತಂ ಪಿರಿದುಂ ಮಹೋತ್ಸವಂಬೆರಸಾಗಳ್ ॥ ೨

[ಗಣಧರಸ್ವಾಮಿಗಳ ಪಾದಪಯೋರುಹಕ್ಕೆ ಮೆಱಿದುಂಬಿಯುಂ ತೆಱಿಗಿ ಕೈಗಳಂ ಮುಗಿದು ತಲೆಯುಂ ಬಾಗಿ ನಿಮ್ಮಡಿ ಕಾರುಣ್ಯದಿಂ] ಮುಂದಣ ಸ್ಥಿತಿಕರಣದ ಕಥೆಯಂ [ಎನಗಱಿವಂತಾಗೆ] ಬೆಸಸುವು ದೆಂಬುದುಂ [ಗಣಧರಸ್ವಾಮಿಗಳ್ ಕೈವಲ್ಯಲಕ್ಷ್ಮೀಯ ನಚ್ಚು ವಾಭರಣ ಮೆಪ್ಪ] ಸ್ಥಿತಿಕರಣದ ಕಥೆಯಂ] ಇಂತೆಂದು ಪೇೞ್ದರ್ :— ಅಗ್ನಿಯಂತೆ ಮದದಾನೆಯುಂತೆ ವಾರದಂತೆ ಕುಲಶೈಲದಂತೆ ಜಂಬೂದ್ವೀಪದಂತೆ ಸಪ್ತ ಸ್ವರದಂತೆ ಮಾಳವದಂತೆ ದೇವೇಂದ್ರನ ಬರವಿನಂತೆ ರಾಜ್ಯದಂತೆ ಋದ್ಧಿ ಯಂತೆ ಕಮಠೋಪಸರ್ಗಕ್ಕೆ ಬಂದ ಧರಣೀಂದ್ರನಂತೆ ದರ್ಶನಮುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿ ತ್ವಮುಂ ಉಪಗೂಹನಮುಂ ಸ್ಥಿತಿಕರಣಮುವೆಂಬೀಯೆರೊಳಂ ಶೋಭೆ ವಡೆವುದು ॥ ೩

ಸ್ಥಿತಿಕರಣಂ ವಾಗ್ವನಿತೆಯ
ಮತಿ ಕೀರ್ತಿ ಶ್ರೀಯು ನಿಳಯಮಪವರ್ಗಶ್ರೀ [2] ।

---

[1] ಉಪಗೂಹನಲಸನ್ಮಹಾಮಣಿನಿಕರಂ (ಕ. ಬ.)

[2] ನುತಕೀರ್ತಿ ಶ್ರೀಯುತಿಲಕಮಪವರ್ಗ ಶ್ರೀ (ಕ. ಬ.)

ಸತಿಯು ಮೆಣಿಹಾರವೆಂದಿಂ
ತತಿಮುದದಿಂ ಮೊಕ್ಕೆ ಭವ್ಯೇನಪ್ಪಂ ಮೆನದೊಳ್ ॥ ೪

ಇನ್ನುದಜೊಳಾದ ವಿಭವವೆಮೆಂತೆಂದೊಡೆ ॥ ೫

[ಸರಸಿಜನೇತ್ರೆ ಸಲ್ಲಲಿತಗಾತ್ರೆ ಕುಲೈಕಪವಿತ್ರೆ ಗಂಧಸಿಂ
ಧುರನಿಭಯಾನ ಶೀಲಗುಣಧಾರೆ ಚರಿತ್ರಸಿಧಾನೆ ಸಜ್ಜಿನೀ
ಶ್ವರಪದಭಕ್ತೆ ಸರ್ವಗುಣಯುಕ್ತೆ ಸುಧಾಕರವಕ್ತ್ರೆ ಮಾನವೋ
ತ್ತ್ಕರನುತಪಾದಪಂಕರುಹೆ ಚೇಳನಿದೇವಿ ಮಹೀತಳಾಗ್ರದೊಳ್ ॥ ೬

ಮನಸಿಜಕಾಂತೆಗಮಂತಿಂ
ದ್ರನ ಸತಿಗಂ ಚಂದ್ರಮನ ವನಿತೆ ರೋಹಿಣಿಗಂ ।
ತಾಂ ನೂರ್ಮಡಿ ರೂಪಕ್ಕಂ
ಜಿನಚರಣಸರೋಜಭಕ್ತಿಗಂ ವಿನಯುಕ್ಕಂ ॥ ೭

ಜನಕಜೆಗೆ ಭಾರತಿಗೆ ಗೋ
ಮಿನಿಗೆ ತಿಲೋತ್ತಮೆಗೆ ನೋಡೆ ಸಾಸಿರ್ಮಡಿ ಚೇ ।
ಳನಿ ಶೀಲದೇಪ್ಪಗಂ ಮೇ
ದಿನಿಯೊಳಗೆ ಸುಬುದ್ಧಿಗಂ ವಿಳಾಸೋನ್ನತಿಗಂ ॥ ೮

ದಯೆಯು ತವರ್ಮನೆ ಭವ್ಯೆ
ಪ್ರಯೆ ಸಕಲಜನಾನುರಾಗೆ ಜಿನಪಾದಪದ ।
ದ್ವಯವನಿಜಮತ್ತವೆಧುಕರೆ
ನಯವಿದೆ ಭುವನೈಕಪೂಜ್ಯೆ ಚೇಳನಿ ಧರೆಯೊಳ್ ॥ ೯

ಎನಿಸಿ ನೆಗಪ್ಪೆಗಂ ಪೊಗಪ್ಪೆಗಂ ನೆಲೆಯಾದ ಚೇಳನಿಮೆಹಾ
ದೇವಿಗಂ ನಿನಗಂ ॥] [1] ೧೦

---

[1] ನಿನಗಂನಿನ್ನಪಟ್ಟದರಸಿಯಪ್ಪಚೇಳನಿಮಹಾದೇವಿಗಂ (ಗ)

ಉದಯಗಿರಿಯೊಳ್ ದಿವಾಕರ
ನುದಯಂಗೆಯ್ವಂತೆ ಸಕಲಗುಣಗಣನಿಳಯಂ ।
ವಿದಿತಯಶಃಪುಂಜಂ ಪು
ಟ್ಟಿದನೊಪ್ಪಿರೆ ವಾರಿಷೇಣನೆಂಬ ಕುಮಾರಂ ॥ ೧೧

[ಅಂತಾಸದ್ಗುಣನಿಧಿ ವಿ
ಖ್ಯಾತಂ ಭೂಭುವನವಂದಿತಕ್ರಮಯುಗ್ಮಂ ।
ನೀತಿವಿದಂ ಭವ್ಯಜನ
ಪ್ರೀತಂ ಜಿನಸಮಯವಾರ್ಧಿವರ್ಧನಚಂದ್ರಂ ॥] ೧೨

ದೃಢಚಿತ್ತಂ ಗುಣನಿಳಯಂ
ಕಡುಗಲಿ ಕಿಱಿಯಂದು ದಿವ್ಯ ಜಿನಮುನಿಗಳ ಮೆ ।
ಲ್ಲಡಿಯಂ ಪಿಡಿದು ತಳರ್ದಡೆ
ನಡೆಗಲ್ತಂ ಭವ್ಯವನಜವನಕಳಹಂಸಂ [1] ॥ ೧೩

[ಬಿಡು ಮಿಥ್ಯಾತ್ವಮನಂಜದೆ
ಪಿಡಿ ಸಮ್ಯಕ್ತ್ವಮೆನುದಾರಚಿತ್ತದಿನೆಂಬೀ ।
ನುಡಿಯನೆ ನುಡಿದು ಮನಂಬಿಡೆ
ನುಡಿಗಲ್ತಂ ಸುಕವಿನಿಕರಪಿಕಮಾಳಂದಂ ॥] ೧೪

ಉಡೆವಱಿದಂದಿಂಬಱಿಕೆಡೆ [2]
ಯುಡುಗದೆ ಜಿನಮುನಿಗಳಿಂ ಜಿನಾಗಮವುಂ ನೇ ।
ರ್ಪಡೆ ಕೇಳ್ದೊದವೆ ಜಿನಮುನಿ
ಗಡಣದೊಳ ವಿವೇಕಿಯಾಗಿ ಪೊಚ್ಚಂ ಕಳವಂ । ೧೫

ಭವ್ಯರ ಗೋಷ್ಠಿಯ ತಪದೊಳ್
ದಿವ್ಯಮೆನಿಪ್ಪವರ ಪಾದಸೇವೆಯೆ ಜಿನಸ ।

---

1 ನಡೆಗಲ್ತಂಸುಕವಿನಿಕರಪಿಕಮಾಳಂದಂ (ಗ)

2 ಉಡೆವಱಿಪಱಿದಂ ಬಱಿಕಂತಡೆ (ಕ. ಬ.)

ತ್ಯಕ್ತವ್ಯಂಗಳ ಭಾವನೆಯೆ ಮ
ಹಾವ್ಯಸನಂ ವಾರಿಷೇಣನೃಪತಿಗೆ ನಿಚ್ಚಂ ॥ ೧೬

[ಅಂತು ಗುಣಗಣನಿಳಯನುಂ ವಿನಯನಿಧಾನನುಂ ಜಿನಪಾದ ಪದ್ಮಮೆಧುಪನುಂ ಜಿನಾಗಮೆಳನಾಗಮೆಮೆಯೂರನುಂ ಪಾಪೀಭಪಂ ಚಾನನನುಮೆನಿಸಿ] ಆವಾರಿಷೇಣಕುಮಾರಂ ಸುಖಸಂಕಥಾವಿನೋದದಿಂ ಯುವರಾಜ್ಯಶ್ರೀಯನನುಭವಿಸುತ್ತಿರ್ಪನ್ನೆಗಂ ॥ ೧೭

[ವಿಮಲಗುಣಾಹ್ವಸರ್ವಕಲಾ
ಗಮಯುಕ್ತೆರ್ಮುನಿಜನಾನುರಾಗರ್ದುರಿತ ।
ದ್ಯುಮಣಿಗಳಗಣಿತಚರಿತ
ಸರ್ವಸ್ತುಜೀವೋಪಕಾರಿಗಳ್ ದಯೆನಿದಿಗಳ್ ॥] ೧೮

ಮುಂಡಿಯಪುತ್ರಾಚಾರ್ಯರ್ [ಗ್ರಾಮಯೋಕರಾತ್ರಂ ನಗರೇ ಪಂಚರಾತ್ರಮೆಟವ್ಯಾಂ ದಶರಾತ್ರಮೆಂಬ ಪೂರ್ವಕಾಸ್ತ್ರೋಕ್ತಿಯಿಂ] ವಿಹಾರಿಸುತ್ತುಂ ನಿನ್ನ ಪುರಕ್ಕೆ [ವಂದು ತತ್ಪುರದ ಮೂಡಣ ದೆಸೆಯ ಬಾಳ್ಮಪಕವೆಂಬ ಪರ್ವತಪೊಳಿಪ್ರದುವೊಮುನಿಯ ಬರವಂ ಋಷಿನಿವೇದಕಂ ನಿನಗಱಿಪುವುದುಂ ॥ ೧೯

ಕರಮೆಲ್ಲದೊಸೆದು ತನ್ಮನಿ
ವರನಿರ್ದಾದೆಸೆಗೆ ನಡೆದು ಬಿಡದೇಱಿಯಂ ।
ಕರಮುಗಿದು ತುಷ್ಟಿದಾನಮ
ನೆರಡಿಲ್ಲದೆ ಋಷಿನಿವೇದಕಂಗಿತ್ತಾಗಳ್ ॥ ೨೦

ಆನಂದಭೇರಿಯುಂ ಪೊಯ್ಸಿ] [1] ಚೇಳಿನಿಮಹಾದೇವಿ ಮೊದಲಾಗೆ ಸ್ಟಾಸಿರ್ವರರಸಿಯರುಂ ವಾರಿಷೇಣಕುಮಾರಂ ಮೊದಲಾದ ಕುಮಾರರುಂ ಯೆಸ್ಟಾಸಿರ್ವರ್ಮಕುಟಬದ್ಧರುಂ [ಪುರದೊಳಗಣ ಶ್ರಾವಕರುಂ] ಬೆರಸು ॥ ೨೧

[1] ವಂದು ಬಹಿರುದ್ಯಾನದೊಳಿರ್ದುದಂ ಋಷಿನಿವೇದಕನಿಂದವಱಿದು (ಗ)

ತುಂಬಿಗಳಬ್ಜಿನಿಗೆಳಸಿ ಮೆ
ನಂಬಿಡೆ ಬರ್ದಂತೆ ನೀನುಮೆತ್ಯಾದರದಿಂ ।
ದಂ ಬಯಸಿ ದಿವ್ಯಮುನಿಚರ
ಣಾಂಬುಜಮಂ ಕಾಣಲೆಂದು ರಾಜಾಲಯದಿಂ ॥ ೦೦

ಪೊಱಮೆಟ್ಟು ಬಂದು [ಬಳಾಹಕಗಿರಿಯೊಳಿರ್ದು] ಮುಂಡಿಯ ಪುತ್ರಮುನೀಂದ್ರರ ಪಾದಸರಸಿಜಮಂ ಸರಸಿಜಾದಿಕುಸುಮೆಂಗಳಿಂದ ರ್ಚಿಸಿ ಬಂದಿಸಿ [1] ಕಿಱಿದುಬೇಗಂ ಧರ್ಮಶ್ರವಣಮಂ ಕೇಳ್ದು [ತನ್ಮನಿ ಪುಂಗವೆಂಗೆ] ಪ್ರಣನರ್ಮಸಕ್ಕಾರಂಗೆಯ್ದು ರಾಜಮಂದಿರಕ್ಕೆ ನೀಂ ಮಗು ಱ್ವುದುಂ ನಿನ್ನೊಡನೆ ಸಕಲಜನಂಗಳುಂ ಮಗುಱ್ವುದುಂ ವಾರಿ ಷೇಣಕುಮಾರನೊರ್ವನೆ ಮುನಿನಾಥನನಗಲ್ದು ಬರಲಾಱದೆ ಪೆಱಿ ಗಿರ್ದು [2] ॥ ೦೩

ಬಿಡದೆ ಕಡಾರದ ಪೊನ್ನಂ
ಕಡುಲೋಭಂ ಕಂಡು ಮೋಹದಿಂದಾ ಪೊನ್ನಂ ।
ತಡೆಯದೆ ನೊಡುತ್ತಿರ್ಪವೊ
ಲಡಿಮಿಡುಕದೆ ನಿಂದು [ವಾರಿಷೇಣಂ ಮುನಿಯಂ ॥ ೦೪

ಮನದೆಱಕದಿಂದೇಱಲುಮಿಱಯಲುಂ ನೋಡಿ ತಂಗಾಳಯ ಪೊರ್ದುಗೆಯಿಂ ನಯಂ ಬಡೆದೆಳಲತೆಯಂತೆ ಪೆರ್ಚಿ ॥] [3] ೦೫

ಮನದೊಳ್ಕರಮುತ್ಸಾಹದಿ [4]
ನನವರತಂ ನಿಚ್ಚ ನಿಚ್ಚಮಿರುಳುಂ ಪಗಲುಂ ।
ಜಿನಪದಮುಂ ಜಿನಮತಮುಂ
ನೆನೆವ ಮಹಾತ್ಮನೆ ಕೃತಾರ್ಥನವನೀತಳದೊಳ್ [5] ॥ ೦೬

---

[1] ಮುಂಡಿಯುಪುತ್ರರಂ ವಂದಿಸಿ (ಗ) [2] ನೀಂ ಮಗುಳ್ದು ಬರ್ಪುದುಂ ವಾರಿಷೇಣಕುಮಾರಂ ನಿನ್ನೊಡನೆ ಬರಲೊಲ್ಲದೆ ಪೆಱಿಗಿರ್ದು (ಗ)
[3] ತನ್ನ ಕಣ್ಣಿನಿನಿಗಂ ॥ ನೋಡಿ (ಗ) [4] ವಚನದೊಳಂತಾ (ಗ)
[5] ಕರಂ ಪೊಗೞ್ವ ನರನೆ ಧನ್ಯಂ ಜಗದೊಳ್ (ಗ)

[ಎಂದು ಮನದೊಳ್ ಭಾವಿಸಿ ವಾರಿಷೇಣಕುಮಾರಂ ಮುಂಡಿ ಪುತ್ರದಿಗಂಬರಾಧೀಶ್ವರನ ಪಾದೋಪಕಂಠದೊಳ್ ಕುಳ್ಳಿರ್ದು ಚರಣ ಯುಗಂಗಳಂ ಮೆಲ್ಲಮೆಲ್ಲನೊತ್ತುತ್ತಿರ್ಪುದುಂ ತನ್ನುಸೀಶ್ವರಂ ಜಿನ ಸಮಯವಾರ್ಧಿವರ್ಧನಚಂದ್ರನಂ ನೋಡಿ ತನ್ನಂತರಂಗದೊಳಿಂ ತೆಂದಂ ॥] [1] ೬೭

ದೂರದೊಳಿರ್ದುಮರ್ತಿವೆರಸಂಬುರುಹಕ್ಕೆ ನುದಾಳಿಸಂಕುಳಂ
ಭೋರೆನೆ ಬಂದು ತೀವಿ ನೆರಸಿರ್ಪುವು ಕಪ್ಪಗಳಲ್ಲಿ ಪುಟ್ಟಿಯುಂ
ಸಾರವು ನೋಡ್ಪೊಡೊಳಿಗರಸೂಳ್ಗಿದಪ್ಪವರಿಂತು ಪೊರ್ದುವರ್
ದೂರದೊಳಿರ್ದೊಡಂ ಕೆಲದೊಳಿರ್ದೊಡವೊಂದುವರಲ್ಲರುದ್ಧರ ॥ ೬೮

ಎಂದು ವಾರಿಷೇಣಕುಮಾರನೊಳಾದ [ಮಹಾಭಕ್ತಿಗಂ ತಮ್ಮ ಯ್ಯನೊಡನೆ ಪೋಗದ ಧರ್ಮಾನುರಾಗದಿಂದಿರವಿಂಗಂ ಚೋದ್ಯಂ ಬಟ್ಟಿರ್ಪುದುಂ ಚೇಳಿನೀಪ್ರಿಯಾತ್ಮಜಂ ತನ್ನುಸೀಂದ್ರಂಗಭಿಮುಖನಾಗಿ ತಲೆಯಂ ಬಾಗಿ ಕೈಯಂ ಮುಗಿದಿರ್ದಂತೆಂದಂ ॥] [2] ೬೯

ದಾನಮುಮೆಂ ಧರ್ಮಮುಮೆಂ
ನಾನಾಪೂಜೆಯುಮನೆಲ್ಲರುಂ ಕೈವಲ್ಯ ।
ಶ್ರೀನಾರಿಯನೆಯ್ದುವೆಂ
ದಾನಂದಂಬೆರಸು ಮಾಡುವರ್ವಸುಮತಿಯೊಳ್ ॥ ೭೦

ಅಲ್ಲಿ [ಸಿರ್ವಾಣಲಕ್ಷ್ಮಿಯ] [3] ನೆಯ್ದಿಸಲಾರ್ಪ ದೇವನುಮೆಂ ತಪಮುಮೆಂ ಧರ್ಮಮುಮೆಪಾಗಮಮುಮೆಂ ದಾನಮುಮೆಂ ಪೂಜೆ

---

1 ಎಂದು ಭಾವಿಸಿ ತನ್ನುಸೀಶ್ವರನ ಪಾದೋಪಕಂಠದೊಳಿರ್ದು ಮೆಲ್ಲಮೆಲ್ಲನೆ ಕಾಲನೊತ್ತುತಮಿರ್ಪುದುಂ ಮುಂಡಿಯಪುತ್ರಾರ್ಯರ್ ವಾತ್ಸಲ್ಯರತ್ನಾಕರನಂ ನೋಡಿ (ಗ)

2 ಕಿಗೆ ಮೊಚ್ಚುತ್ತಮಿರ್ಪುದುಂ ಸುಕಪಿನಿಕರಪಿಕವಾಕಂದನಿಂತೆಂದು ಬಿನ ಗೊಂಡಾ (ಗ) 3 ವೀಕ್ಷನು (ಗ)

ಯುಮಂ ನಿನ್ನಡಿ ನೀವನಗಱುಪಂತಾಗೆ [ಬಸಸುವುದೆಂಬುದುಂ ಮುನಿ
ವೃಂದಾರಕ] [1] ನಿಂತೆಂದಂ ॥ ೩೧

ವನಿತೆಯರಂ ವನಿತೆಯರೊಳ್
ಕನಕಮನೋರಂತೆ ಕನಕದೊಳ್ ರತ್ನಮನಿಂ ।
ಬೆನೆ ರತ್ನದೊಳ್ ವಿಚಾರಿಸಿ
ಮನದೊಳ್ ಕೀಲ್ಮೀಲಿದೆಂದು ನಂಬುವ ತೆಱದಿಂ ॥ ೩೨

ಆಪ್ತನನಾಪ್ತನೊಳ್ ತಪಮುಂ ತಪದೊಳ್ ಧರ್ಮಮುಂ ಧರ್ಮ
ದೊಳ್ ಆಗಮಮನಾಗಮದೊಳ್ ದಾನಮುಂ ದಾನದೊಳ್ ಪೂಜೆಯುಂ
ಪೂಜೆಯೊಳ್ ಪರೀಕ್ಷಿಸಿ ಬೇಗಮಿಷನಾಪ್ತನಿವನನಾಪ್ತನಿದು ಸತ್ತಪ
ಮಿದು ದುಸ್ತಪಮಿದು ಸದ್ಧರ್ಮಮಿದು ಕುಧರ್ಮಮಿದಾಗಮಮಿದನಾ
ಗಮಮಿದು ಸದ್ದಾನಮಿದು [2] ಕುದಾನಮಿದು ಪೂಜೆಯಿದು ಕುಪೂಜೆ
ಯಿದು ಸುಖಕ್ಕೆ ಕಾರಣಮಿದು ದುಃಖಕ್ಕೆ ಕಾರಣಮಿದು ಮುನ್ನಮಿದು
ಬಱಿಕಮೆಂಬುದಂ ಬುದ್ಧಿಯಿಂ [2] [ಸಂಚಲಚಿತ್ತನಾಗದೆ ತನ್ನೊಳಾರೈದು
ನೋಡಿ] ಜಲಮಿಶ್ರಿತಮಪ್ಪ ಪಾಲು ಮುಂದಿಡಲ್ ಹಂಸೆಯೆಂತು ನೀರ
ಬಿಟ್ಟು ಪಾಲಂ ಕುಡಿವುದಂತ ಕುಧರ್ಮಮುಂ ಬಿಟ್ಟು ಸದ್ಧರ್ಮಮಂ
ಕೈಕೊಳ್ವುದು ॥ ೩೩

ನಿರ್ದೋಷಿಯಲ್ಲದವನಂ
ಪೊರ್ದಲ್ವೇಡಾಪ್ತನಂದು ಮೀಲ್ಪಟ್ಟಿನಿಸಂ ।
ನಿರ್ದೋಷಿಯಪ್ಪ ಮನಸಿಜ
ಮರ್ದನನಂ ದೇವನೆಂದು ಪೂರ್ದುಗೆ ಭವ್ಯಂ ॥ ೩೪

ಕುರುಡನಪ್ಪ ಪೊಲಂಬಿಗನಂ ನಂಬಿ ಗಟ್ಟದಿಟ್ಟೆಡೆಯೊಳರುಳ್
ದೂರದೇಶಕ್ಕೆ ಪಯಣಂಜೋಪೆಂಬಾತನುಂ ದೋಷಿಯಪ್ಪಾಪ್ತನಂ
ನಂಬಿ ತಪಂಗೆಯ್ದು ಮುಕ್ತಿವಡೆವೆನೆಂಬಾತನುಂ ನಿರ್ಬುದ್ಧಿಗಳಲ್ಲದೆ
ಬುದ್ಧಿವಂತರಲ್ಲರ್ ॥ ೩೫

---

1 ಬಿಸಸುವೆಂಬುದುಂ ಮುನೀಂದ್ರೋತ್ತಮ (ಗ)
2 ಬಳಿಕ್ಕಮಿದುವೆಂಬ ಬುದ್ಧಿಯಿಂ (ಗ)

ತಕ್ಕನಿವನಲ್ಲನಳಿಪಂ
ಟಕ್ಕಂ ಖಳನೆಂದು ಪೊರ್ದರತಿಧೂರ್ತನನೋ ।
ನಕ್ಕಟ ಖಳರಂ ಕ್ರೂರರ
ನುಕ್ಕೆವದಿಂ ದೇವರೆಂದು ಪೇಪ‘ ಪೊರ್ದುವುದೇ ॥ ೫೬

ಕಲ್ಲ ದೋಣಿಯನೇಱಿ, ಬಂದ ತೊಱೆಯೊಳ್ ಪೋಪೆನೆಂಬನುಂ ಕ್ರೂರನಪ್ಪಾಪ್ತನಂ ಪಿಡಿದು ಮೋಹ್ಹಕ್ಕೆ ಪೋಪೆನೆಂಬನುಂ ಕರವೆಗ್ಗರಲ್ಲದೆ ಚತುರರಲ್ಲರ್ ॥ ೫೭

[ಇವನೀಧಾತ್ರಿಗೆ ತಾಂ ಮಹಾಪ್ರಭು ಗಡಾ ವೋವಿಂತೆದೇಕಟ್ಟು ಕಾಡುವನೆದೊರ್ವೀಪುವನೆಟ್ಟ ಬೇಡುವನಣಂ ನಾಣಿಲ್ಲ ಬೂತೆಂದು ದೂಱುವರಾರಾದೊಡಮೆಟ್ಟ ವರ್ತ್ಯರುಮೆನಿಂತೇನೆಂಬೊಡಂ ಪೋಗಿ ನಂಬುವನೆಗ್ಗಂ ನೆಱೆ ದೇವರೆಂದು ವಿಟರಂ ಚಾಪಲ್ಯರಂ ಧೂರ್ತರಂ ॥ ೫೮

ಬ್ರಹ್ಮಚರ್ಯಂಗೆಟ್ಟ ತಪಮುಂ ಮೊದಲಾಗೆ ಕೈಕೊಳ್ಳರೆಂದೊಡೆ ಪರವಧೂಪ್ರಿಯರಪ್ಪರಂ ಸರ್ವಜ್ಞರೆಂದುತು ಕೈಕೊಂಡಾಡುವರೋ ॥

ಪುಸಿವನಿವಂ ಮಹಾವ್ಯಸನಿ ಕಳ್ಳನಿವಂ ಕಡುಧೂರ್ತನೆಂದು ಶಂಕಿಸಿ ಭಯದಿಂದೆ ಬಚ್ಚಳಿಸಿ ಮೋನಿಸರಂ ಮೊದಲಾಗೆ ಪೊರ್ದಿರಂ
ಜಿಸುವ ಸುವಸ್ತ್ರಾಧಾರಿಗಳಸಿಪ್ಪವಿಘಾತರ ನಷ್ಟಶೌಚರಂ
ಪುಸಿವರನಾಪ್ತರೆಂದು ನೆಱೆ ಪೊರ್ದುವ ಮರ್ತ್ಯನೆ ಗಾಂಸನುರ್ವಿಯೊಳ್ ॥

ಅರಸಿನ ಮೇಲರಸಾದೊಡೆ ಮೊದಲಾಗೆ ನಾಡೆಲ್ಲಂ ಕೆಟ್ಟು ಪಾಪಿಷ್ಠನೆಂದೊಡೆ ಜಗದೊಳಡಕಿಲ ದೈವಮಾದೊಡೆ ಕಿಡದಿರ್ಕುಮೆ, ನಾಡ ನಾಳ್ವರಸು ಮೊದಲಾಗೆ ಕ್ರೂರನಾದೊಡೆ ಲೋಕಮೆಲ್ಲಂ ಕಿಡದಿರ್ಕುಮೆ; ವಿಟನಪ್ಪ ಪ್ರಭುವೆಂ ಮೊದಲಾಗೆ ಬಗೆಯರೆಂದೊಡೆ ವಿಟನಪ್ಪ ದೇವನೆಂತು ಬಗೆವರದಱಿಂ ದೇವರ್ಪಲರಿಲ್ಲ ನಿರ್ದೋಷಿಯಪ್ಪನೊರ್ವನೆ;

ಪರಮಾತ್ಮನುಂ ಶಾಂತರೂಪನಲ್ಲದೆ ಕ್ರೂರನಲ್ಲಂ ; ಮನೋಜವಿದ್ರಾವಣ
ನಲ್ಲದೆ ವಿಟನಲ್ಲನೆಂದು ನಂಬುವುದು ॥] ೪೧

ಅರಸನ ನಡೆದೋಜೆಯೆ ವಿ
ಸ್ತರದಿಂದಂ ಪ್ರಜೆಗವೋಜೆ ತಂತಮ್ಮಾಪ್ತರ್ ।
ಚರಿಸುವ ವೋಜೆಯೊಳೀಕೆಯೊ
ಚರಿಯಿಸರನ್ಯರ್ವಿರುದ್ಧವಿದು ಧಾರಿಣಿಯೊಳ್ ॥ ೪೨

ಜಗದೊಳಾವಾದೊಡಂ ಸದಾಚಾರರಂ ಕೈಕೊಳ್ವಂತೆ ದುರಾಚಾರ
ರನೇಕೆ ಕೈಕೂಳರನ್ಯವನಿತಾಪ್ರಿಯರಂ ದೂಱುವಂತೆ ಶುಚಿಗಳನೇಕೆ
ದೂಱರ್ ಕಳ್ಳರಪ್ಪರಂ ಕೊಲ್ವಂತೆ ಕಳ್ಳರಲ್ಲದರನೇಕೆ ಕೊಲ್ಲರ್ [ಪುಸಿವ
ವರಂ ದುಷ್ಟರೆಂಬಂತೆ ಸತ್ಯಮುಳ್ಳರನೇಕೆ ದುಷ್ಟರೆನ್ನರ್ ಕಳ್ಳಾಡಿವ
ವರಂ ಪೊಲ್ಲರೆಂಬಂತ ಪಾಲಿಸಿವರನೇಕೆ ಪೊಲ್ಲರೆನ್ನರ್ ಅಡಗಟ್ಟ ಮಡ
ಕೆಯಂ ಪೊಱಗಿಡುವೆಂತೆ ಕೂಸಿನಟ್ಟ ಮಡಕೆಯನೇಕೆ ಪೊಱಗಿಡರ್
ಕೊಂದರಂ ಕೊಲ್ವರಂತೆ ಕೊಲ್ಲದವರನೇಕೆ ಕೊಲ್ಲರ್] ದ್ರೋಹರಪ್ಪವರಂ
ಕವರ್ವಂತೆ ತಕ್ಕವನೇಕೆ ಕವರರ್ ಸಾಧುಗಳ್ಗೆ ಕೈಮುಗಿವಂತೆ ದುಷ್ಟ
ರ್ಗೇಕೆ ಕೈಮುಗಿಯರ್ ಬ್ರಹ್ಮಚರ್ಯಮುಳ್ಳವರ್ಗೆಱಗುವಂತೆ ಮಿಂಡ
ರ್ಗೇಕಱಗರ್ ನಿಸ್ಪೃಹರ್ಗೆ ಕೂರ್ಪಂತೆ ಕಾಂಕ್ಷಿತರ್ಗೇಕೆ ಕೂರರ್ ತಪಂ
ಗೆಯ್ವರ್ಗೆ ಕೈವಾರಂಗೊಳ್ವಂತೆ ದುಷ್ಟರ್ಗೇಕೆ ಕೈವಾರಂಗೊಳರ್
ಅನ್ಯಾಯಪರರಂ ಕಿಡಿಸುವಂತೆ ನ್ಯಾಯಪರರನೇಕೆ ಕಿಡಿಸರ್ ಚಾರಿತ್ರಂ
ಗೆಟ್ಟವರನಾಟ್ಕಡಿಗಳೆವಂತೆ ಚಾರಿತ್ರಮುಳ್ಳರನೇಕಾಟ್ಕಡಿಗಳೆಯರ್ ಅದು
ಕಾರಣದಿಂದೆಳ್ಳನಿತು ಪೊಲ್ಲಮೆಯೊಳಂ ಪೊರ್ದದಂತಪ್ಪ ದೇವನೆ ದೇವಂ
ಪೊಲ್ಲಮೆಯೊಳಾಕ್ಕಡಿದಾತಂ ದೇವನಲ್ಲನೆಂಬುದಂ ಲೋಕದೊಳಾದ ನಡೆ
ವಳಿಯಿಂದಮೇ ಲೇಸಾಗಱಿವುದಿನ್ನು ತಪಮೆಂತಪ್ಪುದೆಂದೊಡೆ ॥ ೪೩

ಪೆಣ್ಣಿಂಗಂ ಪೊನ್ನಿಂಗಂ
ಮಣ್ಣಿಂಗಂ ಕಾಂಕ್ಷೆಯಿಂದಮೆಱಗದೆ ಲೋಕಂ ।

ಬಣ್ಣಿಸೆ ಚಂಚಲನಾಗದೆ
ತಿಣ್ಣಂ ನಡೆವವನೆ ತಾಂ ತಪೋಧನನಕ್ಕುಂ ॥ ೪೪

[ಕರ್ಗಲ್ಲಿನಿತು ಬೆಳ್ಪದೊಡಂ ಬೆಲೆಗೆಯ್ಯುವೇ; ರತ್ನಮಾದೊಡೆ ಬೆಲೆಗೆಯ್ಗುಂ ; ಮಿಥ್ಯಾದೃಷ್ಟಿಯ ತಪಮೆನಿತೊಳ್ಳಿತಾದೊಡಂ ಶಾಶ್ವತಮಪ್ಪ ಸುಖಮುಂ ಕುಡಲಾರ್ಕುಮೇ ? ಶುದ್ಧದರ್ಶನದೊಳ್ಕೂಡಿದೊಡೆ ನಿರಂತರಮಪ್ಪ ಸುಖಮುಂ ಕುಡುಗುಂ ॥ ೪೫

ಪಾಲೊಳ್ ವೊಕ್ಕಳವೊಗೆ ಪೊಯ್ಯೆ ಜಲಮುಂ ಬೆಳ್ಪಕ್ಕುಮಂತಲ್ಲದಾ
ಪಾಲೆಂತುಂ ರುಚಿಯಾಗದಂತೆ ಕೆಲಬರ್ಮಿಧ್ಯಾತ್ವಮುಃಖಂಗಳೊಳ್
ಕಾಲಚ್ಛಿದ್ರಮ ತಪಂಗಳಂ ನೆಗಪೆ ಗ್ರಂಡಂ ದುಷ್ಕರ್ಮರಿಂತಿರ್ದೊಡಂ
ಭೂಲೋಕಸ್ತುತನಪ್ಪ ಸತ್ಪಥದೊಳಂ ಪೊಂದಿರ್ದರಂ ಪೋಲ್ವರೇ ॥೪೬

ಕರ್ಬುನವೆಸಿಸು ಕಾಯದ್ದ ಮೃದುವಾದೊಡಂ ಕಮ್ಮಿಱಲ್ಲದೆ
ಖಡ್ಗಾದಿಶಸ್ತ್ರಂಗಳಾಗದಂತೆ ಕುಮಾರ್ಗಾನುರಾಗಿಗಳನಿಸು ಕುದಿದು
ತಪಂಮಾಡಿದೊಡಂ ನಿರ್ದೋಷಿಯಪ್ಪ ಪರಮಾತ್ಮನಂ ಪೊರ್ದಿದೊಡಲ್ಲದೆ
ಸಕಲಸುಖಮೆನೆಯ್ದಲಾಱರಿಂತು ॥ ೪೭

ನೀರಿಲ್ಲದೆಡೆಯ ಬೆಳಸುಂ
ಕ್ರೂರರ ಕೆಳೆಯುಂ ವಿವೇಕಿಯಲ್ಲದನರಸುಂ ।
ಸಾರಗುಣಮಿಲ್ಲದಾತನ
ಚಾರಿತ್ರಮುಮೊಪ್ಪಲಾಱವೆಂತುಂ ಕಡೆಯೊಳ್ ॥ ೪೮

ರಂಡೆ ನಡಪಿದನ ಗುಣಮುಂ
ಗಂಡಿಲ್ಲದ ಭಟನ ಯುದ್ಧಮುಂ ಧರೆಯೊಳ್ ಕೈ ।
ಕೊಂಡುಱೆ ನೆಗಱದ ತಪಮುಂ
ಮಿಂಡನ ತಕ್ಕುಮೆಯುಮೊಪ್ಪಲಾಱವು ಜಗದೊಳ್ ॥ ೪೯

ಪಿರಿದಪ್ಪ ಶಕ್ತಿ ತನಗುಳ್ಳೊಡಂ ಸುರಗಿಯಲ್ಲದೆ ಪಣಿದಗುರ್ವು ಪಱಿಯದಂತೆ ದೋಷವಿರಹಿತಮೆಪ್ಪ ಪರಮಾತ್ಮನ ಮತಮೆಂ ಪೊರ್ದಿ ದೊಡಲ್ಲದೆ ಸಮಸ್ತಕರ್ಮಂಗಳುಂ ನಿರ್ಮೂಲಮಾಗಲಱಿಯುವು ॥ ೫೦

ಸಜ್ಞಾನಮಿಲ್ಲದನ್ನೆಗ
ಮಜ್ಞಾನಮೆದಿರ್ಪು ಬುದ್ಧಿ ವಂತರ್ ನಯದಿಂ ।
ದಜ್ಞಾನವೆನಱಿವೊಡೆ ಕೇ
ಳ್ಸಜ್ಞಾನಮನೆಯೆದ್ದಿ ತಿಳಿಗೆ ಜೈನಾಗಮದೊಳ್ ॥ ೫೧

ಪಡಿಯಱಿನೆನಿತುಕೂರ್ಪೊಡಮಿರವಿನೆಯನಂಸನನುಮೆತಮಲ್ಲದೆ ಪುಗಲ್ಬಾರದಂತೆ ವಿಧ್ಯಾದೃಷ್ಟಿಗಳನಿತುತಪದಿಂ ಕಾಯಕ್ಲೇಶಂಬಟ್ಟೊಡಂ ದೇವರೆಂದಿರ್ದೊಡಂ ಕುಚಕರ್ಕೆಗಳಿಂ ಬಾಯಾರ್ದೊಡಂ ಸಜ್ಞಾನಮಿ ಲ್ಲದೆ ದರ್ಶನಮುಂ ಪೊರ್ದದೆ ಮೋಕ್ಷಮನೈದಲ್ಬಾರದು ॥] ೫೨

ನಾಯಕನಿಲ್ಲದ ರಣಮುಂ
ಮಾಯಾವಿಯ ಸರದುಮೆಳಿಪನಪ್ಪನ ಧನಮುಂ ।
ನ್ಯಾಯಮಣಮಿಲ್ಲದವನ
ಶ್ರೀಯುಂ ನಿರ್ದಯನ ತಪಮುಮೆಸೇನೆಸೆದಪುದೇ ॥ ೫೩

ದೇವನ ದೊರೆಯು ಬಂಟರುಂ ದಿವಿಜಗಜದ ದೊರೆಯು ಮದವಾರಣಂಗಳುಮುಳ್ಳೊಡಂ ಮುಖ್ಯನಾಯಕನಿಲ್ಲದೆ ಮಾರ್ಪಡೆಯುಂ ಗೆಲ್ದು ಗೆಲ್ಲಂಗೊಳಲ್ಬಾರದಂತೆ ದಾನಪೂಜೆಶೀಲೋಪವಾಸಂಗಳಂ ಮಾಱ್ಪುದಾರ ಗುಣಮುಳ್ಳೊಡಮಿರದೆನಿಸುವ ತಪಮುಂ ಮಾಱ್ಪು ದೇಹದ ಬಲ ಮುಳ್ಳೊಡಂ ಅಷ್ಟಾದಶದೋಷದೂರನಪ್ಪ ದೇವನಂ ಸಾರದೆ ಕರ್ಮಂ ಗಳಂ ಗೆಲ್ದು ನಿರ್ವಾಣಸಾಮ್ರಾಜ್ಯಮುಂ ಪಡೆಯಲ್ಬಾರದು ॥ ೫೪

ದಿನಕರನಿಲ್ಲದಂಬರಮುಮುನ್ನತಿಯಿಲ್ಲದ ರಾಜ್ಯಲೀಲೆಯುಂ
ವನಿತೆಯರಿಲ್ಲದೋಲಗಮುಮಾತ್ಮಜರಿಲ್ಲದ ಗೇಹಮುಂ ಜನ

ಜ್ಞಾನನುತಮಪ್ಪ ಪಾಪಹರಮಪ್ಪ ಸದಾಶುಚಿಯುಪ್ಪ ಶುದ್ಧದ
ರ್ಶನಮೆಂಬುದಿಲ್ಲದಾತನ ತಪೋಗ್ರತೆಯುಂ ನೆಱ್ದೊಪ್ಪಲಾರ್ಕುಮೇ॥೫೫

[ಕೈದುವುಳಗ್ಗೃಡಂ ಭುಜಬಲಮುಳ್ಳೃಡಂ ಮನಮಿಲ್ಲದನಿತ
ಱೊಳ ಪಗೆಯುಸಿಱಿಯಲ್ಬಾರದಂತೆ ತಪಮುಳ್ಳೃಷಂ ದರ್ಶನಮಿಲ್ಲದೆ
ಸಕಲಕರ್ಮಂಗಳಂ ಕಿಡಿಸಲ್ಬಾರದಾಕರ್ಮಂ ಕೆಟ್ಟೊಡಲ್ಲದೆ ನಿಶ್ರೇಯ
ಸಶ್ರೀಯುಂ ಪಡೆಯಲ್ಬಾರದ]ದಱಿಂ ಶುದ್ಧದರ್ಶನದೊಳ್ ಮುನ್ನಂ
ದೃಢರಾಗಿ ಬಱುಕೊಳ್ಳಿತಪ್ಪ ತಪಮಂ ವೊಱ್ಪುದೀಧರ್ಮವೆಂತಪ್ಪು
ದೆಂದೊಡೆ ॥ ೫೬

ಕೊಲೆಯೆಂಬೀನುಡಿಗೆ ಮಹಾ
ಕಲಿಯುಂ ವೊದಲಾಗ ನಾಡೆ ಬೆಚ್ಚುವನೆಂದಂ ।
ದೆಲೆ ಗಳ ಬಗೆವೊಡೆ ಜಗದೊಳ್
ಕೊಲೆಯಿಂದಂ ಬಿಟ್ಟು ಪಾತಕಂ ಪೆಱಿತುಂಟೇ ॥ ೫೭

ಧರ್ಮನೆ ಸಾವಾಯ್ತೀತನ
ಧರ್ಮದಿನಾನಂದು ಬಚ್ಚೆನೆಂಬೀ ನುಡಿಯುಂ ।
ಕೂರ್ಮೆಯೊಳ ನುಡಿವೊಡೀತನ
ಧರ್ಮದೊಳಾನಱಿದೆನೆಂದು ನುಡಿವವರೊಳರೇ ॥ ೫೮

[ಬಲ್ಲಿದರಪ್ಪರಸುಗಳನ್ಯಾಯದಿಂದಿನಿತರ್ಥಮಂ ತೆಱಲ್ವೇಱ್ಕುಮೆಂ
ಬರಿಂತಿರ್ಪವರೂರೂರ್ದಪ್ಪದೋರೊರ್ವರ ಜೀವಮಂ ಕುಡಲ್ವೇಱ್ಕು
ಮೆಂದೊಡೆ ನಾಡೆಲ್ಲಮಾತನೊಳಿರ್ದಿ ಕಾದುವರಲ್ಲದೆ, ತೆಱುವವರಲ್ಲ
ದಱಿಂ ಜೀವವಧೆಯೆ ಮಹಾಪಾಪಂ ॥ ೫೯

ಸುತರುಂ ನಂಟರುಮೆಯ್ಯನುಂ ಕೆಳಯನುಂ ಬಲ್ಲಾಳ್ಗಳುಂ ನೋಡೆ
ನೋ
ಡೆ ತಗುಳ್ದಟ್ಟಿ ಪೊರಳ್ಚಿ ಕೊಂದ ಪಗೆಯುಂ ಕೊಳ್ವರ್ಥಯಂಗೊಳ್ವನಂ

ಕ್ಷಿತಿಯಂ ಪೊಕ್ಕುಳಿತಿರ್ದೊಡಂ ಭರದಿನಿನ್ನಿಂತಪ್ಪುದಂ ತಾನೆ ಕಾ
ಣುತುಮಿರ್ದುಂ ಕೊಲೆ ಧರ್ಮಮೆಂದು ಪಿಡಿವಂ ಗಾಂಪಂ ಪೆಱಗಾರ್ದಂ
ಪರೇ ॥ ೬೦

ಈ ಬಟ್ಟೆಯೊಳ್ಸುಂಕಂ ಪಿರಿದೆಂದೊಡೆ ಮೊದಲಾಗದೆಂಬಱಿಲ್ಲಿಗೆ ತಕ್ಕರ್ಥಮುಂ ಕೊಟ್ಟು ಪ್ರೋಷವಂಬರ್ದಾರಿಗಳೂಳಸುಂಬಟ್ಟೆಯೊಳ್ ಕೊಂದಪರೆಂದೊಡೆ ಭಯದಿಂ ಪೋಗಲೊಲ್ಲರೆಂದೊಡೆ ಕೊಲೆಯಿಂದ ಮಿಗ್ಗಳಂ ಪಾಪಮಿಲ್ಲ ॥ ೬೧

ಏಗೆಯ್ದುಂ ಕೊಲೆಯಿಂ ಸುಖ
ಮಾಗದು ಕಡುದುಃಖಮಕ್ಕುಮಂಬುದನಱಿದಿಂ ।
ಬಾಗಿ ತಿಳಿದೆಯ್ದೆ ಕೊಲೆಯಂ
ದ್ಯೋಗಮನತಿಕಷ್ಟಮೆಂದು ಬಿಡುವುದು ಭವ್ಯಂ ॥] ೬೨

ದೂರದ ಪೊಗೆಯುಂ ಕಂಪ್ಪು ಕಿಚ್ಚುಂಟೆಂದಱಿವಂತೆ ಮಹಾವಿಭೂತಿಯಂ ಬಿಟ್ಟೆಕ್ಕಡವುಂ ಪೆಟ್ಟ ಬಿಲ್ಲೊಂಡು, ಕರಿತುರಗಾದಿಗಳನೊಲ್ಲದೆ ನಾಯಿಗಳ್ವೆರಸು ಸಿವಿಗೆಯನಿರಿಸಿ ನಡೆದು, ಗಣಿಕಾಜನಮುಂ ಮಂಡಳಿಕರುಂ ಸಾಮಂತರುಮಿಲ್ಲದೆ ಕ್ರೂರರಪ್ಪ ಬೇಂಟೆಗಾಱರೊಳ್ಕೂಡಿ, ಮಣಿಕಂಕಣಮನೆಸೊಲ್ಲದೆ ಕೈಪೊಡೆಯುಂ ಕಟ್ಟಿ, ದಿವ್ಯಾಂಬರಮನೀಡಾಡಿ ಕರಿಯ ಕುಪ್ಪಸಮುಂ ತೊಟ್ಟು, ಹಾರಾದ್ಯಾಭರಣಂಗಳನೆಸೊಲ್ಲದೆ ತೋಲ್ಗಟ್ಟಿ, ಪಂಚಮಹಾಶಬ್ದಮನೊಲ್ಲದೆ ಬೇಂಟೆಸಱುಮುಂ ಪೊಯ್ಸಿ, ಶಾಂತರೂಪಂ ಬಿಟ್ಟು ಕ್ರೂರರೂಪು ಕೈಕೊಂಡು ನಗೆಯಂ ಬಿಟ್ಟು ಮುಳಿಸನೊಳಕೊಂಡು, ಬೇಂಟೆಗೆ ಪ್ರೋಷ ರೌದ್ರಾತ್ಮರ ನೆಗಪ್ತೆಯೆ ನರಕಗಮನಮನಱಿಪುಗುಮದಂ ಕಂಡು ಕೊಲೆಯೆ ದುಃಖಹೇತುವೆಂದಱಿದು ಕೊಲೆಯಂ ಮಾಣ್ಬುದು ॥ ೬೩

ಸೊಗಯಿಪ ಸುಖದೊಳ್ಕೂಡುವೆ
ಬಗೆಯುಳ್ಳಡೆ ಜೈನಮಾರ್ಗಮಂ ನಂಬುಗೆಯಿಂ ।
ಸುಗಮಮನೆ ಪಿಡಿದು ಬಿಡುವ್ರದು
ಪಗೆಯಿಂದುಳ್ಳಕ್ಕ ಕೊಲೆಯೊಳೊಂದಿದ ಮತಮಂ ॥ ೬೪

ಇನ್ನಾಗಮವೆಂತಪ್ಪುದೆಂದೊಡೆ, ವಿಚಾರವೆಂ ತಿರ್ದುವೆ ಧರ್ಮಾಧಿಕರಣರೆಂತವರವರ್ನುಡಿವೆ ಪದ್ಧತಿಯಿಂದಿರ್ವರ್ಕಳ್ಗರಿವರ್ಕುದ್ಧರಿಂದಱಿವರಂತೆ ಬುದ್ಧಿವಂತರ್ ಸಕಳಾಗಮಂಗಳೊಳಾದ ನುಡಿಗಳಂ ಪರೀಕ್ಷಿಸಿ ತಿಳಿದು ನರಕಕ್ಕೆ ಕಾರಣಮೆಪ್ಪ ಕುಮತವಿದು ಮೋಕ್ಷಕ್ಕೆ ಕಾರಣಮೆಪ್ಪ ಸನ್ಮತವಿದೆಂದು ನೋಡಿ ಪಿಡಿವುದು ॥ ೬೫

ಕುರುಡನರ್ಮರ್ಮನೆರೆದುಂ
ಸುರಗಿರಿ ಮುಂದಿರ್ದುದಾದೊಡಂ ಕಾಣ್ಬರೆ ಕಾ।
ಪುರುಷಮರ್ಥಾಜ್ಞಾನಿಗ
ಳುರುನಿರ್ಮತಿಗುಯ್ವ ಧರ್ಮಮುಂ ಕಂಡಪರೇ ॥ ೬೬

ಎನಿಸು ಶಕ್ತಿಯುಳ್ಳೊಡವುಷಧಂ ತಱಿಂಟುದಲೆಯೊಳ್ ರೋಮಮುಂ ಪುಟ್ಟಿಸಲಾಱದು; ಎನಿತು [ಗಾರುಡಮಂತ್ರ] ಬೀಜಾಕ್ಷರಮಾದೊಡಂ ಕೊಪೆವಾವಂ ಕೇಳಿಸಲಾಱದು; ಎನಿತುಶೃಂಗಾರವತಿಯಾದೊಡಂ ಸೂಳೆ ವಿರಕ್ತನನೊಲಿಸಲಾಱಳಂತೆ ಬದ್ಧಮಿಥ್ಯಾದೃಷ್ಟಿಯಪ್ಪ ಜೀವಮುಮಂ ಬೇಗಂ ನರಕಂಬುಗಲ್ವೋಡಿರ್ದ ಜೀವನೆಮುಮಂ ಅಭವ್ಯನಪ್ಪ ಜೀವನುಮಂ ಪರಮಾಗಮಮೆನಿತುಲೇಸಾಗಿಯುಂ ಸೋಲಿಸಲಾಱದದು ಪ್ರಮಾಣಮಲ್ಲದು ಬುದ್ಧಿವಂತರಪ್ಪರಾರೈದು ತಿಳಿದು ನಂಬುವುದು ॥ ೬೭

ಪೇಲಿಂಗೆ ನೊಣಂಗಳ್ ಕಡು
ಸೋಲದಿನೆಱಗುವುವು ಕಪ್ಪುರಕ್ಕೀಗೆಯುಂ।
ಸೋಲದಿನೆಱಗವು ಜಗದೊಳ್
ಪೇಲೇಂ ಮೇಲಾಯ್ತೆ ಕಪ್ಪುರಂ ಕೀಟಾಯ್ತೋ ॥ ೬೮

[ಪಿತ್ತಮುಳ್ಳವರ್ಗೆ ಪಾಲ್ ಕೈಪೆದಱಕ್ಕುಮಲ್ಲದೆ ಪಿತ್ತಮಿಲ್ಲದಂಗೆ ಕೈಪೆಯಾಗದಂತೆ ತೀವ್ರಕರ್ಮಮುಳ್ಳವಂಗೆ ಪರಮಾಗಮಂ ರಂಜಿಸದಲ್ಲದೆ ಲಘುಕರ್ಮಿಗೆ ರಂಜಿಸುಗುಂ ॥ ೬೯

ಮೊದಲಿಂ ಕಡೆವರೆಗಂ ಪೇ
ಳ್ವುದು ಪೂರ್ವಾಪರವಿರುದ್ಧಮಪ್ಪಾಗಮದೊಳ್ ।
ವಿದಿತಂ ಕೇಳಿಲ್ಲದಱಿಂ
ಸುದೂರಮಾ ಮೋಕ್ಷಮೆಂದು ನಂಬುವುದು ಬುಧಂ ॥ ೭೦

ಪೂರ್ವಾಪರವಿರೋಧಮಂ ಕಂಡೊಡೆ ಮೊದಲಾಗೆ ಲೋಕದ ಜನಂಗಳವರ್ಕಳ್ಳನೆಂದು ನಂಬರೆಂದೊಡೆ ಪೂರ್ವಾಪರವಿರುದ್ಧಮಪ್ಪಾಗಮಮೆನೆಂತು ಕೆಲರ್ಜಡಮತಿಗಳ್ ನಂಬುವರೋ ॥] ೭೧

ಪೇೞ್ವಿರ್ತಮ್ಮಿಚ್ಛೆಗೆವರೆ
ಪೇೞ್ವಿರದೇಂ ದೋಷಮಾಯ್ತು ಬಳ್ತನದಿಂದಂ ।
ಕೇಳ್ವರ್ತಾವೆತ್ತಾಗದೆ
ಕೇಳ್ವುದು ಲೇಸಾಗಿ ಮನದೊಳಾರಯ್ಯುತ್ತುಂ ॥ ೭೨

ಪಂದಿ ಕೆಯ್ಯಂ ತಿಂದೊಡೆ ಕತ್ತೆಯ ಕಿವಿಯಂ ಕೂಯ್ದರೆಂಬಂತ ಸೂಳಬಂಟಂಗಾಱದೆ ಶಂಖದಗೊರವನಂ ಬಡಿದರೆಂಬಂತೆ ಪೆಂಡಿರ ದೋಷಕ್ಕೆ ಮಕ್ಕಳ ಮೂಗಂ ಕೊಯ್ದರೆಂಬಂತೆ ಅವಿಚಾರದಿಂ ಪಕ್ಷಪಾತಿಯಾಗದೆ ಮಾಣಿಕಪರೀಕ್ಷಂ ಮಾಣಿಕಮೆಂ ಪರೀಕ್ಷಿಸುವಂತೆ ಪರದಂ ವಸ್ತುವಂ ಪರೀಕ್ಷಿಸುವಂತ ಸುಜನವಿದಗ್ಧರಂ ಪರೀಕ್ಷಿಸುವಂತೆ ಬಂಡಾರಿಗರ್ಪೊನ್ನಂ ಪರೀಕ್ಷಿಸುವಂತೆ ವಿಚಾರಪೂರ್ವಕಮಾಗಿ ಧರ್ಮಂಗಳಂ[1] ಪರೀಕ್ಷಿಸಿ ಪರಮಾಗಮಮೆಮ್ಪುದನೇಕಚಿತ್ತದಿಂ ನಂಬಿ ಸಂಶಯಮತಿಯಾಗದೆ ತದಾಗಮಕ್ರಮದೊಳ್ ನೆಗೞ್ವುದು; ಇಂತೀದಾನಮೆಂತಪ್ಪುದೆಂದೊಡೆ ॥ ೭೩

ಉರಗತತಿಗಂ ಗೋವ್ಗೆಂದಕ್ಕಂ ಮನೋಹರಮಾಗೆ ಚಕ್ಕ
ಚ್ಚರದಿನೆಱೆಯಲ್ಬೇಗಂ ಕೇಳ್ಗೊಂದೆ ಬಾವಿಯ ಸೀದಾ

---

1 ವಿಚಾರಮುಪ್ಪೀಪೂರ್ವಕ್ರಮಂಗಳ್ (ಗ)

ದರದಿನುರಗಂ ಪೀರ್ದಾನೀರ್ನಂಜು ಜೀವಧನಂ ಸವಿ
ಸ್ತರದೆ ಕುಡಿವಾ ತೋಯಂ ಪಾಲಂತೆ ಪಾತ್ರಮುಪಾತ್ರಮುಂ [1] ॥ ೬೪

ಸೊಳಪ್ಪ ಭೂವಿಯನುತ್ತು [ದಕವನೆಚೆದು] ಕಸವಮುಂ ಕಳೆದು ಬಿತ್ತಿ ಬೇಲಿಯನಿಕ್ಕಿ ಪಿರಿದುಂ ಪ್ರಯತ್ನಮುಂ ಮಾಡಿದೊಡಂ ಕರಿಯ ಭೂಮಿಯ ಬೆಳೆಸನಂತಕ್ಕುಮು, ಕುಪಾತ್ರಕ್ಕೆನಿತು ಕುದಿವು ಭಕ್ತಿಯೊಡಿದೊಡಂ ಸುಪಾತ್ರಕ್ಕೆ ಕೊಟ್ಟ ದಾನದ ಫಲದಂತಾಗಲಱಿಯುದದಱಿಂ ಸುಪಾತ್ರದಾನವು ಮಿಗಿಲೆಂದಱಿವುದು; ಇಂತೀಸತತ್ಪೂಜೆಯಿಂತಪ್ಪುದೆಂದೊಡೆ ॥ ೬೫

ಎಲವದ ಪುಷ್ಪದೊಂದುಕವನೀಯತೆಯುಂ ಗಿಳಿ ಕಂಡು ಸೋಲ್ತುಕೋ
ಮಲಮಿದಱಿಂದಮಿಂತುಟುಫಲಂ ಪರಿತಾಗದೆ ಪೂಣದೆಂದು ಸಂ
ಚಲನೆತಿ ಕಾದುಕೊಂಡು ನಲಸಿರ್ದ ಬಿಱಿಕ್ಕದು ಮೂವನೊಗೆ ಪೋ
ಯ್ತಲಸಿಪೊಡಪ್ಪುಗೆಟ್ಟೆನಿಪವೋಲ್ ಫಲಮಾಗದು ಕೇಳ್ಮುಪೂಜೆಯೊಳ್ ॥

[ಜೊಬ್ಬಲಿಯ ವೆನಕ್ಕೆನಿಸುಕೂಮೆಂಯಿಂ ಬೇಲಿಯನಿಕ್ಕಿ ನೀರನೆಱೆದೊಡಂ ವೊವಿನ ವನದಂತೆ ಫಲವೊಗಲಾರ್ಕುವೆ? ಕುದೈವಂಗಳ್ಗನಿತುಭಕ್ತಿಯಿಂ ಪೂಜೆಸಿ ಪೊತೆನುಬ್ಬೊಡಂ ಸುದೈವವನಾರಾಧಿಸಿ ಪಡೆವ ಫಲಮುಂ ಪಡೆಯಬಾರದು] ೬೬

ವೊಗಿಯೊಳಾದ ಶೀತದೊವನಿಂಗಿತಲಾಜಿವೆ ಸೇದೆಗೆಟ್ಟು ಬೇ
ಳಾಗಿ ಸುಬುದ್ಧಿಗೆಟ್ಟು ಗುರುಗುಂಜೆಗಳಂ ಮುಸುಗಳ್ವನೋದದಿಂ
ಪೋಗದೆ ರಾಶಿವೂಡಿ ಶಿಖಿಗೆತ್ತುಱೆ ಕಾಯ್ವವೊಲಲ್ಪಬುದ್ಧಿಗಳ್
ರಾಗಿಸಿ ಪೊರ್ದಲೇಂ ಗಳ ಕುದೈವದೊಳಂ ಫಲಮಾಗಲಱಿರ್ಪುದೇ ॥ ೬೭

[ಪೂಗಿಡುವೆಂಬ ಪೆಸರಿಂಗೆ ಕೊಳವೆಳ್ಳಿಯ ಗಿಡಗಳಂ ನಟ್ಟು ನೀರೆಱೆದು ನಡೆಪೆ ಮಲ್ಲಿಗೆಯ ಪೂವಿನಂತಾಗಲಱಿಯುವಂತೆ ದೈವವೆಂಬ

[1] ಅಂತೆವಾಳ್ಪವು ಪಾತ್ರವಂ (ಗ)

ಪೆಸರಿಂಗೆ ಕುದ್ಯೆವೆಮುವೆನಳತರ್ಕಾರಾಧಿಸಿದೊಡೆ ಸುದ್ಯೆವೆಮನಾರಾಧಿಸಿ
ಪಡೆದ ಲಾಭಮಂ ಪೋಲಲಱಿಯುದು ॥] ೭೯

ಈ ವರಧರ್ಮದಿಂದಫಿಕುಲಂ ಕಿಡುಗುಂ ಸುಖಮುಕ್ಕುಮಹ್ಹೆಯ
ಶ್ರೀವಧು ಸಾಗರ್ಗಮುನ್ನತಿಕೆಯಕ್ಕು ಮಳಂ ಕಿಡುಗುಂ ಕುಧರ್ಮದಿಂ
ಬೇವಸಮಕ್ಕುಮುಗ್ರನರಕಾರ್ಣವದೊಳ್ಗಡ ಬೀಳ್ವನೆಂಬುದಂ
ಭಾವಿಸಿ ನೋಡಿ ತನ್ನೊಳ ಪರೀಕ್ಷಿಸಿ ಮೊಱ್ಪುದು ಧರ್ಮಮೆಂಬುದಂ॥೮೦

ಲೋಚಂ ಮಾಡಿಸಿಕೊಂಬುದರಿದೋ ಬೋಳಿಸಿಕೊಂಬುದರಿದೋ
ಬತ್ತಲೆಯಿಪ್ಪುದರಿದೋ ಸೀರೆಯುಟ್ಟಪ್ಪುದರಿದೋ, ಪೆಂಡಿರಂ ಬಿಟ್ಟಪ್ಪು
ದರಿದೋ ಪೆಂಡಿರೊಳ್ ಕೂಡಿಪ್ಪುದರಿದೋ, ಮೀಯದಿಪ್ಪುದರಿದೋ
ಮಿಂದುವುದರಿದೋ,ಮಣೆಯೊಳ್ ಪಡುವುದರಿದೋ ಪಾಸಿನೊಳ್ ಪಡುವುದ
ರಿದೋ, ಕುಯ್ಯಲುಂಬುದರಿದೋ ತಳಗೆಯಲುಂಬುದರಿದೋ, ಕುಳ್ಳಿ
ರ್ದುಂಬುದರಿದೋ ನಿಂದಿರ್ದುಂಬುದರಿದೋ, ನೀರಂ ಕುಡಿವುದರಿದೋ
ನೀರಂ ಕುಡಿಯದಿಪ್ಪುದರಿದೋ, ಏಕಭುಕ್ತಮೆಂ ಮಾಱ್ಪುದರಿದೋ ಪಲ
ವುಸೂಱುಂಬುದರಿದೋ, ತೊಲಗದೊಂದೆಡೆಯೊಳಿಪ್ಪುದರಿದೋ ತೊಱ
ಲುತ್ತಿಪ್ಪುದರಿದೋ, ಪಲ್ಲಂ ಸುಲಿದುಕೊಂಡಿಪ್ಪುದರಿದೋ ಪಲ್ಲಂ ಸುಲಿಯ
ದಿಪ್ಪುದರಿದೋ, ಮುಟ್ಟುಪಡವಾದೊಡೆ ಕೂಱನೀಡಾಡುವುದರಿದೋ ಮು
ಟ್ಟುಪಡಮಿಲ್ಲದುದರಿದೋ, ತನಗಲಾಭಮಾದೊಡಂ ಪರರಿದೋ ಪಡೆ
ದೊಡೆ ಮೆತ್ತುಂಬುದರಿದೋ, ಸುಗಂಧದ್ರವ್ಯಮಂ ಪೂಸುವುದರಿದೋ
ಮಲಮಂ ತಳ್ಳುವುದರಿದೋ, ಬೇಡದುಂಬುದರಿದೋ ಬೇಡಿಕೊಂಡುಂ
ಬುದರಿದೋ, ಪೆಱರ ಬೈಗುಳಂ ಸೈರಿಸುವುದರಿದೋ ಪೆಱರೊಡನೆ ಬಾಯಂ
ಬಡಿವುದರಿದೋ, ಪಂಚೇಂದ್ರಿಯನಿಗ್ರಹಮರಿದೋ ವಿಷಯಸೇವೆಯ
ರಿದೋ, ಪೂಣ್ಕೆಯರಿದೋ ಮೆಚ್ಚಿದಂತೆ ನಡೆವುದರಿದೋ, ಗೋತ್ರ
ದೊಳ್ ಕೂಡಿಪ್ಪುದರಿದೋ ಗೋತ್ರಮಂ ಬಿಟ್ಟಪ್ಪುದರಿದೋ, ಪೊನ್ನಂ
ತೊಱೆದಿಪ್ಪುದರಿದೋ ಪೊನ್ನಿಂಗೆಱಗುವುದರಿದೋ, ದಿವಸಕ್ಕೊಮ್ಮೆ
ಯಲ್ಲದೆ ಮೆತ್ತಮೌಷಧಮಂ ಸಾವೊಡವೊಲ್ಮೆನೆಂಬ ನಿಯಮಮೆರಿದೋ,

ಮನಕ್ಕೆ ಬಂದಂತೆ ಆಡುವ ನಿಯಮಮೆಮರಿದೊ, ಬಗೆದಿನಿಜಿಂಗೆ ಮುನ್ನಂ
ಮಾಚ್ಪುದಾವುದು ಬಱುಕ್ಕೆ ಮಾಚ್ಪುದಾವುದು ಸ್ಥಿರಿಸಿ ಪಡೆವುದಾವುದು
ನೆಗಱಲರಿದಾವುದೆಂಬುದಂ ವಿಚಾರಿಸಿ, ॥ ೪೧

ಇತೀಗಳಾವುದೀಧ
ರ್ಮಂ ತೊದಳಿಂ ಮುನ್ನ ಮಾವುದೀಧರ್ಮಂ ಕೇ ।
ಳಿಂತಿದಱಿಂ ಸುಖಮಿದಱಿಂ
ಸಂತತಕಡುದುಃಖಮೆಕ್ಕು ಮೆಂಬುದನಱಿವಂ ೪೨

[ಎಂದು ಮುನಿವ್ಯಂದಾರಕಂ ಕಿಱುದಱೊಳ ಧರ್ಮಮಂ ತಿಳಿಪುವುದುಂ ಕೇಳ್ದು ಪಿರಿದುಂ ಸಂತೋಷಂಬಟ್ಟು ಅಂದು] [2] ಚತುರ್ದಶಿಯುಪ್ಪುದಱಿಂದುಪವಾಸಮಂ ಕೈಕೊಂಡು ಮುನಿವೃಷಭನಂ ಬಂದಿಸಿ [ರಾಜಮೆಂದಿರಕ್ಕೆ ಬಂದು ನೇಸರ್ಪಡುವಿನವಿರ್ದೊಯ್ಯನೆ ಕಾಪಿನವರಂ ಬಂಚಿಸಿ ಪೊಱಲಿಂ ಪೊಱಮಟ್ಟು] ಪೋಗಿ ಶ್ಮಶಾನಭೂಮಿಯೊಳ್ ರಾತ್ರಿಪ್ರತಿಮೆಯಿನಿಂದನನ್ನೆಗ [ಮಿತ್ತಲ್ ಮಗಧಸುಂದರಿಯೆಂಬ ಸೂಳಗೆ ಮೃಗವೇಗನೆಂಬ ಕಳ್ಳಂ ಕೂರ್ತು ಕಣ್ಗಾಣದಾಕೆಯ ನೆತದಿಂ] [3] ರಾಜಶ್ರೇಷ್ಠಿಯ ಪೆಂಡತಿಯಪ್ಪ ಕೀರ್ತಿಮತಿಯ ಕೊರಳ ಹಾರಮಂ ಕಳದುಕೊಂಡು ಪೋಗಲವನಂ ತೊಟ್ಟನ ತಳಾಱರ್ದಂಡು ॥ ೪೩

---

1 ಮತ್ತಂ ಲೋಚಮುಂ ಪ್ರತಿಮಾಯೋಗಮುಂ ಬ್ರಹ್ಮಚರ್ಯಮುಂ ನಿರ್ಗ್ರಂಥತ್ವಮುಂ ನಿಂತು ಕಯ್ಯೊಳ್ಂಬುದುಂ ನಿಯಮದೊಳೊಂದೆಡೆಯೊಳಿರ್ದುಂ ಏಕಭಕ್ತಮುಂ ಮೌನಮುಂ ನೀರಳ್ಕೆಯುಂ ತಾಳ್ವುದುಂ ಅಲಾಭವುಂ ಪಲ್ಲಂ ಸುಲಿಯದುದುಂ ಸುಗಂಧದ್ರವ್ಯಂಗಳಂ ಪೂಸುವುದುಂ ಇಂದ್ರಿಯುಂಗಳಿಗಿಚ್ಛೆಯಂ ಸಲಿಸುವುದು ಸುಖವೊ ಇಂದ್ರಿಯುಂಗಳ ನಿಗ್ರಹಿಸುವುದು ಸುಖವೊ ಯೆಂಬಿವೆಲ್ಲರೊಳ್ ಪ್ರವೃತ್ತಿನಿವೃತ್ತಿಗಳಂ ಭಾವಿಸಿ ನಾನ್ನಾದುದಾವುದು ಬಳಿಕಾದುದಾವುದಿವರೊಳರ್ಗಳಂ ನೆಗಳಲಾವುದಱಿದು ನೆಗಳಲಾವುದಿಳಿದಂಬುದಂ ಭಾವಕರಪ್ಪವರ್ವಿಚಾರಿಸಿ ಮಹಾಪರಿಷಹಮಪ್ಪ ರಾವುಮುನ್ನಮಾದ ಧೆಯಿವಕ್ಕೆ ಸೊಂಬರಾರದೆ ತಾನತ್ಮ ಯಿಚ್ಛೆಗೆಯ್ವಂ ಪಣ್ಣಿದರೆಂದಱಿದು ಕುಲಧರ್ಮಮಂ ಬಿಟ್ಟ ಸತ್ಧರ್ಮಮುಂ ಪೊರ್ದುವುದೆಂದು (ಬ. ಕ.)

2 ಱಱಿದು ನೆಗಳ್ವುದೆಂದು ಪೇಳ್ವುದುಂ ಕುಮಾರಂ (ಗ)

3 ಮೃಗಸೇನನೆಂಬ ಕಳ್ಳಂ ಮಗಧಸುಂದರಿಯೆಂಬ ಸೂಳೆಯ ಪೇಳ್ವೆಯಿಂ (ಗ)

ಬಡಿಯಿಂ ಗುಂಡಿಂ ಕಲ್ಲಿಂ
ದಿಡುತುಂ ಬೆನ್ನಟ್ಟಿ ಬೆರ್ಚಿ ಭಯವಶದಿಂ ಪೈ್ಯ ।
ನಡುಗೆ ಮತಿಗೆಟ್ಟು ಕಾಲ್ಗಳ್
ತಡೆದೊಡೆ ಬಿಡದೋಡುವಾತನಾನೃಪಸುತನಂ ॥ ೪೪

ಭೋಂಕೆನೆ ಕಂಡು ಬೆರ್ಚಿ [ಕಳ್ಳಂ ಸತ್ತೊಡಮಕ್ಕುಂ ಪುಲಿ ಸತ್ತೊಡಮಕ್ಕುಮೆಂಬ ನಾಣ್ಣುಡಿಯುಂತೆ ತಳಾಱಿನ ಕೈಯೊಳೀತಂ ಸತ್ತೊಡಮಕ್ಕುಮೀತನ ಕೈಯೊಳ್ತಳಾಱಿಂ ಸತ್ತೊಡಮಕ್ಕುಂ ನಗೆ ಗೆಟ್ಟುದಾನೊರ್ವರ್ಗೆನ್ನಪುಣ್ಯದಿಂ ಪುಲಿ ನಕ್ಕಿ ಬದುರ್ಂಕಿದೆನೆಂದು] ಹಾರಮಂ ವಾರಿಷೇಣಕುಮಾರನ ಮುಂದೀಡಾಡಿ ಪೋಪುದುಂ ತಳಾಱರೆಯ್ದಿ ವಂದು ॥ ೪೫

ನಿಂದಿರ್ದ ವಾರಿಷೇಣನ
ನಂದವೆರಡಹಡಿಸಿ ನೋಡಿ ಕಳ್ಳನಿವಂ ಪೋ ।
ಸಂದೆಯವಿಲ್ಲೆರಡಿಲ್ಲದೆ
ಕೊಂದಪರೆಂದಂಜಿ ಸೆಡೆದು ಪೋಗದೆ ನಿಂದಂ ॥ ೪೬

ಎಂದು [ಕಟ್ಟಿಲೆಯೊಳವೆರಿವೆರೆಂದಱಿಯದೆ ತಡವೆರಿಸಿ ನೋಡಿ ಮುಂದಿರ್ದ ಹಾರಮಂ ಕಂಡು ಕಳ್ಳನೆಂದು ನಿಶ್ಚಯಿಸಿ] ದೀವಿಗೆಯ ಬೆಳಗಿಂ ನೋಡಿ ವಾರಿಷೇಣನಪ್ಪುದನಱಿದು ಬೆಱಗಾಗಿ ॥ ೪೭

[ತುರಗಕ್ಕಂ ಕರಿಗಂ ರಥಪ್ರತತಿಗಂ ದ್ರವ್ಯೈಕ್ಯಮಿಂ ಮೇರೆಯಿ
ಲ್ಲರಸಂಗಪ್ಪೊಡೆ ತಾನೆ ಮುಖ್ಯನವನೀನಾಥರ್ಪಲರ್ತನ್ನ ರಿ
ರ್ದರವೋಷಂ ನೃಪನೇಕೆ ಕಳ್ವ ಬಗೆಯುಂ ಶಂ ತಂದನೋ ನೋಱಿಪ್ಪೊಡ
ಚ್ಚರಿಯೆಂದಂದು ತಳಾಱಿರಂಜೆ ಧರಣೀಶಾರಾಧ್ಯನಂ ನೋಡಿದರ್ ॥ ೪೮

ತುಡಲಿಲ್ಲದೆ ಕಳ್ದನೊ ಮೇ
ಣುಡಲಿಲ್ಲದೆ ಪೊಂಗಿ ಕಳ್ದನೋ ತನಗರಸಂ ।
ಕುಡದೊಡೆ ಕಳ್ದನೊ ಕವ್ಮನೆ
ವೃಥಚಿತ್ತಂ [1] ಕಳ್ವ ಬಗೆಯನೇಕೆಯೊ ತಂದಂ ॥ ೪೯

---

[1] ಕಡುಮೂರ್ಖಂ (ಗ)

ಎಂದು [ತವೊಳ್ಳಾಶ್ಚರ್ಯಂಬಟ್ಟು] ನಿನ್ನಲ್ಲಿಗೆವೆಂದು ಹಾರಮುಂ ತೋಱಿ ಜಿನಸಮಯವಾರ್ಧಿವರ್ಧನಸುಧಾಕರನಂ ನಿಷ್ಕಾರಣಂ ಕಳ್ಳನೆಂದು ಬಿನ್ನಪಂಗೆಯ್ವುದುಂ ಜಾತಿಕ್ಷತ್ರಿಯಂಗೆ ದುಷ್ಟನಿಗ್ರಹಶಿಷ್ಟಪರಿಪಾಲನಂ ಧರ್ಮಮಪ್ಪುದಱಿಂ, ಮಗನೆಂದು ಕಾರುಣ್ಯಂಗೆಯ್ಯದೆ ಕೊಲ್ಲಿವೆಂದು ತಳಾಱರ್ಗೆ ನೀಂ ಬಸಸುವುದುಂ ತಳಾಱಂ ಕುಮಾರನಲ್ಲಿಗೆವೆಂದು ॥] [1] ೯೦

ಪಿಸುಣರ ಕಳ್ಳರ ಮಿಂಡರ
ಪಸರಂ ವೊದಲಾಗೆ ನುಡಿದೊಡುರ್ವೀಶಂ ಸೈ ॥
ರಿಸನೆಂಬುದನಱಿದಿರ್ದಂ
ಕಸವಾರಕ್ಕೀಕೆ ದೇವ ನೀಂ ಬಗೆದಂದೈ [2] ॥ ೯೧

[ನಿನ್ನ ಯ್ಯನ ಭಂಡಾರದ
ಪೊನ್ನೆಲ್ಲಮನಕ್ಕ ಪಿರಿದು ತದ್ಧನಮಿರ್ದಂ ।
ತನ್ನ ದರಿದ್ರನ ತೆಱದಿಂ ಕೆ
ಮ್ಮನೆ ಕಳವಿಂಗೆ ಬಗೆಯನೇಕೆಯೊ ತಂದ್ಯ ॥ ೯೨

ಅಂತೊಡೆದಕಲ್ಲ ಕೆಱೆಯಿಲ್ಲಿಂಬ ನಾಣ್ಣುಡಿಯಂತೆ ನಾನರಸನ ಮಗನೆಂ ಬಲ್ಲಿದ ನೆನ್ನನರಸಂ ಕಳ್ಳೊಡಂ ಕೊಲ್ವನಲ್ಲೆಂದು ಸೊಕ್ಕಿಯು ಕ್ಕುಂದಲೆವಾಯ್ದು ಕೀರ್ತಿಮತಿನು ಹಾರಮುಂ ಕಳ್ದುವೆಮ್ಮನೆ ಪೆಱರೇಡಿಸಲೆಂದು ಪೋಗಿ ದಸಿಯ ಮೇಲೆ ಬಿಟ್ಟಿ ಸತ್ತ ಕೋಡಗದಂತೆ ನಿನಗೆ ಕಷ್ಟಮಪ್ಪ ಸಾವಂ ಮಾಡಿಕೊಂಡೈ] ಎಂದು ತಳಾಱಮರ್ದಲಿಸಿ ನುಡಿಯುತ್ತಿರೆ ಸಮ್ಯಕ್ತ್ವಚೂಡಾಮಣಿ ತನ್ನೊಳಿಂತೆಂದಂ ॥ ೯೩

ಧರೆಯಂ ಪೊಕ್ಕಡಗಿರ್ದೊಡಂ ಜಲಧಿಯಂ ಪೊಕ್ಕಿರ್ದೊಡಂ ಪೋಗಿ ಮಂದರಶೈಲಾಗ್ರದೊಳಿರ್ದೊಡಂ ಖಚರರಂ ಬೇಗಂ ಶರಣ್ಹೊಕ್ಕೊಡಂ

---

1 ಮಗನೆನ್ನದೆ ಕಳ್ಳಂಗೆ ತಕ್ಕ ವಿಧಿಯಂ ಮಾಡಿವೆಂದು ಪೇಳ್ವವುಮಱರ ಪುಗೇಳದೆ ಬಂದು (ಗ)

2 ಕಸವರದಾಟಕ್ಕೆ ದೇವ ನೀಂ ನುನದಂದೈ (ಗ)

ಪಿರಿದುಂ ದ್ರವ್ಯಮನಿತ್ತೊಡಂ ನಡುಕದಿಂ ಚಕ್ರೇಶನಂ ಸಾದೊಡಂ
ಮೆರುಳೇ ಮೊಣ್ಬನೆ ಕಾಲಪಯ್ದಿದವನಂ ಕ್ರೂರಾಂತಕಂ ಕೊಲ್ವುದಂ ॥

ಮತ್ತಂ ಜವನ ಬಿಲ್ಲಾಳ್ತನಮಂ ಪೇಚ್ಪೊಡೆ, ದೇವೇಂದ್ರರಂ ತಾವೆರೆಗೊಳನಂ ಸೊಕ್ಕಿದಾನೆ ಪೊಕ್ಕಂತೆ ಮಾಡಿ, ವ್ಯಂತರದೇವರಂ ಸೌಂತೆಯ ಬಳ್ಳಿಯೊಳಟ್ಟು ಪೊಕ್ಕಂತೆ ಮಾಡಿ, ಜ್ಯೋತಿಷ್ಕದೇವರಂ ಸೀತಂ ಪತ್ತಿದ ವಾತಾಧಿಕರಂತೆ ಮಾಡಿ, [ಭವನವಾಸಿಗರಂ ಕರಂ ದವನದ ಮಡಿಯಂ ದಾಟು ಪೊಕ್ಕಂತ ಮಾಡಿ, ಚಕ್ರಧರನಂ ವಕ್ರಮಾದ ಪುಳ್ಳಿಗಳಂ ಮುಳ್ಳಂತೆ ಮುಳಿದು, ಮಾಂಡಲಿಕರಂ ಚಂಡಕರಸನ್ನಾಹ ನುಂಗುವಂತೆ ನುಂಗಿ, ಬಲ್ಲಿದರಂ ಕಲ್ಲಂ ತಾಗಿದ ಪುಳ್ಳಿಯಂತೆ ನುಚ್ಚು ನುಚ್ಚುಮಾಡಿ] ರಾವಣನಂ ಕೋವಣಮೆಂ ಸೀಳ್ವಂತೆ ಸೀಳ್ದು, ಕುಂಭ ಕರ್ಣನಂ ಕಂಬುಂ ಮುಳಿದ ಮೊಳಗೆಯಂತೆ ಮಾಡಿ, ವಿಭೀಷಣನಂ ಸಾಹಸಮಿಲ್ಲದವರಂ ನೂಂಕುವಂತೆ ನೂಂಕಿ, ಇಂದಗಿಯಂ ಪಂದೆಯಂ ಕಾಡುವಂತೆ ಕಾಡಿ, ರಾಮನಂ ಧೂಮಂ ಸುತ್ತಿದಂತೆ ಜೀವಂಗಿಡಿಸಿ, ಲಕ್ಷ್ಮಣನಂ ಮಕ್ಕಳ್ಕಟ್ಟರಂತೆ ಗೋಳುಂಡೆಗೊಳಿಸಿ, ಸುಗ್ರೀವ ನನುದ್ಗ್ರೀವನನಂಬು ತಾಗಿದಂತೆ ಮಾಡಿ, ಜಾಂಬವನಂ ಪಿಂಬುಗಲಾ ದಿತ್ಯನಂತೆ ತೇಜಂಗಿಡಿಸಿ, ಹನುಮನನನುಮಾನಂ ಮಾಡದೆ ನೆಲಕಿಕ್ಕಿ, ಪಾಂಡವರಂ ದಂಡಿನೊಳ್ ಪೊಕ್ಕ ನರಿಯಂತೆ ಮನಂಗಿಡಿಸಿ, ಕೌರವರಂ ಭೈರವಂಬಾಯ್ದರಂತೆ ತಲೆಕೆಳಗುಮಾಡಿ, ಬಾಲಕರಂ ಬಾಲಕರೆಂದು ನಾಣ್ದದೆ, ಮುದುಕರಂ ಮುದುಕರೆಂದು ಕರುಣಿಸದೆ, ವೀರರಂ ಸಾರಣ್ಮೆನೆಂದು ಬೆರ್ಚದೆ, ಮೂರ್ಖರಂ ಮೂರ್ಖರೆಂದೋಸರಿಸದೆ, ಸ್ತ್ರೀಯರಂ ಸ್ತ್ರೀಯರೆಂದು ಕೈಗಾಯದೆ, ವಿಕಳೇಂದ್ರಿಯಂ ಗಳಂ ವಿಕಳೇಂದ್ರಿಯಂಗಳಂದು ತೊಲಗಿಸದೆ, ನಾರಕರಂ ನಾರಕರೆಂದು ಕೊಕ್ಕರಿಸದೆ, ಪಟ್ಟಂಗಟ್ಟಿದರ್ ಕಟ್ಟುಗ್ರರೆಂದೊಲ್ಲೆನ್ನದೆ, ಬಡವರಂ ಬಡವರೆಂದಿರಿಸದೆ, ಮಾನ್ಯರಂ ಮಾನ್ಯಗಾವನೆನ್ನದೆ, ಮುಸು ಪಣ್ಣು ಪುಣಿಸೆಯನೇಱಿದಂತೆ, ಕೋಟು ತಿಪ್ಪೆಯಂ ಪೊರ್ದಿದಂತೆ, ಪಸಿದೆವ್ಮ ಬಳದ ಕೆಯ್ಯಂ ಪೊಕ್ಕಂತೆ, ಬಡವರ್ ಕೂಟ ರಾಶಿಯಂ ಕವಿದಂತೆ, ಮುಲ್ಲಂ ನುಂಗಿಯುಂ ಸಹಿದುಂ ಕರ್ಚಿಯುವೀಗಿಯುಲ್ಲಂ ಮೆಚ್ಚದಂತೆ

ನರಿಯಾಟವಾಡುವಾತನನಗೆ ಪೀಡೆಯಂ ಮಾಡಿದಪ್ಪನೆಂಬುದಾವ ವಿಸ್ಮಯಂ [ಸುಡುವ ಕಿಚ್ಚಿನೊಳ್ ತುಪ್ಪವನೆನಿಸೆಱೆದೊಡಮನಿಸನಿಸೆ ಪೆರ್ಚುಗುಂ ನೀರನೆನಿಸೆನಿಸೆಱೆದೊಡಮನಿಸನಿಸೆ ಕುಂದುಗುಂ; ಮತ್ತೆ ಪೂರ್ವಜನ್ಮದ ಕರ್ಮೋದಯದಿಂ ಬಂದಡಸುವ ಸಾವಿಂಗಂ ನೋವಿಂಗ ಮನಿಸೆನಿಸಂಜುವಮನಿಸನಿಸೆ ಭವಭವಂಗಳೊಳ್ಳಲ್ಲಂ ಪೆರ್ಚುಗುಂ; ಧೈರ್ಯದಿಂ ಜಿನಪಾದಪದ್ಮಂಗಳನೆನಿಸೆನಿಸಂ ನೆನೆವನೆನಿಸನಿಸೆ ಕುಂದುಗುಂ] ॥ ೯೫

ದುರಿತಂ ಕಿಡದನ್ನೆವರಂ
ಪರಮಜಿನಾಗಮಮನೆಱಿಯದನ್ನೆವರಂ ನಿ ।
ಷ್ಠುರಮಪ್ಪ ದುಃಖಚಯಮುಂ
ಮರಣಮುಮಾವಾವ ಭವದೊಳೀಂ ಪಿಂಗುಗುಮೇ ॥ ೯೬

ಜಿನಧರ್ಮ[1]ಮೆಂಬ ನೀರಿಂ ಕರ್ಮಮುಂಬ ಕರ್ದಂ ನಂದಿಸದೆ, ಜಿನಾಗಮಮೆಂಬ ಗ್ರಹವಾದಿಯಿಂ ದುಷ್ಕೃತಮುಂಬ ಗ್ರಹಮಂ ಕಳೆಯದೆ, ಜಿನಸೇವನೆಯೆಂಬ ದಿವ್ಯೌಷಧದಿಂ ಕಿಲ್ಬಿಷಮೆಂಬ ಕುತ್ತಮಂ ಕಿಡಿಸದೆ, ಜಿನಾರ್ಚನೆಯೆಂಬ ಕೊಡಲಿಯಿಂ ಪಾಪಮೆಂಬ ದುರ್ಗಮಂ ತಱಿಯದೆ, ಜಿನಸ್ಮರಣೆಯೆಂಬ ಭೈತ್ರದಿಂ ದುರಿತಮೆಂಬ ಸಮುದ್ರಮಂ ಪಾಯದೆ, ಜಿನವ್ರತಮೆಂಬ ಪಱುಗೋಲಿಂದಶುಭಮೆಂಬ ತೆಱಿಯಂ ದಾಂಟದೆ, ಜಿನಪಕ್ಷಪಾತಮೆಂಬ ಸಿಡಿಲಿಂ ಪುಣ್ಯವಿರೋಧಿಯೆಂಬ ಮರನಂ ಮುಱಿಯದೆ, ಜಿನಭಾವನೆಯೆಂಬ ಬಡಬಾಗ್ನಿಯಿಂ ನಿಷ್ಠಯಸಾಗರಮಂ ಪೀರದೆ, ಜಿನಾಭಿಷೇಕಮೆಂಬ ಕೂರಲಗಿಂ ಕರ್ಮವೈರಿಯೆಂಬ ಪಣೆದಮನಿಱಿಯದೆ, ಜಿನಕಥಾಪ್ರೀತಿಯೆಂಬ ಸಿಂಹದಿಂ ದೋಷ[2] ಮುಂಬ ಗಜಮಂ ಸೀಳದೆ, ಜಿನಧರ್ಮಪ್ರೀತಿಯೆಂಬ ಭೇರುಂಡನಿಂ ಮೋಹಮೆಂಬ ಶರಭಮಂ ಕೊಲ್ಲದೆ, ಜಿನಮುನಿದಾನಮೆಂಬ ಗಾಳಿಯಿಂ ಲೋಭಮೆಂಬ ಮುಗಿಲಂ ಬೆದಱಿಸದೆ, ಜಿನಶ್ರೀಮುಖ ದರ್ಶನಮೆಂಬ ವಜ್ರದಿಂ ಮಾಯೆ

---

1 ಸ್ತವನ (ಗ) 2 ಕೋಪ (ಗ)

ಯೆಂಬ ಬೆಟ್ಟನನೊಡೆಯದೆ, ಜಿನಪೂಜಾನಂದವೆಂಬನಳನಿಂ ಮೋಹ ವೆಂಬ ಕರಡಮಂ ಸುಡದೆ, ಜಿನರೂಪದರ್ಶನವೆಂಬ [1] ಬಿಸಿಲಿಂ ದೋಷ ವೆಂಬ ತಿಮಿರಮಂ ತೆಗೆಯದೆ, ಜಿನಲಕ್ಷಣನಿರೀಕ್ಷಣವೆಂಬ ಚಂದ್ರನಿಂ ದಂತರಾಯವೆಂಬ ತಾವರೆಯಂ ಮುಗಿಯಿಸದೆ, ಜಿನಭಕ್ತಿಯೆಂಬ ಸೊಡರಿಂ ದರ್ಶನಾವರಣೀಯವೆಂಬ ಕಜ್ಜಲೆಯಂ ಪಿಂಗಿಸದೆ, ಜಿನತತ್ವ ವಿಚಾರವೆಂಬರಸನಿಂ ಜ್ಞಾನಾವರಣೀಯವೆಂಬಾಟವಿಕರನೋಡಿಸದೆ, ಜಿನಪದಸ್ನೇಹವೆಂಬ ದಂಡಿಂ ವೇದನೀಯವೆಂಬ ಗಡಿಯ ನಾಯಕರ ನಡಂಗಿಸದೆ, [2] ಜಿನಚರಣಾವಲಂಬನವೆಂಬ ಬಲದಿಂ ವಿಷಯವೆಂಬ [3] ಸೂಱೆಗಾಱರಂ ಕಾದಿ ಗೆಲದೆ, ಜಿನಸ್ತವನರುಚಿಯೆಂಬ ಮೇಘಗರ್ಜನೆ ಯಿಂ ನರಕಗತಿಯೆಂಬ ಹಂಸೆಯನಂಜಿಸದೆ, ಜಿನತತ್ತ್ವಕಾಂಕ್ಷೆ ಯೆಂಬ ಬಾಣದಿಂ ತಿರ್ಯಗ್ಗತಿಯೆಂಬ ಗುಱಿಯಂ ಪಾಱಲೀಯದೆ, ಜಿನರಾ ರಾಧನೆಯೆಂಬ ಹಿಮದಿಂ ಮನುಷ್ಯಗತಿಯೆಂಬ ಬಾಳ ಸಹಕಾರಮಂ ಕಿಡಿಸದೆ, ಜಿನರ ನೆರೆವಿಯೆಂಬ ಚೇಣದಿಂ ದೇವಗತಿಯೆಂಬ ನಿಗಳಮಂ ಕೀದಿಸದೆ, ನೆರೆಮನೆಯವರಂ ಪಾವಂ ಪಿಡಿಯಿಮಂಬಂತೆ, ನೆರೆಗೆಯ್ಯು ವರಂ ಬಿತ್ತಿಕೊಡಿವೆಂಬಂತೆ, ಸವತಿಯ ಮಗನಂ ಬೇಡಿಕೊಳ್ವಂತೆ, ಬಟ್ಟೆವೋಪರಂ ಪುಲಿಯನಿಱಿಯಿವೆಂಬಂತೆ, ತಿರಿಯಲ್ಬಂದವರಂ ಕೂಱಿ ನಡಿವೆಂಬಂತೆ, ಬರ್ದು [4] ಬಂದವಳಂ ಪೆಂಡತಿಯಾಗಿರೆಂಬತೆ, ಲೋಗರಂ ಮನೆಯಂ ಕಾದಿರಿವೆಂಬಂತೆ, ನಿರ್ಬುದ್ಧಿತನದಿಂ ಪೆಱರೆನಗೆಂದಿರ್ದೊಡೆ ಶಾಶ್ವತಸುಖಂ ದೊರೆಕೊಳ್ಳದು. [ಮುನ್ನ ತನ್ನ ಮಾಡಿದ ಕರ್ಮದು ದಯದಿಂದೆಯ್ದುವ ಸಾವುವಂ ನೋವುವಂ ಪೆಱರ್ಪಡಿಕೊಳ್ಳಿವುಂ ದೊಡೆ ಪಡ್ಕಿಕೊಳ್ವರೆ ? ಸದ್ಧರ್ಮಮಂ ಪೊರ್ದಿ ಸುಖವಿಮ್ಮೊಡಂ ಕುಧರ್ಮಮಂ ಪೊರ್ದಿ ದುಃಖಿಂಬಡುವೊಡಂ ತಾನ ಪೆಱರೊರ್ವರುಂ ಸಖಾಯರಲ್ಲರ್] ॥ ೯೭

---

1 ದರ್ಶನಹರ್ಷಚಿತ್ತದನವೆಂಬ (ಕ. ಬ.)

2 ಜಿನವಿಶ್ವಾಸವೆಂಬ ಬಿರಿಯಿಂ ನಾವುಕಳ್ಳರಂ ತೆಗೆಯದೆ ಜಿನಸಂದಿಂಪ್ರದಕ್ಷಿಣವೆಂಬ ಗರುಡನಿಂ ಗೋತ್ರವೆಂಬ ಪಾವುಗಳ ವಿಷಮಂ ತೊಲಗಿಸದೆ ಜಿನವಚನಾನುಕೂಲವೆಂಬ ಮಾಗಿಯಿಂದಾಯುಷ್ಯವೆಂಬ ಕೋಗಿಲೆಯಂ ಮಡಿಯಿಸದೆ (ಗ)

3 ಎಂಬ ಕೋಟೆಯಿಂ ಮಿಥ್ಯಾತ್ವವೆಂಬ (ಕ.ಬ.) 4 ಪಿಡ್ದು (ಕ.ಬ.)

ರುಜೆಗಳೊದವಿಂ ದುಃಖವ್ಯಾತಂಗಳಿಂ ಪೆಱರೊತ್ತಿನಿಂ
ಪ್ರಜೆಯು ಭಯದಿಂ ಪೊನ್ನಿಂ ಶೀತೋಷ್ಣ ದಿಂ ಕೆಲವಾಱುನಿಂ
ಕುಜನನೆರವಿಂ ಸ್ತ್ರೀಯಿಂದತ್ಯಂತಮಿತ್ರರಗಲ್ಕೆಯಿಂ
ವಿಜಯರಳವಿಂ ಸಾವಿಂ ನೋವಿಂ ಮಹೀಶರ ಬಾಧೆಯಿಂ ॥ [1] ೯೪

ಅರಿಯ ಭಯದಿಂ ಮುಳ್ಳಿಂ ಕಲ್ಲಿಂ ಪ್ರಯಾಣದ ಪೀಡೆಯಿಂ
ಪರದಿನಳಿಪಿಂ ಮುನ್ನಂ ಕೊಂಡುಂಡ ಸಾಲದ ಚಿಂತೆಯಿಂ
ಛರದ ತೆಱೆಯಿಂ ಕೇಡಿಂ ದಾರಿದ್ರ್ಯದಿಂ ಪರಮಾನದಿಂ
ದುರಿತದೊದವಿಂ ದುಃಖಂ ಸಾರ್ಗುಂ ಮನುಷ್ಯರನೆಲ್ಲಿಯುಂ ॥ ೯೯

[ಮತ್ತಮವನಿಯಂ ಪೊಯ್ದ ಕಯ್ತಪ್ಪಿದೊಡಂ ತಪ್ಪುಗು, ತೀವ್ರ ಕರ್ಮೋದಯದಿಂದಡಸುವ ಸಾವುಂ ನೋವುಂ ಏಗೆಯ್ದುಂ ತಪ್ಪಲಱಿಯದಿದನಱಿವ ಮಹಾಪುರುಷಂಗೆ ಸಾವಿಂಗಂ ನೋವಿಂಗಮಿಲ್ಲಾಗದೆನಗಿಂ ಮಹಾವೀರಸ್ವಾಮಿಯ ಚರಣಪಯೋಜಾತಂಗಳಿಂ ನೆನೆಯುತಿರ್ಪುದು ಕಜ್ಜಮೆಂದು ॥] [2] ೧೦೦

ವೀರಸ್ವಾಮಿಯ ಪಾದಪ
ಯೋರುಹಮೆಂ ಬಂದಿವಿಡಿದು ಬಂಟಂ ಸೆಱೆಯಂ ।
ಧೀರತೆಯಿಂ ಪಿಡಿವಂತ ಕು
ಮಾರಕನುಂ ಪಿಡಿದನೇಕಚಿತ್ತದಿನಾಗಳ್ ॥ ೧೦೧

ಜಿನಪದಮೆಂ ಜಿನಮತಮೆಂ
ಜಿನತ ಗುಣೋನ್ನತಿಯನೆಯ್ದಿ ಜಿನಗೃಹಮೆಂ ಸ ।
ಜ್ಜಿನಚೈತ್ಯಮನನವರತಂ
ಮನದೊಳ್ ನೆನೆಯುತ್ತುಮಿರ್ದನಂತಿರ್ದನೆಗಂ ॥ ೧೦೨

[ಆಪುರದ ದೇವತೆಗಳ್ಗಾಸನಕಂಪಮಾಗೆ ಸಮ್ಯಕ್ತ್ವಚೂಡಾ ಮಣಿಗುಪಸರ್ಗಮಾದುದನಱಿದು ಫೋರೋಪಸರ್ಗಮಂ ಪಿಂಗಿಸಲೆಂದು

[1] ವೃಜನದೊದವಿಂದುಃಖಂ ಸಾರ್ಗುಂ ಮನುಷ್ಯರನೆಲ್ಲಿಯುಂ(ಕ.ಬ.)

[2] ಕರ್ಮೋದಯದಿಂದೆಂತುಂ ದುಃಖವುಂ ಮನಃಪೀಡೆಯುಮಕ್ಕುಮಿದಾವುದಾಶ್ಚರ್ಯಮೆಂದು ಱಗೆದು (ಗ)

ಬಂದು ಮುಂದಣಳಿತಮಿಲ್ಲನಾಗಿ ನಿಂದ ವಾತ್ಸಲ್ಯರತ್ನಾಕರನ ಮನ
ದೊಳಾದ ಧೈರ್ಯಕ್ಕಾಶ್ಚರ್ಯಂಬಟ್ಟು] [1] ॥ ೧೦೩

ದುರಿತಾರಿಯನದಟಲೆದೋ
ಸರಿಸದೆ ನಿರ್ವೃತಿಗೆ ಸಲ್ವೆನಾನೆಂಬ ಮಹಾ।
ಪುರುಷಂ ಮನದೊಳ್ ಕುಂದದೆ
ಜರಿಯದೆ ಕಲಿಯೆನಿಸಿ ಸೆಡೆಯದಿಂತಿರವೇಡಾ ॥ ೧೦೪

ಎಂದು ಕೈಗಳಂ ಮುಗಿದು ಪಲವುಂತೆಱದ ಪ್ರೊಗಳ್ತೆಗಳಿಂ ಪೊಗ
ಱುತ್ತುಮಿರ್ದರ್ನ್ನೆಗಂ ಮನದೊಳಳ್ಳನಿಸಪ್ಪೊಡಂ ಕರುಣಮಿಲ್ಲದೆ ನಿಷ್ಠು
ರರಪ್ಪ ತಳಾಱಿರ್ಕುಮೊರನಂ ನೆಲಕಿಕ್ಕುವಂತೆ ನೆಲಕಿಕ್ಕಿ ಗಜಱಿ[2] ಗರ್ಜಿಸಿ
ನಿಶಿತಾಸ್ತ್ರಂಗಳನೊಱಿಯಿಂದುಱ್ಚಿಕೊಂಡು ತಲೆಯುಂ ದಡಿಯಿಂ
ಪೊಯ್ದುಂ ಕಿವಿಯುಂ ಬಾಳಿಂ ಪೊಯ್ದುಂ ಕೊರಲುಂ ಸುರಿಗಿಯಿಂದರಿದುಂ
ಮೆಯ್ಯುಂ ಕೊಳ್ಳಿಯಿಂ ಕರಿದುಂ ನಡುವುಂ ಕೊಡಲಿಯಿಂ ಕಡಿದುಂ
ತೋಳುಂ ಗದೆಯಿಂ ಬಡಿದುಂ ಬೆರಲನುಳಿಯಿಂ ಕಡಿದುಂ ನೊಸಲನುಂ
ಬಿನಿಂ ಕೊಱೆದುಂ ತಳವುಂ ಬಾಱಿಯಿಂ ಕೆತ್ತಿ ಮೊಳಕೈಯುಂ ಕೊಂ
ತದಿಂ ಕುತ್ತಿ ಬೊಬ್ಬಿರಿದು ನಾನಾಪ್ರಕಾರಮಪ್ಪ ಘೋರೋಪಸರ್ಗಂಗಳಂ
ಮಾಱ್ಪುದುಂ, ಅವಕ್ಕೆ ಕಳ್ಳರಂ ಕಂಡಂತಳ್ಕದೆ ಕಣ್ಣೊಳಗಣ ಕಸವಿನಂ
ತುಳ್ಕದೆ ನಡುವಿನಂತು ಬಳ್ಕದೆ ಪುರ್ವಿನಂತೆ ಕೊಂಕದೆ ತೆಱೆಯಂತೆ
ನೊಂಕದೆ ಬೆಂಡಿನಂತೆ ತೇಂಕದೆ ಕೊಳ್ಪಟ್ಟಿರಂತೊಳಱದೆ ಭಯ
ಮೊದರಂತೆ ಬೆಳಱದೆ ತರಗೆಲೆಯಂತೆ ತಳಱದೆ ಪುಲ್ಲೆಯಂತೆ ಬೆಚ್ಚದೆ
ಪೊಲ್ಲರಂತೆ ಪಚ್ಚದೆ ಶುಭಧ್ಯಾನಾರೂಢನಾಗಿರ್ದುಂ, ಸರ್ವಜ್ಞಾಚೂಡಾ
ಮಣಿಯ ದರ್ಶನಶುದ್ಧಿಗಂ ಸುಕವಿನಿಕರಪಿಕಮೊಕಂದನ ಜಿನಾಗಮದ
ಪರಿಣತಿಗಂ ವಾತ್ಸಲ್ಯರತ್ನಾಕರನ ಶುದ್ಧಭಾವನೆಗಂ ಸಹಜಕವಿಜನ
ಪಯಃಪಯೋಧಿಹಿಮಕರನ ಮನದ ಸ್ಥಿರತೆಗಂ ಸುಕವಿಜನಮನಃ

---

1 ನಾಗೇಂದ್ರನಾಸನ್ನಕಂಪದಿಂದರಿದು ಬಂದು ಕೊಲಲೆಂದು ಮುತ್ತಿಕೊಂಡಿರ್ದ ತಳಾಱಿರುಮಂ ನಿಶ್ಚಳನಾಗಿರ್ದ ಕುಮಾರನುಮಂ ಕಂಡು (ಗ)

2 ಎಂದು ಕೈಗಳಂ ಮುಗಿದು ವಾರಿಷೇಣಕುಮಾರನ ಧೈರ್ಯಮಂ ನೋಡಲೆಂದು ತಳಾಱಿಂಗೆ ಮಾಯಾನಿದ್ರೆಯನಿಕ್ಕಿ ತಾಂ ತಳಾಱಿರೂಪಂ ಕೈಕೊಂಡು ಗಜಱಿ (ಗ)

ಪದ್ಮಿನೀರಾಜಹಂಸನ ಸಂಸಾರಭೀತಿಗಂ ಜಿನಶ್ರೀಚರಣಾಳಂಕಾರಶೀರ್ಷನ
ಶುದ್ಧಭಾವನೆಗಂ ಭಾವಯುತದಿಗಂಬರದಾಸನ ಪಂಚಪರಮೇಷ್ಠಿಗಳೂ
ಳಾದ ಭಕ್ತಿಗಂ ನಗರದೇವತೆಗಳ್ಮಚ್ಚಿ [1] ಜಿನೇಶ್ವರನೆಂಬ ವಜ್ರಪಂ
ಜರಮಂ ಪೊಕ್ಕಿರ್ದಂಗೆ [ಜಿನನಾಥನೆಂಬ ಬಲ್ಗೋ]ಂಟೆಯಂ
ಪೊಕ್ಕಿರ್ದಂಗೆಂ ಜಿನನಾಥನೆಂಬ ವಜ್ರಕವಚಮಂ ತೊಟ್ಟಿರ್ದಂಗೆ
ಜಿನಾಧಿಪನೆಂಬ ಮಹಾದಿಯನೇಱಿರ್ದಂಗೆ ಜಿನಸ್ವಾಮಿಯೆಂಬ
ಚಕ್ರವರ್ತಿಯುಂ ನೆಮ್ಮಿರ್ದಂಗೆ ಜಿನವಲ್ಲಭನೆಂಬ ನೆನದುರ್ಗಮಂ
ಕೈಕೊಂಡಂಗೆ ಜಿನಪರಿವೃಢನೆಂಬ ಜಲದುರ್ಗಮನಾಶ್ರಯಿಸಿದಂಗೆ ಜಿನ
ದೇವನೆಂಬ ಚಂದ್ರಬಲಮಂಬೆತ್ತಂಗೆ ಜಿನಪ್ರಭಾವನೆಯೆಂಬ ಭೂ
ಬಲಮಂ ಪಡೆದಂಗೆ ಜಿನಕುಂಜರಮೆಂಬ ರಸಾಯನಮಂ ಸಾಧಿಸಿ
ದಂಗೆ ಜಿನಾಗಮಮೆಂಬಮೃತಮಂ ಸೇವಿಸಿದಂಗೆ ಜಿನಧರ್ಮ
ನಿಧಾನಮನೊಳಕೊಂಡಂಗೆ ಜಿನಸೇವನೆಯೆಂಬ ನಿಧಿಯಂ ಕಂಡಂಗೆ
ಜಿನವ್ರತಮೆಂಬ ಕೈದುವಿನೊಳ್ ಪರಿಣತನಾವಂಗೆ ಜವನುಂ ಗಿವನುಂ
ಕಮ್ಮುಮುಂ ಗಿರ್ಮಮುಂ ಜಿದಿಯುಂ ಗಿದಿಯುಂ ಏಧಾತ್ರನುಂ
ಗಿಧಾತ್ರನುಂ ದೈವಮುಂ ಗಿಯ್ವಮುಂ ಪಾಪಮುಂ ಗೀಪಮುಂ
ಮುಪ್ಪುಂ ಗಿಪ್ಪುಂ ಕುತ್ತಮುಂ ಗಿತ್ತಮುಂ ಸಾವುಂ ಗೀವುಂ ಪೀಡೆಯುಂ
ಗೀಡೆಯುಂ ನೋವುಂ ಗೀವುಂ ಪುಟ್ಟುಂ ಗಿಟ್ಟು ವೆಂಬಿವೆಲ್ಲಮುಮೇನಂ
ಮಾಡಲಾರ್ಪುವೇಗೆಯ್ವುವೇನನೊಡರ್ಚುವುವೆಂದು ಜೋಡಾಡಿ ತಳಾಲ
ರಿಱಿದೇಱಿಲ್ಲಮಂ ಮಕುಟಮಂ ಮಣಿಕುಂಡಲಮಂ ಹಾರಮಂ ಕೇಯೂ
ರಮಂ ತೋಳ ಮಣಿಯಂ ಕಂಕಣಮಂ ಮುದ್ರಿಕೆಯುಂ ಬ್ರಹ್ಮಸೂ
ತ್ರಮಂ ದೇವಾಂಗವಸ್ತ್ರಮುಮಂ ಮಾಡಿ ಮೆತ್ತಂ ॥ ೧೦೫

[ಛಲದಿಂ ಪೂಣಿಸಿ ತಲೆಯಂ
ಸೆರಗಿಲ್ಲದೆ ಪೊಯ್ಯೆ ನಗರದೇವತೆಗಳ್ಕಿ ।
ಷುರಮುಪ್ಪೀಱುಂ ಮುದದಿಂ
ಸ್ಫುರಿಯಿಪ ಸದ್ರತ್ನಹಾರಮಂ ಮಾಡುವುದುಂ ॥ ೧೦೬

---

[1] ಧರಣೀಂದ್ರಂಮರ್ಚಿ (ಗ)

ಎರಡುಂ ಕೈಗಳುಮಂ ನಿ
ಷ್ಕರುಣಿಗಳಡೆಯಿಟ್ಟು ಕಡಿಯೆ ದೇವತೆಗಳ್ಕಾ ।
ಣ್ದಿರದಾಗಳ ಕಂಕಣಮಾ
ಗಿರೆ ಮಾಡಿದ ತೆಱಿನದವನಿಗಚ್ಚರಿಯಾಗಳ್ ॥ ೧೦೬

ಬೇಗಂ ಮಂಡೆಯನಿರ್ಪೋ
ಲಾಗಿರೆ ಕರ್ಬುನದ ಡಂಕೆಯಿಂ ಪೊಯ್ವುದುಮಂ ।
ತಾಗಳ್ಮನಿಸೇಱಿಂ ಸ
ದ್ರಾಗದಿನೊಡನೊಡನೆ ಮಕುಟಮಂ ಮಾಡುವುದುಂ ॥ ೧೦೯

ಪರಸಿಂದಂ ನಡುವಂ ನಿ
ಷ್ಕರಕೋಪರ್ಪೊಯ್ಯೆ ನಗರದೇವತೆಗಳ್ವಿ ।
ಸ್ತರದಿಂದೇಱಿಂ ದಿವ್ಯಾಂ
ಬರಮಾಗೆ ಮಹಾನುರಾಗದಿಂ ಮಾಡುವುದುಂ ॥ ೧೧೦

ಎರಡುಂ ಕಿವಿಯುಮೆನೊಡನೊಡ
ನರಿಯೆ ಕೆಲರ್ಸೊಕ್ಕ ನಗರದೇವತೆಗಳ್ ಭಾ।
ಸುರಕುಂಡಳಂಗಳಾಗಿರೆ
ವಿರಚಿಸಿದರ್ಸೋವು ಪೊರ್ದದಂತಾಗೇಱಿಂ ॥ ೧೧೧

ಅಂತಿಱಿದೇಱಿಗಳೆಲ್ಲಮಂ ಹಾರಾದ್ಯಾಭರಣಂಗಳಾಗಿ ವಿರಚಿಸಿ ಸುಕವಿನಿಕರಪಿಕಮಾಕಂದಂಗೆ ವೇದನೆಯನೆಂತುಂ ಪೊರ್ದದಂತಾಗೆ ಮಾಡುವುದುಂ ದಂಡಧರರ್ತಮ್ಮಿಱಿದೇಱಿಗಳೆಲ್ಲಂ ವಾರಿಷ್ಕೀಣಕುಮಾರಂಗಾಭರಣಂಗಳಾಗೆ ಕಂಡು ನಿಲಲಱ್ಮದೆ ನಿನ್ನಲ್ಲಿಗೆ ಪರಿತಂದು ಮಹಾವಿಸ್ಮಯಮಂ ಪೇೞಿತ್ತುಮಿರ್ದರನ್ನೆಗಂ ನೆನದೇವತೆಗಳುಂ ಪುರದೇವತೆಗಳುಂ ನೆರೆದು ॥] ೧೧೨

ರುಂದ್ರಜಿನಸಮೆಯವಾರಿಧಿ
ಚಂದ್ರನನಭಿಮಾನಧವಳನಂ ಧೈರ್ಯಸುರಾ ।

ದ್ರೀಂದ್ರೋಪಮನಂ ವಿಭವಸು
ರೇಂದ್ರನನಘತಿಮಿರವನಜಸಖಸನ್ನಿಭನಂ ॥ ೧೧೦

[ತನ್ಮ ವಿಗುರ್ವಿಸಿದ ನಾನಾರತ್ನಖಚಿತಮಪ್ಪ ಸಿಂಹಾಸನದ ಮೇಲಿರಿಸಿ ಕಲ್ಪವೃಕ್ಷದ ಪುಷ್ಪಂಗಳಿಂ ಮನಮಾರೆ ಪೂಜಿಸಿ ಪೊಗಟ್ಟು ತ್ತುಮಿರ್ದರನ್ನೆಗಂ] ॥ ೧೧೩

ಸುರದುಂದುಭಿ ಪಲವುಂ ಭೂ
ರ್ಗರೆಯೆ ವಿಯತ್ತಳದೊಳಿರ್ದು ಮೈಯಱಿಯದೆ ದೇ ।
ವರ ತಂಡಂ ಪೂವಿನ ಬ
ಲ್ಸರಿಯಂ ನೃಪಸುತನ ಮೇಲೆ ಕರೆವುದುಮೊಗಳ್ ॥ ೧೧೪

ಪುರಕ್ಷೋಭಮಾಗೆ ನೀಂ ಸಕಲಜನಪರಿವೃತನಾಗಿ ಬಂದು ಕು ಮಾರಕನಂ ಪೂಜಿಸುವ ನಗರದೇವತೆಯರುಮಂ ಜಯಜಯನಿನಾದದಿಂ ದಂಬರದೊಳಿರ್ದು ಮೈಯ್ಯಱಿಯದೆ ಪೊಗಳ್ವ್ವಿ ದಿವಿಜಸಮೂಹಮು ಮಂ ಕಂಡು ಹರ್ಷಚಿತ್ತನಾಗಿ ಸಮ್ಯಕ್ತ್ವಚೂಡಾಮಣಿಯ ಚರಣ ಯುಗಳಮಂ ಚಂಪಕಾದಿಕುಸುಮಂಗಳಿಂದರ್ಚಿಸಿ ಸಹಜಕವಿಜನಮ ನೋಹರೋದ್ಯಾನವನಕಳಕಂಠನ ಧೈರ್ಯಮಂ ಬಣ್ಣಿಸುತಿರ್ದನ್ನೆಗಂ ॥

ಮಂದರಾದ್ರಿನಿಭಹ್ಮಮಾನ್ವಿತನಂ ದೃಢವ್ರತನಂ ಮಹಾ
ನಂದದಿಂ ಸುರಕೋಟಿ ಬಣ್ಣಿಸಿದಪ್ಪುದೀಗಳ ಪೋಗಿ ನಾ
ಮುಂ ದಯಾಂಬುಧಿವಾರಿಷೇಣಕುವರನು ನೆಱೆ ನೋಱ್ಪನೆಂ
ಬಂದದಿಂದುದಯಾಚಲಾದ್ರಿಯನೇಱಿದಂ ದಿನವೆಲ್ಲಭಂ ॥ ೧೧೬

ಅಂತಾದಿತ್ಯನುದಯಗಿರಿಗಜಾರೂಢನಪ್ಪುದುಂ ಕುಮಾರಂ ಪ್ರತಿ ಜ್ಞೆ ತೀರ್ದು ಕೈಯನತ್ತಿಕೊಳ್ವುದುಂ ಭಯಸ್ಥನಾಗಿ ನೀಂ ಕರಕಮಲ ಯುಗಳಂಗಳಂ ಮುಗಿದು] [1] ॥ ೧೧೭

---

1 ಹರಿವಿಷ್ಟರದೊಳ್ ಲೇಸಾ
ಗಿರಿಸಿ ಸುರದ್ರುಮದ ಪಾರಿಜಾತದ ಕುಸುಮೋ ।
ತ್ಕರಮಂ ದೇವಾನಕವುಂ

ಆನಱಿಯದೆ ಪಿರಿದಪ್ಪಪ
ಮಾನವಮೆನೆರಡಿಲ್ಲದಿಂದು ಮಾಡಿದೆನದನ ।
ಜ್ಞಾನಿಯು ತಿಱಿದಿಂ ಮನದೊಳ್
ನೀನಿರಿಸದೆ ಬಿಡುವುದಮೊಳಗುಣಗಣನಿಳಯಾ ॥ ೧೦೯

ಎಂದು ಪೇೞ್ದುದುಂ ವಾರಿಷೇಣಕುಮಾರಂ [ಕಳಕಳಿಸಿ] ನಕ್ಕು ಮುನ್ನೆಮೆನ್ನ ಮಾಡಿದ ಪಾಪಫಲಮೀನೆವೆದಿಂ ಫಲಮನೀಯಲೆಂದು ಬಂದುದಕ್ಕೆ ನೀವೇಗುಪಿರಿ ? ಎಚ್ಚಂಗಾಱಿದಂಬಿಂಗೆ ಇಟ್ಟಂಗಾಱಿದೆ ಗುಂಡಿಂಗೆ ಪೆಂಡತಿಗಾಱಿದೆ ತೊಱ್ತಿಂಗೆ ಗವ್ವುಂಡಂಗಾಱಿದೆ ಬಾರಿಕಂಗೆ ಕಳ್ಳಂಗಾಱಿದೆ ಬಟ್ಟೆವೋಪಂಗೆ ಮಾಱುಂಕಕ್ಕಾಱಿದೆ ಸಂಕದ ಗೊರವಂಗೆ ಬಂದಿಕಾಱಿಂ ಗಾಱಿದೆ ತಿರಿದುಣ್ಬಿಂಗೆ ಮನ್ನೆಯಂಗಾಱಿದೆ ತಳಾಱಿಂಗೆ ನೆರೆಗಾಱಿದೆ ಮಗಂಗೆ ಮುನಿವರೆಂಬ ನಾಮಮ್ಮನಿಯಂತೆ ಕರ್ಮವಿಪರ್ದಂತೆ[ನಿಮಗೇಕೆ ಮುನಿವೆಂ ಮುನಿವೊಡೆ ದುಷ್ಕರ್ಮಕ್ಕೆ ಮುನಿವೆಂ ನೀವೆನ್ನ ಪೆರ್ಚಂ ಬಯಸು ವಿರಲ್ಲದೆ ಕೇಡಂ ಬಯಿಸಿರಿದೆಲ್ಲಂ ಕರ್ಮರಾಜನ ಪರಿಣತಿಯೆಂದು ನಿಮ್ಮ ಕಟ್ಟುಕಡಪಮಂ ಕಳಪಂದು ಮಹಾವಿಭೂತಿಯಿಂದರಮನೆಗೆ ವಂದು ಕತಿಪಯದಿನವಿರ್ದು ತನ್ನೊಳಿಂತೆಂದು ಬಗೆದಂ] [1] ॥ ೧೧೯

ಭವದೊಳ್ ಭೋಗರತಿಯೆ ಸುರಿದು ಪರಮೋತ್ಸವದಿಂ ॥
ನಾನಾವಿಧದಿಂ ಧರಣೀಂದ್ರಂಬಿರಸು ದೇವನಿಕಾಯಂ ಪೊಗೞುತ್ತಿರ್ದುದುಂ ॥
ಜಯ-ಜಯನಿನಾದಮುಂ ಸಂ
ಕಯಮಿಲ್ಲದೆ ದಿವಿಜಪಟಹದುಲಿವುಂ ಸುರಕಾಂ ।
ತೆಯರ ವೃದುಗಾನಮುಂ ವಿ
ಸ್ಮಯದಿಂ ಪೂರಿಸಿತು ಆಗಳಾಪುರವರದೊಳ್ ॥

ಆಗಳಾ ಕೋಳಾಹಳಮುಂ ನೀಂ ಕೇೞ್ದ ಜೋದ್ಧಂಬಡುತಿಪ್ಪನ್ನೆಗಂ ಮಾಯಾನಿದ್ರೆಯಿಂದೆದ್ದು ತಳಾಱಿರುಂ ಪುರಜನಂಗಳುಂ ಬಂದು ತತ್ಪ್ರಪಂಚಮೆಲ್ಲಮುಂ ತಿಳಿದು ಬಿನ್ನಪಂ ಗೆಯ್ವುದುಂ ಚೇಳಿನಿವುಹಾದೇವಿವರಸು ಧರ್ಮಾನುರಾಗದಿಂದಂ ಕುಮಾರನಲ್ಲಿಗೆ ಬಂದು ಬಣ್ಣಿಸುವ ದೇವರುಮುಂ ಪೂಜಿಸುವ ದೇವಕಾಂತೆಯರುಮುಂ ಕಂಡು ಚಂಪಕಾದಿಕುಸುಮಂಗಳಿಂದರ್ಚಿಸಿ ಕಾಲ ಮೇಲೆ ಬಿದ್ದರ್ (ಗ).

1 ನಿಮಗೆ ಮುನಿವನಲ್ಲೆಂದು ತಂತವ್ಮ ಮನದ ಕಟ್ಟುಕಡಹಮುಮಂ ತಳೆದ ದುವೆ ನಿರ್ವೇಗವಾಗಿ ಚೇಳಿನಿವುಹಾದೇವಿಯುಂ ನಿನ್ನ ವೊಗವುಂ ನೋಡಿ (ಗ)

ಮೊನ್ನನೇಕಭವಂಗಳೊಳ್ ತಿಗಟ್ಟು ಪಾಪದ ಬಿಣ್ಪಿನಿಂ
ದೆನ್ನ ನಂವನನಂತೆ ಪಂತತಿಯೆನ್ನ ಬಾಂಧವರೆನ್ನ ಪೈ ।
ಯೆನ್ನ ನೆಂಗೆಯಲಂ ನಮು ಧರ್ಮವ ಬಟ್ಟೆಗಾಣದೆ ಮೋಹದಿಂ
ದಿನ್ನಗಂ ಭವವಾರ್ಧಿಯೊಳ್ ತಿರಿದೇಂ ಮನಂ ಮುರಿವನ್ನೆಗಂ ॥ ೧೮೦

ಎಲ್ಲಿಯುಂ ಜಿನಧರ್ಮಮುಂ ಜಿನವಾಕ್ಯಮುಂ ಜಿನತತ್ತ್ವಮುಂ
ಕಲ್ಲದೆ ಕ್ಲಿಷ್ಟ ಪೊರ್ದದೇಳಿಸಿ ಭವ್ಯರುಂ ಯೋಡಿಸಿ ಪಾಪದಿಂ
ದೆಲ್ಲಿಯುಂ ನರಕಾದಿದುಃಖನಿನುಂಡು ಕಂಡು ಬಿಡಲ್ದು
ಬಂದಿಲ್ಲಿ ತೊಟ್ಟನೆ ಪುಣ್ಯದಿಂ ನಸಿಪೆ ಪೂರ್ವದೆಂ ಜಿನಧರ್ಮಮುಂ ॥ ೧೮೧

ಇನ್ನಿದನೇಳಿಸಿ ರಾಜ್ಯಾಭಿಲಾಷೆಯಿಂದಿರ್ದೆನಪ್ಪುಡೆ ಮದುವೆಯ ರಾಗದಂತೆ ಸುಗ್ಗಿಯುಪ್ಪ್ಯಂತೆ ಕಬ್ಬಿನ ಗಾಣದಂತೆ ಪಾಡವ ರಾಗದಂತ ಬೇಳಂಬನ ಪರ್ವತಂತೆ ಜನ್ಮವೆಯು ವೊಲಯಂತೆ ಬಾಂಟಿದ ಕೊಂತಾಟದಂತೆ ನಧ್ಯಾಪ್ನವರ್ಕ ನಂತೆ ಬಿರ್ದಿನಿಕ್ಕಯಂತ ನುದನಳಿಗಮು ಬೂಳಿಪಯಂತ ಮೆಳ್ಪನಾಸದ ಮುಂತಂತ ವೆಳವ ಕೆಸ್ಯ ಬಂಜಸಮಂತ ತಂಬುಲದ ರುಚಿಯಂತೆ ತಲೆಯು ಕಬ್ಬನಂತ ಕೇರ ಚಿತ್ರದಂತೆ ಪೂವಿನ ಬಣ್ಣದಂತ ತಳಿಪದ ಚಿಲ್ವಿನಂತ ಮದುಳ ಮನ್ನಿಸಾಯುಂತೆ ಬಾಹಿನ ಡೊಳ್ಳಿನಂತೆ ಸೂಳಯ ಕರೆಹದಂತ ಕುಂಟಿಲೆಯು ಕುಮಾರ್ಯಯಂತ ಪಶುವಿನ ಕರಪ ನಂತ ದೀವಳಿಗೆ ಬಾಂಬುಪಂತ ಬುತಿನ ಪ್ರಾಗಪ್ತೆಯಂತ ಬಳ್ದಿಂಗಳೊಪ್ಪ ದಂತ ತೆವಹಾನೆಯಿಂತಪಿನಂತ ಸೊಂತೆಯು ತೋಂಟಿದಂತ ಕಡೆಯೊಳ್ ಪೇಸುವಥಮುಮಮೋಭಯುಮಾಗದೆ ಪೋಗದದುಕಾರಣದಿಂ ರಾಜ್ಯಾಂಗನೆಯ ಮೋಹ [ದಿಂದುದಾಸೀನಂಮಾಡಿದೆನಪ್ಪುಡೆ ನಾಯ್ಯಾಲಮಂ ಪಿಡಿದು ತೂಜರಿಯುಂ ಪಾಯ್ವ ಜಡನಂ ಪೋಲ್ವೆನೆನಗೀ ಶಾಶ್ವತಮಪ್ಪ ಸುಖಮುಸೀವ ಜಿನಧರ್ಮಮನ ಬಲ್ವಿಡಿವೆನೆಂಬ ಬಗೆಯಂ ತಂದು ಚೇಳಿಸಿ ಮಹಾದೇವಿಯ][1] ನೊಡಂಬಡಿಸಿ ಪೋಗಿ ಪುಷ್ಪಗಿರಿಯೆಂಬ ಪರ್ವತಮೂಳಿರ್ದ ಸುಪಜ್ಞರೆಂಬಾಚಾರ್ಯರಲ್ಲಿ ಜಿನದೀಕ್ಷೆಯುಂ[ಕೈಕೊಂಡು ಉಗ್ರೋಗ್ರತಪದೊಳ್ ನೆಗಪ್ಪುತ್ತುಮಿರ ॥][2] ೧೮೨

---

[1] ್ಲಿಂ ರವರಮನೊಡಂಬಡಿಸಿ (ಗ) [2] ಕ್ಕೆಕೊಳ್ವುದುಂ (ಗ)

ಆವಾರಪ್ಪಿಣಮುನಿಗ ಮು
ಹಾವಿಭವದ ಜಂಘೆಚಾರಣತ್ವಂ ಪುಟ್ಟ ।
ತ್ತೇವೇಳ್ವುದೊ ಜಗದೊಳ್ ಜಿನ
ಸೇವನೆಯಿಂದರ್ಘವಂಗಿದಾವುದುಗಹನಂ ॥ ೧೦೩

ಅಂತು ಜಂಘೆಚಾರಣಬುದ್ಧಿಪ್ರಾಪ್ತನಾಗಿ [ದ್ವಾದಶತಪೋನುಷ್ಠಾನ ನಿರತನುಂ ತ್ರಿದಂಡರಹಿತನುಂ ತ್ರಿಶಲ್ಯದೂರನುಂ ತ್ರಯೋದಶವಿಧಚಾರಿತ್ರಸಂಪನ್ನನುಂ ಆಷ್ಟಾವಿಂಶತಿಮೂಲಗುಣಯುಕ್ತನುಂ ದಶವಿಧಸಮೋತನುಂ ಚತುಃಕಷಾಯಾಂತಕನುಂ ರಾಗದ್ವೇಷಮೋಹವಿವರ್ಜಿತನುಮಾಗಿ ತಪದೊಳೀಕಾದ್ಯುತ್ತರಂ ನೆಗಳುತ್ತುಮಿರ್ದೊಂದು ದಿವಸಂ ಭಾಂಡಿಲನೆಂಬ ಪುರೋಹಿತಂಗಮೊತನ ಪೆಂಡತಿ ಪುಷ್ಪವತಿಯೆಂಬ ಪಾರ್ವತಿಗಂ ಪುಟ್ಟಿದ ಮಗಂ ವ್ಯಾಕರಣಾದಿ ಶಾಸ್ತ್ರಾಂಗಳೊಳ್ ಕುಶಲನಪ್ಪ ಪುಷ್ಪದಾಡನೆಂಬ ಬಾಳಸಖಾಯುಂ ಸುದಂತಿಯೆಂಬ ಬ್ರಾಹ್ಮಣಿಯೊಳ್ ಮದುವಯಾಗಿರ್ದನೆಂಬುದಂ ಕೇಳ್ದು ತಪ್ಪೊಳಿಂತೆಂದಂ][1] ॥೧೦೪

ಕುರುಡಕರ್ಮಿಯೊಳ್ ಕಡೆದೊಡೆ
ಕರುಣಿಸಿ ತೆಗೆವನೆನೆ ನಂಬನಘವಶದಿಂದಂ ।
ನರಕಗತಿಗುಚಿತವಜೀವೋ
ತ್ಕರಮುಮನೊಳ್ಗಗತಿಗೆ ತಪ್ಪೊಡಾತನೆ ಕಳಯಂ ॥ ೧೦೫

ಅಂದಸಿಜಘವಶದಿಂದಂ
ತಿರಿವ ಮನುಷ್ಯರನುಪಾಯದಿಂ ಸದ್ಧರ್ಮ ।
ಕ್ಕುರಮುಮದಿಂ ತರ್ಪ ಮಹಾ
ಪುರುಷನ ಕಲ್ಯಾಣಮಿತ್ರನವನೀತಳದೊಳ್ ॥ ೧೦೬

1 ತಪದೊಳುತ್ತರೋತ್ತರಂ ನೆಗಳುತ್ತುಮಿರ್ದುದುಂ ಭಾಂಡಿಲನೆಂಬ ಪುರೋಹಿತನ ಮಗಂ ಪುಷ್ಪದಾಡಂ ತರ್ಕವ್ಯಾಕರಣಾದಿಶಾಸ್ತ್ರಾಂಗಳೊಳಿತಿ ಕುಶಲನುಂ ಪೊಸ ಮದವನಿಗನೆನ್ನ ಕಿರಿಯಂದಿನ ಕೆಳೆಯ ವಾರಿಷೇಣಕುಮಾರಂ ತಪಂಬಟ್ಟಿರ್ದಪನಾತನಂ ನೋಡಮೆನೆಂದು ಬಂದು ವಾರಿಷೇಣಮುನಿಪನಂ ಕಂಡು ಪೊಸವಟ್ಟು ಕುಳ್ಳಿರ್ದುದುಂ ತನ್ನೊಳಿಂತಂದು ಬಗೆದಂ (ಗ)

ಎಂದು ಭಾವಿಸಿ ಪುಷ್ಪದಾಡನಂ ಚತುರ್ಗತಿಸಂಸಾರದಿಂ ಪೊರ
ಮಟಿಸಿ ಪಂಚಮಗತಿಯನೆಯ್ದಿಸುವನೆಂಬ ಸಮಕಟ್ಟಿಂದಾತನ [ಮನೆಗ
ವಂದು ಪೊಸಮೆದವಳಿಗೆಯ ಕೆಲದೊಳಿರ್ದ ಪುಷ್ಪದಾತನಂ ಕಂಡು]
ಕಯ್ಯಂ ಪಿಡಿದೊಡಗೊಂಡು ಬಂದು ತಮ್ಮ ಗುರುಗಳ್ಗ ಪೊಡೆವಡಿಸಿ
ನಿಮ್ಮಡಿ ಚಿತ್ತೈಸಿ ಕೇಳಮೀತಂ ಸಂಸಾರ [ಘೀರುವಾಗ ಜಿನದೀಕ್ಷೆಯಂ
ಬಯಸಿ] [1] ಬಂದನೀತಂಗೆ ದೀಕ್ಷೆಯಂ ಪ್ರಸಾದಗೆಯ್ಯೀವೆಂಬುದಂ॥೧೮೫

ಜಿನದೀಕ್ಷೆಯನಾತಂಗಾ
ಮುನಿಪಂ ಕಾರುಣ್ಯದಿಂದೆ ಕುಡೆ ಕೊಂಡಂ ನ ।
ಟ್ಟನೆ ವಾರಿಷೇಣಮುನಿಪಂ
ಮುನಿದೊಡೆ ಪೊಲ್ಲೆಂದು ಮನದೊಳುಳ್ಳಳ್ಳುತ್ತುಂ ॥ ೧೮೮

ಅಂತು ಮನವೆಲ್ಲದ ಮನದೊಳ್ ಜಿನರೂಪಧಾರಿಯಾಗಿ ತನ್ನ
ಮೆದವಳಿಗೆಯ ಮೇಲೆ ಚಿತ್ತಮಿಟ್ಟು ಬನವೆನಗಲ್ಕಾನೆಯಂತೆ ದೂರಿ
ಸುತ್ತುಮಿರ್ಪುದುಂ ವಾರಿಷೇಣಮುನಿ ಪುಷ್ಪದಾಡನ ಮನಮನಱಿದು
ತನ್ನೊಳಿಂತೆಂದಂ [2] ॥ ೧೮೯

ಕುಡಿಯಲೊಲ್ಲದು ಪಾಲನೆಂದೊಡೆ ಕೂಸನಾಲ್ಲದೆ ನೊಂದು ತಾಯ್
ಬಿಡುವಳೇ ಮುನಿಸಿಂ ಧರಿತ್ರಿಯೊಳಂತ ನೋಡ ವಿವೇಕಿಯುಂ
ಜಡರನುಕ್ಕೆವರಂ ಮಹಾದುರಿತಾಸ್ವಿತಕರ್ಮನೊಳ್ಳಿತಂ
ನುಡಿದು ಬೇಸಱಿದೆಯ್ದಿ ತಿರ್ದುಗು ಧರ್ಮಮಂ ತಿಳಿವನ್ನೆಗಂ ॥ ೧೯೦

[ಅದುಕಾರಣದಿಂದಸ್ಥವಿಕಾರದಿಂ ನಿರ್ಬುದ್ಧಿಯಪ್ಪೀತನುಮನೇನೆಂ
ದೇಳಿಸಿ ಬಿಡದೆ ಸದ್ಧರ್ಮದೊಳ್ ವೃಢನಪ್ಪಂತು ಜಿನಾಗಮೋಕ್ತಿಯನ
ಱಿಯೆ ತಿಳಿಪಿ ನಿರಂತರಸುಖಮನೀವ ತಪದೊಳ್ ಪತ್ತಿಸುವನೆಂದು
ಪುಷ್ಪದಾಡಂಗಿಂತೆಂದಂ] [3] ॥ ೧೯೧

---

1 ಸಂಸಾರಕ್ಕೆಪ್ಪಿಸಿ (ಗ)

2 ಜಿನರೂಪಧಾರಿಯಾಗಿ ತನ್ನ ಪೊಸಮಡವಳಿಗೆಯಪ್ಪ ಸಾಧುವರಿಯಂ ನನೆ
ಯುತ್ತಮುತ್ತಲೆ ಚಿತ್ತವಗಿರ್ಪುದಂ ವಾರಿಷೇಣಮುನೀಶ್ವರನಱಿದು ತನ್ನಂತರ್ಗತ
ದೊಳಿಂತೆಂದಂ (ಗ) 3 ಎಂದು ಪುಷ್ಪದಾತನಂ ಜಿನಾಗಮೋಕ್ತಿಗಳಿಂ ತಿಳಿಪಿ
ತಪದೊಳ್ ದೃಢಮಾಡುವೆನೆಂಬ ಬುದ್ಧಿಯಿಂದಿಂತೆಂದು ಪೇಳಲ್ತೊಡಗಿದಂ (ಗ)

ಸಿರಿಯಿಲ್ಲಾ ಬೆಸಕೆಯ್ವ ನಾಡು ಕಿಱಿದೇಂ ತಪ್ಪಿಂದವುರ್ವೀಶ್ವರರ್
ಪಿರಿಯರ್ ವೀಸೊಳಿರೇ ಮೆಹಾಬಲಯುತರ್ ಭೋಗಾನ್ವಿತರ್ ಧಾರಿಣೀ
ಶ್ವರನಾಮಕ್ರಮದೊರಸ್ಪ ಚಕ್ರಧರರುಂ ರಾಜ್ಯಂಗಳಂ ಬಿಟ್ಟು ಸಿ
ಷ್ಯರನೆಯ್ದಿಪ್ಪುಗ್ರತಪಕ್ಕೆ ತಂವರೊಳಲಂ ಸಾಮಾನ್ಯಮೇ ಕೇಳ್ ಸಂ॥೧೩೦

ಭರತಂ ಷಟ್ಖಂಡವಸುಂ
ಧರೆಯುಮನೊರ್ವಂದಲೆ ಬಿಟ್ಟು ಜಿನಸದ್ರೂಪಂ।
ಧರಿಯಿಸಿದನೆಂದೊಡುಱಿದರ
ಸಿರಿಯುಂ ಸಂಪತ್ತುಮಳವು ಬಳವುಂ ಪಿರಿದೇ ॥ ೧೩೧

[ಸ್ಮರರೂಪಂ ನ್ಯಾಯವಂಚಿತಂ ಸಕಳಷಟ್ಖಂಡಾವನೀವಲ್ಲಭಂ
ಸ್ಥಿರಚಿತ್ತಂ ವಿಭು ಚಕ್ರವರ್ತಿ ತಿಲಕಂ ಕಾಂತೀಪ್ರಸಂತಪ್ತ ಗಂ
ಡರುಮಿಂ ಸಂಸ್ಪೃತಿಗಳ್ಕಿ ಬಳ್ಕಿ ಸುಗತಶ್ರೀಕಾಂತೆಯೊಳ್ಕಾಲಂ
ದರಿದಪ್ಪುಗ್ರತಪಕ್ಕೆ ತಂವರೊಡಲಂ ಸಾಮಾನ್ಯಮೇ ಪೆರ್ತಿತ್ತಿಸಂ] ॥ ೧೩೨

ಬೇಸಱಿದಲಸದೆ ಕುದಿಯದೆ
ಸಾಸವೆಯಂ ಕುಡಿದರಂತೆ ಮಱುಗದೆ ತಪದೊಳ್ ॥
ಸಾಸಿಗನಾಗಿದುಗ್ರ ಗುಣಾ
ಭ್ಯಾಸಂ ಮೊಱ್ಚಿಂಗ ತಡೆಯಲಱಿಯುಮು ವೋಹ್ಷಂ ॥ ೧೩೩

[ಪಱುಗೋಲ ಪನ್ನಿಕ್ಕೋಲಿಂದಂ ದೋಣಿಯೊಕ್ಕೋಲ್ ಲೇಸೆಂ
ಬಂತೆ ಮಾನುಷ್ಯಲೋಕದೊಳಸ್ಪ ಶತಸಹಸ್ರಲಕ್ಷಕಾಲಭವಂಗಳೊಳಾವ
ಸುಖಮೆಲ್ಲಂ ಸ್ವರ್ಗಭೂಳಾವ ವಾಸಹದೇವನೊಂಮಗಳಿಗೆಯ ಸುಖ
ಮುಂ ಪೋಲವೆಂದೊಡೆ ಉತ್ತಮಮಪ್ಪ ಜಿನರೂಪಿಂದೆ ಸಂತತಮಪ್ಪ
ಸುಖಂ ದೊರೆಕೊಳ್ಗುಮೆಂದಕ್ಕಲಸುವಾತನೆ ಗಾಮಿಲಂ] [1] ॥ ೧೩೪

---

1 ಪಱುಗೋಲ ಪನ್ನಿಕ್ಕೋಲಿಂದ ದೋಣಿಯೊಕ್ಕೋಲು ಲೇಸೆಂಬಂತೆ ಪೆಱರ ಶತಪ್ರಪಂಚಕೋಟಿಭವಂಗಳೊಳಾದ ತಪಮೆಲ್ಲಂ ಜಿನರೂಪನರೆಪ್ಪೆಗೆಯ ಫಲಮನಿತಕ್ಕಂ ಬರಲಾಱದಂತಪ್ಪ ಜಿನರೂಪಂ ಕೈಕೊಂಡುಮೀಪಿಸಲಾಗದು (ಗೆ)

ತಪಮನೆ ಮಾಡ್ಪುದು ಬರ್ಕೆದೆ
ತಪದಿಂದಂ ಸಕಲರಾಜ್ಯಮುಂ ಕೈಸಾರ್ಗುಂ ।
ತಪದಿಂ ನಿರ್ವೃತಿಯಕ್ಕುಂ
ತಪದಿಂ ಪರಿಹರಿಸುಗುಂ ಸಮೆಸಾತ್ತಘೌಘಂ ॥ ೧೫೬

[ದಿವ್ಯಾಹಾರಮುಮೆಂ ಕೂರ್ಪ ಪೆಂಡತಿಯುಮೆಂ ಸುಗಂಧದ್ರವ್ಯಂಗಳುಮೆಂ ಪೆಱರ ಮೇಲೆ ಬಿಟ್ಟೆನಗಾಗೆ ನೀವುಣ್ಬುದು ನೀನನುಭವಿಸುವುದು ನೀವುಪಭೋಗಿಸುವುದೆಂಬನುಂ ಧರ್ಮಮುಮೆಂ ದಾನಮುಮನೋದುಮೆಂ ತಪಮುಮೆಂ ತಾನಲಸಿ ಪೆಱರಂ ಮಾಡಿಸುವೆನುಂ ಫಲಪ್ರಾಪ್ತಿಯನೆಯ್ದಲಾಱಂ] ॥ ೧೫೭

ಬಡಲಪ್ಪೊಪ್ಪಶುಚಿ ನಿಲ್ಲದು
ಪಡಿಕೆ ಕರಂ ಜಂತಿನಾಗರಂ ಪರ್ವೀಲಿ ।
ಪೆರ್ಡೆ ಕ್ರಿಮಿಯು ರಾಶಿ ಮೂತ್ರದ
ಮಡಕೆಯದಂ ನಂಬಿ ಚತುಳರೇಕೆಯೊ ಕಿಡುವರ್ ॥ ೧೫೮

ಪೆಱತೇನೊ ಪಲವ್ರದಿವಸಂ
ಪೊಱಗಿದೆರ್ಡೊಡೆ ಕಿಡದ ವಸ್ತುಗಳ್ಗನುವೆನಿದಂ ।
ನೋಡಿ ಪೊರ್ದಿದನಿತಱೊಳ ಪೊ
ಱ್ಪಡುಗೆಟ್ಟು ಮಲಂಗಳಂಬ ಪಸರಂ ಪಡೆಗುಂ ॥ ೧೫೯

[ಮಡಕೆಯೊಳಿನಿಸುಬೇಗಮಿದೊರ್ದಪಂ ಕೂಪನೆಂಜಲೆನ್ನರ್ ಪೇಸದುಂಬರಂಜದೆ ಮುಟ್ಟುವರಾಕೂಪಂ ಮೊನಿಸರ್ಮುಟ್ಟಿದನಿತಱೊಳಗುಣಂಗೆಟ್ಟೆಂಜಲಪ್ಪುದುಂ ಪೆಱಮುಮಿಟ್ಟಡೋಷಪ್ರದಱಿಂ ಶರೀರಂ ಪೊಲ್ಲದೆಂಬುದಲ್ಲದೆ ಶುಚಿಯೆನಲಾಗದು ॥ ೧೬೦

ಎರಡುಂಕೈಗಳಿನಾಗಳು
ವೊರಸುತುಮುದ್ಗತ್ತುಮಿರದೆ ಲೇಸಲ್ಲದೊಡೀ ।
ಪುರುಳಿಲ್ಲದನಾಯೊಡಲಂ
ಮರುಳೇ ಕರವೊಲ್ದು ಕೂರ್ಪ ಮೊನಿಸರೊಳರೇ ॥[1] ೧೬೧

[1] ಲೇಸೆಂದುಪೊರ್ದುವನ್ನೆರುವೊಳರೇ (ಗ)

ಎಲೆಯಿಂ ಬಾಯ್ ಮುಡಿಯಿಂದಂ
ತಲೆ ನೀರೆಯಿನಂಗವೆಸೆಗುಮಿಂತಿನ್ರು ಪಿಂಗಲ್ ।
ಕೊಚೆವೊಡಲಂ ಕ್ರಿಮಿದಾಸಿಯ
ನೆಲೆ ನೋಣದೆ ಸೋಲ್ತು ಪೊರ್ದುವನ್ನರುವೊಳರೇ ॥ ೧೪೩

ಉಗುಟುಂ ಪೇಲುಂ ಸಿಂಬುಳು
ಮಗಲಿರ್ದವನೆಯ್ದಿ ನೋಡಿ ಪೇಸುವರಂತ ।
ಪ್ಪುಗುಟಂ ಪೇಲಂ ಸಿಂಬುಳ
ಮಗಲದೆ ಪೊತ್ತಿರ್ದ ತನುಗೆ ಪೇಸವರೊಳರೇ ॥ ೧೪೪

ತನುವಪ್ಪೊಡೆ ಪೊಲ್ಲದು ಜೌ
ವನಮಪ್ಪೊಡೆ ಪಲವುಕಾಲಮಿರಲಱಿಯದು ಕಾಂ ।
ಚನಮಪ್ಪೊಡೆ ದಾಯಿಗರಿಂ
ದನುನಯದಿಂ ತಕ್ಕರಿಂದಮೆಱುವ್ರದು ಜೀಗಂ ॥ ೧೪೫

ವನಿತೆಯರುಂ ತಾಯುಂ ಬಂ
ಧುನಿಕಾಯಮುಮಾತ್ಮಜಾತರುಂ ತಂತಮ್ಮಿಂ ।
ಬನೆ ಬಗೆವರಲ್ಲದೆಂತುಂ
ತನಗಪ್ಪರೆ ನರಕಗತಿಗೆ ಪೋಪವಸರದೊಳ್ ॥ ೧೪೬

ನೆರೆದಿರ್ದ ನಂಟರುಂ ಪೆಂ
ಡಿರುಮೆಯ್ಯನುಮಿರ್ದು ಪಚ್ಚು ಕೊಳ್ವರೆ ನೋವಂ ।
ಮರಣಮನೊತ್ತುವ ರುಜೆಯಂ
ಕರುಣಿಸಿ ಪೆಱಿರ್ಗೀಕೆ ಮುಯ್ವನಾಂಪರೊ ಕೆಲಬರ್ ॥ ೧೪೭

ಕರವೊಪ್ಪೆ ಮೂಱುಕೋಟಿಯು
ವರೆನಂಟರುಮಿರ್ದು ಕಾಯಲಾರ್ತರೆ ಚಕ್ರೇ ।
ಶ್ವರನಿರವಿಂತುಟು ಕೆಲಬರ್
ಪರಮಾರ್ಥಂಕಂಡು ನಂಟರಂ ನಂಬಿರ್ಪರ್ ॥ ೧೪೮

ಲಂಕೆಯ ದೊರೆಯ ಮಹಾನಗ
ರಂ ಕೋಂಟೆ ಸಮಸ್ತವಿದ್ಯೆಗಧಿಪತಿ ತಾನುಂ ।
ಮುಂ ಕಲಿ ಯೆನಿಸಿದ ರಾವಣ
ನಂಕದೊಳೀನಣ್ಣ ರಾಮನಂ ಗೆಲ್ದಪನೇ [1] ॥ ೧೪೯

ತುಪ್ಪದ ಮೋಹಕ್ಕೆಯುಮೇಧ್ಯಮಂ ಕೊಂಡಂತೆ [2] [ಪೊನ್ನೆ ಮೋಹಕ್ಕ ಬಾವಿಯೊಳ್ಕ್ರಯಂ ನೀಡುವಂತೆ] ಪೆಂಡಿರ ಮೋಹಕ್ಕೆ ಸಂಯಂ ಪಾಯ್ವುಂತೆ ಮಕ್ಕಳ ಮೋಹಕ್ಕೆ ಕಿರ್ಚಂ ಪಾಯ್ವುಂತೆ ನಂಟರ ಮೋಹಕ್ಕೆ ಪುಲಿಯುಂ ಪಿಡಿವಂತೆ ಮಾನಿಸವಾಳ ಮೋಹಕ್ಕೆ [ಸಂಸಾರದೊಳಿದ ಭೋಗಕ್ಕಳಿಪಿ ಪಿರಿದಪ್ಪ ಸುಖಮುಂ ಮಾಬ್ಬಿ ತಪಮುಂ ಕೆಡಿಸಿ ನರಕದೊಳಾದ ಮಹಾದುಃಖಕ್ಕೊಳಗಾಗವೇಡ[॥೧೫೦

ಈಸಿರಿಯಿಾತನುವೀಧನ
ಮಿಾಸತಿ ಮತ್ತೀವಿಲಾಸಮತಿವಿಭವಂ ಕೇ ।
ಳೀಸುಖಮಿಾನೆಲನೀಮನೆ
ಯೀಸುತರೆಲೆ ನಿತ್ಯವೆಂದು ಪದೆವನೆ ಗಾಂಪಂ ॥ ೧೫೧

ಬಱುಮುಳಲಂ ಪಿಡಿದೊಡೆ ನಿಲ
ಲಱಿಗುಮೆ ತಳದೊಳ್ವವೇಕೆಯಲ್ಲದ ನರನುಂ ।
ಮಱುಗಿದೊಡೆ ಮಱುಕಮಲ್ಲದ
ಪೆಱುತೇಂ ಸಂಸಾರದಲ್ಪಸುಖಮಿರ್ದಪುದೇ ॥ ೧೫೨

[ಬಂದುವರುಷದಾರಂಬಕ್ಕಾಱುದೆ ಸಾವನ್ನೆವರಮೆಂಜಲಗುಬಿನಾಯ್ದು ಣ್ಬೊಕ್ಕಲಮೆಗನುಪೊಂದುಭವದ ತಪಕ್ಕಾಱುದೆ ಪಲವುಭವಂ ನರಕತಿರಿಕವೇದನೆಯನುಂಬ ನರನುಂ ಬುದ್ಧಿವಂತರಲ್ಲರ್] ॥ ೧೫೩

---

1 ರಾವಣನುಂ ಕಾಲನ ಕೊಳಗೆನೊ ಗೆಲ್ದನೊ ಮತ್ತಂ (ಕ. ಬ.)

2 ನಂಜಂ ತಿಂಬಂತೆ ಬಾಳ ಮೋಹಕ್ಕೆ ರಕ್ಕಸಿಯು ನೆವಂತೆ ಬೆಲ್ಲದ ಮೋಹಕ್ಕೆ ಸುರೆಗಿಯುಂ ನಕ್ತುವಂತೆ ಪಡಪಿನ ಮೋಪಕ್ಕೆ ಕಳ್ಳರೊಡವೋವಂತ ನಿದಾನದ ಮೋಹಕ್ಕ ತಲೆಯಂ ಕೊಡುವಂತೆ (ಗ)

3 ಧರ್ಮಮುಂ ಪಿಟ್ಟು ನರಕಮುಂ ಪೋಗಲುವೇಡಾ (ಗ)

ತರುಣಿಯರೆಂಬ ಪೆಬ್ಬುಲಿಗಳಂ ಹರಿಣಾಕ್ಷಿಯರೆಂಬ ಕ್ರೂರಸೀ
ಕರಡಿಗಳಂ ಲತಾಲಲಿತಗಾತ್ರಿಯರೆಂಬ ಮಹೋರಗಂಗಳಂ
ಸ್ಮರಶರದಿಂದೆ ವೆಯ್ಯುಱಿಯದೊಯ್ಯನೆ ಪೊರ್ದಿದರಪ್ಪಿಡಟ್ಟ ಚೆ
ಚ್ಚರಮುಱಿದೊತ್ತಿ ಮಟ್ಟಿ ಪುಡಿಯಾಗಿರೆ ತಿನ್ನದೆ ಪೋಗಲೀವರೇ॥೧೫೪

ಮತ್ತಂ ವನಿತಾಜನ ತೋಳಂ ಕಾಮನ ಮುಸೆದ ಬಾಳನ್ನದೆ ಲತೆಯೆಂದೊಡಂ, ಲಲನೆಯರ ಕಡೆಗಣ್ಣ ನೋಟಮುಂ ಮನೆಸಿಜನ ಕಯ್ಯ ಪಾಶಮನ್ನದೆ ನಗೆಗಣ್ಣೆಂದೊಡಂ, ಕಾಂತೆಯರ ಮೆಲ್ನುಡಿಯುಂ ನಂಜಿನುರುಳಿಯೆನ್ನದೆ ಮುದ್ದುನುಡಿಯೆಂದೊಡಂ, ತರುಣಿಯರ ಕುಚಯುಗಳಂಗಳುಂ ಮೋಹರಾಜನ ಚಕ್ರಮೆನ್ನದೆ ಚಕ್ರವಾಳಮೆಂದೊಡಂ, ಲತಾಂಗಿಯರ ಮೇಲ್ಪೊದೆವ ದುಕೂಲಮುಂ ಮೋಹರಾಜನೆಂಬ ಬೇಂಟೆಗಾಱಿಂ ಪರೆಪಿದ ಬಲೆಯೆನ್ನದೆ ಕಾಮಧ್ವಜಮೆಂದೊಡಂ, ಕಾಮಿನಿಯರ ಕರ್ಣಾಭರಣಂಗಳುಮೆಂ ಕಾಮರಾಜನ ಪಿಡಿದಡ್ಡಣವೆನ್ನದೆ ಕಮಲಮುಖವಮೆಂದೊಡಂ, ಬಾಲೆಯರ ಬೆರಲುಗುರ್ಗಳಂ ಮಾಯಾಕಿರಾತನ ಕೂರಂಬುಗಳನ್ನದೆ ಕಾಮನ ಪಂಚಬಾಣಮೆಂದೊಡಂ, ರಮಣಿಯರ ಪುಬ್ಬುಗಳಂ ಜಗನ ಬಿಲ್ಲೆನ್ನದೆ ಕಬ್ಬಿನ ಬಿಲ್ಲೆಂದೊಡಂ, ನಿತಂಬಿನಿಯರಸಿಯು ಬಾಸೆಗಳಂ ಯಮರಾಜನ ಬಟರೆನ್ನದೆ ಕೋಳಾಕರಮೆಂದೊಡಂ, ನಾರಿಯರ ಮುಂಗಂ ಕಾಮದೇವನೆಂಬ ಬೇಂಟೆಗಾಱಿಂ ಪೊಗದು [1] ಕೊಲ್ವ ತಿದಿಯೆನ್ನದೆ ಚಂಪಕಕಟ್ಟಿಗಳೆಂದೊಡಂ, ಕನ್ನೆಯರ ಬಾಯೆಲ್ದೆರೆಯುಂ ನರಕದ ಬಿಲವೆನ್ನದೆ ಕಡುಚೆಲ್ವೆಂದೊಡಂ, ದಯಿತೆಯರ ಕುರುಳ ಪಚ್ಚೆಗಳನಂತಕನ ಕಣ್ಣಿವಲೆಯೆನ್ನದೆ ಮುಱಿಮುಂಬಿಯೆಂದೊಡಂ, ಅಬಲೆಯರ ಕೊರಲ ರೇಖೆಗಳುಮುಂ ಮೃತ್ಯು ರಾಜಂಗಿದು ಕೊಲ್ವ ನೇಣೆನ್ನದೆ ಕೋಮಲರೇಖೆಯೆಂದೊಡಂ, ಗಣಿಕೆಯರ ನೊಸಲಂ ಮಾಯಾನೃಪನ ಕವಲಂಬೆನ್ನದೆ ಬಾಲಶಶಿಯೆಂದೊಡಂ, ಕಪಟನಾಟಕಸೂತ್ರಧಾರೆಯರ ಶೃಂಗಾರಮುಂ ನರಕದ ದಾರಿಯೆನ್ನದೆ ಲೇಸೆಂದೊಡಂ, ಮಾಯಾಕಿರಾತೆಯರ ವಿಲಾಸಮುಂ ಕೇಸುರಿಯೆನ್ನದೆ

1 ಪೋಗದೆ (ಕ. ಬ.)

ರಮೆಣೀಯಮೆಂದೊಡಂ, ಕುಟಿಲಚಿತ್ತೆಯರ ಕೂಟಮುಂ ಕಾಳಕೂಟ
ಮೆನ್ನದೆ ನಲಿದೊಡಂ, ಪಾಪರೂಪೆಯರ ಮೇಳಮುಂ ಕೀನಾಶನ ಗಾಳ
ಮೆನ್ನದೆ ಪೆಚರ್ದವೊಡಂ ತನ್ನ ಕೇಡಂ ಬಗೆವನಲ್ಲದೆ ಸುಖಮುಂ
ಬಗೆಯಂ ॥ ೧೫೫

ಮಾಯದ ಟಕ್ಕಿನ ಕಪಟದ
ವಾಯದ ಕೃತ್ರಿಮದ ಮುಖುಳದೆಱಕದ ಕಪಟೋ ।
ಪಾಯದ ಕಣಿಗಳ್ ಸುದ
ಸ್ತ್ರೀಯರ್ಕೀವೆಲಮೆ ಸರ್ವಜನವೆಂಬಕಿಯರ್ ॥ ೧೫೬

ನರಕದ ಬಟ್ಟೆಯನಱಿಯದ
ನರಗರ್ಗಂ ತೋಱುವೆ ಪೊಲಂಬಿಗರ್ದುಷ್ಕೃತತ ।
ಸ್ತನ ಪಿಡಿದಿರ್ಪ ಡಾಣಿಗ [1]
ಳರವಿಂದಾಕ್ಷಿಯರನಂಗಸೋಜೆಯು ಪಿಡಿಗಳ್ ॥ ೧೫೭

ಸುಗತಿಯ ಬಟ್ಟೆಯು ನುಳ್ಗಳ್
ಸುಗತಿಯ ಬಟ್ಟೆಯು ಚಕಮೂರುತತಿಗಳ್ ಮತ್ತಂ ॥
ಸುಗತಿಯ ಬಾಗಿಲ [2] ಪಡಿಗಳ್
ವೈಗಾಕ್ಷಿಯರೂರ್ಧ್ವಪಥದ ಕಾಪಿನ ನಾಯ್ಗಳ್ ॥ ೧೫೮

ಸಿರಿಯುಪ್ಪೊಡೆ ಪುಲ್ಲಿಚ್ಚಿನ
ದೊರೆ ರಾಜ್ಯವಿಭೂತಿ ಮುಗಿಲ ನೆಳಲ ಸಮಾನಂ ।
ತರುಣತ್ವಮಪ್ಪೊಡಿಂದ್ರನ
ವರಚಾಪದ ಸರಿ ಮನುಷ್ಯರೇಕೆಯೊ ಬೆಸೆವರ್ ॥ ೧೫೯

ದರಿಯ ಮರದಂತೆ ಜೀವಿತ
ಮರಲೆಯ ಮಸಿಯಂತೆ ಪೆಂಡಿರುಪಭೋಗಂ ಭೂ ।

---

1 ದಾಣಿಗಳ್ (ಗ) 2 ಬಟ್ಟೆಯು (ಗ)

ಧರನದಿಯಂತೆ ಕಳೇವರ
ಮುರಿಸಿನದಂತಿರ್ಕುಮೊದ್ದತಿಕ್ಕೆಯುಮಾದಟುಂ ॥ ೧೬೦

ಬಲಮುಂ ಪೆಂಪುಂ ಕೂರ್ಪುಂ
ಕಲಿತನಮುಂ ದರ್ಪಮುಂ ಪ್ರತಾಪಮುಮೆಳವುಂ ।
ಕುಲಮುಂ ದಳಮುಂ ಜಳಬೊ
ಬ್ಬುಳಿಕೆಯುವೋಲ್ ಕಿಡುವುವೇಕೆ ತೂನೆವರ್ ಮೂರ್ಖರ್ ॥೧೬೧

ಬಡಲೊಳ್ಕಿತಾದೊಡಂ ಸಿರಿ
ಕಿಡದೊಡಮಾಯುಷ್ಯವೊಮರ್ಮಗೊರ್ಮಗೆ ಪಿರಿದ ॥
ಪ್ರೌಢವೋವೊ ಮನುಷ್ಯರ [1] ಸೈ
ತಿಡುವವರಾರ್ಮಾಣಿಪನ್ನತಾರ್ವಸುಮತಿಯೊಳ್ ॥ ೧೬೨

ಚಕ್ಕನೆ ಸಾವುದುಮಂ ಸರಿ
ನೆಕ್ಕನೆ ಕಿಡುವುದುಮನೊದು ಕಂಸುಂ ಕೇಳ್ದುಂ ।
ಸೊಕ್ಕುವೆರಂಕ್ಕುವರಂಜದ
ಯಕ್ಕುಂದಲೆವಾಯ್ವರನ್ಯರೆನಗಿದು ಚೋದ್ಯಂ ॥ ೧೬೩

ತನುವಂ ತಪದೊಳ್ ಧನಮುಂ
ಜನನುತಸದ್ಧರ್ಮದಲ್ಲಿಯುಂ ತವಿಸಿ ಕಲರ್ ।
ಮನದೊಳ್ಪಪಕ್ಕಂಜಾಪ
ರೆನಸುಂ ದುಃಖಕ್ಕೆಯಂಜರೆನಗಿದು ಚೋದ್ಯಂ ॥ ೧೬೪

ಎಂದು ಶರೀರದೊಳಾದ ಪೊಸ್ಲವೆಯುಮುಂ ಸಂಸಾರದೊಳಾದ ದುಃಖಮುಮೆಂಬ ಭೋಗಂಗಳ ಕೇಡುಮಂ ಬಾಪ್ಕೆಯನಿತ್ಯತೆಯುಮೆಂ ವನಿತೆಯರ ಕಪ್ಪತೆಯುಮುಂ ಸ್ಥಿತಿಕರಣಂ ಮೆಹಾಪುಣ್ಯಮೆಂಬುದುಮಂ ಬಗೆದು ಪನ್ನೆರಡುವರ್ಷಂಬರಂ ಮಾಣದೆ ಪೆಱಿಲ್ಪುಷ್ಪದಾಡನೊಡೆದ

---

1 ಪರಿದಾದೊಡೆಯಕಟ ಮನುಜನಂ (ಗ)

ಕಲ್ಲ ದೋಣಿಯೊಳಿಟ್ಟಿದ ನೀರಂತೆ ಕೈಕೊಳ್ಳದೆ ಸತಿಯರ ರೂಪನೆ ಭಾವಿ
ಸುತಿಪ್ಪುದುಂ ವಾರಿಷೇಣಮುನಿನಾಥಂ ತನ್ನೊಳಿಂತೆಂದಂ ॥ ೧೬೫

ಆನೀಪಾತ್ರೆಗಳನೊಲ್ಲದಂದು ಕಿಡುವೆಂ ತಾಯುಂ ಮನಂಸೋಗುಮೆಂ
ದೇನಚ್ಚಿತ್ತೆಗಳಾಗೂಸುಗಳ್ ಕುಡಿಗುಮೀ ಸಂತೋಷದಿಂ ಪಾತ್ರೆಗಳಂ
ಹೀನಾತ್ಮರ್ಕಳುಮೆಂತೆ ನಾಡೆ ಹಿತಮುಂ ಸಂತಂ ಸುಖೋಪಾಯಮುಂ
ಜ್ಞಾನಾತ್ಮಂ ನಿಜೆ ಪೇಳ್ದೊಡಂ ಪದೆಪಿಸಿಂ ಕೈಕೊಳ್ಳರಾನಂದದಿಂ ॥ ೧೬೬

ಕಳವೆಯು ಕಾಂಚುಮೆಂ ತೊವೆಯುಮೆಂ ತಿಳಿದುಪ್ಪಮುಮೆಂ ವಿನೋ
ದದಿಂ
ಗಳಿಲನೆ ನಾಯ್ಗೆ ಬೇಗಮೊಸೆವಿಕ್ಕಿದೊಡಂ ಕಡುಗಯ್ದು ಮೆತ್ತನು
ವ್ವಳಿಸಿ ಕನಲ್ದೊಡನಲ್ದ ಸಲೆ ಪೇಲನ ಚಿಂತಿಸುತಿಪ್ಪುವಂತೆ ಸಂ
ಚಳವೆನರುಂ ಸದುಕ್ತಿಗಳನೊಲ್ಲದೆ ಚಿಂತಿಸುವರ್ಕುಮಾರ್ಗಮಂ॥೧೬೭

ಎಂದು ಮೊಗುಳ್ನಗೆನಕ್ಕು ಮತ್ತವಿಗತಸನಲಸಿ ಬಿಡುವುದು ಪುರು
ಷಾರ್ಥಮೆಲ್ಲಿಂದು ಗಿಳಿಯುಂ ಪಂಜರದೊಳಿಕ್ಕಿ ರಕ್ಷಿಸುವಂತೆ ಪುಷ್ಪದಾಡ
ನನೆತ್ತಲುಂ ಪೋಗಲೀಯದೆ ಧರ್ಮಶ್ರವಣಮಂಗೆಯ್ವುತ್ತುಮೊಂದುದಿ
ವಸಂ ವಿಮಳಶೈಲದೊಳಿರ್ದ ವರ್ಧಮಾನಸ್ವಾಮಿಗಳ ಶ್ರೀಪಾದಮಂ
ಬಂದಿಸಲೆಂದು ವಾರಿಷೇಣಮುನಿಪರಿವೃಢಂ ಪೋಪುದುಮತ್ತಲ್ ದ್ರವ್ಯಾರ್ಜಿಂ
ಗಿಯೊಗಿರ್ದ ಪುಷ್ಪದಾಡನೆಡೆವೆತ್ತು ರಾಗಿಸಿ ಬಲೆನೆಱಿದ ಕೊಂಕನಂತೆ
ಮನೆಯೆ ಗುಱಿಯಾಗಿರ್ಪುದುಮಾಗಳ್ ॥ ೧೬೮

ಉತ್ತಮೆಗುಣಗಣನಿಳಯಂ
ಚಿತ್ತಜಮದಭರಕರೀಂದ್ರಹರಿ ವಿಮಳಯಶೋ ।
ದಾತ್ತಂ ಶ್ರುತಾಂಬುನಿಧಿ ಜಗ
ದುತ್ತುಂಗಂ ನಿಷ್ಕಷಾಯನಪಗತದುರಿತಂ ॥ ೧೬೯

---

1 ಎಂದು ಪನ್ನೆರಡುವರುಷಂಬರ ಸ್ಥಿತಿಕರಣದ ವಿಶೇಷಫಲವುಂ ಜೀವನ
ಪ್ಪುದಱಿಂದಲಸದೆ ಧರ್ಮಶ್ರವಣಾಂಗೆಯ್ವೋಡಂ ಪುಷ್ಪದಾಡನೊಸವ ಮಡಕೆಯೊಳ್
ಅದ ನೀರಂ ಕೊಳ್ಳದೆ ಸುದತಿಯರಂ ಭಾವಿಸುತಿಪ್ಪುದುಂ ವಾರಿಷೇಣಮುನೀಂದ್ರನಿಂ
ತೆಂದಂ (ಗ)

ವಾರಿಷೇಣಮುನಿವಲ್ಲಭನುಂ ಮಹಾವೀರಸ್ವಾಮಿಯುಂ ಬಂದಿಸಿ ತಡೆಯದಲ್ಲಿಂದಂ ಬಂದು ಪುಷ್ಪದಾಡನೆನಿಪ ದ್ರವ್ಯತಪಸ್ವಿಯನಲ್ಲಿ ಕಾಣದೆ ತನ್ನ ನಿವಾಸಕ್ಕೆ ಪೋದನೆಂದಱಿದು[1] ತಾಂ ಜಂಘಾಚಾರಣಋದ್ಧಿ ಪ್ರಾಪ್ತನಪ್ಪುದಱಿಂ ಮೆರುಜ್ಜ್ವದಿಂದೆಯ್ದಿ ಪುಷ್ಪದಾಡನೆಡೆಯೊಳ್ ಕಂಡು ಪಿಡಿದುಕೊಂಡಾತಂಗೆ ವೈರಾಗ್ಯಮಂ ಪುಟ್ಟಿಸಲ್ವೇಡಿ ನಿನ್ನ ರಾಜಭವನಕ್ಕೆ ಬರ್ಪುದುಂ ಜೇಳನಿಮೆಹಾದೇವಿ ವಾರಿಷೇಣಮುನೀಂದ್ರೋತ್ತಮನ ಬರವಂ ದೂರದೊಳ್ ಕಂಡು [ಪೊಚ್ಚಿಲ್ಲದ ಪೊಱ್ತಿನೊಳ್ ಬಂದರಿದೇನಾನುಮೊಂದುಕಾರಣಮೊಗಲ್ವೇಱುಕ್ಕುಮೆಂದು ವಿಸ್ಮಯಂ ಬಟ್ಟು] ತನ್ನೊಳಿಂತೆಂದಳ್ ॥ ೧೭೦

ಎಗ್ಗಂ ಮುನ್ನೀವಮಾರ್ಗಂ
ವೊಗ್ಗೆಂದುಱದುಕ್ಕ ಪ್ರೋಗಿ ನಿಲಲಾಱದೆ ಚಿಃ ।
ಸಿಗ್ಗಿಲ್ಲದಲಸಿ ಬಂದಂ
ಗುಗ್ಗುರಿಯಂ ತಿಂಬ ಮೊಗ್ಗು[2] ಸುಣ್ಣದೊಳಾಂಟೇ ॥ ೧೭೧

ಅಱುಮನದಂಗಂ ಸುಖವಿಂ
ಗೆಳಸುವವಂಗಂ ಗೃಹಕ್ಕೆ ಪೆಂಪಿಂಗೆ ಮಹೋ ।
ಜ್ಜ್ವಳಕೀರ್ತಿಗಾಟಪಂಗಂ
ಕಳಂಗಮಿಳವಡದು ಜೈನಮಾರ್ಗಂ ಜಗದೊಳ್ ॥ ೧೭೨

[ಈತನಪ್ಪೊಡೆ ಸುಖಿ ಕೊರಲ ಸತ್ವಮಿಲ್ಲದೊರಲಂ ನುಂಗಿದ ರೆಂಬ ನಾಣ್ಣಾದೆಯಂತೆ ತನ್ನಳವಱಿಯದೆ ಜಿನಸ್ವಾಮಿಯ ಜಗನ್ಮಾಂಗಲ್ಯನ ರೂಪಂ ಧರಿಯಿಸಿ ತಪದೊಳಾದ ಕ್ಲೇಶಕ್ಕೆ ಕರಲಾಱದೆ] ರಾಜ್ಯಕಾಂಕ್ಷೆಯಿಂ ಬಂದನಾಗಲೆವೇಱುಮಲ್ಲದೆಱಡಿಲ್ಲಿಗೇಕೆ ವಂದ [ನಿದನಾರಯ್ದು ನೋಡುವೆ] ನೆಂದು ಸರಾಗಾಸನಮುಮಂ ವಿರಾಗಾಸನಮುಮೆನಿಕ್ಕು

[1] ದ್ರವ್ಯಲಿಂಗಿಯಪ್ಪ ಪುಷ್ಪದಾಡನವೆವೆತ್ತೆನೆಂದು ಬಲವಳಿದ ಕೊಂಕನಂತೆ ಪೆಂಡತಿಯಲ್ಲಿಗೆ ಪರಿತಪ್ಪವನಂ ವಾರಿಷೇಣಮುನಿವೃಂದಾರಕಂ ಕಂಡು (ಗ)

[2] ಸಿಗಿಲ್ಲದೆನಿಸಿ ಪೋದಡೆ ವೊಗ್ಗಿಂ ಸಕ್ಕರೆಯು ಮೆಲಹ (ಗ)

ವುದುಂ ಸುಕವಿಜನಮನಃಸದ್ಮನೀರಾಜಹಂಸಂ [1] ಬಂದು. ವಿರಾಗಾ
ಸನದೊಳಿರ್ದುದುಂ ಜಿನಸಮಯಗಗನಚಂದ್ರಿಕೆ ವಾರಿಷೇಣಮುನೀಂದ್ರನ
ಚರಣದ್ವಯ ಸಲ್ಲಪೆಂಗಳಂ ಪ್ರಸೂನಾವಳಿಗಳಿನರ್ಚಿಸಿ ಮಹಾಭಕ್ತಿಯಿಂ
ಬಂದಿಸಿ ಕೈಗಳಂ ಮುಗಿದು [ನವ್ರಮಸ್ತಕೆಯಾಗಿರ್ದು] ಮುಂದೆ
ಕುಳ್ಳಿರ್ದು ॥ ೧೭೩

ಮುನಿದಿಂ ನಿಮ್ಮಡಿ ನಿಮ್ಮಯ
ಪದಸರಸಿಜಯುಗಳಮಂ ಮಹೋತ್ಸವದಿಂದಂ ।
ನಿದಿತಂ ಕಂಡೆನವೋಘಂ
ಸದಮಳರೆಸ್ಮಿಂದಮಿಂ ಕೃತಾರ್ಥರುಮೊಳರೇ [3] ॥ ೧೭೪

ಎನಗೆ ಬೆಸನಾವುದೆಂದೊಡೆ ನಿಮ್ಮ ಸೊಸೆವಿರಯುಮ್ಮರ್ವರುಮಂ
ಶೃಂಗಾರಂಗೆಯ್ಸಿ ಬೇಗಮೊಡಗೊಂಡು ಬನ್ನಿಮೆನೆ ಕೇಳಿಸೇಮಾದೇವಿ
ತನ್ನ ಮಣಿಮಾಡಕ್ಕೆ ಪೋಗಿ ಪರಿಚಾರಕಿಯರಂ ಬರಿಸಿ ತಡೆಯದೆ
ಶೃಂಗಾರಂಗೆಯ್ದು ಬರ್ಪುದು ತಮ್ಮ ವಲ್ಲಭಂ ಬಂದಿರ್ದನೆಂದು ಪೇಱ
ಮೆಂದಯುರ್ವರ್ಕುಮಾರಿಯರಲ್ಲಿಗಟ್ಟುವುದುಂ ಅವಕೇರ್ಕಳ್ದ ತೆಂಕಣೆ
ಲರ ತೀಟದಿಂ ನಯಂಬಡೆದ ಮೋಹವೀಲತೆ ಪರ್ಚಿ ಬಗೆಗೆ ಬಂದ ಶೃಂಗಾ
ರಮುಂ ಮೊಲ್ಪಲ್ಲಿಯೊರ್ವಳ್ [4] ॥ ೧೭೫

---

1 ವಾತ್ಸಲ್ಯರತ್ನಾಕರಂ (ಗ)

2 ಇರ್ದುದುಂ ಜೇಳಿನಿಮಹಾನೀಲಿ ಭಾವಯಸಾದಿಗಂಬರನ ಚರಣಕಮ
ಳಮುಂ ನಿರ್ಮಲೋದಕದಿಂ ಕರ್ಚಿ ತಜ್ಜಲಮಂ ತಲೆಯೊಳಾಂತುಕೊಂಡು ಕವಳಾದಿ
ಕುಸುಮದಿಂದರ್ಚಿಸಿ (ಗ)

3 ಮುನಿನಾಥ ನಿಮ್ಮ ಪದಕೋಕನಮಂ ಮನದರ್ಧಿವೆರಸು ಕಂಡುದಱಿಂ
ನೆಟ್ಟನೆ ಸುಖಮನೀಗ ಪುಣ್ಯಂ ಜನಿಯಿಸಿತೆನ್ನಿಂ ಕೃತಾರ್ಥರಾರ್ಮಾನವರೊಳ್ (ಗ)

4 ಎನಗೆ ಬೆಸನಾವುದೆನೆ ನಿಮ್ಮಯ್ಯನ್ನರ್ವರ್ ಸೊಸೆವಿರಮನೊಡಗೊಂಡು
ಬನ್ನಿಮೆನೆ ಮಹಾಪ್ರಸಾದಮಂತೆಗೆಯ್ವೆನೆಂದು ಸೊಸೆವಿರೆಲ್ಲರುಮಂ ಬರವೇೞ್ದಟ್ಟು
ವುದುಮವರ್ಲಾವಣ್ಯಸಮುದ್ರಂ ಮೇರದಪ್ಪಿದಂತೆ ಬಂದು ಸುತ್ತಲುಮಿರೆ (ಗ)

[ಅನುರಾಗವೊದವಿ ಬಟ್ಟಿಂ
ಸ್ತನದೊಳ್ ಕಟಿಸೂತ್ರಮುಂ ಪದದ್ವಯದೊಳ್ ಪೆಂ ।
ಪಿನ ಹಾರಮುಂ ಕರಂಗಳೂ
ಳನುನಯದಿಂ ಕಟ್ಟಿ ತುರಿವದಿಂದಂ ಬಂದಳ್ ॥ ೧೭೬

ಲೀಲೆಯಿನೊಳ್ಪುವೆತ್ತ ಪೊಸಚೀನಪಮನುಟ್ಟಿ ಬೆಡಂಗುವೆತ್ತ ಪ
ಚ್ಚೊ ಲೆಯನಿಕ್ಕಿ ಕಣ್ಗೆ ವರೆ ರೂಪು ವಿಳಾಸವೆಳಂಬವೊಗೆ ಭೂ
ಪಾಲಕಚಿತ್ತಮುಂ ಪಡೆಯಲೆಂದು ಮೆಹೋತ್ಸವದಿಂದೆ ಪೂಣ್ಕೆಯಿಂ
ಬಾಲಿಕೆ ಬಂದಳೊರ್ವಳತಿರಾಗದೆ ಕಿನ್ನರಕಾಂತೆಯಂದದಿಂ ॥ ೧೭೭

ಹಾರಮನಿಕ್ಕಿ ಪೊಚ್ಚ ಪೊಸನುಲ್ಲಿಗೆಯಂ ನುದದಿಂ ತುಱುಂಬಿ ವಿ
ಸ್ತಾರದಿನಿಟ್ಟ ಚಂದನದ ಬಟ್ಟನಳಂಕೃತಿಯಿಂದಮುಟ್ಟಿ ಧಾ
ತ್ರೀರಮಣೀಯಮಪ್ಪ ಮೈಮನವೆಪ್ಪ ದುಕೂಲಮನರ್ತಿವೆಟ್ಟು ವಾಕ್
ಶ್ರೀರಮಣಂತೆ ಬಂದಳಿರೊರ್ವಳ್ ಪೂರ್ವಮನೋನುರಾಗದಿಂ॥೧೭೮

ಸುಳಿಗುರುಳೋಳಿ ಕಣ್ಗೆ ವರೆ ನೀಳ್ದಲಗರ್ಣ್ಣಡುರಯ್ಯಮೊಗೆ ಕೋ
ಮಳತನು ಭಂಗಿವೆತ್ತೆಸೆಯೆ ಪರ್ಮದ ಪುರ್ಮಿನಿಗಂಪು ಸೋಲಮಂ
ಪೊಳಲನೆ ಮಾಡೆ ಭೂಭುಜನ ಚಿತ್ತಮನೀಗಳ ಸೂಱೆಗೊಳ್ವನೆಂ
ಬಳಿಪಿನದೊರ್ವಳುರ್ವಶಿವೊಲೊಪ್ಪಿರೆ ಬಂದಳಂದಾತ್ತಲೀಲೆಯಿಂ ॥೧೭೯

ಸುಲಿಪಲ್ ವಿಭ್ರಮಮುಮಂ ಮುಖಂ ಕಮಳಮುಂ ಪಾಣಿನಮುಂ ಕಣಿಗಳಾ
ಜ್ಜ್ವಳಿಪಾಳೀಂದುಮನೊಪ್ಪುವೆತ್ತ ನಿಟಿಲಂ ಕರ್ಣದ್ವಯಂ ನೆಯ್ದಿಲಂ
ನಳತೋಳ್ ಸಲ್ಲತೆಯಂದಮುಂ ನಡೆಯೆ ಪೋಲ್ತೋರಂತೆ ಚೆಲ್ವಾಗೆ ಕೋ
ಮಳಯೊರ್ವಳ್ ನಡೆತಂದಳಂದು ಮುದನೇಭೇಂದ್ರಂಬೊಲಾಶ್ಚರ್ಯದಿಂ॥

ಉಡಿಯದೆ ಮಾಣದೀಮುಡಿಯ ಭಾರದೊಳೀಕೊರಲಾದ ಪಾಂಗಿನಿಂ
ದುಡಿಯದೆ ಮಾಣದೀಕುಚದ ಭಾರದಿನೊಳ್ನಡುವೆಕ್ಕಟಿಕ್ಕಟಿ
ನ್ನುಡಿಯದೆ ಮಾಣದೀಕಟಿಯ ಭಾರದಿನೀಕಣಕಾಲ್ಗಳೆಂದು ನೇ
ರ್ಪಡೆ ಪಲಗೊರ್ವಳದ್ಭುತಮನೊರ್ಮೆಯೆ ಪುಟ್ಟಿಸಿ ಬಂದಳರ್ತಿಯಿಂ ॥

ಮದನನ ಮಂತ್ರದೇವತೆಯೊ ಕಾಮನ ನಚ್ಚುವೆ ಪುಷ್ಪಬಾಣಮೋ
ಮದನನ ಗಂಧಸಿಂಧುರಮೊ ಮನ್ಮಥರಾಜನ ರಾಜ್ಯಲಕ್ಷ್ಮಿಯೋ
ವಿದಿತಮಿವಳ್ ಜಗತ್ತ್ರಯಮಿದೆಂಬಭಿಶಂಕೆಯನುಂಟುಮಾಡಿ ಸಂ
ಪದದಿನಪೂರ್ವರೂಪೆ ನಡೆತಂದಳನಂಗನ ಶಸ್ತ್ರಗಂದದಿಂ ॥ ೧೪೨

ಜಿನನೊರ್ವಂ ಪೆಱಗಾಗೆ ಮತ್ತು ಱುದರಂ ಜೀಯೆಂಬಿನಂ ಕೊಂದು ಕೂ
ಗೆನೆ ತಾನೆಂದು ಮಹಾಪ್ರತಾಪದೊದವಿಂ ಪೆಯ್ವೆರ್ಚಿ ವೀರಕ್ಕ ತೂ
ಟ್ಟನೆ ಮುಯ್ವಾಂತು ಮನೋಜರಾಜನದಟಿಂದೆತ್ತಿರ್ದ ಪಾಠೀನಕೇ
ತನಮೆಂ ಪೊೀಲ್ತುದು ಕಾಂತೆಯೊರ್ವಳ್ ಕಟಾಕ್ಷದ್ವಂದ್ವವಿಕ್ಷೇಪಣಂ ॥

ಸುಳಿಗುರುಳ ಪಜ್ಜೆಕ್ಕ ತುಂಬಿಯ
ಬಳಗದವೊಲ್ ಶೋಭೆವೆತ್ತು ರಂಜಿಸೆ ಪೊಲೆಗಳೆ ।
ಕಳಹದವೊಲೆಸೆಯೆ ಬಂದಳ್
ವಿಳಾಸದಿಂದೊರ್ವಳಂಗಜಾತನ ಸತಿವೊಲ್ ॥ ೧೪೪

ಸರಸಿರುಹವದನೆ ಮದಸಿಂ
ಧುರಗಾಮಿನಿ ನೀಲಕುಟಿಲಕುಂತಳೆಯೊರ್ವಳ್ ।
ತರುಣಿ ಮನಸಿಜನ ನಚ್ಚಿನ
ಸರಲೆನಿಸಿ ವಿಳಾಸಮಮರೆ ನಯದಿಂ ಬಂದಳ್ ॥ ೧೪೫

ಅಲುಗೆ ಕುರುಳ್ ತೂಡವು ಪಳಂ
ಚಲೆಯೆ ತಳತ್ತಳಿಸಿ ಪೊಳೆಯೆ ತನುರುಚಿಯೊರ್ವಳ್ ।
ಕಳಹಂಸಗಮನೆ ಕಾಮನ
ತೊಳಗುವ ಕೂರಂಬಿನಂತೆ ಪದೆದಿಂ ಬಂದಳ್ ॥ ೧೪೬

ತರಳಾಕ್ಷಿ ವಟಫಲಾಧರೆ
ಸುರುಚಿರನಾನಾವಿಭೂಷಣಾನ್ವಿತೆಯೊರ್ವಳ್ ।
ಸುರವೆನಿತೆಯೆ ವೆಸುಮತಿಗವೆ
ತರಿಸಿದಳಂಬಂತೆ ವಿಭವದಿಂದಂ ಬಂದಳ್ ॥ ೧೪೭

ತರುಣಪರಿಣಾಕ್ಷಿ ಬಿಂಕಂ
ಬರಸೊರ್ವಳ್ನೀಡ ಗಳಿಗೆಗೋರಡಿಯಂ ವಿ ।
ಸ್ತರದಿಂದಿಡುತುಂ ಬಂದಳ್
ನವಿವಿಯ ನೋಟಕರ ಮನಮನಲ್ಲಾಡಿಸುತುಂ ॥ ೧೯೪

ಸಲ್ಲಲಿತಗಾತ್ರಿಯೊರ್ವಳ್
ಮಲ್ಲಿಗೆಯುಂ ಮುಡಿಮು ಮುತ್ತಿನೈಸರಮೆಂ ತ ।
ಳ್ವಿಲ್ಲದೆ ಕಟ್ಟ ಮನೋಜನ
ಬಿಲ್ಲಿಂ ಬರ್ದುಕಿದ ಶರಾಳಿಯಂತಿರೆ ಬಂದಳ್ ॥ ೧೯೫

ತರಣಿಯುಮುಂ ಚಂದ್ರನುಮುಂ
ಸಿರಿಕಂಡವ ಜೂಟ್ಟುಮೆಸೆವ ಕುಂಕುಮಮುಮುಂ ಪೋ ।
ಲ್ತಿರಲೆಮವಾಸೆವೊಲೊರ್ವಳ್
ಸರೋಜಮೊಱಿ ಬಂದಳಂದು ಪಬ್ರಮದಿಂದಂ ॥ ೧೯೬

ನಸುಗೆಂಪುವೆಡೆದ ದಶನದ
ವಿಸುಪಧರದ ಕೆಂಪುವಿನಸುಧಾಕರರಂ ಪೋ ।
ಲ್ತೆಸದಿರೆ ವುಣ್ಣಿಮೆಯಂತಿರೆ
ಶಶಿಮುಖಿ ನೆಡೆತಂದಳೊರ್ವಳತಿಶಯದಿಂದಂ ॥ ೧೯೭

ಅಂತು ಶೃಂಗಾರರಸಂಗಳ್ ವೇರೆದಪ್ಪಿದಂತೆ ಲಾವಣ್ಯಯುಕ್ತೆಯುಂ ರೂಪ್ಪಯುಮ್ನೂಱುಸೊಸೆದಿರುಂ ಚೇಳಿನೀಮೆಹಾದೇವಿಯಲ್ಲಿಗೆ ವಪ್ಪರ್ದುಂ ಅವರ್ಬೆರಸು ಸವ್ಯಕ್ತ್ವಚೂಡಾಮಣಿಯಲ್ಲಿಗೆ ಚೇಳಿನೀಮೆಹಾದೇವಿ ಬಂದು ಪೊಡೆಮೆಟ್ಟಿಪ್ಪರ್ದುಂ ॥ ೧೯೮

ಒದವಿದ ಬಿರುದಿಂ ಪೆಱರ
ಗ್ಗದ ಗಂಡರ ಬೆಂಡುವೋಡಿ ಗೆಲ್ಲಂ ಗೊಂಡಾ ।
ಮದನನ ವಿಜಯಗಜೇಂದ್ರನ
ರದನಿಗಳಂಪೋಲ್ತವೊರ್ವಳ ಸ್ತನಯುಗಳಂ ॥ ೧೯೯

ಅಪಹರಿಸೆ ಪೆಱಂ ಬಿರುದಂ
ಕಿಡಿಸುವೆನೆಂಬೊಂದು ಪೂಣ್ಕೆಯಿಂದಂ ಕಾಮಂ ।
ಪಿಡಿದಿರ್ದಡ್ಡಣಮೆನಿಸಿದು
ದೊಡಂಬಡಿಂದೊರ್ವ ವಾರಿಜಾನನೆಯ ಕುಚಂ ॥ ೧೯೪

ಮೆಸಗಿ ಕಡುಗೋಪದಿಂದಂ
ಸಸಿಯಂ ಪಿಡಿಯಲ್ಕೆ ರಾಹು ಸೆಡೆಯದೆ ನೆಱೆ ಸಂ ।
ಕಿಸದೆಯ್ತಂದಪ್ಪುದೆಂಬವೊ
ಲೆಸೆದಿರ್ದುವು ವಿಸುಪ ಭಾಳಮುಂ ಸೋರ್ಮುಡಿಯುಂ ॥೧೯೫

ಮುನಿದು ಮನೋಜಂ ಲೋಕದ
ಜನಮಂ ತನಗೆಱಗಿಸಲ್ಕೆ ಕೂರ್ಪಿಂದಂ ಭೋಂ ।
ಕನೆ ತೊಟ್ಟು ಪೊಳವ ಕವಲಂ
ಬೆನೆ ಪೋಲ್ತುವು ಕಾಂತೆಯೊರ್ವಳಕ್ಷಿದ್ವಂದ್ವಂ ॥ ೧೯೬

ಲಲಿತತೆವೆತ್ತು ಕೊಂಕಿ ಪರಿದೊಪ್ಪದೊಳೂಂದಿರೆ ಪುರ್ವು ಚಾಪಮಂ
ಸುಲಲಿತಮಾಗಿ ಸೀಳ್ದ ತುಱುಗಿರ್ದವಿಗಳ್ ತಮಮೆಂ ಬೆಳರ್ಪ ಕ
ಣ್ಗಳರ್ಗಣೆಯಂದಮಂ ನೆಱೆಯೆ ಪೋಲ್ತಿರೆ ಕಾಮುಕರೊಳ್ ಪಳಂ
ಚಲೆವೆ ಮನೋಜನೇಱಿಸಿದ ಬಿಲ್ಲನೊಲಿರ್ದುದು ವಕ್ತ್ರಮೊರ್ವಳಾ ॥

ಅರುಣತೆಯಿಂದವೊಪ್ಪುವಧರಚ್ಛವಿಯುಂ ರವಿಯೆಂದು ವಕ್ತ್ರಸಂ
ಕರುಹಮೆಮರ್ಕೆಯಿಂದಲರೆ ರಾಗಿಸಿ ಪೋಪುದು ರಾತ್ರಿಯೆಂದು ಬಿ
ಬ್ಬಿರಿಬಿರಿದೊಂದಿನಿಂದವೊಡವಿಂ ಪೊಣರ್ವಕ್ಕಿಗಳಂಬ ದೇಸಿಯಿಂ
ಕರಮೆಮದೊಪ್ಪುಗುಂ ನಿಬಿಡವೃತ್ತಕುಚಂ ವರಕಾಂತೆಯೊರ್ವಳಾ ॥

ಮತ್ತೊರ್ವಳ್ ॥ ೧೯೭

ಇವಳ ಲಲಾಟಮೆಂಬ ಸಸಿಯುಂ ನೆಱೆ ನೋಡುವೆವೆಂದೊಡೀ ಮನೋ
ಭವನೆಮಗಡ್ಡಮಾಗಿ ನಿಡುವುರ್ವುಗಳಂಬ ಪೊದಳ್ದ ಚಾಪಮಂ

ಸುವಿಟಜನೋಪದಾನಮೆನುದಗ್ರದಿನಿಕ್ಕಿದನೆಂದು ನೋವಿನೊಳ್
ಕಿವಿಗೆ ಮನೋಜನಂ ಪರಿದು ಸಾಱಿವವೊಲ್ನಿಡುಗಣ್ಗಳೊಪ್ಪುಗುಂ ॥

ಗಾಂಪಿನೊಳನ್ಯಪುಷ್ಪದೊಳು ಮೇಳಿಸಿ ನೀಳ್ದುದಿದೇಕೆ ಕಂಪಿನೊಳ್
ಪೊಂಪುಱುವೋಗುತಿರ್ದಮಳವೆಕ್ತ್ರಸರೋಜವೆ ಸಾಲ್ಗುವೆಂದು ತ
ಣ್ಗಂಪನುಣಲ್ಕೆ ಬಂದೆಱಗಿ ಕಂಡಿದಿರೊಳ್ ಮಱುಮುಂಬಿ ಮೂಗಿನಿಂ
ಸಂಪಗೆಯೆಂದು ಪೊರ್ದದವೊಲಿರ್ದುವು ತುಂಬಿಗಳಂತೆ ಕುಂತಳಂ॥೧೦೧

ಕುವಲಯಮಿತ್ರನೆಂದು ನೊಸಲಂ ಪಿಡಿಯಲ್ಕಡ ಬಂದು ಚಿತ್ತಸಂ
ಭವನಿಡಲಿರ್ದನೆಂದಸಿಯ ಬಾಸೆಯನಿಟ್ಟಸಿಯಿಂದೆ ಮೆಯ್ಗಳುಂ
ಜವಜವನಾಗಿ ಪೋಗಲೆಡೆಯಿಲ್ಲದೆ ಶಂಕಿಸಿ ರಾಹು ತೆಕ್ಕೆಗೊಂ
ಡವೊಲಳವಟ್ಟು ರಂಜಿಪುದು ಕೇಳ್ ಮುಡಿ ಪಂಕರುಹಾಕ್ಷಿಯೊರ್ವಳಾ॥

ಪೆಱೆಯಂಬುಂ ಕವಲಂಬನೆಯ್ದೆ ಸರಲಂ ತೀವ್ರಾಸಿಯುಂ ಚಕ್ರಮುಂ
ನೆಱೆ ಭಾಳಂ ದಿಗು ದಂತಪಂಕ್ತಿ ನಳಿತೋಳುದ್ಯತ್ಕುಚಂ ಪೋಲೆ ತ
ಳ್ತಱಿಯಲ್ಕಾಮುಕರೊಳ್ ಮನೋಭವನೃಪಂ ಮೇಲೆತ್ತಿದಂ ನಾಡೆ ಪೊ
ಚ್ಚಱು ಬೇಡೆಂಬವೊಲೊರ್ವ ಕಾಮಿನಿ ಲಸಚ್ಛೃಂಗಾರದಿಂದೊಪ್ಪಿದಳ್ ॥

ಮತ್ತೊರ್ವಳ್ ॥ ೧೦೪

ಪಳುಕಿನ ರಂಗದೊಳ್ ವನಿತೆ ತನ್ನ ಲಲಾಟಮುಮುಂ ಸ್ವಕೀಯಮುಂ
ಡಲಮುಮೆನೆಯ್ದೆ ಕಂಡು ಬೆರಲಂ ಮಿಡಿದಾಗಸದಿಂದಮಿಂದುಮಂ
ಡಲಮವನೀತಳಕ್ಕಲಸಿ ಬಿೞ್ದುದೊ ನೋಡ ಮೆರಾಳಿಯಿಂದು ಸಂ
ಚಳಿಸದೆ ಮುತ್ತಿ ಯಿರ್ದಪುವೆನುತ್ತೆ ಮಹೋತ್ಸವದಿಂದೆ ನೋಡಿದಳ್॥

ಅಲ್ಲಿ ಮತ್ತೊರ್ವಳ್ ॥ ೧೦೫

ನಗೆಗಣ ನೀಳಸಹಸ್ರಪತ್ರದೆಸಳಂ ನಾಸಾಪುಟಂ ಮಿಕ್ಕ ಸಂ
ಪಗೆಯುಂ ಪೊಕ್ಕುಱು ನಂದಿನೆಟ್ಟದರಲಂ ಚೆಲ್ವಿಂದುಗುರ್ಕೂಡೆ ಕೇ
ದಗೆಯುಂ ಮೊಲ್ಲೆಯ ಭಂಗಿವೆತ್ತ ಮುಗುಳಂ ದಂತಾಳಿಗಳ್ಪೋಲೆ ಕೈ
ವಿಗೆ ಪುಷ್ಪಾಸ್ತ್ರನ ಪಂಚಬಾಣಮಿವಳಂಬಾಶಂಕೆಯುಂ ಮಾಡಿದಳ್ ॥

ಮತ್ತೊರ್ವಳ್ ॥ ೧೦೪

ಬಿಂಬಫಲಾಧರಂ ಪವಳಮಂ ಕ್ರಮದಿಂ ತೆರೆಯುಂ ವೆಳಿತ್ರಯಂ
ಮಿಾಂಬೊಣರಂ ವಿಲೋಲನಯನಂ ಪಲು ಮುತ್ತುಗಳಂ ಕುಚಂಗಳೂ
ಪ್ಪಂಬಡೆದಿರ್ದ ದೀಪಮನಸುಂಗೊಳ ಪೋಲ್ತಿರೆ ಕಾಮುಕರ್ಗೆ ಹೇ
ಮೊಂಬುಜವೆಕ್ಕೈ ಕಾಮರಸವಾರಿಧಿಯಂದದಿನೊಪ್ಪಿ ತೋಱಿದಳ್॥ ೧೦೫

ಸ್ತನಯುಗಳಂಗಳಂ ತುರಿಪದಿಂ ಪೊಳವಗ್ಗದ ಭಿತ್ತಿಯಲ್ಲಿ ಭೋಂ
ಕನೆ ಕೊಳ ಕಂಡು ಪೂರ್ಣಘಟವೆಂದೊಳಗಂ ನೆಱೆ ನೋಡಲೆಂದು ಮೆ
ಲ್ಲನೆ ತೆಱೆಯಲ್ಕೆ ತತ್ಕುಚದ ಚೂಚುಕಮಂ ಗಡ ಮುಚ್ಚಳಂದು ನೆ
ಟ್ಟನೆ ಪಿಡಿದೊರ್ವಮುಗ್ಧೆ ಪಿರಿದುಂ ನಗೆಯುಂ ಸಭೆಗೆಯ್ದೆ ಮಾಡಿದಳ್ ॥

ಮತ್ತೊರ್ವಳ್ ॥ ೧೦೬

ಇನಿಯನನಟ್ಕಱುಂ ಬಿಡದೆ ನೋಡುತುಮಿರ್ದ ಲತಾಂಗಿ ತನ್ನ ರೂ
ಪನೆ ತಡವಿಲ್ಲದಾತ್ಮಪತಿ ನೆಮ್ಮಿದ ಕಂಬದೊಳಂದು ಕಂಡು ತೊ
ಟ್ಟನೆ ಮುನಿಸಾಗಿ ಹುಃ ಸವತಿಯಂ ನೆಱೆ ತೋಱಿಪನೆಂದು ತನ್ನ ಕಾ
ಮಿನಿಯು ವಿದಗ್ಧವೃತ್ತಿಗಳನಕ್ಕಟ ನಾಳಯೆ ತಾನೆ ಕಾಣನೇ ॥ ೧೦೭

ಪರಿವ ಪೊಡರ್ಪುಗೆಟ್ಟು ರವಿ ಮುಂದಿರೆ ಲಜ್ಜಿಸಿ ಕಣ್ಣ ಬೆಳ್ಪುಗಳ್
ಕರಮೊಳಗುರ್ಚಿ ಬಂದು ಕೊರಲೊಳ್ ಪೊಱಮಟ್ಟು ಕುಚಾಚಲಾಗ್ರ
ದೊಳ್
ಪರಿದಪುವೆಂಬ ಶಂಕೆಯನೆ ಪುಟ್ಟಿಸುತಿರ್ದುದು ನೋಟಕರ್ಗೆ ಪಂ
ಕರುಹದಳಾಯತಾಕ್ಷಿಯ ಮನೋಹರಮೌಕ್ತಿಕಹಾರಮೌಕ್ತಿಕಂ॥ ೧೦೮

ಪೊಳವುಂಗುಟದೊಳ್ ದಶನಾ
ವಳಿಯುಂ ಕಂಡೊರ್ವಳಂಜೆ ಮೌತ್ತಿನ ಹಾರಂ ।
ನೆಲಕೆ ಪಱಿದೊಕ್ಕುದೆಂದು
ಮ್ಮಳದಿಂ ತಡವರಿಸಿ ನೋಡುತಿರ್ದಳ್ ಕೊರಲಂ ॥ ೧೦೯

ಇನಿಯನ ಪೆಱಗಣ ಕೇರಿನೊ
ಳನಿಬರ ರೂಪುಗಳನೊರ್ವ ಕಾಮಿನಿ ಕಂಡೊ ।
ಯ್ಯನೆ ನಕ್ಕು ನಲ್ಲನೆನಗೀ
ಯಿನಿಬರುಮೆಂ ಮೇಲುದೋಱಿ ಕಾಡಿಪನೆಂದೆಂ ॥ ೧೧೫

ತೊಳಗುವ ಕೆಂದಳದೆಸೆವೆಂ
ಗುಳಿಯೊಳ್ ಶೋಭಿಸುವ ನೀಲದುಂಗುರವೊರ್ವ ।
ಳ್ಗಳವಟ್ಟುದಶೋಕೆಯ ಕೆಂ
ದಳಿರೊಳ್ ಪತ್ತಿರ್ದ ಕಱುಪು ತುಂಬಿಯು ತೆಱದಿಂ ॥ ೧೧೬

ಕೊಸಗಿನ ರಜಮುಂ ಪೀರ್ದ
ಱ್ಕಸಲಾಱದೆ ಮೆಗುಚೆ ತುಂಬಿಗಳ್ ಕಾಱುವುವೆಂ ।
ಬೆಸಕದಿನೊರ್ವಳ ಕುರುಳೊ
ಳ್ಪಶೋಭೆಯಿಂ ಚೆನ್ನ ಪೂಗಳೀನೊಪ್ಪದುವೋ ॥ ೧೧೭

ಸಲೆ ಸೋಲ್ತು ಪಾಱುಬಾವಿಯ
ಜಲಮುಂ ತೆಗೆಯಲ್ಕೆ ಮಕರಕೇತನನಿಂದಂ ।
ಕುರಿಸಿಕ್ಕಿದ ನೀಲದ ಬ
ಟ್ಟಲನನುಕರಿಸಿತ್ತು ಕಾಂತೆಯೊರ್ವಳ ನಯನಂ ॥ ೧೧೮

ಘಟಿಕಾಚಕಯುಗೆ ವೆಲ್ಲಭನುಂ
ಗುಟದೊಳ್ ತನ್ನಕ್ಷಿಯುಗಳಮುಂ ಕಂಡೊರ್ಬ್ಳ್ ।
ಜಟಿಮಿಾನ್ಗಳಿಲ್ಲಗೇಕ
ಕ್ಕಟ ಱುಕ್ಕಟ ಬಂದುವೆಂದು ನೋಡುತ್ತಿರ್ದಳ್ ॥ ೧೧೯

ಅಂತೊಪ್ಪುವೆತ್ತಿರ್ಪುದುಂ ವಾತ್ಸಲ್ಯರತ್ನಾಕರಂ ಜೇಳನೀವೆಹಾ ದೇವಿಗೆ ಪುಷ್ಪದಾಡನ ಭಾರ್ಯೆಯಪ್ಪ ಸುದಂತಿಯುಮಂ ಬರಿಸುವುದೆನೆ ಪರಿಚಾರಕಿಯರನಟ್ಟುವುದುಂ ಸುದಂತಿ ತಡೆಯದೆ ಬಂದು ಕುಮೋರಿಯರೊಡನಿರ್ಪುದುಂ [1] ॥ ೧೨೦

---

1 ಅಂತು ಕಾವುದೇವನ ಸಾಮ್ರಾಜ್ಯಮೆಲ್ಲಮಂ ವಿಧಾತ್ರಂ ಕವರ್ತೆಗೊಂಡು ಬಂದನೆಂಬಂತೆ ಕಿರ್ಪುದುಂ ಪುಷ್ಪದಾಡನ ಪೆಂಡತಿಯಪ್ಪ ಸುದತಿಯುಂ ಬರಿಸುವುದು ನಾಕೆಯುಂ ಬಂದವರ ಕೆಲನೊಳೆ ಕುಳ್ಳಿರ್ಪುದುಂ ॥

ಕರಿಣೀವೃಂದದೊಳಾಡು ಕರ್ಪುರತರುವ್ರಾತಂಗಳೊಳ್ಮತ್ತಿ ಪಂ
ಕರುಹಾನೀಕದೊಳಕ್ಕಿ ಗೋನಿವಹದೊಳಕ್ಕಟ್ಟಕ್ಕು ಕಂಠೀರವೋ
ತ್ಕರದೊಳ್ ಕೋಡಗ ಮೊಧವೀಲತೆಯೊಳಂ ಕರ್ಬಳ್ಳಿ ಚೆಂಬೊಂಗಳೊ
ಳ್ನೆರೆದಿರ್ಪಂತಿರೆ ಕರ್ಬುನಂ ಸಕಲಭೂವಾರೀಶರೊಳ್ಮೀಲಿಗಳ್ ॥ ೨೦೧

ಇರ್ಪಂತಿರ್ದು ॥ ೨೦೨

ಎವೆಯಿಲ್ಲದ ಕೊಪೆಗಣ್ ವಿ
ಭ್ರಮೆವಿಲ್ಲದ ರೂಪು ಪತ್ತಿಪತ್ತಿವ ವೊಲೆ ಸೋ ।
ಲಮೆನೀಯದಿರವು ಕರ್ಪಿಂ
ಸಮೆಸಂದೊಡಲಲರ್ದ ಮೊಗಡಂಗಿದ ಗಲ್ಲಂ ॥ ೨೦೩

ತೆರಳ್ದ ವೊಗಂ ಕರ್ಗಿದ ಬಾಯ್
ಪುರುಳಿಲ್ಲದ ವಿಳ್ಳಗಾಲ್ಬೆಡಂಗಿಲ್ಲದ ವೈ ।
ಕೆರಕಿಂ ತುಱಿಯಿಂ ತೀವಿದ
ಕರಚರಣಂ ಬೋೞಿವೆಂಡೆ ಕುಗ್ಗಿದ ದೇಹಂ ॥ ೨೦೪

ಮತ್ತಂ ಮೂಳಗಿವಿಯುಂ ಪೊಱವಾಯ್ದ [ಪಲ್ಲುಂ ವೊರದಂತಪ್ಪ
ಕಾಲುಗುರುಂ ಬಳಗಚ್ಚಿ] ಬಸಿಱುಂ ಬರಳಂತಪ್ಪ ಕಾಲ್ಗಳುಂ ಬಾಗಿದ
ಬೆನ್ನುಂ [ಕೊಡೆಗಣ್ಣುಂ] ಬಿಟ್ಟ ಬಾಯುಂ ಕೂಡಿದ ಪುಬ್ಬುಂ ತೊಟ್ಟ
ಕಾಸಿಯುಂಬೆರಸು [ಹಂಸೆಯೊಳಗೆ ಹೊರಸು ಬಂದಿರ್ಪಂತೆ ಬಿರ್ದುದುಂ]
ವಾರಿಷೇಣಮುನಿ ಪುಷ್ಪದಾಡನ ವೊಗಮೆಂ ನೋಡಿ [ನಗುತ್ತುಮಿಂ
ತೆಂದಂ ॥ ೨೦೫

ನರಲೋಕದಲ್ಪಸೌಖ್ಯಂ
ಸ್ಥಿರಮಲ್ಲದು ವೀರನಾಥಪದಸೇವನೆಯಿಂ ।
ಸ್ಥಿರಮಪ್ಪ ವೋಕ್ಷಸೌಖ್ಯಂ
ದೊರೆಕೊಳ್ಗಂದರ್ತಿವಟ್ಟ ತಪದೊಳ್ ನಿನ್ನಂ ॥ ೨೦೬

ನಿಲಿಸಿ ಐನ್ನೆರಡುವರುಷಂಬರಮೆನ್ನ ತ್ಮಕಾರ್ಯಮುಂ ಬಗೆಯದೆ
ಲೋಕೋತ್ತರಮಪ್ಪ ಜಿನೋಕ್ತಿಯನಿನ್ನೆವರಂ ಮೊಣದೆ ಪೇೞ್ದೊಡೆ

ನಾಯ್ಗೆ ನಱುನೆಯ್ಯುಱ್ಕಿದೆಂಬಂತೆನ್ನ ಪೇಱ್ವ ಧರ್ಮೋಪದೇಶಮನೊಲ್ಲದೆ ಸುದಂತಿಯನೆ ಮನದೊಳ್ನೆನೆಯುತಿರ್ಪೆಯಿಂತು] ॥ ೨೨೬

ರತಿಯುಂ ವಿಭ್ರಮದೊಳ್ಪುರೇಂದ್ರಸತಿಯುಂ ಲಾವಣ್ಯದೊಳ್ನಾಡೆ ಭಾ ರತಿಯುಂ ಹಾವದೊಳೇವಳಂದುಱದೆ ಸಚ್ಚಿತ್ರಂಗಾರದಿಂ ರೂಪಿನು ನ್ನತಿಯಿಂದಿರ್ದ ಮಹೀಶ್ವರಾತ್ಮಜೆಯುರಂ ಕೈಕೊಳ್ಳದಾಂ ಬಿಟ್ಟು ನಿ ರ್ವ್ಯಥಿಯಂ ಸಾಧಿಸಲೆಂದು ಪೋಗಿ ತಪಮಂ ಕೈಕೊಂಡೆನುತ್ಸಾಹದಿಂ ॥

ಅಣಿಲ ಪಡಪು ಬಸುರಿಯ ಪಣ್ಣಿಂಬಿಂತೆ ಸುದಂತಿಯನೀಗೆಯ್ದುಂ ಬಿಡಲಾಱದೆ ನೀಂ ಬೆಳಬೆಂಜನನಾಗಿ ಭೋಗಿಸುವೆನೆಂದು ಕೊಕ್ಕಟಿ ಗುದಿವೈ; ಉಂಡಱಿಯದಗರ್ಗಿಂಡುದೆಲ್ಲಮಿಚ್ಚರಿಯೆಂಬಂತೆ, ಕಾಲೂರ್ಗೆ ವೆಱಸು ಬೆಲ್ಲವೆಂಬಂತೆ, ಬೇಡವೆಳ್ಳಿಗೆ ಪಂದಿ ಮದ್ದಾನೆಯೆಂಬಂತೆ, ನುಗ್ಗಿಯ ಬನಕ್ಕೆ ಗುಬ್ಬಿ ಕೋಗಿಲೆಯೆಂಬಂತೆ, [ಅಗಸೆಯ ಮರಕ್ಕೆ ತೊನಸೆ ಮಱುದುಂಬಿಯೆಂಬಂತೆ] ಸಂಸಾರದಲ್ಪಸುಖಕ್ಕೆ ಮೊಯ್ವಾಂತು ಶಾಶ್ವತಸುಖಮನುದಾಸೀನಂಮಾಡಿ ಜಿನರೂಪಿಂಗೆ ಬೇಸಱುವೆಯಿನ್ನು ನಿನ್ನಿಂ ಬಿಟ್ಟು ಗಾವಿಲರುಂ ಕುಮತಿಗಳುಂ ಲೋಕದೊಳಿಲ್ಲೆಂದು ಮೂದಲಿಸಿ ತೋಱಿ ಹಾಸ್ಯಂಮಾಡಿ ನಕ್ಕು ಸುದಂತಿಯ ವೊಗಮಂ ನೋಡಿ ವಾತ್ಸಲ್ಯರತ್ನಾಕರನಿಂತೆಂದಂ ॥ ೨೨೯

ಪರಮೇಷ್ಠಿನೇಶ್ವರರೂಪಂ
ಧರಿಯಿಸಿ ಮತ್ತಳಿವು ಬಂದು ತನ್ನಂಗನೆಯೊಳ್ ।
ನೆರೆಯಲ್ಮಱುಗುವನೆರನುಂ
ಪುರುಷನೆ ಪೇಱಿಬ್ಬೆ ಬೇಗಮೆಂಬುದುಮಾಗಳ್ ॥ ೨೩೦

ಸುದಂತಿಯಿಂತೆಂದಳ್ [1] ॥ ೨೩೧

---

1 ಶಾಶ್ವತ ಸುಖವಿರಾವ ಜಿನರೂಪಿಂಗೆ ಅಲಸುವ ನಿನ್ನಂತಪ್ಪ ನಿರ್ಬುದ್ಧಿಗಳುಂ ನಿಶ್ಚರ್ಯರುಂ ಲೋಕದೊಳಿಲ್ಲೆಂದು ಜೋಳಿನಿಮಹಾದೇವಿಯು ಸುದತಿಯರ ತನ್ನರಸಿಯರ ವೊಗವುಂ ನೋಡಿ ತೊಱೆದ ವಸ್ತುಗಳಂ ಮಹಾಪುರುಷರಪ್ಪರ್ಗೆ ಮುತ್ತೆ ಕೈಕೊಳಲಪ್ಪುದೆ ನೀವೆ ವಿಚಾರಿಸಿ ಪೇಳಿವೆನೆ ಚೇಳಿನಿಮಹಾದೇವಿಯುಂ ಸುದತಿಯು ವಲ್ಲಭೆಯರುಮಿಂತೆಂದರೆ (ಗ)

ನೆಟ್ಟನೆ ಕಾಱುದ ಕೂಟಂ
ಮುಟ್ಟದು ನಾಯುಂ ಧರಾತಳಾಗ್ರದೊಳನೆ ಮುಂ ।
ಬಿಟ್ಟು ಬಱುಕ್ಕಱುಪವೆನುಂ
ನಿಟ್ಟಿಸುವೊಡೆ ಪಂದೆ ಕಷ್ಟನಾನಾಯಿಂದಂ ॥ ೦೫೦

ಎಂಬುದುಂ ಸುದಂತಿಯು ಮೊತಿಂಗೆ ಪುಷ್ಪದಾಹಂ ಲಜ್ಜಿಸಿ ತನ್ನೊಳಿಂತೆಂದಂ ॥ ೦೫೧

ಈದಿವ್ಯಸ್ತ್ರೀಯರನಿನಿ
ಸಾದರಿಸದೆ ತೊಱೆದು ವಾರಿಷೇಣಕುಮಾರಂ ।
ಪೋದನನೆ ನೋಱ್ಪೊಡೆನಗೇ
ನಾದುದು ಕೇಳ್ನ್ನ ಪೆಂಡಿರುನ್ನತಿಪಿರಿದೇ ॥ ೦೫೨

ವರತಪಮುಂ ಕೈಕೊಳಲೊಡ
ಮೆರಿದೆನಿಸುವ ಜಂಘೆಚಾರಣತ್ವಂ ಕೇಳೀ ।
ವರಮುನಿಗಾಯ್ತೆನೆ ತಪದಿಂ
ಪಿರಿದಪ್ಪೈಶ್ವರ್ಯಮಪ್ಪುದಾವುದು ಗಹನಂ [1] ॥ ೦೫೩

[ಎಂದು ಮನದೊಳ್ ವಾರಿಷೇಣಮುನಿಕುಂಜರನ ಮುಂಪೇಳ್ದ ಧರ್ಮಶ್ರವಣಮನೆನಿತುಮಂ ನಂಬಿ ಸಂಸೃತಿಲತಾಂಕುರಮುಂ ಕಿತ್ತೋಡಾಡಲುಂ ಮೋಹಮಹೀರುಹಮುಂ ಕಡಿಯುಲುಂ ಕರ್ಮೇಂಧನಂಗಳಂ ಸುಡಲುಂ ಜಿನಚರಣಮುಂ ಬಲ್ವಿಡಿಯಲುಲುಂ ಸನ್ಮಾರ್ಗಮುಂ ಪೊರ್ದಲುಂ ಮನಂದಂದು ಜಿನಸಮಯವಾರ್ಧಿವರ್ಧನಸುಧಾಕರನ ಪಾದಕ್ಕೆಱಗಿ ಪೊಡೆಮಟ್ಟು ಪುನರ್ದೀಕ್ಷೆಯಂ ಪ್ರಸಾದಂಗೆಯ್ವುದೆಂಬುದುಮೊತನುಂ ಗುರುಗಳಲ್ಲಿಗೊಡಗೊಂಡು ಬಂದು ದೀಕ್ಷೆಯಂ ಕುಡಿಸುವುದುಂ ಭೂಪ ತಪಸ್ವಿಯಾಗಿ ತನ್ನೊಳಿತೆಂದಂ ॥ ೦೫೪

ಸಂಸಾರದಲ್ಪಸೌಖ್ಯಮಿ
ದಂ ಶಾಶ್ವತನೆಂದು ಜೈನಧರ್ಮಮೆನೆಂತುಂ ।

---

1 ದೊರಕೊಳ್ಳದ ವಸ್ತುವೊಳವೆ ಮೂಱುಲೋಕದೊಳ್ (ಗ)

ನಾಂ ಸಲೆ ಕೈಕೊಳ್ಳದೆ ಕೆ
ಟ್ಟೆಂ ಸತಿಯಂ ನೆನೆದಶುದ್ಧ ಭಾವನೆಯಿಂದಂ ॥ ೨೩೩

ಶ್ರೀವಾರಿಷೇಣಮುನಿಯಿಂ
ದೀವೆರದನ ಧರ್ಮವೆನಗೆ ದೊರೆಕೊಂಡುದು ಸ।
ದ್ಭಾವದಿನೆನಗದಱಿಂದಂ
ಭಾವಿಸುವೊಡೆ ವಾರಿಷೇಣಮುನಿಪನೆ ದೇವಂ ॥ ೨೩೪

ಎಂದು ತನ್ನ ಮುನ್ನಿನ ನಿರ್ಬುದ್ಧಿಯುಮೆಂ ಮಿಥ್ಯಾತ್ವದ ತೀವ್ರತೆಯುಮೆಂ ವಾತ್ಸಲ್ಯರತ್ನಾಕರನ ಮಾಡಿದುಪಕಾರಮುಮೆಂ ನೆನೆದು ವಿಸ್ಮಯಂಬಟ್ಟು ಶುದ್ಧಹೃದಯನುಮಾಗಿ ಸಕಲಾಗಮಂಗಳಂ ನೋಡಿ ತಪದೊಳುತ್ತರೋತ್ತರಂ ನೆಗಟ್ಟಿ ಸಮಾಧಿವಿಧಿಯಿಂ ಮುಡಿಪಿ ದೇವಗತಿ ವೆಡೆದನಿತ್ತಲ್ ವಾರಿಷೇಣಮುನೀಂದ್ರನುಂ ಪುಷ್ಪದಾಡನ ಮುನ್ನಿನ ಹೀನಬುದ್ಧಿಗಂ ಬಱುಕವಾದ ಸುಬುದ್ಧಿಗಂ ಜೋದ್ಯಂಬಟ್ಟು ತನ್ನೊಳಿಂತೆಂದಂ] [1] ॥ ೨೩೫

ಪಿರಿದಪ್ಪ ಮುಗಿಲ ವೞಿಯೊಳ
ಖರಕರನುಂ ಬೆಳಗಲಾಱನೆಂತಂತೆ ಮಹಾ।
ದುರಿತೋದಯದಿಂದಱಿಯ
ರ್ನರರುಂ ಸದ್ಧರ್ಮವೆಪ್ಪುದಂ ಧಾರಿಸಿಯೊಳ್ ॥ ೨೩೬

ಮಿಕ್ಕೆಯ ಕಾಯ್ಗಳ್ ವೊದಲೊಳ್ ಕೈಪೆಯಪ್ಪುವು ಕಡೆಯೊಳ್ ರುಚಿಯಪ್ಪುವಂತೆ ಕೆಲಂಬರ್ ವೊದಲೊಳ್ ಪೊಲ್ಲರ್ ಕಡೆಯೊಳೞಿದರಪ್ಪರ್ಕಬ್ಬು ವೊದಲಿಂದಂ ಕಡೆವರವಿನಿದಂತೆ ಕೆಲಂಬರಾದ್ಯಂತ ವೊಳ್ಳಿದರ್ ಆಶೋಕೆ ವೊದಲಾದ ವೃಕ್ಷದೆಲೆಗಳ್ ವೊದಲೊಳ್ ಮೃದು

[1] ಎಂದು ಭಾವಿಸಿ ಮುನ್ನಿನ ದುರ್ಭಾವಮಂ ಬಿಟ್ಟು ನಿರ್ವೇಗಮುಂದುತ್ತರ ಮಾಗೆ ಭಾವಯುತದಿಗಂಬರದಾಸಂಗೆ ಪೊಡೆವಟ್ಟು ಪುನರ್ದೀಕ್ಷೆಯಂ ಕೈಕೊಂಡು ಆಗಮಂಗಳನೋದಿ ಭಾವಿತಪಸ್ವಿಯಾಗಿ ಸಮಾಧಿವಿಮರಣದಿಂ ದೇವಲೋಕದೊಳ್ ಪುಟ್ಟಿದನಿತ್ತಲ್ ವಾತ್ಸಲ್ಯರತ್ನಾಕರಂ ಪುಷ್ಪದಾಡನ ಮುನ್ನಿನ ಸಂಸಾರಲಂಪಟತೆಗಂ ಬಳಿಕಿನ ವೈರಾಗ್ಯೋತ್ಕರ್ಷಂ ಬೆಱಗಾಗಿ ತನ್ನೊಳೆಂತೆಂದಂ (ಗ)

ಪೃಥ್ವಿ ಕಡೆಯೊಳ್ತಿಗೆಲೆಗಳಪ್ಪವಂತೆ ಕೆಲಂಬರ್ಮೊದಲೊಳ್ಳಿದರಪ್ಪ ರ್ಕಡೆಯೊಳ್ ಪೊಲ್ಲರಪ್ಪರೆಂದು ಮನುಷ್ಯರ ಪರಿಣಾಮಮಂ ಭಾವಿಸಿ ಗುರುಗಳಾಜ್ಞೆಯಿಂದೇಕವಿಹಾರಿಯಾಗಿ ಪನ್ನಿರ್ದೆಱದ ತಪದೊಳಂ ನೆಗಟ್ಟಿ ಕಡೆಯೊಳ್ಸಂನ್ಯಸನಸಮಾಧಿಯಿಂ ಮುಡಿಪಿ ಸರ್ವಾರ್ಥಸಿದ್ಧಿಯೊಳ್ ಮೂವತ್ತಮೂಱುಸಾಗರೋಪಮಾಯುಷ್ಯಮನೊಡೆಯನಾಗಿ ಪುಟ್ಟಿದ ನದಱಿಂ ಸ್ಥಿತಿಕರಣದ [ಫಲಂ ಕೇವಲಮೆಲ್ಲಂದು ಗಣಧರಶ್ವಾಮಿಗಳ್ ಪೇೞ್ದುದುಂ][1] ॥ ೬೪೧

ಕ್ಷಿತಿಪೂಜ್ಯಂ ವಾಗ್ವಿಳಾಸಂ ಸುಕವಿಜನಮನೋರಂಜನಂ ಜೈನವಾಕ್ಯಾ
ಮೃತತೃಪ್ತಂ ವಾಗ್ವಧೂವಲ್ಲಭನಘಳುವಿದ್ಯಾವಣಂ ಕೇಳ್ದ ಚಿತ್ತೋ
ನ್ನತಿಯಿಂ ತ್ರೈವಿದ್ಯಚಕ್ರೇಶ್ವರವಿಮಲಪದಾಂಭೋಜಭೃಂಗಂಕವೀಂದ್ರ
ಸ್ತುತನಿರ್ದಂ ಲೀಲೆಯಿಂದಂ[2] ಸುಕವಿಜನಮನಃಪದ್ಮಿನೀರಾಜಹಂಸಂ॥

ಇದು ನಿಖಿಲದಿವಿಜಪರಿವೃಢವುಕುಟತಟಘಟಿತಮಣಿಗಣಪಲುಳಿತಕಿರಣ
ಚ್ಛಂಬನೀಯಪರಮಜಿನಚರಣಯುಗಳಸರಸಿರುಹಪವಿತ್ರಮಧುಕರ
ನಿರುಪಮಸಹಜಕವಿಜನಪಯಃಪಯೋಧಿಪೂರ್ಣಚಂದ್ರ
ನುತಭಾವಯುತದಿಗಂಬರದಾಸನೂತ್ನಕವಿತಾವಿಲಾಸ
ಶ್ರೀವರ್ಮನ್ನಯಸೇನದೇವವಿರಚಿತಪ್ರಾ
ಧರ್ಮಾಮೃತದೊಳ್
ದರ್ಶನಪಷ್ಠಾಂಗವ್ಯಾವರ್ಣನಂ
ಸಪ್ತಮಾಶ್ವಾಸಂ.

---

[1] ಪುಟ್ಟುವನೆಂದಿಂತು ಸ್ಥಿತಿಕರಣದ ಕಥೆಯಂ ಮುನಿರಾಜಹಂಸಂ ಪೇೞ್ದ (ಗ)

[2] ವಿದ್ಯಾವಣಂ ಸರ್ವಶಾಸ್ತ್ರಾನ್ವಿತತಂ ಪ್ರೌಢಭವ್ಯವ್ಯರಿರಪ್ರಗಣ್ಯಾಂ
ಬೋಧಿ ತ್ರೈವಿದ್ಯ ಲಕ್ಷ್ಮೀ ಪತಿಪಾದಾಂಭೋಜಭೃಂಗಂ (ಕ. ಬ.)

ಅಷ್ಟಮಾಶ್ವಾಸಂ.

ಶ್ರೀಸತಿಗೀಸ್ಥಿತಿಕರಣಂ
ಭಾಸುರಭೂಷಾಳಯೆಂದು ಕರಮೆಲ್ಲದೆ ಸಂ ।
ತೋಷಂಬಟ್ಟಂ ಮನದೊಳ್
ಲೇಸಾಗಿರೆ ಸುಕವಿನಿಕರಪಿಕಮಾಕಂದಂ ॥ ೧

ಸ್ಥಿತಿಕರಣದ ಕಥೆಯಂ ಭೂ
ಪತಿ ಬೇಗಂ ಕೇಳ್ದು ನಂಬಿ ಮತ್ತಂ ಮುನಿವೆಂ ।
ದಿತರಂ ಸದ್ವಾತ್ಸಲ್ಯದ
ಕಥೆಯಂ ಬೆಸಗೊಳ್ವುದುಂ ಮಹೋತ್ಸವದಿಂದಂ ॥ ೨

[ಯತಿತಿಲಕರ್ ಸಕಲಗುಣಾ
ನ್ವಿತರಮಳಚರಿತ್ರರಂಗಭವಮದಹರಣರ್ ।
ನುತವಾಕ್ಯರ್ಭುವನತ್ರಯ
ನತಕರ್ಮರ್ದುರಿತಗಂಧಗಜಸಿಂಹನಿಭರ್ ॥ ೩

ನಿರ್ವೃತಿಶ್ರೀಯ ಭಂಡಾರದಮೂಲ್ಯವಸ್ತುವೆನಿಪ ವಾತ್ಸಲ್ಯದ ಕಥೆಯಂ] ಇಂತೆಂದು ಪೇಳ್ದರ್:—

ಪ್ರತಿಹಾರ್ಯದಂತೆ ಸ್ವರ್ಗಯುಗಳದಂತೆ ದೆಸೆಗಳಂತೆ ದಿಕ್ಪಾಲಕರಂತೆ ಸೀತಾನದಿಯು ತಡಿಯಂತೆ [1] ನಾಗಕುಲದಂತೆ ಶೋಭೆಯಂತೆ ಕ್ರಾವಕರ ಮೂಲಗುಣದಂತೆ ಪೃಥ್ವಿಯಂತೆ [ದರ್ಶನಾಂಗದಂತೆ ದೇವೇಷ್ಟಗುಣದಂತೆ] ದರ್ಶನಮುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿತ್ವಮುಂ ಉಪಗೂಹನಮುಂ ಸ್ಥಿತಿಕರಣಮುಂ ವಾತ್ಸಲ್ಯಮುಮೆಂಬೆಂಟುಂಗುಣಂಗಳೊಳ್ನೆರೆದು ನಡೆವುದು ॥ ೪

---

[1] ಸೀತೋದಾನದಿಯಂತೆ (ಬ. ಕ.)

ಕಲ್ಯಾಣಮಿದು ಜಗನ್ಮಾಂ
ಗಲ್ಯಂ ಸವ್ಯೆಕ್ತ್ವರತ್ನದಧಿದೇವತೆ ವಾ ।
ತ್ಸಲ್ಯಂ ಭಾವಿಸುವೊಡೆ ಕೈ
ವಲ್ಯಶ್ರೀವನಿತೆ ತುಡುವ ದಿವ್ಯಾಭರಣಂ ॥ ೫

ಇನ್ನದಱ ಪರಮೈಶ್ವರ್ಯಮುಂ ಪೇೞ್ವೊಡೆ ಜಂಬೂದ್ವೀಪದ ಭರತಕ್ಷೇತ್ರದ ಪಾಂಚಾಲವಿಷಯದೊಳ್ ರಮಣೀಯಮೆಪ್ಪಹಿಚ್ಛತ್ರ ಮೆಂಬ ಪುರಮುಂಟಾಪುರದೊಳಾಳ್ವಂ ಸಂತತಸನೆಂಬರಸನಾತನ ಪುರೋ ಹಿತಂ ಸಕಲಶಾಸ್ತ್ರಪರಿಣತಂ ಸೋಮದತ್ತನೆಂಬನಾತನ ಭರ್ತಾರೆ ಯಜ್ಞದತ್ತೆಯೆಂಬಳಾಯರ್ವರುಂ ಸಕಲಜನಕ್ಕಂ ನಂಟರ್ಗಮೊಳ್ಳಿದರಾಗಿ ಸುಖದಿಂದಿರ್ಪುದುಂ ॥ ೬

ಹರಿಣಾಕ್ಷಿಗೆ ವಿಪ್ರಕುಲಾಂ
ಬರತರಣಿಗೆ ಸತಿಗೆ ಯಜ್ಞದತ್ತೆಗೆ ನಂಟ ।
ಗರ್ಗರುಮುದದಿಂದಂ ರಾಗಂ
ಕರಮೆಲ್ಲದೆ ಪೆರ್ಚೆ ಗರ್ಭಮಪ್ಪುದುಮಾಗಳ್ [1] ॥ ೭

ಆಗರ್ಭಾರ್ಭಕನೊಂದು
ದ್ಯೋಗಮುಮೆಂ ಮುಂದಣೊಂದು ರಾಜ್ಯಮುಮೆಂ ಜೈ ।
ನಾಗಮಕುಶಲತೆಯುಮೆನಿಂ
ಬಾಗಿರೆ ತೋರ್ಪಂತೆ ಸಾಱುವಂತವೆಯವೆದಿಂ [2] ॥ ೮

ಗರ್ಭಮಾದಯ್ದು ತಿಂಗಳ್ಗೆ ಜಿನಮಂದಿರಂಗಳಂ ಪೋಗಿ ಬಲಗೊ ಳಲುಂ ಜಿನಬಿಂಬಂಗಳನಷ್ಟ ವಿಧಾರ್ಚನೆಯಿಂದರ್ಚಿಸಲುಂ ತ್ರಿಭುವನ ಮೊಂಗಲ್ಯಂಗೆ ಮಹಾಭಿಷೇಕಮಂ ಮಾಡಲುಂ ಶ್ರೀಮದರ್ಹತ್ಪರಮೇಶ್ವರ

---

1 ಪೇೞ್ವೊಡೆ ಪಾಂಚಾಳವಿಷಯದೊಳಹಿಚ್ಛತ್ರಮೆಂಬುದು ಪುರಮದನಾಳ್ವಂ ದಿಪಂತನೆಂಬರಸನ ಪುರೋಹಿತಂ ಸೋಮದತ್ತನೆಂಬನಾತನ ಬ್ರಾಹ್ಮಣಿ ಯಜ್ಞದ ತ್ತೆಯೆಂಬಳಾಕೆಗೆ ಗರ್ಭವಾಗಿರ್ಪುದುಂ (ಗ)

2 ಆಗಮುಪರಿಣತೆಯುಮೆನಿಂಬಾಗಿರೆ ಲೋಕಕ್ಕ ನೆಟ್ಟಿಯೆ ಸಾಱುವ ತೆಱದಿಂ (ಗ)

ರೂಪನೆಮೆಯಿಕ್ಕದೆ ನೋಡಲುಂ ವೋಹ್ಷಲಹ್ಮೀವಿಲಾಸನನಾಗಳುಂ ಪತ್ತುವಿಡದಿರಲುಂ ಜಿನಾಗಮಮೆಮನಾಗಳುಂ ಕೇಳಲುಂ ಸಿದ್ಧಾಂತವೆಚನಮನಾಲಿಸಲುಂ ಚರಿತಪುರಾಣಂಗಳಂ ಪೆಱಿರ್ಗೆ ಪೇೞಲುಂ ಜಿನಮುನಿಗಳಂ ಸಾರಲುಂ ಜೀವಂಗಳನೋವಲುಂ ಕುಮಾರ್ಗಾನುರಾಗಿಗಳನಗಲಲುಂ ಆಹಾರಾಭಯ ಭೈಷಜ್ಯದಾನಮೆಂ ಮೂಡಲುಂ ಸದ್ದೃಷ್ಟಿಗಳಪ್ಪರಾಳ್ತಡಲುಂ ವಿದ್ಯಾಧರಾಧಿನಾಜರಿಂ ಪೆಸಕೆಯ್ಸಿಕೊಳಲುಂ ಚಾತುರ್ವರ್ಣ್ಯಶ್ರಮವಿದಿರೆಬ್ದ ಕೈಗಳಂ ಮುಗಿಯಲುಂ ಸರ್ವಸ್ವಮನೀಯಲುಂ [1] ಬಯಕೆ ತಿಣ್ಣಮಾಗೆ ॥ ೯

ಪೆಱಿರ್ಗೀಬಯಕೆಗಳಂ ತಾ
ನಳಿವಿದೊಡಂ ತೀರದೆಂದು ಕಾಮಿನಿ ಮನದೊಳ್ ।
ಮಱುಗಿ ಬಿಸಿದಪ್ಪ ತುಪ್ಪಮ
ನಱಿಯದೆ ಶಿಶು ನುಂಗಿದಂತೆ ಚಿಂತಿಸಿ ಮನದೊಳ್ [2] ॥ ೧೦

[ನೆರೆಯಲ್ಲದು ಪೊರೆಯಲ್ಲದು
ಗೊರವನೆನಲೆ ಮೆಗವು ಪೋಲ್ತುದೆಂಬೀನುಡಿಯಂ ॥
ತಿರೆ ಜೋದ್ಧೃಮೊದುದೀತಂ
ಪುರುಳಿಲ್ಲದ ಬಯಕೆ ಬಗೆವೊಡವನೀತಳದೊಳ್] ॥ ೧೧

ಎನ್ನ ಕಾಲದನರಕ್ಕೆ ಮೆತ್ಪತಿಯನ್ವಯದವರಕ್ಕೆ ಜಿನಧರ್ಮಮುಂಟುದಂ ಕನಸಿನೊಳಪ್ಪೊಡಂ ಕಂಡಱಿಯರೆನಗೀಗಳನ ಬಯಕೆಗಾಶ್ಚರ್ಯಮೊದವುದಿವನೆನ್ನ ಬಂಧುಗಳ್ಗಕ್ಕೆ ಗಂಡಂಗಕ್ಕೆ ಬೇಡ್ವೊಡಮೆವೆರೀಬಯಕೆಯಂ ತೀರ್ಚುವೆರಲ್ಲಮೆಂದು ಕೊಕ್ಕಳಗುದಿದು ಮೊಗರ್ ಕಂಡ

---

1 ಜಿನೇಶ್ವರರೂಪಂ ನೋಡುವ ವೀತರಾಗನೇರ್ಪಿಯಂ ಪಾಡುವ ತ್ರಿಜಗವನ ಪುಷ್ಯಾಂಗೆ ಪೂಜೆಯಂ ಮಾಡುವ ಕ್ಯಾವಳಕರೋಹಣಾತುವ ಧರೆಯನಾಳುವ ಪೆಱಿರ್ಗೆ ಧರ್ಮಮುಂ ಪೇೞ್ವ ಜಿನಮುನಿಗಳ ಕಾಲಮೇಲೆ ಬೀೞ್ವಚತುರ್ವಿಧದಾನಮುಂ ಮೂಲ್ಪ ಸನ್ಯಗ್ದೃಷ್ಟಿಗಳೆಗೆ ಕೂರ್ಪ ಯಶಿಯುವ ಕೆಲದೊಳಿರ್ಪ ಸಂವೃತಂಗಳಂ ಜಿನರ್ಪ ವಿಖ್ಯಾತ್ಯತುನದೆಱೆವ ಕುಪ್ತಿಕಲಿಂಗಿಗಳ್ಗೆ ಮಾರ್ಗಲೆವ ಖನದಿಗಳಂ ಕಂಡೊಡೆ ನಲಿವ ಪಾಪಹೇತುಗಳ್ಗೆ ಖಲಿವ (ಗ)

2 ಕೊಕ್ಕಳಗುದಿದಳ್ (ಗ)

ಕನಸಿನಂತೆ ಪೆಱಿಗೆ ಪೇೞಲಱಿಯದೆ ನಾಡೆಯುಂ ಬಡವಾಗಿರ್ದುದುಂ ತಾಯುಂ ತಂದೆಯುಂ ಸೋದರಿದತ್ತನುಂ ಬಂಧುಗಳುಂ ಯಜ್ಞದತ್ತೆ ಬಡವಾಗಿರ್ದುದಕ್ಕೆ ಚೋದ್ಯಂಬಟ್ಟು ॥ ೧೦

ಮುನ್ನಿನೂಟದ ಮಾರ್ಗಮಲ್ಲದು ಬುದ್ಧಿಯುಂ ನಡೆವೋಜೆಯುಂ
ಮುನ್ನಿನಂದಮನೇನೊ ಪೋಪವು ಚಿತ್ತದೊಳ್ ಪೆಱತೊಂದನಾಂ
ತುನ್ನತಿಕ್ಕೆಯನಾಗಳುಂ ನೆನೆಯುತ್ತುವಿರ್ದುದಿದೇಕೆ ಪೇೞ್
ಕೆನ್ನನೆನ್ನೊಡನೆಂದಿನಂದದೊಳೂಂದಲೊಲ್ಲದೆ ರಾಗದಿಂ ॥ ೧೫

ಪವನಮಾರ್ಗಮನೇನೊ ನೋಡುತುಮಿರ್ಪಳರ್ತಿಯೊಳಾಗಳುಂ
ಪ್ರವರಮಪ್ಪ ಜಿನಾಲಯಂಗಳನಲ್ಲಿಯಿಂದಮೆ ನೋಡುವೆಳ್
ಸವಣರೆಂದೊಡೆ ಪೆರ್ಚುವೆಳ್ ಜಿನಪೂಜೆಯೆಂದೊಡೆ ನೋಡುವೆಳ್
ಧವಳಲೋಚನೆ ಜೈನರೆಂದೊಡೆ ಪೊಂಗುವೆಳ್ಕಡುಗೂರ್ಮೆಯಿಂ ॥ ೧೪

ಇದಾಶ್ಚರ್ಯಮೆಂದು ವಿಸ್ಮಯಂಬಟ್ಟು ಯಜ್ಞದತ್ತೆಯಲ್ಲಿಗೆ ಬಂದು ನಿನ್ನ ಬಯಕೆಯನೆಮಗಱಿಯೆ ಪೇೞ್ವುದಾಬಯಕೆತೀರ್ದೊಡಲ್ಲದೆ ನಿನ್ನ ಮೆಯ್ಯ್ ಬಡತನಂ ಪೋಗದೆಂದು ಕಿಱುವೆಸಗೊಳ್ವುದುಂ ಯಜ್ಞದತ್ತೆ ಪೇೞಲಣ್ಮಾದುಸಿರದಿರ್ದುದುಂ ನಂಟರುಂ ಸೋದರಿದತ್ತನುಂ ತಾಯುಂ ತಂದೆಯುಂ ಯಜ್ಞದತ್ತೆಯುಂ ನಿಚ್ಚಲಡಸಿ ಬೆಸಗೊಳ್ವುದುಮೆವರನಿಷ್ಟಕಾಱಿದೊಂದುದಿವಸಂ ತನ್ನ ಮನದ ಬಯಕೆಯಂ ಪೇೞದೆ ಪ್ರಸಿದಿಂತೆಂದಳ್ [1] ॥ ೧೫

---

1 ಕಂಡಱಿಯರೀಬಯಕೆಯು ತೊಟ್ಟನೆ ಎನಗತ್ಯಂತಂ ಬಂದು ಪುಟ್ಟುತ್ತೆಂದು ಚಿಂತಿಸಿ ಬಡವಪ್ಪುದುಂ ಸೋದರಿದತ್ತನುಂ ತಾಯುಂ ಮಾವನುಮತ್ತೆಯುಂ ಬಂಧುಗಳುಂ ಯಜ್ಞದತ್ತೆಯ ಬಡವಪ್ಪುದನಱಿದು ಚೋದ್ಯಂಬಟ್ಟು,

ಸವಣರೆಂದೊಡೆ ಭಕ್ತಿಯಿಂ ಪರಿವೆಯ್ದಿ ನೋಡುವಳರ್ತಿಯಿಂ
ಪ್ರವರಮಪ್ಪ ಜಿನಾಲಯಂಗಳನಲ್ಲಿಯಿಂದಮೆ ನೋಡುವಳ್ ।
ದಿವಿಜಪೂಜಿತಜೈನಪೂಜೆಗೆ ಕೈಗಳಂ ಮುಗಿದಾಲಿಪಳ್
ಧವಳಲೋಚನೆ ಜೈನರೆಂದೊಡೆ ಪೆರ್ಚುವಳ್ಕಡುಗೂರ್ಮೆಯಿಂ ॥

ತನಿರಸದಿಂದವ್ಯತದ ದೊರೆ
ಯೆನಿಸುವ ಕುಂಕುಮದ ರುಚಿಯನನುಕರಿಸುವ ಮಾ ।
ವಿನ ಪಣ್ಣಿನೆನಗೆ ನೀವಿಂ
ಬಿನೆ ತಂದಿಕ್ಕುವುದವೋಷಮೆಂಬುದುಮಾಗಳ್ ॥ ೧೬

ನಂಟರುಂ ಸೋಮದತ್ತನುಂ ಯಜ್ಞದತ್ತೆಯ ಬಯಕೆಗೆ [1] ಬೆಲ್ಲಗಾಗಿ ಪುಲಿಯ ಗಿಣ್ಣುಮುಂ ಮೊಲನ ಕೋಡುಮೆಂ ಕಬ್ಬಿನ ಪಣ್ಣುಮೆಂ ಪಲಸಿನ ಪೂವುಮೆಂ ಪಡೆವೊಡಂ ಪಡೆಯಲಕ್ಕುಮಿಾದಿವಸಂ ಮಾವಿನ ಪಣ್ಣಂ ಪಡೆಯಲ್ಬಾರದಿದಕ್ಕೇಗೆಯ್ವುದೆಂದು ಚಿಂತಿಸಿ ॥ ೧೭

[ತರುಣಿಗೆ ಮಾವಿನ ಪಣ್ಗಳ್
ದೊರೆಕೊಳ್ಳವವೋಷಮೆಂತು ಪೇಱೊಡವಿದನೋ ।
ಸರಿಸಿ ಕರಮೇಳಿಸಿರ್ದೊಡ
ಮೆರಡಿಲ್ಲದೆ ಕೇಳ ಸಾವು ತಾಂ ಸಮೆನಿಸುಗುಂ ॥ ೧೮

ನಾವಿದನುಪೇಕ್ಷಿಸಿರ್ದೆವಪ್ಪೊಡೆ ಬಟಿಕ್ಕ ಮೊಕ್ಕ ತುಪ್ಪವೆನುಡಗಲ್ ಬಾರದು ಮಾವಿನಪಣ್ಣನೆಲ್ಲಿ ಪೊಕ್ಕಪ್ಪೊಡಂ ತರವೇಱಿಕ್ಕುಮೆಂದು ಸೋಮದತ್ತನುಂ ಬಂಧುಗಳುಂ ತಮ್ಮೆತಂದೆಯುಂ ಯಜ್ಞದತ್ತೆಗೆ ಸಂತೋಷಮಪ್ಪಂತಾಗೆ ನುಡಿದು ದೆಸೆದೆಸೆಗೆ ಪೋಗಿ] ॥ ೧೯

ತೊಱೆಗಳ ತೀರದೊಳ್ಗರಿವು ತಪ್ಪಲೊಳಗ್ಗಳಮಪ್ಪ ಕೊಳ್ಳದೊಳ್
ಕೆಱೆಗಳ ನೀರ ಪಳ್ಳದ ತಟಂಗಳೊಳೂಪ್ಪುವ ಪುಷ್ಪವಾಟದೊಳ್
ತುಱುಗಿದ ವೃಹ್ಷಸಂಕುಲದೊಳಾರವೆಯೊಳ್ ಬಳಸಿರ್ದ ತೋಂಟದೊಳ್
ಮಱುಗಿ ತೊಱಿಲ್ದು ಮಾವಿನ ಫಲಂಗಳನಂದಱಿಸುತ್ತುಮಲ್ಲಿಯುಂ ॥ ೨೦

ಯೆಂದಾರ್ಜ್ಜವಮೆಂದು ಸೋಮದತ್ತಾದಿಗಳು ಯಜ್ಞದತ್ತೆಯೇನ ಬಯಸಿ ಬಹವಾದಪೆ ಬಯಸಿದ ಬಯಕೆಯಂ ಪೇಳೆಂದು ನಿಶ್ಚಲ ನಿಶ್ಚಲಡಸಿ ಕಿಱಿಬೆಸಗೊಳ್ವುದುಂ ಅವರನುಕ್ಕಿಯಿರಲಾಱದೆ ತನ್ನ ಮನದ ಬಯಕೆಯಂ ಪೇಳಲಂಜುದೆ ಪುಸಿದಿಂತೆಂದಳ್ (ಗ)

1 ಎಂಬುದುಂ (ಗ)

[ಪಗಲ್ ಪಸಿವುಮನಿರುಳ್ ನಿದ್ರೆಯುಮನಱಿಯದೆ ಗ್ರಾಮನಗರ
ಖೇಡಖರ್ವಡಮೆಡಂಬಪಟ್ಟಣದ್ರೋಣಾಮುಖಂಗಳೊಳ್ಳಲ್ಲಂ ತೊಱಲ್ದು
ನೋಡಿ ॥ ೧೧

ಆವನಾದೊಡೆಮೆಕ್ಕೆ ಮೂವಿನ ಪಣ್ಣಿನೀಗಳ ನೋಡಿ ತಂ
ದೀವೆನುಳ್ಳೊಡೆ ಬೇಗಮೊತನ ಬೇಡಿದರ್ಥವನೀವೆವೆಂ
ದೋವದೆಲ್ಲಿಯುಮಲ್ಲಿಗಲ್ಲಿಗೆ ಸಾಱುತುಂ ಬಿಡದೆಯ್ದಿ ಸ
ದ್ಭಾವದಿಂ ನೆಱೆ ಕೇಳುತುಂ ತಿರಿದರ್ಮಹೀತಳಮೆಲ್ಲಮಂ] ॥ ೧೨

ತುಱುಗಾವೆ ಗೋವರಂ ವೆ
ತ್ತಱಿಕೆಯ ಕಬ್ಬಿಲರನೆಯ್ದೆ ಬೆಸಗೊಳುತುಂ ಬಾಯ್ ।
ಬಱಿಬಱಿಬಱತ್ತುತ್ತುಂ ವೈ
ಮಱುಗಿ ಮಹಾಭರದಿನರಸುತಿರ್ಪವೆಸರದೆಗಳ್ [1] ॥ ೧೩

[ಓಲಪಾಹಿನಿಯೆಂಬ ತೊಱೆಯ ತಡಿಯೊಳಿರ್ದ ಬೇಡವಳ್ಳಿಗೆ
ಸೋಮದತ್ತಂ ಛಾತ್ರವೆರಸು ಪೋಗಿ ಮೂವಿನ ಪಣ್ಣಿಡೆಯಂ ಪುಳಿಂದರಿಂ
ಬೆಸಗೊಳ್ವುದುಮೊರ್ವ ಬೇಡಂ ಸೋಮದತ್ತನಲ್ಲಿಗೆ ಬಂದು ನಿಮ್ಮ ರ
ಸುವ ಮೂವಿನಪಣ್ಣಿಡೆಯನಾನಱಿವೆನೆಂಬುದುಂ ಆತನ ಮಾತಿಂಗೆ
ಪ್ರಾಣಬುದಂತಾಗೆ ಸಂತೋಷಂಬಟ್ಟು ॥ ೧೪

ತಡೆಯದೆ ಮೂವಿನ ಪಣ್ಣಿ
ರ್ಪೆಡೆಯಂ ನೀನೆಮಗೆ ತೋರ್ಪೆಯಪ್ಪೊಡೆ ನಿನಗಾಂ ।
ಕುಡುವೆಂ ಬೇಡಿದ ವಸ್ತುವ
ನಡಿಮೆಡಗದೆ ಮನೆಗೆ ಬೇಗಮೆಂಬುದುಮೋಗಳ್ ॥ ೧೫

ಕಿರಾತಂ ತನ್ನ ಬೇಟ್ಪಿ ವಸ್ತುವಂ ಬೇಡಿಕೊಂಡು ಸೋಮದತ್ತಂ
ಗಿಂತೆಂದಂ:—ಅಜ್ಜ ಷಂಡವೆಂಬುದೊಂದುಮೂವಿನವನವಿಾನದೀತೀರದೊಳ
ರ್ಪುದು ತದಾಮ್ರವನದೊಳೂರ್ವಂ ವೈಯೊಳಲ್ಲಂ ಕೆಸಱನೊಟ್ಟಿ

[1] ವೆಯ್ಯಱಿಯುವೆ ಪರಿವಾರದು ಪಲರುಮಂ ಬೆಸಗೊಳುತಂ (ಗ)

ಕೊಂಡು ಬತ್ತಲೆವೆರುಳಂತೆ ತನ್ನೊಳ್ ಮಿನುಕುತ್ತುಂ ವೋನದೊಳ್ ಪರ್ನಾತಂ ಕುಳ್ಳಿರ್ದೆಡೆಯ ಚೂತಮೆಹೀಜಾತಂ ಪಣ್ಗಳಂಗಳಿಂ ದೊಱಗಿರ್ದಪುದಲ್ಲಿಗೆ ಪೋಗಿ ನೀವೊರ್ಪನಿತು ಪಣ್ಗಳಂ ಕೊಳ್ಳಿವೆಂದು ಕಿಱುದೆಡೆಯಂ ಬಂದು ಬಟ್ಟೆಯಂ ತೋಱಿ ವ್ಯಾಧಂ ಮಗುೞ್ದ ಪೋಪುದುಂ ಸೋಮದತ್ತಂ ॥ ೬೬

ತೊಱೆಯ ತಡಿವಿಡಿದು ಬರುತುಂ
ತುಱುಗಿದ ಸಹಕಾರವನಮನೊರ್ವಂಗೆ ಕಂಡ ।
ಱ್ಕುಱಿನೊಳ್ ರಾಗಿಸಿ ನಲಿದಂ
ಮೆಱುಕಂ ಪೆಱಪಿಂಗಿ ಪೋಗೆ ಮನದಿಂದಾಗಳ್ ॥ ೬೭

ವನಮುಂ ಪೊಕ್ಕು ನೋಡುತುಂ ಬರ್ಪಾತಂ ಫಲಭಾರದಿಂ ಸೊಗಯಿಸುವ ಮಾಕಂದಮಹೀರುಹಮುಂ ತದ್ವೃಕ್ಷದ ಕೆಳಗಿರ್ದ ಸುಮತಿ ಭಟ್ಟಾರಕರೆಂಬ ಮಹರ್ಷಿಯರುಮಂ ಕಂಡು ತನ್ನೊಳಿಂತೆಂದಂ ॥ ೬೮

ಈವನದ ಚೂತಭೂಜಾ
ತಾವಳಿಯೊಳ್ ಫಲಮಿವಿಲ್ಲಮಿರ್ದಂತಾಗೀ ।
ಮಾವಿನೊಳ ಪಣ್ಗಳಾದುವು
ಭಾವಿಸುವೆಂತಿದುವೆ ಚೋದ್ಯಮುರ್ವೀತಳದೊಳ್ ॥ ೬೯

ಈಮುನಿಯು ತಪೋನ್ನತಿಯಿಂ
ದೀಮಾವೊಂದಱೊಳ ಪಣ್ಗಳಾದುವು ಬಗೆವಂ ।
ದೀಮುನಿಯ ತಪೋನ್ನತಿಯಂ
ಸಾಮಾನ್ಯಮನುಪ್ಯರೆಯ್ದಿ ನೆಱೆವರೆ ಪೊಗೞಲ್] [1] ॥ ೭೦

---

1 ಬಲವಾಹನಿಯೆಂಬ ತೊಱೆಯ ತಡಿವಿಡಿದು ಬರುತ್ತಂ ಪಂಥಂ ತುಱುಗಿದ ಮಾವುಕುನಾವಮಿನ ಕೆಳಗಿರ್ದ ಸುಮತಿಭಟ್ಟಾರಕರೆಂಬರುಷಮುಂ ಕಂಡು ಹರುಷಚಿತ್ತನಾಗಿ (ಗ)

ಈವೆರಮುನಿಪನೆ ಸಾಕ್ಷಾ
ದ್ದೇವಂ ಧರಣೀತಳಕ್ಕೆ ಮೆತ್ತುಱುದವೆರಂ ।
ದೇವರೆನವೇಡ ಧರೆಯೊಳ್
ದೇವರೆ ನಟ್ಟರ್ದ ಕಲ್ಲುಮೊಟ್ಟದ ಮೆಣ್ಣಂ ॥ ೫೧

[ಈ ಮಹಾತ್ಮನ ತಪದ ಸಾಮರ್ಥ್ಯದಿಂದೀಮಾವೊಂದಱೊಳ್ ಫಲಮಾದುದಲ್ಲದಂದು ನಾಡೊಳಗಣ ಮಾವುಗಳೀಕೆ ಪಣ್ಣಾಗವೆಂದು ಯತಿವೃಷಭನಂ ಪರಮಾವಧಿಲೋಚನನಂ ಪೊಗಱುತ್ತುಂ ಮನದೊಳಾದರದಿಂ ಪೊಡೆಮಡುತುಮೆಯ್ದಿನಂದು ಭಾತ್ರರುಂ ತಾನಂ ಮುಂದೆ ನಿಲ್ವುದುಂ ಅವರ್ ತ್ರಿಲೋಕಪ್ರಜ್ಞಾಪ್ತಿಯೆಂಬಾಗಮಮೆಂಂ ಪಱುವೆಡಿಗೆಯ್ಯುತ್ತುಮಿಲ್ಲಿ ನಮಲೋಕದೊಳಾದ ವೃತ್ತಾಂತವೆಲ್ಲಮಂ ನೋಡಿ ಸ್ವರ್ಗಲೋಕದ ವ್ಯಾವರ್ಣನೆಯುಂ ಮಾಡುವಲ್ಲಿ ಪನ್ನೆರಡನೆಯ ಸಹಸ್ರಾರಕಲ್ಪಮುಂ ನೋಡುತುಮಿರ್ದುದುಂ] [1] ॥ ೫೦

ಪರಿಣತನಪ್ಪುದಱಿಂ ವ್ಯಾ
ಕರಣದೊಳಯಮಮನಿಲಿ ಕಬ್ದಾರ್ಥಮೆನ ।
ಚ್ಚರಿಪಟ್ಟು ಭಾವಿಸುತ್ತುಂ
ಧರಾಪುರಂ ಸೋಮದತ್ತನಿರ್ವನ್ನೆವರಂ ॥ ೫೧

ಸೂರ್ಯಪ್ರಭೆಯೆಂಬ ವಿಮಾನಮೆಂ ವ್ಯಾವರ್ಣಿಸುವುದುಂ ತಾನಾ ವಿಮಾನದೊಳ್ ಮುನ್ನಿನ ಭವದೊಳ್ ಸೂರ್ಯವರನೆಂಬ [ಮಹರ್ಧಿಕ] ದೇವನಾಗಿ ಪುಟ್ಟಿ ಬಂದನಪ್ಪುದಱಿಂ [ತದ್ವಿಮಾನದೊಳಾದ ವೃತ್ತಾಂತಮಂ ಕೇಳ್ದು] ॥ ೫೨

ಜಾತಿಸ್ಮರನಾಗಿ ಮಹಾ
ಖ್ಯಾತಿಯ ವಿಪ್ರಾಂಬರಾರ್ಕನಾಹ್ವಯದೊಳ್ ಧಾ ।

---

1 ಯಿಂನವರ ಸಾಮರ್ಥ್ಯಮಪೂರ್ವಮೆಂದು ಯತಿವೃಷಭನ ಮುಂದೆ ಭಾತ್ರರುಂ ತಾನುಂ ಕುಳ್ಳಿರ್ದುದುಂ ತ್ರಿಲೋಕಪ್ರಜ್ಞಾಪ್ತಿಯೆಂಬಾಗಮಮನೋದುತ್ತಲ್ಲಿ ಸಹಸ್ರಾರಕಲ್ಪದ ವ್ಯಾವರ್ಣನೆಯುಂ (ಗ)

ತ್ರೀತಳಕೆ ನೆರೆದ ಶಿಷ್ಯ್ರೇ
ವ್ರಾತಂ ಬೆಱಿಗಾಗೆ ಮೊರ್ಛೆಯಿಂದಂ ಬಿರ್ದಂ ॥ ೫೫

[ಅಂತು ಮೊರ್ಛೆವೋಗಿ ಬಿರ್ದುದಕ್ಕೆ ಛಾತ್ರರೆಲ್ಲಂ ಬೆರ್ಚಿ
ತವ್ಮೊಳ್ ॥ ೫೬

ಮನೆಯಿಂದಂ ಮಿಡುಕಂ ಮಹಾಸುಖಿ ಕರಂ ವ್ಯಾಳಂ ಮಹಾಭೋಗಿ ದೇ
ವನಿಭಂ ಶ್ರೀನಿಳಯಂ ಸಮಸ್ತನುತಶಾಸ್ತ್ರ ಜ್ಞಂ ಬೋಧಿ ತಾಂ ತನ್ನ ಕಾ
ಮಿನಿಗತ್ಯುತ್ಸವಮೊಗೆ ಮಾವಿನ ಫಲವ್ರಾತಂಗಳಂ ತರ್ಪಿಸೆಂ
ದಿನಿತಂ ಮಾಣ್ದು ಧರಿತ್ರಿಯಂ ತಿರಿದು ತಾಂ ಬೇಸತ್ತು ನಿಶ್ಶಕ್ತಿಯಿಂ ॥

ಬಿರ್ದನೆಂದು ದುಃಖಿಂಬಟ್ಟಱಿತೆ ತನ್ಮ್ಮ ಮೇಲುದಂ ತಿಳಿಗೊಳ
ದೊಳ್ ಕೋಡುವಾಲಿನೀರೊಳರ್ದಿ ತಂದಾವೊಗದೊಳೂತ್ತಿ ಕಾಲ
ನೊತ್ತುತ್ತು ಮಿರ್ದನಂ ಸೋಮದತ್ತಂ ಮೊರ್ಛೆಯಿಂದೆಚ್ಚತ್ತು][1] ॥೫೪

ಸುರಲೋಕಭೋಗಮಂ ಭೂ
ಸುರವಂದ್ಯಂ ನೆನೆದು ಮರ್ತ್ಯಲೋಕದ ಸುಖಮಂ ।
ಪರಿಹರಿಸಲೆಂದು ಬಗೆದಂ
ಪರಮಾರ್ಥಂ ಕಾಲಲಬ್ಧಿಯದು ಕೇವಲಮೇ [2] ॥ ೫೯

ಜಿನಧರ್ಮಮೆಂಬುದಂ ಕನ
ಸಿನೊಳಂ ಕಂಡಱಿಯನಘಸಮೇತಂ ತಾಂ ತೊ ।
ಟ್ಟನೆ ಭವಮನಱಿದು ಸಂಸೃತಿ
ವನಮಂ ತಱಿದೊಟ್ಟ ಸುತುವೆ ಬಗೆಯುಂ ತಂದಂ ॥ ೬೦

ಸತ್ತವರನಾರೊ ಕಂಡರ್
ಚಿತ್ತಂ ಪರಿದಂತೆ ಮಾಱ್ಪುದೆಂಬರ್ ಕುಱಿಗಳೆ ।
ಸತ್ತವರೆ ಪುಟ್ಟಿದಿರ್ದೊಡೆ
ವೆತ್ತಾನಿರದೀಗಳತ್ತಣಿಂದಂ ಬಂದೆಂ ॥ ೬೧

---

[1] ಬಿರ್ದ್ದಂಗೆ ಶಿಷ್ಯರ್ಮಾಡುವ ಶೀತಳಕ್ರಿಯೆಯಿಂದೆಚ್ಚತ್ತು (ಗ)
[2] ಲಬ್ಧಿಯಳವದು ಕೆಱಿದೇ (ಗ)

[ಎಂದು ಬಗೆದು ತನ್ನ ಮುನ್ನಿನ ಭವಮನಱಿದು ಜೀವವಿ
ಲ್ಲೆಂದು ನುಡಿವ ಕುಮತಮೆಂ ಬಿಟ್ಟು ಜೀವನುಂಟೆಂಬ ಜಿನಾಗಮೊಕ್ತಿ
ಪ್ರಾಯಮೆಂ ಮನದೊಳ್ ನಂಬಿ ಸುಮತಿಭಟ್ಟಾರಕರಱಿವಂ ನೋಡ
ಲೆಂದು ತನ್ನ ಭವಮೆಂ ಬೆಸಗೊಳಲ್ವೋಡಿ ಸವಿಾಪಕ್ಕೆ ಬಂದು ಕುಳ್ಳಿ
ರ್ದುದುಮವರೀತನಾಸನ್ನ ಭವ್ಯನೆಂದಱಿದು ಬೇಗಮವನಿಂ ಮುನ್ನಂ
ಮನದಭಿಪ್ರಾಯಮನಿಂತೆಂದರ್ ॥ ೪೨

ಮುನ್ನಿನ ಭವಮಂ ನೀಂ ವಿ
ಪ್ರೋನ್ನತ ಜಾತಿಸ್ಮರತ್ವದಿಂದಱಿದೀಗಳ್ ।
ನಿನ್ನ ಕುಬುದ್ಧಿಯಿನಿವರುಮ
ನಾಂ ನೆಱೆ ಬೆಸಗೊಳ್ವನೆಂದು ಮೆಲ್ಲನೆ ಬಂದ್ಯೆ ॥ ೪೩

ನಿನ್ನ ಬೆಸಗೊಳ್ವನಿತಂ ಬೆಸಗೊಳ್ಳಂಬುದುಂ ಸೋಮದತ್ತನವರ
ಱಿತಕ್ಕೆ ಬೆಱಗಾಗಿ ಬೇಱಿನಱಿವರ್ಗೆಲೆಯುಂ ತೋಱಿವರೆಂಬಂತೆ ಜಾತಿ
ಸ್ಮರತ್ವಮೆನಱಿವೀವುಾಪುರುಷಂಗೆ ಲೋಕದೊಳಾವ ವಸ್ತುಗಳ
ನಱಿವುದಾವುದು ಚೋದ್ಯಮೆಂದು ನಂಬಿ ತನ್ನ ನಿಯ ಚರಣಯುಗಳಕ್ಕೆ
ಸಾಷ್ಟಾಂಗವೆಱಿಗಿ ಪೊಡೆಮಟ್ಟು ಕೈಗಳಂ ಮುಗಿದು ॥ ೪೪

ಮುನಿಯುಂ ಬೆಸಗೊಂಡಂ ಪೆ
ಱ್ಗನೆ ನಿಮ್ಮಡಿ ಬೆಸಸಿಮೆನ್ನ ಭರ್ತಾರಿಯು ಮಾ ॥
ವಿನ ಪಣ್ಣಿನೇಕೆ ಬಯಸಿದ
ಳಿನಿತಾನುಂ ವಸ್ತುನಿಕರಮಿರ್ದುಂ ತಿನಿಸಂ ॥ ೪೫

ಎಂದು ಬೆಸಗೊಳ್ವುದುಂ ಸುಮತಿಭಟ್ಟಾರಕರಾಕೆಯ ಗರ್ಭದ
ಕೂಸು ಜಿನಸಮಯಪ್ರಕಾಶನುಂ ವಾತ್ಸಲ್ಯರತ್ನಾಕರನುಂ ಕರ್ಮಾ
ಚಲವಜ್ರನುಂ ಮುನಿಜನಹೃದಯಾನಂದನುಂ ದಿಗಂಬರಸರೋಜರಾಜ
ಹಂಸನುಂ ಸುಕವಿನಿಕರಪಿಕವೊಾಕಂದನುಂ ಸಹಜಕವಿಜನ ಮನೋ
ಹರೋದ್ಯಾನವನೆಕಲಕಂಠನುಂ ಆಸನ್ನಭವ್ಯನುಂ ಸುಜನಮನೋರಂ
ಜನನುಂ ಸಮ್ಯಕ್ತ್ವಚೂಡಾಮಣಿಯುಂ ವಿದ್ಯಾಧರಾನತಪಾದಪಲ್ಲವನು
ಮಪ್ಪುದಱಿಂದವನ ಬಯಕೆ ನಿನ್ನ ಪೆಂಡತಿಯಪ್ಪ ಯಜ್ಞದತ್ತೆಗೆ ಬಯ
ಕೆಯಾಗೆ ಜಿನೇಂದ್ರಾಭಿಷೇಕಮಂ ಮಾಡಲುಂ ಜಿನಮಹಾಮಹಿಮೆ

ಗಳಂ ನೋಡಲುಂ ಚರಿತಪುರಾಣಂಗಳಂ ಪೇಳಗೆ ಪೇಳಲುಂ ಜಿನಾಗಮ
ಮನಾಗಳುಂ ಕೇಳಲುಂ ಶ್ರಾವಕರೊಡನಾಡಲುಂ ಶ್ರಾವಕರ್ಗೊಡಲುಂ
ತೊಡಲುಂ ಕುಡಲುಂ ಚಾತುರ್ವರ್ಣ್ಯಕ್ಕಂ ವಿನಯದಿಂ ಬೆಸಸೆಯ್ಯಲುಂ
ಚತುರ್ವಿಧಮಪ್ಪ ಮಹಾದಾನಮಂ ಮಾಡಲುಂ ಮುನಿವೃಂದಾರಕರ
ಸಮೀಪದೊಳಿರಲುಂ ಮನಮೊಗೆ ನಿಮಿಗಾಬಯಕೆಯಂ ಪೇಱಲ್ಕೞ್ದೆ
ನಿವ್ಮನಿಷ್ಪತ್ತಿಕ್ಕೆ ಮೊವಿನ ಪಣ್ಣಿಂ ಬಯಸಿದೆನೆಂದು ಪೇೞ್ವಿಳಂದು
ಪೇೞ್ವುದುಂ ಸೋಮೆದತ್ತಂ ಬೆಱಗಾಗಿ ॥ ೪೬

ವೆರಮುನಿ ಪೇೞ್ವಿನಿತುಂ ತಾಂ
ತರುಣಿಯ ಮೇಲಣವು ನಿಶ್ಚಯಂ ನಂಬಿದೆನಂ ।
ದರವಿಂದೋದ್ಭವನೆಂಕಾಂ
ಬುರಹಾರ್ಕಂ ಮುನಿವರಂಗೆ ಪೊಡೆಮಟ್ಟಾಗಳ್] [1] ॥ ೪೭

---

1 ಎಂದು ಜೀವನಿಲ್ಲ ಪರಕ್ರಿಯಿಲ್ಲೆಂಬ ತಂನ ಮುಂನಿನ ಶೂನ್ಯವಾದಮಂ ಬಿಟ್ಟು ಜೀವನುಂಟು ಪರತ್ರಿಯುಂಟು ಎಂಬ ಜೈನಮತಾಗಮಮಂ ನಂಬಿ ಸುಮತಿಭಟ್ಟಾರಕರ ಮೊಗಮುಂ ನೋಡುವುದುಂ ಅವರೀತನಾಸನ್ನಭವ್ಯನೆಂದಱಿದು ಶೂನ್ಯಮತಂಗಳುವೆಂಬ ಮಿಥ್ಯಾತ್ವಮುವೆಂಬ ಬಿಟ್ಟು ಜಿನದೀಕ್ಷೆಗೆ ಮುನಂದಂದು ಲೇಸುಗೆಯ್ದಿಂ ಬಿಸಗೊಳ್ವುದೆಂ ಬೆಸಗೊಳ್ಳೆಂಬುದುಮವರಾತನ ಮುನದ ಬಯಕೆ ತೀರ್ದಂತೆ ಪೇೞ್ವುದುಂ ಅವಂಱಿತಕ್ಕೆ ವಿಸ್ಮಯಂಬಟ್ಟು ಬೇರನ ಱಿವರ್ಗೆಲೆಯಂಬೇೞ್ದರೆಂಬಂತೆ ಸರ್ವಜ್ಞಂಗಱಿನಂ ಪೇೞ್ದರೆಂಬಂತೆ ಮತ್ತೆ ಸವ ಣಂಗೆ ಸುಬಟ್ಟಕ್ಷರಮುಂ ತೋಱಿದರೆಂಬಂತೆಂನ ಜಾತಿಸ್ಮರಮನಱಿದೀಮುಹಾಪುರು ಷಂಗೆ ಮೂಱಿಂ ಲೋಕದ ವಸ್ತುಗಳನಱಿವುರು ಗಹನಮಲ್ಲದಿಂನೆಂನಂ ಬೆಸ ಗೊಳ್ವೆನೆಂದು ಭಾವಿಸುತದಿಗಂಬರದಾಸನ ಕಾಲ ವೆಲೆ ಬಿದ್ದು ನಿವ್ಮಡಿ ಬೆಸಸು ವೆಂನೆ ಪೊಡತಿಗೀಕಾಲದೊಳು ಪಡೆಯಲು ಬಾರದಪೂರ್ವಮಪ್ಪ ಮೊವಿನ ಪಣ್ಣಿ ಬಯಕೆ ತೊಟ್ಟನೆಕಾದುದೆಂಬುದು ಮುವರವಧಿಜ್ಞಾನದಿಂದಮಱಿದು,

ಅಸತಿಯ ಗರ್ಭದೊಳಗಿರ್ದಾಸುತನರ್ತ್ಪಡಾಂಬುಜದ್ವಯಮಧುಪಂ।
ಶ್ರೀಸತಿಪತಿ ಸಕಲಗುಣಾವಾಸಂ ಸರ್ವಜ್ಞತ್ವಪ್ರದಿವ್ಯಾಭರಣಂ ॥

ಅತನ ಬಯಕೆ ತನಗೆ ಬಯಕೆಯಾಗೆ ಯದಱಿಂದಾ ಬಯಕೆಯಂ ನಿವು ಗಱಿಪಲಂಮದೆ ನಿಂವುನಿವಕ್ಕೆ ಪುಸಿದು ಮೊವಿನ ಪಣ್ಣಿಂ ಬಯಸಿದೆನೆಂದು ಪೇೞ್ದ ಳಿಂಱಿದುಂ ಸೋಮುದತ್ತಂ ಬೆಱಗಾಗಿ (ಗ)

ಸುಡು ಸಂಸಾರವೆನೊಲೆಯೊಳ
ಗಿಡು ಸಂಸೃತಿಸುಖವೆನೀವುಹಾಪುರುಷನ ವೆ ।
ಲ್ಲಡಿಯಂ ನೋಡುತ್ತುಂ ಮೈದು
ನುಡಿಯಂ ಕೇಳುತ್ತುಂ ಪುರ್ದೊಂದರಸಲ್ತೇ ॥ ೪೮

ಎಂದು ಮೊವಿನ ಪಣ್ಗಳಂ ಭ್ರಾತ್ರರ ಕೈಯೊಳ್ ಅಹಿಚ್ಛತ್ರದ ಪುರಕಟ್ಟ ತಾಂ ಪೋಗಲೊಲ್ಲದಿರ್ದು ॥ ೪೯

ಜಿನವಾಕ್ಯಂ ಪೊಱಗಾಗೆ ಮತ್ತಿನ ವೃಥಾಳಾಪೋಕ್ತಿಗಳ್ಗಾನೆ ದೇ
ವನನುರ್ವೀತಳದೊಳ್ ಸಮಸ್ತವಿಷಯ [1] ವ್ಯಾಪಾರಮಂ ಬಲ್ಲೆನೊ
ಯ್ಯನೆ ಜೈನಾಗಮಮೆಮಂ ಸಮಸ್ತದುರಿತಪ್ರಧ್ವಂಸಿಯಂ [2] ಕೇಳ್ವನೀ
ಮುನಿನಾಂಘ್ರಿದ್ವಯಸದ್ಮದೊಳ್ ನೆಲೆಯೆ ಪೊರ್ದಿರ್ದಲ್ಲಿ ನಾನರ್ತಿಯಿಂ [3]

ಎಂದು ಉತ್ಸಾಹಮನನಾಗಿ, ಬೀದಿಯು ರತ್ನದಂತೆ, ಪೊಸಂತಿಲ ನಿಧಿಯುಂತೆ, ಮನೆಗೆ ವಂದ ನಿಕ್ಷೇಪದಂತೆ, ಕುಡದೆ ಬಂದ ಭಂಡಾರದಂತೆ, ಮೂಡದೆ ಬಂದ ಮನೆಯುಂತೆ, ಬೇಡದೆ ಬಂದ ಸಾಲದಂತೆ, ಪಡೆಯದೆ ಬಂದ ದೇಶದಂತೆ, ವರಿಸದೆ ಬಂದ ನಲ್ಲಳಂತೆ, ಕಾಡದೆ ಬಂದ ರಾಜ್ಯ ದಂತೆ, ಬಿತ್ತದೆ ಬಂದ ಧಾನ್ಯದಂತೆ, ಚಿಂತಿಸದೆ ಬಂದ ಕಸವೆರದಂತೆ, ಪ್ರಾರ್ಥಿಸದೆ ಬಂದ ಮದುವೆಯಂತೆ, ಸಾಧಿಸದೆ ಪಡೆದ ವಿದ್ಯೆಯಂತೆ, ಕಾದದೆ ಗೆಲ್ದ ಗೆಲ್ಲದಂತೆ, ಕೇಳದೆ ಬಂದ ಶಾಸ್ತ್ರದಂತೆ, ನುಡಿಯದೆ ತಿರ್ದಿದ ಕಾರ್ಯದಂತೆ, ಮಡೆಯಿಲ್ಲದೆ ತೀವಿದ ಕೆಜ್ಜೆಯಂತೆ, ನೀರೆತ್ತದೆ ಫಲ ವೊದ ತೋಂಟದಂತೆ, ಮೆದ್ದಿಲ್ಲದೆ ಪೋದ ಕುತ್ತದಂತೆ, ತನಗೆ ತಾನೆ ಬಂದ ಸಿರಿಯಂತೆ, ಪುಣ್ಯದಿಂ ದೊರೆಕೊಂಡ ಜೈನಧರ್ಮಮನೊಲ್ಲದೆ ಬಿಟ್ಟೊಡೆ ; ಮುಗಿಲ ನೀರಂ ನಂಬಿ ದೊಣೆಯ ನೀರಂ ತುಳುಂಕುವ ಕೊಡಗಮುಮೆಂ, ಪೆಱರ ಬೆಳಸಂ ನಂಬಿ ಕೆಲಸಂಗೆಯ್ಯದೆ ಇಕ್ಕಲಿ ಗನುಮೆಂ, ನಂಟರ ಮಕ್ಕಳಂ ನಂಬಿ ತನ್ನ ಮಕ್ಕಳಂ ಕಳೆವ ನಿರ್ಬು

---

1 ಸಮುಯ (ಗ) 2 ಜರಾಮರಣ ಜಾತಿಚ್ಛೇದಮಂ (ಗ)
3 ಮುನಿನಾಥೋತ್ತಮ ನಿಲ್ಲಿ ಬೀಗವೆನತುಂ ಸದ್ಯಾಗಮಂ ತೋಱಿದಂ (ಗ)

ದ್ಧಿಯುಮಂ, ಜಾರೆಯು ಮೂತಂ ನಂಬಿ ತನ್ನ ಪೆಂಡತಿಯುಂ ಬಿಡುವ ಬೇಂಟಿಗಾಱನುಮಂ, ಕಳ್ಳನ ನುಡಿಯುಂ ನಂಬಿ ತಳಾಱನಂ ಕೊಲ್ವ ಗ್ರಾಮೆಣಿಯುಮಂ, ಮೆದುವೆಯ ಕೂಟಂ ನಂಬಿ ಮನೆಯ ಧಾನ್ಯಮಂ ಸೂಱೆಗೊಡುವ ಬೆಳ್ಪನುಮಂ, ಸಾಲದ ಪೊನ್ನಂ ನಂಬಿ ಪೂರ್ವ್ವ ಪೊನ್ನ ನೀಡಾಡುವ ಮೆರುಳನುಮಂ, ಕೈಯದಂ ಬಿಟ್ಟು ಕಾಲದಕ್ಕೆ ಱಗುವ ಲೋಭಿಯುಮಂ, ಧಾತುವಾದಮಂ ನಂಬಿ ಕೈಯೊಡವೆಯಂ ಬೀಯಂ ಮೊಚ್ಚಿ ಹೀನಿಯುಮಂ, ಗುಡಿಮಂ ನಂಬಿ ಮನೆಯಂ ಸುಡುವ ನಿರ್ಬುದ್ಧಿಯುಮಂ, ಹಿಂಡಿಯುಂ ನಂಬಿ ಯೆಣ್ಣೆಯನುಗುವ ತೆಲ್ಲಿಗನುಮಂ, ಬೀಯಕಾಱನಂ ಬಿಟ್ಟು ಬೇಂಟಿಗಾಱನಂ ಕರೆವ ಸೂಳೆಯುಮಂ, ಮಣ್ಣಕೋಂಟೆಯುಂ ನಂಬಿ ಕಲ್ಲ ಕೋಂಟೆಯನೊಡೆವ ಮನ್ನೆಯನುಮಂ, ಬಿನುಗಂ ನಂಬಿ ತೆಱುವೊಕ್ಕಲಂ ಕಳವೆ ಪ್ರಭುವುಮಂ, ಮೂತಾಳಯುಂ ನಂಬಿ ವೀರನಂ ಬಿಡುವ ನಾಯಕನುಮಂ, ಸೋರೆಯ ಬಟ್ಟಲಂ ನಂಬಿ ಕಂಚಿನ ಬಟ್ಟಲನೊಡೆವ ಗೊರವನುಮಂ, ಪಾಱು ನಾಡಂ ನಂಬಿ ತೀವಿದ ನಾಡಂ ಕಿಡಿಸುವ ಭೂಪನುಮಂ, ಕಳ್ಳಯುಂ ನಂಬಿ ಕೌಂಗಿನ ತೋಂಟನುಮಂ ಕಡಿವ ತೋಂಟಿಗನುಮಂ, ಪುಲ್ಬಂಟನಂ ನಂಬಿ ಬಲ್ಬಂಟನಂ ಬಿಡುವ ಪಗೆಗಾಱನುಮಂ, ಕಿಚ್ಚಂ ಬಿಟ್ಟು ನೀರಂ ಪುಗುವ ವಾತಾಧಿಕನುಮಂ, ತಣ್ಪಂ ಬಿಟ್ಟು ಬಿಸಿಲಂ ಕಾಯ್ವ ಪಿತ್ತಾಧಿಕನುವಂ ಪೋಲ್ವೆನೆಂದು ಪರಿಚ್ಛೇದಿಸಿ [ಜಿನೇಂದ್ರಧರ್ಮಮಂ ಸುಮತಿ ಭಟ್ಟಾರಕರೊಳ್ ಲೇಸಾಗಿ ಕೇಳ್ದು ತನ್ನ ಮುನ್ನಿನ ಸಂಕಲ್ಪಜಾಲಂಗಳಂ ನಿಜೆ ತೊಱೆದು ಸಂಸಾರಕ್ಕೆ ಬೇಸು ವೈರಾಗ್ಯಂ ಪುಟ್ಟೆ ಪಂಚೇಂದ್ರಿಯುಂಗಳೊಳಾದಲ್ಪಸುಖಮಂ ಬಿಟ್ಟತೀಂದ್ರಿಯಸುಖಮಂ ಕೈಕೊಳ್ಳಲೆಂದು ॥ ೪೧

ಕರಮುಗಿದು ಬಾಗಿ ತಲೆಯಂ
ದುರಿತಮೆನಿದಟಲೆಯಲೆಂದು ಜಿನದೀಕ್ಷೆಯನಾ ॥
ದರದಿಂ ಮುನೀಂದ್ರವಂದಿತ
ಚರಣಾಂಭೋಜಾತಯುಗಳನಂ ಬೇಡುವುದುಂ ॥ ೪೨

ಸುಮತಿಭಟ್ಟಾರಕರಾತನ ವಿನಯಕ್ಕಂ ಮನದ ವೈರಾಗ್ಯಕ್ಕಂ ಮೆಚ್ಚಿ ದೀಕ್ಷೆಯಂ ಕಾರುಣ್ಯಂಗೆಯ್ವುದುಂ ಜಾತರೂಪಧರನಾಗಿ ಚತುರನುಯೋಗಮುಮಂ ನೋಡಿ ದಶಧರ್ಮಕುಶಲನುಂ ಅಷ್ಟಾವಿಂಶತಿಮೂಲಗುಣಸಮನ್ವಿತನುಂ ದರ್ಶನಸಂಶುದ್ಧನುಮಾಗಿ] [1] ಕೆಲವುದಿವಸಂ ಗುರುಪಾದಸೇವೆಯೊಳಿರ್ದು ಗುರುಗಳಾಜ್ಞೆಯಿಂ ದೇಶವಿಹಾರಿಯಾಗಿ [ವಿಹಾರಿಸುತ್ತುಂ ಬಂದು ಮಗಧವಿಷಯದ ಶಾಪಾಳವೆಂಬ ಪುರದ ಪಡುವಣ ದೆಸೆಯ] [2] ನಾಭಿಗಿರಿಯೆಂಬ ಪರ್ವತದೊಳಾತಪಯೋಗದಿಂದಿರ್ದನನ್ನೆಗಮಿತ್ತಲ್ ॥ ೫೩

ಸೋಮದತ್ತನ ಕೊಟ್ಟ ಮೋವಿನ ಪಣ್ಗಳಂ ಪಿರಿದಕ್ಕಿಜಂ
ಸೋಮದತ್ತನ ಛಾತ್ರಸಂಕುಲಮೆಂದು ತಂದತಿರಾಗದಿಂ
ಸೋಮದತ್ತನ ಭಾರ್ಯೆಗಿತ್ತು ಸಮಸ್ತಬಂಧುಜನಾಳಿಗಂ
ಸೋಮದತ್ತನೊಳಾದ ವಾರ್ತೆಯನೆಲ್ಲಮಂ ನೆಱೆ ಪೇಳ್ವುದುಂ ॥ ೫೪

[ಕೇಳ್ದ ಬೆಱಗಾಗಿ ಋಷಿಯರಂ ಪೊರ್ದಿದನಪ್ಪೊಡೆ ನಮಗಲ್ಲನೆಂದು ಮನದೊಳ್ ಮಲಮಱುಗಿ ॥ ೫೫

ಎರಡಿಲ್ಲದೆ ಜಿನರೂಪಂ
ಧರಿಯಿಸದಿರಲಱಿಯನೋವೊ ಋಷಿಯರ ಕೆಲದೊಳ್ ।
ವರಧರ್ಮಶ್ರವಣಮೆನೊ
ಪ್ಪಿರೆ ಕೇಳ್ವಂ ಬಱಿಕೆ ವಿಪ್ರವಂಶಲಲಾಮಂ ॥ ೫೬

ಎಂಬುದುಂ ಸಕಲಬಂಧುಜನಕ್ಕಂ ಯಜ್ಞದತ್ತೆ ಯಿಂತೆಂದಳ್ ॥

ಧರೆಯೊಳಗ್ಗಳಮೆಪ್ಪ ವಿಪ್ರಕುಲಕ್ಕೆ ಭಾವಿಸಿ ನೋಱ್ಪೊಡಂ
ಪಿರಿಯನಗ್ಗದ ವೇದಶಾಸ್ತ್ರಪುರಾಣತರ್ಕಪರಾಯಣಂ
ಸರಸಿಜೋದ್ಭವನನ್ನನಲ್ಲನೆ ಮಿಕ್ಕ ಚಾರುಚರಿತ್ರದೊಳ್
ಮೆರೆ ಮತ್ಪತಿ ಜೈನದೀಕ್ಷೆಯನೊಲ್ಲನಲ್ಲನವೋಘದಿಂ ॥ ೫೭

ಎಂಬುದುಮಲ್ಲಿ ಕೆಲರ್ವಿವೇಕಿಗಳಂತೆಂದರ್ ॥ ೫೮

ವಾರಿಜೋದ್ಭವನನ್ನರಪ್ಪ ಧರಾಮರರ್ಪಲರುಂ ಸದಾ
ಚಾರರಪ್ಪರೆ ನೋಡ ಕೂರ್ತುಜಿನೇಂದ್ರದೀಕ್ಷೆಯನಾಂತರಿ

---

[1] ಜಿನದೀಕ್ಷೆಯಂ ಕೈಕೊಂಡು ಆಗಮುಂಗಳನೋದಿ (ಗ) [2] ಯೋಗಿ (ಗ)

ನ್ನಾರೊ ಬರ್ಪರನಂತಸೌಖ್ಯಮನೀವ ದಿವ್ಯತಪಸ್ಯೆ ವಿ
ಸ್ತಾರದಿಂ ದೊರೆಕೊಂಡೊಡೊಲ್ಲದೆ ಬುದ್ಧಿವಂತರಿಳಾಗ್ರದೊಳ್ ॥ ೬೦

ಎಂದು ಯಜ್ಞದತ್ತೆಯ ಬಂಧುಗಳುಂ ಮಿತ್ರರುಂ ತಂತಮ್ಮ ಕಂಡ ಮಾತುಗಳಂ ನುಡಿದು ಸೋಮದತ್ತನಪ್ಪೊಡೆ ಮಹಾವಿವೇಕಿ ಬ್ರಾಹ್ಮಣಂ ಜಿನದೀಕ್ಷೆಯನೆಂತುಂ ಕೈಕೊಳಲಱಿಯಂ ಪುತ್ತುಂ ಬತ್ತಲೆಯುಂ ಒಱಿದಿಲ್ಲೆಂಬೀನಾಚಿನ್ನಡಿಯುಂಟಪ್ಪುದಱಿಂದಾಖಯಷಿಯಂ ನಂಬಿಸಿ ಪುಸಿ ಭಕ್ತಿಯುಂ ಮಾಡಿ ಯೇನಾನುಮೊಂದು ಸದ್ವಿದ್ಯೆಯುಂ ಸಾಧಿಸಲ್ವೇಡಿನಿಂದಂ ತಡೆಯದೆ ಬರ್ಕುಂ ಬಾರದಿರನೆಂದು ಮನದೊಳ್ ಸಂತೋಷಂ ಬಟ್ಟು ಸುಖದಿಂದಿರ್ಪುದುಂ ॥ ೬೧

ಪೆಱೆವುಖಿ ಸವೆಸ್ತದುಃಖಂ
ಪಱಿವೊಡೆ ನೆಱೆ ಯಜ್ಞದತ್ತೆ ನವೆಮಾಸಂಗಳ್ ।
ನೆಱೆಯೆ ಸುರರಾಜನಿಭನಂ
ನೆಱೆ ಪೆತ್ತಳ್ ಸಕಲಜೀವನುತನಂ ಸುತನಂ ॥ ೬೨

ಅಂತು ಪೆತ್ತು ಪುತ್ರೋತ್ಸಾಹಮಂ ಮಾಡಿ ಕೂಸಿಂಗೆ ಶ್ರೀದತ್ತನೆಂದು ಪೆಸರನಿಟ್ಟು ಸುಖನಿರ್ಭರ್ನ್ನಿಗಂ ಸೋಮದತ್ತಂ ರುಷಿಯಾಗಿ ಮಗಧವಿಷಯದ ಸೌಭಾಳಪುರದ ಕೆಲದ ನಾಭಿಗಿರಿಯೆಂಬ ಪರ್ವತದೊಳಿರ್ದನೆಂಬುದಂ ಲೋಗರಿಂ ಕೇಳ್ದು ಮೂಲಶುದ್ಧಿಯಿಂದಱಿದು ಬಸಿರಂ ಪೊಸೆದುಕೊಂಡು ಯಜ್ಞದತ್ತೆಯುಂ ಬಂಧುಗಳುಂ ದುಃಖಿತೆಯರಾಗಿ ಸೋಮದತ್ತನ ತಪನನಾವಾವ ತೆಱದೊಳಾದೊಡಂ ಕಿಡಿಸಿ ಬರ್ಪ ಮೆಂಬುದ್ಯೋಗಮನೆತ್ತಿಕೊಂಡು ಛಲಮಂ ಪೂಣ್ದು] [1] ॥ ೬೩

---

[1] ಪುತ್ತುಂ ಬತ್ತಲೆಯುಂ ಮುಂಬಱಿದಿಲ್ಲೆಂಬ ನಾಳ್ಗಳೆಯುಂಟಪ್ಪುದಱಿಂದಾಖಷಿಯರಂ ನಂಬಿಸಿ ಪತಿಭಕ್ತಿಯಂ ಮಾಡಿ ವಿದ್ಯೆಯುನೇನಾನುಮಂ ಕಲಿಯಲ್ಕೆಂದು ನಿಂವನಕಕ್ಕಂ ಬಾರದಿರಲಱಿಯುನೆಂದು ಸಂತೋಷಂ ಬಟ್ಟರ್ದನ್ನಿಗಂ ನವಮಾಸಂ ನೆಱೆದು ಯಜ್ಞದತ್ತೆ ಗಂಡುಗೂಸಂ ಪಡೆದು ಕೂಸಿಂಗೆ ಶ್ರೀದತ್ತನೆಂದು ಪೆಸರನಿಟ್ಟು ಸುಖನಿರ್ಭರಂದುದಿವಸಂ ಸೋಮದತ್ತಂ ಋಷಿಯಾಗಿ ನಾಭಿಗಿರಿಪರ್ವದೊಳಿರ್ದನೆಂಬುದಂ ಕೇಳ್ದು ಮೂಲಶುದ್ಧಿಯಿಂದಱಿದು ನಂಟರೆಲ್ಲರುಂ ಮುಸಗಿ ಪುರದಿಂ (ಗ)

ಪೊಱಮಟ್ಟು ಕೋಪದಿಂ ಮೆ
ಯ್ಯಱಿಯದೆ ತನ್ಮನಿಯ ತಪಮನೇಗೆಯ್ದುಂ ಪೊ ।
ಚ ಱುಗಿಡಿಸಿ ತರ್ಪೆಮೆಂಬೊಂ
ದಱಿಕೆಯಿನವರೆಯ್ದೆ ವಂದರಾಗಿರಿವರಮಂ ॥ ೬೪

[ಅಂತೆಯ್ದುವೆದು ನಾಭಿಗಿರಿಪರ್ವತದೊಳಿರ್ದು ಮಂದರಾದ್ರಿ
ಯಂತಚಳಿತನಾಗಿ ನಿಂದಿರ್ದ ಸೋಮದತ್ತಮುನಿಯುಂ ಕಂಡು ಸಾರೆ
ವಂದು ನಂಟರೆಲ್ಲಮಿಂತೆಂದರ್ ॥ ೬೫

ಪಡೆಯಬಾರದ ದಿವ್ಯೆಮಪ್ಪ ಧರಾಮರತ್ವಮನೆಂಮೆ ನೀಂ
ಪಡೆದು ಮೆತ್ತದನೊಲ್ಲದಿಲ್ಲಿಗೆವಂದು ಗಾವಿಲನಾಗಿ ಚಿಃ
ಕಿಡಿಸಿ ಚಾರುಚರಿತ್ರಮುಂ ತೊಱೆದೆಮ್ಮನಾಱಡಿಗೊಂಡು ಕೈ
ಮಡಗದೇಳದರಂತೆ ಳಮ್ಮನೆ ಪೊರ್ದಿದೈ ಜಿನದೀಕ್ಷೆಯುಂ] ॥ ೬೬

ಸುಬ್ರಾಹ್ಮಣನಾಗಿರ್ದುಂ
ಸುಬ್ರಾಹ್ಮಣರಿಂದೆ ಪೊಗಟೆಪಟ್ಟುಂ ಮತ್ತಂ ।
ಸುಬ್ರಾಹ್ಮಣತ್ವಮೆಂ ನೀಂ
ನಿರ್ಬ್ರಹ್ಮಂ ಕಿಡಿಸಿ ಸವೆಣನಾದೈ ಮರುಳೇ ॥ ೬೭

[ನಿನ್ನೊೀದಿನಿಮಿವರೋದುಗ
ಳುನ್ನತಮೆಂದಿವೆರ್ಗೆ ಸೋಲ್ತು ಪೊರ್ದಿದೆಯೋ ಮೇಣ ।
ನಿನ್ನ ಕುಲಕ್ಕಿವರನ್ವಯ
ವಿನ್ನಧಿಕಂ ದಿವ್ಯೆಮೆಂದು ಮೇಣೊಪ್ಪಿರ್ದಿದೆಯೋ ॥ ೬೮

ಕೆಮ್ಮನೆ ಸವೆಣರ ಗೋರಿಗೆ
ನೀಂ ಮತಿಗೆಟ್ಟಱಿತವಿಲ್ಲದರಿವರೊಳಿನಿಸುಂ ।
ಸಮ್ಮತವಿಲ್ಲದೆ ಮರುಳಂ
ತಮ್ಮ ಪರತ್ರೆಯನೆ ಕಿಡಿಸಿಕೊಂಡ್ಯೆ ಕಂದಾ ॥ ೬೯

ಮತ್ತಂ ಜಗದೋದಿಂಗಂ ನಿನ್ನನ್ನರಿಲ್ಲ; ಸಕಳಶಾಸ್ತ್ರಪಾರಗನೈ ಸಮಸ್ತಕಳಾಧರನೈ ನೃಪಪೂಜಿತನೈ ಧರಾಮರಾರಾಧ್ಯನೈ ನೀತಿಸರಿಣತನೈ ಶ್ರುತಿಸ್ಮೃತಿಗಳೊಳತಿಜಾಣನೈ ಕೆಮ್ಮನಪ್ಪೊಡಂ ವಿಚಾರಿಸದವಿಚಾರಿಯಾಗಿ ನೀರುವುಂ ನೇಣುವುಂ ತೊಟ್ಟೆದು ಕುಲಮುಂ ನೀರೊಳಗರ್ದಿನಂಟರಿಷ್ಟರಿಂದಂ ಚಿಃ ಎನಿಸಿ ಪರತ್ರೆಯಂ ಕಿಡಿಸಿ ವೇದಾಳಿಪ್ರಾಯುಮೆನುದಾಸೀನಂಮಾಡಿ ಜಿನರೂಪಧಾರಿಯಾದೈ ಯೆಂದು ನಂಟರೆಲ್ಲಂ ನುಡಿದು ಕಾಲವೆಲೆ ಬಿದ್ದಿಂತೆಂದರ್] [1] ॥ ೭೦

ಬಿಡುವುದು ನೀನೀತಪಮಂ
ಕಿಡಿಸದೆ ಸದ್ಬ್ರಾಹ್ಮಣತ್ವಮಂ ಪೆಱತೊಂದಂ।
ನುಡಿಯದೆ ತಡೆಯದೆ ನೀನೆ
ನ್ನೊಡಪರ್ದು ಪುರವರಕ್ಕೆ ವಿಪ್ರಕುಲಾಕರ್ಷಂ ॥ ೭೧

[ಮುನ್ನ ವೇಸೆಂದಱಿಯದೆ ಸವಣರ ಗೂಳಿಗೊಳಗಾಗಿ ಜಿನನ ರೂಪಂ ಧರಿಯಿಸಿದ್ದೆ; ನೀನೆನ್ನ ಬಂಧುಗಳುಂ ಬ್ರಾಹ್ಮಣರುಂ ಕೈಕೊಳರೆಂದು ಲಜ್ಜಿತನಾಗಿ ಬಡತ್ವದಿಂದಿವೇಡಿಲ್ಲಿಗೆ ತಕ್ಕ ಪ್ರಾಯಶ್ಚಿತ್ತಮುಂ ಹೋವುದಿಗಳುಂ ಮಾಡಿಕೊಳಲಪ್ಪುದು, ನೀಂ ಮಹಾಶ್ರೀಯುಮುಂ ವೃತ್ತಿಯುಮುಂ ಪೆಂಡಿರ್ ಮಕ್ಕಳುಮುಂ ಬಂಧುಗಳುಮುಂ ಕಿಡಿಸದೆ ಬನ್ನಿಮೆನೆ ಸೋಮದತ್ತಋಷಿ ತನ್ನಂತರಂಗದೊಳಿಂತೆಂದಂ ॥ ೭೨

ಜಿನವಚನಾಮೃತಮಂ ಬಿ
ಟ್ಟನದಿಂ ಮಿಥ್ಯಾತ್ವದೊದವಿಸಿಂದಿನ್ನೆವರಂ।
ಮನದೊಳ್ ಭಾವಿಸಲೊಲ್ಲದೆ
ಕುನಯಾಳಿಪ್ರಾಯದೊಂದುರುಚಿಯಿಂ ಕೆಟ್ಟೆಂ] ॥ ೭೩

ಜಿನವಚನಮುಮಂ ಮತ್ತಿನ
ಕುನಯಂಗಳುಮಂ ಸಮಾನಮೆಂಬುದೆ ಕೇಳ।

---

[1] ಮಂದರದಂತಚಲಿತಧೈರ್ಯನಾಗಿರ್ದ ವಾತ್ಸಲ್ಯರತ್ನಾಕರನ ಸಾರ್ದ್ರವಂದು ಸುತ್ತಿ ಮಾತ್ತಿ ನಿಂದು (ಗ)

ಕರ್ನ ಬೆಳಗಿನೊಳ್ ಸಮಾನಮಿ
ದೆನಲಕ್ಕುಮೆ ಪಕ್ಷದಿಂದೆ ವಿಂಬುಳ್ಗಳನೆಂ ॥ ೭೪

[ತನಗಿಲ್ಲದ ಬತಸೂಳ್ ಬೊಜುಗನ ಸಾವೆ ಪೆಂಪಿಗಸಗವೆಂ
ಬಯ್ದುಳಂಬಂತೆ ಜಿನಾಗಮದುತುಗೆಗೆ ವೆಯ್ಯಾಲಿದೆ ಕುಬುದಿಗಳುಂ
ಸೋಂಬರುಂ ಸಪ್ತವ್ಯಸನಾಪೇಕ್ಷಿತರುಂ ಪರಸ್ತ್ರೀಯರುಂ ಹಿಂಸಾ
ನಂದರುಂ ಧೂರ್ತಾಳಾಪರುಂ ಜಿನಧರ್ಮಂ ಪೊಲ್ಲನೆಂಬವರು ಪ್ರಮಾ
ಣಮೆಲ್ಲದು ॥ ೭೫

ಕೊಲಲಾಗೆಂಬ ಜಡತ್ವದಿಂ ಪುಸಿಯಲಾಗಿನ್ನೆಂಬ ಚಾಪಲ್ಯದಿಂ
ಕಳಲಾಗೆಂಬ ಪರಾಂಗನಾವ್ಯಸನಮೆಂ ಪೋಣೆಂಬ ಲೋಭತ್ವದಿಂ
ದಿಳಯೊಳ್ ಸಂದ ಪರಿಗ್ರಹಕ್ಕೆಱಗಲಿನ್ನಾಗೆಂಬ ಜೈನೋಕ್ತಿಗಳ್
ಸಲೆ ಲೇಸಲ್ಲದೆ ಪೊಲ್ಲನೀ ಕುಮತಿಗಳ್ ಕಾವೆಂತಿವಂ ದೂಷಿಪರ್ ॥ ೭೬

ಅಗ್ಗಾಯತಿಯಪ್ಪ ಸೂಳಗಂ ಕುಡಲಿಲ್ಲದೆ ಬತಬೊಜಂಗಂ
ಪಱುದು ಸಾಮಾನ್ಯದ ಭೇದವಾರಿಗಳಂ ಪೊಗಟ್ಟಿಂತ ಮಹಾಪರೀಷಹ
ದೊಳ್ಮುಡಿ ಸುವ್ರತಂಗಳನೊಡೆಯು ಜೈನಮಾರ್ಗಮುಮಂ ದುಷ್ಪ್ರಚ
ಪ್ಪವರ್ ಕೈಕೊಳಲಾಱಿದೆ ಸೆಡೆಯು ಪಱುವು ತಮ್ಮಿಚ್ಛೆಗೆ ಬರ್ಪ
ಅಧರ್ಮಂಗಳಂ ಮಹಾಧರ್ಮಮೆಂದು ಕೈಕೊಂತು ಪೊಗಱ್ವಿರಿದು
ಚೋದ್ಯಮೆಲ್ಲಿಂದುಸಿರದಿರ್ಪುದುಂ ಯಜ್ಞದತ್ತೆ ಬಂದು ಕಾಲಮೇಲೆ
ಬಿರ್ದಿಂತೆಂದಳ್ [1] ॥ ೭೭

---

1 ಈ ಸಂದರ್ಭದಲ್ಲಿ (ಗ) ಪುಸ್ತಕವಲ್ಲಿ ಮುಂದಿನ ಭಾಗವು ಹೆಚ್ಚಾಗಿದೆ: —
ಸಿರಿಬಿರಿದು ಸಿರಿಗೆ ತಕ್ಕಂತಿರಲಾನುಂ ಕೂರ್ಪೆನ್ನ ಕೂರ್ಮೆಗೆ ತಕ್ಕಂ ।
ತಿರೆ ನಿಮಗಮೆನಗಮಿಾಗಳೆ ತರುಣತ್ವಂ ಮುರುಳೆ ನಿನ್ನೊಳವಧರಿಸಿತಂ ॥ ೧
ಎನಗಂ ನನಗಂ ಮೊದಲೀತನೆ ಪುತ್ರಂ ಪ್ರಾಯಮುಮಪ್ಪೊಡೆಳೆದಿಂನುಂ ಕೆಂ ।
ಮನೆ ಕಾಮಸುಖಮನಳಿನೇಕೆ ನಿತಾಂತಂ ಬಂದ ಸುಖಮನೊಲೆಯೆಳಗಿಕುಮೈ ॥ ೨
ಪೆಂಡಿರ ಕೂರ್ಮೆಯಿನಾವಂ ಕಂಡುಂ ಪಡೆಯಲ್ಕೆ ಬಾರದೆನ್ನೊಲವಂ ನೀಂ ।
ಕಂಡುಂ ಭೋಗಿಸಲೊಲ್ಲದೆ ದಂಡಿಸುವೈ ತಪದೊಳಿಗ್ಗರಾರ್ ನಿನ್ನಿಂದಂ ॥ ೩
ಬಡವರ್ ಮೊದಲಾಗಿರೆ ಕೈವಿಡಿದಾಕೆಯನಾಪತಿಯಿದೊಳಂ ಪೊರವರ್ ಪೊ ।
ನ್ನೊಡೆಯನೆಯಾಗಿಯು ನೀ ಕೈವಿಡಿದೆನ್ನಂ ಬಿಟ್ಟು ಪೋಪುದಾವುದುಧರ್ಮಂ ॥ ೪

ಎನ್ನಂ ಕಿಡಿಸದೆ ಪಿರಿದ
ಪ್ಪುನ್ನತಿಯಂ ಕಿಡಿಸದಿನ್ನು ಮೇನಾದುದು ವಿ ।
ಪ್ರೋನ್ನತ ಬಿಸುಡೀತಪಮಂ
ನಿನ್ನಂ ಪೆಱರಿಂದೆ ನಗಿಸಿಕೊಳ್ಳದೆ ಬೇಗಂ ॥ ೨೪

ನೀನಪ್ಪೊಡೆ ವಿಪ್ರಸಮೂ
ಹಾನತನೈ ವಿಪ್ರವಂಶಕೇಖರನೈ ವಿ ।
ದ್ಯಾನಿಧಿಯೈ ನಿನಗಲ್ಲದ
ಹೀನತೆಯಂ ಮಾಡಿ ನಗಿಸಿದ್ಯೈ ಪರರಿಂದಂ ॥ ೨೫

ಆರುಮಿಲ್ಲದ ದೇಸಿಗರಂತೆ ಕಾಡಂ ಪೊಕ್ಕು, ಕೂಲ್ಪಿಡೆಯದ ತಿರಿಕರಂತೆ ಗಿಡಿಗಿಡಿಜಂತ್ರಮಾಗಿ, ತರುವಲಿಗಳಂತೆ ಸಿರಿಯಂ ಬಿಟ್ಟು ಪಂದಿಯಂತೆ ಕೆಸಱಿನೊಟ್ಟಕೊಂಡು, ಬೆಂದ ಕಗ್ಗೊರಡಿನಂತೆ ಬಿಸಿಲೊಳ್ ನಿಂದು, ಕಡಂಬಡೆಯದ ಬಡವನಂತೆ ಪಸಿದು ಪಟ್ಟು, ಬಱಿದಿದೇ ಕೊಡಲಂ ತಪಿಸಿ ಗಾವಿಲನಾದಪ್ಪೆಯೆಂದು ನಾನಾಪ್ರಕಾರದಿಂ ತನುವುಂ ಸಿರಿಯುಮಂ ಸಂಪತ್ತುಮಂ ಭೋಗಮುಮೆಂ ತೋಱಿ ನುಡಿಯಿಸಲಾ ಅದೆಯಜ್ಞ ದತ್ತೆ ವೆಲ್ಲನೊಳಸೋದರ್ಯನಿರದಿಪ್ರದುಂ ಸೋಮದತ್ತಮುನಿ ತನ್ನೊಳಿಂತೆಂದಂ :— ಓಲಗಂ ಲೇಸು ಕಾಳಗಮಱಿದೆಂಬಂತೆ, ಮೆದುವೆ ಲೇಸು ಪೊರೆವುದರಿದೆಂಬಂತೆ, ಮೌನ್ಯಂ ಲೇಸು ಮುಂದಣ ಮೌನ್ಯದೆಱಿ ಅರಿಯುದೆಂಬಂತೆ, ಪಾದರಂ ಲೇಸು ಸಾವುದರಿದೆಂಬಂತೆ, ಪೂಣ್ಕೆ ಲೇಸು

ಅರಸನ ಕೂರ್ಮೆ ಪೆಂಡಿರೊಲವಗ್ಗದ ಲಕ್ಷ್ಮಿ ವಿಶೇಷವಿದ್ಯೆ ನಂ
ಟರ ಬಲವೊಪ್ಪುವುನ್ನತಿಮಹಾಪರಿದೆಯ್ದಿದಜನ್ಮನಂ ನಿರಾ
ತರಸುಖಮೆಂಬಿವಂ ಪಡೆದು ಮೆಚ್ಚಿದ ಲೀಲೆಗಳಂ ಸವಿಸ್ತರಂ
ಬರಿಯಿಸಲೊಲ್ಲದೀಸವಣವಾರಿಗೆ ಬಿಳ್ವುದು ಸೌಖ್ಯ ಹೇತುವೇ ॥ ೪

ಎಂಬುದು ಯಜ್ಞದತ್ತೆಯು ಮಾತಿಂಗೆ ಸೋಮದತ್ತ ಮುನಿಪುಂಗವಂ ತನ್ನಂ ತರ್ಗತದೊಳೆಂತೆಂದಂ ॥ ೫

ಮೇಲಣ ಸುಖದುಃಖಂಗಳ ನಾಳೋಚಿಸಿ ನೋಡಲೊಲ್ಲರಿಲ್ಲಿಯು ಸುಖಮಂ ।
ಪಾಳಿಸಲೆವುಬ್ಬುಗುತಿರ್ಪರ್ಬೇಳ್ಲದೆ ಜವನದಾಳಿಗಿದು ಬಲ್ಲಿತ್ತೇ ॥ ೬

ಓಲಗಂ ಲೇಸು .....

ಮೊಟವರಿದೆಂಬಂತೆ, ಬೇಟಂ ಲೇಸು ಕುಡುವುದರಿದೆಂಬಂತೆ, [ತೋಟಿ ಲೇಸು ದಂಡವರಿದೆಂಬಂತೆ, ಬೀಯಂ ಲೇಸು ಪಡೆವುದರಿದೆಂಬಂತೆ, ಬಲ್ಪು ಲೇಸು ಗೆಲವರಿದೆಂಬಂತೆ, ಬಿಗುಪು ಲೇಸು ಕಳನವೀಗರಿದೆಂಬಂತೆ, ಆಳವು ಲೇಸು ಶೂಲವೆರಿದೆಂಬಂತೆ, ತೊನೆಪಂ ಲೇಸು ಸಖಿಗೆಯರಿದೆಂ ಬಂತೆ,] ಕೃಷಿ ಲೇಸು ತೆಱುವುದರಿದೆಂಬಂತೆ, ಸೂಱೆ ಲೇಸು ಪೊಱೆ ಯರಿದೆಂಬಂತೆ, ಪ್ರತಾಪಂ ಲೇಸು ನಿತ್ತರಿಸಲರಿದೆಂಬಂತೆ, [ಕೊಲೆ ಲೇಸು ಕಾವುದರಿದೆಂಬಂತೆ,] ಸಂಸಾರದ ಸುಖಂ ಲೇಸು ವೀಗಣ ನರಕ ದುಃಖಂಗಳರಿಯವು ಅದುಕಾರಣದಿಂ [1] ॥ ೮೦

ಜಿನಪದದ್ವಯಸೇವೆಯಿಂ ಭುವನತ್ರಯಾಧಿಪತಿತ್ವಮುಂ
ತನಗೆ ತಾನೆ ಮಹೋತ್ಸವಂಬೆರಸೊಪ್ಪದಿಂ ದೊರೆಕೊಳ್ಗುಮೊ
ಯ್ಯನೆ ಮನೋಮುದದಿಂದವೆಂದೊಡೆ ದೇವಲೋಕಪತಿತ್ವಮುಂ
ಮನುಜರಾಜ್ಯವಿಭೂತಿಯುಂ ದೊರೆಕೊಳ್ವುದಾವುದು ವಿಸ್ಮಯಂ [2] ॥೮೧

ತನಗೆ ಹಿತಮೆಪ್ಪುದಂ ಪೇ
ಳ್ವನ ಮಾತಂ ಚಿತ್ತಮಿತ್ತು ನೆಱೆ ಕೇಳ್ವುದು ಕೆಂ ।
ಮನೆ ನರಕಹೇತುವಂ ನುಡಿ
ವನ ಮಾತಂ ಕೇಳದುಸಿರದಿರ್ಪುದು ಚದುರಂ ॥ ೮೨

---

1 ಅದು ಕಾರಣದಿಂದಳಿಸುಖಕ್ಕೆ ಱಗದೆಂದು ಭಾವಿಸಿ ವೋನದಿನಿರೆ ಯಜ್ಞದತ್ತೆ ಬೀಸತ್ತಗಲಿಪೋಪುದುಂ ತಾಯುಂ ತಂದೆಯುಂ ಮಾವನುಮತ್ತೆಯುಂ ಬಂದಿಂತೆಂದರ್ (ಗ)

2 ತಪಂಬಟ್ಟೆನೆನ್ನಂ ಸಬ್ರಾಹ್ಮಣಕ್ಕೈಕೊಳ್ಳರೆಂದು ಲಜ್ಜೆತನಾಗಿರಲ್ವೆಡ ಪ್ರಾಯಶ್ಚಿತ್ತದಿಂ ಹೋಗುವಾದಿಗಳಿಂ ಮಾಡಿಕೊಳಲಪ್ಪುದೆಂಬುದುಂ ಸೋಮದತ್ತಂ ತನ್ನೊಳಿಂತೆಂದಂ :—

ಕಾಯಮುಮುಂ ಧನಮುಮನಿನಿಸಾಯಾಸಂಬಡದೆ ತಪದೊಳಂ ದಾನದೊಳಂ ।
ಬಾಯಳಿಯದೆ ತವಿಪ್ರದು ತಾಂ ಪ್ರಾಯಶ್ಚಿತ್ತಂ ವಿವೇಕವುಳ್ಳರ ಚಿತ್ತಂ ॥
ಮಿಗಿಲೆನಿಸುವ ತಪವೆಂಬುಗ್ಗಿಗೆ ತನ್ನೊಡಲೆಂಬ ದಿವ್ಯಕವಿಯಂ ಕುಡುವಾ ।
ಪ್ರ್ವಗಿಡದೆಹೋವುಸಜ್ಜನರಗಲದೆ ಕೈಕೊಂಡು ನಲಿವ ಕೀರ್ತಿಯ ದಾಮಂ (ಗ)

ಮುತ್ತು ಸಮುದ್ರದೊಳ್ ನೀರ್ಮುಗಿಲೊಳ್ ಮಣ್ ಭೂಮಿಯೊಳ್ ತೈಲಮೆಳ್ಳೊಳ್ ತುಪ್ಪಂ ಪಾಲೊಳ್ ಮಕ್ಕಳ್ವನಿತೆಯರೊಳ್ ಪಾಲ್ ಕೆಚ್ಚಲೊಳ್ ತಣಿಪು ಊಟದೊಳ್ ನೀರೆ ನೂಲೊಳ್ ಪಗಲ್ ಸೂರ್ಯನೊಳ್ ತಣ್ಪು ಗಾಳಿಯೊಳ್ ಬೆಂಕಿ ಕಿಚ್ಚಿನೊಳ್ ಕಾಣ್ಕೆ ಕಣ್ಣೊಳ್ ಸಿರಿ ಪೊನ್ನೊಳ್ ಬಲಂ ಜವ್ವನದೊಳ್ ಪಡಪು ಸೌಭಾಗ್ಯದೊಳ್ ರಾಗಂ ಸಂತೋಷದೊಳ್ ಮದುವೆ ಕೊಡುಗೂಸಿನೊಳ್ ಪುಟ್ಟುವಂತೆ ಸ್ವರ್ಗ ವೋಹ್ಷಂಗಳುಂ ಕುಡುವ ಗುಣಂಗಳುಂ ಸದಾಚಾರಮುಂ ಮಹಾವ್ರತಂಗಳುಂ ಜಿನಮತದೊಳ್ ಪುಟ್ಟುಗುಮಲ್ಲದೆ ಪಿಱವು ಕುಮತಂಗಳೊಳ್ ಪುಟ್ಟವು [ಅದಱಿಂದಜ್ಞಾನಿಗಳ ಮಾತನಾಲಿಸಲಾಗದು ॥ ೪೩

ಎನಿತೊಳ್ಳಿತಾದೊಡಂ ಕಾ
ಜಿನ ಮಣಿಗಳ್ ಪೊನ್ನ ತೊಡವೆನಿಱುಕೆಯ್ದುವು ತಾ ।
ನೆನಿತೊಳ್ಳಿತಾದೊಡಂ ಮು
ತ್ತಿನ ನುಡಿಗಳ್ ಜೈನನುಡಿಗಳಂ ಪೋಲ್ತಪುವೇ] ॥ ೪೪

ಜಿನವಚನಮೆನಱಿಯದೆ ಕೆ
ಮ್ಮನೆ ಪಱುವೆರ್ದುರ್ಜನರ್ದುರಾಚಾರರ್ ಸ ।
ಜ್ಜಿನವಚನವನಱಿವೊಡೆ ಮೇ
ದಿನಿಯೊಳ್ ಸನ್ಮತಿಗಳಪ್ಪವರ್ಪಱುದಪರೇ ॥ ೪೫

ಉಱುವ ಜಿನಮತಮನೇನೆಂ
ದಱಿಯದೆ ಮುಂ ಕೆಟ್ಟ ಕೇಡೆ ಸಾಲ್ಗುಂ ಮತ್ತಿ ।
ನ್ನಱಿದು ಮತಿಗೆಟ್ಟು ಬಿಟ್ಟೊಡೆ
ಮಱುಕಂ ಕೈಸಾರ್ಗುಮುಗ್ರಸಂಸೃತಿವನದೊಳ್ ॥ ೪೬
ಎಂದುಸಿರದಿಪ್ಪುದುಂ [ನಂಟರೆಲ್ಲಂ] ಮುನಿದು ॥ ೪೭

ನಡೆ ನಡೆ ಡೊಂಬು ವೇಡ ನಿನಗೇಕೆ ತಪಸ್ಸಿನ ಕುತ್ತಮೆಂದು ನೀ
ರ್ಪಡೆ ಜಡಿದಟ್ಟಿ ಬೈದು ಬಿಸುಸುಯ್ದಿಲೆ ಗಾಂಪ ಸಮಸ್ತನಂಟರಂ

ಮಡದಿಯನಿಪ್ಪರಂ ಕಿಡಿಸಿ ದುರ್ಗತಿವ್ರೋಗದೆ ಬಪ್ಪುದೆಂದು ನಿ
ಗ್ಗಿಡಿತನದಿಂ ಸಬಾಂಧವಜನಂ ತೆಗೆದಪ್ಪಿದರಾಮುನೀಂದ್ರನಂ ॥ ೪೪

[ಅಂತು ನಿಷ್ಕರಕೋಪದಿಂ ಕೈಯುಮಂ ಕಾಲುಮಂ ನಡು
ವುಮಂ ಪತ್ತಿ ತೆಗೆವುದುಂ ಸೋಮದತ್ತಮುನಿನಾಥನಿಂತೆಂದು ಮನ
ದೊಳ್ ಭಾವಿಸಿದಂ ॥ ೪೫

ಗುರುದತ್ತಮುನೀಶ್ವರನಂ
ಕರಮೆಲ್ಲದೆ ಮುನಿದು ಸೂಡಿ ಪೊತ್ತಿಸಿ ಸುಟ್ಟಂ ।
ಭರದಿಂ ಮಳಮುಖನೆಂದೊಡೆ
ಕರಮುಗ್ರಮ್ಮುಳಿಸುಬಂದರೇನಂ ಮಾಡರ್ ॥ ೪೦

ಬಂಡಿಯುಂ ತೀವಿದ ಜೋಳಮುಂ ತೆಗೆವೆ ಕೋಣಂ ವೊರಂ
ತೀವಿದ ಧಾನ್ಯಮುಂ ತೆಗೆಯಲಾಱದೆ ? ನರಕದೊಳನಿತಾನುಂ ಕಾಲಂ ನಮೆ
ವಂತಪ್ಪ ಮಹಾಪಾಪಮನುಪಾರ್ಜಿಸುವಂತಪ್ಪ ಪಾಪಕರ್ಮನಗುಪಸರ್ಗಂ
ಮಾಡಿದರೆಂಬುದಿದಾವವಿಸ್ಮಯವೆಂದು ಮನದೊಳ್ ಮುನ್ನಂ ಮಹೋ
ಪಸರ್ಗಂಗಳಂ ಸೈರಿಸಿ ದಿವ್ಯಸುಖಂಗಳಂ ಪಡೆದ ಮಹಾಪುರುಷರ ಕಥೆ
ಗಳಂ ಚಿಂತಿಸುತ್ತುಂ ಮನುಷ್ಯೋಪಸರ್ಗಮಿದು ಪಿಂಗುವಿನಮೊಹಾರ
ಶರೀರನಿವೃತ್ತಿಯೆಂದಿರ್ದನನ್ನೆಗಂ ಸಗೋತ್ರರೆಲ್ಲಂ ತೆಗೆದು ತೆಗೆಯಲಾಱದೆ
ಬೇಸತ್ತು ಪಿಂಗಿ ಸೋಮದತ್ತಮುನಿಯುಂ ಬಳಸಿಕೊಂಡಿರ್ದಿಂತೆಂದರ್]॥

ಎಲೆ ಪಾತಕ ನೀನೀಕುಲ
ಲನೆಯರಂ ಜ್ಯೇಷ್ಠ ಸುತನುಮಂ ಬಿಸುಟು ತಪ ।
ಕ್ಕೆಳಸಿರ್ದೊಡಮಿಾತಪದೊಳ್
ಫಲಮುಂಟೇ ಪುಣ್ಯಮುಂಟೆ ಪೇಟ್ ಗತಿಯುಂಟೇ ॥ ೪೮

[ಬತ್ತಲಿಗರ ಮಾತಂ ಕೇ
ಳ್ದುತ್ತಮಮೆನಿಸಿರ್ದ ಕುಲಮನಳಿದೈ ನಿನಗಿ ।
ನ್ನೆತ್ತಣ ಪರತ್ರೆ ನೀನುಂ
ಸತ್ತೊಡಮಿಾಕಷ್ಟವೃತ್ತಿಯುಂ ನೀಗಿದಪಾ ॥ ೪೯

ಎಂದು ಬಾಯ್ ವಂದಂತೆ ನುಡಿವುದುಂ] ವಾತ್ಸಲ್ಯರತ್ನಾಕರಂ ಆವರ ಮೊತಿಂಗೆ ನಕ್ಕು ಕೇಱಿ ಚಿತ್ರದಂತೆ, ಬಸುಱಿಯ ಪಣ್ಣಂತೆ, ಕತ್ತೆಯ ಲದ್ದಿಯಂತೆ, [ಕಳ್ಳನ ನನ್ನಿಯಂತೆ,] ಪಱಿಣಿಯ [1] ಶೋಭೆಯಂತೆ, ಪಾವುವೆಕ್ಕೆಯ ಕಂಪಿನಂತೆ, ತಿಪ್ಪೆಯ ನೀರಂತೆ, ಬಡವನ ಮಹಿಮೆಯಂತೆ, ಪಗರಣದಾನೆಯಂತೆ, ರಂಗವಲಿಯ ಪಿಟ್ಟಿನಂತೆ, ಪಂದೆಯ ವಾತಿನಂತೆ, ಡೊಂಬರ ತೋಟಿಯಂತೆ, ದೂರದ ಬೆಟ್ಟಿನಂತೆ, ಮೊಟದ ಮುಡಿಯಂತೆ, ಕಟ್ಟಿದ ಪಲ್ಲಂತೆ, ಪೀಲಿಯ ಕಣ್ಣಂತೆ, ಬಟ್ಟೆಯ ಪುಲ್ಲಂತೆ, ತಾಳಕಯ್ಯಂತೆ, [2] ಮೆರುಳ ಕೊಡಿನಂತೆ, ಪೊಱಗಣ್ಗೆ ರಂಜಿಸುವ ಬಹಿರಾಳಾಪದ ಡೊಂಬನೊಲ್ಲದೆ, ಮಾಸಿದ ಹೇಮ ಕುಂಭದಂತೆ, ಸಾಧಕನ ಮೆರುಳಾಟದಂತೆ, ವೀರನಂಜವೆಯಂತೆ, ತೆಂಗಿನ ಕಾಯಂತೆ, ಕೇದಗೆಯ ಪುಷ್ಪದಂತೆ, ಬಾಱೆಯ ಪಣ್ಣಂತೆ, ಕೂರ್ಪರೊಲ್ಲವೆಯಂತೆ, ನಿದಿಗಂಡ ಬಡವನಂತೆ, ಬೂದಿ ಪತ್ತಿದ ಕೆಂಡದಂತೆ, ಮಲವೇಱಿದ ರಕ್ತದಂತೆ, ಸೊಬಗಿಯ ಗಾಂಪಿನಂತೆ, ನುಡಿ ಜಾಣನ ವೋನದಂತೆ, ಬಲ್ಲಿದನ ನೋಟದಂತೆ, ಸಮುದ್ರದ ಕಯ್ಪೆಯಂತೆ, ತೋಂಟದ ಬೇಲಿಯಂತೆ, ತುಪ್ಪದ ಕೊಡದಂತೆ, ನಿಶ್ಚಯ ಕ್ಕೊಳಗೆ ಕಡುಲೇಸಪ್ಪ ಸನ್ಮಾರ್ಗಮಂ ಬಿಟ್ಟು ನರಕದೊಳ್ ತಿಱ್ಱನೆ ತಿರಿವಂತಪ್ಪ ಪಾಪಮಂ ನೆರೆಪಿದ ಮಾನಿಸರಂ ಕೈಕೊಳರೆಂದು [ಜಿನ ಮಾರ್ಗಮಂ ಬಿಡುವುದು ಕಜ್ಜಮಲ್ಲದೆಂದು] [3] ಜಿನಾಗಮೋಕ್ತಿಗಳಂ ಭಾವಿಸುತಿರ್ದನನ್ನೆಗಂ ಬಂಧುಗಳುಂ ಯಜ್ಞದತ್ತೆಯುಂ ಮುಸುಗಿ ಕೂಸಂ ಸೋಮದತ್ತಮುನಿಯ ಮುಂದಿಕ್ಕಿ ಬ್ರಹ್ಮೇತಿಯಾಗೆ ಪೊಬಲೊಳಗೆ ಪ್ರಯ್ಯಲಿಟ್ಟು ಬಂದು ಸಾವಮೆಂದು ಪೂಣ್ದು ಪರ್ವತದಿಂದಿಳದು ಸೌಪಾಳಪುರಕ್ಕೆ ಪೋದರಿತ್ತಲ್ ಬಾಲಕಂ ಸೋಮದತ್ತಮುನಿಯ ಪಾದಮಂ ವೋಹ್ಹಬಟ್ಟೆಯಂ ನೋಡುವೆಂತೆ ಮುನಿಯ ಮೊಗಮಂ

---

1 ಪುರುಣಿಯ (ಕ) ಪರುಣಿಯು (ಬ) 2 ತಾಳಕಾಯಂತೆ (ಕ. ಬ.)

3 ಎಂದು ಮುಂದರದಂತಿರ್ದರುಂ, ಎಲ್ಲರುಂ ಬೇಸತ್ತು ಕೂಸನವರ ಮುಂದಿಕ್ಕಿ ನಿನಗೆ ಬ್ರಹ್ಮೇತಿಯಾಗಿ ಪುರದೊಳಗೆ ಪುಯ್ಯಲಿಟ್ಟು ಬಂದು ಸತ್ತಪೆನೆಂದು ನಾಳಿಗಿರಿಯ ಕೆಳಗಿರ್ದ ಸಿಂಹಪುರಕ್ಕೆ ಪೋದರನ್ನೆಗಮಿತ್ತಲ್ (ಗ)

ನೋಡುತ್ತುಂ ಮುಂದಪ್ಪ ವಿದ್ಯಾಧರರಾಜ್ಯಲಕ್ಷ್ಮಿಯ ಬರವಿಂಗೆ ರಾಗಿಸಿ ನಗುವೆಂತೆ ನಗುತಿರ್ದಸನ್ನೆಗಂ ॥ ೯೪

[ನೆಗೞ್ದ ಭರತಕ್ಷೇತ್ರದ
ಸೊಗಯಿಪ ವಿಜಯಾರ್ಧಗಿರಿಯ ತೆಂಕಣದೆಸೆಯೊಳ್ ।
ಮಿಗಿಲೆನಿಪುದು ನಾನಾಶೋ
ಭೆಗಳಿಂದಂ ನೆಱೆದ ದಕ್ಷಿಣಶ್ರೇಣಿ ಕರಂ ॥ ೯೫

ಆ ದಕ್ಷಿಣಶ್ರೇಣಿಯೊಳಮರಾವತಿಯೆಂಬುದು ಪುರಮುಂಟಾ ಪುರ ಮೆನಾಳ್ವಂ ವಿದ್ಯಾಧರರಾಜಂ ಶಂಭುವೆಂಬನಾತನ ಮಹಾದೇವಿ ಮಂ ಗಳೆಯೆಂಬಳಾಯಿರ್ವರ್ಗರ್ಗಂ ॥ ೯೬

ಸ್ಮರಸನ್ನಿಭನೆನಿಸುವ ಭಾ
ಸ್ಕರದೇವನುಮೆಮರರಾಜನಿಭನೆನಿಸುವ ಮಂ ।
ದರರಾಜದೇವನೆಂಬಿ
ರ್ವರುಂ ಸುವಿಕ್ರಮರುದಾತ್ತರಗ್ಗದ ತನಯರ್ ॥ ೯೭

ಸಿರಿಗಂ ಭಾರತಿಗಂ ಸೌಂ
ದರರೂಪಿಂಗೀಕೆ ಪಿರಿಯಳನಿಸುವ ರೂಪಿಂ ।
ಕರವೊಪ್ಪುವೆಳಂಬುಜಮುಖಿ
ತರಳಾಕ್ಷಿ ಸುದೇವಿಯೆಂಬಳವರಿಂ ಕಿಱಿಯಳ್ ॥ ೯೮

ಅಂತವರ್ಬರಸು ಶಂಭುವಿಯಚ್ಚರರಾಜಂ ಸುಖಸಂಕಥಾವಿನೋ ದದಿಂ ರಾಜ್ಯಂಗೆಯ್ಯುತ್ತುಂ ಸುದೇವಿಕಾಮೋರಿಯುಂ ಕನಕಪುರಾಧೀಶ್ವರ ನಪ್ಪ ವಿಮಳವಾಹನನೆಂಬ ಭೂಚರವಮಹೀವಲ್ಲಭಂಗೆ ಕೊಟ್ಟು ಪಿಡಿದ ಪ್ಪ ತಾಪ್ಸಾಹಂಬೆರಸು ಪಲಕಾಲಂ ವಿದ್ಯಾಧರಶ್ರೀಯನನುಭವಿಸಿ ಕಡೆಯೊಳ್ ಸಂಸಾರವೈರಾಗ್ಯಂ ಪುಟ್ಟಿ ಸುಗತಿಶ್ರೀಯೊಳ್ ಕೂಡುವೆನೆಂಬ ಬಗೆಯುಂ ತಂದು ಪಿರಿಯ ಮಗನಪ್ಪ ಭಾಸ್ಕರದೇವಂಗೆ ಯೌವರಾಜ್ಯಮುಮೆಂ ವಿದ್ಯೆಗಳುಮೆಂ ಕೊಟ್ಟು ॥ ೯೯

ಎಳಸದೆ ಮೈಸುಳಕ್ಕೆ ಪೆಱತೊಂದಱವೋಹಮೆನುಂಟುಮೊಡಿ ಸಂ
ಜಶಿಸಿ ವಿಭೂತಿಯುಂ ನೆನೆಯದೊರ್ಮೆಯೆ ಳಮ್ಮನೆ ರಾಜ್ಯಲಕ್ಷ್ಮಿಯುಂ
ಳೆಳಲನೆ ಬಿಟ್ಟು ಸುಪ್ರಭಸುಚರಣರಲ್ಲಿ ಜಿನೇಂದ್ರದೀಕ್ಷೆಯುಂ
ಕಲಿ ಪೆಱಪಿಂಗೆ ಮೈದೆಗೆಯದಣ್ಮಳವಟ್ಟರೆ ಕೊಂಡನರ್ತಿಯಿಂ ॥ ೧೦೦

ಅಂತು ನಿಶ್ಶಂಕೆಯಿಂ ಶಂಭು ಜಿನರೂಪಂ ಕೈಕೊಂಡು ತಪ
ದೊಳಿರ್ದನಿತ್ತಲ್ ಮುಂದರದೇವಂ ಸಮಸ್ತವಿದ್ಯಾಸಮನ್ವಿತನಪ್ಪುದಱಿಂ
ಪ್ರತಾಪದಿಂ ಭಾಸ್ಕರದೇವನನೋಡಿಸಿ ಖೇಚರರಾಜ್ಯಕ್ಕೆ ಮೊತ್ತಮೊದಲಿಗ
ನಾಗಿ ನೆಗಳ್ದಿ ಮರಾವತೀಪುರದೊಳಿರ್ದ ಭಾಸ್ಕರದೇವಂ ವಿದ್ಯಾಧರರರಾಜ್ಯಂ
ಪ್ರೋದದಕ್ಕೆ ಚಿಂತಾಕ್ರಾಂತನಾಗಿ ಮುಂದರದೇವಂಗಿದಿರ್ಲಣ್ಮದೆ
ತನ್ನಗ್ರಮಹಿಷಿದೇವಿ ಮಣಿಮೊಲೆ ಮೊದಲಾಗೊಡೆಯ ಪಲಂಬರರಸಿಯ
ರ್ವೆರಸು ಕನಕಪುರಕ್ಕೆವಂದು ತನ್ನ ಮೈದುನನಪ್ಪ ವಿಮಳಮಹಾ
ರಾಜನಂ ಪೊರ್ದಿರ್ದು ॥ ೧೦೧

ಧರ್ಮವಿಚಾರದೊಳಂ ಜಿನ
ಧರ್ಮಮೆ ಮಿಗಿಲೆಂದು ನಂಬಿ ಭಾಸ್ಕರದೇವಂ ।
ನಿರ್ಮಲಮೆನದಿಂದಂ ಸ
ದ್ಧರ್ಮಕಥಾಳಾಪದಿಂದನಿರ್ದೊಂದುದಿನಂ ॥ ೧೦೨

ಪರ್ವೋತ್ಪವಾಸಂಗೆಯ್ದು ಭರತಕ್ಷೇತ್ರದೊಳಾದ ಜಿನಭವನಂ
ಗಳುಮಂ ಮಹಾಮುನೀಂದ್ರರ್ಕಳುಮಂ ಬಂದಿಸಲುಂ ಪೂಜಿಸಲು
ಮೆಂದು ಮಣಿಮೊಲೆಯುಂ ತಾನುಂ ವಿಮಾನಾವರೂಢರಾಗಿ ಪೋಗಿ
ಸಮಸ್ತಚೈತ್ಯಾಲಯುಂಗಳಂ ಸಕಲಮುನಿವರರುಮಂ ವಂದಿಸಿ ನಾಭಿಗಿರಿ
ಯೊಳಿರ್ದ ಸೋಮದತ್ತಮುನಿಯುಂ ಬಂದಿಸಲೆಂದು ಬಂದು] [1] ॥ ೧೦೩

ದಿನಕೃನ್ಮಂಡಲಮುರ್ವಿಯೊಳ್ ನೆಲೆಸಿತೋ ಮೇಣ್ದೀವಸಂದೋಹಮಾ
ಮುನಿಯಂ ಪೊಂಗಳನೊಲ್ದು ಪೂಜಿಸಿದರೋ ಪಾತಾಳದಿಂ ನಿಲ್ಕಿಸ

1 ಭಾಸ್ಕರದೇವನೆಂಬ ವಿದ್ಯಾಧರಂ ತನ್ನ ವಲ್ಲಭೆ ಮಣಿಮಾಲೆವೆರಸು ಸೋಮ
ದತ್ತಭಟ್ಟಾರಕರಂ ವಂದಿಸಲು ಬರುತ್ತಂ ದೂರದೊಳಿರ್ದ ಕಿಱುವಂ ಕಂಡು (ಗ)

ಲ್ಮನಿಪಾಂಘ್ರಿದ್ವಯಮುಂ ಫಣೀಂದ್ರನೊಲವಿಂ ಸದ್ಭಕ್ತಿಯಿಂದೊಲ್ದು ನೆ
ಲ್ಲನೆ ಮೇಣ್ಪಾಳ್ವಿಸಿ ಕೂರ್ತು ನೋಡಿದಪನೋ ಪೇಳ್ಂಬತಿಭ್ರಾಂತಿಯುಂ ॥

[ಪುಟ್ಟಿಸಿ ತೊಳತೊಳಗುವ ಬಾಲಾರ್ಕನಂತಪ್ಪ ಶಿಶುವಂ ಕಂಡು ಸಂತೋಷಂಬಟ್ಟು ಸೋಮದತ್ತಮುನಿವೃಂದಾರಕನ ಪ್ರಸಾದದಿಂ ಸುಪುತ್ರಂ ದೊರೆಕೊಂಡನೆಂದು ಮುನಿಪತಿಯ ಚರಣಸರೋಜಾತಂಗಳಂ ಪೂಜಿಸಿ ಬಂದಿಸಿ ಮಗನಂ ನಿಧಾನಮನೆತ್ತುವಂತೆತ್ತಿಕೊಂಡು ನಿನಗೆ ಜಿನಧರ್ಮಪ್ರಸಾದದಿಂ ಸ್ಮರಸಮಾನನಪ್ಪ ಸುಪುತ್ರಂ ದೊರೆಕೊಂಡನೆಂದು ನಲ್ಲಳ ಕೈಯೊಳ್ ಕೊಟ್ಟು ಕನಕಪುರಕ್ಕೆ ಪೋಗಿ ಪೊಟಲೊಳಗಿರ್ದ ವಿಮಳವಾಹನಮಹಾರಾಜಂಗಂ ಸುದೇವಿಮಹಾದೇವಿಗಂ ಮಣಿಮೌಲಿಮಹಾದೇವಿ ಗೂಢಗರ್ಭದೊಳ್ ಮಗನಂ ಪಡೆದಳಂದು ಪೇಳ್ದಿಟ್ಟುವುದುಂ] [1] ॥ ೧೦೫

ಬಿರಿದಪ್ಪುತ್ಸಾಹದಿಂ ಬಂದಿದಿರ್ಗೊಳ್ ಪುರಮೆಂ ಪೊಕ್ಕು ಸಂತೋಷದಿಂ ಭಾ
ಸ್ಕರದೇವಂ ಕೂರ್ಮೆಯಿಂದಂ ಸುರಪತಿವಿಭವಂಗರ್ಕತೇಜಂಗೆ ಧಾತ್ರೀ
ಧರಧೈರ್ಯಂಗಂಗಜಾಲಂಕೃತವಿಮಳಪದಾಂಭೋಜಭೃಂಗಂಗೆ ಭವ್ಯಾಂ
ಬುಚಂದ್ರಂಗುಗ್ರವೈರಿದ್ವಿರದಹರಿಗೆ ಕೀರ್ತ್ಯಂಗನೇಶಂಗೆ ಪೆರ್ಚಿಂ ॥

ವಜ್ರಕುಮಾರನೆಂದು ಪೆಸರನಿಟ್ಟು [ಕೊಂಡಾಡಿ ನಡೆಪಿ ಬಚ್ಚಿಕ್ಕಮೆಯ್ದು ವರುಷದಂದು ಜೈನೋಪಾಧ್ಯಾಯರ ಸಮೀಪದೊಳೋದಿಗಿಡುವುದುಂ ಅಕ್ಷರಗಣಿತಗಾಂಧರ್ವಚಿತ್ರಕರ್ಮಪತ್ರಚ್ಛೇದಾದಿ ಸಪ್ತತಿಕಳೆಗಳೊಳಂ ಚತುಷ್ಷಷ್ಟಿಕಳಾಗುಣಂಗಳೊಳಂ ಪರಿಣತನಾಗಿ ಮುಂಬ

---

1 ನೋಡುತ್ತಂ ಬಂದು ಸುಕವಿನಿಕರಪಿಕವಸಂತನ ಪ್ರಸಾದದಿಂ ಬಾಲಾರ್ಕನಂತಪ್ಪ ಬಾಲಕನುಂ ದೊರೆಕೊಂಡನೆಂದು ಚಿನಚರಣಾಲಂಕಾರಕೀರ್ತನ ಚರಣಯುಗಳಮನರ್ಚಿಸಿ ವಂದಿಸಿ ಕೂಸನೆತ್ತಿಕೊಂಡು ಕನಕಪುರಕ್ಕೆ ಪೋಗಿ ತನ್ನ ಮೈದುನನಪ್ಪ ವಿಮಳವಾಹನಮಹಾರಾಜನುಂ ತನ್ನ ತಂಗಿ ಸುದೇವಿಯುಂ (ಗ)

2 ವಾತ್ಸಲ್ಯವಾರಾಸಿಗೊಪ್ಪಿಂ (ಕ. ಜ್ಞ)

ಗಲ ಸೂರ್ಯನಂತೆ ತೇಜಮುಂ ಪ್ರತಾಪಮುವೊಡನೆ ಬಳೆಯೆ, ಜವೆನ
ನಾಗಿ ಕುಲಜಾತಿಸಾಧಿತವಿದ್ಯೆಯೆಂಬ ಮೂಱುವಿದ್ಯೆಗಳೊಳಂ ಸಂಪೂರ್ಣ
ನಾಗಿ ಸುಖದಿಂದಿರ್ದುದುಂ ॥ ೧೦೭

ಸ್ಮರರೂಪನಂ ಜಿನೇಶ್ವರ
ಚರಣಾಂಭೋಜಾತಭೃಂಗನಂ ಜಿನಧರ್ಮಾಂ ।
ಬರಚಕ್ರಚಂದ್ರನಂ ಭಾ
ಸ್ಕರದೇವಂ ನೋಡೆ ತನ್ನ ಕಣ್ಣಿಂಗಿನಿಗಂ] [1] ॥ ೧೦೮

ಮಾವನುಮತ್ತೆಯುಮಬ್ಬೆಯು
ಮಾವಿಭುವಿನ ತೇಜಮುಂ ಪ್ರತಾಪಮನದಟಂ ।
ಭಾವಿಸಿ ನೋಡಿದರಾಗ ಮ
ಹಾವಿಭವದಿನಿರ್ದರೆರ್ದೆ ಕುಳಿಕೊರ್ದೀಡುವಿನಂ ॥ ೧೦೯

[ಅಂತು ಭಾಸ್ಕರದೇವನುಂ ಮಣಿಮಾಲಾಮಹಾದೇವಿಯುಂ ವಿಮ
ಳವಾಹನಮಹಾರಾಜನುಂ ಸುದೇವಿಯುಂ ವಜ್ರಕುಮಾರಂ ಮಾಡುವ
ಜಿನಪೂಜೆಯುಮೆನಾಹಾರಾಭಯಭೈಷಜ್ಯಶಾಸ್ತ್ರದಾನಮುಮುಂ ಚಾತು
ರ್ವರ್ಣ್ಯದೊಳಾದ ವಾತ್ಸಲ್ಯಮುಮುಂ ಕಣ್ಣಾರೆ ನೋಡುತುಂ ಮನವಾರೆ
ಬಣಿಸುತ್ತುಂ ವಾತ್ಸಲ್ಯವಾರಾಶಿಯ ಮಾತೆ ಮಾತಾಗಿ ಸಂತೋಷದಿಂದಿ
ರ್ದೊಂದು ದಿವಸಂ ಕುಮಾರಂಗೆ ಮದುವೆಯುಂ ಮಾಡಲೆಂದಾಲೋಚಿಸಿ
ಸುದೇವಿಯು ಮಗಳವಿಂದುಮತಿಯುಂ ಬೇಡಿ] [2] ॥ ೧೧೦

ಪಸುರ್ವಂದರ್ಪಸೆಯೆಂಬಿವೊಪ್ಪೆ ಖಚರಸ್ತ್ರೀಸಂಕುಳಂ ಪಾಡೆ ಸಂ
ತಸದಿಂ ಮಂಗಳಮಂ ವಿವಾಹಭವನಂ ಸದ್ರತ್ನದಿಂದೆಯ್ದೆ ರಂ

---

[1] ಕೊಂಡಾಡುತ್ತಿರೆ ದ್ವಾಸಪ್ತತಿಕಳೆಗಳೊಳಂ ಚತುಃಷಷ್ಟಿಕಳೆಗಳೊಳಂ ಪರಿಣತನಾಗಿಯುಂ ಮುಂಬಗಲ ಸೂರ್ಯನಂತೆ ಬೆಳೆವುದು ಭಾಸ್ಕರದೇವನುಂ (ಗ)
ಅಂತಿರ್ದುದುಂ ವಿಮಳವಾಹನಮಹಾರಾಜನ ಮಗಳಿಪ್ಪ ಇಂದುಮತಿಗಂ ವಜ್ರಕುಮಾರಂಗಂ ವಿವಾಹೋದ್ಯೋಗಮುವಾಗೆ (ಗ)

ಜಿಸೆ ತೂರ್ಯಧ್ವನಿ ಪೊಣ್ಮೆ ಕಟ್ಟಗುಡಿಯಂ ಪೌರರ್ ಮನಂಗೊಂಡು ರಾ
ಗಿಸೆ ಪುತ್ರಂಗೆ ವಿವಾಹಮಂ ಖಚರಲಕ್ಷ್ಮೀವಲ್ಲಭಂ ಮಾಡಿದಂ ॥ ೧೧೧

ಅಂತು [ಮೆದುವೆಯಂ] ಮಾಡುವುದುಂ ವಜ್ರಕುಮಾರನುಮಿಂ
ದುಮತಿಯುಂ ಪ್ರಾಣವಲ್ಲಭರಾಗಿ ಸುವಿಷಯಸುಖಮನನುಭವಿಸುತಿ
ರ್ಪೊಂದುದಿವಸಂ [ಮಣಿಕುಂಡಲಪ್ರಭೃತಿಕುಮಾರರ ತಂಡಂವೆರಸು
ವಾತ್ಸಲ್ಯವಾರಾಶಿ] ವಿಜಯಾರ್ಧಪರ್ವತದ ಸಿದ್ಧಕೂಟ ಜೈತ್ಯಾಲ
ಯಮಂ ಬಂದಿಸಲೆಂದು [ವಿಮಾನಾರೂಢನಾಗಿ ಪೋಗುತ್ತುಂ
ಹೇಮಗಿರಿಯೊಳೊರ್ವ ವಿದ್ಯಾಧರಿಯಂ ತಲೆ ಪೊಱಗಾಗೆ ಪರ್ವಾವು
ನುಂಗಿರ್ದುದಂ ಕಂಡು ಸವ್ಯೇಕ್ಷ್ವಚೂಡಾಮಣಿ ಪ್ರತಿವಿದ್ಯೆಯಿಂ ಕಿಡಿಸಿ
ವಿಘ್ನವಿನಾಶವಂ ಮಾಡುವುದುಂ ॥ ೧೧೨

ಕರಕಮಲದೆ ತದ್ವಿದ್ಯಾ
ಧರಿ ರಾಗಿಸಿ ಪೆರ್ಚಿ ನೋಡಿ ಮೆಯ್ಯೞಿಯದೆ ಭೂ ।
ಸ್ಕರದೇವನಗ್ರತನಯನ
ಚರಣಾಂಭೋಜದ್ವಯಕ್ಕೆ ಕೈಮುಗಿದಾಗಳ್ ॥ ೧೧೩

ಪೊಡೆಮಡೆ, ಅಂತು ಪೊಡೆಪಟ್ಟ ವಿದ್ಯಾಧರಿಯಂ ನೀನಾರ್ಗೆನಿನ್ನ
ಪೆಸರೇನೆಂಬುದೇನಂ ಸಾಧಿಸಲೆಂದು ಬಂದೆಯೆಂದು ಬೆಸಗೊಳ್ವುದುಂ,
ವಿದ್ಯಾಧರಿ ಯಿಂತೆಂದಳ್ :—ವರಚಂದ್ರಪುರಮೆನಾಳ್ವಂ ಸುರಸದೃಶಂ
ಗರುಡನೆಂಬ ವಿದ್ಯಾಧರರಾಜನಾತನ ಮಹಾದೇವಿ ವಿಭ್ರಮೊನ್ವಿತೆ ಪೆಸರಿಂ
ಅನಂತ ಮತಿಯೆಂಬಳಾಯಿರ್ವರ್ಗರ್ಗಂ ಪುಟ್ಟಿದೆಂ ಪವನವೇಗೆಯೆಂಬೆಂ ;
ಬಹುರೂಪಿಣೀವಿದ್ಯೆಯಂ ಸಾಧಿಸಲೆಂದು ಬಂದಿಲ್ಲಿ ಸಾಧಿಸುವ್ದುವೆನಗಾ
ವಿದ್ಯೆ ಸಾಧ್ಯಮಲ್ಲದೆ ವಿಘ್ನಂಮಾಡಲೆಂದು ಪೆರ್ವಾವಾಗಿ ನುಂಗಿರ್ದುದು ;
ನಿನ್ನ ಪ್ರಸಾದದಿಂದೊರ್ಮೆಗೆ ಬರ್ದುಕಿದೆನಲ್ಲದೆಂದುಂ ಈ ವಿಘ್ನಮನಾ
ವೆಂಗಂ ಕಿಡಿಸಲ್ಬಾರದೆಂದು ತನ್ನ ವೃತ್ತಾಂತಮೆಲ್ಲಮಂ ಪೇೞ್ದು ಪ್ರಜ್ಞಾ
ಪ್ತಿಯೆಂಬ ವಿದ್ಯೆಯಂ ವಾತ್ಸಲ್ಯರತ್ನಾಕರಂಗೆ ಪ್ರಾರ್ಥಿಸಿ ಕೊಟ್ಟು
ವುಂದೆ ನಿಂದಿರ್ಪುದುಂ ಕುಮಾರನಿಂತೆಂದಂ ॥ ೧೧೪

ಎನಿತೊಳವು ವಿದ್ಯೆ ಕೇಳ
ನ್ನನಿತುಂ ಖಚರರ್ಗಮುಂಟು ಕೊಳ್ವೋಗವು ಕಾ ।
ಮಿನಿಯರ್ಗಲ್ಲದೆ ಜಗದೊಳ್
ನಿನಗೀಸದ್ವಿದ್ಯೆ ಯಾವ ಕಾರಣದಿಂದಂ ॥ ೧೧೫

ಸಾಧ್ಯಮಾಗದೆಂದು ಬೆಸಗೊಳ್ವುದುಂ ಪವನವೇಗೆಯಿಂತೆಂದಳ್:—
ಸಂಜಯಂತ ಭಟ್ಟಾರಕರೆಂಬ ಮುನಿವರರ್ ವಿದೇಹದೊಳುಗ್ರಮೆಪ್ಪ ತಪಮಂ ಮಾಡುತುಮಿರ್ಪುದುಮವರ ಮುನ್ನಿನ ಭವದ ವೈರಿ ವಿದ್ಯು ದ್ವೇಗನೆಂಬ ವಿದ್ಯಾಧರಂ ವಿದ್ಯಾವಿನೋದಾರ್ಥಂ ತೊಱಲುತ್ತೆ ವಿದೇಹ ದೊಳರ್ದ ಸಂಜಯಂತ ಯೋಗೀಶ್ವರನಂ ಕಂಡು ಕೋಪಂ ಪುಟ್ಟೆ ॥೧೧೬

ಘನಮೆಪ್ಪಾಸರೆಮೇಲೀ
ಮುನಿಯಂ ಕೊಂಡುಯ್ದು ನೆಟ್ಟನಪ್ಪಳಸುವೆನೋ ।
ತನು ನೆಜೆ ತಗ್ಗಿಯು ನುರ್ಗ
ಪ್ಪಿನೆಗಂ ವೇಗಣ್ಗೆ ನೆಗಪಿ ನೆಲಕಿಕ್ಕುವೆನೋ ॥ ೧೧೭

ಎಂದು ಬಗೆದೊಲ್ಲದೆ ಹರಿವೆತಿ ಗಜವೆತಿ ಕಮಳವೆತಿ ಪುಷ್ಪವೆತಿ ಚಂಡವೇಗೆ ಯೆಂಬ ಪಂಚನವೀಸಂಗಮದೊಳ್ ತಂದಿಕ್ಕುವುದುಂ ಸಂಜ ಯಂತಮುನೀಶ್ವರಂ ಕ್ಷಮೆಯೆಂಬ ಪೆರ್ಗೊಡಲಿಯಿಂ ದುರಿತಾಟವಿಯಂ ತಱಿದು ಶುಕ್ಲಧ್ಯಾನವೆಂಬ ಕಿಚ್ಚಿಂ ಕರ್ಮೇಂಧನಮಂ ಸುಟ್ಟು ಕೇವಲಜ್ಞಾನಿಯಾಗಿರ್ಪುದುಂ, ಸಕಲದೇವಸಮೂಹಂ ಬಂದು ಕೇವಲ ಪೂಜೆಯಂ ಮಾಡಿ ಪಲತೆಱದಿಂ ಪರಮೇಶ್ವರನಂ ಬಣ್ಣಿಸುತ್ತು ಮಿರ್ಪುದುಂ] [1] ॥ ೧೧೮

ಧರಣೀಂದ್ರಂ ಕೋಪದಿಂದಂ ಮೆಸಗಿ ಗಜಱಿ ನಿರ್ದೋಷಿಯಂ ಧೈರ್ಯ ಚಾಮಿ
ಕರಶೈಲೇಂದ್ರಾಭನಂ ಕೆಮ್ಮನೆ ಕಲುಷದಿನೀಬಾಧೆಯಂ ಮಾಡಿದೀಕ್ಷೇ ।

1 ಪೋಗುತ್ತುಂ, ಹಿಮವದ್ಗಿರಿಯೊಳೊರ್ವ ವಿದ್ಯಾಧರಯುಂ ಪೆರ್ವಾವು ನುಂಗೆ, ತಲೆ ಪೊಱಗಾಗಿರ್ದುದಂ ಕಂಡು ಪ್ರತಿವಿದ್ವೇಷಿಯಿಂ ಕಿಡಿಸುವುದುವಾವಿದ್ಯಾ ಧರಕುವಾರಿ ಕಾಲ ಮೇಲೆ ಬಿರ್ದು,

ಚರನಂ ನಿರ್ವಂಶವೆಪ್ಪಂತಿರೆ ತಱಿದು ಮಹಾವಾರ್ಧಿಗಯ್ದಿಕ್ಕುವೆಂ ಚಕ್ಷತ್ರವೆಂಬುದ್ಯೋಗದಿಂದಂ ಕೆಳರ್ದು ನಡೆವ ದೇವೇಂದ್ರನಂ ನಾಗರಾಜಂ [1] ॥ ೧೧೯

ಮೋಹಿಸಿ ನಿನಗಿವರಿ ಸಮಾನರಲ್ಲರೆಂದು [ಬೇಡಿಕೊಳ್ವುದುಂ, ಕೋಪಮನುಡುಗಿಸಿ ಸಂಜಯಂತ ಸ್ವಾಮಿಗಳ ಪ್ರತಿಬಿಂಬಮೆನಾನದೀ ತೀರದೊಳ್ ಮಾಡಿ ಮಣಿಕನಕಮಯಮಪ್ಪ ಚೈತ್ಯಾಲಯಮನೆತ್ತಿಸಿ ಖೇಚರರಿಂದು ಮೊದಲಾಗೆ ಸಮಸ್ತ ವಿದ್ಯೆಗಳುಮನಿಲ್ಲಿ ಸಾಧಿಸುವುದು ಪೆಱವೆಡೆಗಳೊಳ್ ಸಾಧಿಸಿದರಪ್ಪೊಡೆ ಸಾಧ್ಯಮಾಗದೆ ಪೋಕೆಂದು ಪ್ರತಿಜ್ಞೆಯಂ ಮಾಡಿ ಪೋದನಪ್ಪುದಱಿಂದೆನಗಿಲ್ಲಿ ವಿದ್ಯೆಗೆ ವಿಘ್ನಮಾದುದೆಂದು ಬೇಱು ಸಂಜಯಂತ ಭಟ್ಟಾರಕರಲ್ಲಿಗೆ ವಂದು ಪವನವೇಗೆ ಕೊಟ್ಟ ಪ್ರಜ್ಞಪ್ತಿ ಮೊದಲಾಗೆ ಪಲವು ವಿದ್ಯೆಗಳುಮಂ ಸಾಧಿಸಿ ಕನಕಪುರಕ್ಕೆ ವಂದು

ವರಚಕ್ರಪುರವರನಾಳ್ವಂ ಸ್ಮರಸದೃಶಂ ಗರುಡವೇಗನೆಂಬಂ ವಿದ್ಯಾ ।
ಧರರಾಜನೆನ್ನ ಜನಕಂಗನುರಾಗದಿ ಪವನವೇಗೆ ಎಂಬೆಂ ಪೆಸರಿಂ ॥

ಬಹುರೂಪಿಣಿವಿದ್ಯೆಯುಂ ಸಾಧಿಸುತ್ತಮಿರಲಾವಿದ್ಯೆ ಸಾಧ್ಯಮಲ್ಲದೆನ್ನಂ ಪೆರ್ಮಾವಾಗಿ ನುಂಗಿದುದು ನಿನ್ನ ಪ್ರಸಾದದಿಂ ಬರ್ದೆನೆಂದು ಪೊಗಳ್ದು ಪ್ರಜ್ಞಾಪ್ತಿ ವಿದ್ಯೆಯುಂ ಕೊಟ್ಟು ಹರಿವತಿ ಗಜಾವತಿ ಕಮಳಾವತಿ ಪುಷ್ಪಾವತಿ ಚಂಡವೇಗಿಯೆಂಬ ಪಂಚನದೀ ಸಂಗಮದಲ್ಲಿ ಪೋಗಿ ಸಂಜಯಂತ ಭಟ್ಟಾರಕರ ಪಾದೋಪಕಂಪದೊಳ್ ಸಾಧಿಸುವುದೆಂಬುದುಂ ಅಲ್ಲಿಯಲ್ಲದೆ ಪೆಱವೆಡೆಯೊಳೀಕೆ ಸಾಧಿಸಲಾಗದೆಂಬುದುಂ ಪವನವೇಗೆಯೆಂತೆಂದಳ್. ಸಂಜಯಂತ ಭಟ್ಟಾರಕರೆಂಬಋಷಿಯರು ವಿದೇಹದೊಳಾತಪಯೋಗದೊಳಿರ್ಪುದುಂ ಅವರ ಮುನ್ನಿನ ಭವದ ವೈರಿ ವಿದ್ಯುದ್ದಂಷ್ಟ್ರನೆಂಬ ವಿದ್ಯಾಧರಂ ಕಂಡು ಮುನಿದೆತ್ತಿ ತಂದು ಪಂಚನದಿಗಳೊಳಿಕ್ಕೆ ಕ್ಷವೆಯೆಂಬ ಕಿಚ್ಚಿಂ ಕರ್ಮವೆಂಬ ಯಿಂಧನಂಗಳಂ ಸುಟ್ಟು ಕೇವಳಿಯಾಗಿರ್ಪುದುಂ ಕೇವಳಪೂಜೆಯಂ ಮಾಡಲೆಂದು ಸಮಸ್ತದೇವರ್ಕಳ್ ನೆರೆದು. (ಗ)

1 ನಾಗೇಂದ್ರನಂ ದೇವರಾಜಂ. (ಗ)

ರಾಜ್ಯಲೀಲೆಯಿಂದಿರ್ದೊಂದು ದಿವಸಂ ತಮ್ಮಯ್ಯನಪ್ಪ ಭಾಸ್ಕರ ದೇವನಂ][1] ॥ ೧೦೦

ನೀನಪ್ಪೊಡೆ ಖೇಚರನೈ
ಹೀನರ ತೆಱದಿಂದೆ ಭೂಚರಾಶ್ರಯಮುಂ ಮೆ ।
ತ್ತೇನೆಂದು ಪೊರ್ದಿ ನಿಂದೈ
ಯಾನಂದಂಬೆರಸು ದೇವ ಬೆಸಸಲ್ವೇೞ್ಕುಂ ॥ ೧೦೧

[ಎನೆ ಭಾಸ್ಕರದೇವಂ ನಂದನನಂ ತೆಗೆದಪ್ಪಿಕೊಂಡು ಭರವೆಶದಿಂ ಮುನ್ನಿನ ತನ್ನ ಕಥೆಯನೆಲ್ಲಮನೆತಿಶಯಮುಮಂ ಮಾಡಿ ತಿಳಪೆ ಪೇೞ್ವುದು ಮೊಗಳ್][2] ॥ ೧೦೨

---

1 ಮಾಣಿಸಿ ಕೋಪಮನುಡುಗಿಸಿ ಸಂಜಯಂತ ಭಟ್ಟಾರಕರ ಪ್ರತಿಮೆಯನಲ್ಲಿ ಮಾಡಿ ವಣಿಕನಕಮಪ್ಪ ಚೈತ್ಯಾಲಯಮಂ ಮಾಡಿಸಿ ವಿದ್ಯಾಧರರ್ಗಿಂದುಮೊದಲಾಗಿಲ್ಲಿ ವಿದ್ಯೆಗಳುಂ ಸಾಧ್ಯಮುಕ್ಕೆ ಪೆಱವೆಡೆಯೊಳ್ ಸಾಧ್ಯಮಾಗದೆ ಪೋಕೆಂದು ಪ್ರತಿಜ್ಞೆಯುಂ ಮಾಡಿವನಪ್ಪುದಱಿಂದಲ್ಲಿಗೆ ಪೋಗಿ ಸಾಧಿಸಿಂದವಱ ವೃತ್ತಾಂತಮೆಲ್ಲಮಂ ಪೇೞ್ದು,

ಎನಗೀ ಜಿನಸಮಯಾಂಬರದಿನಕರನಲ್ಲದೆ ಪೆಱರ್ತುನಱ್ಪುಯರಲ್ಲರ್ ।
ವಿನಯದಿನೆಂದಾ ಕನ್ನಿಕೆ ಮನದೊಳ್ ಲೇಸಾಗಿ ಪೂಣ್ದು ಪೋಪ್ರದುಮಿತ್ತಂ॥

ವಜ್ರಕುಮಾರಂ ಸಿದ್ಧಕೂಟಚೈತ್ಯಾಲಯಮಂ ವಂದಿಸಿ ಸಂಜಯಂತ ಭಟ್ಟಾರಕರಲ್ಲಿಗೆ ಬಂದು ಪ್ರಜ್ಞಪ್ತಿವಿದ್ಯೆ ವೊದಲಾವ ಪಲವು ವಿದ್ಯೆಗಳಂ ಸಾಧಿಸಿ ಜಾತಿವಿದ್ಯೆ ಕುಲವಿದ್ಯೆ ಸಾಧಿತವಿದ್ಯೆ ಯೆಂಬ ಮೂಱುಂವಿದ್ಯೆಗಳೊಳಗಂ ನೆಱೆದು ಕನಕಪುರಕ್ಕೆ ಬಂದು ಪಲದಿವಸಲೀಲೆಯೊಳಿರ್ದೊಂದುದಿವಸಂ ತನ್ಮಯ್ಯನ ವೊಗವುಂ ನೋಡಿ. (ಗ)

2 ಎಂದು ಬೆಸಗೊಳ್ವುದುಂ, ಭಾಸ್ಕರದೇವಂ ಪೇೞಲೊಲ್ಲದೆ ಲಜ್ಜಿಸಿಪ್ಪುದುಂ, ಕೆಲದೊಳಿರ್ದ ಮಹೀಪಾಲಸೆರ್ಗಡೆ ಯಿಂತೆಂದು ಪೇೞ್ದಂ. ವಿಜಯಾರ್ಧಪರ್ವತದ ದಕ್ಷಿಣಶ್ರೇಢಿಯೊಳಮರಾವತಿಯೆಂಬ ಪುರಮನಾಳ್ವಂ ಕಂಭುವೆಂಬ ವಿದ್ಯಾಧರರಾಜನಾತಂಗೆ ನಿಮ್ಮಯ್ಯನಪ್ಪೀ ಭಾಸ್ಕರದೇವಂ ನಿಮ್ಮತ್ತೆಯಪ್ಪೀ ವಸುದೇವೆಯುಂ ಮುಂದರದೇವನೆಂಬ ಮೂವರ್ಮಕ್ಕಳಾತಂ ವೈರಾಗ್ಯಪರಾಯಣನಾಗಿ ನಿಮ್ಮಯ್ಯಂಗೆ ವಿದ್ಯಾಧರರಾಜ್ಯಮುಮುಂ ಮುಂದರದೇವಂಗೆ ಯುವರಾಜ್ಯಮುಮುಂ ವಿದ್ಯೆಗಳುಮುಂ ಕೊಟ್ಟು,

ಎಮ್ಮ ಜ್ಜಂ ಕೊಟ್ಟ ವಿದ್ಯಾಬಲದಿನುಱದೆ ವೀರಕ್ಕೆ ಮುಯ್ಯಾಂತು ಬೇಗಂ
ನಿಮ್ಮಂ ತದ್ದೇಶದಿಂದಂ ಪೊಱಮಡಿಸಿ ಬೃಹತ್ತೇಜದಿಂ ರಾಜ್ಯಮಂ ಕೊಂ
ಡೆಮ್ಮಂ ಬಾಯಿವ್ಪಿಟ್ಟು ತದ್ರಾಜ್ಯಮನೆ ಬಿಸುಟು ವೋಡಾಗಿ ಬಾಯ್ಬತ್ತಿ
ಮತ್ತಂ
ತಾಮೆಚ್ಚಿಂ ನೋಡೆ ಬೆಂಕಾಳ್ಗೆದೊಡೆ ನಿನಗೆ ನಾಂ ನಿಶ್ಚಯಂ ಪುತ್ರ
ನಲ್ಲೆಂ ॥ ೧೦೩

ಎಂದು ತಂದೆಯ ಮುಂದೆ ಪೂಣ್ದ ಮುಸಗಿದ ಸಿಂಹದಂತೆ ಪೊಡೆ
ವೆತ್ತ ಪಾವಿನಂತೆ ನೊಂದ ಶರಭದಂತೆ ಸಿಕ್ಕಿದ ಪುಲಿಯಂತೆ ಕೋಪಾ
ವಿಷ್ಟನಾಗಿ [ಪರಿದು ಅಮೆರಾವತೀಪ್ರಭಮಂ ಮೂವಳಸಾಗೆ ಮುತ್ತಿ
ಕೊಳ್ವುದುಂ ಮಂದರದೇವಸಿದಿಚಿ ಕಾದಿ ತನ್ನ ಬಲಮೆಲ್ಲಂ ಕಲ್ಲಮೇಲೆ
ಬಿದ್ದ ಕಾಜಿನ ಪೇಱಿನಂತೆ ನುಗ್ಗಪ್ಪುದುಂ ಮುನಿದು ಸಮುದ್ರಬಾಣ
ಮಂ ಬಿಡುವುದುಂ ॥ ೧೦೪

ಶರನಿಧಿಬಾಣಂ ಬರೆ ಖೇ
ಚರರಾಜಂ ಬಾಡಬಾಗ್ನಿ ಶರಮಂ ಬಿಡೆ ಚೆ ।
ಚ್ಚರಮೊಜಲಮಂ ಪೀವ್ದು
ಮುರಿದಬ್ಧಿ ಕಾನಲ್ದೊನಲ್ದು ಮಂದರದೇವಂ ॥ ೧೦೫

ಉರಗಬಾಣಮಂ ಬಿಡುವುದುಮೆದು ವಿಷಮೆನುಗುಟುತ್ತುಂ ಬರೆ
ವರೆ ॥ ೧೦೬

ಉರಗಶರಕ್ಕಿದಿರಂ ೨
ಸ್ಕರದೇವಸುತಂ ಮಹೋಗ್ರಕೋಪಾನಲನಿಂ ।

ಎಳಸದೆ ವೈಸುಖಕ್ಕೆ ಪೆಱತೊಂದಳವೇಹವನುಂಟುಮಾಡಿ ಸಂ
ಚಳಿಸಿ ವಿಭೂತಿಯುಂ ನೆನೆಪುದೊರ್ವುಯೆ ಳವ್ಮನೆ ರಾಜ್ಯಲಕ್ಷ್ಮಿಯುಂ ।
ಕಳಿಲನೆ ಬಿ''ಟ್ಟ ಸಂಪ್ರಭವಸಂಚರಣರಲ್ಲಿ ಜಿನೇಂದ್ರದೀಕ್ಷೆಯುಂ
ಪಳಿ ಪೆಱುಬಂಗೆ ವಂಯ್ದೆಗೆಯಂ ಣ್ಗಳವಟ್ಟರ ಕೊಂಡನರ್ಥಿಯಿಂ ॥

ಇತ್ತಲ್ ರಾಜ್ಯಂಗೆಯ್ವ ಭಾಸ್ಕರದೇವನಂ ವಿದ್ಯಾಬಲದಿಂ ಮಂದರದೇವಂ
ಕಾದಿ ರಾಜ್ಯಮಂ ಕೈಕೊಂಡಡುವೆ ಬಂಗವಸಿಗಿ ಎಂದಿರ್ಪನೆಂಬುದುಂ. (ಗ)

ಗರುಡಾಸ್ತ್ರಮೆನೆಸೆವುದುವೋ
ಸರಿಸದೆ ಕಡಿಖಂಡವಾಗಲದ ನುಂಗುವುದುಂ ॥ ೧೮೩

ಮತ್ತಂ ಕನಲ್ದು ನುಂದರದೇವನಿಸುವ ಮೇಘಬಾಣಮುಂ ವಾಯು
ಬಾಣದಿಂ ಪರ್ವತಾಸ್ತ್ರಮುಂ ವಜ್ರಶರದಿಂ ತವೋಂಧಶರಮುಂ ಸೂರ್ಯ
ಸಾಯಕದಿಂ ನಿರ್ಭುದ್ಧಿ ಬಾಣಮುಂ ಮತಿಶರಾಳಿಯಿಂ ಗೆಲ್ವುದುಂ ಮುಂದರ
ದೇವಂ ನಿಲಲಾಱದೀತಂ ಸಾಮಾನ್ಯಪುರುಷನಲ್ಲೆಂದು ಬೆಚ್ಚಿ ಪ್ರಾಣಭ
ಯದಿಂದೋಡುವುದುಂ ಅಮರಾವತೀಪುರಮುಂ ಮಹಾವಿಭೂತಿಯಿಂ
ಪೊಕ್ಕು ತಮ್ಮಯ್ಯನ ರಾಜ್ಯಪದವಿಯೊಳ್ ನಿಂದು ಮಹಾಮಹಿಮೆ
ಯುಮಂ ತಾಳ್ದಿ ತಂದೆಯುಮಂ ತಾಯುಮಂ ಪೆಂಡಿರುಮಂ ಬರಿಸಿ
ಖೇಚರರಾಜ್ಯಲಕ್ಷ್ಮೀವಲ್ಲಭನಾಗಿ ॥ ೧೮೪

ಜಿನನಾಥಾರ್ಚನೆಯಿಂ ಜಿನಾಭಿಷವದಿಂದಾಹಾರಭೈಷಜ್ಯಶಾ
ಸ್ತ್ರಾನಯೋಗಾರ್ಜಿತಮಪ್ಪ ಸಂದಭಯಮೆಂಬಿನ್ನಾಲ್ಕು ಮೊಳ್ದಾನದಿಂ
ಮುನಿಸಾಖ್ಯದ್ವಯಸೇವೆಯಿಂ ಜಿನಕಥಾಳಾಪಂಗಳಿಂ ಕಾವಿನೀ
ಜನಕಂದರ್ಪನುದಾತ್ತನಿರ್ಮಲಯಶಂ ವಾತ್ಸಲ್ಯರತ್ನಾಕರಂ ॥ ೧೮೫

ಅಂತು ರಾಜ್ಯಂಗೆಯ್ಯುತ್ತುಮಿರ್ಪನ್ನೆಗಂ ಚಂದ್ರಪುರಾಧಿಪತಿ
ಯಪ್ಪ ಗರುಡವೇಗವಿಯುಚ್ಚರರಾಜಂ ತನ್ನ ಮಗಳಪ್ಪ ಪವನವೇಗೆ
ಮೆದುವೆಯುಂ ಮಾಡಲೆಂದು ಸ್ವಯಂವರಶಾಲೆಯುಂ ಮಾಡಿಸಿ ತಡೆಯದ
ಭಯಶ್ರೇಢಿಯು ವಿದ್ಯಾಧರರ್ಗೆಲ್ಲಂ ಬಿಱಿಯಟ್ಟಿ ವಜ್ರಕುಮಾರಂಗೆ
ಬಿಱಿಯಟ್ಟುವುದುಂ, ಗರುಡವೇಗನ ದೂತರ್ಬಂದು ಕಂಡು ಪೋ
ಗಟ್ಟು ತಮ್ಮ ಬಂದ ಕಾರ್ಯಮಂ ಬಿನ್ನಪಂಗೆಯ್ವುದುಂ ॥ ೧೮೬

ಬೇಗಂ ವಜ್ರಕುಮಾರಂ
ರಾಗಿಸೆ ದೂತರ್ಗೆ ಸಂತಸಂ ಪಿರಿದಪ್ಪಂ ।
ತಾಗೆ ಕರಮುತ್ಸವಂಬೆರ
ಸಾಗಳ್ ಕೊಟ್ಟಂಗಚಿತ್ತಮಂ ತತ್ಕ್ಷಣದಿಂ ॥ ೧೮೭

ಅಂತಮೆರಾವತೀಪುರಮಂ ಸೊಬಗಿಮಟ್ಟು ಚಂದ್ರಪುರಮನೆಯ್ದಿ ನೆರೆದ ವಿದ್ಯಾಧರವಲ್ಲಭರೊಡನೆ ಬಿಟ್ಟರೆ ಗರುಡವೇಗಂ ಮಱುದಿವಸಂ ಸಮೆಸ್ತವಿದ್ಯಾಧರನಾಯಕರು ಮೆಯ್ದಿರಿವೆಂದು ಸಾಱುವುದುಂ॥ ೧೩೦

ತನ್ನಗ್ರಾತ್ಮಜೆಯಂ ನವ
ಖಿನ್ನಾಂಬುಜಮುಖಿಯನಮಲಗುಣಗಣಯುತೆಯಂ ।
ಕನ್ನೆಯನಖಿನವಮೆನಿಸುವ
ಚೆನ್ನೆಯನಗ್ಗಳದ ಪವನವೇಗಂ ಪಡೆದಾಗಳ್ ॥ ೧೩೧

ಕಡಗಕಂಕಣಹಾರನೂಪುರಮೊದಿಭೂಷಣರಾಜಿಯುಂ
ತುಡಿಸಿ ಚೀನಮನರ್ತಿಯಿಂ ಮೃದುವಪ್ಪುದಂ ಮುದದಿಂದೆ ತಂ ।
ದುಡಿಸಿ ಕುಂಕುಮಚಂದನಾದಿ ಸುಗಂಧವಸ್ತುಗಳಂ ಮನಂ
ಬಿಡೆ ಮನೋಹರಮಾಗಿ ಪೂಸಿ ವಿಲಾಸದಿಂ ಕಡುರಾಗದಿಂ॥೧೩೨

ನೆಱಿಯೆ ಪಸದನಂಗೊಳಿಸಿ ಪೊನ್ನ ವಿಮಾನಮನೇಱಿಸಿ ಮಂಗಳ ತೂರ್ಯರವಮೆಸೆಯೆ ಖೇಚರರ ಸೈನ್ಯಂ ಸುತ್ತಂ ಬರೆ ವಿದ್ಯಾಧರ ಕುಮಾರಿಯರಿರ್ಕೆಲದೊಳಮಿರ್ದು ಪೊನ್ನ ಚಾಮರಮನಿಕ್ಕೆ ಮಹೋತ್ಸವಂ ಬೆರಸು ಸ್ವಯಂವರಭೂಮಿಗೆ ವರ್ಪುದುಂ ಪವನವೇಗೆ ಮುನ್ನಿನ ಪ್ರತಿಜ್ಞೆಯಂ ನೆನೆದು ತರತರದೊಳಿಯೊಳರ್ದ ವಿದ್ಯಾಧರಕುಮಾರರಂ ನೋಡುತ್ತೆ ಬಂದು] [1] ವಜ್ರಕುಮಾರನಂ ಕಂಡು ॥ ೧೩೩

ಮಾರನ ಶರದಳ್ಳೀಱುಂ
ದೋರಂತಿರೆ ನೊಂದು ಸೋಲ್ದಿಂದಂತಾಗಳ್ ।
ವಾರಿರುಹಾನನೆ ವಜ್ರಕು
ಮಾರಂಗಂ ಕೂರ್ತು ಮಾಲೆಸೂಡಿದಳಾಗಳ್ ॥ ೧೩೪

---

[1] ಪಿರಿದು ಬಲಸಹಿತಂ ಪೋಗಿ ಮಂದರದೇವನನೋಡಿಸಿ ಭಾಸ್ಕರದೇವನುಂ ಮಣಿವಾಲೆಯುಂ ಬೆರಸು ರಾಜ್ಯಂಗೆಯ್ಯುತ್ತುಮಿರ್ದು ಚಕ್ರಪುರಕ್ಕೆ ಗರುಡವೇಗನುಂ ತನ್ನ ಮಗಳ ಸ್ವಯಂವರಕ್ಕೆ ವಿದ್ಯಾಧರಕುಮಾರರಂ ಬಗೆವೇಳ್ದಟ್ಟಲಬ್ಬರ್ದುಂ ಮುಂಪೂಣ್ದು ಪೋದ ಪವನವೇಗೆ ವಜ್ರಕುಮಾರನಂ ಕಂಡು (ಗ)

ಸರಸಿರುಹಾನನೆ ವಿದ್ಯಾ
ಧರರಂ ಕೈಕೊಳ್ಳದುಱಿದೆ ವಜ್ರಕುಮಾರಂ ।
ಗೆರಡಿಲ್ಲದೋತಳದಱಿಂ
ಧರೆಯೊಳ್ ಭಾಗ್ಯಾಧಿಕಂಗದಾವ್ರದು ಗಹನಂ ॥ ೧೩೬

[ಅಂತು ನೆರೆದ ಖೇಚರರೆಲ್ಲಂ ಸಿಗ್ಗಾಗಿ ಪರಿದುವೋಗೆಯುಂ ಸಮ್ಯಕ್ತ್ವಚೂಡಾಮಣಿ ಮದುವೆನಿಂದು ಮಹೋತ್ಸಾಹದಿಂದಮರಾವತೀಪುರಕ್ಕೆವಂದು ಮಹಾವಿಭೂತಿಯಿಂದರಮನೆಯಂ ಪೊಕ್ಕು ಸುಖದಿಂದಿರ್ದುದುಂ] ॥ ೧೩೮

ಸ್ಮರರೂಪಂ ವಿಭವಪುರಂ
ದರನಗ್ರವಿರೋಧಿದರ್ಪದಳನಂ ವಿದ್ಯಾ ।
ಧರವಂದ್ಯನೆಂದು ವಿದ್ಯಾ
ಧರರೆಲ್ಲಂ ಕೂರ್ವೆಯಿಂದಮತ್ಯಾದರದಿಂ [1] ॥ ೧೩೯

[ತಂತಮ್ಮ ಮಕ್ಕಳಂ ತಂದು] ಕುಡುವುದುಂ, ಸೌಂದರಿ ಆನಂಗಮೊಲೆ ವಿಜಯೆ ಅನಂಗಸೌಂದರಿ ಸುಪ್ರಭೆ ವಿದ್ಯುದ್ವೇಗೆ ವಿಜಯಾವತಿ ರತ್ನಸೌಂದರಿ ಯೆಂಬಿವೆರ್ವೊದಲಾಗೆ ಪಲರುಂ ವಿದ್ಯಾಧರಕುಮಾರಿಯರೊಳ್ ಕೂಡಿ [2] ಸಂತೋಷದಂತವನೆಯ್ದಿ ರಾಜ್ಯಲೀಲೆಯಿಂ ಪಲಕಾಲಮಿರ್ದೊಂದುದಿವಸಂ ॥ ೧೪೦

ಕರಿಘಟೆಯುಂ ಹಯಪ್ರತತಿಯುಂ ಭಟಕೋಟಿಯುವೊಪ್ಪಿ ಸುತ್ತಲುಂ
ಬರೆ ಲಲಿತಾಂಗಿಯರ್ ಪದೆದು ಮೆಲ್ಲನೆ ಚಾಮರವಿಂಕೆ ಮೇಳ್ಗಡಂ ।
ಬರಮೊಳನೆಟ್ಟ ಕೋಭಿಸೆ ವಿಯುಚ್ಚರನಾಯಕರತ್ನಲಿತ್ತಲೋ
ಸರಿಸದೆ ಕೂರ್ತುರ್ ಪೊರ್ದಿ ಬರೆ ಗಂಧಗಜೇಂದ್ರಮನೇಱಿ ಲೀಲೆಯಿಂ ॥

---

1 ಧರರೆಲ್ಲಂ ತನ್ಮತನ್ಮಿ ಮಕ್ಕಳನಾಗಳ್. (ಗ)

2 (ಗ) ಪುಸ್ತಕದಲ್ಲಿ "ಜಿನನಾಥಾರ್ಚನೆಯಿಂ" ಎಂಬ ೧೫೯ನೆಯ ಪದ್ಯವು ಇಲ್ಲಿ ಬಂದಿದೆ. (ಗ)

ಬರ್ದ ವಜ್ರಕುಮಾರನಂ ರತ್ನಮಯಮಪ್ಪ ಕಉಮೊಡದ ಮೇಲೆ [ನಿಳಾಸಿನೀ ಜನಮುಂ ಸೊಸೆದಿರುಂಬೆರಸು] ಕುಳ್ಳಿರ್ದು ಮಣಿ ಮೊಲೆ ಮಹಾದೇವಿ ಕಂಡು [ಮುಯ್ಪುಂ ನೋಡಿ ರಾಗದಿಂ ವಿಳಾಸಿನಿ ಯರ್ಗಿಂತೆಂದಳ್ ॥] [1] ೧೪೦

ಶರಧಿಯೊಳಗಿರ್ದ ರತ್ನೋ
ತ್ಕರವೆಲ್ಲಂ ತಮ್ಮಿಂದೆ ತಾವೆ ಬಾರವೆ ಪುಣ್ಯಂ ।
ದೊರೆಕೊಳ ಕೇಳವು ತಾವ
ಚ್ಚರಿಯಾದುವೆ ಪುಣ್ಯದಿಂದಮೊಗದದುಂಟೇ ॥ ೧೪೧

ಅಪುಷ್ಪಿತಫಲಭೂಗಿನಿಯಾದೆನೆನ್ನಿಂದಂ ಬಟ್ಟು ಕೃತಾರ್ಥರಿಲ್ಲೆಂದು ನಲಿದು ಮಾತಾಡುವುದುಮೊಮಾತಂ ಪವನನವೇಗೆ [ಕೇಳ್ದ ವಿಸ್ಮಯಂ ಬಟ್ಟು] ವಜ್ರಕುಮಾರಂಗೆ [ರಾತ್ರಿಸಮಃಯದೊಳ್] ಅಱಿಪುವುದುಂ ಸವ್ಯೇಕ್ಷ್ವಚೂಡಾಮಣಿ ಕೇಳ್ದ ಮಱುದಿವಸಂ ತಮ್ಮಬ್ಬೆಯಲ್ಲಿಗೆ ವಂದು ಕಿಱಿಬಿಸಗೊಂಡು ತನ್ನ ವೃತ್ತಾಂತವೆಲ್ಲಮಂ ಲೇಸಾಗಱಿದು ತನ್ನೊಳಿಂತೆಂದಂ [2] ॥ ೧೪೪

ನೀರ ಬೊಬ್ಬುಳಿಕೆ ಭೂವಿಪಂದು ಸಂ
ಸಾರಮಿಂದ್ರ ಧನುವೆಂತುಟಂತೆ ಸ ।
ಚ್ಛಿ ್ರೀರಮಾಗೆ ತನು ಬೀಱಲಿರ್ದ ಧಾ
ತ್ರೀರುಹಂಬೊಲಿಗುಂ ನಿರಂತರಂ ॥ ೧೪೫

ಸ್ತ್ರೀಯರೊಂದು ಕಡುಗೂರ್ಮೆ ನೋಱೊಂದೊಡಂ
ಮಾಯಮಿಂದ್ರಿಯ ಸುಖಂಗಳಂಬೊಡಿಂ ।
ನಾಯಬಾಲಮೆಳಪಿಂದವೇಕೆ ಕೇಳ್
ವಾಯುವಂ ಸ್ಥಿರಮಿದೆಂದು ನಂಬುವರ್ ॥ ೧೪೬

---

[1] ಸೊಸೆಯರ ವೊಗವಮಂ ನೋಡಿ. (ಗ)

[2] ತನ್ನ ವೃತ್ತಾಂತವೆಲ್ಲವನಱಿದು ಸಂಸಾರಕ್ಕೆ ಪೇಸಿ. (ಗ)

ಮುನ್ನ ವಿನ್ನೆವರೆಗಂ ಜಡತ್ವದಿಂ
ದೆನ್ನ ಕರ್ಮವಶದಿಂದವಿರ್ದೆನಿ ।
ನ್ನೆನ್ನನಾನಱಿದು ರಾಜ್ಯವೋಹದೊಂ
ದುನ್ನತಿಕ್ಕೆವೆರಸಿರ್ದುದೊಪ್ಪವೇ ॥ [1] ೧೪೬

ದೇಹಮಂ ಧನಮನಿಂದ್ರಿಯಂಗಳಂ
ನೇಹಮಂ ವನಿತೆಯರ್ಕಳಂ ಮಹಾ ।
ವೋಹದಿಂ ಪಿಡಿದು ಧರ್ಮದೊಂದುಸತ್
ಸ್ನೇಹಮಂ ಬಿಡುವುದೇನದೊಳ್ಳಿತೇ ॥ ೧೪೭

[ಎಂದು ಸಂಸಾರದೊಳಾದ ಭೋಗೋಪಭೋಗಂಗಳ್ಗೆ ಪೇಸಿ
ನಾತ್ಮಂಗಲ್ಯಮೆಪ್ಪ ಜಿನರೂಪಂ ಧರಿಯಿಸುವೆನೆಂಬ ಕಜ್ಜಮೆನೆತ್ತಿ
ಂಡು ಭಾಸ್ಕರದೇವಂಗಂ ಮೆಱಿಮೊಲೆಗಮೆಱಿಪ್ರವುದುಮೆವರಿಂತೆಂ
ದ ॥ ೧೪೮

ಬೇಡ ಮೆರುಳ್ತನಮಂ ನೀಂ
ಮಾಡದೆ ಪೆತ್ತೆನಗೆ ಕಱುವೆ ಮಱುಕಮನೋವಿಂ ।
ಮಾಡದೆ ಕೇಳ್ದಂತಸಮಂ
ಮಾಡುವೋಡೀಮಾತನೆಯ್ದೆ ಮಾಣ್ಬುದು ಮಗನೇ ॥ ೧೪೯

ಜಿನಪೂಜೆಗಳಂ ನಿನ್ನಾ
ರ್ಜನಿತಂ ಮಾಡರ್ತಿಯಿಂದಕೃತ್ರಿಮಜಿನಚೈ ।
ತ್ಯಾವಾಸಂಗಳನಲ್ಲಿ
ರ್ತನವರತಂ ಪೋಗಿ ಬಿಡದೆ ವಂದಿಸು ಮಗನೇ ॥ ೧೫೦

---

[1] ಎಡಗಯ್ಯೊಳ್ ಕೊಟ್ಟರ್ಥದಂತೆ ತಳಿಗೆಯ ಕೂಳಿನಂತೆ ಮುಡಿದ ಚವುರಿ
ಂತೆ ನೆಲಹಿನ ವೊಸರಾಂತೆ ಬೆನ್ನೇಱಿದ ಮಗವಿನಂತೆ ಮಣಿಗಡಗದ ಕೀಲಿತಂತೆ
ಗಹದ ಜೋಳದಂತೆ ಕಿತ್ತ ಪಡಿಯಂತೆ ಬಿಲದಲಿಕ್ಕಿದ ಪೊನ್ನಿನಂತೆ ಕಿವಿಯಲಿಕ್ಕಿ
ೀಲೆಯಂತೆ ಸೂಳೆಯರ ಕರಹದಂತೆ ಕುದುರೆ ಯೇಱಿದರಾಂತೆ ದಂಡಿನ ಗುಡಿ
ಂತೆ ಕಾವಲಿಯಡುಗೆಯಂತೆ ನಿದ್ದೆಯಿಲ್ಲದ ಮಾನಸವಾಳ ನಂಬಿ. (ಗ)

ಎಂದಳಪಂ ತೋಱಿ ತಮ್ಮ ಮೋಹದಿಂ ಬಿಡಲಾಱದೆ ನುಡಿವುದುಂ ಕುಮಾರನೇಗೆಯ್ದುಂ ತಮ್ಮ ಮಾತಿಂಗೊಡಂಬಡದಿರೆ, ಮಗನ ಮನದ ದೃಢತೆಯುಮಂ ಪರಿಚ್ಛೀದಮುಮನಱಿದು ದಕ್ಷಿಣಮಧುರಾಪುರದ ಸಹಸ್ರಕೂಟಚೈತ್ಯಾಲಯದೊಳಿರ್ದ ಸೋಮದತ್ತ ಭಟ್ಟಾರಕರನವಳೋ ಕಿನೀವಿದ್ಯೆಯಿಂದಱಿದು ವಜ್ರಕುಮಾರನಂಬೆರಸು ಮಣಿಮಾಲೆಯುಂ ಮಹಾವಿಭೂತಿಯಿಂದವರಲ್ಲಿಗೆವಂದು ಸೋಮದತ್ತ ಭಟ್ಟಾರಕರಂ ಬಂದಿಸಿ ವಾತ್ಸಲ್ಯರತ್ನಾಕರನ ಸಂಸಾರದ ವೈರಾಗ್ಯಮಂ ಪೇೞ್ವುದುಂ ॥ ೧೫೭

ನಯದಿಂ ಮುನಿಪತಿ ಜಿನದೀ
ಕ್ಷೆಯನಂಬರಚರತನೂಭವಂಗನುನಯದಿಂ ।
ದಯೆಗೆಯ್ಯೆ ತಪಶ್ಶ್ರೀಯಂ
ಪ್ರಿಯದಿಂ ತಾಳ್ದಿದನನಂತಗುಣಗಣನಿಲಯಂ ॥ ೧೫೮

ಅಂತು ವಜ್ರಕುಮಾರಂ ಜಿನರೂಪಂ ತಾಳ್ವುದುಂ, ಭಾಸ್ಕರ ದೇವನುಂ ಮಣಿಮಾಲೆಯುಂ ತಮ್ಮ ವೆಂಕಜರೆಲ್ಲರುಮಣುವ್ರತಂಮಾಡಿ ಸೋೞಪುದತ್ತಮುನೀಶ್ವರನುಮಂ ವಜ್ರಕುಮಾರಮುನಿಯುಮುಂ ಬಂದಿಸಿ ವಿದ್ಯಾಧರಲೋಕಕ್ಕೆ ಪೋದರಿತ್ತಲ್, ವಜ್ರಕುಮಾರಮುನಿ ನಿಯಮಿತವೆಚನನುಂ ಸಕಲಾಗಮಕುಶಲನುಂ ಸಂಯಮಜಲನಿಧಿಯುಂ ಗುರುಪಾದಭಕ್ತನುಂ ಚತುಷ್ಕಷಾಯಾಂತಕನುಂ ದಶಧರ್ಮಸಮೇತನುಂ ವಾತ್ಸಲ್ಯನಿಳಯನುಂ ಸಮಸ್ತದೋಷರಹಿತನುಂ ಸಂಸಾರಭಯಸ್ಥನುಂ ಬಾಹ್ಯಾಭ್ಯಂತರತಪೋನಿರತನುಂ ಸಮ್ಯೋಕ್ತ್ವಚೂಡಾಮಣಿಯುಮಾಗಿ ತಪದೊಳೊಂದುತ್ತರೋತ್ತರಮಾಗಿ ನೆಗೞುತ್ತುಮಿರ್ದುದುಂ ॥

ಚಾರಣಋದ್ಧಿಗುಣಾಳಂ
ಕಾರಂಗುನ್ನತಮಹಾವ್ರತಂಗಳ ಗಜಸಂ ।
ಹಾರಂಗೊಗೆದುದು ಜಿನಚರ
ಣಾರಾಧನೆವಿಾಯದಿರ್ದ ವೆಸ್ತುಗಳೊಳವೇ] [1] ॥ ೧೫೯

[1] ಎಂದು ಭಾಸ್ಕರದೇವನುಮಂ ಮಣಿಮಾಲೆಮಹಾದೇವಿಯುಮನೊಡಂ ಬಡಿಸಿ ರಾಜ್ಯಮಂ ಕೊಡುವುದುಂ ದಕ್ಷಿಣಮಧುರೆಗವರ್ವರುಂ ಮುಂದಿಟ್ಟೊಡ

ಅಂತು ಚಾರಣಋದ್ಧಿಪ್ರಾಪ್ತನಾಗಿ [ಸುಳವಿನಿಕರಪಿಕಮೊಳಕಂದನಿ]ಪ್ಪುದುಮಾಪುರವನಾಳ್ವ ಪೂತಿನಾಹನವುಹಾರಾಜನ ಪಟ್ಟದ ಮಹಾದೇವಿ [ಸಮ್ಯಕ್ತ್ವನಿಳಯೆಯುಂ ಮೂಢತ್ರಯನಿವಾರಿತೆಯುಂ ಷಡಾಯತನದೂರಿತೆಯುಂ ಅಷ್ಟಮದನರ್ಜಿತೆಯುಂ ನಿಶ್ಶಂಕಾದ್ಯಷ್ಟ ಗುಣಸಂಪನ್ನೆಯುಂ ಅಣುವ್ರತೋಪೇತೆಯುವೆನಿಸಿದೋಹಿಲೆಯೆಂಬಳ್ ॥ ೧೫೬

ಸಕಲಗುಣಾಢ್ಯೇ ಸತ್ಯದ ತವರ್ಮನೆ ವಾರ್ಧಿಪರೀತಧಾರಿಣೀ
ಪ್ರಕಟಿತಚಂದ್ರಸನ್ನಿಭಯಶೋನ್ನತೆ ನಿರ್ಮಳಸಚ್ಚರಿತ್ರೆ ಚಂ
ಪಕನುತಗಂಧೆ ಜೈನಪದಭಕ್ತೆ ಮನೋಹರರೂಪೆ ಕಾಮಿನೀ
ನಿಕರಕವೋಘರತ್ನೆ ನೆಗಳ್ವೋಹಿಲೆಯೆಂಬುದು ಭವ್ಯಸಂಕುಳಂ] [1] ॥

ಅಂತು ನೆಗಳ್ತ್ತಗಂ [ಪೊಗಳ್ತ್ತಗಂ] ನೆಲೆಯಾದೋಹಿಲೆವುಹಾದೇವಿ ಸುಖಸಂಕಥಾವಿನೋದದಿಂದಿರೆ, [ಮತ್ತಮಾಪುರದೊಳ್ ಸಮುದ್ರದತ್ತನೆಂಬ ಪರದನಾತನ ಪೆಂಡತಿ ಧನದೆಯೆಂಬಳಾಯಿರ್ವರುಂ ಪಲಕಾಲಂ ಸುಖಮನನುಭವಿಸುತ್ತಿರ್ಪುದುಂ ಸಮುದ್ರದತ್ತಸೆಟ್ಟಿ ತೊಟ್ಟನೆ ಕೊಳೆ, ಇವನ ಮೂತರ್ ಬರ್ಪಂತಾನುಂ ಸಮುದ್ರದತ್ತಸೆಟ್ಟಿಯ ಮಹಾಶ್ರೀಗೆ ಕರ್ಮರಾಜನ ರಾಣಿ ಬರ್ಪಂತಾನುಂ ಧನದೆಗೆ ಗರ್ಭಮಪ್ಪುದುಂ ॥

ಸಿರಿಯೆಲ್ಲಂ ನೆವನೆವದಿಂ
ದುರಿಯೊಳ್ ಬಿಲ್ದಿರಿಗಿನಂತೆ ಕರಗುವುದುಂ ನಿ ।

ಗೊಂಡು ಬಂದು ಸೋವುದತ್ತಭಟ್ಟಾರಕಗೆ ವಜ್ರಕುವಾರನೊಳಾದವೃತ್ತಾಂತ ಮೆಲ್ಲಮುಂ ಪೇಳ್ದು ದೀಕ್ಷೆಯುಂ ಕೊಡಿಸಿ ಮನಗಳ್ದ ಪೋಪರಿತ್ತಲೆ ॥

ಪದ್ಧತಿಯಿಂದಂ ಚಾರಣವೃದ್ಧಿ ದಿಟಂ ಸುಳವಿನಿಕರಪಿಕಮೊಳಕಂದಂ ।
ಗುದ್ಧತಿಯಿಂದಂ ಮನಸಿನ ಸಂಶುದ್ಧತೆಯುಂ ತೋರ್ಪ ತೆಱದಿನೊಗೆಯಿತ್ತಾಗಳ್ ॥ (ಗ)

[1] ಓಹಿಲೆಯೆಂಬಳ್ ಧರ್ಮೋದೆ್ಯೋಗದಿನಾವನಿತೆ ಸೀತೆಗಂ ಜಿನಪೂಜೋ ।
ತ್ಸಾಹದಿನಾವಧು ಕಚಿಗಂ ತಾನಗ್ಗಳೆಮೆಂದು ಧರಣಿ ತಾಂ ಕೈನುಡಿಗುಂ॥(ಗ)

ಷ್ಮರಮಪ್ಪ ದರಿದ್ರತೆ ಪೊ
ರ್ದಿರೆ ಕೂಟ್ಟಿಂ ಸಿರಿಗಮೆಂದು ತಾಂ ಗೆಂಟಾದರ್ ॥ ೧೪೯

ಮುನ್ನಿನ ಸಿರಿಯುಂ ನೆನೆನೆನೆ
ದುನ್ನತಿಗೆಟ್ಟಳವುಗೆಟ್ಟು ಬಡತನದೊದವಿಂ।
ದನ್ನಂಬಡೆಯದೆ ಮೆಱುಗಿ ಕ
ರನ್ನೋವಿಂ ಪೆಂಪುಗೆಟ್ಟು ನವೆಯುತ್ತಿರ್ದರ್ ॥ ೧೫೦

ಅಂತು ಬಡತನವೊದವೆ ಸಮುದ್ರದತ್ತಸೆಟ್ಟಿಯುಂ ಧನದೆಯುಂ ದುಃಖಮೆಂಬ ಸುಱಿಯೊಳ್ ಬಿದರ್ದು ಮೂಡಿ ಮುಟ್ಟಿಕ್ಕಡುತ್ತಿರೆ, ಕವರ್ತೆಯು ಮೇಲೆ ಕೊಲೆಯೆಂಬಂತೆ, ಬಡತನದ ಮೇಲೆ ಮಾರಿಗುತ್ತ ಮೊಗೆ ಪಿರಿದಪ್ಪಾಪತ್ತಂ ಮಾಡಿದ ಮಗವಿನ ವೊಗಮನೇಗೆಯುದ್ದಂ ನೋಡಲೊಲ್ಲನೆಂಬಂತೆ ಸಮುದ್ರದತ್ತಸೆಟ್ಟಿ ಯಮನಿವಾಸಮನೆಯುದ್ದುವುದುಂ ಧನದೆಗೆ ದುಃಖಮಿರ್ಮಡಿಸಿ ಚಿಂತಾಸಮುದ್ರದೊಳೋಲಾಡುತ್ತಿರ್ದು ನವಮೊಸಂ ನೆಱೆದು ಪೆಣ್ಣಾಸಂ ಪೆತ್ತು ॥ ೧೫೧

ತಂದೆಯುನವೆಯುವೆದಿಂದಂ
ಕೊಂದೀಶಿಶು ಬೇಗಮೆನ್ನುಮಂ ಕೊಲ್ಗುಂ ಪೋ।
ಸಂದೆಯಮಿಲ್ಲೆನ್ನಾಣ್ಮನೊ
ಳೊಂದುವೆನಾಂ ಮುನ್ನಮೆಂಬ ತೆಱದಿಂದಾಗಳ್ ॥ ೧೫೨

ಧನದೆಯುಮನದೆಯಾಗಿ ಕೆಲವುದಿವಸಕ್ಕೆ ಕ್ರೂರಾಂತಕನ ದಾಡೆಗೊಳಗಪ್ಪುದುಂ, ಕೂಸನಾಥೆಯಾಗಿ ಪೂರ್ವಕೃತಕರ್ಮಫಲಮನನುಭವಿಸುತ್ತುಂ ಕೂಪ್ಪಡೆಯದೆ ಪೊಱಲೊಳಗೆಂಜಲಗುಱಿನಾಯ್ದಲಸಿ ಕುಱುಕುತ್ತುಂ ಬೀದಿಯೊಳ್ ಪೆಱಿರ್ವೆಂಲೀಡಾಡಿದ ಪಣ್ಣಲಂಗಳಂ ಮೆಲುತುಂ ಕಾಲಮುಂ ಕಳೆಯುತ್ತುಮಿಪ್ಪುದುನೊರ್ವೆ ॥ ೧೫೩

ಜಿನತತ್ವಾಂಭೋನಿಧಿವೆ
ರ್ಧನಚಂದ್ರರ್ ದುರಿತವಾರ್ಧಿಬಡಬಾನಳರಿಂ।

ದ್ರನಗಹ್ಹಮೆರಂತಭಿನಂ
ದನರುಂ ನಂದನರುಮೆಂಬರಿರ್ವರ್ಮುನಿಗಳ್ ॥

ಚರಿಗೆಯಂ ಮಾಡಿ ಪೋಗುತ್ತುಂ ಕಸಗುಪ್ಪೆಯೊಳಂಜಲಗ
ನಾಯ್ದಲಸಿ ತಿಂಬ ಮೆಗುವಂ ಕಂಡು ನಂದನಮುನೀಂದ್ರರ್ ವಿಸ್ಮಯ
ಬಿಟ್ಟು ಸಂಭಾರದಿಂ ಬಿಟ್ಟು ಕಷ್ಟಮಿಲ್ಲೆಂಬುದುಮೆಭಿನಂದನಭಟ್ಟಾ
ಕರಿಂತೆಂದರಿಂತುನವೆವೀಮೆಗವೀ ಪುರಮನಾಳ್ವ ಪೂತಿವಾಹನಮೆಹಾ
ಜಂಗೆ ಪ್ರಾಣವೆಲ್ಲಭೆಯುಪ್ಪೆಳೆಂಬುದುಮೊಮಾತಂ ಪೆಱಿಗೆ ಬರು
ಮಿರ್ದ ಬುದ್ಧಾತ್ಮನೆಂಬ ರಕ್ತಾಂಬರಧರಂ ಕೇಳ್ದ ಋಷಿವಾಕ್ಯಂ ತ
ದೆಂದು ಮೆಗವಂ ತನ್ನ ದೇಹಾರಕ್ಕೊಯ್ದು ಬುದ್ಧದಾಸಿಯೆಂದು ಪೆ
ನಿಟ್ಟು ನಡೆಪುವ್ರದುಂ ॥ ೧೩

ಪುರುಡಿಸುವಳೆ ವಿಳಾಸದ ಪ್ರೊದಱ್ಕೆಗೆ ವಿಭ್ರಮದೇಱ್ಗೆಗಂಬರ
ಚರಿಯರೊಳಿಂದ್ರಲೋಕಲಲಿತಾಂಗಿಯರೊಳ್ ಕಡುಗಾಯ್ದುಡರ್ತು ವ
ಚ ರಿಸುವಳುನ್ನತಿಕ್ಕೆಗೆ ಬೆಡಂಗಿನ ತೋರ್ಕೆಗೆ ನೋಡ ನಾಡ ಸೌಂ
ದರಿಯರೊಳಾವಗಂ ಸೆಣಸುವಳೆ ಸಲೆ ಗಾಡಿಗವುನ್ನತಿಕ್ಕೆಗಂ ॥ ೧೪

ಅಂತು ಮಹಾಹಾವಭಾವವಿಲಾಸವಿಭ್ರಮಂಗಳ್ಗೆ ನೆಲೆಯಾಗಿ ಬು
ದ್ಧದಾಸಿ ಶೃಂಗಾರದುಳಿಯುಮಾಗಿರ್ದೊಂದುದಿವಸಂ ದೇಹಾರದ ಪೆಱಿಗಣ ನಂದ
ವನದೊಳುಯ್ಯಲಾಡುತ್ತುಮಿಪ್ಪುದುಂ, ಪೂತಿವಾಹನಮೆಹಾರಾಜ ನ
ಸಿಂಧುವಾರೂಢನಾಗಿ ಬೀದಿಯೊಳ್ ಪೋಗುತ್ತುಂ ತೊಟ್ಟನೆ ಕಂಡು॥೧೫

ಸ್ಮರನ ಸರಲ್ಗಳ್ ನಡುಕೋ
ಲ್ವಡೆಗಂ ನಡೆ ಪೂತಿವಾಹನಂ ಪೋಗದೆ ನಿಂ ॥
ದರವಿಂದಾಕ್ಷಿಯ ರೂಪಂ
ಪರಿಭಾವಿಸಿ ನೋಡಿ ತೂಗಿ ತಲೆಯಂ ಬೇಗಂ ॥ ೧೬

ಆತನೆನೆಗೆ ಪೋಗಿ ವಿರಹಸಂತಾಪದಿಂ ನಿಲಲಾಱದೆ ಬುದ್ಧ
ಸಿಯುಂ ಬೇಡಿ ಪೆರ್ಮಡೆಗಳಂ ಬುದ್ಧರಕ್ತಾಂಬರನಲ್ಲಿಗಟ್ಟುವುದು

ಬುದ್ಧಾತ್ಮಂ ತಿರಿವಂಗೆ ಸಿರಿ ದೊರೆಕೊಂಡಂತೆ ಪೆರ್ಚಿ ಋಷಿವಾಕ್ಯಮೇಕೆ ತಪ್ಪುಗುಮೆಂದು ಮನದೊಳ್ ಬಗೆದು ಸಿರಿ ಬರೆ ಮೊಣಕಾಲನಾಂತ ರೆಂಬಂತೆ ನಿನ್ಮಕ್ಕರಸಂಗಂ ಪ್ರಾಣಮುಮನರ್ಥಮುಮೆನೀವೆಂ ಕೂಸಾವ ಪಿರಿದೆಂದು ಕುಡುವುದುಂ, ಪೂತಿವಾಹನಮೆಂಬಾರಾಜಂ ಬುದ್ಧದಾಸಿಯೊಳ್ ಪ್ರಾಣವಲ್ಲಭನಾಗಿ] [1] ॥ ೧೬೯

ರತಿಪತಿಯು ಟಕ್ಕು ಕೊಳೆ ಭೂ
ಪತಿ ಮತ್ತಿನ ಕಾಂತೆಯುರ್ಕಳಂ ನೋಡದೆ ಸ ।
ನ್ನುತಮೆಪ್ಪ ಪೆಱುವುಕಾರ್ಯಮು
ನತಿಶಯದಿಂ ಬಿಟ್ಟು ಕೇಳದನ್ಯರ ಮಾತಂ ॥ ೧೭೦

[ಬುದ್ಧದಾಸಿಯಸೆ ಪತ್ತಿ ಕಣ್ಣೆ ವೆಯಿಕ್ಕುವೆನಿತುಪ್ಪೊತ್ತಪ್ಪೊಡ ಮಗಲದೆ ಕೂರ್ವೆಯಿಂದಿರ್ಪುದುಂ ಸಕಲಗುಣನಿಳಯೆಯೆನಿಪೋಹಿಲೆ ಮಹಾದೇವಿ ಫಾಲ್ಗುನದ ನಂದೀಶ್ವರದಂದು ಮಹಾಮಹಿಮೆಯಿಂ ಜಿನಪೂಜೆಯಂ ಪೊಱಮಡಿಸುವುದುಂ ಬುದ್ಧದಾಸಿ ತನಗೆ ಪೂತಿ ವಾಹನಮಹಾರಾಜನೆರಡಿಲ್ಲದೆ ಸ್ನೇಹಂಗೆಯ್ವನಪ್ಪುದಱಿಂ ಜಿನಪೂಜೆಗೆ ವಿಘ್ನಮಂ ಮಾಡಿ ತಮ್ಮರ್ಚ್ಯನಪ್ಪ ಬುದ್ಧಾತ್ಮನ ಮತದಿಂ ಮುನ್ನಂ ಬುದ್ಧನ ಪೂಜೆಯುಂ] [2] ॥ ೧೭೧

---

1 ಆಪುರಕ್ಕ ಯಱಿನಂದನಭಟ್ಟಾರಕರೆಂಬ ಋಷಿಯರ್ ತಮ್ಮ ಶಿಷ್ಯರ್ ನಂದನ ರೆಂಬ ಋಷಿಯರ್ವೆರಸು ವಿಹಾರಿಸುತ್ತಂ ಱಂದು ಪೊಱವೊಳೆಲೊಳಗಿರ್ಪುದುವೊಂದು ಪೆಣ್ಣಾಸನಾಥೆ ಕಾಯಿಕಸವನೆಂಜಲುಗೂಳಿನಾಯ್ದಾಯ್ದುತಿನ್ನುತ್ತಿರ್ಪುದುಂ, ನಂದನವುನಿಗುರುಗಳ್ಗೆ ತೋಱಿ ಸಂಸಾರದಿಂದಂ ಬಿಟ್ಟು ಪಗರಣಮಿಲ್ಲಿಂಱುದುವುವರ ವಧಿಜ್ಞಾನಿಗಳಪ್ಪುದಱಿಂ ನೀಂ ಪೇಳ್ದಂತುಟೆ ಸಂಸಾರಂ ದಿಟಂ ಪಗರಣಮಿಲ್ಲೀವುಗವೆ ಪೂತಿವಾಹನವುಾರಾಜಂಗೆ ಪ್ರಾಣವಲ್ಲಭೆಯುಾದಪಳೆಂಬುದುಂ ಬುದ್ಧಾತ್ಮನೆಂಬ ಬೌದ್ಧಂ ಕೇಳ್ದು ಸವುಣೋ ಅವೋಘೆನಯುಣೋ ಎಂಬುದು ತಪ್ಪದೆಂದು ವುಗೆಂದ ವಿಹಾರಕ್ಕೊಯ್ದು ಬುದ್ಧದಾಸಿಯೆಂದು ಪೆಸರನಿಟ್ಟು ನಡಪುವುದುಂ ಪೂತಿವಾಹನ ಮಹಾರಾಜಂ ಕಂಡು ಕಣ್ಪೇಱುಂಗೊಂಡು ತನಗರಸಿಯಾಡಿ (ಗ)

2 ಇಪ್ಪುದುಂ ಱಹಿಲೆಮಹಾದೇವಿ ಫಾಲ್ಗುಣನಂದೀಶ್ವರದೊಳ್ ಜಿನಪೂಜೆಯುಂ ವಱಡಲೆಂದೊಡರಿಸೆ ಬುದ್ಧದಾಸಿ ತಾನರಸನ ಕೂರ್ವೆಯನಱಿವಳಪ್ಪುದಱಿಂ ಬುದ್ಧಾತ್ಮನ ಮತದಿಂ ಜಿನಪೂಜೆಯಂ ವಾಣಿಸಿ ಬುದ್ಧ ಪೂಜೆಯುಮುಂ ಮುನ್ನಂ (ಗ)

ಅವೆಯುವೆದಿಂದಂ ಪೊಱಮೆಡಿ
ಸುವ ಬಗೆಯಿಂ ರತಮನೊಪ್ಪವೊಗಿರೆಳಗಮು ।
ತ್ಸವದಿಂ ಮಾಡಿಸಿ ವಾರಣ
ನಿವಹಂ ಹಯನಿಕರವಾರವನಿತಾನಿಚಯಂ ॥ ೧೬೮

ಬೆರಸಗುರ್ವಾಗೆ [ಬುದ್ಧದಾಸಿ ಫೆರ್ಚಿಂದಂ] ಇರ್ಪುದುಂ ಓಹಿಲೆ ಮೆಹಾದೇವಿ ಬುದ್ಧದಾಸಿ ಜಿನಪೂಜೆಯಂ ಮಾಡಿಸಿ ಸುಗತನ ರಥಮುಂ ಪೊಱಮೆಡಿಸಿದಳೆಂದು [1] ಸಭಾಕ್ಷೋಭವೊಗೆ ಗರ್ಜಿಸಿ ॥ ೧೬೯

ಜಿನಪನ ಕೂರ್ಮೆಯನಾಕಾ
ಮಿನಿ ನಂಬಿ ಮಹಾಪ್ರತಾಪದಿಂ ಪೆಱರಂ ದು ।
ರ್ಮನದಿಂ ಕೈಕೊಳ್ಳದೆ ಕೆ
ವ್ಮನೆ ತನ್ನನೆ ಕೊಂಡು ಕೊನೆದು ಪೊಗೞುಸುತಿರ್ಪಳೆ ॥ ೧೭೪

ಆದಿಯ ತಿರಿಕಂಗೊರ್ಮೆಯೆ
ವೇದಿನಿ ದೊರೆಕೊಂಡುದಪ್ಪೊಡೇಂ ಮುನ್ನಂ ತಾ ।
ನೋದಿಲ್ಲದವನ ನಂದನ
ನೋದಿದೊಡಂ ಬಗೆವನಲ್ಲನನ್ಯರನೆಂದುಂ ॥ ೧೭೫

ವಾಂತಿಯು ಪೆಸರ್ ವೈಲಾರವೆಂಬಂತೆ, ಪೊಲೆಯರಾಡಿನ ಪೆಸರ್ ಮೊಣಿಕದೇವಿಯೆಂಬಂತೆ, ತೊತ್ತಿನ ಪೆಸರ್ ಸಿರಿಯ ದೇವಿ ಯೆಂಬಂತೆ, ಎಮ್ಮೆಯ ಪೆಸರ್ ಮಹಾದೇವಿ ಯೆಂಬಂತೆ, ಓಡಿನ ಪೆಸರ್ ಮಂಗಳ ವೆಂಬಂತೆ ತಾನುಮರಸುಗುಂ [ಮುಯ್ಪಾಂತು ಸೊಕ್ಕಿ] ತಮ್ಮಯ್ಯನಪ್ಪ ತಂಗುಱ್‌ದಿರಿಕನ ಮಾತಂ ಕೇಳ್ದು ದಕ್ಷಿಣಮಧುರಾಪುರದೊಳಂ ದುಂಪೊಱಮೆಡದ ಸುಗತನ ರಥಮುಂ [2] ಪೊಱಮೆಡಿಸಿ [ಸದಾಕಾಲಂ ಪೊಱಮೆಡುವ] ಪಾಂಡ್ಯಾನ್ವಯಸ್ವಾಮಿಯಪ್ಪ ಜಿನಸ್ವಾಮಿಯ ಪೂಜೆಯಂ [ಪೊಱಮೆಡಲೀಯದೆ ಕೊರ್ವಿದೊಡೇನಾಯ್ತು, ಪೂತಿವಾಹನ ಮೆಹಾ

1 ಇರ್ಪುದುಂ ಅದನೊಹಿಲೆಮಹಾದೇವಿ ಕೇಳ್ದು (ಗ)
2 ಬುದ್ಧಪೂಜೆಸುಂ (ಗ)

ರಾಜನ ಕೂರ್ಮೆಯ ಪೆಂಡತಿಯಪ್ಪ ತನ್ನ ದಲಮುಮೆನ್ನ ದಲಮುಂ ಕಾದಲಕ್ಕುವೆಂದು ಪೂಣ್ದು ಸೋಮದತ್ತ ಮುನಿಪತಿಯುಲ್ಲಿಗೆ ವಂದು ಭಕ್ತಿಯಿಂ ಬಂದಿಸಿ ತನಗಾದಪಮಾನಮಂ ಪೇಳ್ದು] [1] ॥ ೧೫೬

ಪರಮೆಜಿನೇಶನ ರಥಮಿ
ಪುರದೊಳ್ ಮುನ್ನಿಂತು ನಡೆವುದಾಮಾರ್ಗದೊಳೂ ।
ಪ್ಪರೆ ನಡೆದೊಡುಣ್ಬೆನಲ್ಲದೊ
ಡರವರಿಸುವಳಲ್ಲೆನಿನಗೆ ಯಾವಜ್ಜೀವಂ ॥ ೧೫೭

ಆಹಾರಶರೀರನಿವೃತ್ತಿ ಯೆಂಬುದುಂ [ಸೋಮದತ್ತಭಟ್ಟಾರಕರಿಂ ತೆಂದರ್ : — ವಜ್ರಕುನಾಥಮುನಿಕುಂಜರನಿಂ ನಿನ್ನ ಕಾರ್ಯಂ ತೀರ್ಗುಂ ನೀವಿದಕ್ಕುಮ್ಮಳಿಸದೆ ಅಲ್ಲಿಗೆ ಪೋಗಿಮೆನೆ ವಾತ್ಸಲ್ಯರತ್ನಾಕರನಲ್ಲಿಗೆ ಪೋಗಿ ವಿಧಿಪೂರ್ವಕಂ ಬಂದಿಸಿ ತನ್ನ ಮನದ ಕಾರ್ಯಮುಂ ನೆಱಿಯೆ ಪೇಳ್ದು, ಸೋಮದತ್ತ ಮುನೀಶ್ವರನು ಮುಂದೆ ನುಡಿದ ಪ್ರತಿಜ್ಞೆಯಂ ಮೊಡುವುದುಂ ಸವ್ಯಕ್ತವಚೂಡಾಮಣಿ ತನ್ನೊಳಿಂತೆಂದಂ ॥

ಕಲ್ಯಾಣಮುಮೆನಿಸುವ ವಾ
ತ್ಸಲ್ಯಂ ಕೇವಳಮೆ ಸರ್ವಸೌಖ್ಯಕ್ಕಂ ಮಾಂ ।
ಗಲ್ಯಂ ಮುಕ್ತಿಶ್ರೀಗಿದು
ಮೌಲ್ಯದ ತೊಡವುರ್ಗ್ರಕರ್ಮಭಯಸಂಹರಣಂ] [2] । ೧೫೮

ತತ್ಸೌಖ್ಯಮೆನೊಲ್ವ ನರಂ
ಮೊತ್ಸರ್ಯಮೆನೆಯ್ದಿ ಬಿಟ್ಟು ಚಾತುರ್ವರ್ಣ್ಯ ।
ಕ್ಕುತ್ಸವದಿಂದಂ ಮಾಟ್ಟುದು
ವಾತ್ಸಲ್ಯಮನಱಿದು ಜೈನವಚನಾಂಬುಧಿಯೊಳ್ ॥ ೧೫೯

---

1 ನೂಱಿಸಿದೆಳ್ತನ್ನರಸಿತನಮಂ ಕಾಣಲಕ್ಕುವೆಂದು ಸೋಮದತ್ತಭಟ್ಟಾರಕರಲ್ಲಿಗೆ ಬಂದು (ಗ)

2 ಸಹಜಕವಿಜನಪಯಃಪಯೋಧಿಹಿಮಕರಾ ಕೇಳ್ದ (ಗ)

ಪಡಿಯಿಲ್ಲದ ಮನೆಯುಂ ಪೆ
ರ್ಗಡೆಯಿಲ್ಲದ ರಾಜ್ಯಮುಂ ಮಹಾ [1] ವಾತ್ಸಲ್ಯಂ ।
ಗಡಮಿಲ್ಲದ ಗುಣಗಣಮುಂ [2]
ಬಡವನ ಯೌವನಮು [3] ಮೊಪ್ಪಲಾಱವು ಜಗದೊಳ್ ॥ ೧೪೧

ಅದಱಿಂ ವಾತ್ಸಲ್ಯಮೆಂಬುದು ಸಾಮಾನ್ಯಮೆಲ್ಲದಿದನುದಾಸೀನಂಗೆ ಯ್ಯಲಾಗದೆಂದು ಸಹಜಕವಿಜನಮೆನೋಹರೋದ್ಯಾನಕಳಕಂಠನೋ ಹಿಲೆಮೆಹಾದೇವಿಗಿಂತೆಂದಂ ॥ ೧೪೨

ವಾರಿಜನೇತ್ರೆ ದಿವ್ಯಗುಣಭೂಷಣೆ ಭವ್ಯಜನಾನುರಾಗೆ ನಿ
ಷ್ಕಾರಣಮೇಕೆ ಪೂಣ್ಕೆ ನಿನಗುರ್ವಿಯೊಳಾವಗಮೊವೆಕಾರ್ಯಮುಂ
ತೀರದದುಂಟೆ ನಾಳೆ ಜಿನಪೂಜೆಯನಚ್ಚರಿಯಾಗೆ ಖೇಚರ
ಶ್ರೀರಮಣೀಶ್ವರಿಂ ನಡೆಸುವೆಂ ನಿನಗುತ್ಸವಮಾಗಲರ್ತಿಯಿಂ [4] ॥ ೧೪೩

[ಎಂಬುದುಂ, ಓಹಿಲೆಮಹಾದೇವಿ ಸುಕವಿನಿಕರ ಪಿಕಮೊಕಂದನ ವಚನದಿಂ ಚಂದ್ರೋದಯದ ಸಮುದ್ರದಂತೆ ಪೆರ್ಚಿಂದಮಿರ್ದುದುಂ ವಾತ್ಸಲ್ಯರತ್ನಾಕರಂ ಚಾರಣಋದ್ಧಿ ಪ್ರಾಪ್ತನಪ್ಪುದಱಿಂ ಪವನವೇಗದಿಂ ದಮರಾವತೀಪುರಮನೆಯ್ದಿ ರಾಜಮಂದಿರಮಂ ಪುಗುವುದುಂ ॥ ೧೪೪

ಶ್ರೀವೆದ್ವಜ್ರಕುಮಾರಮ
ಹಾಮುನಿಪನ ಬರವನಱಿದು ಭಾಸ್ಕರದೇವಂ ।
ಶ್ರೀವಹಿತನೊಸೆದು ಪಡೆದು ಮ
ಹಾವೈಭವದಿಂದೆಱ್ದು ಸಿಂಹವಿಷ್ಟರದಿಂದಂ ॥ ೧೪೫

ಅಂತು ಮೆಣಿಮೊಲೆಯಹಾದೇವಿಗಿದಿರೆಱ್ದು ಬಂದು ಬಲಗೊಂಡು ಬಂದಿಸಿ ಭಕ್ತಿಯಿಂದಿದಿರ್ಗೊಂಡು ಪೊಗೞ್ದು ವಿಸ್ತೀರ್ಣಮೆಪ್ಪ ವಿಷ್ಟರಮನೇಱಿಕ್ಕಿ ಕಾಲಂ ಕೞ್ಚಿ ತಳೋದಕಮಂ ತಲೆಯುಂ ಮೇಲೆ ತಳೆದುಕೊಂಡು ॥ ೧೪೬

---

1 ರಾಜ್ಯಲಕ್ಷ್ಮಿಯುಂ (ಗ) 2 ಗುಣಮುಂ ಮೇಣ್ (ಗ)
3 ಪೆರ್ಮಾತು (ಗ)
4 ಶ್ರೀರಮಣೀಶ್ವರಿಂ ನಡಸುತಮ್ಮುಳಿವರ್ಗುಪಭೂತವಪ್ಪಿನಂ (ಗ)

ಸುರತರುವಿನ ವೊಲ್ಲೆಯ ಪಾ
ದರಿಯ ನವೀರುವಿನ ಪಾರಿಜಾತದ ಪುಷ್ಪೋ ।
ತ್ಕರದಿಂ ವಜ್ರಮುನೀಂದ್ರನ
ಚರಣಮನಾನಂದಚಿತ್ತದಿಂ ಪೂಜಿಸಿದರ್ ॥ ೧೪೭

ಅಂತು ಪೂಜಿಸಿ ಮುನಿಕುಂಜರನ ಬರವಿಗೆ ಪೆರ್ಚಿ ಕಿಱಿದು ಬೇಗಂ ಭಾಸ್ಕರದೇವನುಂ ಮಣಿಮಾಲೆಯುಂ ಸಮ್ಯೋಕ್ತ್ವಚೂಡಾಮಣಿಯ ಕಾಲ್ಗಳಂ ತಮ್ಮ ತೊಡೆಯಮೇಲಿರಿಸಿ ಮೆಲ್ಲಮೆಲ್ಲನೊತ್ತುತ್ತುಂ ಧರ್ಮಮಂ ಕೇಳ್ದು ತದನಂತರಂ ಮುನೀಂದ್ರೋತ್ತಮರ ಮೊಗಮಂ ನೋಡಿ ಕರಕಮಳಮುಕುಳಿತರಾಗಿರ್ದಿಂತೆಂದರ್] [1] ॥ ೧೪೮

ಉಮ್ಮಳಿಕೆ ಪೋಯ್ತು ನಯದಿಂ
ದೆಮ್ಮಘನಿಕುರಂಬಮಿಂದು ನೆಟ್ಟನೆ ಪೋದುವು ।
ನಿಮ್ಮಡಿ ಸಂತಸದಿಂದಂ
ನಿಮ್ಮ ಶ್ರೀಪಾದಪದ್ಮಮಂ ಕಂಡೀಗಳ್ ॥ ೧೪೯

[ಎಂದು ತಮ್ಮ ಭಕ್ತ್ಯಯಂ ಪೊಱಗಣ ಜನಕ್ಕೆ ತೋರ್ಪಂತೆ ನುಡಿದವರ್ನಿಮ್ಮಡಿ ಬೆಸನಾವುದು ಬೆಸಸಿಮೆನೆ ಭಾಸ್ಕರದೇವಂಗೆ ವಾತ್ಸಲ್ಯರತ್ನಾಕರನಿಂತೆಂದಂ. ನೀಂ ನಿಮ್ಮ ಸಮಸ್ತವಿದ್ಯಾಧರಬಲಂಬೆರಸು ಎಮ್ಮೊಡನೆ ದಕ್ಷಿಣಮೆಧುರಾಪುರಕ್ಕೆ ವೆಂದು ಪೂತಿವಾಹನಮೆಹಾರಾಜನ ಪರಿಯುರಸಿಯಪ್ಪೋಹಿಲೆಮೆಹಾದೇವಿಯು ಜಿನಪೂಜೆಯಂ ಪೊಱಮಡಿಪುದೆಂಬುದುಂ, ಮೆಹಾಪ್ರಸಾದಮಂತೆಗೆಯ್ವೆಮೆದಾವ ಗಹನಮೆಂದುಭಯಶ್ರೇಢಿಯ ವಿದ್ಯಾಧರರ್ಗೆಲ್ಲಂ ಬಿಟಿಯನಟ್ಟುವುದುಮೆರಡುಗೇಳದೆ ತಂತಮ್ಮ ಮಹಾವಿಭೂತಿಯಿಂದೊದವಿ ವಿದ್ಯಾಧರಮಹೀವಲ್ಲಭರಮರಾವತೀಪುರಕ್ಕೆ ವಪ್ಪುದುಂ ॥ ೧೫೦

[1] ಎಂದು ಸಂತೋಷಂಬಡೆ ನುಡಿದು ಚಾರಣವೃದ್ಧಿಪ್ರಾಪ್ತನಪ್ಪುದಱಿಂದ ಪುರಾವತಿಪುರಕ್ಕೆ ತಕ್ಷಣದಿಂ ಪೋಪುದುಂ ಭಾಸ್ಕರದೇವನುಂ ಮಣಿಮಾಲೆಯುಮಹಾದೇವಿಯುಮಿದಿರ್ಗೊಂಡುಚ್ಚಾಸನದೊಳಿರಿಸಿ ಕಾಲಂ ಕಳ್ದಿ ಪಾಡೋದಕಮಂ ತಳೆಯು ಮೇಲೆ ತಳೆದುಕೊಂಡು ಪೂಜಿಸಿ (ಗ)

ಅರಮನೆಯಿಂದಂ ವಿಬುಧೇ
ಶ್ವರನಿಕರಂ ರಾಜಲೀಲೆಯಿಂ ಪೊಱಮಟ್ಟಾ ।
ದರದಿಂ ಸಮಸ್ತವಿದ್ಯಾ
ಧರರಾಜರ್ವೆರಸು ವಜ್ರಮುನಿಪನ ಬೆಸನಿಂ] [1] ॥ ೧೯೧

ದೆಸೆ ಮಾರ್ದನಿಯಿಡೆ ಪಱಿ ಘೂ
ರ್ಣಿಸೆ ದುಗ್ಧಾಂಬುಧಿಯ ತೆಱೆಗಳಂ ಪೋಲ್ತೆತ್ತಂ ।
ಪಸರಿಸೆ ಗಗನದ ತಳದೊ
ಳ್ಮಿಸುಗುವ ಬೆಳ್ಗೊಡೆಯವೆಸೆವ ಮುತ್ತಿನ ಕೊಡೆಯುಂ ॥೧೯೨

ನೆರೆದು ಮಹೀಧರತತಿಗಳ್ [2]
ಧರೆಯಂ ಬಿಟ್ಟಂತರಿಕ್ಷದೊಳ್ ತಮ್ಮಿನಿತುಂ ।
ಕರವೊಪ್ಪಿರ್ದಪ್ಪುವೆಂಬಂ
ತಿರೆ ರಂಜಿಸಿದುವ್ವು ಮದಾಂಧಸಿಂಧುರಘಟೆಗಳ್ ॥ ೧೯೩

ತಾರಾವಳಿಗಳ್ ವಜ್ರಕು
ಮಾರಮುನೀ [3] ಶ್ವರನನಿದಿರ್ಗೊಳಲ್ ಬಂದು ಸವಿ ।

---

1 ಬೆಸನಾವುದು ಮುನಿವಲ್ಲಭ ಬೆಸಸೆಂಬುದು ಸುಕವಿನಿಕರಪಿಕವಾಕ್ಯಂದಂ ।
ಬೆಸಸಿದನಂಬರಚರಗತಿಗಸಹಾಯಪರಾಕ್ರಮಂಗೆ ತನ್ನೊಲವಿಂದಂ ॥

ನಿನ್ನ ಸಕಲವಿದ್ಯಾಧರಬಲಂ ಬೆರಸು ದಕ್ಷಿಣಮಧುರೆಗೆ ಬಂದು ಪೂತಿವಾಹನ ಮಹಾವಾಜನಾತನ ಬಿರಿಯಾಸಿ ವೋಹಿಲೆನಹಾದೇವಿಯ ಬೇಳ್ದ ದನೆ ಗೆಯ್ದು ನಂದೀಶ್ವರದಷ್ಟಾಹ್ನಿಕಮಂ ಮಾಡುವುದೆಂಬುದು ಮಹಾಪ್ರಸಾದ ಬೆಸನಂ ಕೈ ಕೊಂಡೆನೆಂದುಭಯವಿದ್ಯಾಧರಶ್ರೇಢಿಯನಾಯ್ತರ್ಲ್ಲರುಮಂ ಬರಿಸಿ, ಅರಮನೆಯಿಂದಾಳಿ ಭಾಸ್ಕರದೇವವಿಯಚ್ಚರೇಶ್ವರಂ ಪೊಱಮಟ್ಟಂ ಕರನಿಧಿ ಪಲವುಂ ಘೂರ್ಣಿಸಿ ವೊಱೆವಂತಿರೆ ಪಱೆಯಾದನಿಗಳೊಡನೆಸೆವಿನೆಗಂ ॥ ಕರನಿಧಿ ನೋಡಲ್ವೇಳ್ಕುಂಬರಚಕ್ರವನೆಂದು ನೆಲರಿ ನೆಗಳ್ದ ಪರಂಬಂ ತಿರೆ ಗಗನತಳದೊಳೊಪ್ಪಂ ದಿರಸಿದುದು ನಡೆದ ಖೇಚರೇಶ್ವರಸೈನ್ಯಂ ॥ ಪಸ್ನೆರಡುಗಾವುದಗಲಂ ಪುಸ್ನಂ ಮೂವತ್ತುಪಾಲ್ಕುಗಾವುದ ನೀಳಂ ತನ್ನೊಡನೆನಡಪುದೆಂದತ್ಯನ್ನತಿಯಿಂ ಖೇಚರಾಧಿನಾಥನ ಕಟಕಂ ॥ (ಗ)

2 ಪರಿದೆಲ್ಲಾ ಪರ್ವತಮುಂ (ಗ) 3 ಖಚರಶ್ರೀರಮಣೀ (ಗ)

ಸ್ತ್ರಾರದಿನಿರ್ದಪುವೆನಿಸಿದ
ಪೋರಂತಿರೆ ತುಱುಗಿದವಳ ತುರಗಚಯಂಗಳ್ ॥ ೧೯೪

ಮುನಿದಿಂದ್ರಂಗೆ ಸುರಾಂಗನಾತತಿ ಸುರೇಂದ್ರಾವಾಸದಿಂ ಪಳ್ಳವಂ
ದು ನಿತಾಂತಂ ನೆರೆದಿರ್ದರಂಬರದೊಳಂಬಂತೊಪ್ಪಿ ವಿದ್ಯಾಧರಾಂ
ಗನೆಯರ್ ಕೋಮಲಗಾತ್ರಿಯರ್ ವಿಕಸಿತಾಂಭೋಜಾಕ್ಷಿಯರ್ ಖೇಚರಾ
ವನಿಪಾಲರ್ಕಳ ಚಿತ್ತಮಂ ಕದಡುತುಂ ಬಂದರ್ ಮಹೋತ್ಸಾಹದಿಂ॥೧೯೫

[ಮತ್ತಂ ಬಱಿಲ್ಮುಡಿಯು ಸೋರ್ಮುಡಿಯು ಪೂಮುಡಿಯು
ನಿಱುದಲೆಯ ಸುಱುಗುರುಳ ತುಂಬುನೊಸಲ ಅಸಿಯು ಬೊಟ್ಟಿನ ನೀಳ್ದ
ಪುರ್ವಿನ ಚಲ್ಲೆಗಣ್ಣ ತುಱುಗೆಮೆಯು ವಿಶಾಲಗಂಡಸ್ಥಳದ ರಮಣೀಯ
ಕರ್ಣಯುಗಳದ ಪವಳದ ಬಾಯ್ದೆರೆಯು ಚೆಲ್ವುವೆಡೆದ ಮೂಗಿನ
ರೇಕೆಗೊರಲ ಘನಕುಚದ ನಳತೋಳ ಕೋಮಲಾಂಗುಲಿಯು ಕೆಂದಳದ
ಬಡನಡುವಿನ ತೋರಜಘನದ ನೇರಿದಪ್ಪ ಬಾಸೆಯು ನುಣ್ಪುವೆಡೆದೂ
ರುದ್ವಯದ ಮೃದುತಳದ ಮಂದಗಮನದ ಮುದ್ದುನುಡಿಯ ಕೋಮಲಾಂಗದ
ವಿದ್ಯಾಧರವಾರನಾರೀಕದಂಬಂ ಕಾಮದೇವನ ರಾಜ್ಯಕ್ಕೆ ನಾವು
ಮೊದಲಿಗರೆಂಬಂತೆ ಪೊಂಕಂಬೆರಸು ತರತರದಿಂದಿರಲುಂ, ಸ್ವರ್ಣದೀಪ
ವನನುಕರಿಸುವ ಕನಕಮಯಮಪ್ಪ ಪೊನ್ನ ವಿತಾನದಿಂ ಚಂದ್ರ
ಮಂಡಲವೆ ಪಲವ್ರರೂಪಿಂ ನಭಸ್ಥಳದೊಳಿರ್ದುದೆನಿಸುವ ಬೆಳ್ಳಿಯ
ವಿಮಾನಂಗಳಂ ಗಗನಶ್ರೀ ವಿದ್ಯಾಧರಸೈನ್ಯಮನರ್ತಿಯಿಂ ಶತಸಹಸ್ರ
ವದನಂಗಳಿಂ ನೋಡಿದಪಳನಿಸುವ ಪದ್ಮರಾಗಮಯವಿಮಾನಂಗಳಂ
ಮೌಕ್ತಿಕಾವಳಿಯಿಂ ಮುತ್ತಿನಾಗರಮನಿಳಿಸುವ ವಿಮಾನಂಗಳಂ
ಖೇಚರಸೈನ್ಯದಗರ್ವಿಗೆ ಕಣ್ಣಿಗಿಗದಂತೆ ವಿಧಾತ್ರಂ ಚೀನದ ವಸ್ತ್ರದಿಂ
ಬಾಸಣಿಸಿದನೆಂಬಂತೆಸೆದು ಸುತ್ತಿದ ಪಚ್ಚೆಯ ವಿಮಾನಂಗಳಂ ವಿದ್ಯಾಧರ
ತಂತ್ರಕ್ಕೆ ವಿಧಿ ಮಂತ್ರಿಸಿ ಕಾಡಿಗೆಯುಂ ಸುಂಚಿಸಿವನೆಂಬಂತಿಂದ್ರನೀಲದ
ವಿಮಾನಂಗಳಂ ಕಾಮನ ವಿಮಾನಪತಾಕೆಯೊಡನೆಕ್ಕತುಳಕ್ಕಮುಚ್ಚ
ಳಿಸಿ ಪೊಱಮಟ್ಟವೆನಿಸಿ ಚೆಲ್ವುವೆಡೆದ ಮಹಾಧ್ವಜಂಗಳಿಂ ದಿನಕರಕಾಂ

ತಿಯುಮಂ ನೀವಿಂ ಪರಿಕಿಸಿ ನೋಡಿವೆಂದು ಸೂರ್ಯನೊಡನೆ ಕಯ್ವಾಯ್ದ ಮಧ್ಯಸ್ಥರಲ್ಲಿಗೆ ಬರ್ಪಂತೆ ಪೊಳವ ಪೊಂಗಾಲಿಗಳಿಂದೊಪ್ಪುವರದಂಗಳಿಂ, ಹಸ್ತ್ಯಶ್ವರಥಪದಾತಿಗಳೊಂದಱಿಯೊಂದು ಪೊರ್ದಲೀಯದೆ ನಿಱುಮಿಸುವ ಕಟ್ಟಿಗೆಕಾಱರಿಂ, ಕಾಮದೇವನ ರೂಪಿಂಗೆಮ್ಮ ರೂಪೆ ಮಿಗಿಲೆಂಬಂತೆ ಕತಗಕಂಕಣಹಾರಕೇಯೂರ ಮಕುಟಾದ್ಯಾಭರಣಂಗಳಿಂ ತೊಳಗಿ ಬೆಳಗುವಂಬರಚರಕುಮಾರರಿಂದೆಸೆದು,| [1] ॥ ೧೯೬

ಅಮರೇಂದ್ರಂಗಮಹೀಶ್ವರಂಗಮಮರೇಂದ್ರಾವಾಸಮುಂ ನಾಗಲೋಕಮುಮೊಪ್ಪಿರ್ದುವದೆಗೆ ಕುಂದೆ ಸಿರಿಗಂ ತಾನೆಂದು ಮೆಯ್ವೆರ್ಚಿ ವಿಕ್ರಮದಿಂ ಭಾಸ್ಕರದೇವನೆಂಬರದೊಳತ್ಯಾನಂದದಿಂ ಮಾಡಿದಂ ಕ್ರಮದಿಂ ಖೇಚರಲೋಕಮುಂ ಮಹಿಮೆಯಿಂದೆಂಬಂತದೇನೊಪ್ಪಿತೋ॥

[ಎಲವೆದ ಶಂಖದ ಕಹಳೆಯ
ಸಲೆ ಪಲವುಂ ಪೆಂಪುವೆತ್ತ ಕರಡೆಯ ಪೊಸವೆ ।
ದ್ದಲೆಯ ತ್ರಿವಳಿಯ ಭೇರಿಗ
ಳಾಲಿಯಿಂದರ್ಣವವೆನೆಯ್ದೆ ಪೋಲ್ತುದು ಸೈನ್ಯಂ ॥ ೧೯೭

ತಳಗಳ್ ಬೆಳ್ಗೂಡೆಗಳ ಮುಂ
ತಳಯಿಂ ಸತ್ತಿಗೆಯು ಮೇಘಡಂಬರದ ನೆಳ ।
ಲ್ಗಳನೊಪ್ಪುವೆತ್ತು ದಾಖಗ
ಬಲಮೊರವಿಯಂತೆ ನಾಡೆ ಕತುಜೆಶ್ವಿಂದಂ] ॥ ೧೯೮

ಸುರ ಶೋಕಂ ಮರ್ತ್ಯ ಲೋಕಂ ಫಣಿಪತಿಭುವನಂ ಪೂಜ್ಯಮೆಮ್ಮಿಂದ ಮೆಂಬಂ
ತಿರೆ ; ಎನ್ನಾನೊರ್ವಂತರೆಂದುಬ್ಬರಿಸಿ ಕೊನೆದು ಕಾಮೋಸ್ತ್ರದಂತೊಪ್ಪಿ ನಾನಾ

(ಗ) ಪುಸ್ತಕದ ಪ್ರಕಾರ ಈ ಪದ್ಯದಲ್ಲಿ ಉದ್ದಕ್ಕೂ ಸ್ವಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತವೆ.

ಭರಣವ್ಯಾತಂಗಳಿಂದಂ ನೆಱೆದು ಮೆಱೆಯುತ್ತಂ ಸೊಂದರಾಕಾರಮುಂ ಭಾ
ಸುರಲಾವಣ್ಯಾಬ್ಧಿ ಬೆಳ್ಳಂಗೆಡೆದವೊಲೆಸೆದರ್ ಖೇಚರಸ್ತ್ರೀಸಮೂಹಂ [1] ॥

[ತ್ರಿದಶೇಂದ್ರಸ್ತ್ರೀಯರಿಂದಲ್ಲದೆ ಫಣಿಪತಿಯುಂ ನೋಟ್ಪೊಡಿಂ ಸ್ತ್ರೀಯರಿಂದ
ಲ್ಲದೆ ಚಕ್ರಾಧೀಶರುಂ ಭಾವಿಸುವೊಡೆ ಧರೆಯೊಳ್ ಪೆಂಪಿನಿಂ ಸ್ತ್ರೀಯರಿಂದ
ಲ್ಲದೆ ಮೇಣ್ತಮ್ಮಿಂದೆ ತಾವಿನ್ನೆಸೆಯರದಱಿನೆಮ್ಮಂತು ಮಾಂಗಲ್ಯರಾರೆಂ
ದೊದವಿಂ ಬಂದಿರ್ದುವೊಪ್ಪಂಬೆರಸು ಸಕಲವಿದ್ಯಾಧರಸ್ತ್ರೀಸಮೂಹಂ॥

ಅಲರ್ಗಂಗಳ್ ಸೋಲವುಂ ಪುಟ್ಟಿಸುತಿರೆ ನಳತೋಳ್ ಗಾಡಿಯುಂ ಕೂಡೆ ಮಾಡು
ತ್ತಿರೆ ಧಮ್ಮಿಲ್ಲಂಗಳತ್ತಂ ಖಚರರ ಮನಮಂ ಮಾಣದೋರಂತೆ ಚೆಚ್ಚು
ತ್ತಿರೆ ಲಾವಣ್ಯಂ ತುಳುಂಕುತ್ತಿರೆ ಮೃದುಗಮನಂ ಚಿತ್ತಮುಂ ಪತ್ತಿನೊಂಕು
ತ್ತಿರೆ ಬಂದರ್ ಚೆನ್ನೆಯರ್ ಚೆನ್ನಳವಡೆ ಮುದದಿಂ ಖೇಚರಸ್ತ್ರೀಸಮೂಹಂ] ॥ ೬೦

ಸ್ಮರನಿನ್ನಿನ್ನಿಲ್ಲದಂದೀಜನಮನೆಱಗಿಸಲ್ಕೋಡಿಸಲ್ ಮೋಡಿಸಲ್ ಮ
ಚ್ಚರದಿಂದಲ್ಲಾಡಿಸಲ್ ಪೊಲಿಸಲವಯವದಿಂ ತೂಳ್ದಿ ಬೆನ್ನಟ್ಟಿ ಮುಟ್ಟಲ್
ಪುರುಡಿಂ ತಾಗಲ್ಕದೇನೊರ್ವನೆ ನೆಱೆವನೆ ಪೇಚೆಂದು ಲೋಕಕ್ಕೆ ಪೇೞ್ವಂ
ತಿರೆ ಬಂದರ್ ಬಿಂಕದಿಂ ಸಂಕಿಸದೆ ಸಕಲವಿದ್ಯಾಧರಸ್ತ್ರೀಸಮೂಹಂ ॥

---

1 ತರಳಾಕ್ಷ್ಯರ್ ಸೋಲವುಂ ಪುಟ್ಟಿಸುತಿರೆ ನಳತೋಳ್ಕೊರ್ಮೆಯುಂ ಕೂಡೆಮಾಡು
ತ್ತಿರೆ ಧಮ್ಮಿಲ್ಲಂಗಳೆತ್ತಂ ಖಚರರ ಮನಮುಂ ಮಾಣದೋರಂತೆ ಚಕ್ಕು
ತ್ತಿರೆ ಲಾವಣ್ಯಂ ಬರಂಟುತ್ತಿರೆ ಮೃದುಗಮನಂ ಚಿತ್ತಮುಂ ಕೂಡೆ ಪತ್ತು
ತ್ತಿರೆ ಬಂದರ್ ಚೆನ್ನೆಯರ್ ಚೆನ್ನಳವಡೆ ಭರದಿಂ ಖೇಚರಸ್ತ್ರೀಸಮೂಹಂ ॥

ಸ್ಮರರಾಜಾಗರಲಂಬು ಬೇಱೊಳವೆ ಬೇಱೊಂದಿಕ್ಷುಕೋದಂಡಮುಂ
ಟೆ ರತಿಸ್ವಾವಿಗೆ ಮಿಾನಕೇತನಮನಂಗಂಗುಂಟೆ ಬೇಱೊಂದು ವಿ
ಸ್ತರದಿಂ ವಿಾನಪತಾಕೆ ಕಬ್ಬಿನೆಳವಿಲ್ ಪುಷ್ಪೇಷುಗಳ್ ಭಾವಿಸಲ್
ಭರದಿಂದಾದವೊಲೆಂಬ ಪೊಂಕತದೆಸೆಕಂ ಮೆಯ್ವೆತ್ತುದಾಸ್ತ್ರೀಯರೊಳ್ (ಗ)

[ಅಂತು ಗಗನಚಕ್ರಕ್ಕೆ ಬೇರೊಂದು ಗಗನಚಕ್ರಂ ಬಿದ್ದು ವೆಂದುದೆಂಬಂತಾನುಂ ಮೂಣದೊಂದೆಡೆಯೊಳ್ ಪಲಕಾಲವಿರ್ದಲಸಿ ಕ್ಷೀರಸಾಗರವೆಸಿವಂತಾಗೆ ಮೇಗೆ ನಗೆದುದೆಂಬಂತಾನುಂ ವಾತ್ಸಲ್ಯ ರತ್ನಾಕರನ ಕೀರ್ತಿಲತೆಯ ದಾಂಗುಡಿಯುಂತಾನುಂ ಕರವೊಪ್ಪಿ ದಕ್ಷಿಣ ಮಧುರೆಗೆ ವಿದ್ಯಾಧರಸಾಥನಂ ಬರ್ವುದುಂ ಪೌರವರ್ಕಂಡು ಬೆಱಗಾಗಿ ದೇವಲೋಕಂ ಮೇಲೆ ಬಿರ್ದುದೆಂದು ತಲ್ಲಣಿಸಿ ಬೆಬ್ಬಳಿಸಿ ನೋಡುತಿ ರ್ದುದುಂ, ಬುದ್ಧದಾಸಿಯ ಪಕ್ಷಮುಳ್ಳರುಂ ಸುಗತಂಗೆ ಭಕ್ತರಪ್ಪರು ವಿಂತೆಂದರ್ ॥ ೦೦೪

ಬುದ್ಧನ ರಥಮೆಂ ಪೊಱಮಡಿ
ಪುದ್ಧತೆಯಿಂ ದೇವಲೋಕದಿಂ ದೇವರ್ ಸ !
ನ್ನದ್ಧಪರರಾಗಿ ಪಲವುಂ
ಪದ್ಧತಿಯಿಂ ಬಂದರಲ್ಲಿ ಸಂದೆಯಮುಂಟೇ ॥ ೦೦೫

ಎಂದು ರಾಗಿಸುತ್ತಿರ್ಪನ್ನೆಗಂ ಕಣ್ಣೊಳ್ ಮಳಲಂ ಪೊಯ್ದು ಟ್ಟುದಂ ಕೊಂಡರೆಂಬಂತಾಗಿ ಬುದ್ಧದಾಸಿಯ ಪಕ್ಷದವರ ಮೊಗಂಗಳ್ ಕಲ್ಲೆಂಕುವರಿದಂತೆ ಕರ್ಗೆಯುಂ, ಕೂರ್ಪಡೆಯದ ಮೈತ್ಯಾಧಿಕನಂತೊಡ ಲುರಿಯೆಯುಂ, ತಾಯ್ಸತ್ತ ಶಿಶುವಿನಂತೆ ಮೆಱುಗೆಯುಂ, ಸಕಲಗುಣಗಣ ನಿಳಯೆಯುಪ್ಪೋಹಿಲೆಮಹಾದೇವಿಯ ರಾಜಭವನಕ್ಕೆವಂದು ವಿದ್ಯಾಧರರ ಗುರ್ವಿಯಿಂ ನಿಲೆ, ಪುರದೊಳಗಣ ಭವ್ಯಜನರುಂ ಪಡೆಯರುಂ ಪ್ರಧಾ ನರುಂ ಪರಿಚಾರಕರುಂ ಪೆರ್ಗಡೆಗಳುಂ ಲೆಂಕದಂಡರುಂ ಸಾಮಂತರುಂ ಪೌರರುಂ ಲೆಂಕಿಯರುಂ ರಾಜಕುಮಾರರುಂ ಮಂತ್ರಿನರಸಿಯರುಂ ದಂಡನಾಥೆಯರುಂ ಪೆರ್ಚಿ ಮೇಗುಮೆಯ್ಯಱಿಯದಂತೆ ರಾಗಿಸಿ ತವ್ಮೊ ಳಿಂತೆಂದರ್] [1] ॥ ೦೦೬

---

1 ಅಂತೊಪ್ಪಂಬಡೆದು ಗಗನಚಕ್ರಕ್ಕೆ ಬಿರ್ದುವೆಂಬಂತಾನುಂ ಸುಕವಿಜನ ಮನಃ ಪದ್ಮಿನೀರಾಜಹಂಸನ ಕೀರ್ತಿಲತೆಯ ಕಂಗುಡಿಯೆಂಬಂತಾನುಂ, ದಕ್ಷಿಣ ಮಧುರೆಗೆ ಬರ್ಪ ವಿದ್ಯಾಧರರ ಖರವ ನರರಜನಂಗಳ್ ಕಂಡು ಸ್ವರ್ಗಲೋಕಮುಂ ಮೇಲೆಬಿರ್ದಪ್ಪುವೆಂದು ತಲ್ಲಣಿಸಿ ಬೆಚ್ಚಳಿಸಿ ನೋಡುತ್ತುಮಿಪ್ಪುದುಮೋಹಿಲೆಮಹಾ ದೇವಿಯು ರಾಜಭವನಕ್ಕೆ ಬಂದು ನಿಲ್ವುದುಂ ಪರಿಜನಮುಂ ಪರಜನಮುಂ ಪಳೆಯು ರುಂ ಪೆರ್ಚಿ ಮುಯ್ಪುಂ ನೋಡಿ (ಗ)

ಅರಸಂ ಮರುಳ್ಗೊಳ್ಳನೆ ಪಿರಿ
ಯರಸಿಯ ಸಾಹಸವನಱಿದುಮಱಿಯದವೋಲ್ ಮಿ ।
ಚ್ಚರಮಂ ಮಾಡಿದನೀಪುರ
ವರದೊಳ್ ಪೆಱರಗ್ಗಳಕ್ಕೆಗಳ್ ನಡೆದಪುವೇ ॥ ೧೦೬

ಜಿನಪೂಜೆಯುಳ್ಳದೀವೆ
ತ್ತಿನ ಪೂಜೆಗಳನ್ನೆವರಗಮಿಂಪುರದೊಳ್ ಪೇ ।
ಚಿನಿತುಂ ಕಾಲಂ ನಡೆದುವೆ
ಜನನಾಥನುಮೆಱಿವನಱಿವೊಡಿಂತಿವು ಪೊಸದೇ ॥ ೧೦೭

ಭಾವಿಸುವೆಂದೋಹಿಲೆಮಾ
ದೇವಿಯೆ ಪಾಂಡ್ಯಂಗೆ ಪಟ್ಟಮಾದೇವಿಯಿದಂ ।
ಭಾವಿಸದೆ ಬುದ್ಧದಾಸಿಗೆ
ದೇವಿತನಂಗೊಟ್ಟನಿಂತುಕಷ್ಟನುವೊಳವೇ ॥ ೧೦೮

ಕೆರಪಂ ತಲೆಗೇಱಿಸಿಕೊ
ಳ್ವರೆ ಕೂತೊಡೆ ಬುದ್ಧದಾಸಿಯಂ ಕೆವ್ಮನೆ ನ ।
ವ್ಮರಸಂ ತಲೆಗೇಱಿಸಿ ಪಿರಿ
ಯರಸಿಯರಂ ಬಗೆದನಿಲ್ಲ ಭೂಪರೆ ಕಷ್ಟರ್ ॥ ೧೦೯

ಅರಸಿಯ ಕೈಕೊಂಡ ಜಿನೇ
ಶ್ವರಪೂಜೆ ಮಹಾವಿಭೂತಿಯಿಂ ನಡೆವಂತಾ ।
ಯ್ತೊರಡಿಲ್ಲದೆಮಗಮದಱಿಂ
ಪಿರಿದಪ್ಪಪಮಾನವೈತ್ತಿ ಪಿಂಗಿದುದೀಗಳ್ ॥ ೧೧೦

ಅರಸಿಯ ಸಮ್ಯಕ್ತ್ವಕ್ಕಂ
ಸರಸಿರುಹಾನನೆಯ ಜೈನಭಕ್ತಿಗಮಿದು ತಾಂ ।
ಪಿರಿದಾಯ್ತು ಫಣೀಶ್ವರನುಂ
ಸುರೇಶನುಂ ಬರ್ದರಱಿದರಪ್ಪೊಡೆ ಬೇಗಂ ॥ ೧೧೦

[ಎಂದು ತಂತವೊಳ್ ನುಡಿಯುತ್ತುಂ ರಾಗಿಸಿ ಮಂಗಳತೂರ್ಯ ವೆಸೆಯೆ ಪಲವರ್ಜನೆವೆರಸು ಸಕಲಗುಣಗಣನಿಳಯೆಯಪ್ಪೋಹಿಲೆ ಮಹಾದೇವಿಯು ಮನೆಗೆವಂದು ಸಾಷ್ಟಾಂಗವೆಱಗಿ ಪೊಡೆವೆಟ್ಟು ಸಮುದ್ರಂ ಘೂರ್ಣಿಸುವಂತೆ ಪಲವುಂತೆಱದಿಂ ಪೊಗೞ್ವುದುಂ] [1] ॥೬೧॥

ಒಸೆದುಂ ಸ್ತುತಿಯಿಪ [2] ಪೌರರ
ಮಿಸುಗುವ ನಾಲಗೆಗಳಂಬು ಕೆಂದಳಿರಿಂದಂ ।
ಶಶಿಮುಖಿ ಪೋಲ್ತಿರ್ದಳ್ ಭಾ
ವಿಸುವೊಡೆ ಕರವೊಪ್ಪಿ ತೋರ್ಪ ಶೋಕೆಯ ಮರನಂ ॥ ೬೧೪

ಅಂತು ಜನವೆಲ್ಲಂ ಪಗಲ ತಾವರೆಯಂತೆ ಬಿಚ್ಚ ತಾಗಿ ಕಾರ್ಗಾಲದ ನವಿಲಂತಾನಂದಿತ ಚಿತ್ತರಾಗಿ ಗೆಲ್ಲಂಕದಂತೆ ವೆಯ್ವೆಱ್ಚಿ ಮೆದುವೆಯ ಮನೆಯುಂತೊಸಗೆಗೆ ಮರುಳ್ಗೊಂಡು ಪಟ್ಟಂಗಟ್ಟಿದರಸನಂತೆ ಮಹಾವಿಭೂತಿವೆರಸು ಜೀವಿತಂಬಡೆದ ಬಂಟನಂತೆ ರಾಗಿಸಿ, ಪಸಾಯತಂಬಡೆದ ದಾಳಕಾಱನಂತೆ ನಲಿದು, ಕೆಟ್ಟ ಸಾಲಂ ಬಂದ ಪರದನಂತೆ ಮುಯ್ವಂ ನೋಡಿ, [ಪಿರಿದುಂ] ಲಾಭಮಾದ ಪೊಸಪರದನಂತೆ ಬಿಂಕಂ ಬೆರಸು, ಪುಟ್ಟಗೆಯ ಬಡಸೂಳೆಯಂತೆ ಪೊಂಗಿ, ಮನೆಮನೆದಪ್ಪದೆ ಗುಡಿಗಟ್ಟಿ, ಬೀದಿಬೀದಿತಪ್ಪದೆ [ಚಂದನದೆಳದಳಿರ್ಗಳಿಂ] ತೋರಣಂಗಟ್ಟಿ [ಬಸದಿಗಳೆಲ್ಲಮೆಲಂಕಾರಮೊಗೆ ದುಕೂಲದ ಸೂಸಕಂಗಳಿಂ] ಮುತ್ತಿನ ರಂಗವಲಿಗಳಿಂ ಚಿನ್ನದ ಕಂಭಗಟ್ಟಿನಿಂ [3] ಶೃಂಗಾರಂಮಾಡುವುದುಂ; ಮಱುದಿವಸಂ ॥ ೬೧೫

ಅಲ್ಲಲ್ಲಿಗೊಸಗೆವಱು ಮೆ
ತ್ತಲ್ಲಲ್ಲಿಗೆ ಶಂಖಪಟಹಭೇರೀರವಮೆ ।

---

[1] ಎಂದು ನುಡಿಯುತ್ತುಂ ಪಲವರ್ಜನೆಗಳ್ವೆರಸು ಖಾದೋಹಿಲೆವಾಹಾದೇವಿಯುಂ ಕಂಡು ಪೊಡವಟ್ಟು (ಗ) [2] ದೆಸದೆಸೆಯ ಪೊಗೞ್ವ (ಕ. ಬ.)

[3] ರತ್ನದ ವಂದನವಾಲೆಗಳಿಂ ಖಳ್ಳಿಗಾವಣಂಗಳಿಂ ನಕ್ಷತ್ರವಾಲೆಗಳಿಂ ಮಣಿವಿತಾನಂಗಳಿಂ ಚಿತ್ರಪಟಗಳಿಂ ಪೊಂಗಳಶಂಗಳಿಂ ಫಳಾವಳಿಗಳಿಂ ಖಸದಿವಸದಿ ತಪ್ಪದೆ (ಗ)

ತ್ತಲ್ಲಲ್ಲಿಗೆ ಗಾಂಧರ್ವ ರ
ಸಲ್ಲಲಿತದನಿಗಳಸೆಯೆ ಪುರದೊಳಗೆಲ್ಲಂ ॥ ೨೧೬

ಎಲ್ಲೆಲ್ಲಿ ನೋಪ್ಪೊಡಂ ಮ
ತ್ತಲ್ಲಲ್ಲಿಗೆ ಕರಡಿ ಡಕ್ಕೆ ಪಜ್ಜಿಡಕ್ಕೆಗಳಂ ।
ತಲ್ಲಲ್ಲಿಗೆ ಕಹಳೆಯ ದನಿ
ಯಿಲ್ಲೆಡೆಯೊಳವೊಪ್ಪೆ ಪುರದ ನಾಲ್ಕುಂದೆಸೆಯೊಳ್ [1] ॥ ೨೧೭

ಅಲ್ಲಲ್ಲಿಗೆ ನೃಪನಂದನ
ರಲ್ಲಲ್ಲಿಗೆ ಪಣ್ಣಿ ಬಂದ ಮದದಾನೆಗಳಂ ।
ತಲ್ಲಲ್ಲಿಗೆ ಹಯಸಂಕುಳ
ಮಲ್ಲಲ್ಲಿಗೆ ಬರ್ಪ ವಾರವನಿತಾನಿಕರಂ ॥ ೨೧೮

ಅಲ್ಲಲ್ಲಿಗೆ ಕೈದೀವಿಗೆ
ಯಲ್ಲಲ್ಲಿಗೆ ನೆರೆದು ನೋಪ್ಪ ನೋಟಕಜನ ಮ ।
ತ್ತಲ್ಲಲ್ಲಿಗೆ ರಥಸಂಕುಳ
ಮಲ್ಲಲ್ಲಿಗೆ ನೆರೆದು ಬರ್ಪ ಪಲವರ್ಚನೆಗಳೆ ॥ ೨೧೯

ಅಂತು ಪುರದೊಳಲ್ಲೆಡೆಯೊಳಮಲ್ಲಲ್ಲಿಗೆ ಪುಣ್ಯಾಂಗನೆಯರುಂ ಮುಂಗಳವಜ್ರಿಗಳುಂ ಮಹಾಧ್ವಜಂಗಳುಂ ಮಣಿವಿತಾನಂಗಳುಂ ಜಯ ಜಯಧ್ವನಿಗಳುಮೆಸೆಯೆ [2] ॥ ೨೨೦

ಪದಿನಾಱು ನೆಲೆಯ ಮಣಿಮಾ
ಡದಿನೊಪ್ಪುವ ಪೊನ್ನ ರಥದಮೀಲೆಸೆದಿರೆ ರಾ ।
ಗದಿನಿರಿಸಿ ಖೇಚರರ್ ಸಂ
ಪದದಿಂದಂ ನಲಿದು ಜೈನಜೈತ್ಯಾವಳಿಯಂ ॥ ೨೨೧

---

1 ತಲ್ಲಲ್ಲಿಗೆ ರಥಸಂಕುಳ । ಮುಲ್ಲಲ್ಲಿಗೆ ನೆರೆದು ಬರ್ಪ ಪಲವರ್ಚನೆಗಳೆ (ಗ)

2 ಧ್ವಜಂಗಳುಂ ಪಂಚಮಹಾಶಬ್ದಮುಂ ಜನಸಂದಣಿಯುಂ ನೆರವಿಯ ಕೋಳುಹಳವಮುಂ ಜಯಜಯನಿನಾದಮೆಸೆಯೆ (ಗ)

ಆರಥದ ನಾಲ್ಕುದೆಸೆಯೊಳ್
ನೇರಿದವಾಗಿರಿಸಿ ರತ್ನಮಯವೆನಿಸುವ ವಿ।
ಸ್ತಾರದ ಪೊನ್ನ ರಥಂಗಳ
ನಾರೈದೋರಂತೆ ವೆಚ್ಚಿನಚ್ಚಿ ಖಗೇಶರ್ ॥ ೦೦೦

ಸುರಭೂಧರಮೆಂ ಬೆಳ್ಳಿಯ
ಗಿರಿಗಳ್ ಬಳಸಿರ್ದುವೆನಿಸಿ ಚೆಂಬೊನ್ನ ರಥೋ।
ತ್ಕರಮೆಂ ಸುತ್ತಿರ್ದುವು
ಕರವೊಪ್ಪಿರೆ ಖಚರರಾಜರೆಸೆವ ವಿಮಾನಂ ॥ ೦೦೫

ಪರಿವೇಷಂ ಸುತ್ತಿರ್ದುದು
ಖರಕಿರಣನನೆನಿಸಿ ಮೊದಲ ಕನಕದ ರಥಮೆಂ।
ಕರವೊಪ್ಪಿರೆ ಸುತ್ತಿರ್ದರ್
ನೆರೆದು ಮಹಾವಿಭವದಿಂ ವಿಯಚ್ಚರಸತಿಯರ್ ॥ ೦೦೪

ಕೆಂದಾವರೆ ತಾನುರ್ವರೆ
ಯಿಂದಂ ಗಗನಕ್ಕೆ ನೆಗೆದುದೆನಿಸಿ ಮಹೀಶ।
ಸ್ಯಂದನದ ಮೇಲೆ ನಿಂದಿ
ರ್ದಂದು ಕರಂಗಳನೆ ಮುಗಿದು ಪೊಡೆಮಡುತಿರ್ದರ್ [1] ॥ ೦೦೫

---

1 ಸರಸಿರುಹಾವಳಿಗಳ್ ಭಾಸ್ಕರನಂ ನೋಡಲ್ಕೆವೆರಸು ಪೋದಪವೆಂಬಂ।
ತಿರೆ ಗಗನದೊಳ್ ಖಗೇಶರ್ ಪರಮಜಿನೇಶ್ವರಗ ಮುಗಿದ ಕೈವೆರಸಿರ್ದರ್ ॥
ಇಳೆಯೆನಿತನಿತಲಿ ತಾವರೆಗೊಳನೆಲ್ಲಂ ನೆರೆದು ಬಂದವೆಂಬಂತಿರೆ ಭೂ।
ತಳನಾಥನರಸುಮುರ್ವರ್ಮಲಾಂಗಿಯರ್ ಪರಮ ಜಿನನ ಪದದೊಳಗೆಱಗಲ್ ॥

ನೆರೆದಂಬರಚರನಾಯಕರರಸಿಯರಟ್ಟಿತ್ತು ನೋಡುತಿರೆ ತಧ್ವನಿತೋ।
ತ್ಕರದಲಗರ್ನ್ನೀಲಾಂಬುರುಹಂ ಸುತ್ತಿರ್ದವೊಲಾಯ್ತು ಪರಮನ ರಥಮಂ ॥
ಕ್ಷಿತಿಪರ ಖಚರಾಧೀಶರ ಸತಿಯರ್ ಸೂಸುತ್ತುವಿರ್ದ ನಿರ್ಮಲಕಲಮಾ।
ಪ್ಸತೆ ಪೋಲ್ತುವು ಕಾವಮಂ ಜಿನಪತಿಗಂಜೆ ನೆಲಕ್ಕೆ ಬಿಸುಡುವಲರಂಬುಗಳಂ ॥ (ಗ)

ಮೆತ್ತಂ ಸುತ್ತಿ ಮುತ್ತಿದ ವಿದ್ಯಾಧರವಿಮಾನದಿಂದವಱಿಂ ಪೊಱಗೆ ನಂದನವನಕ್ಕೆ ಕವಿದು ಮೊಱೆವ ಮುಱುಮಂಬಿಗಳಿನಿಸುವ ಗಾಂಧರ್ವರಿಂದಂ ಅವೆರಿಂ ಪೊಱಗೆ ಪೊನ್ನ ಬೆಳ್ಳಿಯ ಪಚ್ಚೆಯ ನೀಲದ ರಥಂಗಳಿಂದಂ ಅವಱಿಂ ಪೊಱಗೆ ಗಿರಿದುರ್ಗದಂತೆ ಸುತ್ತಿ ಮುತ್ತಿದ ವಾರಣಘಟೆಗಳಿಂದಂ ಅವಱಿಂ ಪೊಱಗೆ ಕಾಮದೇವನ ಕಯ್ಯ ಸೆಂಡಿನಂತೆ ಪರಿವ ತುರಗಂಗಳಿಂದಂ ಅವಱಿಂ ಪೊಱಗೆ ಸುಳುವೊಂದಿರೆನಿಸುವ ರಾಜಕುಮಾರರಿಂದಂ ಅವರಿಂ ಪೊಱಗೆ ದೆವಕನ್ನೆಯರೆನಿಪ ಪೆಂತವಾಸದೊಳ್ಮಂಡಿರಿಂದಂ ಅವರಿಂ ಪೊಱಗೆ ಕ್ಷಿತಿಜಲಧಿಸುತ್ತಿತ್ತೆನಿಸುವ ಮೇಘಡಂಬರದಿಂದಂ ಅವಱಿಂ ಪೊಱಗೆ ವಿಂಬಿನ ಬಳ್ಳಿಯನನುಕರಿಸುವ ಕಡಿತಲೆಗಾಱಿರಿಂದಂ ಅವರಿಂ ಪೊಱಗೆ ಪೆರ್ಮಂಡಿಪ ತಂಡಂಗಳಿಂದಂ ಅವಱಿಂ ಪೊಱಗೆ ಮಹಾಧ್ವಜಂಗಳಿಂದಂ ಅವಱಿಂ ಪೊಱಗೆ ಮಣಿವಿತಾನಂಗಳಿಂದಂ ಅವಱಿಂ ಪೊಱಗೆ ನಂದನವನದಂತೆ ತುಱುಗಿದ ಪೀಲಿಯ ತಳಗಳಿಂದಂ ಅವಱಿಂ ಪೊಱಗೆ ವಜ್ರವೇದಿಕೆಯಂತಿರ್ದ ಪೊನ್ನ ಪರಿಗೆಯಿಂದಂ ವನದುರ್ಗಮಂ ಪೋಲ್ವ ಬಿಲ್ವಡೆಯಿಂದಂ ಘರವಟ್ಟಿಗೆಯು ಕಟ್ಟುಗೆಕಾಱಿರಿಂದಂ ಅವರಿಂ ಪೊಱಗೆ [1] ॥ ೨೦೬

ಮಿಸುಕದೆ ಭಾಸ್ಕರದೇವನ
ಬೆಸದಿಂದಂ ರೌದ್ರರೂಪನತ್ಯಂತಂ ಪೆ ।
ರ್ಚಿಸಿ ಖೇಚರಾಧಿನಾಥರ್
ದೆಸೆಗಳನವ್ವಳಿಸಿ ನಿಂದರದಿರದೆ ನೆಲೆಯಿಂ ॥ ೨೦೭

ಜಿನಪೂಜೆಗೆ ಬಾಧೆಗಳಂ
ಮುನಿವರರಿಂದೆ ಮೊಡವಂತಾಗೆ ಮಹಾ ।
ತನುವಿಂ ವಿದ್ಯಾದೇವಿಗ
ಳನುನಯದಿಂ ಸುತ್ತಿ ಮುತ್ತಿ ನಿಂದರ್ ಚಲದಿಂ ॥ ೨೦೮

ಬೇಗಂ ವ್ಯೋಮಕ್ಕಂ ಭೂ
ಭಾಗಕ್ಕಂ ಧಾತ್ರನೊಸೆದು ಕೇಳ್ ಕೂಡಿಟ್ಟಂ ।

1 ಘರವಟ್ಟಿಗೆಯು ಬಲುನಾಯಕರಿಂದನೆಡೆಗೆಡೆಗೆ ಕಿಕ್ಕಿಱಿಗಿಱಿದಿರ್ದ ಕೈದೀವಿಗೆಗಳಿಂದಂ (ಗ)

ತಾಗೆ ಬಳಸಿರ್ದರೊಡನಿಂ
ಬಾಗಿರೆ ಸನ್ಮಂತ್ರದೇವಿಯರ್ ನಿರ್ಭಯದಿಂ ॥ ೬೦೯

ಅಂತು [ಜಂಬೂದ್ವೀಪದ ಖಚರಮಹೀವಲ್ಲಭಂ] [1] ಭವ್ಯೈರ್ಕ್ ಜಿನಮತದೋಜೆಯಿಂ ಬರೆದು ತೋಱುದಪನೆನಿಸಿ ಪಲವುಕೋಳ್ಗೆ ಗಳಂದೆ ರಮಣೀಯಮಮೊಗೆ ಗಗನತಳವೆಳೆಯಮೆಲ್ಲಂ ವಿಮಾನಮೆಯ ಮೊಗಿಯುಂ ಧರಾತಳವೆಲ್ಲಂ ರಥಮಯಮಾಗಿಯುಂ ಅಂತರಿಕ್ಷಮೆಲ್ಲಂ ಧ್ವಜಮುಮಮಾಗಿಯುಂ ದಿಗ್ಭಿತ್ತಿಗಳೆಲ್ಲಂ ಜಯಜಯನಿನಾದಮಯ ಮೊಗಿಯುಂ, ವಿದ್ಯಾಧರಕುಮಾರರಿಂ ದೇವಲೋಕಮುಂ ರಾಜಕುಮಾ ರರಿಂ ಖೇಚರಲೋಕಮುಂ ವಿದ್ಯಾದೇವತೆಗಳಿಂ ವ್ಯಂತರಲೋಕಮುಂ ಮಕುಟಬದ್ಧರಿಂ ಜ್ಯೋತಿರ್ಲೋಕಮುಂ ಚಾತುರ್ವರ್ಣ್ಯಸಂಘದಿಂ ಸಮ ವಸರಣಮುಂ ಪೊಲ್ತೆಸೆಯೆ ಭಾಸ್ಕರದೇವಂ [ಜಿನಮಹಾಪೂಜೆಯು ನೆಂಟುದಿವಸಂಬರವಿಮಾರ್ಗದಿಂ ॥ ೬೧೦

ಬಸೆದು ಖಚರೇಶ್ವರಂ ಸಂ
ತಸದಿಂದಂ ಸೋಮದತ್ತಮುನಿಯುಮೆನಘವೇ ।
ಘನಮೂಹವಾಯು ವಾತ್ಸ
ಲ್ಯಸಮುದ್ರಂ ವಜ್ರಮುನಿಯಮುಂ ಮುದದಿಂದಂ ॥ ೬೧೧

ಬಂದಿಸೆ ನಿಮ್ಮಡಿಯ ಪ್ರಸಾದದಿಂ ಜಿನಪೂಜೆಯೊಳಾದ ಮಹಾ ಪುಣ್ಯಂ ದೊರೆಕೊಂಡುದೆಂದು ಸಕಲಗುಣಗಣನಿಳಯಿಯಪ್ಪೀಹಿಲೆ ಮಹಾದೇವಿಯುಂ ಪೊಗಳ್ವುದುಂ] [2] ॥ ೬೧೨

---

1 ಮಧ್ಯಮಲೋಕದ (ಗ)

2 ಬುದ್ಧಿದಾಸಿಯ ಪಕ್ಷದವರ್ಗ ಕಣ್ಣಿಳೆ ಮಳಲಂ ಪೊಯ್ದುಟ್ಟುದಂ ಕೊಂಡರೆಂಬಂತೆಯಾಗೆ ಮೊಗಮೆಲ್ಲಂ ಕರಂಕುವರಿದಂತೆ ಕಗ್ಗಿಯುಂ ಕುಸಿಯ ತೆಗೆದ ತಲೆಯಂತೆ ಕುಂದೆಯುಂ ಕೂಳುನಡೆಯೆದ ಪೈತ್ಯಾಧಿಕನಂತೆ ಉದಯೆಯುಂ ತಾಯಿ ಸತ್ತ ಮಗುವಿನಂತೆ ಮುಖಮಿಗಿಯುಂ ಜಿನಪೂಜೆಯನೆಂಟುದಿವಸಂಬರಂ ಪೋಹಿಲೆಮಹಾದೇವಿಯುಂ ತಾನುಂ ವಂದಿಸಿ ಸ್ವಸ್ನೇಹದಿಂ ಪೇಳ್ದೊಜೆಯೊಳೆ ಜಿನ ಪೂಜೆಯಂ ಮಾಡಿ ಸೋಮದತ್ತಭಟ್ಟಾರಕರುಮುಂ ಭಾವಯುತದಿಗಂಬರದಾಸನುಂ ಮಣಿಮಾಲೆಮಹಾದೇವಿಯುಂ ತಾನುಂ ವಂದಿಸಿ ಸ್ವಸ್ನೇಹದಿಂದೋಹಿಲೆಮಹಾ ದೇವಿಯುಂ ಪೊಗಳ್ವುದುಂ (ಗ)

ನೀರೇಜಾನನೆ ವಜ್ರಕು
ಮಾರಮುನೀಶ್ವರನ ಸಾರೆ ಖಚರೇಶ್ವರನಂ ।
ಸಾರಮಿದೆನಿಸುವ ಸೂರ್ಯಾ
ಕಾರಜಿನಸ್ತೂಪೆಯಂ ಸವಿಸ್ತರದಿಂದಂ ॥ ೬೩೩

ಬೇಡುವುದುವೋಹಿಲೆಮಹಾದೇವಿಯ ಮಾತನರಡುಗೇಳದೆ ವಜ್ರ
ಮಯಮೆಪ್ಪ ಜಿನಪ್ರತಿಮೊವಳಗಳಂ ತುಱುಗಿದ ಸ್ತೂಪೆಯಂ ದಕ್ಷಿಣಮ
ಧುರಾಪುರದೊಳಿರಿಸಿ [1] ಮಾನಿಸರ ಪುಗಬಾರದಂತದಱ ಸುತ್ತಲುಮೆರಡು
ಕೋಶಾಂತರಂ ವಿಗುರ್ವಣೆಯಂ ಮೂಡಿ [2] ಭಾಸ್ಕರದೇವನಮರಾವತೀ
ಪುರಕ್ಕೆ ಮೆಗುಳ್ದ ಪೋದನಿತ್ತಲೋಹಿಲೆಮಹಾದೇವಿಯುಂ ಸೋಮ
ದತ್ತಭಟ್ಟಾರಕರುಮಂ ವಾತ್ಸಲ್ಯರತ್ನಾಕನುಮಂ ವಂದಿಸಿ ಪೂರ್ಣೈ
ಯುಮಂ ನೆಱಪಿ ತನ್ನ ಮನೆಗೆ ಪೋದಳಿನ್ನು ಮಾಭಾಸ್ಕರದೇವನಿರಿಸಿ
ಪೋದ ಸ್ತೂಪೆಯಂ ದೇವರಿ [3] ಅಷ್ಟಮಿ ಚತುರ್ದಶಿಗಳೂಳ್] ದೇವದುಂ
ದುಭಿವೆರಸು ಬಂದು ಪೂಜಿಸುವರದುಕಾರಣದಿಂ ॥ ೬೩೪

ನುತವಾತ್ಸಲ್ಯಮೆ ಭವ್ಯ
ಪ್ರತತಿಗೆ ಗುಣರತ್ನನಿಚಯಮಂ ಮಡಗಿರಲು ।
ನ್ನತಮೆಪ್ಪ ಮೆಂದಿರಂ ಶಾ
ಶ್ವತಸುಖಮಂ ಕುಡುವ ಕಲ್ಪವೈಹ್ಷಂ ಧರೆಯೊಳ್ [4] ॥ ೬೩೫

ಎಂದು [ಗಣಧರಸ್ವಾಮಿಗಳ್] ವಾತ್ಸಲ್ಯದ ಕಥೆಯಂ [ಪೇಪೆ]
ಕೇಳ್ದು ॥ ೬೩೬

ಗುಣದುಗ್ಧಾಂಭೋಧಿ ಪಾಪಾಚಲರಿಪು ಮದನೇಭೇಂದ್ರಕಂಠೀರವಂ ದು
ರ್ಗುಣದೂರಂ ವಾಗ್ವಧೂವಲ್ಲಭನುದಿತಯಶಂ ನಿರ್ಮಳಂ ಮರ್ತ್ಯ
ಲೋಕಾ

---

1 ದಕ್ಷಿಣಮಧುರಾಪುರದ ತೆಂಕಣದೆಸೆಯ ಬೆಟ್ಟದೊಳು ನಿಲಿಸಿ (ಗ)
2 ಅಗಿಲಂ ಮಾಡಿ (ಗ) 3 ವಿದ್ಯಾಧರರ್ (ಗ)
3 ದೇವರಾಜವಹೀಜಂ (ಗ)

ಗ್ರಣಿ ತನ್ನೊಳ್ ನಾಡೆಯುಂ ಸಂತಸದಿನೊಸೆದನೋರಂತೆ ತ್ರೈವಿದ್ಯ ಚೂಡಾ
ಮಣಿಪಾದಾಂಭೋಜಭೃಂಗಂ [1] ಸುಕವಿಜನವನೇಃಪದ್ಮಿನೀರಾಜಹಂಸಂ ॥

ಇದು ನಿಖಿಲದಿವಿಜಪರಿವೃಢವುಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹವುತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧರ್ಮಾಮೃತದೊಳ್
ದರ್ಶನಸಪ್ತಮಾಂಗವ್ಯಾವರ್ಣನಂ
ಅಷ್ಟಮಾಶ್ವಾಸಂ.

---

1 ಉದಿತಯಶೋವಾರ್ಧಿಶಶ್ಚಂಗ್ರನುದ್ಯ । ದ್ಗುಣವಿತ್ತೈವಿದ್ಯಚಕ್ರೇಶ್ವರ
ಮಲಪದಾಂಭೋಜಭೃಂಗಂವಿಷ್ಟಾ । ಗ್ರಣಿ ಪೆರ್ಚಂ ತಾಳ್ದಿ ನಿಂದುಂ ಸುಕವಿ
ಜನವನೇಃಪದ್ಮಿನೀರಾಜಹಂಸಂ (ಗ)

ನ ವ ಮಾ ಶ್ವಾ ಸ ಂ .

ಶ್ರೀವಾತ್ಸಲ್ಯಂ ಮುಕ್ತಿ
ಶ್ರೀವನಿತೆಯನೊಲಿಸುವೌಷಧಂ ನಿಶ್ಚಯುವೆಂ ।
ದಾವಗಮಾವಿಭು ಮನದೊಳ್
ಭಾವಿಸಿದಂ ಸುಕವಿನಿಕರಪಿಕಮೊಕಂದಂ ॥ ೧

[ಮಗಧಾವನೀಶ್ವರಂ ಮು
ತ್ತಗಣಿತಗುಣಗಣರನವಿಳರಂ ಗೌತಮರಂ ।
ಜಗತೀಪೂಜಿತಪದರಂ
ನಗೇಂದ್ರಧೈರ್ಯರನನಂಗಮದಸಂಹರರಂ ॥ ೨

ಅಮೃತಶ್ರೀಯ ಕ್ರೀಡಾವನವೆನಿಸುವ ಪ್ರಭಾವನೆಯ ಕಥೆಯ ನೆನಗೆ ಬೆಸಸುವುದೆಂದು ನಮ್ರಮೆಸ್ಸಕನಾಗಿ ಕೈಗಳಂ ಮುಗಿದು ಬೆಸಗೊಳ್ವುದುಂ ಗಣಧರಸ್ವಾಮಿಗಳಿಂತೆಂದು ಪೇೞ್ದರ್:—] [1] ಮೂಗಿಲ್ಲದ ಮೂಕೊಱೆಯನೆಂತು ಕಣ್ಣಿಲ್ಲದ ಕುರುಡನೆಂತು [ಕಿವಿ ಕಟ್ಟ ಕಿವುಡನೆಂತು] ಕೈಯಿಲ್ಲದ ವೞಟನೆಂತು ಕಾಲಿಲ್ಲದ ಪೆಜವನೆಂತು ಶುಭ ಕಾರ್ಯಕ್ಕಂ ರಾಜಸಭೆಗಂ ಒಸಗೆಗಂ ಉತ್ಸಾಹಕ್ಕಂ ಒಳ್ಪಿಂಗಂ ಸಲ್ಲನಂತೆ ದರ್ಶನದೊಳಂ ದರ್ಶನದೆಂಟಂಗದೊಳಂ ಹೀನನಾಗಿ ಚಕ್ರವರ್ತಿಪದವಿಯುಮಂ ದೇವೇಂದ್ರಪದವಿಯುಮಂ ಮಹರ್ದ್ಧಿಕಪದವಿಯುಮಂ [2] ಪಡೆವ ಪಡೆಪಂ ಕಿಡಿಸದೆ, ನವನಿಧಿಯುಳ್ಳನಂತೆ ನವಗ್ರಹ ಬಲಮಂ ಪೆತ್ತನಂತೆ ದರ್ಶನಂ ಮೊವಲೊಂಡೊಂಬತ್ತು ಗುಣಂಗಳೊಳ್ ನೆಱೆದು ಶುಭದ ತುತ್ತತುದಿಯನೆಯ್ದಿ ಕಳಸವಿಟ್ಟ ಬೆಸದಂತೆ ಸಂಪೂರ್ಣಾಂಗಮುಳ್ಳನಂತೆ ತೀವಿದ ಕೆಱೆಯಂತೆ ಪಗವಕ್ಕೆ [3] ಬಂದ

---

[1] ಆಂತು ವಾತ್ಸಲ್ಯದ ಕಥೆಯನಱಿದು ಮುಂದಣ ಪ್ರಭಾವನೆಯ ಕಥೆಯ ಬೆಸಗೊಳ್ವುದುಮಿಂತೆಂದರ್. ಕಲೆಯಿಲ್ಲದೊಡಲಂತೆ (ಗ)

[2] ಮೋಕ್ಷಪದವಿಯುಂ (ಗ) [3] ಪಗಹಕ್ಕೆ (ಗ)

ಧಾನ್ಯದಂತೆ ಗಂಡುಗೊಸುವೆತ್ತ ಸಜ್ಜನದಂತೆ ಪೊಂಬಡೆದ [1] ಸೂಳೆಯಂತೆ ಸೇವೆಗಾದುವೊಕ್ಕ ಬಂದಿಗಾಱನಂತೆ ಒಲ್ಲಿದಂ ಕೈಕೊಂಡ ಸತಿಯಂತೆ ಲಂಚವೊಕ್ಕಿರ್ದ ಪ್ರಧಾನನಂತೆ ಪಗೆ ನಿಮೆರ್ೂಲಮಾದ ಪಂದೆಯಂತೆ ಚಿತ್ತದೊಳಾನಂದಂಬೆರಸಿಪ್ಪುದು ॥ ೩

ಮುನಿಯೆನಲುವೇಡ ಶಾಪವಿಕ
ನೆನವೇಡ ಮನೋಜ್ಞೆಯಂ ಪ್ರಭಾವನೆಯಂ ನೆ ।
ಟ್ಟನೆ ಮಾಡವೇಱ್ಪುದಲ್ಲದೊ
ಡನಂತಸುಖನಿಳಯನಾಗಲಾಱಂ ಕಡೆಯೊಳ್ ॥ ೪

ಇನ್ನಾ ಪ್ರಭಾವನೆಯ ಮಹಿಮೆಯೆಂತಪ್ಪುದೆಂದೊಡೆ ॥ ೫

[ವಿದಿತಂ ಕುರುಜಾಂಗಣವೆಂ
ಬುದು ವಿಷಯಂ ಭೂತಳಾಗ್ರದೊಳ್ ಕಡುಚೆಲ್ವಿಂ ।
ದೊದವಿರ್ದುದು ತದ್ಧರಣೀ
ಸುದತಿಯ ಮುಖಮೆಂಕುರವೆನಿಪುದತಿಶಯದಿಂದಂ ॥ ೬

ಹಸ್ತಿನಾಪುರವೆಂಬ ಪೊಱಲದನಾಳ್ವಂ] [2] ಮಹಾಪದ್ಮನೆಂಬ ಮೊಂಡಳಿಕನಾತನರಸಿ ಲಕ್ಷ್ಮೀಮತಿಮಹಾದೇವಿಯೆಂಬಳಾಯಿರ್ವರ್ಗರ್ಂ [ಪ್ರಿಯತನೂಜರ್] ಪದ್ಮನುಂ ವಿಷ್ಣು ಕುಮಾರನುಮೆಂಬ [ವರ್ ॥ ೭

ಸ್ಮರನಿಭರ್ ದಿವಿಜೇಂದ್ರಸನ್ನಿಭಭೋಗಿಗಳ್ ಜಿನಪಾದಪಂ
ಕರುಹಭೃಂಗರುದಾತ್ತಕೀರ್ತಿಗಳುರ್ವೈರಿಬಲೇಭಕುಂ
ಜರವಿರೋಧಿಗಳುನ್ನತರ್ ದೃಢಚಿತ್ತರದ್ರಿನಿಭಹ್ಲಮರ್
ಪರಿಣತರ್ ವರಶಾಸ್ತ್ರವಿದ್ಯೆಗಳೊಳ್ ನೃಪಾಲನಸುಹ್ಲಮರ್ ॥ ೮

---

1 ಪೋಹಿಗೆ ಬಂದ (ಕ. ಖ.)

2 ಕುರುಜಾಂಗಣವಿಷಯದೊಳು ಹಸ್ತಿನಾಪುರವೆಂಬುದು ಪುರಮದನಾಳ್ವಂ (ಗ)

ಎನಿಸಿ ಪೆಂಪುವೆತ್ತ ಕುಮೊತರ ಗಾತಿಯುಮೆಂ ನೂಡುತ್ತುಂ ಪರಮೊಂಡಳಕರುಮೆಂ ಪ್ರತಾಪಪರಮುಮನಲಾ೯ಡಿಸುತ್ತುಂ ಚರಿತ ಪುರಾಣಂಗಳುಮೆಂ ರಸಗೀತಮುಮನಾಲಿಸುತ್ತುಂ ಪರನ್ಯಪರುಮೆಂ ಕುದೃಷ್ಟಿಗಳುಮೆಂ ಸೋಲಿಸುತ್ತುಂ ಸದ್ಧರ್ಮಮುಮೆಂ ಭವ್ಯರುಮೆಂ ಪರಿಪಾಲಿಸುತ್ತುಂ ॥ ೯

ಸಕಲಗುಣೋಪೇತಂ ಭೂ
ವೆಕತಿಲಕಂ ಜಿನಮತಾಬ್ಧಿ ಚಂದ್ರಂ ಧಾತ್ರೀ ।
ಶಕದಂಬನಮ್ರಚರಣಂ
ಪ್ರಕಟಯಶಂ ಭೂರಿಭೂತಳಪ್ರಸ್ತುತ್ಯಂ ॥ ೧೦

ಮಹಾಪದ್ಮಮಹಾರಾಜಂ ರಾಜ್ಯಲಕ್ಷ್ಮ್ಯಯ ಮೆಸೋಹರನಾಗಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತುಮಿರ್ಪನಂ, ಶ್ರುತಸಾಗರರೆಂಬಾಚಾರ್ಯರುರ್ವೆರ್ಮುನಿಗಳ್ವೆರಸು ಕ್ರಮಕ್ರಮದಿಂ ವಿಹರಿಸುತ್ತುಂಹಸ್ತಿನಾಪುರಕ್ಕೆವಂದು ಬಹಿರುದ್ಯಾನವನದೊಳಗಿರ್ದುದುಂ ॥

ಮುನಿಮುಖ್ಯರ ಬರವಂ ಭೋಂ
ಕನೆ ಕಂಡು ಮಹಾನುರಾಗದಿಂದಂ ರಾಜ್ಯಂ ।
ತನಗೆ ದೊರೆಕೊಂಡ ತೆಱದಿಂ
ಮನದೊಳ್ ಕಡುವೊಂಗಿ ಋಷಿನಿವೇದಕನಾಗಳ್ ॥ ೧೨

ಅರಮನೆಗೆ ಬಂದು ರಾಜಕುಮೊರಕರ ನಡುವೆ ತಾರಾಗಣದ ನಡುವೆ ಚಂದ್ರನಂತಿರ್ದ ಮಹಾಪದ್ಮಮಹಾರಾಜಂಗೆ ಕೈಮುಗಿದು ಪೊಡೆಮಟ್ಟು ॥ ೧೩

ಎರ್ದಸಂಗಳಿಮುಖಮೊ
ಗಿರ್ದ ಕರಾಂಬುರುಹಯುಗಳಮೆಂ ಮುಗಿದು ಕರಂ ।
ಪೊರ್ದದೆ ಮೆಲ್ಲನೆ ದೂರದೊ
ಳಿರ್ದವಧಾರಿಸುವುದೇಕಚಿತ್ತದಿನಿತ್ತಲ್ ॥ ೧೪

ದ್ವಾದಶತಪಂಗಳುಂ ಕರ
ಮಾದರದಿಂ ಮೂರ್ತಿಗೊಂಡು ನಮ್ಮಯ ಪುರಕ ।
ತ್ಯಾದರದಿಂ ಬಂದುವು ಪು
ಣ್ಯೋದಯದಿಂದೆನಿಸಿ ನೆಗಳ್ದ ದಿವ್ಯಮುನೀಂದ್ರರ್ ॥ ೧೫

ಶ್ರುತಸಾಗರರೆಂಬಾಚಾರ್ಯರ್ಕೈನೂರ್ವರ್ ಮುನಿವರರ್ವೆರಸು ಬಂದಿರ್ದಪರೆಂದು ಬಿನ್ನಪಂಗೆಯ್ವುದುಂ ಮಹಾಪದ್ಮಮಹೀವಲ್ಲಭನುಂ ಕರಮೊಸೆದು ಋಷಿನಿವೇದಕಂಗಂಗಚಿತ್ತಮೆನಿತ್ತು ಋಷಿಯುರ್ದೆಡೆಗೇ ಬಿಡಿಯಂ ನಡೆದು ಪೊಡೆಮಟ್ಟಾನಂದಭೇರಿಯುಂ ಪೊಯ್ಸುವುದುಂ ತದ್ಭೇರಿನಾದಮುಂ ಕೇಳ್ದ ॥ ೧೬

ಶ್ರಾವಕರುಂ ಸಮಸ್ತಪರಿವಾರಮುಮುತ್ಸವದಿಂ ನರೇಂದ್ರರುಂ
ತಾವಿರದರ್ತಿಯಿಂ ನೆರೆದು ತತ್ಕ್ಷಣದಿಂ ನೃಪಮಂದಿರಕ್ಕೆ ನಾ
ನಾವಿಧದರ್ಚನೋಪಕರಣಂಬೆರಸುನ್ನತಿಯಿಂದೆ ಬಂದು ಸ
ದ್ಭಾವದಿನಿರ್ದರಂಬುಧಿರವಕ್ಕೆಣೆಯಾಗಿರೆ ತೂರ್ಯನಿಸ್ವನಂ ॥ ೧೭

ಅರಮನೆಗೆ ಸಕಲಭವ್ಯೋ
ತ್ಕರಮುಂ ಸಾಮಂತರುಂ ಮಹಾಮಂತ್ರ್ಯರುಮ ।
ಚ್ಚರಿಯಾಗಿರೆ ಬಂದಿರ್ದರ್
ಸರಾಗದಿಂ ದೇವವನಿಗವತರಿಸಿದವೋಲ್ ॥ ೧೮

ಅರಮನೆಯ ಮುಂದಿರ್ದುಂ, ಮಹಾಪದ್ಮಮಹಾರಾಜಂ ಸಮಸ್ತಾಂತಃಪುರಪುರಂಧ್ರಿಯರುಂ ಪದ್ಮನುಂ ವಿಷ್ಣುಕುಮಾರನುಂಬೆರಸು ಪೊಱಮಟ್ಟು ಪಾದಮಾರ್ಗದಿಂ ಹಂಸೆಗಳ್ ಶತಪತ್ರಷಂಡಕ್ಕೆ ಬರ್ಪಂತೆ ಮುನಿವೃಂದಾರಕನನೆಯ್ದೆವಂದು ಮೇರುಗಿರಿಯಂ ಪ್ರದಕ್ಷಿಣಂಗೆಯ್ವ ಚಂದ್ರಾದಿತ್ಯರ್ಕಳಂತೆ ಮುನಿನಿಕರಮಂ ತ್ರಿಃಪ್ರದಕ್ಷಿಣಂಮಾಡಿ ಭಕ್ತಿ ಪೂರ್ವಕಂ ಗುಣಾಕರರೆನಿಸುವೆ ಶ್ರುತಸಾಗರಮುನೀಂದ್ರರ ಪಾದಪದ್ಮಂ

ಗಳನರ್ಚಿಸಿ ವಂದಿಸಿ ಮತ್ತಮುಳ್ಳುದ ಮುನಿವರರ್ಗಂ ಗುರುಪರಿವಿಡಿಯಿಂದರ್ಚಿಸಿ ವಂದಿಸಿ ಕೈಯಂ ಮುಗಿದು ಮುಂದೆ ಕುಳ್ಳಿರ್ದು] [1] ॥೧೯

ಕೊಲೆಯೊಳ್ ಪೊರ್ದದ ನಿರ್ವೃತಿ
ಲಲನೆಯ ಸೊಬಗೆನಿಪ ಪಾಪಹೇತುಗಳಿಂ ಪಂ ।
ಬಲಿಸದ ಮಿಥ್ಯಾವಚನ
ಕ್ಕಲಸುವ ಜಿನಧರ್ಮಮಂ ಮನಂಬಿಡೆ ಕೇಳ್ದಂ । ೨೦

ಅಂತು [ಧರ್ಮಮಂ] ಕೇಳ್ದ ಸಂಸಾರಕ್ಕೆ ಬೇಸಿ [ಪಂಚೇಂದ್ರಿಯಂಗಳಂಬ ಗಂಧಸಿಂಧುರಂಗಳಂ ಮನಂಗಿಡೆ ನುಗ್ಗೊತ್ತಲುಂ, ಮೋಹವೈಹ್ಲದ ಬೇರಂ ಕಿಪ್ತಾಕಾಶಕೆತ್ತಲುಂ ಕಷಾಯಭಟರಂ ಪಡಲ್ವಡಿಸಲುಂ ಬಗೆದಂದು ತನ್ನೊಳಿಂತೆಂದಂ] [2] ॥ ೨೧

ನೋಡ ಮಂಜಿನ ನಿರಸಕ್ಕಟ ನಂಬಿ ಬಿತ್ತುವೆನೆಂಬನುಂ
ನಾಡೆಯುಂ ಪಿಡಿದೇಱುವೆಂ ದ್ವಿರದೇಂದ್ರವೈರಿಯನೆಂಬನುಂ
ಕೂಡೆ ಪೆರ್ವೊನಲಂ ತಱಂಗಳನೊತ್ತಿತಾಳ್ದುವೆ [3] ನೆಂಬನುಂ
ಕೇಡಿನೊಳ್ಕಳಗೊಂಡ ರಾಜ್ಯಮೆನೊಲ್ವನುಂ ಮರುಳಲ್ಲನೇ [4] ॥ ೨೨

---

[1] ಪ್ರಸುನಂದನರಂತನರ್ವೆರಸು ರಾಜ್ಯಂಗೆಯ್ಯುತ್ತಮಿರ್ದೊಂದುದಿನಂ ಶ್ರುತಸಾಗರರೆಂಬ ಋಷಿಯರಲ್ಲಿ (ಗ)

[2] ಬರಿಯು ಮಗೆನಪ್ಪ ಪದ್ಮಂಗೆ ಧರಾಭಾರಮನೊಪ್ಪಿಸಿ ವಿಷ್ಣುಕುಮಾರಂಗೆ ಯುವರಾಜಪದವಿಯುಂ ಕೊಡುವುದುಂ ಶ್ರೀಜಿನಚರಣಾಲಂಕಾರ ಕೀರ್ಷನಿಂತೆಂದಂ (ಗ)

[3] ನೊಡ್ಡಿ ತಾಂಗುವೆ (ಗ)

[4] ಧನದ ಪೆರ್ಚಿನೊಳುರ್ಕಿ ನಂಟರ ಕೂಟದೊಳ್ ಕಡುವೊಂಗಿ ಜವ್ವನದ ಕೊರ್ವಿನೊಳುರ್ವಿ ವೈಭವಿಗೆ ಮುಯ್ವನಾಂತಳಿಸೌಖ್ಯಮಂ
ಮನದೆಗೊಂಡು ಶರೀರಮಂ ಪಿಡಿದೆಲ್ಲಿಯುಂ ಮತಿಗೆಟ್ಟು ಕೆ
ಮ್ಮನೆ ಮುರುಳ್ತನದಿಂ ಮಹೀಶ್ವರಲೀಲೆಯೊಳ್ತೊಡರ್ದಾಡಿದೆಂ ॥ (ಗ)

ಬೂದಿಯಾದ ಪುಳ್ಳಿಯಂತೆ ಪಂಡಿಯಾದ ಎಳನಂತೆ ಬಸಿಱಿಂ ಪೊಕ್ಕ ಕೂಚಿನಂತೆ [ರಸಂಬೋದ ಕಬ್ಬಿನಂತೆ ಪೇಡಿಯುಪ್ಪರಸಿನ ಮಾತಿನಂತೆ ಬೀಸಗೆಯು ಮುಗಿಲಂತೆ ಬಱಿಗಾಲದ ಬೆಳಸಿನಂತೆ ಮೆಳ ಗಾಲದ ಬಿಸಿಲಂತೆ ಬಲ್ಲಿವರಿಲ್ಲದರ ಪೊರ್ಮಗೆಯಂತೆ ಮೂರ್ಖರ ನಗೆ ವೊಗದಂತೆ ದೂರದ ಬರವಿನಂತೆ ಕೆಟ್ಟೊಕ್ಕಲ ಸಾಲದಂತೆ ಸಂಶಯಕ್ಕೆ ಡೆಯಾದರ್ಥಮುಮಂ, ಸಿಕ್ಕಿದೆರಲೆಯಂತೆ ಪಲ್ಲ ಸಂದಿಯಡಕೆಯಂತೆ] [1] ಬಾಯು ತುತ್ತಿನಂತೆ ಬೇರಿಲ್ಲದ ಮರನಂತೆ ತೊಱೆಯು ತೀರದೂರಿನಂತೆ ಪಳ್ಳದೊಳಗಣ ಬಳಂಬೆಯಂತೆ ದ್ರೋಹನ ನಿತ್ತರಣೆಯಂತೆ ಕಳ್ಳನ ಸಿರಿಯಂತೆ ಗಾಳಿಯು ಸೊಡರಂತೆ ಬಡವನ ದರ್ಪದಂತೆ ಸಂಚಲಮಪ್ಪ ದೇಹಮುಮಂ, ಮುಗಿಲಂತೆ[ಸಂಜೆಯು ಕೆಂಪಿನಂತೆ]ನೀರ ರೇಖೆಯಂತೆ [2] ಪೊರೆದಂಕದಾಳನಂತೆ ಪತ್ತಿಸಿ ನೋಱ್ಪ ಸೂಳೆಯಂತೆ ಕಾಮುವ ಕೋಟಿ ಯೊಡೆಯನಂತೆ ಕಾಳಗಕ್ಕೆ ಬಂದ ಬೂತಿನಂತೆ ಕೂಪ್ಪೇಱ್ಪ ಬಾರಿಕ ನಂತೆ ದಂಡುವೇಱ್ಪರಸಿನಂತೆ ತೂಗಿ ಬಿಡುವ ನ್ಯಾಯಕನಂತೆ ಕಲಹಂ ಮಾಱ್ಪ ಕೊಂಡೆಯನಂತೆ ಲೇಸಲ್ಲದ ಸುಖಕ್ಕೆ ಪಾಯಿಸಿ ನೋಯಿಸು ವಿಂದ್ರಿಯಂಗಳುಮಂ, ಮದ್ದುಕೂಣಿಕೆಯಂತೆ ಪಿತ್ತದಂತೆ ನಾಯ ಪಾಲಂತೆ ಮತಿಗಿಡಿಸುವ ಪೆಂಡಿರುಮಂ, ಕಾಪಿನಾಳಂತೆ ಬೇಲಿಯಂತೆ ಪೊಳೆಯಿಲ್ಲದ ತೊಱೆಯಂತೆ ಬಲ್ಬಂಟನಾಣೆಯಂತೆ ಧರ್ಮಕ್ಕೆ ಸಲಲೀಯ ದತ್ತಂಬರ್ದ ತಾಯ್ತಂದೆಯುಮುಂ, ತೊಱೆಯೊಳ್ ಪೋಪರಂ ಬೆಟ್ಟೇಱಿ

---

1 ಹಿಪ್ಪೆಯಾದ ತಂಬುಲದಂತೆ ಧಾನ್ಯಂ ಪೋದ ಕಳಗಾಡಿನಂತೆ ಜೀವಂ ಪೋದೊಡಲಿನಂತೆ ಪಾಳು ಮನೆಯಂತೆ ಪಾಲ್ಬತ್ತಿದಾಕಳಂತೆ ಮಕ್ಕಳಿಲ್ಲದ ಸತಿಯಂತೆ ಕಡಿಸೊಳ್ ನಿಪ್ಪಲಮಪ್ಪ ರಾಜ್ಯಮುಮಂ ತಱಗೆಲೆಯ ಪೂವದಂತೆ ತುದಿಗೋದ ಪಣ್ಣಿನಂತೆ ಲೋಭಿಪುಪ್ಪರಸಿನ ಮಾತಿನಂತೆ ಬೀಸಗೆಯು ಮುಗಿಲಂತೆ ಬಱಿಗಾಲದ ಬೆಳಸಿನಂತೆ (ಗ)

2 ದೂಳೆಯು ಪಚ್ಚೆಯಂತೆ ಖಯಲ ಕಾಳಿಗದಂತೆ ಮೆಯ್ಮೀರ ಹರಿಹದಂತೆ ತಿಱಿದೆಲೆಯು ನುಣ್ಪಿನಂತೆ ಪೊಸವಾವಿನ ಕಂಪಿನಂತೆ ಖೂರಿಯು ಬೊಟ್ಟಿನಂತೆ ವಾಗೆಯು ಪೊತ್ತಿನಂತೆ ತೋಱಿ ಪಾಱಿವಾಯುಪ್ಪಮಂ ಪಾದರದ ಕುಂಟಣಿಯಂತೆ ಮಿಂಡನ ಪೊಳ್ನುಡಿಯಂತೆ (ಗ)

ಬೀಜ್ವರಂ ಪೆಟ್ಟವೆಳಸಿಕೊಳ್ವರಂ ಕುತ್ತದೊಳ್ ಪೊರಳ್ವರಂ ಬೇಗೆ
ಯೊಳ್ ನರಳ್ವರಂ ಬಯಲೊಳ್ ಕಾದುವರಂ ಕಳದೊಳಱುವರಂ ಕಿಚ್ಚಿ
ನೊಳ್ ಬೆಯ್ವರಂ ಸೋಲೊತ್ತೋಡುವರಂ [ಗಾಳದೊಳ್ನೀಲುವರಂ] ನೆರೆದು
ನೋಡುವರಂತೆ ನೋವುಂ ಸಾವುಮೆಡಸಿದಾಗಳ್ ನೆರೆದು ಗುಱುಗುಮ್ಮನೆ
ನೋಡುತಿರ್ಪ ನಂಟರುಮೆಂ, ಸೂಜಿಗೊಂಡ ಪುಣ್ಣಿನಂತೆ ಕಣ್ಣ ಶೂಲೆ
ಯಂತೆ ನಾಲಗೆಯ ಪುಗುಳಂತೆ ಮೊಗಿನ ರಸಿಗೆಯಂತೆ ಶೂಲೆಯಂತೆ
ಕೆವ್ಮಿನಂತೆ ತೀಱ ವಿಷದಂತೆ ನಂಜಾವಿವಂಬಿನಂತೆ ಬಸಿಱೊಳಿರ್ದಲಗಿ
ನಂತೆ ಮಮ್ಮೆಲಮೆಱುಗಿಸುವ ಮಕ್ಕಳುಮೆಂ, ಸುಟ್ಟಿಯೊಳ್ ಬಿರ್ದ ಪಱು
ಗೋಲಂತೆ ಬೆಟ್ಟಂ ತಾಗಿದ ಪೊನಲಂತೆ ಕುಂಬಾಱಿನ ಚಕ್ರದಂತೆ ಮೆಕ್ಕ
ಳಿಟ್ಟ ಬವೆರಿಯಂತೆ [1] ಱಾಟಣದ ಮೊಗಪೆಯಂತೆ ಕಡೆವೆ ಕಡೆಗೋ
ಲಂತೆ ಮಸೆವ ಸಾಣೆಯಂತೆ ವೃಹಾಳಿಯ ಕುದುರೆಯಂತೆ ಮಾಣದೆ ತಿರು
ಗುವೆ ಬಾಱುಮೆಂ, ನಂಬಿ ಮೆಯ್ಯಱಿಯದೆ ಭೋಗಕಾಂಕ್ಷೆಯಿಂದಿರ್ದಿನ
ಪ್ಪೊಡೆ, ನೆರೆಮನೆಯ ಕಿಚರ್ಗುಮಂ ಪತ್ತಿದ ಪಗೆಯುಮೆಂ ಬರ್ದ ಪುಲಿ
ಯುಮೆಂ ತಿಂಬ ನಾಯುಮೆಂ ಕೊಲ್ವಾನೆಯುಮೆಂ ಮುನಿವರಸ
ನುಮೆಂ ಬಡಿವೆ ಕಳ್ಳನುಮೆಂ [ನಿದ್ರಿಸುವ ಬಂಟನುಮೆಂ] ಪೆಱಗರ್
ಕೂರ್ಪ ಸ್ತ್ರೀಯುಮೆಂ ಪೊಂಗಳಪುವ ಮಗನುಮೆನಳಪುವಂತಕ್ಕು
ಮೆಂದು ಕಳಕಳಿಸಿ ನಕ್ಕ [ಮೆನದೊಳ್ ರಾಜ್ಯಕ್ಕೆ ಪೇಸಿ ಪದ್ಮನುಮೆಂ
ವಿಷ್ಣು ಕುಮಾರನುಮೆಂ ಪರಿವಾರಮುಮೆಂ ಪ್ರಧಾನರುಮೆಂ ಬರಿಸಿ
ಮೆಹೀನಾಥನಿಂತೆಂದಂ ॥ ೮೩

ಸನ್ನುತಧರ್ಮದ ಫಲದಿಂ
ದಿನ್ನೆವರಂ ರಾಜ್ಯಲಕ್ಷ್ಮಿಯೊಳ್ ನೆರೆದೆಂ ಮ ।
ತ್ತಿನ್ನಳಿವಿಂ ನಿಲ್ವೊಡೆ ಬಿ
ನ್ನಣಮೇಂ ಬಿತ್ತನುಂಡ ತೆಱನಂತಕ್ಕುಂ ॥ ೮೪

ಬಿತ್ತಿಂದಂ ಬೆಳೆದೊಕ್ಕಲ್
ಬಿತ್ತಂ ಮುಂದಣ್ಗೆ ಕಟ್ಟುವಂತಿರೆ ಮುನ್ನಿನ ।

[1] ಹರಿಯಟ್ಟೆಯನೂಲಿನಂತೆ (ಗ)

ಸತ್ತಪದ ಫಲಮೆನುಣುತುಂ
ಮತ್ತೇಳಿಸಿ ಬಿಡದೆ ಮಾಡವೇಱ್ಪುದು ತಪಮಂ ॥ ೮೫

ಅದುಕಾರಣದಿನ್ನಿವರೆಗಂ ಪರತ್ರೆಯಂ ಕಿಡಿಸಿ ಸಂಸಾರದಲ್ಪಸು ಖಮೆಂ ಮಹಾಸುಖವೆಂದು ನಂಬಿ ಕೆಟ್ಟೆನೀಗಳ್ ಶಾಶ್ವತಸುಖಮಂ ಮಾಱ್ಪ ಜಿನರೂಪಮೆಂ ತಾಳ್ದುವೆ ಪುಣ್ಯಮಿಂದು ಸಮೆನಿಸಿತೆಂದು ತನ್ನ ಮನದ ಕಜ್ಜಮನಱಿಯೆ ಪೇೞ್ದ ಪದ್ಮಂಗೆ ಪಟ್ಟವಂ ಕಟ್ಟಿ ಧರಾಭಾ ರಮನೊಪ್ಪಿಸಿ ಸಮ್ಯಕ್ತ್ವಚೂಡಾಮಣಿಗೆ ಯುವರಾಜಪದವಿಯಂ ಕುಡುವುದುಂ ವಿಷ್ಣುಕುಮಾರನಿಂತೆಂದಂ ॥] ೮೬

ಒಪ್ಪುವ ರಾಜ್ಯಶ್ರೀ ಲೇ
ಸಪ್ಪೊಡೆ ನೀನೇಕೆ ದೇವ ಬಿಡುವೈ ಕೇಳಂ ।
ತಪ್ಪನುಡಿ ಬೇಡ ನೃಪನೀ
ನಪ್ಪುದನಾನಪ್ಪೆನಱಸುಖಂಗಳ್ಗೆಱಗೆಂ ॥ ೮೭

[ತನು ಲೇಸಪ್ಪೊಡೆ ದೇವರೇಕೆ ತಪಮಂ ಕೈಕೊಳ್ವರಿಂತೀ ಸುಹೃ ಜ್ಜನಮಂ ಕಾಂತೆಯರಂ ಮಹಾಮಹಿಮೆಯಂ ಶ್ರೀಯಂ ಗಜಾನೀಕಮಂ। ಧನಮಂ ಧಾತ್ರಿಯನೊಲ್ಲದೋಸರಿಸಿ ಪೇಟಾಂ ಗಾಂಪನೇಂ ಪುಟ್ಟನೇಂ ನಿನಗಾಂ ಬೇಳನೆನಲ್ಲನೀನುಡಿಗಳಂ ಮಾತಾಡವೇಡೆನ್ನೊಳಂ ॥ ೮೮

ಅರಸರೋಲಗಂ ಲೇಸು ಕಾಳಗಂ ಬಟ್ಟತೆಂಬಂತೆ ಸಂಚಲಚಿ ತ್ತಂಗಂ ದೂರದರ್ಶಿಯುಲ್ಲದಂಗಂ ಮಿಥ್ಯಾತ್ವಮಿಶ್ರಿತಂಗಂ ಸಂಸಾರದೊ ಳಾವ ಸುಖಂ ಪಿರಿದಪ್ಪ ಸುಖಮಾಗಿ ತೋಱುಗುರ್ಂ ಬಱುಕ್ಕಾದ ನರಕ ದುಃಖಕ್ಕೆ ಮೆಯ್ಯನೊಡ್ಡಬಾರದದಱಿಂ ದೇವರ್ಗೆಂದೊಡಮೆನಗೆ ರಾಜ್ಯದ ಮೇಲೆಳ್ಳನಿತಪ್ಪೊಡಂ ವೋಹವಿಲ್ಲೆಂದು ಪಲವಂ ನುಡಿಯುದೊಂದನೆ ಪರಿಚ್ಛೇದಮಾಗೆ ನುಡಿದುಸಿರದಿರ್ಪುದುಂ ಮಹಾಪದ್ಮಮಹಾರಾಜಂ ಮಗನ ಮಾತಿಂಗೆ ಬೆಱಗಾಗಿ ತನೆ ನ್ನಿಳಂತೆಂದಂ ॥ ೮೯

ಸಂದ ತಿರಿಕಂಗೆ ತೊವೆತು
ಪ್ಪಂ ದೊರೆಕೊಳಲುಣ್ಮಿ ನಲಿವ ತೆಱದಿಂ ಸೌಖ್ಯ ।

ಕ್ಕೆಂದುಂ ಬಾರದೆ ರೌರವ
ದಿಂದಂ ಬಂದಂಗೆ ಮೋಹಮಕ್ಕುಂ ಸಿರಿಯೊಳ್ ॥ ೩೦

ಶರಧಿಸರೀವೃತಧಾತ್ರೀ
ಭರಮಂ ತಾಳ್ದಂತೆ ಪಳವು ಸಮನಿಸೆ ಪೆಚ್ಚುಂ।
ಪಿರಿದಾಗದಂತೆ ಸುಖಮುಂ
ಸುರಲೋಕದೊಳುಂಡು ಬಂದವಂಗಿದು ಪಿರಿದೇ ॥ ೩೧

ಅದುಕಾರಣದಿಂದೀತನಪ್ಪೊಡೆ ಸಾಮಾನ್ಯಮೆನುಷ್ಯನಲ್ಲೆಂದು ಪೆರ್ಚಿ ರಾಜ್ಯಭಾರಮಂ ಬಿಟ್ಟವೊತ್ತವಂ ಕಲ್ಲಭಾರವನೀಡಾಡುವಂತೀಡಾಡಿ ಪಂಚೇಂದ್ರಿಯಂಗಳ ಸುಖಮುಂ ಪಗೆಯುಂ ಕಾಣ್ಬಂತೆ ಕಂಡು ಮಹಾಶ್ರೀಯುಂ ಕೊಳದ ಪುಲ್ಲ ಕಡ್ಡಿಯುಂ ತೊರೆವಂತೆ ತೊರೆದು ಸಮ್ಯೋಕ್ತ್ವಚೂಡಾಮಣಿವೆರಸು ಶ್ರುತಸಾಗರಮುನೀಶ್ವರರಲ್ಲಿ ಜಿನದೀಕ್ಷೆಯುಂ ಕೈಕೊಂಡು ಮುಕ್ತಿಶ್ರೀ ಕಂಠಾಭರಣಮೆನಿಪ ಪರಮೋಗಮಮನೋದಿ ಪಲಕಾಲಂ ಗುರುಪಾದಸೇವೆಯೊಳಿರ್ದು ಗುರುಗಳಾಜ್ಞೆಯಿಂ ಬೇರೆವೇರೆ ಪೋಗಿ ಘೋರವೀರತಪದೊಳ್ ನೆಗಳ್ತು ಮಿರ್ದು ಮಹಾಪದ್ಮಮುನಿನಾಥಂ ಅಷ್ಟಾಪದಗಿರಿಯೊಳ್ ಕರ್ಮಕ್ಷಯಂಗೆಯ್ದು ಸುಗತಿಲಕ್ಷ್ಮಿಯೊಳ್ ಕೂಡಿದಂ; ವಿಷ್ಣುಕುಮಾರಮುನೀಶ್ವರನುಂ ತಪಶ್ರೀವಧೂಪ್ರಿಯನಾಗಿರ್ದನಿತ್ತಲ್ ॥[1] ೩೨

ಧರೆಯಂ ಜೀಯೆನೆ ಮಾಡುತುಂ ವಿಬುಧರಂ ಶಿಷ್ಟೇಷ್ಟರಂ ಮನ್ನಿಸುತ್ತುರಿನೂಪಾಲರ ದರ್ಪಮಂ ಕಿಡಿಸುತುಂ ಸದ್ಧರ್ಮಮಂ ಪಾಲಿಸುತ್ತುರುಭೂಚಕ್ರಮನಾಜ್ಞೆಯಿಂ ನಡೆಸುತುಂ ಸದ್ರಾಜನೀತಿತ್ವದೊಳ್ದೊರೆಯಿಲ್ಲೀತನೊಳಂಬಿನಂ ಪದುಮಭೂನಾರೀಶನಿರ್ಪನ್ನೆಗಂ ॥ ೩೩

---

1 ಎಂದು ಪರಿಚ್ಛೇದಿಸಿ ಯುವರಾಜಪದವಿಯುಂ ಬಿಟ್ಟು ತಂದೆಯೊಡನೆ ಶ್ರುತಸಾಗರಭಟ್ಟಾರಕರಲ್ಲಿ ಜಿನದೀಕ್ಷೆಯುಂ ಕೈಕೊಂಡು ಪರಮಾಗಮಮನೋದಿ ಗುರುಗಳಾಜ್ಞೆಯಿಂದೇಕವಿಹಾರಿಗಳಾಗಿ ಪೋದಲ್ಲಿ ಮುನಿನಾಥನಷ್ಟಾಪದಪರ್ವತದೊಳ್ ಕರ್ಮಕ್ಷಯಂಗೆಯ್ದಂ. ವಿಷ್ಣುಕುಮಾರಮುನಿ ವಿಹಾರಿಸುತ್ತಮಿರ್ದನಿತ್ತಲ್ ॥ (ಗ)

ಅನ್ನೆಗವಿುತ್ತಲವೆಂತಿವಿಷಯದುಜ್ಜಯಿನಿಯೆಂಬ ಪುರಮನಾಳ್ವಂ ಜಯವರ್ಮಮೆಹಾರಾಜನೆಂಬರಸನಾತನ ಮಂತ್ರಿ ಬಲಿಯೆಂಬನಂತಾಬಲಿಯೊಡವುಟ್ಟಿದರುಂ ಶುಕ್ರನುಂ ಬೃಹಸ್ಪತಿಯುಂ ಪ್ರಹ್ಲಾದನುವೆಂಬರ ತಿಪ್ರವೀಣರ್ ವೇದಕಾಸ್ತ್ರಪ್ರವೀಣರವರೊಳ್ ಕೂಡಿ ಬಲಿ ಸುಖಮಿರ್ಪನ್ನೆಗಂ ॥ ೫೪

[ಪರಮೆತಪ್ರೋನಿಲಯರ್ ದು
ರ್ಧರಚರಿತರ್ ಕಾಲಜಲಧಿಬಡವಾನಳರು ।
ರ್ವರೆಪೂಜ್ಯರ್ ಸಕಳಾಗಮ
ಪರಿಣತರಮಳರ್ ಸಮಸ್ತಮುನಿಗಣವೆಂದ್ಯರ್ ॥] ೫೫

ಅಕಂಪನಾಚಾರ್ಯರಯೂರ್ವರ್ ಮುನೀಶ್ವರರ್ವೆರಸು [ವಿಹರಿಸುತ್ತುಮುಜ್ಜಯಿನಿಗೆ ವಂದು ಪೊಱವೊಱಲೊಳಿರ್ದುದುಂ ಪೊಱಲೊಳಗಣ ಶ್ರಾವಕರೆಲ್ಲಂ ॥ ೫೬

ಪೆರ್ಚೆಯುಮುತ್ಸವಂಬೆರಸು ಭೂವಳಯಂ ತವೆಗಾದ ಮಾರ್ಗದಿಂ
ದರ್ಚನೆಗೊಂಡು ದಿವ್ಯಮುನಿವಾಗ್ಝರಿಯಿಂದಳವೆಂಬ ಪಂಕಮಂ
ಕರ್ಚುವೆನೆಂಬವೋಲ್ನೆರೆದು ತನ್ಮನಿಪಾದಪಯೋಜಮಂ ಸಮಂ
ತರ್ಚಿಸಲೆಂದು ಪೋಪ ಜನದೊಂದುಲಿವಂ ಜಯವರ್ಮಭೂಭುಜಂ॥೫೭

ಕೇಳ್ದ ಮೊಡದಮೇಲಿರ್ದು ದಿಶಾವಲೋಕನಂಗೆಯ್ಯುತ್ತುಮಿಾನೆರೆದನೆರವಿನಾನಾವಿಧಾರ್ಚನೆವೆರಸಲ್ಲಿಗೆ ಪೋದಪ್ಪರೆಂದು.. ಮೊಪ್ರಸ್ತಾವದೊಳ್ ಋಷಿನಿವೇದಕನುಂ ಬಂದು ಮಹೀವಲ್ಲಭಂಗೆ ಪೊಡೆಮೆಟ್ಟು ದೇವನಮ್ಮ ಪುರಕ್ಕಿಂದು ಶ್ರುತವಾರಾಶಿಗಳುಂ ಪರಮೋವಧಿಲೋಚನರುಂ ಚಾರಿತ್ರಮಯರುಮಪ್ಪ ಅಕಂಪನಾಚಾರ್ಯರಯೂರ್ವರ್ ಮುನೀಶ್ವರರ್ ವೆರಸು ಬಂದಿರ್ದರೆಂದು ಬಿನ್ನಪಂಗೆಯ್ವುದುಂ ನರೇಂದ್ರನವರಿರ್ದ ದೆಸೆಗೇಳಡಿಯಂ ನಡೆದು ಪೊಡೆಮೆಟ್ಟು ಋಷಿನಿವೇದಕಂಗೆ ಮೆಚ್ಚುಗೊಟ್ಟು ಕೆಲದೊಳಿರ್ದ ಬಲಿಯ ಮೊಗಮಂ ನೋಡಿ ॥ ೫೮

ಮನದೊಳನಿತೊಳವು ಸಂಶಯ
ಮನಿತುಮನೋರಂತೆ ದಿವ್ಯಮುನಿಪುಂಗವನೊಳ್ ।
ಮನಸಿಜಹರನೊಳ್ ತ್ರಿಭುವನ
ವಿನಮಿತನೊಳ್ ಕೇಳ್ವಮೆಂಬುದುಂ ಬಲಿ ನುಡಿದಂ ॥ ೫೯

ಜೀವವನೇಕಕರ್ಮಮನುಪಾರ್ಜಿಸಿ ಮಾಣದೆ ತತ್ಫಲಂಗಳಂ
ಜೀವನೆ ಮತ್ತಮನ್ಯಭವದೊಳ್ ಗಡ ತಾನಿರದುಣ್ಬನೆಂಬುದುಂ
ಭೂವರ ನಂಬಿ ಬೇಳನಿಸಬೇಡ ಪರತ್ರಯನಾರು ಕಂಡರೆ
.... ಲೆ ಪೇಳ್ಮಿಡೆ ಸತ್ತರನಾರು ಕಂಡವರ್ ॥ ೬೦

ಬಱುವೆಲಿಯರ ಮಾತಂ ಕೇ
ಳ್ದಱಿಯದೆ ದೆಸೆಗೆಟ್ಟು ಜೀವವುಂ ಗತಿಯುಂ ಕೇ ।
ಳಱನುಂ ತಾವೊಳವೆಂಬೀ
ತೆಱವೆಳಿತನವೇಕೆ ನಿನಗೆ ಭುವನಾಧಿಪತೀ ॥ ೬೧

ಅದಱಿಂ ಜೀವಮುಂಟೆಂಬುದಕ್ಕಂ ಶುಭಾಶುಭಕರ್ಮವೊಳ
ವೆಂಬುದಕ್ಕಂ ತತ್ಫಲಮುಂಟೆಂಬುದಕ್ಕಂ ಮಱುಭವದೊಳ್ ತಾವೆ ಮಗು
ಳ್ದುಂಬರೆಂಬುದಕ್ಕಂ ಸ್ವರ್ಗನರಕಂಗಳೂಳವೆಂಬುದಕ್ಕಂ ಸಾಕ್ಷಿಯಾರಿ
ದೆಲ್ಲಂ ಗಾಳಿಯುಂ ಗಂಟಿಕ್ಕುವಂತೆ ಮಾಯಾವ್ಯವಹಾರಮಿದನರಸ ನೀಂ
ಕೆಮ್ಮನೆ ನಂಬಿ ಮರುಳಾಗಿ ತಪದಿಂದೊಡಲಂ ನಿಷ್ಕಾರಣಂ ಪರತ್ರಯುಂ
ಟೆಂದು ತವಿಸುವ ಕಪ್ಪೆಗ್ಗರಪ್ಪ ಋಷಿಯುತ ಮಾತಂ ಕೇಳ್ದು ರಾಜ್ಯದೊ
ಳಾದ ಭೋಗೋಪಭೋಗಂಗಳಂ ಕಿಡಿಸಿಕೊಳವೇಡೆಂಬುದುಮೆರಸನಿಂ
ತೆಂದಂ ॥ ೬೨

ಒಯ್ಯನೆ ದಿನಕರನುದಯಂ
ಗೆಯ್ಯದ ಮುನ್ನೊಪ್ಪುಗುಂ ನಿಶಾಕರಬಿಂಬಂ ।
ರಯ್ಯನೆ ಸೂರ್ಯನುದಯಂ
ಗೆಯ್ಯೆ ಬಱುಕೊಕ್ಕಿಪ್ಪ ಬೆಳಗಲಾರ್ಪನೆ ಚಂದ್ರಂ ॥ ೬೩

ಅಂತು ಕುವಾದಿಯೆನಿಪ ನಿನ್ನಂತಪ್ಪತಿಧೂರ್ತರ್ ಮೆಹಾವಾದಿಗಳಿಲ್ಲದನ್ನೆವರಮುಕ್ಕಿ ಸೊಕ್ಕಿ ತೇಜಮಂ ಪಾಟಿಸುವೆರಲ್ಲದೆ ಮಹಾವಾದಿಗಳಾಸ್ಥಾನದೊಳ್ ಕುಂದಿಕುಸಿದೊಳಸೋದ್ರ್ ಕೇದಗೆಯೇಱಿದ ಕೋಡಗನಂತೆ ಸಿಡಿಮಿಡಿಗೊಂಡು ಮಿಡುಕದಿರ್ದರದಲ್ಲದೆ ತಲೆಯೆತ್ತರದಱಿಂ ಬಾಯ್ಗೆವಂದಂತೆ ಕೊನೆದುದ್ದವೇಱಿ ಪಲವನೆನ್ನ ಮುಂದೆ ಗಟಿಪದುಸಿರದಿರೆಂಬುದುಂ ಬಲಿಯಿಂತೆಂದಂ ॥ ೪೪

ವಸುಧೇಶ್ವರ ನೀನವಧಾ
ರಿಸು ವೋದಿನೊಳೆನಗೆ ನಿನ್ನ ನಚ್ಚಿನ ಋಷಿಯರ್ ।
ವಸುಮತಿಯೊಳ್ ತಲೆಯುಂ ಸಂ
ಕಿಸದೆತ್ತಿರದಿರ್ಪೊಡವರೆ ದೇವರ್ ಧರೆಯೊಳ್ ॥ ೪೫

ಎಂಬುದುಮುರಸನವನನಾಚಾರಕ್ಕೆ ಸೈರಿಸದೀತನ ವಿದ್ಯಾಗರ್ವಮುಂ ಕಿಡಿಸಲ್ವೇಟ್ಕುವೆಂದು ಕಯ್ಯುಂ ಪಿಡಿದೊಡಗೊಂಡು ಸಮಸ್ತನೃಪಕುಮೊರರುಮಂತಃಪುರಪುರಂಧ್ರಿಯರುಂಬೆರಸು ಪಾದಮಾರ್ಗದಿಂದಕಂಪನಾಚಾರ್ಯರಲ್ಲಿಗೆವಂದು ಮೂಱುಸೂಪ್ ಬಲಗೊಂಡು ಮುನಿವೈಂದಾರಕರ ಚರಣಯುಗಳಮುಂ ಬಹುವಿಧಾರ್ಚನೆಯಿಂದರ್ಚಿಸಿ ವಂದಿಸಿ ಋಷಿಯರುಮುಂ ಪರಿವಿಡಿಯಿಂದರ್ಚಿಸಿ ವಂದಿಸಿ ಮುಂದೆ ಕುಳ್ಳಿರ್ದು ವೋಹ್ಹದ ನಿಚ್ಚಣಿಕೆಯೆನಿಪ ಜಿನೇಂದ್ರಧರ್ಮಮುಂ ಕೇಳ್ದಿಂತೆಂದಂ॥೪೬

ವೊಱೆಯಿಲ್ಲಱಮಿಲೊಳ್ಳಿ
ಲ್ಲಱಿನಿಲ್ಲ ಪರತ್ರೆಯಿಲ್ಲ ಜೀವನುಮಿಲ್ಲಂ ।
ದಱೆಯದೆ ಕೆವ್ಮನೆ ಕುದಿವರ್
ತೆಱವೆಲಿತನದಿಂದೆ ಬಾಯ್ಗೆವಂದಂತೆ ಕೆಲರ್ ॥ ೪೭

ಇದಕ್ಕೆಮಗೆ ಸಂಶಯಂ ಮನದೊಳಾಂಟು ಜೈನೋಕ್ತಿಯುಂ
ವಿದಗ್ಧಜನವಂದ್ಯ ನೀಂ ತಿಳಿಪು ಮೆನ್ನನಶ್ಯಂಕೆಯುಂ ।
ಸದಾ ಕಿಡಿಸವೇಱ್ಪುದೆಂದು ನರಪಾಲಕಂ ತಾನುಪಾ
ಯದಿಂದೆ ಬೆಸಗೊಳ್ವುದುಂ.....ಮುನೀಂದ್ರೋತ್ತಮಂ ॥ ೪೮

ಗಂಭೀರವೆಚನಂಚನೆಗ
ಳಂಬುಧಿಯು ನಿನಾದದಂತೆ ಕರವೊಪ್ಪೆ ಮುನೀಂ ।
ದ್ರಂ ಭೂಮಿಪತಿಗೆ ನುಡಿದಂ
ಶುಂಭಜ್ಜೈನಾಗವೋಕ್ತಿಯುಂ ಸಭೆ ಮೆಚ್ಚಲ್ ॥ ೪೯

ವೊಜೆಯಿಲ್ಲಪ್ಪೊಡೆ ಸತಿಗಾ
ದೆಱಕಂ ವೇೞ್ಕೆ ಕೂರ್ಪ ತಂಗಿಗೇಕಾಗದು ಮ ।
ತ್ತಱಿಕೆಯ ತಾಯ್ಗೀಕಾಗದು
ವೊಜೆಯುಂಟಲ್ಲೆಂಬುದಕ್ಕಿದಲ್ಲವೆ ದಿವ್ಯಂ ॥ ೫೦

ಮತ್ತಂ ಭಾವೆಕಭೂವಿಸಿ ನೋಲ್ಪಿಂದು ಲೋಕದೊಳಾದ ಪ್ರಸಿದ ಮೆಪ್ಪಿದುವೆ ಪೇೞ್ಗುಮೆದಾವುದೆಂದೊಡೆ, ಸೂಳೆಯೊಡನೆನಿತುಕಾಲಮಿದ್ದೊಡಂ ಮಿಂಡರೆಂಬರಲ್ಲದೆ ಪೆಱತಿಲ್ಲ ; ಕರ್ಮವೆಶದಿಂ ತಾಯೊಡನಕ್ಕೆ ತಂದೆಯೊಡನಕ್ಕೆ ಕರಮಳಿಪಿಂ ಕೂಡಿದೊಡೆ ಕೊಲೆಗಂ ಕವರ್ತೆಗಂ ಭಾಜನನಪ್ಪನದಱಿಂ ವೊಜೆಯುಂಟಲ್ಲೆಂಬುದನಿಂಬಾಗಿ ನಂಬುವುದು [1] ॥ ೫೧

ಅಂದಣಮೆನೇೞ್ಪ ಭೃತ್ಯರ
ಸಂದಣಿಯಿಂ ಬರ್ಪ ಮನುಜರಂ ಕಂಡು ಸದಾ ।
ನಂದದಿನೀತನ ಮುನ್ನಿನ
ದೊಂದು ಮಹಾಪುಣ್ಯಫಲಮಿದೆಂಬರ್ ನುಡಿಯಿಂ ॥ ೫೨

ತರುಣಿಯರಿಕ್ಕೆ ಚಾಮರಮನಿರ್ಕೆಲದೊಳ್ ಬರೆ ವಾಜಿಸಿಂಧುರೋತ್ಕರಮೆರೇಂದ್ರಲೀಲೆಯೊಳ ಬರ್ಪ ಮಹಾತ್ಮನನೆಯ್ದೆ ಕಂಡರ್ ।

1 ದರಿಭವವಾದೊಡವಾನೀಪಭವವುಂ ನೋಡ ಸತ್ತೊಡಂ ಭವಭವದೊಳ್।
ಕರವುಱಿದುನೀಗಲೆಂಬೀನರವಾಕ್ಯದಿನವ್ಯನಂಬುನೀಂಮಱಿಭವವಂ ॥
ಮತ್ತಂ ಪರಿಣತರಪ್ಪರ್ ಪರೀಕ್ಷಿಸಿ ನೋಳ್ಪಿಂದು ಜಗದೊಳ್ ಕಲೆವೆರಸಿ ಮುನ್ನಿನ ರೂಪುವೆರಸಿ ಪುಟ್ಟಿನ ಮಕ್ಕಳುನುಂ ವೋಹದಿಂ ಕನಸುದೋಱಿಬಂದು ಪುಟ್ಟಿನ ಮಕ್ಕಳುನುಂ ಕಂಡು ಮಱಿಭವವುಂಟೆಂದು ನಂಬುವುದು. (ಕ)

ಪುರುಡಿಸಲರ್ತಿಯಿಂದಿವೆರ ಮುನ್ನಿನ ಮಾಡಿದ ಪುಣ್ಯದಿಂದಮಿ
ಸಿರಿ ದೊರೆಕೊಂಡುದೆಂಬ ಜನದೊಂದುಲಿಯಿಂದಱಿ ಪುಣ್ಯದೊಲ್ಮೆಯಂ॥

ಮೆತ್ತಂ ರೂಪಿನೊಳ್ ಚೆಲ್ವರಪ್ಪರುಮೆಂ ಸಿರಿಯೊಳ್ ಪಿರಿಯರಪ್ಪ
ರುಮೆಂ ವಿಳಾಸಸವೇತರುಮೆಂ ಸುಭಗರುಮೆಂ ಸರ್ವಾಭರಣಭೂಷಿತ
ರುಮೆಂ ನೀರುಜರುಮೆಂ ದಿವ್ಯಾಹಾರಮನುಣ್ಬರುಮೆಂ ದಿವ್ಯವೆಸ್ತ್ರಮ
ನುಡುವರುಮೆಂ ಸುಖಿಗಳುಮೆಂ ಕಂಡೊಡಿವರ ಮುನ್ನಿನ ದಾನಪೂಜೆಯ
ತಪದ ಫಲದಿನಾದುವೆಂದು ನುಡಿವೆ ಲೋಕದ ಜನದುಲಿವಿಂ ಧರ್ಮಮುಂ
ಟೆಂದಱಿವುದು ॥ ೫೪

ಕುರುಡರುಮೆಂ ಕುಂಟರುಮೆಂ
ತಿರಿಕರುಮೆಂ ಕಂಡೊಡಿವೆರ್ಗೆ ಮುನ್ನಿನ ಪಾಪೋ।
ತ್ಕರದಿನಿನಿತಾದುದೆಂಬೀ
ನರವಾಕ್ಯದಿನವ್ಮೆ ಪಾಪಮುಂಟೆಂದಱಿ ನೀಂ ॥ ೫೫

ಕರಮೆರಿದಪ್ಪ ಬಾಧೆಗಳಿನೋವೆನೆ ಕೂಗಿರೆ ಬೆರ್ಚಿ ಕಂಪಿಸು
ತ್ತಿರೆ ಪಿಡಿದೊತ್ತಿ ಕಟ್ಟಿ ಬಿಡದೊಯ್ಯನೆ ಕೊಲ್ವರನೆಯ್ದಿ ಕಂಡೊಡೋ।
ಸರಿಸದೆ ಕಷ್ಟನೀಖಳನ ಮುನ್ನಿನ ಸಂಚಿತಪಾಪಮೆಂದು ಕೊ
ಕ್ಕರಿಸುವ ಲೋಕದೊಂದುಲಿಪಿನಿಂದಱಿ ಭೂಪತಿ ಪಾಪದುರ್ಮೈಯಂ॥೫೬

ಮೆತ್ತಂ ಕೊಳ್ಪಟ್ಟು ಪುಯ್ಯಲಿಡುವರುಮೆಂ ಕೂಪ್ಪಡೆಯದಿರ್ಪ
ರುಮೆಂ ನಿರ್ಭಾಗ್ಯರುಮೆಂ ಕುರೂಪಿಗಳುಮೆಂ ಪಂದೆಗಳುಮೆಂ
ಕಂಡೊಡಿವರ ಮುನ್ನಿನ ಕರ್ಮದ ಫಲಮೆಂಬರದಱಿಂ ಪಾಪಮುಂಟೆಂ
ಬುದಂ ಜಲಕ್ಕನಱಿವುದು ॥ ೫೭

ಅಳಪಂ ಪಾತಕನುಗ್ರನನ್ಯವಿತಾಸಕ್ತಂ ವೃಥಾಳಾಪಿ ನಿ
ರ್ಮಳನಲ್ಲಂ ಗುಣಹೀನನೂನನದಯಂ ಸತ್ಕೃತ್ಯಿತಾಯತ್ತಾಖಳಂ।
ಫಳಲೆಂದೊರ್ಮೆಯೆ ಬೀಱ್ಗುಮುಗ್ರನರಕಾಂಭೋರಾಶಿಯೊಳ್ತಪ್ಪದೆಂ
ದಿಳ ಕೈಕೊಳ್ಳದೆ ಪೊಲ್ಲರಂ ಸಿತಗರಂ ನಿರ್ಧರ್ಮರಂ ಭೂಪತೀ ॥ ೫೮

ನುಡಿವುದಱಿಂದವೆಗುಣಮುಂ ಪಾಪಮುಂ ಪೊಲ್ಲೆಂಬುದುಮಂ
ಅವೆಗುಣಿಗಳುಂ ಸದ್ಧರ್ಮದೂಷಕರುಂ ಪಾಪಿಗಳುಂ ನಿರ್ಧರ್ಮರುಂ
ನರಕಕ್ಕೆ ಪೋವುದುಮೆಂದು ನರಕಮುಂಟೆಂಬುದುಮಂ ಲೇಸಾಗಱಿವುದು ॥೪೯

ಪರಹಿತಂ ಗುಣಿ ನಿರ್ಮಳಂ ಶಠನೆಲ್ಲನುತ್ತಮದಾನಿ ಸ
ತ್ಪುರುಷನುನ್ನತಧಾರ್ಮಿಕಂ ಪ್ರಭು ಸಾಯಲಾಗದು ಸತ್ತೊಡಂ
ಸುರನಿವಾಸಮವೋಪೆಮೆಕ್ಕುವುವೆಂಗೆ ನಿಶ್ಚಯಮೆಂದು ಭೂ
ಧರಜನಂ ಗುಣವಂತರಂ ದಯೆಯುಕ್ತರಂ ಸುಜನರ್ಕಳಂ ॥ ೫೦

ನುಡಿವುದಱಿಂ ಧರ್ಮಸೊಳ್ಳಿತ್ತೆಂಬುದುಮಂ ತದ್ಧರ್ಮಮಂ
ತಾಳ್ದಿದ ಮಹಾಪುರುಷರ್ಗೆ ಸ್ವರ್ಗಾಪವರ್ಗಮುಂಟೆಂಬುದುಮಂ ನಂ
ಬುವುದು ॥ ೫೧

ಅವನೀವಲ್ಲಭ ಮುಂಪೇ
ಱ್ದಿವಱಿಂದಂ ನಂಬು ಜೀವನುಂಟೆಂಬುದನು ।
ತ್ಸವದಿಂದೆ ಬಱಿದೆ ಗಱಿಪುವೆ
ಕುನಾದಿಗಳ ಮಾತನಣಮೆ ನಂಬದಿರಿನಿಸಂ ॥ ೫೨

ಎಂಬುದುಂ ಬಲಿ ತನ್ಮನೀಂದ್ರರ ವಚನಕ್ಕೆ ತುಂಬುರುಗೊಳ್ಳ
ಯಂತೆ ಸಿಡಿಲ್ದು ಮುನಿರಾಜಹಂಸಂಗಱಿಮುಖನಾಗಿ ॥ ೫೩

ಶರನಿಧಿಯೊಡನೊರ್ಮೆಗೆ ಮು
ಚ್ಚರಿಸಿ ಕೊಳ್ಳಂ ಪೊಣರ್ವ ತೆಱದಿನಂಗಜಮದಸಂ ।
ಹರನೊಳ್ ತನ್ನಳವಱಿಯದೆ
ಗುರುಲಘುವೆಂದಱಿಯದುಕ್ಕಿ ನೆಱಿ ಬಲಿ ನುಡಿದಂ ॥ ೫೪

ಏನೆಂದಱಿಯದೆ ಮೆಸಗಿದ
ಮಾನಕಷಾಯದಿನುದಗ್ರಚಿತ್ತಂ ಬಲಿ ಮು ।
ತ್ತಾನಿವರೊಳ್ ನುಡಿದು ಬಱು
ಕ್ಕಿನರಪನ ಸಭೆಯಿನೆಯ್ದಿ ಪೊಗಚಿಸಿಕೊಳ್ವಂ ॥ ೫೫

ಎಂದು ತನ್ನ ಮುನ್ನ ಪಿಡಿದ ಜೀವೆಭಾವಮೆನೆ ಬಲ್ವಿಡಿದಿಂ
ತೆಂದಂ ॥] ೬೬

ಅರಹಂತನೆಂಬನೆಲ್ಲಿದ
ನರಹಂತನೊಡರ್ಚ್ಚವೇಱ್ದಿ ತಪದೊಳ್ ಫಲಮೋ ।
ನರಹಂತಂ ಕೊಲಲಾಗೆಂ
ಬರಿದಪ್ಪಾಧರ್ಮಮೆದಱೊಳೀಂ ಗಳ ಲಾಭಂ ॥ ೬೭

ಅದೆಂತೆಂದೊಡಮರಸನುಂ ಸಭಾಜನಮುಮೆವೆಧರಿಸಿ ! ನೆಲ್ಲುಂ ಪುಲ್ಲುಂ ಕಾಡೆಮ್ಮೆಯುಮೂರೆಮ್ಮೆಯುಂ ಕಾಲ್ಪಲಸುಂ ಊರ ಪಲಸುಂ ಕಾಡಾವುಮೂರಾವುಂ ಕಾಲ್ಪತ್ತಿಯುಂ ಪತ್ತಿಯುಂ ಕಲ್ತಿಲೆಯುಂ ಬೆಳಗುಂ ಕುಲಹೀನನುಂ ಕುಲಜನುಂ ಸೂಳೆಯುಂ ಸಜ್ಜನಮುಂ ಕಾಡೆಳ್ಳುಮೂರೆಳ್ಳುಮೆಂತು ಲೋಕದೊಳೂಳವೆಂತು ಪೊಲ್ಲರುವೊಳ್ಳಿದರುವೊಳರಂತು ತಿರಿಕರುಂ ಸಿರಿವಂತರುವೊಳರಪ್ಪುದಱಿಂ [ಅರಸನುಂ ಬಡವರುವೊಳರೆಂತಂತೆ] ಧರ್ಮಮುಂ ಪಾಪಮುಮೆಂಬುಂಟಪ್ಪುದಱಿಂದ ವೆಱಿ ಫಲವುನೀವೆಂತಪ್ಪರ್ಹತ್ಸರ್ವಜ್ಞರುವೊಳರಾಜಿನಸ್ವಾಮಿಯುವುಂ ಪೊಗೆಯಿಂ ಕಿರ್ಚ್ಚಂ ಮೊಱಗಿಂ ಮಱಿಯುಂ ಗಾಳಿಯಿಂ ಕತ್ತುರಿಯುಂ ಬಣ್ಣದಿಂ ಮದುವೆಯುಂ ಡಾಚಿಕಾಱುರಿಂದರಸುಗಳಂ ಭೈತ್ರಕಾಱುರಿಂ ದ್ವೀಪಗಳಂ ಜೋಯಿಸರಿಂ ಗ್ರಹಣಮೆನಱಿವಂತೆ, ಕೊಂದೊಡೆ ಪುಸಿದೊಡೆ ಕಳ್ದೊಡೆ ಪರಸ್ತ್ರೀಗೆಱಗಿದೊಡೆ ಪಿರಿದಂ ಬಯಸಿದೊಡೆ ಪೊಲ್ಲದೆಂದು ಪೇೞ್ವ ಜಿನೇಶ್ವರನಾಜ್ಞೆಯುಂ ಮಿಱ್ದೊಡಾಪರಮೇಶ್ವರನ ಸಾಮಂತರಂತೆ ದಂಡನಾಯಕರಂತೆ ಕೊಂದೊಡೆ ಕೊಲ್ವ ಪುಸಿದೊಡೆ ನಾಲಗೆಯುಂ ಸೀಳ್ವ ಕಳ್ದೊಡೆ ಸೂಲದೊಳಿಕ್ಕುವ ಪೆಱರ

---

1 ಪುರಕ್ಕ ಬಂದಿರ್ದುದುಂ ಜಯವರ್ಮಮಹಾರಾಜನವರಲ್ಲಿಗೆ ಬಲಿ ಮೊದಲಾಗೆಲ್ಲಮುಂತ್ರಿಗಳುಂ ವಲ್ಲಭೆಯರುಂ ಮಕುಟಬದ್ಧರುಂಬೆರಸು ಬಂದು ಬಲಗೊಂಡು ಪೂಜಿಸಿ ವಂದಿಸಿ ಕುಳ್ಳಿರ್ದು ಧರ್ಮಮುಂ ಕೇೞ್ವಲ್ಲಿ ಬಲಿ ಮಾಕೊಂಡಿಂತೆಂದಂ ॥ (ಗ)

ಪೆಂಡಿರ್ಗಳಿಪಿದೊಡೆ ತಲೆಯನರಿವ ತಂತಮ್ಮ ಮೇಱಿಯಂ ತಪ್ಪಿ ದೊಡೆ ದಂಡಮುಂ ಕೊಳ್ವ ಭೂಪಾಲರ ನಾಡವರ ಮಾಟದಿಂದೆ ಮುಂಬ ಟ್ಟೈಗಳೂರಂ ಪೊರ್ದಿ ಪೋಪಂತೆ ಕೊಲೆ ಪುಸಿ ಕಳವು ಪಾರದಾರಂ ಬಹುಕಾಂಕ್ಷೆ ಧರ್ಮಮಲ್ಲದೆನೆ ಜಿನವಲ್ಲಭನ ಮೊತನೆ ಪೊರ್ದಿ ನಡೆ ವವರ ಸಮಯಂಗಳಿಂದಮುಂ ಕೊಲ್ವ ಪುಸಿನ ಕಳ್ವ ಪಾದರವಾಡುವ ಮೇಱಿಯಂ ತಪ್ಪುವ ಮಾನಿಸರ್ಗಂ ಕಂಡೊಡೆ ಪಂಚಮಹಾಪಾತಕರೆಂದು ಬೈವ ನಾಡವರ ಬೈಗುಱ್ಗುಳಿಂದಮುಂ, ಕೊಲ್ಲೆಂ ಪುಸಿಯೆಂ ಕಳಂ ಪಾದರಿಗನಲ್ಲೆಂ ಪೆಱರರ್ಥಮಂ ಕೊಳ್ಳನೆಂದು ಕಿಚರ್ಮಾಮೊದಲಾ ಗೊಡೆಯ ದಿವ್ಯಂಗಳಿಂ ಶುದ್ಧರಾಗಿ ಪೋಪರಿಂದಮುಂ, ಕೊಲ್ಲದ ಧರ್ಮ ದೊಳ್ ಧರ್ಮಪುತ್ರನಂ ಸತ್ಯದೊಳ್ ಕರ್ಣನಂ ಕಳವಿಲ್ಲೆಂಬುದಱೊಳ್ ಅರ್ಜುನನಂ ಶೌಚದೊಳ್ ಗಾಂಗೇಯನಂ ನಿಷ್ಪರಿಗ್ರಹದೊಳ್ ರಾಮನಂ ಕೊಂತು ಕೊನೆದು ಪೊಗೞ್ದಿ ಪುರಾಣಂಗಳಿಂದಮುಮೞ್ದಿವ್ರದು ॥ ೬೪

ವೋನದೊಳಿರ್ದ ಜಿನೇಶ್ವರ
ನೇನಂ ಪೆಸರ್ಗೊತ್ತನೆಂದು ನುಡಿವುದು ಲೋಕಂ ।
ಭೂನಾರೀಶ್ವರ ಕುಡುವೊಡೆ
ವೋನದೊಳಿರ್ದರ್ಹನೀಗುಮೆದು ಸಂದೆಯಮೇ ॥ ೬೫

ಅದೆಂತೆಂದೊಡೆ ನೆಲನುಂ ಒಟ್ಟೆಯುಂ ಸೊಡರುಂ ಮನೆಯುಂ ವೋನಿಗಳಾಗಿರ್ದಂ ಬಿಡದೆ ತಮ್ಮಂ ಪತ್ತಿ ನಡೆವೊಕ್ಕಲಿಗಂಗಂ ನಡೆ ವಂಗಂ ಅಱುಸುವೆಂಗಂ ಪೊಕ್ಕಿರ್ಪಂಗಂ ಧಾನ್ಯಮುಮಂ ಬಯಸಿದೆಡೆ ಯುಮಂ ಕಾಸುಕಾಱೊಳಿರ್ದ ಮುಟ್ಟುಮಂ ನಿರ್ಜಾಧೆಯುಮೆಂ ಕುಡು ಗಂತೆ ವೀತರಾಗನಪ್ಪ ಜಿನಸ್ವಾಮಿಯುಂ ಸ್ವರ್ಗಮೋಕ್ಷಸುಖಮೆಂ ತನ್ನನೆ ಬಿಡದೆ ಪತ್ತಿರ್ದ ಮೌನಿಸಂಗಂ ಕುಡುಗುಂ ॥ ೬೦

ತೊಱೆಯುಂ ಶಾಸ್ತ್ರಮುಮೆಮ್ಮೆಯುಂ ಪಶುಗಳುಂ ಬೀಜಂಗಳುಂ ಕೆಮ್ಮಗ್ಗಳುಂ
ಕೆಱೆಯುಂ ಪಳ್ಳಮುಮೆಯ್ದಿ ಪಣ್ತ ಮರನುಂ ತೋಂಟಂಗಳುಂ ವೆಹ್ನಿಯುಂ

ಮೆಜೀವಾ ವಸ್ತುಗಳಂ ಜಿನೇಶ್ವರನವೋಲತ್ಯಂತದಿಂ ದುಃಖಮಂ
ಮೆಱೆದಂಗೀವುವು [1] ವೀತರಾಗಮತಮಂ ಬಿಟ್ಟೀವ್ರವೇ ಲೋಕದೊಳ್ ॥

ಅದುಕಾರಣದಿಂ ಸಕಲವೆಲ್ಲಂ ಜಿನೇಶ್ವರನೊಡಗೂಡಿ ವೋನಿಗಳಾಗಿ ಫಲಮಂ ಕುಡುವುವೆಲ್ಲದೆ ತಮಗೆ ತಾವೆ ಕುಡುವುವಲ್ಲಂ ॥ ೭೦

ವಿದಿತಂ ಜಿನೇಂದ್ರರೂಪ
ಪ್ಪುದು ನಿರ್ಗ್ರಂಥಂ ಸಮಂತದಂ ನೆಱೆ ತಾಳ್ದಿ ।
ಪ್ಪುದು ದಿವ್ಯಮಪ್ಪ ತಪಮಂ
ತದಱಿಂದಂ ಸಕಲಸೌಖ್ಯಮುಂ ಕೈಸಾರ್ಗುಂ ॥ ೭೧

ನೆಲಂ ನಿರ್ಗ್ರಂಥಮಾದೊಡೆ ಬಿತ್ತುವಂಗೆ ರಾಗಂ, ಗಗನಂ ನಿರ್ಗ್ರಂಥಮಾದೊಡೆ ಮದುವೆಗುತ್ಸವಂ, ನೀರ್ ನಿರ್ಗ್ರಂಥಮಾದೊಡೆ ಕುತ್ತದ ಕೇಡು, ಕಿಚ್ಚುಂ ನಿರ್ಗ್ರಂಥಮಾದೊಡೆ ಅಡುಗೆಯ ಕಾರ್ಯಂ, ಅಕ್ಕಿ ನಿರ್ಗ್ರಂಥಮಾದೊಡೂಟದ ರುಚಿ, ಪಾಲ್ ನಿರ್ಗ್ರಂಥಮಾದೊಡಳೆಯ ಸವಿ, ಸೂರ್ಯಂ ನಿರ್ಗ್ರಂಥಮಾದೊಡೆ ದಿವಸಶುದ್ಧಿ, ಚಂದ್ರಂ ನಿರ್ಗ್ರಂಥಮಾದೊಡೆ ರಾತ್ರಿಶುದ್ಧಿ, ಮನಂ ನಿರ್ಗ್ರಂಥಮಾದೊಡೆ ಕಾರ್ಯದೊದವು, ರತ್ನಂ ನಿರ್ಗ್ರಂಥಮಾದೊಡೆ ಬೆಲೆಯ ಪೆಱ್ಚು, ಪೊನ್ ನಿರ್ಗ್ರಂಥಮಾದೊಡೆ ಮುನ್ನಣಿಯುಕ್ಕುಂ; ಅಂತೆ ಜಿನೇಶ್ವರನ [2] ತಪದ ನಿರ್ಗ್ರಂಥದಿಂದವೆ ಲೋಕದ ಕಾರ್ಯಂಗಳೆಲ್ಲಂ ಸಿದ್ಧಿಯಕ್ಕುಂ॥ ೭೪

ಧರೆಯುಂ ಪುಟ್ಟಿದ ಮೆಕ್ಕಳುಂ ದಿನಪನುಂ ಗೋವೈಂದಮುಂ ವಾರಣೋತ್ಕರಮುಂ ವ್ಯೋಮೆಮುಮುಬ್ಧಿಯುಂ ತುಗಗಮುಂ ಕಿಚ್ಚುಂ ತರುವ್ರಾತಮುಂ
ಗಿರಿಯುಂ ಲೋಕದೊಳಾದ ವಸ್ತುವಿನಿತುಂ ನಿರ್ಗ್ರಂಥಮಪ್ಪಾ ಜಿನೇಶ್ವರಮುದ್ರಾಂಕಿತಮೆಲ್ಲದುಂಟೆ ಜಗದೊಳ್ ಮತ್ತನ್ಯಸಲ್ಲಾಂಛನಂ ॥೭೫

---

[1] ದುಃಖಮುಂದಱಿದಂಗೀವುವು (ಕ. ಬ.)

[2] ಜಿನೇಶ್ವರಂ ಪೇಳ್ದ ಮುನಿನಿರ್ಗ್ರಂಥದಿಂದಂ ಮೇಲಾದ ಲೋಕದ ಕಾರ್ಯಂ(ಗ)

ಬತ್ತಲೆ ಪೂಜ್ಯಮಲ್ಲದೊಡೆ ಬತ್ತಲೆಯಪ್ಪ ದಿನೇಶಬಿಂಬಮೆಂ
ಬತ್ತಲೆಯಿರ್ಪ ಮಕ್ಕಳುಗಳಂ ರತಿಯಿಂ ನೆರೆವಲ್ಲಿ ರಾಗದಿಂ
ಬತ್ತಲೆಯಿರ್ಪ ಪೆಂಡತಿಯನೋವಣಕಂ ನೆಱೆ ಕಂಡು ಮಾನಿಸರ್
ಸತ್ತವರಾರೊ ಭಾವಿಪೊಡೆ ಬತ್ತಲೆಯಿಲ್ಲದ ವಸ್ತುವಾವುದೋ ॥ ೨೬

ಸವಣರನಣ್ಣ ಕಂಡೊಡತಿದೋಷವೆಂ ಪುಟ್ಟುಗುಮೆಪ್ಪೊಡುರ್ವಿಯೊಳ್
ಬವರಮದೇಕೆ ಬೇಡವಡೆಯುಂ ಕೊಲುವಗ್ಗದ ಕಳ್ಳರಪ್ಪರಂ
ವಿವರಿಸೆ ನಾಯ್ಗಳಂ ಪ್ರೊಲೆಯುರಂ ಕುಲಹೀನರನುಗ್ರರಂ ಮಹೋ
ತ್ಸವದೊಳ್ ಕಂಡೊಡಲ್ಲಿ ಪರಿಪೂರ್ಣತೆಯಕ್ಕುಮೆ ಪುಣ್ಯಬಂಧದಾ ॥ ೨೭

ಋಷಿಯರನಾಗಳುಂ ಕಾಣ್ಬವರ ಮನೆಯ ಪಶುಗಳುಮೆಮ್ಮೆ
ಗಳುಂ ಕಱೆಯುವೆ, ಬಾಡುವಕ್ಕಿಗಳುಂ ಬೇಯವೆ, ಪುಳ್ಳಿಯುಳ್ಳೊಡಂ
ಕಿಱ್ಱುರಿಯವೆ, ಮಕ್ಕಳುಂ ಮಱುಗಳುಂ ಸಾವುವೆ, ಉಂಡೊಡಂ ಪಸಿವು
ಪೋಗದೆ, ನೀರುಂ ಕೂಟುಂ ರುಚಿಸಾಗವೆ ? ಅದಱುಂ ಕಾಣದೊಡೆ [1]
ಲೇಸೆಂಬುದುಮನೇತಱಿಂದಱಿಯಲಕ್ಕುಂ ॥ ೨೮

ಸಿರಿಯಿಂ ಮೆಯ್ಯಱಿಯದ ಮೆ
ತ್ಯರ್ರೆಲ್ಲರುಂ ನೂರ್ವರುಷಮುಂ ಬಾೞ್ವವೆರುಂ ।
ಪರಮಾರ್ಥಂ ಕಾಣದೆ ಋಷಿ
ಯರ ರೂಪಂ ಶ್ರೀಯುಮೊಯುಮೆಂ ತಾಳ್ದಿದರೇ ॥ ೨೯

ಕೂಟುಲ್ಲದೆ ತಿರಿವವೆರುಂ
ಬಾೞವೆಯೊಳ ಸತ್ತ ಮನುಜರುಂ ಋಷಿರೂಪಂ ।
ಕೇಳ ಗಳ ಕಂಡು ತಿರಿವರೆ
ಪೇೞವೆರೋರಂತೆ ಸತ್ತರೇ ಭೂತಳದೊಳ್ ॥ ೩೦

---

[1] ಅವರೇಂ ಸಾವರೆ ಋಷಿಯುರ ಕಾಣದರ ಮನೆಯ ಪಶುಗಳ್ ವೊಕ್ಕಳಂ ಕಱೆವುವೆ, ಬಾಡುವುಕ್ಕಿಗಳುಂ ಬೇವುವೆ ಪುಳಿಯಿಲ್ಲದೊಡಂ ಕಿಱ್ಱುರಿವುವೆ ಮಕ್ಕಳು ಮಱುಗಳುಂ ಸಾಯದ ಉಣ್ಣದೊಡಂ ಪಸಿವಾಗದೇ ನೀರುಂ ಕೂಟುಂ ರುಚಿಯಪ್ಪವೆ ಯೆಂದಿಂಗಂ ಬಾಳ್ವರೆ ಋಷಿಯುರಂ ಕಂಡೊಡೆ ಪೊಲ್ಲೆಂಬುದುಮಂ ಕಾಣದೊಡೆ (ಗ)

ಪೆಂಡಿರ ಪರಿಭವದಿಂದಂ
ಪಾಂಡವರುಂ ರಾಮಚಂದ್ರನುಂ ವನದೊಳ್ ಗೋ ।
ಳುಂಡೆ ಗೊಳುತಿರ್ದರವರೇಂ
ಕಂಡರೆ ಮುಂ ದಿವ್ಯಮಪ್ಪ ಋಷಿಯರ ರೂಪಂ ॥ ೪೧

ಭರತನುಮೌಶತ್ರುಘ್ನನು
ಮರವರಿಸದೆ ಗಂಡನಪ್ಪ ದುರ್ಯೋಧನನುಂ ।
ಧರೆಯುಂ ಪಲಕಾಲಂ ಋಷಿ
ಯರ ರೂಪಂ ಕಾಣದಾಳ್ದರೇ ಪೇಟಿವಿದಂ ॥ ೪೨

ಪುರದೊಳಗಣ ಪಾರುವರೆ
ಲ್ಲರುಮುಂ ಮತ್ತನ್ಯಸಮಯಿಗಳುಮುಂ ಕಳ್ಳರ್ ।
ಭರದಿಂದಂ ಕಂಡುಂ ಸಾ
ವರವೋಷಂ ಸೀಳ್ದು ಕೊಲೆ ತಳಾಜಿರ ಕೈಯೊಳ್ ॥ ೪೩

ಎಂದುಂ ಋಷಿಯರ ಕಾಣದ
ಸಂದೂರೊಳಗಣ್ಣ ವಿಪ್ರರಂ ಪೊರ್ದಿರ್ದುಂ ।
ಸಂದ ತಿರಿಕರ್ಗೆ ಬಡತನ
ಮೆಂದುಂ ಪಱಿಪಟ್ಟುದಿಲ್ಲದೇನಚ್ಚರಿಯೋ ॥ ೪೪

ಬಸದಿಗಳ ಋಷಿಯರೆಂಬರ
ದೆಸೆಯಿಲ್ಲಿಂಬಗ್ರಹಾರದೊಳಗಿರ್ದುಂ ಚಿಂ ।
ತಿಸುವುದುಮುಂ ಸಾವುದುಮುಂ
ವಸುಮತಿಯೊಳ್ ತಿರಿಯುತಿಪ್ಪುದುಮೆನೇಕುಱುಯರ್ ॥ ೪೫

ಕಾಳಗದೊಳಂಬುಗಳ್ಕೊಳ
ಗೋಳಿಟ್ಟೊಳಱುತ್ತುಮಿರ್ಪವರ್ಸವೆಣವನಾ ।
ಕಾಳಗದೊಳೀನೊ ಕಂಡು ವೃ
ಥಾಳಾಪಿಗಳಣ್ಣ ಸತ್ತರೇ ಪೇಱುಮಿದಂ ॥ ೪೬

ಜ್ವರದಿಂ ವಾತದಿನುಷ್ಣದಿಂ ಮಱುಕದಿಂ ಕಣ್ಣೀನೆಯಿಂ ಖಾಸದಿಂ
ಕುರುವಿಂ ಗೋಳಿಡುತಿರ್ಪವರ್ ಸವೆಣರಂ ಮುಂ ಕಂಡರೇ ಕುತ್ತದೊಳ್
ಪೊರಳುತ್ತಿರ್ಪವರನ್ಯಲಿಂಗಿಗಳ ರೂಪಂ ಕಂಡು ತದ್ಭಾಧೆಯು
ಬ್ಬರದಿಂ ಪಿಂಗಿ ಪೊಡರ್ಪುಗುಂದದೆ ಮಹಾಸಂತೋಷದಿಂದಿರ್ದರೇ ॥೮೩

ಸವೆಣರುಮೆಂ ಸಚ್ಛಾವಕ
ನಿವಹಮುಮೆಂ ನೋವು ಸಾವು ಕುತ್ತಂ ಬಂದೊಂ।
ಕುವ್ವುವೆನ್ನಸಮಯಿಗಳನೊ
ತ್ತವವೆಂಬುದು ಪಿರಿದುತನವುವರ್ಗಳಿಗಕ್ಕುಂ ॥ ೮೪

ಕುಂಚವೆಂ ದೋಷವೆಂಬೊಡೆ ಕುಂಚವೆಪ್ಪುದು ಪೀಲಿ, ಪೀಲಿಯುಂ ದೋಷವೆಂಬೊಡೆ ತಪೆಯಂ ಸತ್ತಿಗೆಯಂ ಪಿಡಿದು ಬರ್ಪರೆಲ್ಲರುಮೆಂ ಕಾಣಲಾಗದು; ನಿರ್ಗ್ರಂಥಮುಂ ದೋಷವೆಂಬೊಡೆ ಮಕ್ಕಳುಂ ಮೆರಂಗಳುಂ ಪಶುಗಳುಂ ನಿರ್ಗ್ರಂಥಮವೆಂ ಕಾಣಲಾಗದು; ತಟ್ಟು ದೋಷವೆಂಬೊಡೆ ತಟ್ಟಿಂಬುದು ಪಸೆ: ಪಸೆಯುಂ ದೋಷವೆಂಬೊಡೆ ಜೋಳದೇಶವೆಲ್ಲಮುಜಱ ಮೇಲೆ ಪಟ್ಟರ್ಪುದು; ತಿವ್ರಳದೇಶದವೆರೆಲ್ಲರುಮೆಂ ಕಾಣಲಾಗದು; ಗುಂಡಿಗೆ ದೋಷವೆಂಬೊಡೆ ಗುಂಡಿಗೆಯಪ್ಪುದು ತೆಂಗಿನಕಾಯ್, ತೆಂಗಿನಕಾಯುಂ ದೋಷವೆಂಬೊಡೆ ತೆಂಗಿನಕಾಯುಂ ತಿಂಬರುಮೆಂ [ಮೊಱುವ ಪರದರುಮೆಂ] ಕಾಣಲಾಗದು; ಮಿಾಯದುದು ದೋಷವೆಂಬೊಡೆ ಚಂದ್ರಾದಿತ್ಯರ್ಕಳೆಂದುಂ ಮಿಾಯರವರಂ ಕಾಣಲಾಗದು; ಮೆಲಮುಂ ತಾಳ್ದುವ್ರದು ದೋಷವೆಂಬೊಡೆ ತಿಪ್ಪೆಯಂ ತಾಳ್ದಿದ ನೆಲನುಮುಂ ಗೊಬ್ಬರಮನೊಳಕೊಂಡ ಕೆಯ್ಗಳುಮೆಂ ಕಾಣಲಾಗದು; ವೆಮನೆಂಗೆಯ್ದು ನೀರಂ ಕುಡಿಯದುದೆ ದೋಷಮಪ್ಪೊಡೆ ಪ್ರತಿಜ್ಞೆಯಿಂ ಕುಡುವರಸುಗಳುಮೆನಂಕಂಗಳುಮೆಂ ಕಾಣಲಾಗದು; ನಿಂದುಣಿಸು ದೋಷವೆಂಬೊಡೆ ಜೀವಧನಂಗಳುಮೆಂ ಮರಂಗಳುಮುಂ ಕಾಣಲಾಗದು; ಕಯ್ಯಲುಂಬುದು ದೋಷವೆಂಬೊಡೆ ಆನೆಯುಮೆಂ ಕಾಣಲಾಗದು; ಲೋಹಜು ದೋಷವೆಂಬೊಡೆ ತಿರ್ದಿದ

ಪುರ್ವಿನವೆರಂ ತಿರ್ದಿದ ವಿಾಸೆಯವರಂ ಕಾಣಲಾಗದು; ಪಂಚಮೆಹಾವ್ರ
ತಂಗಳಂ ತಾಳ್ದುವುದು ದೋಷವೆಂಬೊಡೆ ಪಾಂಡವೆರಂ ಭೀಷ್ಮರಂ
ಕರ್ಣನಂ ಪೊಗೞ್ವ ಮನುಷ್ಯರಂ ಕಾಣಲಾಗದು; ಪಲ್ಲಂ ಸುಲಿಯು
ದುದು ದೋಷವೆಂಬೊಡೆ ಕೊಡುಗೂಸುಗಳುವೆಂ ಕುಮಾರರುವೆಂ
ಕಾಣಲಾಗದು; ವೋಕ್ಷಸಾಧಕರಪ್ಪ ಋಷಿಯರಂ ಕಂಡೊಡೆ ಲೇಸಲ್ಲದೆ
ಪೊಲ್ಲೆಂಬುದಕ್ಕೆ ಕಾರಣಮಿಲ್ಲ ॥ ೪೯

ಪಶುವಿನ ಜಿಹ್ವೆಯೊಳ್ ಪೊಲೆಯುರಿರ್ದೊಡೆಯೊಳ್ ಸುಧೆ ದೇವಿ ಪದ್ಮದೊಳ್
ವಿಸುಗುವ ಲಕ್ಷ್ಮಿ ಪೊರ್ದಿ ನೆಲಸಿರ್ದಪಳಂಬ ಮಹಾತ್ಮರೊಂದಿ[1] ಗ
ರ್ಜಿಸಿ ಋಷಿಯರ್ಕಳಂ ವೊನಿಸಿನಿಂದಱೆಯುಟ್ಟ ತಗುಳ್ದು ಕಂಡೊಡು
ಬ್ಬಸವುವೆಕಾರ್ಯವೆಂದು ಬಿಡೆ ದೂಱುವರೆಂಬುದಿದಾವ ವಿಸ್ಮಯಂ ॥

ವೆತ್ತಂ ಪೊಗದ ಕೋಂಟೆಯುಂ ಸಾಗದ ಪಗೆಯುವೊಳ್ಳವರ್
ಕೋಂಟೆ ಪೋಪನ್ನೆಗಂ ಪಗೆ ಸಾವನ್ನೆಗಂ ಕಯ್ಯೞಲುಂಬೆಂ ಪಲ್ಲಂ
ಸುಲಿಯೆಂ ವಿಾಯೆಂ ಪೆಂಡಿರೊಳ್ ಕೂಡೆಂ ತಲೆಯುಂ ಕಟ್ಟೆಂ ವಿನೋ
ದವೆಂ ನೋಡೆಂ ಆಭರಣಂಗಳನೊಲ್ಲೆಂ ಒರ್ಮೆಯುಂಬೆನೆಂದು ಜಿನೇ
ಶ್ವರನ ಪೇೞ್ದ ತಪದೋಜೆಯಂ ಪೂಣ್ದು ಕೋಂಟೆಯಂ ಕೊಳ್ವರ್
ಪಗೆಯಂ ಕೊಲ್ವರದುಕಾರಣದಿಂ ಸ್ವರ್ಗಾಪವರ್ಗದುರ್ಗವೆಂ ಸಾಧಿಸು
ವುದಕ್ಕಂ ಕರ್ಮವೈರಿಗಳಂ ಗೆಲ್ವುದಕ್ಕಂ ಜಿನರ ಪೇೞ್ದ ತಪವೆ
ವುಖ್ಯಂ ॥ ೪೯

ಜಿನರಂದವೆ ಜಿನರೋಜೆಯೆ
ಜಿನರೆಂದುವೆ ಜಿನರ ನಡೆವ ನಡೆವಳಿಯೆ ಜಗಂ ।
ಜಿನರ ವಶಮಾಗಿ ನಡೆವ್ರದು
ಜಿನರಾಜ್ಞೆಯನೊಲ್ಲದದಟನೊರ್ವನುವೊಳನೇ ॥ ೪೦

ಕೊಲೆ ಪುಸಿ ಪರವೆಧುಸಂಗಂ
ಕಳವೆಂಬಿವು ಬೇಡ ಬೇಡ ಬೇಡೆಂಬೀನಿ ।

---

[1] ಪೊರ್ದಿದ ಮಹಾತ್ಮರೊಳೊಂದಿಯೆ ನುತ್ತಮುಲ್ಲಿ (ಗ)

ಮರ್ಮಳವೀತರಾಗನಾಜ್ಞೆಯ
ನುಱುದಣ್ಣ ಪೊತಪರ್ದಗೆಯ್ವ ಗಂಡರುವೊಳರೇ ॥ ೯೩

ಕಳ್ಳಂದನೆ ಶೈವಾದಿಗ[1]
ಳೆಲ್ಲಂ ಜಿನಮತಮನುಱಿದೆ ಲೇಸೆಂದಾರ್ದುಂ ।
ಕಳ್ಳಂ ಕುಡಿವರನೆಲ್ಲಂ
ಪೊಲ್ಲೆಂಬಿದನಣ್ಣ ಮಾಣಿಸಲ್ನೆಱವರೆ ಪೇಱ್ ॥ ೯೪

ಅಡಗೊಂದನೆ ಜಿನರಾಜ್ಞೆಯ
ನೆಡಱು ಮಹೀತಳದೊಳಲ್ಲಿಱುಂ ತಿಂದುಂ ತಾ ।
ವೆಡಗಟ್ಟಿ ಮಡಕೆಗಳನೊಳ
ಗಿಡಲಾರ್ಪರೆ ಪಾಲ ಕೆಲದೊಳಂ ಬೋನದೊಳಂ ॥ ೯೫

ಕೊಲೆವೇಡೆಂಬೀ ಜಿನರು
ಜ್ಜ್ವಳರಾಜ್ಞೆಗೆ ತಪ್ಪಿ ಸೈಂಧವಂ ಕೊಂದು ಮೆಹಾ ।
ಬಲನರ್ಜುನನಿಂದಱುದಂ
ನೆಲದೊಳ್ ಜಿನರಾಜ್ಞೆಗೆಱುಗದಂಗದು ಪಿರಿದೇ ॥ ೯೬

ಪುಸಿ ಬೇಡೆಂಬೀ ಜಿನಪತಿ
ಯೆಸೆವಾಜ್ಞೆಯನೊಕ್ಕು ಧರ್ಮಜಂ ಲೋಕಕ್ಕಂ ।
ಪುಸಿದಣ್ಣಂದೊಂದು[2] ಕಷ್ಟಂ
ಪೆಸರ್ವಡೆದಂ ಪೊಲ್ಲನೆಂದು ಧರೆ ದೂಱುವಿನಂ ॥ ೯೭

ಪರವನಿತೆಯಾಗದೆಂಬೀ
ಯರುಹೆಪ್ಪರವೀಶ್ವರಾಜ್ಞೆಯಂ ಮಾಱು ಸುರೇ ।
ಶ್ವರವೈರಿ ರಾವಣಂ ರಾ
ಮರ ಕೈಯೊಳ್ ಸತ್ತನಾಖಳಂಗದು ಪಿರಿದೇ ॥ ೯೮

---

[1] ವೈಶ್ಯಾದಿಗ (ಗ) [2] ಕುಂಭಕರ್ಣನು ಪುಸಿದಣ್ಣ ಕೊಂದು (ಕ)

ಮೇರೆಯೊಳ ನಿಲ್ಲಿವೆಂಬೀ
ವೀರಜಿನಾಧೀಶನಾಜ್ಞೆ ಯುಂ ವಿಾಱು ಕರಂ ।
ಕೌರವಪತಿ ದುರ್ಯೋಧನ
ನಾರಯ್ಯದೆ ಸತ್ತನೆಂಬುದಂ ಕೇಳ್ದ ಱಿಯಾ ॥ ೯೯

ಜಿನನಾಥನ ಮುದ್ರೆಯೆ ಲೋ
ಕಂ ನಡೆವುದು ನಡೆವ ಲೋಕದ ಕ್ರಮಮುಂ ನೆ ।
ಟ್ಟನೆ ಜಿನರ ನುಡಿಯೆ ಭೂವಿಪೊ
ಡಿನಿತಱೊಳೊಂದೂನಮುಂಟೆ ವಸುಧಾಧಿಪತೀ ॥ ೧೦೦

ನಾಡವೆರೆಲ್ಲಂ ಚಕ್ರವರ್ತಿಯನಱಿಯದದನಿತಱಿಂ ಚಕ್ರವರ್ತಿಯಿ ಲ್ಲೆನಲ್ಬಾರದು, ಗೌಂಡಗಳುಂ ಒಲ್ಲೊಕ್ಕಲ್ಗಳುಮಱಿವೊಡೆ ಸಾಲ್ಗುಂ; ಜಗವೆಲ್ಲಂ ಪೊನ್ನಂ ಪರೀಕ್ಷಿಸಲಱಿಯದನಿತಱಿಂ ಪೊನ್ನಂ ಪೊಲ್ಲೆನ ಲ್ಬಾರದು, ಪರದರುಮಕ್ಕಸಾಲಿಗರುಮಱಿವೊಡೆ ಸಾಲ್ಗುಂ, ಲೋಕ ವೆಲ್ಲಂ ಮೆರ್ದಿನ ಶಕ್ತಿಯನಱಿಯದನಿತಱಿಂ ಮೆರ್ದಿಂಗೆ ಶಕ್ತಿಯಿಲ್ಲೆನ ಲ್ಬಾರದು, ವೈದ್ಯರುಂ ಶಾಸ್ತ್ರಜ್ಞರುಮಱಿವೊಡೆ ಸಾಲ್ಗುಂ; ದೇಶ ವೆಲ್ಲಮಕ್ಕರಮನಱಿಯದನಿತಱಿಂದಕ್ಕರಮಿಲ್ಲೆನಲ್ಬಾರದು, ಸೇನಬೋ ವರುಮಕ್ಕರಿಗರುಮಱಿವೊಡೆ ಸಾಲ್ಗುಂ; ಅಂತೆ ಕಿಱುಕುಳ ವ್ಯಂತರಂ ಗಳ ಪೊಲ್ಲ ಗ್ರಹಂಗಳ ಶೈವಾದಿಗಳ ನೆಗಱ್ಪಿ ಪ್ರಮಾಣಮಿಲ್ಲದು; ನೆಲ ನೆಲ್ಲಂ ಕೊಂಡಾಡುವೆಕ್ಕಲವಿರಿಯುಂ ಬನದಬ್ಬೆಯುಂ ಮಹಾಲಕ್ಷ್ಮಿ ಯುಂ ಕಂಚಿಯ ಕಾಮಕೋಟಿಯುಂ ಕೊಳ್ಳಾಪುರದ ಭೂತಕೋ ಟಿಯುಂ ಪಿಟ್ಟಾಪುರದ ಮೌರಿಕಬ್ಬೆ ಶಾಕಿನಿಯುಂ [1] ಪೊಣಮೊಲೆಯ ಮಂಗಳಾದೇವಿಯುಂ ವೈಲಾಪುರದ ಕಾಮಾಕ್ಷಿಯುಮೆಂಬಿವರ್ಮೊದ ಲಾದ ಮಹಾವ್ಯಂತರಂಗಳ್ ನೋನದಿಂ ಮುಟ್ಟುಸಡಂ ಬೆರಸಿರ್ಪೊಡಂ ಪೊಲೆಯರ ದನಿಯಪ್ಪೊಡಂ ಕೇಳದಂತು ಕಂಚುವೆಱಿವೆರಸು ಲೇಸುನುಡಿ ಲೇಸುನುಡಿಯೆಂಬ ಮಹಿಮೆಯಿಂದುಱ್ಬರ್: ಚಂದ್ರಾದಿತ್ಯಗ್ರಹಂಗಳ್

1 ವಾಕವ್ಯೆಯಸಾನಿಯುಂ (ಕ. ಬ.)

ಕಳ್ಳಡಗುಂ ಜೀನುಂ ಗಿಣ್ಣಂಬೆ ಮೊದಲಾದುವೆಲ್ಲದೆ ಶುದ್ಧಮಪ್ಪಾಹು
ತಿಯುಂ ಕೊಳ್ಳವು; ದೇವೇಂದ್ರನುಮಗ್ನಿಯುಂ (ಮೊದಲಾದ) ದಿಕ್ಪಾ
ಲಕರೆಲ್ಲರುಂ ಮದ್ಯಮೊಂಸವರ್ಜಿತಮಪ್ಪ ಪೂಜೆಗಳಂ ಕೊಳ್ವರ್; ಮೀ
ನಿನದಿಂ ಮುಟ್ಟುಪಡದಿಂದನ್ನ ಶುದ್ಧಿಯಿಂ ಪಾತ್ರಶುದ್ಧಿಯಿಂದುಣ್ಬುದು;
ತೊವಲ್ ಮೊದಲಾದವಂ ಮುಟ್ಟದೆ ನೋಡದೆ ಕಾಳಾಮುಖರುಂಬರ್;
ಕೊಲಲುಂ ಪುಸಿಯಲುಂ ಕಳಲುಂ ಪಿಱರ ಪೆಂಡಿರ್ಗಳಸಲುಮೊಗದು,
ಜೀನಂ ಗಿಣ್ಣಂ ತಿನವೇಡ, ಮಟ್ಟಿದುಂ ಯಜ್ಞಶಾಲೆಯೊಳುಣವೇಡ,
ನಾಯ್ಮೊದಲಾದ ಪ್ರಾಣಿಗಳಂ ನೋಯಿಸವೇಡೆಂದು ವ್ರತಂಗಟ್ಟುವಲ್ಲಿ
ಮೂಣಿಗಳಂ ಬ್ರಾಹ್ಮಣರ್ ನಿಮಿಮಿಸುವರಪ್ಪುದಱಿಂ ಲೋಕಮೆಲ್ಲಂ
ಜಿನರಾಜ್ಞೆಯಿಂ ನಡೆದಪುದೆಂದಱಿಗೆ ॥ ೧೦೧

[ಮನೆದೈವಮುಣ್ಣದೆಂದೊ
ಯ್ಯನೆ ಪೊಲಸಂ ತಿಂಬ ಮನುಜರುಂ ಪೊಲಸಿನ ಭಾ।
ಜನಮಂ ಪೊಱಗಿರಿಸುವರೆನೆ
ಜಿನಪತಿ ಬೇಡೆಂಬ ವಸ್ತುವಂ ಮನ್ನಿಪರಾರ್ ॥ ೧೦೨

ನಿನ್ನೊಳ ಧರ್ಮದ ಪೆಂಪುಂ
ನಿನ್ನೊಳ ವಿಸ್ತರಮುಮೆಸೆವುವೆಂದೊಡೆ ನಲಿವರ್।
ಮುನ್ನಂ ಪಾತಕರಾದೊಡ
ಮಿನ್ನದಱಿಂ ಜಿನರ ನುಡಿಗೆ ಸೋಲದರೊಳರೇ ॥] ೧೦೩

ಪರವೆನಿತೆಗೆಱಗದುದುಮೆ
ನ್ಯಾರ್ಥಮುಂ ಬಯಸಲೊಲ್ಲದದು ನಿನಗೆಸೆಗುಂ।
ಕರಮೆನೆ ದುಷ್ಟನುಮೊಸಗೆನೆ
ಪರಮಜಿನಾಧೀಶರಾಜ್ಞೆ ಗೊಸೆಯದರೊಳರೇ ॥ ೧೦೪

ಕೊಲೆಯುಮೆಸತ್ಯಮುಮಿವನೊಳ್
ನೆಲಸಿದುವೆನೆ ಕೊಲ್ವ ಪುಸಿವ ಕಷ್ಟಂ ಪಿಡದು।

ಮ್ಮಳಿಸಿ ಕಡುನೋವನೆನೆನೆ ಭೂ
ತಳದೊಳ್ ಜಿನರಾಗದೆಂಬುದಂ ಮನ್ನಿಪರಾರ್ ॥ ೧೦೫

ಕಳ್ಳನುಮಂ ಪರವನಿತೆಗೆ
ನಲ್ಲನುಮಂ ಕಂಡು ನೀನೆ ಪಾದರಿಗಂ ನೀಂ ।
ಕಳ್ಳನೆನೆ ಮುನಿವರೆನೆ ಜಿನ
ವಲ್ಲಭನಾಗೆಂಬುದಕ್ಕೆ ನಲಿವರುವೊಳರೇ ॥ ೧೦೬

ನೆಱಿ ಕಳ್ಗ್ರಡುಹಿಗಳಂ ಕಂ
ಡಱಿಯದೆ ಕಳ್ಗ್ರಡುಹಿಯೆಂದೊಡಾನುಡಿಗೆ ಕರಂ ।
ಮೆಱುಗುವರೆನೆ ಜಿನರಾಗಂ
ಬಱಿಕೆಯು ಕಳ್ಳಂಗೆ ಮುನಿಯದಿರ್ಪವರೊಳರೇ ॥ ೧೦೭

ಸೊಪ್ಪಾದ ಪೊನ್ನುಮಂ ಕಪ್ಪಾದ ರತ್ನಮುಮಂ ಪೆಸರ್ವೋದ ಪೆಂಡತಿಯುಮುಮಂ ಮುಕ್ಕುವೋದ ಸುರಿಗಿಯುಮಂ ತೂಂತುವೋದ ಮಡಳೆಯುಮಂ ಲೋಕಂ ಕೈಕೊಳ್ಳರೆಂದೊಡೆ ಮೆಯ್ಯೆಲ್ಲಂ ದೋಷಿಯುಪ್ಪ ದೇವನನೆಂತುಂ ಕೈಕೊಳರ್, ವೈಸನಿಗಳಪ್ಪರೆ ಕೊಂಡಾಡುವರ್; [1] ಜಗದೊಳ್ ಕೊಲ್ಲದರುಂ ಕೊಲ್ವರುಂ ಕಳದವರುಂ ಕಳ್ವರುಂ ಪರಸ್ತ್ರೀಲಿಂಗಿಗಳಿಗದರುಂ ಪಾದರಿಗರುಂ ವೇರೆಯಿಂ ನಡೆವರುಂ ವಿಾಳಿ ನಡೆವರುಂ ಕಳ್ಳಂ ಕುಡಿಯದರುಂ ಕಳ್ಳಂ ಕುಡಿವವರುಮುಳ್ಳೊಡಂ ಪೊಲ್ಲದಂ ಬಿಟ್ಟು ಜಿನರಾಜ್ಞೆಯಿಂ ನಡೆವ ಮೊದಲವರ್ಗಳುಂ ಪೆಸರ್ಗೊಳ್ವರಪ್ಪುದಱಿಂದಮುಂ, ಧಾನ್ಯದೊಳಕ್ಕಿ ಪಾಲೊಳ್ ತನಿವಾಲ್ ತುಪ್ಪದೊಳ್ ಬೆರಸದುದು ಬಂಟರೊಳ್ ನಿಚ್ಚಟಿಗಲಿ ತೊಡವಿನೊಳುಜ್ಜ್ವಳಕೆ ಸಿರಿಯೊಳ್ಮಿಡಿ ಕಾಲದೊಳಗ್ಗಳಿಕೆ ರಾಜ್ಯದೊಳಸಹಾಯತನಮು

---

[1] ವೈಸನಿಗಳಲ್ಲದವರ್ ನಿರ್ದೋಷಿಯಪ್ಪ ದೇವನನೆ ಕೈಕೊಳ್ವರಪ್ಪುದಱಿಂದಮುಂ ತೆಂಗಿನಕಾಯುಂ ತಿರುಳುಂ ನಾರುಂ ಊರೊಳ್ ಕುದ್ದರುಂ ಕಳ್ಳರುಂ ಮನೆಯೊಳಿರ್ಪಿಂದಿರಂ ತೊತ್ತಿರುಂ ಕೆಯ್ಯೊಳು ಸಸಿಯುಂ ಪುಲ್ಲುಂ ಬೆರಸಿರ್ದೊಡಂ ಮುಳ್ಳುಮುಪ್ಪುದನೆ ಪೆಸರ್ಗೊಳುವಂತೆ. (ಗ)

ಮೆಪ್ಪ ನಿರ್ಗ್ರಂಥಮೆನೆ ಜನಂ ಬಯಸುವ್ದಱಿಂದಮುಂ ಲೋಕಮೆಲ್ಲಂ ಜೆನರೋಜೆಯೆ ಜಗವೆಲ್ಲಂ ಜಿನರ ನಡೆವಳಿಯೆ ಸಕಲಮೆಲ್ಲಂ ಜೆನರಾ ಜ್ಞೆಯೆ ಮತ್ತೊರ್ವರ ಮಹಿಮೆಗೆಡೆಯಿಲ್ಲ; ಬಾಱುತ್ತಿಯಪ್ಪವೆದಱಿಂದಿವೆಲ್ಲಂ [1] ದೈವಮೆಂಬೊಡೆ ಕಂಲ್ಗೆ ಕೆರಪು ಪಸಿವಿಂಗೆ ಕೂಱೆ ತೃಷೆಗೆ ನೀರ್ ತಲೆಗಣ್ಣೆ ಬಾಯ್ಗೆಲೆ ಕೆಯ್ಗೆ ಬೇಲಿ ಶಿಶುವಿಂಗೆ ಪಾಲ್ ಪಶುವಿಂಗೆ ಪುಲ್ ಱುದುರೆಗೆ ಱಾಣಂ ಕಱುವಿಂಗೆ ಪಿಟ್ಟು ಮಡಿಗಸಗಂ ನೀರೆಗೆ ಪೊಲೆಯು [2] ನಿಂತಿವೆಲ್ಲಂ ದೈವಮಕ್ಕುಂ; ಕೋಪಪ್ರಸಾದಮುಳ್ಳವರೆ ದೈವಮೆಂಬೊಡೆ ಮನ್ನೆಯರುಮೆಸರುಂ ತಳಾಱಿರುಂ ದಂಡಾಧಿಕರುಂ ಪೆಱರ್ಗಳ್ಗಳುಂ ದೈವಮೆಪ್ಪರ್; ಸಾಮರ್ಥ್ಯಮೆ ದೈವಮೆಂಬೊಡೆ ಸುಣ್ಣದಿಂದರಿಸಿನದಿಂ ಕೆಂಪಪ್ಪುದು [ಎಲೆಯಡಿಕೆಸುಣ್ಣದಿಂ ಪಲ್ ಕಱೆಯಪ್ಪುದು] ಅಣಿಲೆತಿಗಡೆಯಿಂ ಬಸಿಱೊಡೆವುದು; ಅವೋಧ್ಯದ ಮೇಲು ಗುಱ್ವೊಡೆ ಗಂಟಲ್ ನೋವ್ವುದು; ತ್ರಿಫಲೆಯ ಸೇವೆಯಿಂ ಮೞೞುದ್ದಿಯಕ್ಕುಂ; ಪುಣಿಸೆಯ ಕೊನೆಯುಮುಪ್ಪುಂ ಕಣ್ಬೀನೆಯಂ ಕಳವುದು; ಸುಂಟಿಯುಮೆಮೆರ್ದುವಳ್ಳಿಯುಂ ಪುಷ್ಕರಮೂಲಮುಂ ಬರಿವದನೆಯುಂ ಜ್ವರದ ಕೇಡು, ತೊಟ್ಟಿಯೆಲೆಯ ಕಷಾಯಮೆಱ್ಕಮೆಯಂ ಕಳವುದು; ಅಂತಾದೊಡಿನೆಲ್ಲಂ ದೈವಮಕ್ಕುಂ [ಎಂಬುದುಂ ಬಲಿ ಜೀವಸಿಲ್ಲೆಂದು ನುಡಿವುದುಂ ಅಕಂಪನಾಚಾರ್ಯರಿಂತೆಂದರ್ ॥ ೧೦೯

ಪೆಱಿಗಣ ಮಾತುಗಳಂ ಮು
ನ್ನಱಿವವರಂ ಮುಂದೆ ಬರ್ಪ ಕಾರ್ಯಮನಿಂತೆಂ।
ದಱಿಯದು ಜೀವಂ ಜೀವಂ
ಪಱಿದೊಡೆ ಧಾರಿಣಿಯೊಳಱಿಯಲಾರ್ಕುಂ ದೇಹಂ ॥ (?) ೧೧೦

---

[1] ಬಾಱುತ್ತಿಗೆಟ್ಟವೆಲ್ಲಂ (ಕ. ಬ.)

[2] ಕುಳ್ಳಿರ್ಪುದಕ್ಕೆ ವ ಜೆ ಪಡುವುದಕ್ಕೆ ಹೊರಚು ತೆಗೆಸುವುದಕ್ಕೆ ಸಟ್ಟಗ ಯೆಂಬಿವು ವೊದಲಾಗೊಂದಕ್ಕೊಂದು ಬಾರ್ತೆಯಾದವಿನಿತಱೊಳೆ ದೈವಮಲ್ಲವು; ಕೂರತ್ವಮೆ ದೈವಮಪ್ಪೊಡೆ ಪುಲಿಯುಂ ಪಂದಿಯುಂ ನಾಯುಂ ತೋಳನುಂ. (ಗ)

ಜಾತಿಸ್ಮರತ್ವದಿಂದಂ
ಭೂತಳದೊಳ್ ತಮ್ಮ ಭವಮನಱಿವರ್ ಕೆಲರುಂ ।
ಪ್ರೀತಿಯೊಳಸುವಿಲ್ಲದೊಡಂ
ತಾತಂಗಭವಮನಱಿಯಲೆಂತಾದಪ್ಪುದೋ ॥ ೧೧೦

ಹಮ್ಮಯ್ಸಿ ಕಿಱಿದುಚೇಟ
ಕ್ಕೊಮ್ಮೆಯೆ ಪೋಪಂದು ಪುಗುವುದಸು ಬೇಗಂ ಜೀ ।
ವಮ್ಮತ್ತಿಲ್ಲಪ್ಪೊಡೆ ತನು
ವೆಮ್ಮುದದಿಂದಂ ಬಱಕ್ಕೆ ಪುಗದದದೇನೋ ॥ ೧೧೧

ಪೆಣನಂ ಕಡಿವೊಡೆ ಮಿಡುಕದೆ
ಪೆಣಿಯುದು ಜೀವಮಿರದೆ ದೇಹವುಳ್ಳೊಡವುದಿಂ ।
ನ್ನಣಕಮೆಸುವಿಲ್ಲದೊಡೆ ವಾ
ರುಣಿಯೊಳ್ ಸುಡೆ ಕಲಿಯುಲಿಸುಕದಿರ್ಪುದದೇನೋ ॥ (?) ೧೧೨

ಆವಿನರಚ್ಚಿಯೆಯಯ್ಯನೆ
ಯೀವಿಧಿಯಿಂ ಸತ್ತೆವಂದು ಪಿಡಿದುಂಬುವು ತ ।
ದ್ಭಾವದಿನೆನೆ ಭೂತಪಿಶಾ
ಚಾವಳಿಗಳ್ ಮರುಳ ಧರೆಯೊಳಸುವಿಲ್ಲೆಂಬಾ ॥ ೧೧೩

ಳರದಿಂದಂ ಗ್ರಹವಾದಿ ಬಂದು ನುಡಿಸಲ್ ಕೇಳ್ ತದ್ಗ್ರಹಂ ಬಂದು ನಿ
ಷ್ಠುರನೀತಂ ಕಡುಗೋಪದಿಂ ಮುನಿದು ಮುನ್ನೆನ್ನಂ ಕರಂ ಕಾಡಿದಂ
ಪಿರಿದುಂ ದರ್ಪದಿನೆಂದು ಪೇೞ್ವುದು ಮಹಾಕ್ರೂರಗ್ರಹಂ ಜೀವನು
ರ್ವ್ವರೆಯೊಳ್ ತಾನಣಮಿಲ್ಲದಿರ್ದೊಡದನಿನ್ನೀಕೆಂಬುದಂತಾಗ್ರಹಂ ॥ ೧೧೪

ಮತ್ತಂ ಮುನ್ನಿನ ಭವದ ಗಂಡನೀಕ್ಗೆ ಮಕ್ಕಳಾಗಲೀಯನೆಂಬ
ಪೂರ್ವಭವದ ಪಗೆವಂ ನಿನ್ನನುಣಲೀಯದೆ ಪಲಕಾಲಂ ಗ್ರಹಮಾಗಿ
ಪಿಡಿದಿರ್ದಪನೆಂಬ ನಾತವರ ನುಡಿಯಿಂದಿವೆರಿಂತಪ್ಪೆಡೆಯೊಳಿಂತಪ್ಪಾಗಿ

ಪುಟ್ಟದರೆಂದು ಗ್ರಹವಾದಿಗಳ್ ಪೇಳ್ವ ವ್ಯಂತರನ ವಚನಂಗಳಿಂ, ಜಾತಕ ಫಲಮಂ ನೋಡಿ ಮತ್ತೀತಂ ಮುನ್ನಿಂತಪ್ಪಾತನೆಂದು ಪೇಳ್ವ ದೈವಜ್ಞರ ಮಾತುಗಳಿಂ , ಕಲೆವರಿಸಿ ಪುಟ್ಟುವ ಮಕ್ಕಳಂ ಕಂಡುಂ, ಜೀವನೊಳ ವೆಂದಱಿವುದು ; ಕೆಮ್ಮನಾನೆಗಂಡಱಿಯನರಸುವ ಮುಂಗ್ಸೆಯ ಕಂಕ ಣಮಂ ಕನ್ನಡಿಯಿಂ ನೋಳ್ಪಿ ಗಾಂಪರಂತೆ ಗಾಪಿಲನಾಗನೆಂದು ಪಲವುದೃಷ್ಟ್ಯಂತಂಗಳಿಂ ಜೀವಸಿದ್ಧಿಯುಂ ಮಾಱ್ಪುಮಂ ಬಲಿ ಮತ್ತಿಂ ತೆಂದಂ ॥ ೧೦೫

ಭೂವಸಿತೀಶ್ವರನಱಿಯದೆ
ಭಾವಿಸದೆ ತಗುಳ್ದು ಸಿನ್ನನತ್ಯಾದರದಿಂ ।
ದೇವನೆ ಚಿಂಡನೆ ಯೆಂದೊಡೆ
ದೇವಂ ನಿನಗಂತದೆಂತು ದೊಡ್ಡಿಪನಪ್ಪೈ ॥ ೧೦೬

ಪಲವುಮಾತಂ ಪೆಟ್ಟುವೆರ್ಚಿ ಗಱಿಪದೆ ಜೀವನುಂಟಕ್ಕುಮಪ್ಪೊಡೆ ನಿನ್ನ ದೇಹಮಂ ಪೊಱಮಟಿಸಿ ಜಗಮಿಱಿಸದಿಪ ನೆರಪಿಗಸುರಸಂಗಂ ತೋಱು ಬಱಿದೆ ಮಾತಂ ಬಲ್ಲೆನೆಂದು ನುಡಿಯಲ್ವೇಡೆಂಬುದುಮೆಕಂ ಪನಾಚಾರ್ಯರಿಂತೆಂದರ್ ॥ ೧೦೭

ಸುರುಳ ಸುರುಳ್ತನದಿಂದು
ರ್ವರೇಶನಾಸ್ಥಾನರಂಗದೊಳ್ ನೀಂ ಪಿತ್ತ ।
ಜ್ವರಮೊದರಂತೆ ಗಱಿಪುವ
ಸಿರಿಸಿಲ್ಲಪ [1] ನುಡಿವೆ ಬಡತನಂ ಚದುರಿಕೆಯೋ ॥ ೧೦೮

ಸೊಗಯಿಪ ಮೆಗಿಯೊಳಂ ಜೀ
ಸಗೆಗಾಲಮನಣ್ಣಂ ತೋಱಲಕ್ಕುಮ ಪೇಕ್ಷೇ ।
ಸಗೆಯೊಳ್ ಮಱೆಗಾಲಮನೀಂ
ಬಗೆದಂತಿರೆ ಪೇಳ್ದಿ ತೋಱಲಕ್ಕುಮ ಜೀವಂ ॥ ೧೦೯

[1] ಸರಗಿಲ್ಲದೆ (ಕ.) ಸಿರನಿಲ್ಲದ (ಬ.)

ಅದುಕಾರಣದಿಂ ನೀಂ ನುಡಿಯಲಱಿಯದಂಕಕಾಱನಾಕಾಶಮಂ ನೋಡಿದನೆಂಬಂತೆ, ಎಮ್ಮ ನುಡಿಗುತ್ತರಮಂ ಕಾಣದೇನಾನುಮೆಕ್ಕ ಸಕ್ಕಂ ಗಱಿಪಿದೆಯಾದೊಡಮೀಂ ಪಾಲೊಳಗೆ ತುಪ್ಪಮುಂಟೆಂಬುದುಮಂ ಮರದೊಳಗೆ ಕಿಚ್ಚುಂಟೆಂಬುದುಮೆನ್ನೆಲ್ಲರುಂ ಬಲ್ಲನಿತರೊಳ ಬಱಿವಪ್ಪರದಕ್ಕೆ ತಕ್ಕ ಕ್ರಿಯೆಯುಂ ಮಾಡದೊರ್ಮೆಯೆ ಗಮ್ಮನೆ ತೋಱಬಾರದು ; ಕ್ರಮದಿಂ ಪಾಲಂ ಕಾಸಿ ಹೆಪ್ಪಿಸಿಟ್ಟು ಕಡೆದು ಬೆಣ್ಣೆಗೊಂತು ಪದನಱಿದು ಕಾಸಿದಾಗಳ್ ತುಪ್ಪಮಕ್ಕುಂ ; ಮರನುಮೆನೋ ಜಾಯಿಲನಾಗಿ ಪೊಸೆಯೆ ಕಿಚ್ಚಕ್ಕುಂ, ಎಳ್ಳಂ ಗಾಣದೊಳಿಕ್ಕಿ ಪಿೞಿಯೆ ಬಱಿಕ್ಕೆಣ್ಣೆಯಕ್ಕುಂ ; ಅಂತೆ ಕರ್ಮನಿಬದಿಂ ಶರೀರಿಯಪ್ಪ ಜೀವಮನೊರ್ಮೆಯೆ ನಿನಗೆ ತೋಱಲ್ಬಾರದು ; ದಾನಾದಿಧರ್ಮದೊಳ್ ಕೂಡಿ ಏಕಾದಶನೆಲೆಯೊಳ್ ಕೂಡಿದ ಧರ್ಮದೊಳಕ್ಕೆ ದಶಧರ್ಮದೊಳ್ ಕೂಡಿದನಗಾರಧರ್ಮದೊಳಕ್ಕೆ ನೆಗೞ್ದ ಪಾಪಾಂಕುರಂಗಳಂ ಕಿೞ್ತೊಟ್ಟ ಮೆಲ್ಲನೆ ಸ್ವಸ್ವರೂಪನಾಗಿ ಶಾಶ್ವತಸುಖದೊಳ್ ಕೂಡಿದಂದು ಬೇಱಕ್ಕುಮಲ್ಲದಂದು ಮನೆಯು ಬಡತನಕ್ಕೆ ಪೊಡೆಯುಂ ಕೊಯ್ದುರೆಂಬಂತೆ ಮೂಡಿದೊಡೆ ನಿನಗೆ ಕರ್ಮಬಂಧಮಿಪ್ಪ ಜೀವಮೆನಂತು ಬೇರ್ಕೆಯುಂ ತೋಱಲ್ಬಪ್ಪುದು ॥ ೧೮೦

ಸೊರೆಯೊಳಗೆ ತೀವಿ ಮಣ್ಣಂ
ಸರದಿಯೊಳಕ್ಕಿದೊಡೆ ನೆಗೆಯಲಾರ್ಪುದೆ ಪಾಪೋ ।
ತ್ಕರದೊಳ್ ಬೆರೆಸಿದ ಜೀವೋ
ತ್ಕರಮುಂ ನಿರ್ವೃತಿಗೆ ನೆಗೆಯಲಾರ್ಕುಮೆ ಬೇಗಂ ॥ ೧೮೧

ತಾರಗೆ ಪಗಲೊಳ್ ಪದುಮೆ
ಕಾರಂ ಮೇೞ್ಕುವಿದ ಮುಗಿಲ ಮೞೆಯೊಳ್ ತಮ್ಮೊ ।
ಕಾರಂಗೆಟ್ಟರ್ಪವೋಲಘ
ಭಾರದಿನಂತಿಂತು ಮಿಡುಕಲಾಱವು ಜೀವಂ ॥ ೧೮೨

ಜಾಂಡಲಕೆಯ ಬೀಜಂ ಭೂ
ಮಂಡಲದೊಳ್ ಪಸುರಡಂಗಿ ಪಾಱುವ ತೆಱದಿಂ ।

ಖಂಡಿಸೆ ಪಾಪಸಮೂಹಂ
ಮಂಡಿತವೋಕ್ಷಕ್ಕೆ ಸಾಗರ್ಗಮೆಸುಗಿದು ಸಹಜಂ ॥ ೧೦೩

ಎಂದಿಂತು ದೃಷ್ಟಶ್ರುತಾನುಭೂತಂಗಳಿಂದಱಿವುದೆಂದು ಸರ್ವಜ್ಞಾನುಮಂ ನಿರ್ಗ್ರಂಥಮೆಪ್ಪ ತಪಮುಮಮಂ ಮೊಱೆಯುಮಂ ಜೀವಮು ಮನುಂಟೆಂಬುದುಂ] ॥ ೧೦೪

ಪಲವುಪೊಗಟ್ತ್ತಗಳಂ ಭೂ
ತಲನಾಥಂಬೆರಸು ಸಭೆಯ ಜನಮೆಲ್ಲಂ ಕೈ ।
ಕೊಳಲಧಿಕವೆಚನರಚನೆಗೆ
ನೆಲೆಯಾದಂ ಸುಕವಿನಿಕರಪಿಮಾಕಂದಂ ॥ ೧೦೫

ಱಿವರುಂ ಮತ್ತೀನೆಂ
ದಱಿಯದರುಂ ತಿಳಯೆ ನುಡಿದನಮೃತದ ಮಳೆಗಳ್ ।
ಕಱಿವೆಂತೆ ನಚ್ಚಿ ಪಲವುಂ
ತೆಱದಿಂದಂ ಸುಕವಿನಿಕರಪಿಕಮಾಕಂದಂ ॥ ೧೦೬

ಎಂದು ಜಯುವರ್ಸ್ಮಮಹಾರಾಜಂ ಜಿನಶ್ರೀಚರಣಾಳಂಕಾರಶೀರ್ಷನ ವಾಗ್ಮಿತ್ವಕ್ಕಂ ಭಾವಯುತದಿಗಂಬರದಾಸನ ಜಿನಾಗಮಪರಿಣತಿಗಂ ಸುಕವಿಜನಮನಃಪದ್ಮಿನೀರಾಜಪಂಸನ ಕೊಂಕಿಲ್ಲದ ಜಿನಭಕ್ತಿಗಂ ಸಹಜಕವಿಜನಮನಃಪದ್ಮಿನೀರಾಜಹಂಸನ ಕೊಂಕಿಲ್ಲದ ಜಿನಭಕ್ತಿಗಂ ಸಹಜಕವಿಜನಮನಃಪಯೋಧಿಹಿಮಕರನ ಕುಡುವುತ್ತರಕ್ಕಂ [ಮುಯ್ಯುದವಾಗೆ ಕಾಲ ಮೇಲೆ ಬಿಟ್ಟು ಮತ್ತೆ ಕಾಲಂ ತಲೆಯ ಮೇಲಿಟ್ಟುಕೊಂಡು ಜೀಯ ಬಾಪೆಂದು ಮತ್ತೆ ಪೊಗಟ್ತೆ, ನುಡಿದು ಗೆಲ್ವುದು ತೊಱೆಯನೀಸಾಡಲಾಱದ ನಿಶ್ಶಕ್ತನ ಕಾಲಂ ಪಿಡಿದಂತಾಗೆ ಕಾಳಗದೊಳ್ಸೋಲ್ತ ಪಂದೆ ಪೆಱಿಗೆ ಲಜ್ಜಿಸಿ ಕಱಿಯಂ ಪಾಯ್ದನೆಂಬಂತೆ ಬಲಿಜಯನವರ್ಮ ಮಹಾರಾಯನ ಮೊಗಮಂ ನೋಡಲ್ ಲಜ್ಜಿಸಿ ತನ್ನ

ಸೋಲ್ತುದಕ್ಕೆ ಲಜ್ಜಿಸಿ ಪೆಯ್ಯುಱಿಯದೆ ಮುನಿಸರೋಜಿನೀರಾಜ ಹಂಸನನಿಂತೆಂದಂ] [1] ॥ ೧೮೩

ಪೆಱರಿಂತಲ್ಲದೆ ಬಂದೆನ
ಗೆಱಗರ್ ಕಡುಛಕ್ತ್ಯಿಯಿಂದಮೆಂದುಕ್ಕೆವದಿಂ ।
ಬಱಿದೇಂ ಮಾಣಿಸಿ ನೀನೊಳ
ಗಱಿಯದರಂ ವಚನರಚನೆಯಿಂ ಸೋಲಿಸುವೈ ॥ ೧೮೪

[ಮಾಯೆ ತಪಮಂ ಪೊಣರ್ಚಿರ್ಪೆಯೆ
ಗಾಯದಿನುಣಲೆಂದು ವಶ್ಯಮಂತ್ರಂಗಳನ ।
ನ್ಯಾಯನಿರನಾಗಿ ಸಾಧಿಸಿ
ಮಾಯಾವಿ ಧರಿತ್ರಿಯಂ ಮರುಳ್ಮಾಡಿದಪ್ಪೆ ॥ ೧೮೫

ಪಲವುಮುರ್ದುಗಳಿಂ ಮುಖವಶ್ಯಮುಂ ಮಾಡಿಕೊಂಡು ಜನವಶ್ಯ ರಾಜವಶ್ಯಮೆಂತ್ರಂಗಳನುಣ್ಣದಟ್ಟಿದು ಕುದಿದು ಮಱಿಗಿ ಸಾಧಿಸಿ ತನ್ಮಂತ್ರಬಲದಿಂದೆನ್ನ ನಾಲಗೆಯುಂ ಸ್ತಂಭಿಸಿ ಗೆಲ್ವೆಯುಂತಲ್ಲದೆನ್ನುಂ ಗೆಲಲ್ ಸಿನ್ನಳವಲ್ಲದೆಂದು ಮುನಿಸಿಸಿಂ ಕಣ್ಗಾಣದೆ ಬಾಯ್ಗುವೆಂದಂತೆ ನುಡಿವುದುಂ ಸರಿದ ನೆರವಿಯೆಲ್ಲಮಿಂತೆಂದರ್ ॥ ೧೮೬

ಜಯವೆರ್ಮಾಮಹಾರಾಜಂ
ನಯದೆ ಮುನೀಶ್ವರನೊಳೊದವಿ ನುಡಿದಾಂ ಗೆಲ್ವೆಂ ।
ನಯದಿಂದವೆಂದು ಒಂದಂ
ಭಯಮಿಂದುಳ್ಳಿಕ್ಕ ನುಡಿಯಲಾಱಿದೆ ಕಷ್ಟಂ ॥ ೧೮೭

ಮೋತನಱಿಯದ ಸೂಳೆ ಕಾಂಟಱಿಯುಂ ಬೈದಳ್ಂಬ ನಾಣ್ಣುಡಿಯಂತೆ ಪರಮಾವಧಿಲೋಚನನಪ್ಪ ಮಹಾತ್ಮನ ವಚನಕ್ಕುತ್ತರಮುಂ ಕುಪ್ಪಲಾಱಿದೆ ಬಾಯ್ಗುವಂದಂತೆ ನುಡಿದಪನತಿಧೂರ್ತನೆಂದು ಕಂಡರೆಲ್ಲಂ

---

[1] ಮುಯ್ಪವನಿಗೆ ಬಿದ್ದ ಕಾಲಂ ತಲೆಯು ಮೇಲಿಟ್ಟುಕೊಂಡು ಮತ್ತೆ ಮತ್ತೆ ಪೊಗಳ್ವುದುಂ ಬಲಿ ಲಜ್ಜಿಸಿ ಕೋಪದಿಂ ಕಣ್ಗಾಣದೆ ಬೈಯ್ದು (ಗ)

ಜಱೆಯೆ ಜಯವರ್ಮಮಹಾರಾಜಂ ಬಲಿಯ ಮಾತಿಂಗೆ ಮುನಿದು ಸಭಾ
ಸದರ್ಗಿಂತೆಂದಂ] [1] ಕರಗಸದ ಬರವುಂ ಪೋಗುಂ, ಕಿಚ್ಚಿನುರಿಯುಂ
ಪೊಗೆಯುಂ ದುಷ್ಟಾಶ್ವದ ಮುಂತುಂ ಪಿಂತುಂ ಬೆಟ್ಟಮನೇಱುವುದು ಮಿಱು
ವುದುಂ ಪುಲಿಯ ಕೂರ್ಮೆಯುಂ ಪಗೆಯುಂ ಸುರಿಗಿಯ ವೂನೆಯುಂ
ಬಾಯಾರೆಯುಂ ವಿಷದ ಕಯ್ಪಿಯುಂ ನೀಪುಂ ಮೂರ್ಖನ ನಗೆಯುಂ
ಮುನಿಸುಂ ಪೇಲ ನುಣ್ಪುಂ ಪೆಂಪುಂ ಕಯ್ಪಿಸೋರೆಯ ಮಿಡಿಯುಂ
ಕುಡಿಯುಂ ನಾಯ್ವೀಳ್ದ ಕಾಯುಂ ಪಣ್ಣುಂ ಲೋಭಿಸು ಮನಮುಂ
ಧನಮುಂ ಕಳ್ಳನ ಚೆನ್ನುಂಪೊನ್ನುಂ ಭಯದ ಬಟ್ಟೆಯ ನೀರುಂ ನೆಳಲುಂ
ಪೊಲೆಯರ ಮನೆಯ ಕೂಟುಂ ಬಾಡುಂ ಬೆಸನಿಯ ನುಡಿಯುಂ ನಡೆ
ಯುಂ ಪೊಲ್ಲಿಂತಂತೆ ಮಿಥ್ಯಾದೃಷ್ಟಿಯ ನೆಗಳ್ತೆಯುವೊಂದು ಪೊಲ್ಲಿಂದು
[ಮುನಿದು ಬಲಿಯನಿಂತೆಂದಂ ॥ ೧೩೦

ಪಿರಿಯರಿವರ್ ಸರ್ವಜ್ಞರ
ದೊರೆಯೆನ್ನದೆ ಸೊಕ್ಕಿ ಮೂರ್ಖತನದಿಂ ಕಾಣಂ ।
ಹೊರಸೇಱಿದಂತೆ ನುಡಿವೈ
ಮರುಳಿಂ ಪರರೊಳರೆ ಲೋಕದೊಳ್ ನಿನ್ನಿಂದಂ ॥ ೧೩೩

ನೀನತಿಧೂರ್ತನೆ ದುಷ್ಟಿಂ
ದೇನಾನುಮನೆನ್ನ ಮುಂದೆ ಮುನಿಪುಂಗವನಂ ।
ಹೀನವಚನಂಗಳಿಂದಭಿ
ಮಾನಂಗಿಡೆ ನುಡಿದೆಯಾದೊಡೇನಾಯ್ತಿನ್ನುಂ ॥ ೧೩೪

ಱರ್ಮಿಗೆ ಪ್ರಾಣಕ್ಕೆ ತಪ್ಪಲಾಗದು ನಿನ್ನ ಮಾಡಿದ ದುಷ್ಕೃತನ
ಮುಪ್ಪೊಡೆ ಕೊಲೆಗೆ ಪ್ರಾಪ್ತಿಯೆಂದು ಜಡಿದು ನುಡಿದರಸಂ ಬಲಿಗೆ ವಿರಸ
ನಾಗಿ ಕೋಪದಿಂ ಬಡಿದು ಪಿರಿದಪ್ಪಸಮಾನಮೆಂ ಮಾಡಿ ತನ್ನ ಪುರದಿಂ

1 ಎಂದು ಬಾಯ್ಗೆ ವಂದಂತೆ ನುಡಿವುದುಂ ಜಯವರ್ಮಮಹಾರಾಜಂ
ಮುನಿದು ನಿನಗಂಜುವೆನೆಮ್ಮಾಳ್ವ ದೇಶದಿಂ ಪೋಗಮಟ್ಟ ಸ್ಥಾನಂದು ಜನದರಸಂ
ಪ್ರಧಾನರ ಮೂಗಮುಂ ನೋಡಿ (ಗ)

ಪೊಱಮಡಿಸಿ ಕಳವುದು ಬಲಿಯವಂಕದವೆರ್ಲ್ಲಂ ಪೊಱಲೊಳರಲಾಗ
ದೆಂದು ಗೋಸಣಿಗೊಳಿಸೆ ಬಲಿ ಜಯವರ್ಮ ಮಹಾರಾಜಮುನಿಪತಿಗೆ
ಪುನರ್ದಮುಸ್ಕಾರಂಗೆಯ್ದು ಮನೆಗೆ ಪೋದನಿತ್ತಲ್ ಬಲಿಯೊಡವುಟ್ಟಿ
ದರ್ ಶುಕ್ಲ ಬೃಹಸ್ಪತಿ ಪ್ರಹ್ಲಾದರ್ ಮೊದಲಾಗೊಡೆಯ ಬಂಧುಗಳೆಲ್ಲಂ
ಪೊಱಮಟ್ಟು ಬಲಿಗೂಡಿ ಚಿಂತಾಕ್ರಾಂತರಾಗಿ ನೆರೆದು ಪೋಗುತ್ತುಂ
ಬಲಿಯನಿಂತೆಂದರ್ ॥ ೧೩೫

ಅಣ್ಣಂ ಸುಖದೋನ್ನತಿಯಿಂದಂ
ತಣ್ಣನೆ ಲೇಸಾಗಿ ಮುದದಿನುಣ್ಬರ ಬಾಯೊಳ್ ।
ತಿಣ್ಣನೆ ಕಿರ್ಚಂಪುಡಿಯಂ
ಮಣ್ಣಂ ಪೊಯ್ದಿಂತು ಮಾಡಿದೈ ದೂರ್ತಿಂದಂ ॥ ೧೩೬

ಎಂದು ಬಲಿಯಂ ಮೂದಲಿಸಿ ಬಯ್ವುದುಂ, ನೃಪನೊಳಾದ
ಪರಿಭವಾನಳನುಂ ನಂಟರೊಳಾದ ವಿಪ್ರಲಾನಳನುಂ ತಿಣ್ಣಮೊಗೆ
ಮುನೀಂದ್ರೋತ್ತಮನಮೇಲೆ ಕೋಪಂ ಪುಟ್ಟೆ ಬಲಿಯಿಂತೆಂದಂ ॥೧೩೭

ಜಯವರ್ಮಾಧೀಶನಾಸ್ಥಾನದೊಳ ವಯವದಿಂದೆನ್ನ ನಂದೋಡುಮಾಡಿ
ರ್ದ ಯತೀಶಾಂಭೋಜಸೂರ್ಯಾಂಗಳನಳವಡೆ ನಾನಾಪ್ರಕಾರಂಗಳಿಂ ಸಂ
ಶಯಮೇಕೀನ್ನಣ್ಣನಾಂ ಕೊಲ್ಲದೊಡೆ ಮನುಜನೇ ಮಂತ್ರಿಯೇ ನೋಡಿ
ವೆಂದ
ಪ್ರಿಯವಾಕ್ಯಾಳಾಪನಾಗಳೆ ಮನದ ಮುಳಿಸಿನುದ್ರೇಕದಿಂ ನೊಂದು
ಪೂರ್ಣ್ದಂ ॥ ೧೩೮

ಅಂತು ಪೂರ್ಣ್ಣ ಹಸ್ತಿನಾಪುರಕ್ಕೆವಂದು ಪದ್ಮಂಗಾಳಾಗಿರ್ಪ್ಪದು
ವೊಂದಾದಿವಸಂ] ॥ [1] ೧೩೯

---

[1] ನಕ್ಕು ಪುನರ್ದಮುಸ್ಕಾರಂಗೆಯ್ದು ಮನೆಗೆ ಪೋದನಿತ್ತಲ್ ಬಲಿಯುಂ ತನ್ನೊಡವುಟ್ಟಿದವರ್ವರಸಜ್ಜಯಿನಿಯುಂ ಪೊಱಮಟ್ಟು ಹಸ್ತಿನಾಪುರಕ್ಕೆವಂದುಮಹಾ ಪದ್ಮರಾಜನಂ ಕಾಣ್ಬುದುಂ ಪಿಂತನೆ (ಗ)

ಪರಿತಂದೊರ್ವಂ ಧಾತ್ರೀ
ಶ್ವರಂಗೆ ಪೊಡೆಮಟ್ಟು ದೇವ ನಮ್ಮ ಬಲಂ ಭಾ ।
ಸುರಸಿಂಹಕೀರ್ತಿಧರಣೀ
ಶ್ವರನಿಂ ಪರಿಭವಮೆನಾಂತುದಾಹವದೆಡೆಯೊಳ್ ॥ ೧೪೦

[ಎಂದು ಬಿನ್ನಪಂಗೆಯ್ವುದುಮೆರಸಂ ವಿರಸಮಾದ ಸೂಳೆಯಂತೆ ಲಜ್ಜೆಸೆ ಮುನ್ನನೇಕಸೂಪ್ ತನ್ನಟ್ಟಿದ ದಂಡಾತಂಗಮೊಸೆದುದಱಿಂ ಪಿರಿದಪ್ಪ ಲಜ್ಜೆ ಪುಟ್ಟೆ ಕೊಕ್ಕಳಿಗುದಿವರಸನ ಮನದ ಹೇವೆಮನಱಿದು ಬಲಿ ಮನದೊಳೂಳ್ಳಿತಪ್ಪ ಪ್ರಸ್ತಾವಮಾಯ್ತೆಂದು ಪೆರ್ಚಿ ಪದ್ಮಮಹೀ ಶ್ವರರಂಗೆ ಪೊಡೆಮಟ್ಟು ದೇವರೆನಗಾಬಿಸನಂ ದಯಿಗೆಯ್ವುದೆಂದು] [1] ॥

ಭರವೆಸದಿಂ ಬೀಡುವುದುಂ
ನರಪಂ ದಯೆಗೆಯ್ಯೆ ಬೆಸನನಾಗಳ ಕೈಕೊಂ ।
ಡರವರಿಸದೆ ಪಿರಿದುಬಲಂ
ಬೆರಸರಿಯುಂ ಗೆಲ್ವ ಬುದ್ದಿಯಿಂ ಬಿಲಿನಡೆದಂ ॥ ೧೪೧

ನಡೆದು [ಕತಿಪಯಪಯ್ಯಯಾಣಂಗಳಿಂ] ಕುಂಭಪುರಮನಯಿ [ಮೂವೆಳಸಾಗಿ ಸುತ್ತಿ ಮುತ್ತಿ ಚಲದಿಂ ತನ್ನಂ ಬಿಟ್ಟು ಕಾದಿ] ಕೋಂಟೆಯುಂ ಕೊಂಡು ಸಿಂಹಕೀರ್ತಿಯುಂ [ಗ್ರಾಮಸಿಂಹಮುಂ ಕಟ್ಟುವಂತೆ ಕೋಡಗಗಟ್ಟಂ] ಕಟ್ಟಿ ತಂದು ಪದ್ಮಮಹೀಪವೆಲ್ಲಭಂಗೊಪ್ಪಿಸುವ್ರದುಂ ಪದ್ಮಮಹಾರಾಜಂ ಮೆಚ್ಚಿ ಮಹಾಮಂತ್ರಿಪದವಿಯುಂ ಕೊಟ್ಟು ಮತ್ತಮವಂ ಮಾಡಿದ ಕೆಲಸಕ್ಕೆ ಸಂತೋಷಂ ಬಟ್ಟು ಮೆಚ್ಚಿದೆಂ ಬೇಡಿಕೊಳ್ಳಂಬುದುಂ ॥ ೧೪೨

ಬಲಿ ಪಿರಿದುಂ ಪೆರ್ಚಿ ಮಹೀ
ತಳಪತಿ ನಿನ್ನೀವ ಮೆಚ್ಚನನ್ನೆವರಂ ನಿ ।

---

[1] ಎಂಬುದುರಸನ ಖಿನ್ನಮಾದ ಮೊಗಮಂ ಕಂಡೆನಗಿದವಸರನೆಂದಾ ಬೆಸನಂ ಮುಂದಕ್ಕೆಯ್ದಂದು (ಗ)

ಶ್ಲಲನಾಗಿ ದಿವ್ಯೇಚಿತ್ತದೊ
ಳಿನಿಸುಂ ತಾಳ್ದನ್ನ ಮನಕೆ ಬಂದವಸರದೊಳೆ ॥ ೧೪೪

ಬೇಡಿಕೊಂಡಪೆಸಂಬುದುಮರಸನುಂ 'ತಥಾಸ್ತು' ಎಂದೊಡಂ ಬಡುವುದುಂ ಬಲಿ ಪರಮವಿಶ್ವಾಸಿಯಾಗಿ ಪಲವ್ರಕಾಲಮಿರ್ಪುದುಮೆಕಂಪ ನಾಚಾರ್ಯ ರಯ್ನೂರ್ವರ್ ಮುನೀಶ್ವರರ್ ವೆರಸು ಧರಾತಳಮಂ ಕ್ರಮ ಕ್ರಮದಿಂ ವಿಹರಿಸುತ್ತುಂ ಹಸ್ತಿನಾಪುರಕ್ಕೆ ವಂದಾಪುರದ ಬಡಗಣ ದೆಸೆಯ ಪಿರಿದಪ್ಪ ಸಿತಗಿರಿಯೊಳ್[ಚಾತುರ್ಮಾಸಮೆಪ್ಪುದಱಿಂ ಯೋಗಂ ಕೈಕೊಂಡಿರ್ದರ್.] ಇರ್ಪುದುಂ ॥ ೧೪೫

ವರಮುನಿವೆಲ್ಲಭರಿರ್ದ ದ
ನರಸಂ ಕೇಳ್ದರ್ತಿಪಟ್ಟು ರಾಜಕುಮಾರರ್ ।
ವೆರಸು ಮಹೋತ್ಸವದಿಂ ಭಾ
ಸುರತೇಜಂ ಪೋಗಿ ಭಕ್ತಿಪೂರ್ವಕದಿಂದಂ ॥ ೧೪೬

ವಂದಿಸಿ ಕಿಱಿದುಬೇಗಂ ಧರ್ಮಮುಂ ಕೇಳ್ದು ಪುನರ್ನಮಸ್ಕಾರಂ ಗೆಯ್ದು ರಾಜಭವನಕ್ಕೆ ಬಂದಿರ್ಪುದುಂ ಬಲಿ ರಾಗದಿಂ ಮೆಯ್ಯಱಿಯು ದರಸುವ ಬಳ್ಳಿ ಕಾಲೊಳ್ ತೊಡರ್ದುದೆಂಬಂತೆ ಅಱಿಸಿ ಕೊಲ್ವ ಪಗೆ ಮನೆಗೆ ವಂದಂ ಪುಣ್ಯಾಂಗೆಯ್ದಿನೆಂದು ಪದ್ಮ ಮಹಾರಾಜನಲ್ಲಿಗೆ ವಂದು ಭಂಡಾರದೊಳಿರ್ದ ಮೆಚ್ಚಂ ಕಾರುಣ್ಯಂಗಯ್ವುದೆನೆ ಪದ್ಮಮಹೀನಾಥಂ ಕೊಟ್ಟಂ ಬೇಡಿಕೊಳ್ಳಂಬುದುಂ ಮಹಾಪ್ರಸಾದಮೆಂದಿಂತೆಂದಂ ॥ ೧೪೭

ನಿನಗಂ ನಾಡಿಂಗಂ ಶಾಂ
ತಿನಿಮಿತ್ತಂ ಯಜ್ಞಮಂ ಮಹೋತ್ಸವದಿಂ ನೆ ।
ಟ್ಟನೆ ಧಾತ್ರಿ ಪೊಗಪೆ ಮಾಡುವ
ಮನಮಾಗಿರ್ದಪ್ಪುದು ದೇವ ಪುಣ್ಯೋದಯಮುಂ ॥ ೧೪೮

ನರನಾಥ ಯಜ್ಞಮುಂಬುದು
ಪಿರಿದಪ್ಪ ಫಲಕ್ಕೆ ಕಾರಣಂ ಸಕಲಸುರಾ ।

ಸುರರೆಲ್ಲಂ ಮನದೊಳ್
ಸ್ತ್ರರದಿಂದಂ ತೃಪ್ತರಾಗಿ ನಲಿವುದಖಿಂದಂ ॥ ೧೪೯

ದೇವ ನಿನ್ನ ರಾಜ್ಯಮೆಂ ಪದಿನೈದು ದಿವಸಂಬರಮಿಾವುದೆಂದು ಬೇಡುವುದುಂ ಪದ್ಮನವನ ಬೇಡಿದನಾಚಾರಕ್ಕಂ ತಾಂ ಬೇಡಿಕೊಳ್ಳಂದು ದಕ್ಕಂ ವಿಸ್ಮಯಂಬಟ್ಟು ದೇವೆರ್ಗಂ ಹೃತ್ರಿಯರ್ಗಂ ಪುನರ್ವಚನಮುಂ ನುಡಿಯಲಾಗದೆಂಬ ನೀತಿಯುಂ ಭಾವಿಸಿ ಬಲಿಯ ಮನದ ಕಪಟಮನೇ ನೆಂದಱಿಯದೆ [ನೀನೇನಂ ಮಾಡಿದೊಡಮೆಕ್ಕು ಮದನೆನಗೆ ಪೇಳಲ್ವೇಡ] ಆನೆನ್ನ ಮುನ್ನಿನ ನುಡಿದ ಕಾರಣಮಾಗೆ ಪದಿನೈದುದಿವಸದ ರಾಜ್ಯಮುಂ ಕೊಟ್ಟೆನೆಂದು ಕೊಟ್ಟು ತನ್ನಂತಃಪುರಪುರಂಧ್ರಿಯರೊಳ್ ಕೂಡಿರ್ದನನ್ನೆಗಮಿತ್ತಲ್ ॥ ೧೫೦

ಅಂದೆನ್ನಂ ಜಯವರ್ಮನ
ಮುಂದೆ ಮಹಾಭಂಗಮಾಗೆ ಸೋಲಿಸಿದವನಂ ।
ಕುಂದದೆ ಕೇಳ್ ನಾನಾವಿಧ
ದಿಂದಂ ಚಿತ್ತಕ್ಕೆ ಬಂದ ಕೊಲೆಯಿಂ ಕೊಲ್ವೆಂ ॥ ೧೫೧

ಎಂದು ಮನದೊಳಾಲೋಚಿಸಿ [ಕಾಟಿಲಬುದ್ಧಿಯಿಂ ತನ್ನೊಳಗ ನಾರ್ಗರ್ವಮಿಱಿಸಲೊಲ್ಲದೆ ಪದ್ಮನುಮಂ ಪುರಮುಮಂ ನಂಬಿಸಲ್ವೇಡಿ ಯಜ್ಞಂಮಾತಿವಖ್ಖೆನೆಂಬಿವನೆ ಪ್ರಕಟಂಮಾಡಿ ನೆನಗೆ ವೆಂದು] [1] ॥ ೧೫೨

ಈ ನರವಲ್ಲಭನಪ್ಪೊಡೆ
ತಾನಧಿಕಂ ಜೈನಧರ್ಮದೊಳ್ ಋಷಿವಧೆಯಂ ।

---

1 ಕಾಟಿಲವನಂ ತನ್ನ ಮನದ ಕಾರ್ಯಮನೊರ್ವಂಗಱಿಪದೆ ನಾಲ್ಕಯ್ದು ದಿವಸದೊಳಗೆ ಪುರಮುಮಂ ಪುರಿಗ್ರಹಮುಮನಳವಡಿಸಿ; ಪದಿನೈದು ದಿವಸದರಸಂ ಮದದಿಂ ವೈಯಾರಿಯದಕ್ಕೆ ಪರದೇಶಕ್ಕಂಗಳೆ । ಗದಗಂಪಲಗೊಂಡುಮೇಣ್ಕ್ರಿದವಳೆದುದು ಬಲಿಯ ರಾಜ್ಯದನ್ನತಿಯಿಂಬೆಂ ॥ ಮತ್ತಮೆನ್ನ ಕಾರ್ಯಂ ಪ್ರಜೆಗೆ ತುಷ್ಟಿಯಾದಲ್ಲದೆ ತೀರದೆಂದು ತನ್ಮಜ್ಜರ ಪಜ್ಜರ ಗೊಜ್ಜರ ಪಡೆದ ಪೊನ್ನೆಲ್ಲವುಂ ಪುರಜನಕ್ಕೆಲ್ಲಂ ಮಹಾದಾನಂಗೊಟ್ಟು (ಗ)

ತಾನಱಿದನಪ್ಪೊಡೆನ್ನಂ
ನಾನಾವಿಧದಿಂದೆ ಕೊಂದು ತೂಗದೆ ಮಾಣಂ ॥ ೧೫೬

[ಅದರಿಂದೆನ್ನ ದ್ರೋಹಮೆರಸನ ಕಿವಿಯಂ ಮುಟ್ಟದಂತಾಗೆ ಮೊಪ್ಪೆನೆಂದುಪಾಯದಿಂ ಜೋಗಂಕ್ಕೆಕೊಂಡು ಋಷಿಪುರ್ ಪೋಗರೆಂ ಬುದನಱುವನಪ್ಪುದಱಿಂದೆನ್ನ ಯಜ್ಞಂ ತೀರ್ವನ್ನೆಗಂ ಋಷಿಪುರೀ ಪೊಱಲೊಳಿರವೇಡವುಂದು ಘೋಷಣೆನೆಗಱ್ವುದುಮೆಕಂಪನಾಚಾರ್ಯರ ಱಿದು ಸಮಸ್ತಋಷಿಪುರ್ಗಿಂತೆಂದರ್] ॥ ೧೫೭

ಅವರವರ ಪುಣ್ಯಪಾಪಂ
ನವನವದಿಂ ಫಲವನೀಗುಮವರ್ಗಂ ಪೆಱಿಪಂ ।
ಭುವನದೊಳು ಮಾಱ್ಪಿನೆಂಬಿ
ತವರಧಿಕರೆ ಪುಣ್ಯಪಾಪನಿಚಯಕ್ಕಿಳೆಯೊಳ್ ॥ ೧೫೮

ನಿಷ್ಕಾರಣಮಱಿಯದೆ ಜಡ
ರುಕ್ಕೆವದಿಂ ಪೆಱರನಳಿವೆವೆಂಬೀಮನದಿಂ ।
ದಿಕ್ಕೆನೆ ಬೀೞ್ವರ್ ನರಕದೊ
ಳಕ್ಕಟ ದುಃಖಕ್ಕೆ ಮೊರ್ವರಪ್ಪರೆ ನೋಂತರ್ ॥ ೧೫೯

ಬಱಿದೆ ಜಡಮತಿಗಳೀನೆಂ
ವಱಿಯದೆ ಮುನಿಸೊವವೆ ಕೊಲ್ವೆವೆಂಬರ್ ಮನದಿಂ ।
ಪೆಱರಂ ತಮ್ಮಳವಲ್ಲದು
ಮುರುಕಂ ಕೈಸಾರ್ದು ಮತ್ತಮವರಳಿದಪರೇ ॥ ೧೬೦

ನರಕಗತಿಗಿಳಿವೊಡಂ ನಿ
ರ್ಜರನಿಳಯಮನೆಯ್ದಿ ಸುಖಮನುಂಬ್ಡಮನ್ಯರ್ ।
ನೆರಮಿಲ್ಲರದಱಿನನ್ಯರ್
ಭರವಶದಿಂ ಮುನಿದುವೊಸೆದುವೀಗೆಯ್ದಪರೋ ॥ ೧೬೧

ಎಮ್ಮ ಕತದಿಂದಮಿಾತಂ
ಕೆಮ್ಮನೆ ದುಃಖಕ್ಕೆ ನೋಡ ಗುಱಿಯಾದಪನೆಂ ।

ಬುವ್ಮೆಳವಲ್ಲದೆ ಕೊಂದಪ
ನೆವ್ಮಂ ಖಳನೆಂಬ ನೋವು ಕೇಳವುಗುಂಟೇ ॥ ೧೫೯

[ಬೇಸಗೆಯ ಬಿಸಿಲ್ ತಾಮೆ
ತ್ಯಾಸುರಮೊಗೊದವಿ ಕಾಯ್ದೊಡಂ ತಾವರೆಗಳ್ ।
ಬೀಸಱುವದಱಿಂ ಪುಣ್ಯನಿ
ವಾಸಿಗಳಂ ಪಿಡಿಪವೆಂಬವರ್ಗೆಂಟೆದ್ದೆಯೋ ॥ ೧೬೦

ಕಶಿ ಮಿತ್ರನಾಗಿಯುಂ ಸಂ
ತಸದಿಂ ನೆಯ್ದಿಲನಲರ್ಚಲಾಱುಂ ಪಗಲೋಳ್ ।
ಪುಸಿಯಲ್ಲದಱಿಂದಂ ರ
ಕ್ಷಿಸಲಾರ್ಪರೆ ಪುಣ್ಯಹೀನರಂ ಪಱರೊಲವಿಂ ॥ ೧೬೧

ಮತ್ತಂ,] ಪಡೆಯದೈಸಿರಿಗಿಱಿದು ಬೀಳ್ವ, ಪೆಱರ ಪೆಂಡಿರ್ಗೆ ಬಳ ದೊಡಿಸುವ, ಪೆಂಡಿರಂ ಕೊಟ್ಟು ಸೂನ್ಯಂಬಡೆಸಿ, ಮಗಳಂ ಮೊಱಿ ಮೆದುವೆಯಪ್ಪ, ಪಡಿಯನೊಡೆದು ಮಣೆಯಂ ಮಾಡುವ, ಮೊಳಗೆಯಂ ಸುಟ್ಟು ಸೀತೆನೆಯಂ ತಿಂಬ, [1] ಮಗನಂ ಕೊಂದು ಗಂಡುದೋಱುವ, [ನೆಲೆವಾಱಿಂ ಮೊಱಿ ಸೂಳೆಗೆಯ್ವ, ಬೆಳದ ಕೆಯ್ಯಂ ಕೊಟ್ಟು ಕಡಗಮಂ ಕೊಳ್ವ, ಕವಿಲೆಯಂ ಕಱೀದು ನಾಯನೂಡುವ, ಕಂಕಣಮಂ ಕೊಟ್ಟು ಪಿಂಡಿಯಂ ತಿಂಬ, ಲೋಗರ ಕಾರ್ಯಕ್ಕೆ ಬಡಿದು ಕೊಳ್ವ, ಬಾಡಿಗೆಯ ಮನೆಗೆ ತಿವಿದು ಕೊಳ್ವ, ಚತ್ರದ ಕೂಟ್ಗೆ ಮೆಯ್ಯಾಂಪ, ನಡು ಮನೆಯೊಳ್ ಬಾವಿಯನಗೞ್ವ, ತೊಱೆಗೆ ನೀರನಡಕುವ,] [2] ಕನಸಿನ ಪೊನ್ನೆನಗೆಂಬ, ಬೋನನುನೊಡೆದು ಹಲ್ಲೆಯ ನೊಡುವ,| ಪಟ್ಟೆಯುಂ ಪಱಿಸು ಚಂಡಂ ಮಾಡುವ] ಕಟ್ಟೆಗ್ಗರಂತ, ಶಾಶ್ವತಮಲ್ಲದ ಶರೀರಮಂ ಪಿಡಿದು ರತ್ನತ್ರಯಂಗಳಂ ಕಿಡಿಸುವ್ರದು [ಬುದ್ದಿಯಲ್ಲದಱಿಂ, ತಂತಮ್ಮ ಮಾಡಿದ ಪಾಪಫಲೋದಯದಿಂ ಸಾವುಂ ನೋವುಮಡಸುಗುಂ, ತಂತಮ್ಮ ಮಾಡಿದ ತಪದ ದಾನದ ಫಲದಿಂ ಸುಖಮುಂ ದೀರ್ಘಾಯುಷ್ಯಮುಂ ನಿರ್ವಿಘ್ನಮುಮಕ್ಕುಂ, ಪೆಱರೇಗೆಯ್ದುಂ ಮುನಿದುಂ ಶ್ರೀಯು

[1] ಸುಟ್ಟು ಹುಲುಗುಡಿಸಲುಂಕಟ್ಟುವ (ಗ) [2] ಮನೆಯಪೊನ್ನ ಕೊಟ್ಟು (ಗ)

ಮನಾಯುಷ್ಯಮುಮಂ ನೋವುಮಂ ಮಾಡಲ್ ಸಮರ್ಥರಲ್ಲೆಂದು ನರಮೋಗಮೆಭಾವನೆಯಿಂ ನಿರ್ಮಳಚಿತ್ತರುಂ ಮಂದರಧೈರ್ಯರುಂ ನಿರ್ಘರ್ಯರುಮಾಗಿರಿವೆಂದೆಲ್ಲರ್ಗಮಱಿಪಿ ಸಕಲಋಷಿಯರ್‌ವೆರಸು ಬಲಿ ಮಾಡುವೆ ಉಪಸರ್ಗಂ ಪಿಂಗುವೆನ್ನೆಗಂ ಆಹಾರಶರೀರನಿವೃತ್ತಿಯೆಂದು ಕೈಯ್ಯೞನಿಕ್ಕಿಕೊಂಡು ಜಿನಪಾದಾಂಭೋಜಂಗಳಂ ಮನದೊಳ್ ತಾಳ್ದಿ ದರನ್ನೆಗಮಿತ್ತಲ್] [1] ॥

[ಮುನಿಯರುಮೆಲ್ಲರುಮಿಂತಾಗೋ
ಸನೆಯಂ ಕೇಳ್ದಾಗಳಂತೆ ಪೊಲಿಲಿಂದಂ ಭೋಂ ।
ಕನೆ ಪೋದರೆಂಬ ಮಾತನೆ
ಘನಮೊಗಿರೆ ಮಾಡಿ ಕುಟಿಲಚಿತ್ತಂ ಪುರದೊಳ್ ॥ ೧೬೩

ಪದಿನೈದುದಿವಸಮೆರಸಂ
ಮದದಿಂ ಮೆಯ್ಯೞಿಯದುಕ್ಕೆ ಪುರಜನಮೆಲ್ಲಂ ।
ಗದಗದಗಂಪಂ ಗೊಂಡುದು
ಮದವೆೞ್ದುದು ಬಲಿಯು ರಾಜ್ಯದುಗ್ರತೆಯಿಂದಂ ॥ ೧೬೪

ಅಂತುಗ್ರನುಂ ಸಂಚಿತಪಾಪ ಚಿತ್ತನುಮುರ್ವೀಶ್ವರೈಶ್ವರ್ಯನುಮಾಗಿ ಪುರಜನಮುಮಂ ನಾಡುಮಂ ಪರಿಗ್ರಹಮುಮನೊಂದೆರಡು ದಿವಸದೊಳ ತನಗೆ ವಶಗತವರ್ಮಾಡಿ ರಾಜ್ಯಶ್ರೀಯಂ ಮೆಯ್ಯೞಿಯದೆ] [2] ॥

---

1 ಎಂದು ಬಗೆದು ಜೋಗಿನೆೞ್ ಋಷಿಯರ್ ಪೋಗದುವನಱಿದು ಋಷಿಯರೆಲ್ಲರುಂ ಪುರದಿಂ ಪೊಱಮಟ್ಟು ಪೋಪುದುಂ, ಪುರದೊಳೊಡೆಯರ್ವಡವರೆನ್ನದೆ ನಿಲ್ವಡೆನ್ನ ಯಜ್ಞಂ ತೀರ್ವನ್ನೆಗಂ ತೊಡುವುದುಡುವುದುಣ್ಬುದು ರಾಜ್ಯಲೀಲೆಯೊಳೆ ಪುರ್ದೆಂದು ಘೋಷಣೆಗೇಳಿಸಿ (ಗ)

2 ಬುದ್ಧಿಯಲ್ಲದೆಂದೆಲ್ಲರ್ಗಮಱಿಪಿ ಸಕಲಋಷಿಯರ್ವೆರಸು ಬಲಿಮಾಡುವೀ ಯುಪಸರ್ಗಂ ಪಿಂಗುವಿನಮಾಹಾರಶರೀರ ನಿವೃತ್ತಿಯೆಂದಿರ್ದುಂ ವಿದೇಹವಿಷಯದ ವಿಭೂಷಣಪುರದೊಳ್ ಸಮುದಾಯಂ ಬೆಸಸಿದ ಪಿಪ್ಪಲಗಳೆಂಬಾಚಾರ್ಯರಾಕಾಶದೊಳ್, ಪರಮತಪೋಧನರ್‌ಗೆ.... (ಗ)

ಎನಗೆ ಸಮಾನಮಪ್ಪರಣಮಿಲ್ಲ ಧರಿತ್ರಿಯೊಳಂದು ಸಾಗರೇ
ಶನ ಸಿರಿಯಂ ಫಣೀಶ್ವರನ ವೈಮವಿಯ[1] ನರ್ಕನ ತೇಜಮಂ ಮನೋ ।
ಜನ ಸೊಬಗಂ ವಿಯಚ್ಚರನ ವೀರಮನಾದಿಯ ಭೂಪರೊಪ್ಪನಿಂ
ದ್ರನ ವಿಭವತ್ವಮಂ ಪಡೆದು ಪಾಡಿಸುಮಂ ಬಲಿ ಕೊರ್ವಿ ನಿಚ್ಚಲುಂ ॥

ಅಂತು ಪುಲ್ಲ ಕಿರ್ಚಿನಂತುರಿದು [ಪಿರಿದಪ್ಪ ಪೆರ್ಚಿಂದಮಾನೀ ಪೊಟಲೊಳೀನಂ ಮಾಡಿದೊಡಂ ಬೇಡೆಂದು ಮಾಕೊರ್ಂಡು ಮಾಣಿಸುವ ಗಂಡರಾರೆಂದು] ನಾಂದವರೆಯಂತೆ ಪೊಟ್ಟೆಳಿಸಿ [ಮುಯ್ಪಂ ನೋಡಿ] ಪಾಪಿಯೆ ಬಲ್ಲಾಳಂಬ ಮಾತಂ ನಸ್ನಿಮಾಡಿ [ಮುನೀಂದ್ರೋತ್ತಮರಪ್ಪ ಕಂಪನಾಚಾರ್ಯರಿರ್ದ ಸಿತಗಿರಿಯ ಸಮೀಪಕ್ಕೆ ನಂದು][2] ॥ ೧೬೩

ಪಿರಿದಪ್ಪ ಯಜ್ಞಶಾಲೆಗೆ
ಧರೆ ಬಯಲಿದು ಬೇಗಮಿಲ್ಲಿ ಚೆಲ್ವಾಗಿರೆ ಚ ।
ಪ್ಪರಮನಳವಡಿಸಿ ಮಾಡುವ
ದಿರವೇಡೆಂದೆಯ್ದೆ ಪೆರ್ಗಡೆಗೆ ಬೆಸಸುವುದುಂ ॥ ೧೬೪

ಆರೆಗಾವುದಂತರಂಬರ
ಮರಸಿನ ಬೆಸದಿಂದೆ ಭೂಮಿಶೋಧನೆಯಂ ಪಿ ।
ಸ್ತರಮಾಗೆ ಮಾಡಿ ಚೆಲ್ವಾ
ಗಿರೆ ಸವೆದರ್ ಚೆಲ್ವು ಕಣ್ಗೆವರೆ ಕಾವಣಮಂ ॥ ೧೬೫

[ಆಗಳಲ್ಲಿಗುಚಿತವಪ್ಪವೆಲ್ಲಮಂ ಮಾಡಿ ಬಂದು ಬಲಿಗೆ ತನ್ನ ಮಾಡಿದ ಬೆಸನಂ ಬಿನ್ನಪಂಗೆಯ್ವುದುಂ ಪ್ರಸನ್ನಮನನಾಗಿ ಪೆರ್ಗಡೆಗೆ ಪಸಾಯದಾನಮಂ ಕೊಟ್ಟು ಯಜ್ಞಶಾಲೆಯಂ ನೋಜ್ಪಿರ್ತಿಯಿ ಗಂಧ ಗಜಾರೂಢನಾಗಿ ಬಂದು ಚಕ್ಪರಂಗಳ ಚೆಲ್ವುಮೆಂ ಮಂಟಪಂಗಳ

[1] ಭೋಗವು (ಗ) [2] ತಡೆಯದೆ ಸಿತಗಿರಿಗೆ ಬಂದು (ಗ)

ವಿಳಾಸಮುಮಂ ಜಗಲಿಗಳ ಭಂಗಿಗಳುಮಂ ಹೋಮಕುಂಡಂಗಳುಮಂ
ನೋಡುತ್ತುಂ ಗುಹೆಯ ಬಾಗಿಲ್ಗಂದು ಸಿಕ್ಕಿದರೆಂದು ಮನದೊಳ್
ಕಳಕಳಿಸಿ ನಕ್ಕು ಪಿಱಿರಂ ವಂಚಿಸಲ್ವೇಡಿ ಕೆಲದೊಳಿರ್ದರಿ ಮೊಗಮಂ
ನೋಡಿ ಕೇಳವಿಮಾಗುಹೆಯೊಳೇನಾನುಂ ಕ್ರೂರಮೃಗಂಗಳಿರ್ದು ಪೋಪ
ಬರ್ಪ ಪ್ರಜೆಗೆ ಪೀಡೆಯಂ ಮಾಡುಗುಮದಱಿಂದೊಳಗಣ ಪ್ರಾಣಿಗಳಂ
ಪೊಱಮಟ್ಟು ಪೋಪಂತು ಮಾಡುವೆಮಿಮಾಗುಹೆಯ ಬಾಗಿಲೊಳ್ ಪಿರಿದಪ್ಪ
ಪುಳ್ಳಿಗಳನೊಟ್ಟಿ ಕಿಚ್ಚ ನಿಡೆಂಬುದುಂ ॥ ೧೭೦

ಕರಮೆನಲೊಪ್ಪಿ ಸತಪ್ಪ ಸಾವಯ ಪುಲ್ಲನುಜ್ವಲಮಾಗಿ ತಾ
ನುರಿವೆ ತಾಜೆಯ ತೆಂಗಿನೆಕ್ಕೆಯ ನೂವಿನಿಂಧನಮಂ ವಸುಂ
ಧರೆಯೊಳೂಪ್ಪುವ ನೆಲ್ಲ ಪುಲ್ಲನಮರ್ಕೆಯಿಂ ಕಿಱುವೆಳ್ಳಮಂ
ತರಿಸಿ ಮೆಲ್ಲನೆ ತೀವಿದರ್ ಗುಹೆಯಲ್ಲಿ ತತ್ಕ್ಷಣದಿಂ ಭಟರ್ ॥ ೧೭೧

ಕಟ್ಟಾರಿದ ಪುಳ್ಳಿಗಳಂ
ನಟ್ಟನೆ ಕೊದಳಿಗಳನೆಯ್ದೆ ಕಾಷ್ಠೋರಣಿಗಳಂ ।
ತೊಟ್ಟನೆ ಸಱುಸಿಸೀರೆಗಳಂ
ಬೆಟ್ಟಾಗಿರೆ ಗುಹೆಯ ಬಾಗಿಲೊಳ್ ತೀವಿಸಿದಂ ॥ ೧೭೨

ಅಂತು ತೀವಿಸಿ ಗುಹೆಯ ಬಾಗಿಲಂ ನಿಶ್ಚಿದ್ರಮಾಗೆ ಮಾಡಿ ತುಪ್ಪ
ದೆಣ್ಣೆಯ ಕೊಡಂಗಳಂ ತರಿಸಿ ನಾನಾವಿಧದಿಂದೆನ್ನ ಮುನಿಸು ಪೋಪಿನಂ
ಮನಮೊರೆ ನಾಳೆ ಕಿಚ್ಚಂ ತಗುಳ್ಪೊಡಂತು ಪೋಗದಂತು ಕೊಲ್ವೆನೆಂದಿರ್ದನ್ನೆಗಂ
ವಿದೇಹವಿಷಯದ ಮಿಥಿಳಾಪುರದೊಳ್ ॥ ೧೭೩

ಪರಮಗುಣಾಢ್ಯರಿ ನಿರ್ಮಳ
ಚರಿತರ್ ದುರಿತಾಪಹಾರಿಗಳ್ ಸಶ್ರುತಸಾ ।
ಗರರವಧಿಲೋಚನರ್ ಮುಂ
ದರಭೈರ್ಯರ್ ಸಕಳಭವ್ಯಸಂದಿತಪಾದರ್ ॥ ೧೭೪

ವಿಷ್ಣುಗಳೆಂಬಾಚಾರ್ಯರ್ ಸಮುದಾಯಂಬೆರಸಲ್ಲಿ ಜೋಗುಗೊಂಡಿರ್ದುದುಂ ಧರ್ಮರುಚಿಗಳೆಂಬ ಋಷಿಯರ್ ಇರುಳ್ ಕಾಯಶುದ್ಧಿಗೆಂದು ಪೊಱಮೆಟ್ಟಾಕಾಶಮಂ ನೋಡುವುದುಂ][1] ॥ ೧೩೫

ಪರಮತಪೋಧನರ್ಗೆ ಬೆಸಕೆಯ್ವ ಮಹಾತ್ಮರೆ ಸೌಖ್ಯಭಾಜನರ್
ಧರಣಿಯೊಳಂತುಟಂ ಬಗೆಯನೀಱಳನುತ್ತಮಯೋಗಿಸಂಕುಳ
ಕ್ಕಿರದುಪಸರ್ಗಮಂ ಮುನಿದು ಮಾಡಿ ಮಹಾನರಕಕ್ಕೆ ಸಂದಪಂ
ದುರಿತದಿನಕ್ಕಟಾ ಕುಟಿಲನೆಂದು ದಯೋನ್ನತಿಯಿಂ ಧರಿತ್ರಿಯೊಳ್[2] ॥

[ನಡುಗುವೆಂತೆ] ನಡುಗುವೆ ಶ್ರವಣನಕ್ಷತ್ರಮುಂ [ತೂಟ್ಟನೆ ಕಂಡು ಮಹಾತಪೋಧನರ್ಗಲ್ಲಿಯಾನುಂ ಘೋರೋಪಸರ್ಗಮೊಗಲೆ ವೇಟ್ಟುಕ್ಕುಮೆಲ್ಲದಂದೀ ನಕ್ಷತ್ರಮಿಂತು ನಡುಗದೆಂದು ತವ್ಮೊಳ್ ನುಡಿಯುತ್ತುಮೊಳಗಣ್ಗೆಂದು ॥ ೧೩೬

ಗುರುಗಳ್ ಋಷಿವುದುಂ ಸ
ಚರಿತರ್ ಲೇಸಾಗಿ ಕೇಳ್ದು ತದ್ವಚನಮನ ।
ಚರಿವೆಟ್ಟು ನೋಡಿ ಕಂಡರ್
ಪರಮಾವಧಿಯಿಂ ಮುನೀಂದ್ರರುಪಸರ್ಗಮುಮಂ ॥ ೧೩೭

---

1 ಮತ್ತಮಲ್ಲಿಗ ತಕ್ಕ ಹೋವುಕುಂತಂ ಮೊದಲಾಗಲ್ಲನಂ ಮಾಡುವುದುಂ ಬಂದು ನೋಡಿ ಪರ್ಗಡೆಗೆ ಮಚ್ಚಕ್ಕೊಟ್ಟು ಬಹುಜನವಂ ನಂಬಿಸಲ್ವೀಡಿ ಗುಹೆಯೊಳಗೀನಾನುವೊಂದು ದುಷ್ಟಮೃಗಂಗಳಿರ್ದೊಡಂ ಬಪ್ಪ ಪ್ರಜೆಗಳಿಗೆ ಬಾಧೆಯಂ ಮಾಡದೆಂತಾಗೆ ಬಾಗಿಲೊಳ್ ಪುಳ್ಳಿಯನೊಪ್ಪೆ ಕಿಚ್ಚ ನಿಡುವನೆಂದು ನೆಲ್ಲ ಸಾಸವೆಯ ಬರಗಿನ ನವಣೆಯು ಹಾರಕಿನ ಪ್ರಲ್ಲುಮಂ ತಾರಯ ತೀಗಿನ ಅತ್ತಿಯು ಪುಣಿಸೆಯು ತಟ್ಟಾಱಿದ ಪುಳ್ಳಿಗಳಂ ಕಾಳ್ಬಿರಣಿಗಳುಮು ಇಱಿವರಣಿಗಳುಮಂ ಫಱಿದ ಸೀರೆಗಳುಮಂ ಕಿಱುಗುಣಿಗಳುಮಂ ಕೊರಡುಗಳುಮು ತೆಕ್ಕನೆ ತೀವಿದ ತುಪ್ಪದೆಣ್ಣೆಯ ಕೊಡಂಗಳುಮಂ ತಂದಿ ನಾಳೆ ಸುಮನವರಿರ್ದುದುಮನ್ನೆಗಮಕ್ಕುಮನಾ ಚಾರ್ಯರಱಿದು ಋಷಿಯರ ಾಗಮಂ ನೋಡಿ.— ಅಪರವರ ಪುಣ್ಯಾಪಾಪಂ .... ಪರಮತಪೋಧನರ್ಗೆ (೧೩೫ ರಿಂದ ೧೬೫ ರ ವರೆಗೆ ಇರುವ ಪದ್ಯಗದ್ಯಗಳನ್ನೂ ಟಿಪ್ಪಣಿಗಳನ್ನೂ ನೋಡಿ).

2 ತುರಿತ ಮಿದೆಂದು ನಾಡೆಯಾನೆ ಕೈಮಿಗೆ ಕಂಪಿಸುವಂತೆ ಭೀತಿಯಿಂ (ಗ)

ಅಂತು ಪರಮಾವಧಿಲೋಚನದಿನಜಿದಕ್ಕಟಾ ಕುರುಜಾಂಗಣವಿಷ
ಯದ ಹಸ್ತಿನಾಪುರದೊಳ್ ಜೋಗುಗೊಂಡಿರ್ದ ಕಂಪನಾಚಾರ್ಯರ್ಗ
ಮವೆರೊಡನಿರ್ದ್ಯಿನೂರ್ವರ್ ಸಾಧುಗಳ್ಗಂ ಬಲಿಯೆಂಬ ರೌದ್ರಾತ್ಮನೆ ದೆಸೆ
ಯಿಂ ಪಿರಿದಪ್ಪುಪಸರ್ಗಮಾಗಿರ್ದುದೆಂಬುದಂ ಸಿದ್ಧವಿದ್ಯೆಗಳೊಳ್ ಪರಿಣ
ತನುಂ ವಾತ್ಸಲ್ಯರತ್ನಾಕರನುಮೆನಿಪ್ಪ][1] ಪುಷ್ಪದಂತನೆಂಬ ಬ್ರಹ್ಮಚಾರಿ
ಮುನಿದಿಂತೆಂದಂ ॥ ೧೭೯

ಕೋಡಗಗಟ್ಟುಗಟ್ಟುಸೆನೆ ವಾರಿಧಿಯೊಳ್ ಪಿಡಿದೊತ್ತಿ ಜೀವಮು
ಲ್ಲಾಡೆ ತೊಡಂಕಿ ನೂಂಕಿಸೆನೆ ಪೋರುನಗಕ್ಕೆಳದುಯ್ದು ಮೋಗಮಿಂ
ಕೂಡಿ ಸಮೆಂತುರುಳ್ಚಿಸೆನೆ ಪನ್ನಗಸಂಕುಳದಿಂ ಭಯಂಕರಂ
ಮಾಡಿ ತಗುಳ್ಚಿ[2] ಬರ್ಚಿಸೆನೆ ಲೋಕಮಗುರ್ವಿಸಲೆನ್ನ ವಿದ್ಯೆಯಿಂ ॥

[ಕಾಲನವುಂಕಿ ಪತ್ತಿಪಿಡಿದೋವದೆ ಭೋರೆನೆ ಬೀಸಿ ಕಂಬದೊಳ್
ಲೀಲೆಯಿನಟ್ಟಿ ವೋದಿಸೆನ ಕೆಚ್ಚನೆ ಕಾಯ್ದು ಕನಲ್ದು ಕೊಳ್ಳೆಯೊಳ್
ಸೋಲೆ ತಗುಳ್ದು ಜುಚ್ಚಿಸೆನೆ ಬೆಬ್ಬುಲಿಯಿಂ ಗಜದಿಂ ಬಿಗುಳ್ದ ಕ
ಣ್ಣಾಲಿ ತುಳುಂಕೆ ವೆಟ್ಟಿಸೆನೆ ಕೊರ್ವಿದ ಗಾಂಪನನೆನ್ನ ವಿದ್ಯೆಯಿಂ॥ ೧೮೦

ಶರನಿಧಿವಾರಿಯುಂ ತಳದೊಳಾಂಪಿನೊ ದೇವನಗೇಂದ್ರಮುಂ ಮನಂ
ಮುರಿಯದೆ ಕಿಚ್ಚು ತರ್ಪಿನೊ ದಿನೇಶನ ಬಿಂಬಮನುದ್ಧತಿಕ್ಕಿಯಿಂ
ಕರದೊಳಡರ್ತು ನೂಂಕುವೆನೊ ಪನ್ನಗರಾಜನನೊತ್ತಿ ಕಟ್ಟಿಚ
ಚ್ಚರಿಸಿ ಕರಾಗ್ರದೊಳ್ ನಿಱುಪಿನೋ ಪಿಡಿದೇಱುವನೋ ಸುರೇಭಮಂ ॥

ಲವಣಾಂಭೋರಾಶಿಯಂದಾಂಟುವೆನೊ ಕುಳನಗಾನೀಕಮಂ ಪಾದದಿಂಭೂ
ಭುವನಕ್ಕಾಕ್ಷೇಪ್ಯವೆಂಬಂತೊದೆವೆನೊ ನೆಲೆಯಿಂ ಪಾಱಿ ದಿಕ್ಪಾಲರಂಮು

---

1 ಕಂಪು ಪರಮಾವಧಿಯಿಂದಮುಳಂಪನಾಚಾರ್ಯರ್ಗೊಂದುಪಸರ್ಗಮಾದುದ
ನಱಿದು ಋಷಿಯರ್ಗೆ ಪೇಳುವುದುಂ ಸಿದ್ಧವಿದ್ಯೆಗಳೊಳ್ ಪರಿಣತನಪ್ಪ (ಗ)

2 ವುಗುಳ್ಚಿ (ಗ)

ಜ್ಜವದಿಂ ಜೀಯೆಂಬಿನಂ ಕಟ್ಟುವನೊ ಶರಭಮುಂ ನೂರನಿನ್ನೂರನತ್ಯು
ತ್ಸವದಿಂ ಕೀಳಿಟ್ಟು ಪೇಪೇಱುವೆನೊ ಧರಣಿಯುಂ ಪ್ರಾಯ್ವೆನೋ ತೂಂ
ತುವೋಗಲೆ ॥೧೪೩

ಎಂದು ತಾಂ ವಿದ್ಯಾಸರವೇಶ್ವರನೆಪ್ಪುದಱಿಂ ವಿಷ್ಣುಮುನೀಶ್ವ
ರನ ಮುಂದೆ ತನ್ನ ಪ್ರತಾಪಮಂ ನುಡಿದು ಬಲಿಯನವಯವದಿಂದೆನ್ನ
ವಿದ್ಯೋಗಳಿಂದಡಸಿ ಕಟ್ಟಿ ಸಮುದ್ರದೊಳಿಟ್ಟಿ ಕೊಂದಪನೆಂದು ಮುಸಗಿ
ಗರ್ಜಿಸುವುದುಂ ವಿಷ್ಣುಮುನೀಶ್ವರಂ ಪುಷ್ಪದೇವನೆಸಿಂತೆಂದಂ] [1] ॥

ಕಡುಮೊಖರ್ರಂ ಮಾಡಿದುದಂ
ತಡೆಯದೆ ನಾಂ ಮಾಱ್ಪೆನೆಂದು ಮುಸಗುವ ಪ್ರರುಷಂ ।
ಕಡುಕಷ್ಟಂ ನಾಯೆ ಕಚ್ಚಿ ದೊ
ಡೊತಗರ್ಚ್ಚಲ್ ಜೂಗುಱಿ ಬೊಗುಳಲೇಂ ಬಂದಪುದೇ ॥ ೧೪೪

[ಮುನಿಸಿಂ ತನಗಿರಲ್ಲದ
ಮನುಜಂಗಿದಿರಾಗವೇಡದೆಂತೆನೆ ಗಜಗ ।
ರ್ಜನೆಗೆ ಮುನಿವೆಂತೆ ಪಂಚಾ
ನನನಡವಿಯೊಳಿರ್ದ ನರಿಗೆ ಮುನಿಗುಮಾ ಜಗದೊಳ್] ॥ ೧೪೫

ಎಂದು ಪುಷ್ಪದೇವನಂ [ಪುಲ್ಲನೆ ಮೈದುಂಬಿನಂಗಳಿಂ] ಮಾಣಿಸಿ
ವಿಷ್ಣುಕುಮಾರಮುನಿತಿಲಕನ ಮಾರ್ಗಮಂ ನೋಡಿ ತಪೋಧನರಕ್ಕೆ ಸ್ವಾಸ
ಕರಕ್ಕ ಪ್ರಭಾವನೆಯುಂ ಮಾತಪದಮು ಪೊಸಬಸಮಯುಂ ಮಾಡಿ ತೂಂತು
ವೋದ ಕಳಶಮನಿಡುವಂತೆ, ಮಗಳ ಮದುವೆಯುಂ ಮಾಡಿ ರಂಡೆಯಾ
ಗೆಂದು ಪರಸುವಂತೆ, ಪಟ್ಟಮಂ ಕಟ್ಟಿ ಸಾಯೆಂದು ಸೇಸೆಯನಿಕ್ಕುವಂತೆ,
ಉಯ್ಯಾಲನಿಕ್ಕಿ ಗೋಮೂತ್ರದಿಂ ಕೈಗರ್ಚಲೆಱೆವಂತೆ, ಬಿರ್ದಿಕ್ಕ ಕಲ್ಲೊ
ಳಿಡುವಂತೆ, ತೋಂಟಮಂ ಮಾಡಿ ಕಡಿವಂತೆ, ಕಪ್ಪಾಂ ಮಾಡಿ ಕಿಚ್ಚಿ ಡು
ವಂತೆ, ಮಗನಂ ನಡೆಪಿ ಬಾವಿಯೊಳ್ ನೂಂಕುವಂತೆ, ಕುದುರೆಯುಂ
ಪೊರೆದು ಕಳ್ಳಗೆ ಕುಡುವಂತೆ, ಸಿಂಹಾಸನಮನೇಱಿ ಮಸಿಯುಂ ಪೂಸು

[1] ಪೆಸಸಿವೆಂಬುದುಂ ವಿಷ ಮುಸೀಂದ್ರಸಿಂತೆಂದಂ (ಗ).

ವಂತೆ, ಮಹಾವ್ರತಮುಮಣುವ್ರತಮುಂ ನಿಷ್ಫಲಮೆಕ್ಕುಮದುಕಾರಣದಿಂ ॥ ೧೪೩

[ಮುನಿವರರುಪಸರ್ಗಂ ನೆ
ಟ್ಟನೆ ಕಿಡುವೊಡೆ ಸರಳಭವ್ಯವಂದಿತಪದ ವೀ ।
ದಿನಿಪೂಜ್ಯ ದಿವಿಜಶೇಖರ
ವಿನಮಿತದುರಿತಾಪಹಾರಿ ನಿನ್ನಿಂ ಕಿಡುಗುಂ ॥ ೧೪೪

ಎಂಬುದುಂ ಸುಕವಿನಿಕರಪಿಕಮಾಕಂದಂ ಮುಗುಳ್ನಗೆನಕ್ಕು ಮನದೊಳಾಮಾತಿಂಗೆ ಕರಮಲ್ಲದೆ ಲಜ್ಜಿಸಿ ಜಿಷ್ಣುಮುನಿಪತಿಗೆ ಪೊಡೆಮಟ್ಟು ವಿನಯದಿಂ ತಲೆಯುಂ ಬಾಗಿ ಕರಕಮಲಂಗಳಂ ಮುಗಿದು॥ ೧೪೫

ಸನ್ನುತಮುನಿವರರಿರ್ದಂ
ತೆನ್ನನೆ ನಿಮ್ಮಡಿಗಳಕ್ಕರಿಂದೇಱಿಸಿ ಸಂ ।
ಪನ್ನತೆಯಿಂದುಪಸರ್ಗಮ
ದನ್ನೆಱೆ ಪಿಂಗಿಸುವೆಯೆಂಬುದನುಚಿತಮಲ್ತೇ ॥ ೧೪೬

ನಿಮ್ಮಡಿಗಳಮ್ಮ ವೆಯ್ಯೋಳಾದ ಗುಣಮುಂ ಕಂಡೀಮಾತಂ ಬಿಸಸದಿರೆಂಬುದಂ ಜಿಷ್ಣುಮುನೀಶ್ವರರಿಂತೆಂದರ್ ॥ ೧೪೭

ನೆಱೆಯೆ ಧರಿತ್ರಿ ಕೈವಗುಗಿವಿನಂ ಪದೆಪಿಲ್ಲದೆ ರಾಜ್ಯಲಕ್ಷ್ಮಿಯುಂ
ತೊಱೆದು ಮನುಷ್ಯಲೋಕಸುಖಮುಸ್ಥಿರಮಂದಳಿಪಿಂದೆ ಸೋಲ್ತು ಪೊ
ಕ್ಕಱುಗಿಡದವ್ಮ ಜೇಯೆನಿಸಿ ಯಿಾವೊಡಲಂ ಜಿನದೀಕ್ಷೆಗೊಡ್ಡಿ ಮ
ತ್ತಱಿಕೆಯ ಮೂಱುಮೂಢಮುಮೆನೊರ್ವೆಯೆ ಬಿಟ್ಟು ಮಹಾನುರಾಗದಿಂ ॥ ೧೪೮

ಪಗೆಯುಳ್ಳನಂತೆ ಪರಸಮಯಮುಂ ಸಾರದೆ, ದೂರದ ನಂಟರಂ ಕಂಡರಂತೆ ಸಂಶಯಮಾಗದೆ, ಕಳ್ಳೂಡುವನಂತೆ ಸುಮಾರ್ಗಕ್ಕಂಜದೆ, ಸಾಲಗೊಂಡ ಬಡವನಂತೆ ತಪಕ್ಕೆನಡುಗದೆ, ಕಿಚ್ಚಿನಂತೆ ಸದ್ಧರ್ಮಕ್ಕೆ ಕಾಯದೆ, ನಿರ್ಮಲಚಿತ್ತದಿಂದುತ್ತಮನುಮಪ್ಪ ತಪಮುಂ ಮನಮಿಕ್ಕದೆ ಪಿಱಿದೆಗೆಯದೆ ಪಿಱಿನ ನವಕ್ಕೆಮಾಡದೆ ಮೋಕ್ಷಾಪೇಕ್ಷೆಯಿಂ ನಿಜಬುದಿ

ಯಿಂದರ್ತಿವೆರಸು ನೆಗಳ್ದಿಯಪ್ಪುದಱಿಂ ನಿನಗೆ ತಪದ ಮಾಹಾತ್ಮ್ಯದಿಂದಣಿಮಾ ಮಹಿಮಾ ಗರಿಮಾ ಲಘಿಮಾ ಪ್ರಾಪ್ತಿ ಪ್ರಾಗಲ್ಭ್ಯಂ ಈಶತ್ವಂ ವಶಿತ್ವಂ ಕಾಮರೂಪಿತ್ವಂ ಎಂಬಷ್ಟೈಶ್ವರ್ಯಮುಂ ಪುಟ್ಟದುವೆಪ್ಪುದಱಿಂ ನಿನ್ನಿಂದಕಂಪನಾಚಾರ್ಯರುಪಸರ್ಗಂ ಪೋಕು ಮೆಂದು ಪೇಳ್ದೆವದಱಿಂ ॥

ಜೀವವಧೆಯಾಗದಂತಖಿ
ಳಾವನಿತಳಪೂಜ್ಯಪ್ರೋಗಿ ಪಿಂಗಿಸುವ್ರದು ಸ ।
ದ್ಭಾವದಿನೆನೆ ದುಷ್ಕೃತವಿ
ದ್ರಾವಣನಪರಿಮಿತಧೈರ್ಯನನುಪಮವಾಕ್ಯಂ ॥ ೧೯೪

ಮುನಿಪನ ಮಾತಂ ಭಾವಿಸಿ
ಮನದೊಳ್ ಬೆಱಗಾಗಿ ವಿಷ್ಣುಮುನಿವೆಲ್ಲಭನೊ ।
ಯ್ಯನೆ ಜಿಷ್ಣುಮುನಿಗೆ ಪೊಡೆಮೆ
ಟ್ಟನುನಯದಿಂ ಪೋಪೆನೆಂಬ ಬಗೆಯಂ ತಂದಂ ॥ ೧೯೫

ಬೇಳನಿಸಿ ನೆಗಪ್ತ್ರೆಗೆ ಬೆಂ
ಬೀಚದೆ ತಲ್ಲಣಿಸದಾರ್ತ ಕೂರ್ತವಯುವದಿಂ ।
ಕೇಳ ಪ್ರಭಾವನಾಂಗಮ
ನೇಳಿಸದಚ್ಚಿರ್ತು ತಾಳ್ದವೇೞ್ಪುದು ಭವ್ಯಂ ॥ ೧೯೬

ಅಕ್ಷಯಲಕ್ಷ್ಮಿಯನೆಯ್ದುವ
ಪೇಕ್ಷೆಯನುಳ್ಳಂ ಪ್ರಭಾವನಾಂಗಮದಂ ಪಾ।
ಪಕ್ಷಯಮಂ ಮಾಡುವುದನು
ಪೇಕ್ಷಿಸದೆ ಮನೋನುರಾಗಮಂ ತಳಗೆಂದಂ ॥ ೧೯೭

ಬಡವನೆನವೇಡ ಪೊನ್ನು
ಳ್ಳೂಡೆಯನುಮೆನವೇಡ ಕೇಳ್ ಪ್ರಭಾವನೆಯುಂ ನೇ ।
ರ್ಪಡೆ ಮಾಱ್ವುದು ಮೊಡದವಂ
ಪಡೆಯಲ್ಕಾರ್ತಪನ ದೇವನಿಳಯದ ಸುಖಮಂ ॥ ೧೯೮

ಮುನಿಯೆನವೇಡ ಶ್ರಾವಕ
ನೆನವೇಡ ಮನೋಜ್ಞೆ ಯಂ ಪ್ರಭಾವನೆಯಂ ನಿ ।
ಟ್ಟನೆ ಮಾಡವೇಂಟ್ಪುದಲ್ಲದೊ
ಡನಂತಸುಖನಿಳಯನಾಗಲಾಱಂ ಕಡೆಯೊಳ್ ॥ ೧೯೯

ಅನುಪಮನಿರ್ವಾಣಶ್ರೀ
ವನಿತೆಯ ಪೊಸಹವ್ವನಂ ಪ್ರಭಾವನೆಯೆಂದೆಂ ।
ದನವರತಂ ಬಣ್ಣಿಪೆನಿ
ನ್ನೆನೀನೆಂದಾಂ ಬಣ್ಣಿಪೆಂ ಪ್ರಭಾವನೆಯೊಳ್ಪಂ ॥ ೨೦೦

ಎಂದು ಪ್ರಭಾವನೆಯೊಳಾದ ಪರಮೈಶ್ವರ್ಯಮುಂ ಬಗೆದಿದನೇಳಿ ಸರಿಪ್ಪುದು ಸದ್ದೃಷ್ಟಿಯುಪ್ಪಂಗಂ ಪಾಪಭೀರುವಪ್ಪಂಗಂ ಧರ್ಮಾನುರಾಗಿಯುಪ್ಪಂಗಂ ಸಜ್ಜಾಜ್ಞಾನಿಯುಪ್ಪಂಗಂ ದುರ್ಗತಿಗಮನಭಯಮುಳ್ಳಂಗಂ ಉಚಿತಮೆಲ್ಲಿಂದು ಬೆಳಗಾದಾಗಳ್ ಗುರುವೆಂದನೆಯುಂ ಮೂಱು ಜಿಪ್ಪು ಮುನೀಶ್ವರನಾಜ್ಞೆ ಯಿಂ ಮಿಥಿಲಾಪುರಮಂ ಪೊಱಮಟ್ಟು ಋದ್ಧಿಪ್ರಾಪ್ತನಪ್ಪುದಱಿಂ ಮನದಿಂ ಮುನ್ನಂ ಹಸ್ತಿನಾಪುರಮೆನೆಯ್ದಿ ಪದ್ಮಮಹಾರಾಜನರಮನೆಯಂ ಪುಗುವ್ರದುಂ ॥ ೨೦೧

ಪಿರಿದಪ್ಪ ಭಕ್ತಿಯಿಂ ವಿ
ಷ್ಟರದಿಂದೆರ್ದಿಱ್ಕುಮಂ ಪುರಂಧ್ರೀಸಿಕರಂ ।
ಬೆರಸಿದಿರ್ವಂದು ಮುನೀಶ್ವರ
ಚರಣದ್ವಯಪಲ್ಲವಕ್ಕೆ ನುಱ್ಗುದುಂಬಿಯವೋಲ್ । ೨೦೨

ನಮ್ರಮಸ್ತಕನಾಗಿ ರಾಜಭವನದೊಳಗಣ್ಗೊಡಗೊಂಡು ಬಂದು ಚ್ಛಾಸನದೊಳ್ ಕುಳ್ಳಿರಿಸಿ ಕಾಲಂ ಕರ್ಚಿ ತಳೋದಕಮಂ ತಲೆಯೊಳ್ ತಳಿದುಕೊಂಡು][1] ॥ ೨೦೩

---

1 ಅಣಿಮಾದ್ಯಷ್ಟಗುಣಸಮೇತನಪ್ಪ ನೀನೆ ಪೋಗಿ ಜೀವವಧೆಯಾಗದಂತುಪ ಸರ್ಗಮಂ ಪಿಂಗಿಸಿ ಬಿಸ್ಪುದೆನೆ ಮಹಾಪ್ರಸಾದಂ ಕೈಕೊಂಡನೆಂದು ವಂದಿಸಿ ವೃದ್ಧಿ ಪ್ರಾಪ್ತನಪ್ಪುದಱಿಂ ಹಸ್ತಿನಾಪುರಕ್ಕೆ ವಂದರಮನೆಯಂ ಪುಗುವುದುಂ ಪದ್ಮನುಪಾ ರಾಜನಿದಿರ್ಗೊಂದು ಪೋಗಿ ಪಿರಿದುಮಸೆಯೊಳಿರಿಸಿ ಕಾಲಂ ಕರ್ಚಿ ಪಾದೋದಕಮಂ ತಲೆಯೊಳ್ತಳಿದುಕೊಂಡು ಕಾಲಮುಲೆ ಬಿದ್ದರ್. (ಗ)

ವರಮಿಾಯಲೆಂದು ವಾಸವ
ಪುರದಿಂ ಸುರಭೂಜಮಿಱುದು ಬಂದುದು ಮತ್ತೆ ।
ನ್ನರಮನೆಗೆಂದಾಮುನಿಯಂ
ಪರವೋತ್ಸವದಿಂದೆ ನೋಡಿ ಕಣ್ಣಿವಿನಿಗಂ ॥ ೨೦೪

[ಕೈಗಳಂ ಮುಗಿದು] ನಿಮ್ಮಡಿ ಬಿಜಯಂಗೆಯ್ದ ಕಾರಣಮೊವುದು ಬೆಸಸಿವೆಂಬುದುಂ ವಾತ್ಸಲ್ಯರತ್ನಾಕರನಿಂತೆಂದಂ [1] ॥ ೨೦೫

ದುರಿತದ ಮುಂಗಾಲ್ಪಾಪದ [2]
ನರೆಮನೆ ಬ್ರಹ್ಮೇತಿಕಾಱರಣುಗಿನ [3] ಗಿಳಿ ನಿ ।
ಷ್ಕರುಣದ ನೆಲೆ ದುರ್ಗುಣದಾ
ಗರವೆನಿಸುವೆ ನಿನ್ನ ಮಂತ್ರಿ ಬಲಿಯೆಂಬ ಖಳಂ ॥ ೨೦೬

[ನಿನ್ನರಸಂ ಮಾಣಿಸಿ ಯುಜ್ಜಯಿನ ನೆವದಿಂ ಕಣ್ಗಟ್ಟಿ ತಿರಿಪಿ ಮಾಸಾರ್ಧರಾಜ್ಯಮುಂ ಬೇಡಿಕೊಂಡು ಮುನ್ನಿನ ಕೋಪದಿಂದೆ ಸಿತಗಿರಿಯೊಳಿರ್ದಕಂಪನಾಚಾರ್ಯರೆ ಮೊದಲಾದಯ್ನೂರ್ವರ್ ಮುನಿವರರ್ಗಮಂ ನೂರೋಪಸರ್ಗಮಂ ಮಾಡಿದಪನದನೀನುಪೇಕ್ಷಿಸಿ ಮಿಥ್ಯಾದೃಷ್ಟಿಗಳಂ ತುಸಿರದಿಪ್ಪುದುಚಿತಮೆಲ್ಲ ॥ ೨೦೭

ತೊಡರದೆ ನಮ್ಮಾಮ್ನಾಯದೊ
ಳಡೆಯುತುಗದೆ ಬಂದ ಜೈನಧರ್ಮಮನೆಡೆಯೊಳ್ ।
ಕಿಡಿಸಿ ಮುನಿಸಂಕುಳಕ್ಕಾ
ದೆಡರಂ ಕಡೆಗಣಿ ನೋಡುತಿರ್ಪುದೆ ನೃಪತೀ ॥ ೨೦೮

ಅಂತಲ್ಲದೊಡಂ 'ರಾಜ್ಞಾ ಹಿ ರಕ್ಷಿತೋ ಧರ್ಮಃ' ಎಂಬ ಮಾತುಮಂ 'ದುರ್ಬಲಸ್ಯ ಬಲೋ ರಾಜಾ' ಎಂಬ ರಾಜನೀತಿಯುಮಂ 'ಸರ್ವೇಷಾಂ ಪಾರ್ಥಿವೋ ಗುರುಃ' ಎಂಬ ನೀತಿವಾಕ್ಯಮುಮಂ

---

1 ವಿಷ್ಣುಕುಮಾರ ಮುನಿಯಿಂತೆಂದಂ (ಗ) 2 ಪುಂಜಂ ಪಾಪದ (ಗ)
3 ಪಾಖಿಷ್ಠರಪ್ಪರಣುಗಿನ (ಗ)

'ಭೃತ್ಯಾಪರಾಧಸ್ಯ ಸ್ವಾಮಿನೋ ದಂಡ' ಮೆಂಬ ಪುರಾಣಮುಮಂ ನೆನೆದಪ್ಪೊಡಂ ಮುನಿವರರುಪಸರ್ಗಮಂ ಮಾಣಿಸುವುದೆಂಬುದುಂ] [1] ॥

ಬೆಱಗಾಗಿ ಕೇಳ್ದ ಕೋಪಂ
ಪೊಱಮೆಡೆ ಕಣ್ಗಟ್ಟಿ ಪುಸಿದು [2] ಯಜ್ಞದ ನೆವದಿಂ ।
ನೆಱೆ ಮುನಿಚಯಕ್ಕೆ ತಪ್ಪುವ
ಕುಱಿಯಂ ತಱಿದೊಟ್ಟಿ ಕೊಲ್ಲದೆಂತುಂ ಮಾಣಂ ॥ ೨೧೦

ಇಱುಂಪೆಗೆಱಂಕೆ ಮೂಡಿದಂತೆ ಕೊವಿ ಕೊಱೆದು ಪಾಯ್ದು ರಕ್ಕಸಿಯ ನಿಱಿಯನುರ್ಚಿದರೆಂಬಂತೆ [ಸಿಂಹದ ಕೇಸರಮಂ ಕಿಱ್ದಿರೆಂಬಂತೆ,] ಎನ್ನನೇಳಿದಮೂಡಿ [ಮೊಗನರಿದು ಕನ್ನಡಿಯಂ ತೋಱುವಂತೆ] ಕಣ್ಣಂ ಕುತ್ತುವ ಜೆಲ್ಲಮನಾಡಿ [ಧೂರ್ತನೆನ್ನ ಕೈಯಂ ಕೊಂಡೆನ್ನ ಕಣ್ಣಂ ಕುತ್ತುವಂತೆ ಸೊಕ್ಕಿ ಎನ್ನ ಗುರುಗಳನೆನ್ನ ಪೊಱಲ ನೆನ್ನಂ ಬಗೆಯದೆ ನಾನಾವಿಧೋಪಸರ್ಗಮಂಮಾಡಿದಪಂ ಗಡವೆಂದು] ॥

ಬಲಿ ಮಾಡಿದ ದೂರ್ತಿಂಗು
ಮ್ಮಳಮಾಗಿ ಕನಲ್ದು ನೊಂದು ಸಿಂಹಾಸನಮಂ ।
ತಳದೊಳ್ ಪೊಯ್ದು ನರೇಶಂ
ಮುಳಿಸಿಂ ಮೆಯ್ಯಱಿಯದೆಱ್ದು ಪರಿವೆವಸರದೊಳ್ ॥ ೨೧೧

[ಕಂಡು ವಿಷ್ಣುಕುಮಾರಮುನಿಪಂ ಧರಣೀಶ್ವರನ ಮನದ ಭಕ್ತಿಯುಮಂ ಸದ್ಧರ್ಮದೊಳಾವ ಪಕ್ಷಮುಮುಂ ಸ್ವಸಮೆಯದೊಳಾದ ವಾತ್ಸಲ್ಯಮುಮಂ ನೋಡಿ ಮೆಚ್ಚಿ ಬೇಡೆಂದು ಮಾಣಿಸಿ ಧರ್ಮದೊಳಾದ ನಿನ್ನ ತಾತ್ಪರ್ಯಮಂ ನೋಡಲೆಂದು ಬಂದೆವಿಂದು ನಿನ್ನ ಮನದ

---

1 ಯಜ್ಞದ ನೆವದಿಂ ನಿನ್ನ ರಾಜ್ಯಮಂ ಪಕ್ಷಂಬರಂ ಬೇಡಿಕೊಂಡು ಮುನ್ನಂ ಮುನಿಸುಂಟಾಗಿಪ್ಪುದಱಿಂದಕಂಪನಾಚಾರ್ಯರ್ವೊದಲಾದೈನೂರ್ವರ್ಹಾತನಪೋಧನರಂ ಕಿಚ್ಚಿನೊಳಿಟ್ಟು ಕೊಂದಪನಿದನುಪೇಕ್ಷಿಸಿ ನೋಡುತ್ತಿರಲಾಗದೆಂಬುದುಂ (ಗ)

2 ಕೋಪದಿಂವೆಯ್ಯಱಿಯದೆ ಕಣ್ಗಟ್ಟುತಿರಿಪ (ಗ)

ನಿರ್ಮಳಿಕೆಯುಮಂ ಧರ್ಮದೊಳಾದಱುಕೆಯುಮಂ ಸನ್ಮುನಿಗಳೂ
ಳಾದ ಪಕ್ಷಪಾತಮುಮಂ ಕಂಡು ಪಿರಿದು ಸಂತೋಷಮಾಯ್ತೆಂದು
ಮತ್ತಮಿಂತೆಂದಂ ॥ ೧೧೩

ನರಪ ನೀಂ ಮುನಿದಂದು ಕೊಂದಪೆಯೆಲ್ಲರಂ ಕೊಲೆಯಾಗೆ ನಿ
ಷ್ಠುರಮೆಹಾದುರಿತಾಳಿ ಸಾರುಗು ಕರ್ಮ ಸಾದೊಡೆ ಪೊಲ್ಲಮೀ
ಯರಿಬಲೀಂದ್ರನ ಮಾಡುವೊಂದತಿಬಾಧೆಯಂ ಕ್ಷಣದಿಂದಮ
ಚ್ಚರಿಯೆನಲ್ಕಡ ಜೀವಬಾಧೆಯನಾಗದಂತಿರ ಬುದ್ಧಿಯಿಂ ॥ ೧೧೪

ಮಾಣಿಸಲಾವೆ ಸಾಲ್ವೆವೆಂದು ಜನಪತಿಯು ಕೋಪಾವೇಶಮಂ
ಪಿಂಗೆ ನುಡಿದು ರಾಜಭವನದಿಂ ಪೊಱಮಟ್ಟು ಲೀಲೆಯಿಂದಣಿಮಾದ್ಯಷ್ಟ
ಗುಣೈಶ್ವರ್ಯನಪ್ಪುದಱಂ ತನ್ನ ರೂಪಂ ಕಿಱಿದುಮಾಡಿ ॥ ೧೧೫

ಕೊರಳ ಜನ್ನಿವರಂ ಪೊಸಪ್ಪೆಯನೆಯ್ದಿ ವಿಂಜಱುವ ಬೆಳ್ಳಿಯು
ತ್ತರಿಗೆ ಭಾಸುರಮಪ್ಪ ತೇಜಮಗುರ್ವು ಪರ್ವಿರೆ ಚೆಲ್ವಿನಿಂ
ಬೆರಲೊಳೊಪ್ಪುವ ದರ್ಭೆ ಪಿಂಗಳನೇತ್ರನುಟ್ಟುದುಕೂಲವೊ
ಪ್ಪಿರೆ ಧರಾಮರವೇಷಮಂ ಮುನಿಕುಂಜರಂ ನೆಱೆ ತಾಳ್ದಿದಂ ॥ ೧೧೬

ಉರದೊಳಂ ನೆಱೆ ಬಾಹುಮೂಲದೊಳಂ ಲಲಾಟದೊಳಂ ಮನೋ
ಹರಮೆನಲ್ ನಿಡುಬೊಟ್ಟು ಕೋಭಿಸೆ ಪೊಂಗಿ ಬಾಗಿದ ಕುಬ್ಜಕಾ
ಲ್ಕರಮೆ ಕುರ್ಗಿದ ಹಸ್ತವೊಪ್ಪುವ ಹೇಮವರ್ಣಮಗಲ್ದುರಂ
ನಿರುಪಮಾಕೃತಿ ಕಚ್ಚನಪ್ಪ ಶಿರೋರುಹಂ ಪೊಪೆವಾನನಂ ॥ ೧೧೭

ಅಂತು ವಾಮನರೂಪಂ ಕೈಕೊಂಡು ಪುರಮೆಲ್ಲಮೆಚ್ಚರಿವಡೆ
ಪೊಬಿಲೊಳಗಣಿಂ ಪೊಱಮಟ್ಟು ಮೆಲ್ಲನೆ ಸಿತಗಿರಿಗೆ ವರ್ಪುದುಂ, ನೆರೆದ
ನೆರವಿ ಪರಮೇಶ್ವರನೆಂದು ರೂಪಿಂಗಂ ತೇಜಕ್ಕಂ ಸೋಲ್ತು ಬೆನ್ನನೆ
ಜಯಜಯನಿನಾದದಿಂ ಪೊಗಱುತ್ತುಂ ಪೊಡೆಮಡುತ್ತುಂ ಕವಿದುವರೆ
ಯಜ್ಞಶಾಲೆಯ ಪೊಱಗಿರ್ದ ಬಲಿಯುಂ ಶುಕ್ಲನುಂ ಪ್ರಹ್ಲಾದನುಂ
ಕಂಡು ಸಾಕ್ಷಾದ್ವಿಷ್ಣುವೆಂದು ॥ ೧೧೮

ಮನದೊಳುತ್ಸವಮೊಗೆ ಪೆರ್ಚಿ ಕಡಂಗಿ ನಿಲ್ಲದೆ ಭಕ್ತಿಯಿಂ
ಜನಸಮೀತನುದಾತ್ತವೃತ್ತಿಯಿನಾದರಂಬೆರಸಚ್ಚಿಯಿಂ ॥
ತನಗೆ ಸಂತಸಮೆಂದು ಪುಟ್ಟರೆ ರಾಗದಿಂದಿದಿರ್ವಂದು ಕೋ
ಕನದನಾಭನ ಗೆತ್ತು ಪಾದಯುಗಕ್ಕೆ ಮಿಗ್ಗಿದನಾಖಿಳಂ ॥ ೨೦೯

ಎನ್ನ ಮಾಡುವ ಮಾಟಮಂ ನೆಱೆ ಕೇಳ್ದು ವೈಷ್ಣವಲೋಕದಿಂ
ಪನ್ನಗಾಶಯನಚ್ಚಿಯಿಂದವೆ ನೋಡಲೆಂದನುರಾಗದಿಂ
ತನ್ನ ಕೂರ್ಮೆಯಿನಿಲ್ಲಿಗೋವದೆ ಬಂದನೆಂದೊಡೆ ಭೂತಳ
ಕ್ಕೆನ್ನ ನೋಂತುದನಾರು ನೋಂತರೊ ಭಾವಿಪಂದು ಧರಿತ್ರಿಯೊಳ್ ॥

ಎಂದು ಪೆರ್ಚಿ ಮೇಗುಮೆಯ್ಯಱಿಯದೆ ಕೃತಕಧರಾಮರನನಿದಿ
ರ್ಗೊಂಡು ಪೋಗಿ ಯಜ್ಞಶಾಲೆಯುಮಂ ಮಂಟಪಂಗಳುಮಂ ತೋಱಿ
ಪಿರಿದಪ್ಪಾಸನದೊಳ್ ಕುಳ್ಳಿರಿಸಿ ಕಾಲಂ ಕರ್ಚಿ ಪಾದೋದಕಮಂ
ತಲೆಯಮೇಲೆ ತಳಿದುಕೊಂಡು ಮೆಗುಳ ಮೆಗುಳ ಪೊಡೆಮಟ್ಟು ಕೈಗಳಂ
ಮುಗಿದು ನುಂದೆ ನಿಂದಿರ್ದಿಂತೆಂದಂ ॥ ೨೧೦

ದೇವಮೊನವೆರಾಜನೆಂದಿತಪಾದಪಂಕಜ ದೈತ್ಯವಿ
ದ್ರಾವಣಾಚ್ಯುತ ವಿಷ್ಣುಲೋಕದಿನೆನ್ನ ಮಾಡಿದ ಪುಣ್ಯದಿಂ
ದೇವ ನೀನವನೀತಟಕ್ಕಿಳಿದಿಲ್ಲಿಗುನ್ನತಿಯಿಂದೆ ಸ
ದ್ಭಾವದಿಂದವೆ ಬಂದೆಯೆಂದೊಡೆ ನಾನೆ ಧನ್ಯನೆನುರ್ವಿಯೊಳ್ ॥ ೨೧೧

ಪಲವುಕಾಲಮನೇಕಪುಷ್ಪನಿಕಾಯದಿಂ ಹರಿ ನಿನ್ನನ
ಗ್ಗಳದ ಭಕ್ತಿಯಿನೆಯ್ದೆ ಪೂಜಿಸಿಯುಂ ಮಹಾತಪದಿಂದಮು
ಜ್ವಳಿಸದಾರ್ತು ಶರೀರಮಂ ನೆಲಕಿಕ್ಕಿಯುಂ ನೆಱೆ ಕಾಣದಾಂ
ಜಲರುಹೋದರ ಕಂಡೆ ನಿನ್ನ ಪದಾಬ್ಜಮಂ ಕೃತಕೃತ್ಯನೆಂ ॥ ೨೧೨

ಎನ್ನಂತೆ ಪುಣ್ಯದಿಂದಧಿಕರಿಲ್ಲೆಂದು ತನ್ನ ಪುಣ್ಯಕ್ಕೆ ತಾನೆ ಪೊಂ
ವಿಸ್ಮಯಂಬಟ್ಟು ಕೃತಕವಿಪ್ರನ ವೊಗಮಂ ನೋಡಿ ಭಕ್ತಿಯಿಂ ವಿನ
ಮಸ್ತಕನಾಗಿ ದೇವರೀಯಜ್ಞಶಾಲೆಯೊಳನಗೆ ಸಂತೋಷಮು[illegible]ತ್ಸಾ

ಮುಮೆಸ್ಸಂತಾಗೆ ಮೆನಕ್ಕೆವೆಂದ ನಸ್ತುವೆ ಕೈಕೊಳ್ಳುವೆಂದು ಪ್ರೌಢೆ
ನಟ್ಟುಬೇಡಿಕೊಳ್ಳುದುಂ, ಮಾಮೂಘರಾಜಮುನಿಯೆಂದಂ ॥ ೬೦೪

ಸಿನ್ನೆ ಧಾಜ್ಞಾದ ಪೆಂದನಚ್ಚರಿವೆಟ್ಟು ನೋಡಲುವೇಡಿ ಬಾ
ದೆನ್ನಿರಂಕಾಳವಿಲ್ಲೆ ಸಂತಸಮಾಗಿ ಕಂಡೆನಪೂರ್ವಮಂ
ಎನ್ನ ಚಿತ್ತದೊಳಾಂವುವಿಲ್ಲತಿಕಾಂಕ್ಷೆ ಬಾಸುವನಾಗಮಂ
ಸಿನ್ನನೆಂಬುದುಮೋಗಳಾಬಳಿ ಮೋಹವಾಪ್ಪುಹಮುಖ್ಯನೆಂ ॥ ೬೦೫

ಎಸಗೆ ಸಂತಸದೆಸಗೆ ನಿನ್ನಡಿ ಪಾಸುಮಾಪೆಂಬುದಮ್ಮ ದು
ಚ್ಚರಿಯೆಸಪ್ಪ ಕುಲೀಂದ್ರರಾಜೆಯುಸಿಕ್ಕ ಗೊಂಸಿ ಬರಗಳಲ್ಲಿ
ವ ನಕವಂದಾದಮೆರ್ದ ಧೈಸುವೆನಕ್ಕ ನಾ... ನೆನ್ನ ಕಾ
ಪ ನಿಬುಮಾಳೆ ಪೊಗಿಲಪ್ಪ ಕಾಸ್ಮೀರಮನಕ್ಕ ಕೈಕಾಂ... ಪ್ಪುದು ॥

... ತಿಂಗ
ತಲೆಯಂ ತಂಗಿ ನಿನಮುಗೀನಾಯನುಸಿರಳಾಮೆ ... ನ ಪ್ರೌಢೆ
ಧನಧಾನ್ಯಗಳು ಪೊಲೆ ಕಾಂಕ್ಷಸಿಸ್ಸಿ ನು ... ಪೊಂದುಮೆ
ನಮೊಗವನಸ್ಸಿನೆ ತ್ಯಗಂ ಮೊಂ ... ಪ್ರತಿಯಂದುಮೆ
ಪರಿಕಮಾದಮಕ್ಕು ಭ್ಯಜೋತ್ತ ... ಮಿಂಬೆ
ಪ್ರಸಿದಿಗಂ ... ನೆಂದು ... ಪಾಪಕರ್ಮಮ್ ...
ನೀರಂ ತರಿಸಿ ... ಪೊಡೆ ಧಾರೆಯನೆ ...
ಪಿಪ್ಪಲಪತ್ರಾಕಾರ ... ಪೊಳೆವ ...
ತೋರಣಾದಿ ... ಂ ಪೆಕ್ಕಂ ಕಂದೆ ॥ ೬೦೬

ಪೊಲ್ಲನೆಣ್ಣನೆತ್ತಿ ಬಗ್ಗಿಸಿ ಬಗ್ಗಿಸಿ ಸ್ಪರ್ಶಿಸಿಲ್ಲಿಯಿಂ
ಬಲ್ಲಿದ ಶುಭಲಕ್ಷಣಾಂಕಿತಮೆಂಬ ಪಾತ್ರಿಯಂ
ಸಿಲ್ಲಿದಿತೊಡೆ ಮುಂದೆ ನಟ್ಟನೆ ನವ್ಯ ಸಂಕಲ್ಪನಿಳೆ ತಾಳೆ
ಪೊಲ್ಲದಕ್ಕೆವಳಿಂದೆ ಧಾರೆಯನಿಕ್ಕಿ ಪೊಸ್ಮನಿವಂಬುದುಂ ॥ ೬೦೭

ಬಲಿ ತಾನ್ಮನ ಮಾತಂ ಪಿಷ್ಟಿ ಸತ್ಪುರುಷಂಗೊನೆ ನಾಡುಮೆವಂ
ಪೊಸಲಂಗವಂದು ಒಕ್ಕಾಮೊದ ಶಂಕ್ಕನ ಮೊತಿಂ ಕೀಳದ ಕಾಶಮೆನೆತ್ತಿ

ಮೆನದನುರಾಗದಿಂ ಕೃತಕಧರಾಮರಂಗೆ ಮೂಱಡಿನೆಲನಂ ಕೊಟ್ಟೆನೆಂದು ಧಾರೆಯನೆಱೆವ್ರದುಂ ವಿಷ್ಣು ಕುಮಾರಮುನಿ ರಾಜ್ಯಂಕೈಕೊಂಡು ಬಲಿಯುಂ ನೆರೆದ ನೆರವಿಯುಂ ನೋಡೆ ನೋಡೆ ಮೂಱಡಿಗೊಟ್ಟಿಂಗಾಱಡಿಯಾಗಿ ಮೊಡವನೆಂಬಂತೆ ಕುಳ್ಳರ್ದರೇಱ್ವಿಂದದಿಂ ತೊಟ್ಟನೆ ಭಯಂಕರವಾಗೆ ॥] [1]

ದಿವಿಜೇಂದ್ರಾದೀಂದ್ರರೊಳ್ ಮೆಚ್ಚದಿಸೆ ಸೆಣಸಿ ಮೂಕೊರ್ಮಾಂಡು ಕೈವೊಯ್ದು ಕೋಪೋ
ದ್ಧತದಿಂದೆಕ್ಕೆಕ್ಕೆಯಿಂ ಮೊದಲಿಸಿ ಬಳದನೆಂಬಂದದಿಂ ವ್ಯೋಮಮಂ ಮು ।
ಟ್ಟಿನಿಂ ಗಾತ್ರಂ ವಿಯನ್ಮಂಡಲಕೆ ತಡೆಯೆ ತೂಂತಿಟ್ಟನೆಂಬಂತೆ ನಿಂದಂ ಭುವನಕ್ಕುತ್ಕರ್ಷಮಾಗಲ್ ದಿವಿಜಮೆನಂಜವಿದ್ಯಾಧರಾರಾಧ್ಯವಾಮಂ ॥

ಮೆಕುಟಂ ಸೌಧಮೆಂಕಪ್ಪಂ ರವಿ ಹಿಮಕಿರಣಂ ಕುಂಡಲಂ ನೀಲಮೇಘ
ಪ್ರಕರಂ ತೊಂಗಲ್ಗಳ್ ರತ್ನಗಳೆ ಬೆಮರಿನೊಗೆದ ಬಿಂದೂತ್ಕರಂ ಕೂಡೆ ತಾರಾ

---

[1] ಭೂಮಿಯುಂತ ದಿಗಂತರವ ಸಂ ವಾಣಿಸಿ ಬಳ್ಳಿಸು ಕಟಿಸೂ ತ್ರನುಂ ಸಮವರ್ಣಫಣಿಯು ಕೋವಣವುಂ ಬಿಳ್ಳಿಯುತ್ತರಿಗೆಯುಂ ಮುತ್ತಿನ ಕರದ ಯಜ್ಞೋಪವೀತವುಂ ರತ್ನಕುಂಡಲವುಂ ದುಕೂಲಾಂಬರನುಮೆಸೆಯೆ ವಾಮನರೂಪಂ ಕೈಕೊಂಡು ಆಕಾಶವಿನೆರೆವ ನೆರವಿಯೆಲ್ಲಂ ವಿಸ್ಮಯಂಬಡೆ ಬಂದು ನಿಂದಿರ್ದಮುಮದೆ ವಿಷ್ಣು ಪ್ರತ್ಯಕ್ಷವಾದನೆಂದು ಬಲಿ ತನ್ನೊಡವುಟ್ಟಿದ್ದರ್ವಿಸು ಸಾಷ್ಟಾಂಗ ಪ್ರಣತನಾಗಿ ಎಲ್ಲಿಗೆ ಪೊಡವಟ್ಟು ಪೊನ್ನ ವಾತ್ತಿನ ವಾಣಿಕ್ಕದ ರತ್ನದ ರಾಶಿಯುಮುಮನೆ ಪೊಜಿಸಿ ನಿನ್ನಡಿ ಕೈಕೊಳಲ್ವೆಳ್ಳುವೆ ಎಂದು ಪ್ರಾರ್ಥಿಸುವುದುಂ, ಎಮಗೆ ಅನಲಿನೀಲೆ ವೋಪವಿ ಲ್ಲವೆನುಗೆ ಯೆ ಮ ವಾತ್ರೆಗಂ ಹೋವಕ್ಕುಂಡಕ್ಕೆ ತಕ್ಕಂತಾಗಿ ಮೂಱಡಿ ನೆಲನಂ ಕಾಱುವೊಡೆ ಕಡಿವೆನೆ ಕುಕ್ಕನುಂ ಬೃಹಸ್ಪತಿಯುಂ ಪ್ರಹ್ಲಾದನುಮಿವಂ ಬ್ರಾಹ್ಮಣನಲ್ಲ ನಿನ್ನ ನ್ಯೂನುನ ರುಷಿವರ್ಯನಲ್ಲಿ ನಾನು ಶ್ಯೆಮಳ್ಳಿ ನುಹಾರಾಷಿನಿನ್ನ ಕಿಡಿಸ್ಪಂದನಿಲ್ಲಿ ಸಂಶಯವಿಲ್ಲ ; ನೀನೀಪರವೇಶ್ವರನ ಕಾರುಣ್ಯವಂ ಪಡೆಯಲ್ವೇಳ್ವೆಡೆ ಪೊಡೆವಟ್ಟು ಅಱಿಯದೆ ಗೆಯ್ದೆನೆಂದು ರುಷಿವರ್ಧಮಂ ಮಾಣ್ಬುದೆನೆ, ಪಾಣಿದಂಮ ಕೊಡುವೀ ಮೂಱಡಿ ನೆಲನುಮಾಱಡಿಗೆ ಕಾರಣನುಳ್ತುವೆಂದೊಸಂ ಮಾಣದೆ ಮೂಱಡಿ ನೆಲನಂ ಕೊಟ್ಟೆನೆಂದು ವಿಯ್ವೆಚಿ ಧಾರೆಯನೆಱೆವುದುಂ ॥ (ಗ)

ನಿಕರಂ ದೇವೇಂದ್ರಕೈಲಂ ತನು ಕುಲಗಿರಿಗಳ್ ಲೀಲೆಯಿಂ ತೊಂಗಲೆಂಬುಂ
ತೆ ಕರಂ ಪೆಂಪಿಂವಗುರ್ವಾವರಿಸೆ ಗಗನಮುಂ ಮುಟ್ಟ್ವ ನಿಂದಂ ಮುನೀಂದ್ರಂ॥

ಅಂತು [ದಿಶಾವಲಯಮೆಲ್ಲಂ ತನುಜ್ಯೋತಿರ್ಮಯಮಪ್ಪುಂ ಗಗನ
ತಳಮೆಲ್ಲಂ ಜಯಜಯನಿನಾದಮಯಮಪ್ಪುಂ ಧರಾವಲಯಮೆಲ್ಲಂ ದೇಹಮ
ಯಮುಮಪ್ಪಾಗೆ] ಮುಂದರಕ್ಕೆ ಪ್ರತಿಮಂದಂವೊದಂತೆಸಂ ಧರಣಿಯು
ಗಗನದಡೆಯನಳಯಲೆಂದೆತ್ತಿದ [1] ವಿಘಾತ್ರನ ಕಯ್ಯ ದಂಡಮೆಂಬಂತೆ
ಷೋಡಶಾಭರಣಭೂಷಿತನುಂ ದೇವಾಂಗನಾಸ್ತ್ರಪರಿವೇಷ್ಟಿತನುಮಾಗಿ[2]
[ಜಗತ್ಕಾಶ್ಚರ್ಯಮುಮೆದ್ದುತಪ್ಪುವಾಗೆ ವಿಗುರ್ವಿಸಿ ನಿಂದು ॥ಒಳಿಂ

ಪರಮೆಗುಣಾಂಬುರಾಶಿ ಜಿನಧರ್ಮಸುರುತ್ಪಥಶೀತರಶ್ಮಿ ಮಾ
ಣ್ಬಿರಿಸದೆ ವಜ್ರವೇದಿಕೆಯೂಳೊಂದೆಡೆಯುಂ ಭವದಿಂದೆ ಮಾನುಷೋ
ತ್ತರಧರಣೀಂದ್ರದೊಳ್ ತಡೆಯದೊಂದಡಿಯಂ ನಯದಿಂದಮಿಟ್ಟು ನಿ
ರ್ಜರಪತಿಪಂವ್ಯನೊಂದಡಿಗೆ ಭೂತಳಮಿಲ್ಲದುದಗ್ರತೇಜದಿಂ ॥ ಒಳಿಳ

ಕಾಲನಾಕಾಶಕ್ಕೆತ್ತಿ ಜಿನಪಾದಭಕ್ತನಪ್ಪತಂಗೆ ಮೊಱಯಿಂಲೋ
ಕವೆಯೇಕಚ್ಛತ್ರವೆಂಬಂತಾನುಂ ತದ್ಗಿರೀಂದ್ರದಳವಿಯುಮುಂ ಮೆನುಷ್ಯ
ಕ್ಷೇತ್ರಪ್ರಮಾಣಮುಮೆಂ ಕಾಲೀದಾತಯ್ದು ನೋಡುವಂತಾನುಂ ಸತ್ತಿ
ದ ದ್ವೀಪಸಮುದ್ರಂಗಳಂ ಭವ್ಯಂಗೆ ಕವಯರಂಬರೆಮು ತೋಱುವಂತಾ
ನುಂ ಮಾನವಂಗೆ ಮೇರೆಯೆಂದಱಿಪ್ಪವಂತಾನುಂ ತಿರಿಪುಕ್ತು ಮಿರ್ಪ್ಪದುಂ
ಸಮಸ್ತದೇವಸಮೂಹಕ್ಕಾಸನಕಂಪವಂ ಭವಮುಮಾನವಾಗೆ ಬೇಗಮು
ಱಿದು ಚತುರ್ವಿಧದೇವನಿಕಾಯಮುಂ ತಂತಮ್ಮ ಮಹಾವಿಭೂತಿಗಳ್ವೆ
ರಸು ದೊಸೆದುಂವಭಿಗಳಸೆಯೆ ಭೋರೆನೆ ಬಂದು]3 ॥ ಒಳಿಳ

1ನಲನಾಕಾಶಪಂತರವನಲೆಯುಲೆಂದತ್ತಿವ (ಗ). 2ದೇವಾಂಗನಾಪರಿವೇಷ್ಟಿತ ನವಮಾಗಿ.

3 ವಜ್ರವೇದಿಕೆಯೊಳೊಂದಡಿಯುಂ ಮಾನುಷೋತ್ತರದೊಳೊಂದಡಿಯನಿಟ್ಟು ಮತ್ತೊಂದಡಿಗೆ ನೆಲನಿಲ್ಲದೆ ಕಾಲನೆತ್ತಿ ಜಿನಭಕ್ತನಪ್ಪಂಗೆ ಮೂಱಿಂಲೋಕವು ವೆಕಚ್ಛತ್ರವೆಂದು ತೋಱುವಂತಾನುಂ ತದ್ಗಿರೀಂದ್ರದಳವಿಯುಂ ಕಾಲಿಂದಾರೈವಂತಾನುಂ ದ್ವೀಪಸಮುದ್ರಮಂ ಭವ್ಯಗೆ ಕವೆಮಾರಂ ಬೇಸು ತೋಱುವಂತಾನುಂ

ಸುರತರುನವೀತುವೆರಮಂ
ದಾಸುಮೆನೆಂ ವಿಷ್ಣು ಮುನಿಪುವೇಲುತ್ಸಾಹಂ ।
ಬೆರಸು ನಲಿನಲಿದು ಚಿತ್ತೈಯ
ಸರಿಯುಂಶಿರೆ ಸುರಿವರರಳೆಮೆಳೆಗುಣಾಢ್ಯರ್ ॥ ೬೩

ಪೊಸವೆಮುತ್ತಿನ ಪೊಸವೆಜ್ರದ
ಪೊಸಪಚ್ಚೆ ಯ ಪೊಸಕೆನಿಪ್ಪ ವೈಡೂರ್ಯದ ರಂ ।
ಜಿಸುವ ಪೊಸಸೂರ್ಯಕಾಂತವ
ಕಶಿಕಾಂತದ ರತ್ನರಾಶಿಯಿಂ ಪೂಜಿಸಿದರಿ ॥ ೬೪

ಸುರಿದಪ್ಪುದಮೃತವ ಬಲ್ಸರಿ
ಧರಣಿಯೊಳಂಬುತೆ ವಿಷ್ಣುಮುನಿಪನ ಕೆಲದೊಳ್ ।
ತರತರದಿಸಿರ್ದು ಪಾಡಿದ
ರರವಿಂದಾಸನೆಯುಪಮೆಯರಿಯರ್ ಬಹುವಿಧದಿಂ ॥ ೬೫

ಸಂಗಳನೆ[1]ಪ್ಪು ರವಂ ಗಿ
ತಂಗಳ ನಿಳ್ಪನವನೇಕಜಯಘೋಷನಾದಂ ।
ಪೊಂಪುವಡೆದಿರ್ಪ್ಪ ಸುರರ ಸ
ರಂ ಗಗನದೊಳಾವ ಮಾನುಷಮೆಸೆದುವು ಪಲವ್ರಂ ॥ ೬೬

ಕರಣಾಗೆಂಬರ್ಧಾರಿಕೆಂಬ ಮೆಂದದಿಂ ಜೀಯೆಂಬ ದೇವೆಂಬ ಭಾ
ಸುರತೇಜೋರಾಶಿ ಮಹಾಪ್ರಕಾಶನುಡಿಯೆಂಬಾಶ್ಚರ್ಯ ಮೆಂಬಿಚ್ಛಿಂ
ಸ್ಥಿರನಾಗೆಂಬ ಮಧುರ್ಯ ಭಾಪು ವೆರ್ಪುಂಭಾಪಯ್ಯಯ್ಯ ನೋಡೆಂಬ ದೇ
ವತ ನಾನಾವಿಧಸುಸ್ವರಂ ನೆಗೆದುವಾಕಾಂತಂಬರಂ ವ್ಯೋಮದೊಳ್ ॥

ಜಿನಧರ್ಮೋದ ಪೆಂದಂ ಪೇ
ದಿನಿಗಳ್ಗಿಪ್ಪುವೆ ತೆಱದಿನಮೆರಾವುನಿಸದಕ್ಕೋ ।

ಪೂರ್ವಜನ್ಮದ ಮೇರುಮಹಾಮಂತ್ರಿಯ ಕಾಲು ತಗುಲ್ದುದ್ದಮುಂ ಪೂರ್ವದಂ ಚಕ್ರವರ್ತಿ
ದೇವನಿಕಾಯನುಂ ತಂತಮ್ಮ ಮಹಾವಿಭೂತಿಯಿಂ ದೇವದುಂದುಭಿಗಳಿಸಿವೆ (ಗ)।

[1] ಪೊಗ್ವವನಪ್ಪರಂವಂ (ಗ)

ಕನದೊಡನೊಡನೆ ತಗುಳ್ದೊ
ಯ್ಯನೆ ರಾಗಂಬೆರಸು ಧಾತ್ರಿಯಂ ಬಲವೆಂದರ್ ॥ ೬೪೦

ಅಂತಗುರ್ವಪ್ಪಿನಂ ಧೀರತೆಯೊಳಪ್ಪಿನಂ [1]
ಮುಂಸಿಸಿಕರಪೂಜ್ಯನಂ ಸಕಳಸಾಮ್ರಾಜ್ಯನಂ
ಕಾಶ್ಮೀರದವರೆಲ್ಲ ಗೊಲ್ಲದೇಶದರೆಲ್ಲ
ಚೊೋಳದೇಶದರೆಲ್ಲ ಚೇರಮಲದವರೆಲ್ಲ [2]
ಸಿಂಹಾರ್ಪ್ಪಜನರೆಲ್ಲ ಗೌಡದೇಶದರೆಲ್ಲ
ವೆಂಗಿನಾಡವರೆಲ್ಲ ಆಂಗದೇಶದರೆಲ್ಲ
ಕಾಮಾಕ್ಷಿಯವರೆಲ್ಲ ಸೌವಾರದವರೆಲ್ಲ
ಪಾರಿಯಾತ್ರೆಯವರೆಲ್ಲ ನಾಳಾವಾಸಿಯೆಲ್ಲ
ಕುಂತಳಾವಸಿಯೆಲ್ಲ ಗುರ್ಜರಾವನಿಯೆಲ್ಲ
ಪಾಂಡ್ಯನಾಡವರೆಲ್ಲ ಮಲಯವಿಷಯದರೆಲ್ಲ
ಸುರಪಟಿಪಸಿನದಮಂ ದಿವಿಜರನಿನಾದಮಂ
ಶಂಖಧ್ವನಿಗಳಂ ಘಂಟಾಧ್ವನಿಗಳಂ
ಕಹಳಾರವಗಳಂ ಗಾನದ ರವಂಗಳಂ
ಭೋಂಕನೊರ್ಮೆಯೆ ಕೇಳ್ದು ಸಂತೋಷದಿಂದೆದ್ದು
ಗಗನತಳಮಂ ನೋಡಿ ನೆರೆದೆಲ್ಲನೊಡಗೂಡಿ
ಕಾರ್ಮುಕೆಲ್ಲನನಿಟ್ಟು ರಾಗದೊಳಹಿಂ ನೆಟ್ಟಿದು
ನಲಿನಲಿದು ಪರಿಪರಿದು ಕಾರ್ಪರಂ ಕರೆಕರೆದು
ಪಲವುಮರ್ಘ್ಯಂಗಳಿಂ ಸಲವುಮರ್ಚನೆಗಳಿಂ
ಪಲವುಪಡಿಗಳ್ವರಿಸಿ ಪಲವ್ರತೆಱದಿಂ ಪರಮ
ಪೂಜೆಸಿ ಮುನೀಂದ್ರನಂ ಬಣ್ಣಿಸಿ ಯತೀಂದ್ರನಂ
ಪಾವ ದೇವರ್ಕಳಂ ಸುತಿವ ದೇವರ್ಕಳಂ
ಪೊಡೆಮಡುವ ವಿಬುಧರಂ ಬಣ್ಣಿಸುವ ದಿವಿಜರಂ
ಜೀಯೆಂಬ ದಿವಿಜರಂ ದೇವನೆಂಬ ವಿಬುಧರಂ

---

[1] ಸ್ಥಿರತೆಯೊಳಗರ್ಪ್ಪಿನಂ ( ). [2] ಲಾಳದೇಶದವರ್ಲ್ಲ ಚೂೋಳನಾಡವರೆಲ್ಲ (ಗ).

.....ಸುತ್ತಿದವೆಲ್ಲರಂ
ಕಣ್ತಣಿವಿನಂ ಕಂಡು [ಪಿರಿದುಂ ಮನಂಗೊಂಡು]
ಕೊಲಲಾಗದೆಂಬ ನುಡಿ ಪುಸಿಯಾಗದೆಂಬ ನುಡಿ
ಕಳಲಾಗದೆಂಬ ನುಡಿ ಜಾರೆ ವೇಡೆಂಬ ನುಡಿ
ಕಾಂಕ್ಷೆ ವೇಡೆಂಬ ನುಡಿ ಕಳ್ಳಾಗದೆಂಬ ನುಡಿ
[ಅಡಗಾಗದೆಂಬ ನುಡಿ ವಿಡುವಾಗದೆಂಬ ನುಡಿ]
ಪೆಱವು ಧರ್ಮದೊಳಾಂಟಿ ಪೆಱವು ವಾಕ್ಯದೊಳಾಂಟೆ
ಬುದ್ಧಿಯಂ [1] ನೋಡುವೊಡೆ ಚರ್ಚೆಯಂ [2] ಮಾಡುವೊಡೆ
ಜಿನನಾಥನಿಂ ಬಿಟ್ಟು ಜಿನಮುನಿಗಳಂ ಬಿಟ್ಟು
ಜಿನಧರ್ಮದಿಂ ಬಿಟ್ಟು ಜಿನಸಮಯದಿಂ ಬಿಟ್ಟು
ಮತ್ತೆ ಪೂಜ್ಯರುವೊಳರೆ ಮತ್ತೆ ನಿಸ್ಪೃಹರೊಳರೆ
ಮತ್ತೊಂದು ಲೇಸುಂಟೆ ಮತ್ತೊಂದು ಶುಭಮುಂಟೆ
ಪೈಲಾಪದೊಳ್ [3] ನಿಂದ ನೆ ವಿಜಿನಪತಿಯಿಂದ
ವಾರಿನಿಧಿಯೊಳ್ ನಿಂದ ನೇಮಿಜಿನಪತಿಯಿಂದ [4]
ಚೋಳಮಹಿಯೊಳ್ ನಿಂದ ದಿವಿಜವಲ್ಲಭನಿಂದ [5]
ಲಲಿತಪುರದೊಳ್ ನಿಂದ ಶಾಂತಿಜಿನಪತಿಯಿಂದ
ಬಂಡಣಿಕೆಯೊಳ್ ನಿಂದ ಶಾಂತಿಜಿನಪತಿಯಿಂದ
[ಶರಿಯುರೊಳ್ ನಿಂದ ಶಾಂತಿಜಿನಪತಿಯಿಂದ]
ಹಾನುಗಲ್ಲೊಳ್ ನಿಂದ ಮಲ್ಲಿನಾಥ [6] ಜಿನನಿಂದ [7]
ಎಳವತ್ತಿಯೊಳ್ ನಿಂದ ಚಂದ್ರಜಿನಪತಿಯಿಂದ
ಮೊಳವದೆ ನೆಲೆನಿಂದ ಸಕ್ಷೀರಜಿನನಿಂದ

---

1 ಬುದ್ಧಿಯಿಂ (ಗ). 2 ಚರ್ಚೆಯಿಂ ( ). 3 ಪುಲಿ (ಗ).
4 ಪುರುಜಿನಾಧಿಪನಿಂದ (ಗ). 5 ವಿಜಯವಲ್ಲಭನಿಂದ (ಗ).
6 ಪುಷ್ಪದೇವ (ಗ) 7 ಪರವಳೆಯೊಳು ನಿಂದ ಪುಷ್ಪದೇವ ಜಿನನಿಂದ, ಹುಲಿಗೆಯೆಯೊಳು ನಿಂದ ಶಂಭವಜಿನಪತಿಯಿಂದ ಶ್ರೀ ಕೊಪಣದೊಳುನಿಂದ ಶಶಿನಾಥಜಿನನಿಂದ, ಮುಳುಗುಂದದೊಳು ನಿಂದ ಚಂದ್ರಕ್ಷಜಿನನಿಂದ, ಪಟ್ಟಗೆಯೆಯೊಳು ನಿಂದ ಕಲಿದೇವ ಜಿನನಿಂದ, ಎಳವತ್ತಿಯೊಳ್ (ಗ)

ಆಶ್ರವೆದೊಳೂಪ್ಪರ್ದ ಸುವ್ರತೇಶ್ವರನಿಂದ
ಗೌಳಮಹಿಯೊಳ್ ನಿಂದ ಶಂಭವ ಜಿನಪತಿಯಿಂದ
ತೇರೆಯೊಳ್ ನೆಲೆನಿಂದ ಪಾರ್ಶ್ವಜಿನಪತಿಯಿಂದ
[ತವನಿಧಿಯೊಳ ನಿಂದ ಪಾರ್ಶ್ವಜಿನಪತಿಯಿಂದ]
ಕೌಶಾಂಬಿಯೊಳ್ ನಿಂದ ಪದ್ಮಪರಿವೃಢನಿಂದ
ಆಹಿಚ್ಛತ್ರದೊಳ್ ನಿಂದ ಪಾರ್ಶ್ವಜಿನಪತಿಯಿಂದ
ಸಾಮರ್ಥ್ಯಮುಂಟೆಂದು ತಾವಱಿವ್ರದಿದನೆಂದು
ಕೊಲ್ಲದೊಡೆ ಕೊಲೆಯಿಲ್ಲ ಪುಸಿಯದೊಡೆ ಸಗೆಯಿಲ್ಲ
ಕಳ್ಳರೊಡೆ ಸಾವಿಲ್ಲ ಶೌಚದಿಂ ನೋಪಿಲ್ಲ
ಮೀಯೆಯಿಂ ಕೇಡಿಲ್ಲ ....
ಭಾವಿಸುವೊಡೀವ್ರತಂ ಲೋಕದೊಳ್ ಸುವ್ರತಂ
ಜಿನನಿಗದಿತವ್ರತಂ ಅರ್ತಿಯಿಂದಾವ್ರತಮು
ನಾಚರಿಸೆ [1] ಕೇತಿಲ್ಲ ನರಕಕ್ಕೆ ಪೊಂಗಿಲ್ಲ
ಜಿನರ ಸಚ್ಚರಣಮುಂ ದುರಿತಕಾಲಹರಣಮುಂ
ಪೊರ್ದಿದಂಗರಿವಲ್ಲ ನರಕಗತಿ ಮುನ್ನಿಲ್ಲ
ಸಾಮರ್ಥ್ಯಮುಂಟೆಂದು ತಾವಱಿವ್ರದಿದನೆಂದು
ಜಿನರ ಸದ್ರೂಪಮುಂ ಪಾಪಸಂತಾಪಮುಂ
ತಾಳ್ದಿದಂಗೆಡರಿಲ್ಲ ದುಃಖಿಕ್ಕೆ ಸಲರಿಲ್ಲ
ಜಿನಪತಿಯನರ್ಚಿಸುಗೆ ಋಷಿಗುರಂ ಪೂಜಿಸುಗೆ
ಸದ್ಧರ್ಮಮುಂ ಪಿಡಿಗೆ ದುಷ್ಕರ್ಮಮುಂ ಬಿಡುಗೆ
ಸಮ್ಯಕ್ತ್ವಮುಂ ಪಿಡಿಗೆ ಮಿಥ್ಯಾತ್ವಮುಂ ಬಿಡುಗೆ
ಸಕಲಸುಖವಿಲ್ಲಮುಂ ಪಡೆವಮನವೆ ಳ್ದಂ [2] ॥ ೬೪೧

ಎಂದು ಜನವೆಲ್ಲಂ ನಚ್ಚಿ ಮೆಚ್ಚಿ ಬಿಚ್ಚಳಿಸುತ್ತುಮಿರೆಯಿರೆ ॥

ಜಿನಪಾದಭಕ್ತನಿಸುವ
ಮುನಿಗೀತ್ರೈಲೋಕ್ಯಮೆಲ್ಲಮುಂ ಗಹನಮೆ ಪೇ ।

---

[1] ಮನವರಿ-ಯಿಂ ವ್ರತವನಾದರಿಸೆ (ಗ). [2] ಮನಮುಳ್ಕೊಂ (ಗ).

ಜಿನಸೇಕೆ ದೇವೆ ಪಾದಮೆ
ನನಂತಗುಣರಾಶಿ [1] ತಡೆಯದುಡುಗಲೆ ವೇಱ್ಕ್ಕಂ ॥ ೬೪೩

ಅಣಿವೊದ್ಯಷ್ಟಗುಣಂಗಳ್
ಹ್ಲಾದಿಂದಂ ನಿಮಗೆ ಜೈನಪದಭಕ್ತಿಯಿನೊ ।
ಳ್ಗಣಮುಂ ಪುಟ್ಟಿದುವೆನೆ ಧಾ
ರಿಣಿಯೊಳ್ ನಿಮ್ಮಿಂತು ದೇವೆ ನಿರ್ಮಳನಾವೆಂ ॥ ೬೪೪

ದಯೆಯಿಂ ಭಾವಿಸುವುದು ಸಂ
ಶಯಮಿಲ್ಲದೆ ಜೈನತತ್ತ್ವಮಂ ನೆನೆವುದು ದು ।
ರ್ನಯಮಂ ಬಿಡುವುದು ಧರ್ಮ
ಪ್ರಿಯನಪ್ಪುದು ಸ-ಕವಿನಿಕರಪಿಕಮಾಕಂದಂ ॥ ೬೪೫

[ಎಂದು ಸಮಸ್ತದಿವಿಜನಿಕುರಂಬಂ ಪೊತೆ ಪಡುತುಂ ಪಾವದೊಡ ನೊಡನೆ ತೊಳಲುತ್ತುಂ ಪೂಜಿಸುತ್ತಿರ್ದನ್ನಗಮಿತ್ತಲಿಂದ್ರನ ಜಿಸದಿಂ ದೇವಕುಮಾರರ್ ಬಲಿಯನಂಬಲಿಯು ಪೊಟ್ಟೆಯುಂ ಕಟ್ಟುವಂತೆ ಕೆಂಡ ಡಗಗಟ್ಟುಗಟ್ಟಿ ಹಸ್ತನಾಪುರದಿಂ ಪೊಱಮಡಿಸಿ ಕಳೆವುದುಂ, ಚ ರಿ ಖುಷಿಯರುಂ ಸೌಧರ್ಮೇಂದ್ರಾದಿ ಸುರೇಂದ್ರರುಂ ಸಂತಸಗೊಂಡು ಗುಹೆಯ ಬಾಗಿಲೊಳಿರ್ದ ಕಸವೆಂ ಕಿಚ್ಚಂ ಪಿಂಗಿಸಿ ಜಗದುತ್ತುಂಗರುಂ ಕರ್ಮ ವಿದೇಭಸಂಪದುಪೆನಿಸಕಂಪನಾಚಾರ್ಯರ್ದ್ಧೈರ್ಯ ಧರಣೀಧರರೆನಿಸು ವಯೂರ್ವರ್ ಮುನಿವರರ ಘೋರೋಪಸರ್ಗಮಂ ಪಿಂಗಿಸಿ ಪಾತ್ರಸ್ಥ ರತ್ನಾಕರರಲ್ಲಿಗೆವಂದು ॥] [2] ೬೪೬

---

[1] ಗುಣಸಲಯು (ಗ), [2] ಎನುತಂ ದೇವ ನೆರಪಿ ಪೂಜಿಸುತಂ ಮಿಂದ ದೊಡನೆ ತೊಳಲುತ್ತಂ ಅರ್ಚಿಸುತ್ತಿರ್ದರನ್ನೆಗಂ ಸೌಧರ್ಮೇಂದ್ರನ ಜಿಸದಿಂ ಪ್ರ ಕೀರ್ಣಕದೇವರ್ದರು ಬಲಿಯುನಂಬಲಿಯು ಪೊಟ್ಟೆಯಂ ಕಟ್ಟುವಂತೆ ಕಟ್ಟಿ ಕಾಯು ಬಿಡದು ತನ್ನ ಮುಂದಿಕ್ಕುವುದುನೂ ಇಂದ್ರನನೇಕವಿಧವಿಂದವಂ ಬಯ್ದು ನಿನ್ನಿಂ ದಂ ಬಿಟ್ಟು ನಿಸ್ಸೋದರರಾಶ್ರಿತ ಲೋಕದೊಳಿಲ್ಲೆಂದು ಪೂಪುವುಜಿಸಿ ಕಳೆದು ಪುರ ಮೆಲ್ಲಂ ಬ್ರಹ್ಮೋತಿಕಾ ನೆಂದು ಕೊಡಕಂ ವರ್ಮುಖದಿಂ ಬೆ ಬ್ಬಿರಿದು ಕಳೆವುದಂ, ನಿಗ್ಗಾಗಿ ಜಗ್ಗನೆ ಜರಿದು ಪಾದಭರದಿಂ ಬೀಳ್ವಂತೆ ನರಕಕ್ಕೆ ಪೋದನಿತ್ತಲಿಂದ್ರಂ ಶೀತಗಿರಿಯ ಬಾಗಿಲೊಳಿರ್ದ ಪುಳ್ಳಿಯೆಲ್ಲವುಂ ಕಳೆಯಿಸಿ ಋಷಿಯರಸರ್ಚಿಸಿ ಘೋರೋಪಸರ್ಗಂ ಪಿಂಗಿದುದು ಕೈಯತಿತ್ತಿಕೊಳ್ವೆವೆಂದು ಘೋರೋಪಸರ್ಗಮಂ ವಾಪಸಿಸಿ ವಿಷ್ಣು ಮುನೀಂದ್ರನಲ್ಲಿಗೆ ಪೋಗಿ (ಗ).

ಮುನಿನಿಕರಕ್ಕೆ ಪಿಂಗಿದುದು ದುಶ್ಚರಿತಾನ್ವಿತನುಗ್ರಮೂರ್ತಿ ದು
ರ್ಮನನೆನಿಸಿರ್ದ ಪಾಪಿ ಬಲಿ ಮೊತ್ತಿದದೊಂದುಪಸರ್ಗಮಿಂದು ಸ ।
ಜ್ಜನನುತ ಸಚ್ಚರಿತ್ರ ಗುಣಬೋಧಸುಧಾರ್ಣವ ಭವ್ಯಬಂಧು ನಿ
ರ್ಮಲನಿಜತತ್ವ [1] ನೀನುಡುಗು ಪಾವಮನೆಂಬುದುಮಾ ಮುನೀಶ್ವರಂ ॥

[ವಿಗುರ್ವಣೆಯನುಪಸಂಹರಿಸಿ ತನ್ನ ಮುನ್ನಿನ ರೂಪಂ ಕೈ
ಕೊಂಡು ಸಂತೋಷದಿಂದಿರ್ದುದುಂ ದೇವನಿಕಾಯಮೆಲ್ಲಂ ಸಹಜಕವಿ
ಜನಮನೆನೋಹರೋದ್ಯಾನನಕಳಕಂಠರೂಪನಂ ಕಣ್ಣಾರೆ ನೋಡಿ ಮನ
ದೊಳ್ ಭಕ್ತಿ ಕೈಗಣ್ಕೆ ಪಲ್ಮರ್ಚನೆಯಿಂದರ್ಚಿಸಿ ಕರಕಮಲಂಗಳಂ
ಮುಗಿದು] [2] ॥ ೬೪೮

ಜಿನಪದಭಕ್ತಿಯೊಳ್ ಗುಣದೊಳುನ್ನತಿಯೊಳ್ ಸಕಲಾಗಮೋರ್ಥದೊಳ್
ವಿನಯದೊಳುನ್ನತವ್ರತದೊಳೋಜೆಯೊಳೂಪ್ಪುವ ಸಚ್ಚರಿತ್ರದೊಳ್
ಮುನಿಪದಭಕ್ತಿಯೊಳ್ವಿಮಲಧೈರ್ಯದೊಳೂರ್ಜಿತಮಪ್ಪ ಕೀರ್ತಿಯೊಳ್
ನಿನಗೆ ಸಮಾನರಾರ್ ಸತ್ಯಶರಾರಿ ದೊರೆಯೂರೆಣೆಯಾರ್ ಮುನೀಶ್ವರಾ [3] ॥

ಜನವಿಸ್ಮಿತವೆನಿಸುವೀಯೆಂ
ಟನೆಯಂಗಂ ನಿನ್ನ ಮೆಯ್ಯೊಳಿರ್ದುದಱಿಂ ದೇ ।
ವನಿಕಾಯಪೂಜ್ಯನಾದ್ಯೆ
ಮುನೀಂದ್ರ ನಿನ್ನಂತು ಧನ್ಯರಾರ್ ಭೂತಲದೊಳ್ [4] ॥ ೬೪೯

[ಮೋಕ್ಷಶ್ರೀಕಾಮಿನಿಗಿದು
ನಿಕ್ಷೇಪದ ನಿಧಿ ಸುಖಕ್ಕಿದಕ್ಷಯನಿಧಿ ಪಾ ।

ದಯೆವಾರಿಧಿ ನಿರ್ಮಳಚಿತ್ತ ಕೀರ್ತಿಕಾಮಿನಿಕುಚಹಾರ (ಕ. ಬ.).

2 ವಿಗುರ್ವಣೆಯನುಡುಗಿ ಕೆಳ್ಪಿರ್ದುದುಮಿಂದ್ರಾದಿದೇವರ್ಕಳೆಲ್ಲಂ ಪೂಜಿಸಿ ಭಾವಯುತದಿಗಂಬರವಾಸಂಗ ಕೈಗಳಂ ಮುಗಿದು (ಗ).

3 ಜನನುತಧರ್ಮವಾಳ್ ವಿನಯದೊಳ್ ವ್ರತವಾಗಮದೊಳ್ ನೆಗಳ್ತ್ಯೊಳೆ
ಮುನಿಪದಭಕ್ತಿಯೊಳ್ ವಿಮಲಧೈರ್ಯದೊಳುನ್ನತಮಪ್ಪ ಕೀರ್ತಿಯೊಳ್ ।
ಜಿನಮತವಾಂ ಜಗಕ್ಕೆಸೆಯೆ ಭೋಂಕನೆ ಸಿನ್ನೊಲು ತೋಱಿ ಬಲ್ಲರಾರ್
ನಿನಗೆ ಸಮಾನವಾರುವೆಣೆಯಾರ್ ದೊರೆಯಾರ್ ಧರೆಯೊಳ್ ಮುನೀಶ್ವರಾ (ಗ).

4 ಮುನೋಜಹರ ಸುಕವಿನಿಕರ ಪಿಕಮಾಕಂದಾ (ಗ)

ಪಹ್ಲಯವೆಂದಿದನಱಿಕೆಯೊ
ಳೀಕ್ಷಿತಿಯೊಳ್ ತಾಳ್ದಿ ನಿಂದವಂಗೆಡರುಂಟೇ ॥ ೦೫೧

ಎಂದು ನಾನಾವಿಧದಿಂ ಪ್ರಭಾವನಾಂಗಮುಮುಂ ವಾತ್ಸಲ್ಯರತ್ನಾಕ
ರನುಮೆಂ ಪೊಗೞ್ದಿ ಚತುರ್ವಿಧದೇವಸಮೂಹಮುಂ ತಂತಮ್ಮ ನಿವಾಸಂ
ಗಳ್ಗೆ ಪೋದರ್. ಪದ್ಮಮಹಾರಾಜಂ ಧರ್ಮದೊಳಾದೈಶ್ವರ್ಯಮುಮೆಂ
ಪ್ರಭಾವನಾಂಗದೊಳಾದ ಮಹಿಮೆಯುಮಂ ಕಂಡು ಮಹಾಭಕ್ತಿಯಿಂ
ಸಮ್ಯಕ್ತ್ವಚೂಡಾಮಣಿಯ ಪಾದಪದ್ಮಂಗಳಂ ನಮನಮೊರೆ ಪೂಜಿಸಿ
ಪೊಡೆಮಟ್ಟು ಪಲವುಂ ಸದ್ವ್ರತಂಗಳಂ ತಾಳ್ದಿ ಧರ್ಮದೊಳ್ ದೃಢಚಿ
ತ್ತನಾಗಿ ಪೋದಂ ॥][1] ೦೫೨

ಬಲಿ ಮುನ್ನಂ ಜಯಪರ್ವಭೂಧರನ ಮುಂದಾರಯ್ಯದುರ್ಕಿಂದೆ ಸಂ
ಚಲಚಿತ್ತಂ ನುಡಿದಾತಿದಿರ್ದೊಡೆ ನೃಪಂ ಚಿಃ ಸೋಲ್ತಿಯಿನ್ನೆಂದೊಡು[2]
ಮ್ಮೆಳದಿಂದಿಲ್ಲಿಗೆ ವಂದು ಕೊರ್ವಿ ಮುಳಿಸಿಂ ಯೋಗೀಂದ್ರನಂ ಕೊಲ್ವೆನೆಂ
ದಱುದಂ ಕರ್ಮಪಿ ಕಷ್ಟವೊರ್ವರಱಿಪಂ ಪಾರ್ವಂಗೆ ಲೇಸಕ್ಕುಮೇ ॥

[ಪರರ ಮನೆಯ ಸೂಜಿಯ ಕೇಡಂ ಬಯಸುವ ಕಳ್ಳಂಗೆ ತನ್ನ ಮನೆಯ ಕುಱಿಂ ಕೆಟ್ಟುದೆಂಬಂತೆ ನಿರ್ದೋಷಿಗಳಪ್ಪಕಂಪನಾಚಾರ್ಯರ್ಗುಪ
ಸರ್ಗಂಮಾಡಿದ ಬಲಿ ಪಾಪದ ಫಲದಿಂ ಬೋಂಡಾಗಿ ಕಟ್ಟುವೆತ್ತನೆಂದು
ಪಾಪದೊಳಾದ ಪ್ರತ್ಯಕ್ಷಫಲಮಂ ಕಂಡು ವಿಸ್ಮಯಂಬಟ್ಟರದಱಿಂ ॥

ಕುಸಿಯದೆ ಪಿಱಿರಱುವೆಂ ಚಿಂ
ತಿಸುವೆಂ ತಾನಱುಗುಮೆಂತೆ ತೊದಱುಲ್ಲದೆ ಚಿಂ ॥
ತಿಸುವಾತಂ ಪೆಱಗೊರ್ವಪ್ಪಂ
ವಸುಮತಿಯೊಳ್ ತಾನೆ ಸಿರಿಗೆ ನೆಲೆಯಾಗಿರ್ಪಂ ॥ ೦೫೩

---

1 ಎಂದು ಪೊಗೞ್ದು ಪೊಡಮಟ್ಟು ದೇವಸಿಕಾಯಂ ತಂಸಿವಾಸಕ್ಕೆ ಪೋದರ್ ಪದ್ಮಮಹಾರಾಜನುಂ ಪ್ರಧಾನರ ವೊಗವುಂ ನೋಡಿ (ಗ)

2 ನುಡಿದುರದಲ್ಲಿ ಪಿರಿದುಂ ಬೋಡಾಗಿ ಪೆಂಪಿಲ್ಲದು (ಗ),

3 ಬಂದು ನೋಡ ಮುನಿಸಿಂ (ಗ)

ಮೆಗಧಾವನೀಶ ಪಾಪಂ
ಪುಗದಂತೆ ನೆಗಱ್ತಿಯ ಪ್ರಭಾವನೆಯುಂ ಕೈ ।
ವಿಗೆ ಕೂರ್ತು ಪದಪಿನಿಂ ಮೂ
ಡುಗೆ ಪಾಪಂ ಕಿಡುಗುಮೆವಱಿ ಕೇಡಿಂ ವೋಹ್ಷಂ ॥ ೨೫೬

ಮತ್ತೆನ್ನದೆ ದೊರೆಕೊಳ್ಗುಂ
ಚಿತ್ತಂ ತಲ್ಲಕ್ಷಿಸದೊಂದೆ ಮನದಿಂ ಗುಣಮೆಂ ।
ಪತ್ತುಗೆ ಕಡೆಯುಂಗವೆದ
ತ್ಯುತ್ತಮವೆಂದೊಲ್ದು ನಂಬಿ ಪೊರ್ದುಗೆ ಭವ್ಯಂ ॥ ೨೫೭

ಎಂದು ಪ್ರಭಾವನೆಯೊಳಾದ ಪ್ರತ್ಯಕ್ಷಫಲಮೆಂ ಗಣಧರ ಸ್ವಾಮಿ
ಗಳ್ ಪೇಱಿ ಕೇಳ್ದ ॥][1] ೨೫೮

ವಿಮಳಪ್ರಖ್ಯಾತಕೀರ್ತಿಧ್ವಜನಮಳಗುಣಂ ವಾಗ್ವಧೂವಲ್ಲಭಂ ಕಾ
ಮಮದೇಭೇಂದ್ರಪ್ರತಾಪಕ್ಷಯಹರಿ ಗಜಮತ್ತುಂಗನತ್ಯುರ್ಜಿತಂ ರ ।
ತ್ನಮೆನಂತ್ರೈವಿದ್ಯಚಕ್ರೇಶ್ವರನಮಲಪದಾಂಭೋಜಭೃಂಗಂಯಶಶ್ರೀ
ರಮಣಂ ಸೋತ್ಸಾಹನಾದಂ[2] ಸುಕವಿಜನಮನಃಪದ್ಮಿನೀರಾಜಹಂಸಂ ॥

ಇದು ನಿಖಿಲದಿವಿಜಪರಿವೃಢಮುಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧರ್ಮಾಮೃತದೊಳ್
ದರ್ಶನಾಷ್ಟಮಾಂಗವ್ಯಾವರ್ಣನಂ
ನವಮಾಶ್ವಾಸಂ.

1 ಎಂದು ಮುಗುಳ್ನಗೆಯಂ ನಕ್ಕು ಸುಕವಿಜನಮನಃಪದ್ಮಿನೀರಾಜಹಂಸನಂ ಬಂದಿಸಿ ಸವ್ಯಕ್ತ್ಯಾದೃಢನಾಗಿ ಪೋದನದುಕಾರಣದಿಂ ಪ್ರಭಾವನೆಯೆ ಸಮಸ್ತ ಕರ್ಮನಿರ್ಮೂಲಕರವೆಂದು ಪೇಳ್ ಕೇಳ್ದ (ಗ).

2 ಧೈರ್ಯಮಹಾಮೇರುಕ್ಷಿತೀಂದ್ರಂ ಜಿನಸಮಯಮಹಾವಾರ್ಧಿ ತ್ರೈವಿದ್ಯ ಲಕ್ಷ್ಮೀ ರಮಣಂ ಶ್ರೀಪಾದಭೃಂಗಂ (ಕ. ಬ.)